ಶ್ರಾವಣಮಾಸ

ಶ್ರಾವಣಮಾಸವು ಬಲು ಸಂತೋಷವು **ರಾಗ: ಕಾಂಬೋಧಿ**

ಶ್ರಾವಣಮಾಸವು ಬಲು ಸಂತೋಷವು ತೋರಣ ತಳಿರಲಿ ಪೂರಣ ಬಾ ಮುರಳಿಯು ಹುಟ್ಟಿದ ಹಬ್ಬವು ಈ ದಿನ ಅರಳಿದೆ ಹೃದಯವು ತರಳನೆ ಬಾ।।ಪ।। ದ್ವಾಪರಯುಗದಲಿ ಭಾಪುರೆ ಜಗದಲಿ ವಿಷ್ಣುವೆ ಕೃಷ್ಣನು ಅವತರಿಸೀ ಮಥುರಾಪುರದಲಿ ಬಂಧಿತ ಸೆರೆಯಲಿ ದೇವಕಿ ಉದರದಿ ಸಂಜನಿಸೀ।।1।। ವಸುದೇವನ ಮಗ, ಸೂಸಿರೆ ನಗುಮೊಗ ಪಿತರಾ ದುಗುಡವ ಪರಿಹರಿಸೀ, ಇಂದಿನ ಹಬ್ಬದಿ ಅಂದಿನ ಚಿತ್ರವು ಭಾವಿಸಿ ನಿಲುವುದು ಸೊದೆ ಹರಿಸಿ।।2।। ವರ್ಷ ಋತುವಿನ ಜೀಮೂತದ ಝುರಿ ಕೃಷ್ಣ ಪಕ್ಷದಾ ರಾತ್ರಿಯಲೀ ಧಾರಾಕಾರದಿ ಹರಿದಿರೆ ಸುರಿದಿರೆ ಅಪ್ಪಳಿಸುವ ಧ್ವನಿ ಧಾತ್ರಿಯಲಿ।।3।। ಮಾಯಾಮಿಂಚಿನ ಕೋರೈಸುವ ಸುಳಿ ಕಾಂತಿಯ ಭೀಷಣ ಸೆರೆಯಲ್ಲೀ ಇತ್ತಲು ಮುತ್ತನು ತಾಯಿಯು ಮಗುವಿಗೆ ಇತ್ತಳು ವ್ಯಸನದಲೀ।।4।। ಬಾಗಿಲು ತೆರೆಯಿತು ಬಾಗಿಲು ಮುಚ್ಚಿತು ದೇವಕಿಯಾ ಕಣ್ ತೋಯ್ದಿತ್ತು ಕಾಣುವವರೆವಿಗೂ ತಾಯಿಯ ನೋಟವು ಹಿಂಬಾಲಿಸಿ ತಾ ಸೋಽತಿತ್ತು।।5।। ಛತ್ರವ ಪಿಡಿಯಿತು ಹೆಡೆಯಲಿ ಸರ್ಪವು ಇಂತೀ ಉತ್ಸವ ಹೊರಟಿತ್ತು ಗೋಕುಲ ಬಳಿ ಬರೆ ಮಳೆ ತಾ ನಿಂತಿತು ಅಷ್ಟಮಿ ಚಂದ್ರನು ಬೆಳಗಿದನು। ನಂದಗೋಪನ ಕಂದ ಯಶೋದೆಯ ಚಂದದಿ ತೊಟ್ಟಿಲ ಬೆಳಗಿದನು।।6।। ಮಧುರೆಯ ಅರಮನೆ ತಳಮಳವಾಂತಿತು ದೇವಕಿ ಪೆತ್ತಿರೆ ತಿಳಿದದನು। ಗಂಡೋ ಹೆಣ್ಣೋ ಸಮಯವಿದಲ್ಲಾ ಕಂಸನು ಹೊರಟನು ಮಗು ಕೊಂಡು।।7।। ತಂಗಿಯ ದುಃಖವ ಕೇಳುವನಲ್ಲ, ಬಂದನು ಬಂಡೆಗೇ ತಕ್ಕೊಂಡು ಮೇಲೆತ್ತಲು ಮಗು ರೊಯ್ಯನೆ ಚಿಮ್ಮಿತು ನೆಗೆಯಿತು ಚೀರಿತು ಬೇರಿಹನೆಂದು।।8।। ಪೆಚ್ಚಾದನು ಕಳ ಹುಚ್ಚಾದನು ಬಹು ತಂಗಿಯ ಸೆರೆಯನು ಕಿತ್ತೊಗೆದೂ ಇನ್ನೀ ಕಂಟಕ ಇಂದಿಗೆ ಮುಗಿಯಿತು ಎನ್ನುತ ಮುದದಲಿ ತಾನಂದೂ।।9।। ಅಂದಿನ ಚಿತ್ರವು ಇಂದಿನ ಹಬ್ಬವು ಬಗೆಬಗೆ ತಿಂಡಿಯ ತಾಗೈದೂ ಸೊಗಸಿನ ಚಪ್ಪರ ಹಾಕಿಹನಣ್ಣನು ಚಕ್ಕುಲಿ ಕೋಡುಬಳೆ ಮುಚ್ಚರೆ ಉಂಡೆಯು ಕಡುಬುಗಳೂ ಬಗೆ ಬಗೆ ತಿಂಡಿಯ ತಾ ಗೈದು ಎಲ್ಲಾ ತಿಂಡಿಯ ತೂಗಿ ಬಿಟ್ಟಿಹನೂ ಚಕ್ಕುಲಿ ಹಣ್ಣುಗಳ್ ತೂಗಿಬಿಟ್ಟಿಹನೂ ಅದನೇಽಽ ನೋಡಲು ಎಷ್ಟು ಸುಖ……।।10।।

❖ ❖ ❖

25. "ಶ್ರೀಧರ"ಮಾಸ ನಿಯಾಮಕ

ಶ್ರೀಧರ ಶ್ರೀಧರ ಶಂಧರ ವಂದೇ ಭೂಧರ ವಾರ್ಧರ ಕಂಧರಧಾರನ್।।

ಶ್ರೀಧರ ಶ್ರೀಧರ ಎಂದರೆ ಶ್ರೀಲಕ್ಷ್ಮೀದೇವಿಯನ್ನು ವಕ್ಷಸ್ಥಳದಲ್ಲಿ ಇಟ್ಟುಕೊಂಡದ್ದರಿಂದ।
ಶ್ರೀಧರ ಎನಿಸಿಕೊಂಡ ।।ಕೇಶವಾಯ ನಮಃ।।

ಶ್ರೀಧರ ನಮ್ಮ ಹೃದಯದಲ್ಲಿದ್ದಾನೆ ರಾಮ ರಾಮ। ಶ್ರೀಧರನ ದಯದಿಂದ
ಹೃದಯವಾಸನ ಕಂಡೆ ರಾಮ ರಾಮ ।। ಕಾಶಿಯ ಹಾದಿಯಲಿ।।

ಶ್ರೀಧರ ಶೃಂಗಾರಹಾರ।ದಿವ್ಯ। ಶ್ರೀವತ್ಸಲಾಂಛನ ಶ್ರೀರಘುವೀರ।
ವಾರಿಧಿಸಮ ಗಂಭೀರ।ವೀರ। ಕ್ರೂರರಕ್ಕಸರನೆಲ್ಲ ಸಂಹಾರ।।ಅಚ್ಯುತಾನಂತ।।

ಮದನನಯ್ಯ ನಿಮ್ಮ ಮಹಿಮೆ। ವದನದಿಂದ ನುಡಿಸುವಂತೆ।
ಹೃದಯದಲ್ಲಿ ಸದನ ಮಾಡು ಮುದದಿ ಶ್ರೀಧರಾ।।ಈಶ ನಿನ್ನ।।

ಶ್ರಿಯಃ ಕರಂ ಶ್ರೀಯೋನಾಥಂ। ಶ್ರೀಧರಂ ಶ್ರೀವರಪ್ರದಂ।
ಶ್ರೀ ವತ್ಸಧರಂ ಸೌಮ್ಯಂ। ತಂ ವಂದೇ ಸುರೇಶ್ವರಂ।।ಓಂ ನಮೋ ಭಗವತೇ।।

ಶ್ರೀಧರನ ಗೆಲಿದನೆ ಶ್ರೀವತ್ಸಲಾಂಛನ। ಶ್ರೀಧರ ಗೋಪೇರರಸನೆ।
ಶ್ರೀಧರ ಗೋಪೇರರಸನೆ ಶ್ರೀಕೃಷ್ಣ। ಶ್ರೀಧರ ನಮ್ಮ ಮನೆದೈವ॥ರಂಗಬಾರೋ॥

ಶ್ರೀಧರ ಕೇಶವ ನಾರಾಯಣಾ

ಶ್ರೀಧರ ಕೇಶವ ನಾರಾಯಣಾ। ಶ್ರೀಕರ ಶುಭಕರ ನಾರಾಯಣ॥ ಈ ಜಗವೊಂದು ನಾಟಕರಂಗ। ಜನರೇ ಆಟದ ಕಾಯಿಗಳಯ್ಯಾ। ನೀನಾಡಿಸಿದಂತೆ ಆಡುವರಯ್ಯ। ಆಪದ್ಬಾಂದವನೀನಯ್ಯ॥1॥

ಶ್ರೀಧರಾ ನೀ ಎನ್ನಾಧಾರಾ

ಶ್ರೀಧರಾ ನೀ ಎನ್ನಾಧಾರಾ। ಬುಧಜನ ಸಹಕಾರ। ಮನೋಹರ। ಮಾಧವ ನೀ ಎನ್ನ ಜೀವ। ಯದುಕುಲೋದ್ಭವ ನೀನೇ ಎನ್ನ ದೈವ॥ ಕೇಶವ ನೀ ಎನಗೊಲಿವ। ದಾಸಮಹಿಪತಿಕಾವ ವಾಸುದೇವ॥

ಶ್ರೀಧರಾ ನೀನೆ ಎನ್ನ ಹೃದಯ ಕಮಲದೊಳಿದ್ದು

ಶ್ರೀಧರಾ ನೀನೆ ಎನ್ನ ಹೃದಯ ಕಮಲದೊಳಿದ್ದು। ಮಾಡಿಸಿದ್ದುನಾಮಾಡಿದೆನೊ॥ಪ॥ ಹಿಂದೆ ಮಾಡಿದ್ದೇನು। ಇಂದು ಮಾಡುವದೇನು। ಮುಂದೆ ಮಾಡತಕ್ಕದ್ದೇನು ತಂದೆ॥ಅ.ಪ॥ ಹಿಂದೆ ನಿನ್ನಯ ಜನರ ವಂದಿಸದೆ ಭವ। ಬಂಧನದಿ ನಾನೊಂದೆನೋ। ಇಂದು ತೀರಿತು ಅದಕೆ ತಕ್ಕ ಮುಯ್ಯವು ಎನಗೆ ಆ। ನಂದ ವಾಯಿತು ನಿನ್ನ ಕರುಣಾರಸಕೆ ಮಂದಭಾಗ್ಯನಿಗೆ ನೀ ತಂದುಧ ಬಂಧನವ ಬಂಧಿಸಿ ಎನ್ನಿಂದ ವಂದಸೆಯ ಕೊಂಡೆ॥1॥ ಸರ್ವಸೇವೆಯ ನೀ ಕರುಣಾದಿ ಸ್ವೀಕರಿಸು। ಶರಣರಕ್ಷಕನಹುದೊ ನೀನು। ಉರಗಗಿರಿವಾಸ ಶ್ರೀ ವೇಂಕಟೇಶನೆ ಎನ್ನ। ಸರ್ವಾಪರಾಧಗಳ ಕ್ಷಮಿಸೋ। ಅರಿತವನು ನಾನಲ್ಲವೆಂದೆನ್ನ ಕೈಬಿಡದೆ। ದುರಿತ ಪರಿಹರಿಸಿ ಕಾಯೋ ಶೌರೇ॥2॥

ಶ್ರೀಧರನ ದಾಸರಿಗೆ ಕ್ರೋಧವುಂಟೇ

ಶ್ರೀಧರನ ದಾಸರಿಗೆ ಕ್ರೋಧವುಂಟೇ। ಕ್ರೋಧ ಜಯಿಸಿದ ನರಗೆ ಕಲಹಗಳುಂಟೆ॥ಪ॥ ಗರುಡನಾಲಯದಿ ಉರಗಗಳ ಭಯವುಂಟೇ। ಕರಿಯ ಬೆದರಿಕೆ ಮೃಗಗಳಿಗೆ ಉಂಟೇ। ಹರಿದಿನದಿ ಉಂಬುವಗೆ ದುರಿತ ತಪ್ಪುವುದುಂಟೆ। ಗುರು ಕರುಣ ಪಡೆದವಗೆ ಪರಗತಿ ಉಂಟೆ॥1॥ ಅರಿಗಳ ಭಯವುಂಟೆ ಸುರಪನ ವಜ್ರಕೆ। ಯುದ್ಧದ ಭಯವುಂಟೆ ವೀರನಿಗೆ। ಶುದ್ಧಮನದಲಿ ನಮ್ಮ ಮಧ್ವಮತ ಸೇರಿದವಗುದ್ಧಾರವಲ್ಲದೆ ನರಕದಪದ್ರವಗಳುಂಟೆ॥2॥ ಕಂದರ್ಪನಂಜಿಕೆಯು ಸಿಂಧೂರಾನನಗುಂಟೆ। ನಿಂದಿಸುವ ಜನತೆಗೆ ಸುಜ್ಞಾನವುಂಟೆ। ಮಂದರೋದ್ಧರ ಶಾಮಸುಂದರನ ಪದಯುಗವ ಪೊಂದಿರ್ಪಸುಗುಣರಿಗೆ ಆವ ಕುಂದುಗಳಯ್ಯಾ ॥3॥

❖ ❖ ❖

26. ಮಂಗಳಗೌರಿ ವ್ರತ

ಅಂಗನಾಮಣಿಗಳು ಕೂಡಿ

ಅಂಗನಾಮಣಿಗಳು ಕೂಡಿ ಮಂಗಳಗೌರಿಯ ಪಾಡಿ। ಕಂಗಳ ಢಾಳವು ಥಳಥಳಿಸುತಲೆ ಮಂಗಳಾರತಿ ಎತ್ತಿ ಸ್ತುತಿಸಿ ನಮಿಸುತಲೆ ರಂಗು ಮಾಣಿಕದ ಹಸೆಯ ಪೀಠಕೆ ಜಗದಂಬಾ ಗೌರಿಯನು ಕರದಾರು॥1॥ ವಾರಿಜ ಮುಖಿಯರು ನೆರೆದು। ಗೌರೀ ದೇವಿಗೆ ಕೈಯ್ಯನು ಮುಗಿದು ಧಾರುಣಿ ಅಮರರ ಮಂತ್ರವಿಧಾನದಿ ಭೂರಿ ತಮತ ಶೃತಿ ವಾದ್ಯವಿನೋದದಿ। ಸರಸದಿಂದ ಶೋಭಾನೆಯ ಪಾಡುತ ಸಿರಿಗೌರಿಯನ್ನಸೆಗೇ ಕರದಾರು॥2॥ ಗಂಧಾಕ್ಷತೆ ಧೂಪ ದೀಪದಿಂದ ಬಲು ಚಂದದಿ ಕುಸುಮಗಳಿಂದ ಇಂಧುಧರನ ವಲ್ಲಭೆಯ ಪೂಜಿಸುತ ಮಂಗಳ ಗೌರಿಯ ವರಗಳ ಬೇಡುತ

ಸಂಭ್ರಮದಿಂದ ಶೋಭಾನೆಯ ಹಾಡುತ ಕುಂದರದನೆಯರು ಕರದಾರು॥3॥ ತಂಬಿಟ್ಟು ಚಿಗುಳಿಗಳಿಂದ ಒಳ್ಳೆ ಇಂಪಾದ ಲಡ್ಡುಗೆಯಿಂದ। ಜೆಂಬುನೇರಿಳೆ ಮಾವಿನ ಹಣ್ಣು ಚಂದದಿಂದಲಿ ಸಮರ್ಪಿಸುತಾ। ಮಂಗಳ ಗೌರಿಯ ವರಗಳ ಬೇಡುತ ಕುಂದರದನೇಯರೂ ಕರದರೂ॥4॥ ಮುತ್ತಿನಾರತಿಗಳ ಪಿಡಿದು ಸ್ಥಿರ ಮುತ್ತೈದೆತನವನೆ ಪಡೆದು ಹಸ್ತಕಡಗ ಹಿಂಬಳೆ ಹೊಳೆಯುತಲೇ ಸತ್ತಿಗೆ ಪಿಡಿದು ಚಾಮರ ಬೀಸುತಲೇ ಸತಿಯರೊಳಗುತ್ತಮ ಕನಕ ಪುತ್ಥಳಿ ದೇವಿ ಜಯ ಜಯವೆಂದೂ ಸ್ತುತೀಸೋರೂ॥5॥

ಪೂಜಿಸುವೆ ಸುಂದರಿಯ

ರಾಗ: ಜುಂಜೋಟಿ-ಆದಿತಾಳ

ಪೂಜಿಸುವೆ ಸುಂದರಿಯ ಮಂಗಳಗೌರಿಯ। ಪೂಜಿಸುವೆ ಸುಂದರಿಯ॥ಪ॥ ರಂಗನ ಸೋದರಿ ಗಂಗಾಧರನ ರಾಣಿ ರಂಭೆ ಪಾರ್ವತಿ ನಿನ್ನ ಬೇಗದಿ॥1॥ ಮೂರ್ಲೋಕ ಮಾತೆಯೆ ಕೈಲಾಸವಾಸಿನಿ ಪಾಲಿಸೆನ್ನನು ತಾಯೆ ಬೇಗದಿ॥2॥ ಹುಗ್ಗಿ ಪಾಯಸವನ್ನು ರುದ್ರನರಾಣಿಗೆ ಪದ್ಧತಿಯಂತೆ ನೀಡುವೆ ನಾ॥3॥ ಮುಕ್ಕಣ್ಣನರಸಿಯೆ ಮುಕ್ತಿಯಪಾಲಿಸು ತಾಯೆ ಮುತ್ತೈದೆತನಗಳ ನೀಡೆಂದು ನಾ ॥4॥

ಧರೆಯೊಳಧಿಕವಾದ ವರ ಕರ್ನಾಟಕ (ಮಂಗಳಗೌರೀ ಕಥೆ)

ಧರೆಯೊಳಧಿಕವಾದ ವರ ಕರ್ನಾಟಕ।ಸುವರ್ಣಾವತಿಯ ಮಧ್ಯದೀ। ಅಲ್ಲಿರುವ ಜೈ ಶೀಲಾನೆಂಬ ನೃಪತನು। ತನಯರಿಲ್ಲದೆ ಚಿಂತಿಸೀ। ಅವರ ಮನವಾ ಪರಶಿವ ತಿಳಿದು ಭಿಕ್ಷುಕನಾಗಿ ಮಂಜುಳೆ ಅರಮನೆಗೇ ಬಂದ॥ಮಂಗಳಂ ಜಯ ಮಂಗಳಂ ಶುಭಮಂಗಳಾಂಗಿ ಸತಿಗೇ॥1॥ ಬಂದ ಭಿಕ್ಷುಕನಾ ಕಂಡು ಮಂಜುಳೆ ತಾನು ತಂದು ನೀಡಿದಳಾಗಾ। ಬಂಜೇ ಕೈ ಭಿಕ್ಷೆ ದೊರಕಿತು ನಮಗೆಂದು। ನಂದಿಕೇಶ್ವರ ನುಡಿಯೆ। ಗಂಗೇ ದಡದಲಿ ಸುರಿಯೆ ಮುತ್ತುಗಳನೂ। ಸಂಗತೇರು ತಾವು ಮಂಜುಳೆಗರುಹಲು ಬೇಗ ಮಂಗಳಂ॥2॥ ಸುತರಿಲ್ಲದ ಸಂಸಾರ ವ್ಯರ್ಥವೆಂದು ಶಶಿಮುಖಿ ಬಾಡಿದಳೂ। ವರವಲ್ಲದ ತನ್ನ ಬಂಜೆತನ ಹಿಂಗಿಸು ಎಂದೂ। ಪಶುಪತಿ ಗರುಹಿದಳು॥ ಅತಿ ಬೇಗದಿಂದ ದಂಪತಿಗಳಿಬ್ಬರು ಸೇರಿ ಶಶಿಶೇಖರನಾ ಸೇವಿಸಲು ವರವನಿತ್ತ॥ ಮಂಗಳಂ॥3॥ ನಂದಿಕೇಶ್ವರ ತಾನು। ನಗುತ ಮಾತಾಡಿದ। ಕಂದನ ಕೊಡುವೇನೂ। ಹದಿನಾರ್‍ವರುಷವು ತುಂಬಲು ಬಾಲಕಗೆ ಭುಜಂಗನ ಕಂಟಕವು। ಅಂಬಿಕೆ ಗುಡಿ ಹಿಂದೆ। ಒಂದು ಮಾವಿನಮರ। ಚಂದವಾ ದೊಂದು ಫಲ ನೀ ಹೋಗಿ ಕೊಯ್ದು ತಾರೆಂದನು॥ಮಂಗಳಂ॥4॥ ಎಚ್ಚರದಲಿ ಹೋಗಿ ಹತ್ತಿ ಮಾವಿನ ಮರ। ಮೊಟ್ಟೆ ಹಣ್ಣನೆ ಕೊಯ್ದೂ। ಕೆಳಗಿಟ್ಟು ನೋಡೊಂದ್ಹಣ್ಣಾಗಿ ರೆಹರ। ಕೊಟ್ಟಿದ್ದುನಮ ಗೊಂದೇ॥ ಮಿತ್ರೇ ಕರೆದು ಕೊಡಲು ಭುಂಜಿಸಿದಳು। ತಟ್ಟನೆ ನವ ಮಾಸ ತುಂಬಿತು ಮಂಜುಳೆಗೆ ॥ಮಂಗಳಂ॥5॥ ಕೂಸಿಗೆ ಮಧುವಿಟ್ಟು ಜಾತಕರ್ಮವ ಮಾಡಿ। ಜಾತಕವನೆ ಬರೆಸೀ। ಆತಗೆ ನಾಮಕರಣ ಲಕ್ಷಣನೆಂದು। ಪ್ರೀತಿಲಿ ಹೆಸರಿಟ್ಟು। ಆತಗೆ ಉಪನಯನಮಾಡಿ ವಿದ್ಯವ ಕಲಿಸೆ। ಆತಗೆ ಹದಿನಾರ್‍ವರುಷವು ತುಂಬಲು। ಮಂಗಳಂ॥6॥ ಮಾತಾಪಿತರೂ ಮನದಲಿ ಕಡುನೊಂದು। ಮಾತುಳನನು ಕರೆಸಿದರು। ಬೇಕಾದಷ್ಟೂ ಧನವ ಲಕ್ಷಣಗೆ ಕೊಟ್ಟು। ಕಾಶಿಗೆ ಕಳುಹಿದರೂ। ಆ ಸಮಯದಿ ಗೊಂಡ್ಯಾರಣ್ಯದಿ ಬರುತಿರೆ। ಮಂಡೋಪುರವೆಂಬೊ। ತೋಟದಲಿಳಿದರು। ಮಂಗಳಂ॥7॥ ಅಂಗನೆ ಗೆಳತಿಯರೊಡಗೂಡಿ ಕೊಂಡೂ। ಬಂದು ಪುಷ್ಪವ ಕೊಯ್ಯೆ। ಒಬ್ಬರಿಗೊಬ್ಬರು ಬೈದಾಡಿ ಪರಸ್ಪರ। ನೊಂದು ಕೊಂಡಳೆ ಮನದೀ। ಮಂಗಳಗೌರಿಯ ಪೂಜಿಸಿ। ಪಡೆದಳು ಜನನೀ। ಹಾಂಗೆಂದು ಕನ್ನಿಕೇ ಗೌರಿಪೂಜಿಸಿದಳು। ಮಂಗಳಂ॥8॥ ಅಣ್ಣಾಕೇಳೊ ಮಾತುಳನೇ ನೀ ಇವಳ ಮಾತು। ಕನ್ನಿಕೆ ಲಕ್ಷಣವಾ। ವೈಧವ್ಯವಿಲ್ಲದ ಈ ಕನ್ನಿಕೆಯ ಕೈಹಿಡಿದರೆ ನಮ್ಮ ಪುಣ್ಯದ ಫಲ ಒದಗಿ ಬಂದಿದ್ದರೆ। ಪನ್ನಂಗಧರನೇ। ಪಾಲಿಸುವೋನೆಂದ॥ಮಂಗಳಂ॥9॥ ರಾಯರ ಮಗಳಿಗೆ ಪರಿಪರಿ ವುಳ್ಳ ಸೋದರನಿಬ್ಬಣವೂ। ಭೋರಿಡುತಲಿ ಬಂದಿಳಿದರು ರಾಯರ ಹೂ ತೋಟದ ಒಳಗೇ ಕಾಣಗೊಡದೆ ಕೋಷ್ಠನ ಬಚ್ಚಿಟ್ಟೂ। ಬೇಗದಿಂದಲೆ ಬಾಲಕನ ಎರವ ಬೇಡಿದರು ಮಂಗಳಂ ॥10॥ ಹೊನ್ನು ಚಿನ್ನಕೆ ಎರವುಂಟೆಂದರೆ ಚಿಣ್ಣನ ಎರಲುಂಟೇ। ತನ್ನ ಮನಸಿಗೇ ತಿಳಿದು ಮಾತುಳ ತಾನು। ಚಿಣ್ಣನ ಕರೆಸಿದನೂ। ಚೆನ್ನಾಗಿ ಲಕ್ಷಣನ। ಕರೆದು ಧಾರೆಯನೆರೆದೂ ಕನ್ಯದಾನವಮಾಡಿ

ಕೃತಾರ್ಥರಾದರು।।ಮಂಗಳಂ।।11।। ಸತಿಪುರುಷರು ಮಂಚದ ಮೇಲ್ಮಗಿರೆ ಅತಿ ಹರುಷಾ ದಿಂದಾ। ಪತಿವ್ರತೆ ಹೋಗಿ ತಂದಳೆ ಪಾಯಸವನು ಘೃತಮೃಷ್ಟಾನ್ನ ವನೂ। ಅತಿ ಬೇಗದಿಂದ ಉಂಡು। ಅವನು ಕರವ ತೊಳೆದು। ಮುದ್ರಿಕೆಯನೆ ಕೊಟ್ಟು। ಮಲಗಿಮೈ ಮರೆತೂ ।।ಮಂಗಳಂ।।12।। ಮಿತ್ರೇ ಸ್ವಪ್ನದಲ್ಲೇಳಲು ಗೌರಿಯು ಸರ್ಪದ್ರಷ್ಟಗಳಾದವೂ। ಆಕ್ಷಣದಲಿ ಗರುಡನ ಸ್ಮರಿಸುತಲಿ। ಎತ್ತಿ ಹಿಡಿದಳೆ ಕಲಶಾ। ತೊಟ್ಟಕಂಚುಕದಿಂದ ಕಟ್ಟಿ ಕಲಶವನೂ। ಹೆತ್ತಮ್ಮನ ಮುಂದಿಟ್ಟಳೆ ಬಾಗಿನವ।।ಮಂಗಳಂ।।13।। ಸೋಗೆಗಂಗಳಬಾಲೆ ಮಲಗಿರೆ ಕಾಶಿಗೆ ಹೋದರು ಅವರಾಗ। ಮರುದಿನ ಕರೆತಂದರು ಕೋಷ್ಟಕನಾ। ಸಾಲು ಹಂದರದೊಳಗೇ। ವಾರುಜ ಮುಖಿಯವನಂಗವನೋಡೀ। ಧಾರೇನೆರೆದಾ। ಪುರುಷನಲ್ಲೆಂದಳು ।।ಮಂಗಳಂ।।14।। ಹಡೆದತಂದೇ ಕೇಳೋ ಕಾಶಿ ಬರುವ ಮಾರ್ಗದಲ್ಲಿ ಬಿಡದೆ ಹಾಕಿಸೂ। ಅನ್ನಛತ್ರವ। ಕೊಡುವೆನು ತಾಂಬಲ ಧೃಡವಾದ ಗೌರೀ। ವ್ರತವನೆ ನೆಡೆಸುವೇ ಕೈಹಿಡಿದ ಪುರುಷನಾ ಪಡೆವೇ ನೆಂದಳು।।ಮಂಗಳಂ।।15।। ಅಂದಾ ಮಾತಾ ಕೇಳಿ ನಿಬ್ಬಣವೂ ಹಿಂದಕೆ ತಿರುಗಿದರೂ। ಗಂಗಾಯಾತ್ರೇ ಮಾಡಿ ಲಕ್ಷಣನೂ ಮಾತುಳನೊಡನೆ ಬಂದಿಳಿದರು ಅಲ್ಲೀ। ಅಂಗನೆ ಪುರುಷನ ಗುರುತೆನ್ನುತಲೀ। ಸಂಭ್ರಮದಿಂದಲಿ ಕರೆ ಕಳುಹಿದರೂ।। ಮಂಗಳಂ।।16।। ಮಗಳೇ ಪೇಳೌ ನಿಮ್ಮಾ ಗುರುತೆನ್ನೂತಲೀ। ನೆರೆದ ಜನರು ಕೇಳೆ। ಇರುಳೆ ಇಟ್ಟ ಕಲಶವ ತಂದಳು। ಮಿಕ್ಕ ಜನರವಳಗೇ। ಉರುಗನು ಮುತ್ತಿನ ಸರವಾಗಿರಲೂ। ಹರದಿಯರ್ದ್ವಸೀ ಕೊರಳಿಗ್ಹಾಕಿದರೂ । ಮಂಗಳಂ।।17।। ಲಕ್ಷಣ ನಿಮ್ಮ ಗುರುತೆನ್ನುತಲೀ ಮಿಕ್ಕ ಜನರ ಒಳಗೆ ಆಕ್ಷಣದಲಿ ಹೊನ್ನುಂಗುರ ಧರಿಸಿದ। ನೆರೆದ ಜನರ ಒಳಗೇ। ಮತ್ತೆ ಪುನರಪಿ ಮದುವೆಯ ಮಾಡಿಕೊಂಡು। ಕೊಟ್ಟರು ಬಳುವಳಿ ಹೊರಟರು ಪಟ್ಟಣಕೇ।ಮಂಗಳಂ।।18।। ಮಾತುಳ ಮಡದೀ ಸಹಿತ ಸುವರ್ಣಾ ವಯ ಆ ಪ್ರಾಂತಕೆ ಬರಲೂ। ಪ್ರಾಪ್ತವಾಯಿತು ಶ್ರಾವಣಮಾಸಾ ಸುಮುಹೂರ್ತ ಮಂಗಳವಾರ ಆ ಪತಿವ್ರತೆಗೌರಿ ಪೂಜಿಸಿದಳು। ಮಾತಾಪಿತರಿಗೆ ಶುಭವಾರ್ತೇ ಕಳುಹಿದಳೂ ।।ಮಂಗಳಂ ।।19।। ತನಯನ ವಾರ್ತೇ ಕೇಳಿ ಪಟ್ಟಣವೂ ವಿನಯದಿ ಶೃಂಗರಿಸೀ। ಲಲನೆ ಸಹಿತವಾಗಿ ಎದುರುಗೊಂಡರು ಲಕ್ಷಣನಾ ಅರಮನೆ ಒಳಹೊಕ್ಕು ಕದಲಾರತಿ ಎತ್ತಿ ಕಾಂತೆಯ ರ್ದುರುಷದೀ। ಧೃಢವಾದ ಗೌರೀ ವ್ರತ ವೇನೆಂದರು। ಮಂಗಳಂ।।20।। ಧರೆಯೊಳಧಿಕ ವಾದ ವರ ಮಂಗಳಗೌರಿ। ಚರಣವನ್ನೆ ಭಜಿಸೀ। ಪರಿಪರಿಯಿಂದಾ। ಪೂಜಿಸಿಹರನಾ। ಅರಸಿ ಯನ್ನ ಭಜಿಸೀ। ನಿರುತವಾದ ಶ್ರೀ ವೆಂಕಟರಮಣನ ತ್ವರಿತದಿಂದಲೆನ್ನ ಹೃದಯದೊಳಿರಿ ಸೆಂದು ।।ಮಂಗಳಂ।।

ಧರೆಯನಾಳುವನೊಬ್ಬ ದೊರೆ(ಕಥೆ)

ಧರೆಯನಾಳುವನೊಬ್ಬ ದೊರೆ ಜೈಶೀಲನಾ ಹರದಿ ಮಂಜುಳೆಯಿರಲು ಮಕ್ಕಳಿಗಾಗಿ ಮರುಗುತ ಸೊರಗಿರಲು ಈ ಪರಿಯ ನೋಡುತ ಹರನು ಭಾಗ್ಯ ತಾ ತಿಳಿದವರ ಮನ ತಿರುಕನಂದದಿ ಬರಲು ಧ್ಯಾನವ ಕರೆದು ನೀಡಿದರೊಲ್ಲದಾಗಲೆ ತಿರುಗಿ ಪೋದನೆ ಉರಗಭೂಷಣ ಮಂಗಳ ಜಯವೆನ್ನಿ ಮಂಗಳ ಶುಭವೆನ್ನಿ ಮಂಗಳಾಂಗಿಯರು ಭಾಗ್ಯ।।1।। ನಂದಿವಾಹನನ ಪೂಜಿಸಿ ಫಲಗಳ ಬೇಡೆ ಕಂದನಿಗಾಯುಷ್ಯವು ಐದರಾ ಮ್ಯಾಲ್ ಹನ್ನೊಂದು ವರುಷವೆನ್ನಲು ವರ ನೀಡುತಿರಲು ಮಂಜುಳೆಯು ಗರ್ಭವನೆ ಧರಿಸಲು ಬಂಧುಗಳು ಹೂ ಮುಡಿಸಿ ಪರಮಸಂಭ್ರಮದಿ ಸೀಮಂತ ಮಾಡಲು ತುಂಬಿತಾ ನವಮಾಸವಾಗಲೆ।।2।। ಜಾತವಾಗಲು ನಾಮಕರಣ ಮಾಡುತ ಚಂದ್ರಶೇಖರ ನೆಂದ್ಹೆಸರಿಡುತ ಜಾವಳ ಜುಟ್ಟು ಪ್ರೀತಿಂದುಪನಯನ ಮಾಡುತ ವಿದ್ಯೆಗಳ ಕಲಿಸುತ ಆತಘದಿನಾರ್ರ್ವರುಷ ಬರುತಿರೆ ಮಾತುಳನ ಕರೆತಂದು ಬ್ಯಾಗನೆ ಪ್ರೀತಿಯಿಂದ್ಧಣಕೊಟ್ಟು ಕಾಶಿಯಾತ್ರೆಗೆನುತಲಿ ಕಳುಹೆ ಬ್ಯಾಗನೆ।।3।। ಒಂದಾಗಿ ಅಳಿಯ ಮಾವಂದಿರು ಬರುತಿರೆ ಕಂಡಿಳಿದರು ತೋಟದಿ ಗೆಳತಿಯರುಬಂದು ಹೂವಿಗೆ ಆಟವಾಡುತಲಿ ಕೋಪಿಸೆ ಒಂದಕ್ಕೊಂದು ಮಾತಾಡೆ ರಾಜ ನಂದನೆಯು ತಾ ನೊಂದುಕೊಳ್ಳದೆ ನಂದಿವಾಹನ ನರಸಿ ದಯವಿರಲೆಂದು ನಡೆದಳು ಮಂದಿರಕೆ।।4।। ಬಂದ ರಾಜನ ಮಗಳಿಗೆ ನಿಬ್ಬಣವು ಕರೆತಂದರರಸುಕುಮಾರನ ಧಾರೆಯನೆರೆದು ಮಂಗಳ ಸೂತ್ರವನು ಬಂಧನವ ಮಾಡಿದ- ರಂದದಿಂದಲಿ ಲಾಜಹೋಮವ ಬಂಧುಗಳ ಸಹಿತುಂಡ ಭೌಮವ ಚೆಂದದಿಂದಲಿ ಸುತ್ತಿಸಾಡ್ಯವ ಅಂದಿನಿರುಳ ಲಾನಂದವಾಗಿರೆ।।5।।

ಸತಿಪತಿಯರು ಬಾಳ ಹಿತದಿಂದ ಮಲಗಿರೆ ಅತಿ ಹಸಿವೆನಗೆನಲು ಲಡ್ಡಿಗೆ ತಂದು ಘೃತ ಬಟ್ಟಲೊಳು ಕೊಡಲು ತಿಂದಿಡಲು ಮುದ್ರಿಕಾ ಸತಿ ಸಹಿತ ಸುಖನಿದ್ರೆಲಿರೆ ಪಾರ್ವತಿಯು ಬಂದಾ ಖದ್ರುದೇವಿಸುತ ಬರುವನೆಂದ್ಹೇಳಿ ಕಳಸವ ಅತಿ ಬ್ಯಾಗದಿ ತುಂಬಿಟ್ಟಳುರಗವ॥6॥ ಅತ್ತ ಕಾಶಿಗೆ ಪೋಗಿ ಅಳಿಯ ಮಾವಂದಿರು ಕ್ವಾಷ್ಟನ ಕರೆದು ತಂದು ಕುಳಿತಿರಲಾಗ್ವಿಚಿತ್ರ-ಭೂಷಿತಳು ಬಂದು ನೋಡುತಲಿ ನಿಂದು ಥಟ್ಟನೆದ್ದು ತಾ ತಿರುಗಿ ಪೋಗೆನ್ನ ಪಟ್ಟದರಸಿವನಲ್ಲವೆನುತಲಿ ಹೆತ್ತಜನಕ ನೀ ಅನ್ನ ಕ್ಷೇತ್ರವ ಇಟ್ಟು ನಡೆಸೀಗ್ವೀಳ್ಯಗಳ ಕೊಡುವುದು ॥7॥ ಗಂಗಾಸ್ನಾನವ ಮಾಡಿ ಬಂದರಿಬ್ಬರು ಕರೆ ತಂದು ಭೋಜನಮಾಡುತ ಕುಳಿತಿರಲಾಗ ತಂದು ವೀಳ್ಯವ ಕೊಡುತ ಮುಖ ನೋಡಿ ನಗುತ ಸಂದೇಹಿಲ್ಲದೆ ಎನ್ನಪತಿ ಹೌದೆಂದು ನುಡಿದಳು ಬಂದು ಜನರು ನಿಂದು ಗುರುತೇನೆಂದು ಕೇಳಲು ತಂದು ತೋರಿದಳುಂಗುರುವ ಜನರಿಗೆ॥8॥ ನಿನ್ನ ಗುರುತು ಎನ್ಹೇಳೆನ್ನಲು ಸಭೆಯೊಳು ಪನ್ನಂಗದ ಕಳಸದ ಬಾಯಿ ತೆಗೆಯಲು ರನ್ನ ಮುತ್ತಿನ ಸರವು ಆಗಿರಲು ಉರಗವು ಕನ್ನೆಯರು ಹರಸ್ವಾಕೆ ಕೊರಳಿಗೆ ಹಾಕಲು ಮನ್ನಿಸುತ ಮಹಾರಾಜ ಮಗಳನು ಚಿನ್ನದಾಭರಣಗಳು ಉಡುಗೊರೆ ತನ್ನಳಿಯಗುಪಚಾರ ಮಾಡುತ ಸತಿಪತಿಯರು ತಮ್ಮ ಪಿತರ ಅಪ್ಪಣೆಗೊಂಡು ರತುನದಂದಣವೇರಲು ಮಾರ್ಗದಿ ಗೌರೀವ್ರತಮಾಡಿ ನಡೆತರಲು ಪಿತಗ್ಹೇಳಿ ಸುತನು ಬಂದರಮನೆಗೆ ಭಾಗೀರಥಿಯು ಮಾತುಳ ಮಡದಿ ಸಹಿತ ಹಿತದಿ ಬಂದೆರಗಿದರೆ ಸೊಸೆಮಗ ಅತಿಹರುಷದಿಂದಪ್ಪಿ ಕೇಳುತ॥10॥ ದಾವ ಪುಣ್ಯದ ಫಲದಿಂದ ನಿನ್ನರಸನ ಪ್ರಾಣ ಪಡೆದಿಯೆನಲು ಮಂಗಳಗೌರಿ ದೇವಿದಯವಿರಲೆಂದು ಹೇಳಲು ಶ್ರೀಗೌರಿಕಥೆಯನು ಕಾಮಿತವನದೊಳಗೆ ದ್ರೌಪದಿಗ್ಹೇಳಿದನು ಭೀಮೇಶಕೃಷ್ಣನು ಮಾಡಿದರೆ ಮುತ್ತೈದೆತನಗಳ ಬೇಡಿದಿಷ್ಟಾರ್ಥಗಳ ಕೊಡುವ್ಹೋಳು ಮಂಗಳ ಜಯವೆನ್ನಿ ಮಂಗಳ ಶುಭವೆನ್ನಿ ಮಂಗಳಾಂಗಿಯರು ಬ್ಯಾಗ॥11॥

ಪರಮ ಸಂತೋಷದಲಿ (ಕಥೆ) — ರಾಗ: ಆನಂದಭೈರವಿ

ಪರಮ ಸಂತೋಷದಲಿ ಪತಿಯ ಪಾದಕ್ಕೆರಗಿ। ವರದ ಗಣಪತಿಗೆ ವಂದನೆಯ ಮಾಡಿ। ಹರನರಸಿ ಮಂಗಳಗೌರಿದೇವಿ ಕಥೆಯ ನೊರೆವೆ ಬಲ್ಲಂಥ ಸಜ್ಜನರು ಕೇಳಿ॥1॥ ಕೌರವೇಶ್ವರನು ಕುಟಿಲದಿ ಜೂಜನಾಡಿ। ಪುರವ ಬಿಟ್ಹೊರಡಿಸಿದ ಪಾಂಡವರನು। ಅಡವಿಲಿ ವನವಾಸವನಾಚರಿಸುತ। ದಿನವ ಕಳೆಯುತ್ತಿದ್ದರು ಹರಿಯ ಧ್ಯಾನದಿಂದ॥2॥ ಒಂದು ದಿನ ಹರಿಯು ಕಾಮ್ಯಕ ವನಕೆ ನಡೆ ತರಲು। ಬಂದರೆದುರಿಗೆ ಧೌಮ್ಯಮುನಿ ಸಹಿತಲೆ। ಬಂದು ಪಾಂಡವರು ಮುಯ್ಯಿಕ್ಕಿದರು ಹರಿಪಾದ। ದ್ವಂದ್ವದಲಿ ದ್ರೌಪದೀದೇವಿ ಸಹಿತ॥3॥ ನಾರಾಯಣ ತಾನು ನಸುನಗತ ದ್ರೌಪದಿಗೆ। ಹೇಳಿದನು ಪೂರ್ವಜನ್ಮದ ಕರ್ಮವ। ಮಾಡಿ ಅನುಭವಿಸಿದಲ್ಲದೆ ಬಿಡದು। ಚಿಂತಿಸಬೇಡ ವೆನುತಿದ್ದನು॥4॥ ಧರೆಯೊಳಗೆ ಉತ್ತಮ ವ್ರತವು ಯಾವುದು ಎಂದು ನರಹರಿಯು ತನ್ನೊಳಗೆ ತಾನೆ ತಿಳಿದು। ಹರನರಸಿ ಮಂಗಳಗೌರಿದೇವಿಯ ವ್ರತವಾ। ಚರಿಸಿ ನಿಮ್ಮ ರಾಜ್ಯ ಸಾಧ್ಯವಹುದು॥5॥ ಶ್ರಾವಣ ಮಾಸದಲಿ ಐದು ಮಂಗಳವಾರ ಈ ವ್ರತವು ಐದು ವರುಷವಾಚರಿಸಲು। ಯಾರು ಮಾಡಿದರು ಮನಸ್ಸಿನ ಸಿದ್ಧಿ ಹೌದೆಂದು ಭಾಮೆ ದ್ರೌಪದಿಗೆ ಹರಿ ನುಡಿದನಾಗ॥6॥ ಯಾರು ಮಾಡಿದರು ಈ ವ್ರತದ ಮಹಿಮೆಗಳೇನು। ಏನು ಫಲವೆಂದು ದ್ರೌಪದಿ ಕೇಳಲು। ನಾನು ಹೇಳುವೆನು ಕೇಳು ಮುನ್ನ ಕರ್ನಾಟಕ ದೇಶದೊಳಗೊಬ್ಬ ದೊರೆ ಇರುತಿದ್ದನು॥7॥ ರನ್ನೆಕೇಳು ಶ್ರೀಪಾದನೆಂಬೊ ನಾಮದಲಿ। ಸುವರ್ಣಾವತಿ ಯೊಂಬೊ ಪಟ್ಟಣದಲಿ। ತನ್ನ ವಲ್ಲಭೆ ಕನಕ ಮಂಜುಳೆ ಸಹಿತಲೆ। ಚೆನ್ನಾಗಿ ಧರೆಯ ಪಾಲಿಸುತ್ತಿದ್ದನು॥8॥ ಮಕ್ಕಳಿಲ್ಲದ ಅವರು ಮನದ ಸಂತಾಪದಲಿ ಬಿತ್ತಿದಾ ಸಸಿಗೆ ನೀರಿಲ್ಲದಂತೆ। ಬತ್ತಿದಾ ಕೊಳದಂತೆ ಮನದಲ್ಲಿ ಮರುಗುತ್ತ। ಮುಕ್ಕಣ ಹರನ ಧ್ಯಾನದಲ್ಲಿದ್ದರು॥9॥ ಪರಮ ಹರಭಕ್ತರು ತನಯ ರಿಲ್ಲದೆ ಅವರು। ಮೃಡನ ಪೂಜಿಸುತ್ತಿರಲು ಅನುಗಾಲವು। ಹರ ತನ್ನ ಭಕ್ತರ ಮನದ ಚಿಂತೆಯ ತಿಳಿದು। ತಿರುಕನಂದಹರಿ ಭಿಕ್ಷೆಗೆ ಬಂದನು॥10॥ ಬಂದವನ ಕಾಣುತ್ತ ಕನಕ ಮಂಜುಳೆ ಮುತ್ತ। ತಂದು ಮೊರದೊಳಗೆ ಭಿಕ್ಷವ ನೀಡಲು। ಮುಂದೆ ನಿಂತಿದ್ದಾನೆ ಹರ ತಾನು ಮುಟ್ಟದೆ। ತಂದು ಈಶಾನ್ಯಮೂಲೆಗೆ ಚೆಲ್ಲಿದ॥11॥ ಯಾವಾಗ ಬಂದರು ನೀಡುವಳು ಭಿಕ್ಷವನು। ಮಾರಹರ ಮುಟ್ಟದಲ್ಲಿ ಯೆಚೆಲ್ಲುವ। ಏನು ಕಾರಣವೆಂದು ರಾಯಬಂದರೆ ಅವಳ। ಭಾವವನು ಹೇಳಿದಳು ಚಿಂತೆಯಿಂದ॥12॥ ನಾಳೆಭಿಕ್ಷವ ನೀಡು ನಾನು ನೋಡಿತಲಿಹೆನು। ಏನು ಕಾರಣವೆಂದು ಕೇಳು ಅವನ। ಹೀಗೆ ಚಿಂತಿಸುತ ಕಳೆಯೆ ಮರುದಿನ। ಬಾಗಿಲಿಗೆ ಬಂದು ಭಿಕ್ಷಾಯೆಂದನು॥13॥ ಬಂದವನ ಕಾಣುತ್ತ ಕನಕ ಮಂಜುಳೆ ಮುತ್ತ।

ತಂದು ಮೊರದೊಳಗೆ ಭಿಕ್ಷವ ನೀಡಲು। ಮನದ ಸಂಶಯವೇನು ಎಂದುಕೇಳಿದವನ। ತನಯರಿಲ್ಲದೋರ ಭಿಕ್ಷೆಮುಟ್ಟೆನೆಂದ॥14॥ ಭಿಕ್ಷುಕನು ಆಡಿದಾ ಕಷ್ಟದಾ ನುಡಿಕೇಳಿ। ಮಕ್ಕಳಿಲ್ಲದ ಜನ್ಮ ವ್ಯರ್ಥವೆಂದು। ದುಃಖಿಸಿಸತಿಪತಿಗಳಿಬ್ಬರು ಬಂದು। ಮುಕ್ಕಣ್ಣ ಹರನ ಚರಣಕೆ ಬಿದ್ದರು॥15॥ ಪರಮ ಹರ ಭಕ್ತರ ಬಿಗಿದಪ್ಪಿ ತಕ್ಕೈಸಿ। ತನಯರಿಲ್ಲದೆ ಬಹಳ ನೊಂದೆ ಮಗನೆ। ನಿನಗೆ ಮಕ್ಕಳ ಫಲವಿಲ್ಲ ಹದಿನಾರು ವರುಷ। ಆಯುಷ್ಯದ ಮಗನ ಕೊಡುವೆನು ಎಂದನು॥16॥ ಒಂದು ಫಲವನ್ನುಕೊಟ್ಟು ನಂದೀಶ್ವರ ಹೋದ। ಮುಂಜುಳೆಗೆ ಗರ್ಭ ಸ್ಥಿರವಾಯಿತಾಗ। ಒಂಭತ್ತು ತಿಂಗಳು ತುಂಬಿ ಪಡೆದಳು ಭೂ। ಮಂಡಲವನಾಳುವ ಹರಭಕ್ತನ॥17॥ ಆಡುವ ಬಾಲಕನ ನೋಡಿ ಹಿಗ್ಗುತಲಿರಲು। ಆದವು ಆರೇಳು ವರುಷದಲ್ಲಿ। ಮಾಡಿ ಮುಂಜಿ ಸಕಲ ವಿದ್ಯೆಯನು ಕಲಿಸದರು॥ ಆರೇಳು ವರುಷವಾಯಿತು ತನಯಗೆ॥19॥ ಹದಿನಾರು ವರುಷವಾಗಲು ಅವನಿಗೆ ತಾಯಿತಂದೆ। ತಿಳಿದು ಕಂಟಕವು ಪರಿಹಾರವಾಗಲಿ। ಎನುತ ಮಾವನ ಕರಿಸಿ ಕಾಶಿಗೆ ಮಗನ। ಕರಕೊಂಡು ಹೋಗೆಂದು ಒಪ್ಪಿಸಿದರು॥20॥ ಸೋದರಳಿಯನು ಸಹಿತ ತಾ ಬಂದನು। ಗೊಂಡಾರಣ್ಯವೆಂಬ ಪುರ ಮಧ್ಯದಲ್ಲಿ। ಆದೇಶದ್ಯೊರೆಯ ಮುಂಡೋರಾಯನ ಪುರದ। ಹುವ್ವಿನ ತೋಟದಲಿ ನಿಂದರವರು॥21॥ ಮಂಡೋರಾಯನ ಮಗಳು ಸಂಗಾತಿರೊಡಗೊಂಡು। ಒಂದು ದಿನ ಹುವ್ವಿನ ವನಕೆ ಬರಲು। ಚಂದ್ರಶೇಖರನರಸಿ ಸೋಲು ಮುಡಿಗೆನುತಲೆ। ದುಂಡುಮಲ್ಲಿಗೆ ಹುವ್ವ ಕೊಯ್ಯುತ್ತಿದ್ದಳು॥22॥ ರಾಯನ ಮಗಳ ಸಂಗಾಡ ಬಂದೋರೆಲ್ಲ। ಹುವ್ವ ಕೊಯ್ಯುವಾಗ ಒಬ್ಬಳು ಕೋಪಿಸಿ। ರಾಜ್ಯಾಧಿಪತಿಯ ಮಗಳೆಂದು ನೋಡದೆ। ಆಡಿದಳು ಬಹಳಕಷ್ಟದ ಮಾತುಗಳಾಗ॥23॥ ನುಡಿದನು ಮಾತನು ಕೇಳಿ ನಗುತ ಮನದಲ್ಲಿ। ಮಂಗಳಗೌರಿ ದಯವುಂಟು ಎನಗೆ। ಮಂದಮತಿ ನೀ ನುಡಿದರೇನಾಯಿತೆನಗೆ। ಬಂದ ವಿಪತ್ತುಗಳ ಜೈಸುವೆನೆಂದಳು॥24॥ ಶ್ರಾವಣ ಮಾಸದಲಿ ಐದು ಮಂಗಳವಾರ ನಾನು ಪೂಜಿಸಿ। ಪೂರ್ಣಾಯುಷ್ಯದ ಪತಿಯನು। ಬೇಡುವೆನು ಹರನಲ್ಲಿ ವರವೆಂದಳು॥25॥ ಈ ಮಾತಾನಾಲೈಸೆ ಕೇಳಿದ ಸುಕುಮಾರ। ಮಾವಯ್ಯನೋಡೋ ಹೆಣ್ಣಿನ ಮಾತನು। ರೂಢಿಗೀಶ್ವರನ ದಯೆಯುಂಟಾದರೆ ನಮಗೆ ಈ ಹೆಣ್ಣು ನಮಗೆ ಆಗಬೇಕೆಂದು॥26॥ ಮಾಡಿ ಸಾವರಣೆಯ ಮಗಳ ಮುದುವೆಗೆ ವರನು। ಹೇಳಿಕಳುಹಿಸಿದರೆ ದಿಬ್ಬಣದವರನು। ಸಾಗಿ ಬಂದರೆ ಕುಷ್ಟಿ ಸಹಿತ ಮುಂಡೋಪುರದ। ಹೂವಿನ ತೋಟದಲಿ ನಿಂದರವರು॥27॥ ಬಾಲಚಂದ್ರಮನಂತೆ ಹೊಳೆವ ಕುಮಾರನು। ಇವನ ನಮಗೊಂದು ಘಳಿಗೆ ಎರವು। ನೀವು ಕೊಡಿರೆಂದು ದಿಬ್ಬಣದವರು ಮಾವನ। ಆಡಿದ ಮಾತಿಗೆ ನಕ್ಕುಮಾವ॥28॥ ಹೊನ್ನು ಹಣ ಬೆಳ್ಳಿ ಬಂಗಾರಕೆ ಎರವುಂಟು। ಚಿನ್ನ ಬೆಳ್ಳಿಯು ಮುಂತಾಗಿ ಉಂಟು। ಕನ್ನಿಕೆಗೆ ವರನು ಎರವ ಕೇಳುವರ ಕಣ್ಣಲ್ಲಿ ನಾಕಾಣೆ ನಿಂತೆಂದ ಮಾವ॥29॥ ಕಾಲವು ಒದಗೀ ಹೊತ್ತಿಗ್ದದಿನಾರು ವರುಷ ನೋಡಲಾರೆವೆಂದು ಮನದೊಳರಿತು। ಯಾವ ಪುಣ್ಯದಲಿ ಬದುಕಿದರೆ ಸಾಕು ಮದುವೆ। ಆಗುಹೋಗೆಂದು ಕಳಿಸಿದ ಮಾವನು॥30॥ ಬೃಹಸ್ಪತಿಯ ಕರೆಸೆ ನಕ್ಷತ್ರವನೆ ನೋಡಿಸಿ। ಮದುವೆಯ ಲಗ್ನ ನಿಶ್ಚಯಮಾಡಿ। ಆ ಕುಷ್ಟಿಯ ಬಚ್ಚಿಟ್ಟು ಸುಕುಮಾರ ಗೆರೆದರು। ಧಾರೆಯಾ ರರಿಯದೆ॥21॥ ಮಾಣಿಕದ ಗಿಂಡೀಲಿ ಭಾಗೀರತಿ ತುಂಬಿ। ಪ್ರಾಣದೊಲ್ಲಭೆ ಸಹಿತ ಮಂಗಳಧಾರೆ। ಭಾಗ್ಯದಲಿ ಎರೆದು ವಿನಯದಲಿ ಮಂಡೋರಾಮ। ಧಾನಧರ್ಮದಲಿ ದಣಿಸಿದ ವಿಪ್ರರ॥32॥ ಮಂಗಳಗೌರಿಯು ಮುಂದೆ ಗೃಹದೊಳು। ಸಂಗಾತಲುಂಡು ಇಬ್ಬರು ಮಲಗಿರೆ। ಚಂದ್ರಶೇಖರರಾಯ ಸ್ವಸ್ಥದಿಂದ ತನ್ನ। ಹೆಂಡತಿಯಕೂಡೆ ನುಡಿದ ವಿನಯದಿ॥33॥ ಗಂಡನ್ಹೇಳಿದ ಮಾತು ಕೇಳಿ ಲಡ್ಡಿಗೆತುಪ್ಪ। ತುಂದು ಬಟ್ಟಲವಳಗೆ। ತಂದು ಇರಿಸಿದಳು ದೇವ ಮನೆಯಲಿ॥34॥ ಮತ್ತೆ ಮಲಗಿರುವಾಗ ಘಟಸರ್ಪ ಮಂಚದ। ಬಳಿಗೆ ಬಂದಿತು ಆ ಸಮಯದಲಿ। ಹರನರಸಿ ಮಂಗಳಗೌರಿಯನೆ ಪೂಜಿಸಿ ಶಿರದಲ್ಲಿ ಅಕ್ಷತೆ ತಂದು ತಳಿದಳು॥35॥ ತಳಿದ ಅಕ್ಷತೆಯು ಸರ್ಪದ ಮೇಲೆ ಬೀಳಲು। ಅದರಾಯುಷ್ಯವು ಕ್ಷೀಣವಾಯಿತು। ಹರನರಸಿ ಮಂಗಳಗೌರಿಯ ದಯದಿಂದ ಚಿರಂಜೀವ ಆಯ್ತು ಕೇಳೆಂದ ಹರಿಯು॥36॥ ಆಗ ಕಂಡಳೆ ಫಣಿಯ ನೋಡಿ ಬೆರಗಾಗುತ್ತ। ಏನು ಕಾರಣ ಬಳಿಗೆ ಬಂದಿತೆಂದು। ಬ್ಯಾಗದಲಿ ತಂದು ಕಲಶವ ತುಂಬಿ ಕಂಚಕ। ಬಾಯಿ ಕಟ್ಟಿರಿಸಿ ಮಲಗಿದಳು ಹರುಷದಿ॥37॥ ಆ ಹೊತ್ತಿನಿರುಳಲ್ಲಿ ಸ್ತ್ರೀ ಪುರುಷರೊಂದಾಗಿ। ಬಹಳ ಸಂತೋಷದಲಿರುತಿರ್ದರು। ಆ ಇರುಳು ಕಳೆದು ಬೆಳಗಾಗ ಮಾವನ ಕೂಡೆ। ಯಾರಿಗ್ಹೇಳದೆ ಕಾಶಿಗ್ಹೋರಟ್ಹೋದರು॥38॥ ನಾರಾಯಣನ ಭಕ್ತ ಹೋದ ಕಾಶಿಗೆ ಅತ್ತ। ಯಾರು ಅರಿಯರು ಅರುಣ ಉದಯದಲಿ। ಆ

ಕುಷ್ಟಿಯ ತಂದು ಹಸೆಯ ಮೇಲೆ ಕುಳ್ಳಿರಿಸಿ। ಬಾಮೆಯನು ಹಸೆಗೆ ಬಾರೆಂದರಾಗ॥39॥ ಬಂದು ಕಂಡಳು ಆಗ ಬಿಳಿಮಯ್ಯನು ತನ್ನ ಗಂಡನಲ್ಲಾವೆಂದು ಮನದಲರಿತು। ಹಿಂದಕ್ಕೆ ಹೋಗಿ ಹೇಳಿದಳು ಒಂದು ವರುಷವು। ಗಂಡನಲ್ಲದ ವ್ರತವು ತನಗೆಂದಳು॥40॥ ತಂದೆತಾಯನು ಕರೆದು ಹೇಳಿದಳು ನೀವ್ ಕೊಟ್ಟ। ಬಾಲಪ್ರಾಯದ ಗಂಡನಲ್ಲ ಇವನು। ಏನು ಕುಟಿಲವೋ ಕಾಣೆ ತಿಳಿಯಬಾರದಿಂದು। ಸಾಗಿಸಿ ಕಳುಹಿಸಿ ದಿಬ್ಬಣದವರನು॥41॥ ತಂದೆಯನು ಕರೆದು ಹೇಳಿದಳು ಒಂದು ವರುಷವು ಅನ್ನ ಛತ್ರವನ್ನು। ತಂದೆ ನೀ ಮಾಡಿಸೋ ಕೈವೀಳ್ಯವ। ಚೆಂದದಲಿ ನಾಕೊಟ್ಟ ಗುರುತ ಹೇಳುವೆನು। ಹಾಗೆಂದು ಕೈವೀಳ್ಯವನ್ನು ಕೊಡುತ್ತಿದ್ದಳು॥42॥ ನಾಲ್ಕು ಕಡೆಯಲ್ಲಿ ದಾರಿಮಾರ್ಗದ ಒಳಗೆ। ಹೋಗಿ ಬರುವವರು ಅನ್ನವನುಣ್ಣುವುದು।ರಾಯನ ಮಗಳು ಕೈವೀಳ್ಯವನೆ ತಕ್ಕೊಂಡು। ಹೋಗೋದು ಎಂದು ನೇಮಿಸಿದರಾಗ॥43॥ ಆಳು ಭಂಟರನು ಅಲ್ಲಲ್ಲಿಗಿರಿಸಿ ದಳಿದದು। ಮೀರಿಹೋದರೇನು ತಡೆದು ನೀವು। ಬ್ಯಾಗದಲಿ ಬಂದು ಸುದ್ದಿ ಹೇಳಿ ಎನುತಲೆ ಈ ಬೆಗಯಲಾರು ತಿಂಗಳು ಕಳೆದರು॥44॥ ಭಾಗೀರಥೀರ್ಹೋಗಿ ಬ್ಯಾಗ ಸ್ನಾನವ ಮಾಡಿ। ಆರೇಳು ತಿಂಗಳಿಗೆ ಬಂದರವರು। ಕಾವಡಿಯ ಸಹಿತ ತಕೊಂಡು ಮಂಡೋಪುರದ ಊರು ಬಾಗಿಲಿಗೆ ಬಂದರು ಇಬ್ಬರು॥45॥ ಕಾಣುತ್ತ ಚಾರರವರ ಬ್ಯಾಗ ಬಂದ್ಹೇಳಿದರು। ಬಾ ಎಂದು ಕರೆದವರೆಲ್ಲರನು। ಬ್ಯಾಗದಲಿ ಮನ್ನಿಸಿ ಮನೆಗೆ ಕರೆ ತಂದವರ। ವಾರಿಜಾಮುಖಿ ನೋಡಿ ತಿಳಿದಳಾಗ॥46॥ ತಂದೆಯನು ಕರೆದು ಹೇಳಿದಳು। ಅಂದು ಈತನಿಗೆ ಧಾರೆಯನೆರೆದಿರಿ। ನಂಬಿಕೆಯು ಯೇನೆಂದು ಕೇಳಿದರೊಳಗಿಂದ। ತಂದು ಬಿಚ್ಚಿದಳು ಕಲಶವ ಸಭೆಯಲ್ಲಿ॥47॥ ತೆಗೆದು ನೋಡಿದರೆ ಆ ಸರ್ಪ ಕಂಡಮಾಲೆ। ಸರವಾಗಿ ಇರಲು ಅಲ್ಲಿದ್ದ ಜನರು ಹರಿಸಿ ಕೊರಳಿಗೆ ಹಾಕಿ ಸಂತೋಷದಿಂದಲಿ। ಮುತ್ತೈದೆತನವನು ಪಡೆಯೆಂದರು॥48॥ ನಿನ್ನ ಗುರುತೇನೆಂದು ಕೇಳಿದರೆ ಕಾಶಿಗೆ। ನಮ್ಮ ಮಾವನ ಕೂಡಿ ಹೋಗುತ್ತಿದ್ದೆ. ನಿಮ್ಮ ಬೀಗನು ತನ್ನ ಮಗನು ಕುಷ್ಟಿಯು। ಎಂದು ನಮ್ಮ ಕರೆತಂದು ಧಾರೆಯನೆರೆಸಿದರು॥49॥ ಲಡ್ಡಿಗೀ ತಿಂದ ಬಟ್ಟಲ ತಂದರೊಳ್ಗಿಂದ। ಮುದ್ರೆ ಉಂಗುರವು ತೋರಿಸಿ ಜನರಿಗೆ। ಪ್ರಜ್ವಲಿತವಾದ ಮುದ್ರೆಯ ಮ್ಯಾಲೆ ಚಂದ್ರಶೇಖರನೆಂಬೊ ಹೆಸರು ಕಂಡರಾಗ॥50॥ ಮಂಡೋರಾಯನು ತನ್ನ ಮಗಳ ತಕ್ಕೈಸಿದನು। ಇಂದು ತನ್ನ ಕುಲಕೆ ಕೀರ್ತಿಯನು ತಂದೆ। ಗಂಡನೇಳಿದ ಮಾತು ಮೀರದೆ ಇರುವೆಯೆಂದು। ಚಂದದಲಿ ಮಗಳ ಮುದ್ದಾಡುತಿದ್ದ॥51॥ ಹೀಗೆ ಒಂದೆರೊಡುಷ ಸ್ತ್ರೀಪುರುಷರೊಂದಾಗಿ। ಬಹಳ ಸಂತೋಷದಲಿ ಇರುತಿರ್ದರು। ತಾಯಿ ತಂದೆಯ ನೆನೆದು ಹೋಗಬೇಕೆನುತಲಿ। ಮಾವನ ಕೂಡೆ ಹೇಳಿದ ವಿನಯದಿ॥52॥ ಸೋದರಮಾವ ನಮ್ಮೂರಿಗ್ಹೋಗೋಣೆನ್ನು। ತಾಯಿ ತಂದೆಯ ನೋಡಬೇಕೆಂದನು। ಕುದುರೆ ಮಂದಿ ದಳಸಹಿತ ಅಳಿಯ ಕುಮಾರಿಯನೆ ಕಳುಹಿಸಿ ಚಿಂತಿಸುತ ಲಿದ್ದನು॥53॥ ದಾರಿ ಮಾರ್ಗದಲಿ ಬರುವಾಗ ಶ್ರಾವಣಮಾಸ। ಆಗ ಬಂದಿತು ತನ್ನ ಮನದಲರಿತು। ಹೇಳಿದಳು ಪತಿಯೊಡನೆ ನಗುತ ಸಂತೋಷದಲಿ। ಮಾಡಬೇಕಲ್ಲ ಗೌರಿವ್ರತವನು॥54॥ ದಾರಿಲಿ ವ್ರತವನು ಮಾಡಬಾರದು ಕೇಳು। ಊರಿಗ್ಹೋದಮ್ಯಾಲೆ ಮಾಡೆಂದರು। ಕೇಳು ಕಿರಿಯಯ್ಯ ಒಂದು ಘಳಿಗೆತಡವಿಲ್ಲ ಬಾಲ್ಯದಲಿ ಹಿಡಿದ ಈ ವ್ರತವ ನಿಲಿಸಲಿಲ್ಲ॥55॥ ಗಂಗೆಯಾ ತೀರದಲಿ ಮಿಂದು ಮಡಿಯನುಟ್ಟು। ಚಂದ್ರಶೇಖರನರಸಿಯು ಭಕ್ತಿಯಿಂದ। ಗಂಧಾಕ್ಷತೆ ಪುಷ್ಪ ದೀಪಧೂಪಗಳಿಂದ। ಮಂಗಳಾರತಿಯ ನೆತ್ತಿದರ್ ಹರುಷದಿಂದ॥56॥ ಹರನರಸಿ ಮಂಗಳಗೌರಿ ನೆಲೆಸಿದ ತಾವು। ಮಣಿಪುರವು ಎಂಬೋ ಪಟ್ಟಣವಾಯಿತು। ದೊರೆ ಮಕ್ಕಳುಂಡು ಕೈತೊಳೆದು ತಮ್ಮೈಯ್ಯನನ। ಪುರದ ಸಮೀಪಕ್ಕೆ ಬಂದರವರು॥57॥ ಹರನ ವರದಲಿಕೊಟ್ಟ ತನಯನಾ ಮಾತುಳನ। ಕೈಗೆ ಕೊಟ್ಟಾ ಮಗನು ಏನಾದನೋ। ಎನುತ ತಾಯಿತಂದೆ ಮರುಗುತ್ತಿದ್ದರೆ। ನಿಮ್ಮ ಮಗ ಬಂದನು ಎಂದು ಹೇಳಿದರು ಬಂದು॥58॥ ಹೇಳಿದ ಮಾತನು ಕೇಳಿ ಸಂತೋಷದಲಿ। ರಾಣಿಯಾ ಬಳಿ ಹೇಳಿಕಳುಹಿಸಿದರೆ। ರಾಣಿವಾಸವ ಬಿಟ್ಟು ಸಂತೋಷದಲಿ ಸುತನ। ನೋಡಬೇಕೆಂಬೋ ತವಕದಲ್ಲಿದ್ದರು॥59॥ ಶುಭವಾರ್ತೆ ಹೇಳಿದ ಚರರ ಮನ್ನಿಸಿ ಭೂಪ। ಉಡುಗೊರೆಯು ಆಭರಣ ತರಿಸಿಕೊಟ್ಟ। ಕಲಶ ಕನ್ನಡಿಯು ತೋರಣ ರಚಿಸಿ ಪುರದೊಳಗೆ। ತನಯನ ಕಾಣಲುತ್ಸಾಹದ ಲ್ಹೊರಟ॥60॥ ದೂರದಲಿ ತನಯನ ಕಾಣುತಲಿ ಸಂಭ್ರಮದಿ। ಏನು ಕಾರಣ ಹರಗೆ ತನ್ನ ಮೇಲೆ। ಕಾಲವಾದ ಮಗನ ಬದುಕಿಸಿ ಕರೆತಂದು ಯಾರು ಸರಿಯಿಲ್ಲ ಪುಣ್ಯಕೆ ಜಗದೊಳು॥61॥ ಶುಭಲಗ್ನದಲಿ ಮಗನು ಪುರವ ಹೊಕ್ಕನು ಎಂದು। ಪುರದ ಜನರೆಲ್ಲ ಸಂತೋಷದಿಂದ। ಅರಮನೆಗೆ ಬಂದು ತಾಯಿ ತಂದೆ ಚರಣಕ್ಕೆ ಪಳಿವಂಟರಾಗ ಸೊಸೆಮಗ ಸಹಿತಲಿ॥62॥ಪಳಿವಂಟ

ಸೊಸೆಮಗನ ಬಿಗಿದಪ್ಪಿ ತಕ್ಕೈಸಿ ಮಗಳೆ ನೀನ್ಯಾವ ವ್ರತವನು ಮಾಡಿದೆ। ಎನುತ ಕೇಳಿದರೆ ನಾನೇನರಿಯೆ ಪುರುಷನ। ಚರಣವೇ ಗತಿಯೆಂದು ಇರುತಿದ್ದೆನು।।63।। ಮಂಜುಳೆಯು ತಮ್ಮನ ಬಿಗಿದಪ್ಪಿ ತಕ್ಕೈಸಿ ತಂದಿತ್ತೆ ಹೋದ ಮಗನನ್ನು ಬದುಕಿಸಿ। ಇಂದು ನೀ ಧರೆಯೊಳಗೆ ಮಾಡಿದುಪಕಾರವನು ಎಂದಿಗಾದರು ನಿನ್ನ ಮರೆಯಬಹುದೇ।।64।। ಅಕ್ಕಯ್ಯ ನಿನ್ನ ಹೊಟ್ಟೆ ಪುಣ್ಯದಲಿ ನಿನ್ನ ಪುತ್ರ ಬದುಕಿದನು ಕೇಳಮ್ಮ ತಾಯಿ। ಅಲ್ಪದಾಯುಷ್ಯ ಹೋಗಿ ಚಿರಂಜೀವಿ ಯಾಯ್ತಿವನ। ಮುತ್ತೈದೆತನವುಂಟಾಯಿತು।।65।। ಸೃಷ್ಟಿಗೀಶ್ವರನರಸಿ ಗೌರಿಯನೆ ಪೂಜಿಸಿ। ಮುತ್ತೈದೆತನವನು ಪಡೆದಳವಳು। ಮುತ್ತೈದೆತನವನು ಪುತ್ರ ಸಂತಾನವನು ಕೊಟ್ಟು ರಕ್ಷಿಸುವ ಮಂಗಳಗೌರಿಗೆ।।66।।

ಸೊಂಡಿಲ ಗಣಪಗೆ ಶಾರದೆಗಭಿವಂದಿಸಿ — ರಾಗ : ಆನಂದಭೈರವಿ

ಸೊಂಡಿಲ ಗಣಪಗೆ ಶಾರದೆಗಭಿವಂದಿಸಿ। ಒಂದೇ ಭಾವದಿ ಕರಗಳ ಮುಗಿದು। ಮಂಗಳ ಗೌರೀಕಥೆಯನು ಪೇಳುವೆ ಸಂಜೀವನವಾಗಿ।। ಬಂಜೆತನವು ಪರಿಹಾರವಾಗಲೆಂದು। ಅಂದಾ ಮೃಡಸಹಿತ ಹರಗೌರಿಗೆರಗಲು ಭುಜಂಗನ ಕಂಠಕದಿ। ಬಾಲನ ಪಡೆದು ಗಂಗಾಯಾತ್ರೆಗೆ ತೆರಳಿದರು ಜೈ ಜೈ ಮಂಗಳ।।1।। ಬಂದಿಳಿದರು ಮಂಡೋಪುರಕಾಗಿ ಅಂದರಾಯನ ಮಗಳ ಧಾರೆ ಎರೆಯಲು। ತಂದ ಲಡ್ಡಿಗೆ ಪರಮಾನ್ನವ ಸವಿದು ಆನಂದದೊಳಿರುತಿರಲು। ಮಂದಗಮನೆ ತಾ ಮರೆತು ಮಲಗಿದಾಳಾಗ ಅಂದಲಾಕ್ಷಣ ಕಾಶಿಗೆ ಪೋಗಲು। ಗಂಗಾ ಯಾತ್ರೆಯ ಮಾಡಿ ಬಂದರು ಭುಜಂಗನ ಕಂಠಕದಿ।।2।। ಕಂಡು ಕರಸಿದಳಾರಾಯನ ಮಗಳು ಉಂಡಲಿಗೆಯಕೊಟ್ಟು ಅವನ ಕೈ ಪಿಡಿಯಲು ಅಂಗನೆ ಗುರುತುಗಳೇನಿಂತೆಂದರೆ ಕಲಶವ ತೋರಿದಳು। ಕರ್ಣೆಯರೆಲ್ಲರು ಕಲಶವ ತೆಗೆದು ನೋಡೆ ಚಿನ್ನದ ರುಳಿಯಾಗಿರಲಾ ಉರಗನು। ಮನ್ನಣೆ ಇಂದಲೆ ಮಗಳ ಧಾರೇ ಎರೆದು ಬಳುವಳಿಯ ನಿತ್ತರು।।3।। ಬಳುವಳಿಯ ತಕ್ಕೊಂಡು ಲಕ್ಷಣನು ಮಡದಿ ಸಹಿತ ಸ್ವರ್ಣಾವತಿಗೆ ಹೋಗಲು। ಪಡೆದ ತಾಯಿತಂದೆಯರಿಗೆರಗಲು ಹರಸಿದವರೊಂದ। ಕಡು ಹರುಷದಿ ವೃತ್ತಾಂತವನೆಲ್ಲ ಪೇಳೆ ಸಲಹಿದೆ ಮಂಗಳಗೌರಿ ಎಂದೆನುತ। ಪದುಮಾದ್ರಿಯು ತಮ್ಮತ್ತೆಗೆ ಪೇಳಲು ಪರಮ ಸಂತೋಷದಲಿ।।4।। ಜೈ ಜೈ ಮಂಗಳ।।

ಪರಮಭಕ್ತಿಯೊಳೀಗ ಗಣಪತಿಗೆ — ರಾಗ: ಕಾಂಬೋಧಿ

ಪರಮಭಕ್ತಿಯೊಳೀಗ ಗಣಪತಿಗೆ ವಂದಿಸಿ। ಹರನರಸಿ ಗೌರಿಯಾ ಪೂಜೆ ಮಾಳ್ಪೆ। ತರಳೆ ದ್ರೌಪದಿಗೆ ಹರಿಪೇಳ್ದ ವ್ರತವಿದೂ। ಹರಿಭಕ್ತಿ ಕೊಡಲೆಂದು ಬೇಡುತಿಹನು।।1।। ಜಯಮಂಗಳ ನಿತ್ಯ ಶುಭಮಂಗಳ।। ಅರೆ ಆಯುಷ್ಯದ ತರುಣನ ಯಾತ್ರೆಗೆ। ತೆರಳಿಸೀಮರುಗುತ್ತಿದ್ದರು ಮನದೊಳು। ದಾರಿಯಾ ಮಾರ್ಗದಿ ಎರವಿಗೆ ಧಾರೆಯಾ। ನೆರೆದರೆ ಹರುಷದಲಿದ್ದರು ಸತಿಪತಿಗಳು।।2।। ಇರಲರ್ಧರಾತ್ರಿಯೊಳ್ ಬರಲು ಘಟ ಸರ್ಪವು। ತರಳೆ ಕಂಡಳು ಬೆದರಿ ಗೌರಿಯ ಧ್ಯಾನಿಸಿ। ಸಿರದಿ ಅಕ್ಷತೆ ತಳಿದು ಬೇಡಿದಳು ದೇವಿಯಾ। ಉರಗ ಕಂಠಮಾಲೆಯಾಯ್ತು ಪೂರ್ಣಾಯುವಾಯ್ತು ಪತಿಗೆ।।2।। ಗಂಧಾಕ್ಷತೆ ಪುಷ್ಪ ಧೂಪದೀಪಗಳಿಂದ। ಮೃಡನರಸಿ ಗೌರಿದೇವಿಯ ಪೂಜಿಪೇ। ಎಂದೆಂದಿಗೂ ಸೌಮಾಂಗಲ್ಯವೀವ ಬ್ರಹ್ಮೇಂದ್ರ। ವಂದಿತ ಪಾದಾ ಪದ್ಮ ತೋರೆ।।4।। ಮಂಗಳಾರತಿ ಬೆಳಗಿ ಬಾಗಿ ನಮಿಸುತಲಿರ್ಪೆನು। ಎನ್ನವಗುಣಗಳನು ಮನ್ನಿಸು ತಾಯೇ। ವಾಗ್ದೇವಿ ಗಿರಿಜಾತೆ ಸಾಗರಾತ್ಮಜೆ ನಿನ್ನ। ಯೋಗಾನಂದವನಿತ್ತೆನ್ನ ತನುವ ಮರೆಸಿ।।5।।

ಜಯ ಜಯ ಮಂಗಳಗೌರಿ — ರಾಗ: ದುರ್ಗ

ಜಯ ಜಯ ಮಂಗಳಗೌರಿ ಕುಮಾರಿ। ಜಯಜಯ ಮಂಗಳಗೌರಿ।।ಪ।। ಅಭಯ ಹಸ್ತ ಸಂಶೋಭಿತೆ ದಾತೇ। ಶುಭಕರವದನಾ ಮಂಗಳಗೌರೀ। ಜಯ ಜಯ ಮಂಗಳಗೌರಿ ಕುಮಾರೀ।।1।। ಪರ್ವತೇಶ ಸಂಭೂತೇ ಪಾರ್ವತೀ। ಶರ್ವಾಧಾರ್ಧಾಂಗಿನಿ ಮಂಗಳಗೌರೀ। ಜಯ ಜಯ ಮಂಗಳಗೌರಿ ಕುಮಾರಿ।।2।। ಮಂಗಳ ಕರ ಮಾಂಗಲ್ಯ ವರ್ಧಿನಿ। ಮಂಗಳಗೌರೀ ಪ್ರತಿಭಾಂಕುರೇಶ। ಜಯಜಯ ಮಂಗಳ ಗೌರೀ।।3।।

ಮಂಗಳಾರುತಿ ತಂದು ಬೆಳಗಿರೆ (ಆರತಿ) ರಾಗ : ಸುರಟಿ

ಮಂಗಳಾರುತಿ ತಂದು ಬೆಳಗಿರೆ ಅಂಗನೆ ಶ್ರೀ ಗೌರಿಗೆ।।ಪ।। ಅಂಗನೆ ಶ್ರೀ ಗೌರಿಗೆ ಮುದ್ದು ಶಿವನಾ ಮಡದಿಗೆ।।ಅ।। ಶುದ್ಧ ಸ್ನಾನವ ಮಾಡಿ ಗೌರಿಯ ವಜ್ರ ಪೀಠದೊಳಿರಿಸಿರೆ। ತಿದ್ದಿ ತಿಲಕವ ತೀಡೀದಂಥ ಮುದ್ದು ಗೌರಿದೇವಿಗೆ।।1।। ಅರಿಶಿಣ ಕುಂಕುಮ ಗಂಧ ಬುಕ್ಕಿಟ್ಟು। ಪಾರಿಜಾತ ಸಂಪಿಗೆ। ಭಕ್ತಿಯಿಂದಲಿ ಪೂಜಿಸಿದರೆ। ಬೇಡಿದ್ವರಗಳ ಕೊಡುವಳು।।2।। ಶೇಷ ಗಿರಿಯಲಿ ವಾಸವಾಗಿಹ ನಮ್ಮ ಹರಿಯ ಪ್ರಿಯ ಸೋದರಿಗೆ। ನೀಲಕಂಠನ ಕೊರಳಿಗೆ ಮಾಲೆ ಹಾಕಿದ ಗೌರಿಗೆ।।3।।

ಮುತ್ತಿನಾರತಿಯ ತಂದೆತ್ತಿರಮ್ಮ (ಆರತಿ) ರಾಗ: ಪುನ್ನಾಗವರಾಳಿ

ಮುತ್ತಿನಾರತಿಯ ತಂದೆತ್ತಿರಮ್ಮ ನಮ್ಮ। ಸತ್ಯಮೂರುತಿ ಶ್ರೀ ಮಂಗಳ ಗೌರಿಗೆ।।ಪ।। ಹಿಮಗಿರಿ ರಾಜನ ನಿಜಸುತೆಗೆ। ಅತಿ ವಿಮಲಚರಿತೆಗೆ ವಿಶ್ವಮಾತೆಗೇ ಕಮಲಾಕ್ಷಿಗೆ ಕರುಣಾಕರಿಗೇ। ಅಮರ ಜನನಿ ಅಮಿತ ಶ್ರೀ ವೈಭವ ಉಮೆಗೆ ಭವಾನಿಗೆ ಶ್ರೀ ಪಾರ್ವತಿಗೆ।।1।। ಹೊಸ ಮುತ್ತಿನೋಲೆ ರಾಜಿಸುವಳಿಗೆ। ನಮ್ಮ ಶಶಿಧರನರಸಿ ಶಾಂತ ಮೂರುತಿಗೇ। ಎಸೆವೊ ದಿವ್ಯಾಂಬರ ಅಲಂಕೃತೆಗೇ। ದೆಸೆದೆಸೆಯೊಳು ರಾರಾಜಿಸುವ ಲಾವಣ್ಯದ। ಹೊಸಮುತ್ತಿನಾರುತಿ ಶ್ರೀ ಪಾರ್ವತಿಗೆ।।2।। ಕುಂದಣದಾನೆ ಕೋಕಿಲಗಾನೆಗೇ। ದುಂಬಿಗುರುಳು ಪೋಲ್ವ ಮಾನಿನಿಗೇ। ಶೃಂಗಪುರದಿ ನೆಲೆಸಿರುವೊಳಿಗೆ। ಗಂಗಾಧರನರ್ಧಾಂಗದೊಳ್ ರಾಜಿಪ। ಮಂಗಳ ಮೂರುತಿ ಶ್ರೀಪಾರ್ವತಿಗೇ ।।3।।

ಚಂದ್ರಮನಪೋಲ್ವ ಮುಖಕೆ (ಮಂಗಳ) ರಾಗ: ಆನಂದಭೈರವಿ

ಚಂದ್ರಮನಪೋಲ್ವ ಮುಖಕೆ ಮಂಗಳ। ಸಾಧು ಗಂಧ ಕಸ್ತೂರಿ ತಿಲಕಕೆ ಮಂಗಳ। ಮುಂಗುರುಳಿನ ಭಾವಕೆ ಮಂಗಳ ಹೆರಳು ಬಂಗಾರ ಮುಡಿದ ಪುಷ್ಪಕೆ ಮಂಗಳ।।1।। ಮಂಗಳ ಗೌರಿ ದೇವಿಗೆ ಮಂಗಳ ನಿತ್ಯ ಶುಭ ಮಂಗಳ। ಗೆಜ್ಜೆ ಪಾದದ ಹೆಜ್ಜೆಗೆ ಮಂಗಳ। ನಿಮ್ಮ। ಪ್ರಜ್ವಲಿಸುವ ರೂಪಿಗೆ ಮಂಗಳ ತಿದ್ದಿಟ್ಟ ಕಾಲುಂಗ್ರಕೆ ಮಂಗಳ। ನಮ್ಮ ಮುದ್ದು ಗೌರಮ್ಮನಿಗೆ ಜಯಮಂಗಳಂ ನಿತ್ಯ ಶುಭಮಂಗಳಂ।। ನಯಉಟ್ಟ ಜರತಾರಿ ಸೀರೆಗೆ ಮಂಗಳ। ಅಳವಡಿಸಿದ ವಡ್ಯಾಣೆಗೆ ಮಂಗಳ ಪಟ್ಟೆ ಕುಪ್ಪಸದ ತೋಳಿಗೆ ಮಂಗಳ। ವಂಕಿನಿಟ್ಟ ಬಾಹುಬಂಧಿಗೆ ಮಂಗಳ। ಮಂಗಳ ಗೌರಿ ದೇವಿಗೆ ಮಂಗಳ ನಿತ್ಯ ಶುಭಮಂಗಳ।।

❖ ❖ ❖

27. ನಾಗಚೌತಿ/ ಪಂಚಮಿ/ಸುಬ್ರಹ್ಮಣ್ಯ

ಏಳು ಸುಬ್ರಹ್ಮಣ್ಯ (ಉದಯರಾಗ) ರಾಗ: ಭೌಳಿ

ಏಳು ಸುಬ್ರಹ್ಮಣ್ಯ ಏಳು ಬೆಳಗಾಯಿತು। ಏಳು ಸುರಸೇನಾನಿ ಬೆಳಗಾಯಿತು ಏಳು।।ಪ।। ಏಳು ಸುರ ಸೇನಾನಿ ಬೆಳಗಾಯಿತು ಏಳು ನಿನ್ನ। ಪೂಜೆಗೆ ಹನಿಯ ಕುಂಕುಮ ಹರಿವಾಣವಿದ್ದು। ಮೂಡಣದಲ್ಲಿ ಬಂದಾಯಿತು ಬಂದಾಯಿತು।।1।। ಮಹಿಮೆ ಹಾಡು ಹಾಡುತಿಹವು ಅಡಗಿದ ವನವು। ದುಂಬಿ ಮುಟ್ಟುವ ಮುನ್ನ ನಿನ್ನ ಪಾದಗಳಿಗೆ। ಸೇರಲು ಕಾತರಿಸುವುವು। ಏಳು ಸುಬ್ರಹ್ಮಣ್ಯ ಏಳು ಬೆಳಗಾಯಿತು।।2।। ಗೋರತಹ ಬಹು ಜಲಧಿ ಪಾನಗಳ ಬಳಿಗೆ। ಪ್ರಭುವೇ ಕಾರುಣ್ಯಮಯ ನಿನ್ನ ಪಾದಗಳ ಬಳಿಗೆ। ನೂರು ಜನ್ಮದ ಪುಣ್ಯ ಸಂಚಯಿಸಿ ಬಂದಿಹೆವು। ಆರತಿ ತಂದಿರುವೆವು ನಿದ್ದೆಯಿಂದಾ ಏಳು।।3।। ಆದಿಶೇಷ ನಿನ್ನ ಪಾದಗಳ ಬಳಿಬಂದ। ಕಾದಿರುವ ಭಕ್ತರಿಗೆ ದರ್ಶನವನು ನೀಡು। ನಿನ್ನ ಮಹಿಮೆಯ ನಂಬಿ ಮನವಿ ತರುವ ನರ ಜನರಿಗೆ। ಬೆಳಗಾಯಿತು ಏಳು ಸುಬ್ರಹ್ಮಣ್ಯ ಏಳು।।4।। ವಾಂಛಿತವ ನೀಡು ವಾಂಛಿತವ ನೀಡು। ಏಳು ಸುಬ್ರಹ್ಮಣ್ಯ ಏಳು ಬೆಳಗಾಯಿತು।।

ಸಹಸ್ರಶೀರ್ಷಂ ಜಗದೇಕ ಕುಂಡಲಂ

ಸಹಸ್ರಶೀರ್ಷಂ ಜಗದೇಕ ಕುಂಡಲಂ ಪೀತಾಂಬರಂ ಧೂಮ್ರ ಸಹಸ್ರಲೋಚನಂ। ಉದಾರವೀರ್ಯಂ ವಿಷದಂಷ್ಟ್ರಕಾನನಂ ನಮಾಮ್ಯನಂತಂ ಜಗದೇಕನಾಥಂ॥

ಹುತ್ತದಾ ಪೂಜೆಗೆಂದು ರಾಗ:ಭೌಳಿ

ಹುತ್ತದಾ ಪೂಜೆಗೆಂದು ಹೊತ್ತು ತಂದಿಹೆ ನಾನು। ಹೆತ್ತವರ ನೀಕಾಯೋ ನಾಗೇಂದ್ರನೆ। ಅತ್ತಿತ್ತ ಹೊರಳುತ್ತಾ ಸುತ್ತಿ ಸುತ್ತಿ ಮಲಗಿರುವೆ। ಹೊತ್ತು ಏರುತಲಿದೆ ಸುಪ್ರಭಾತವು ನಿನಗೆ। ಏಳಯ್ಯ ನಾಗೇಂದ್ರನೆ॥1॥ ಹುತ್ತದಲಿ ಮೃತ್ತಿಕೆ ಮೆತ್ತನೆ ಹಾಸಿಗೆ ಮೇಲೆ। ಎಚ್ಚರವಿಲ್ಲದೆ ಹಾಯಾಗಿ ಮಲಗಿರುವೆ। ಭಕ್ತರು ದರುಶನಕೆ ಸಾಗುತ್ತಲಿರುವರು। ಸುಪ್ರಭಾತವ ನಿನಗೆ ಹಾಡುತ್ತಲಿರುವರು। ಏಳಯ್ಯ ನಾಗೇಂದ್ರನೆ॥2॥ ಹಾಲು, ತುಪ್ಪವು ನಿನಗೆ ಎರೆಯಲು ತಂದಿಹರು। ಕಾಯೊಡೆದು ಕರ್ಪೂರ ಹಚ್ಚಲು ತಂದಿಹರು। ಬ್ರಹ್ಮರಥ ಎಳೆಯಲು ಸರ್ವರೂ ಕಾದಿಹರು। ಸುಪ್ರಭಾತವ ನಿನಗೆ ಹಾಡುತ್ತಲಿರುವರು। ಏಳಯ್ಯ ನಾಗೇಂದ್ರನೆ॥3॥ ಪುಂಗಿಯ ಊದಿದರೆ ನಿನಗೆ ಬಲು ಆನಂದ। ಹೆಡೆಯೆತ್ತಿ ನರ್ತಿಸುವ ನಟರಾಜನೆ ನೀನು। ದಿಟ್ಟತನದಲಿ ಏಳೋ ಜಟ್ಟಿಗನೆ ನೀನು। ಸುಪ್ರಭಾತವ ನಿನಗೆ ಹಾಡುತ್ತಲಿರುವರು। ಏಳಯ್ಯ ನಾಗೇಂದ್ರನೆ॥4॥ ಹಣೆಯಲ್ಲಿ ಮಾಣಿಕ್ಯ ಫಳಫಳ ಹೊಳೆಯಲು। ಭಕ್ತರು ಪೂಜಿಸಿ ಘಂಟೆಯ ಬಾರಿಸುತ। ಬೇಡುತಾ ನಿನ್ನನ್ನು ವಂದಿಸುತಿರುವರು। ಸುಪ್ರಭಾತವ ನಿನಗೆ ಹಾಡುತ್ತಲಿರುವರು। ಏಳಯ್ಯ ನಾಗೇಂದ್ರನೆ॥5॥ ನಾಗರಾಜನೆ ಏಳು ನಾಗಭೂಷಣ ಏಳು। ನಾಗನಂದನೆ ಏಳು ನಾಗೇಂದ್ರನೆ ಏಳು। ಸರ್ವರು ದೀಪಗಳ್ ಹಚ್ಚಿ ಬೆಳಗುವರು ಏಳು। ಸರ್ವರಿಗೂ ಅಭಯವ ನೀ ನೀಡಲು ಏಳು। ಏಳಯ್ಯ ಕುಕ್ಕೆಯ ಸ್ವಾಮಿಯೇ ಏಳಯ್ಯ ಏಳಯ್ಯ॥6॥

ಅನಂತ ವಾಸುಕಿಂ ಶೇಷಂ(ನವನಾಗನಾಮ ಸ್ತೋತ್ರ)

ಅನಂತ ವಾಸುಕಿಂ ಶೇಷಂ ಪದ್ಮನಾಭಂಚ ಕಂದಕಮ್। ಶಂಖಪಾಲಂ ಧಾರ್ತರಾಷ್ಟ್ರಂ ತಕ್ಷಕಂ ಕಾಲಿಯಂ ಕಥಾ। ಏತಾನಿ ನವನಾಮಾನಿ ನಾಗಾನಾಂ ಚ ಮಹಾತ್ಮನಾಮ್। ಸಾಯಂಕಾಲೇ ಪಠೇನಿತ್ಯಂ ಪ್ರಾತಃಕಾಲೇ ವಿಶೇಷತಃ। ತಸ್ಮೈ ವಿಷಭಯ ನಾಸ್ತಿ ಸರ್ವತ್ರ ವಿಜಯೀ ಭವೇತ್॥ ಇತಿ ಶ್ರೀ ನವನಾಗ ನಾಮ ಸ್ತೋತ್ರಮ್॥

ಶೃಣುಪುತ್ರ ಪ್ರವಕ್ಷ್ಯಾಮಿ (ಸುಬ್ರಹ್ಮಣ್ಯ ದ್ವಾದಶನಾಮ ಸ್ತೋತ್ರ)

ಶೃಣುಪುತ್ರ ಪ್ರವಕ್ಷ್ಯಾಮಿ ನರಾಣಾಮಿಷ್ಟದಂ ಪರಮ್। ಸುಬ್ರಹ್ಮಣ್ಯ ದ್ವಾದಶನಾಮಸ್ತೋತ್ರಂ ಶುಭಪ್ರದಮ್॥1॥ ಪ್ರಥಮಂ ಸ್ಕಂದ ಇತ್ಯುಕ್ತಃ ಶಕ್ತಿಧಾರೀ ದ್ವಿತೀಯಕಮ್। ಹೇಮಚೂಡ ಸ್ಮೃತೀಯಂ ತು ಭದ್ರಸೇನಶ್ಚತುರ್ಥಕಮ್॥2॥ ಭವಾನೀಜಃ ಪಂಚಮಂ ತು ಭವಪುತ್ರಶ್ಚ ಷಷ್ಠಕಮ್। ಅನ್ನದಾನಾದಿಶೀಲಶ್ಚ ಸಪ್ತಮಂ ಕುಕ್ಕಟಧ್ವಜಃ॥3॥ ಅಷ್ಟಮಂ ನವಮಂ ಚಾಥ ಮಯೂರವರವಾಹನಃ। ದಶಮಂ ಚ ಗುಹಃ ಪ್ರೋಕ್ತೋ ದೇವಸೇನಾಪತಿಸ್ತಥಾ॥4॥ ಏಕಾದಶಂದ್ವಾದಶಂ ಚ ಮಹಾಸೇನಃ ಪ್ರಕೀರ್ತಿತಃ। ದ್ವಾದಶೈತಾನಿ ನಾಮಾನಿ ಷಣ್ಮುಖಸ್ಯ ಮಹಾತ್ಮನಃ॥5॥ ತ್ರಿಕಾಲಂ ಯಃ ಪಠೇನಿತ್ಯಂ ಸರ್ವಾಭೀಷ್ಟ ಮವಾಪ್ನುಯಾತ್। ಸರ್ವ ಬಾಧಾಪ್ರಶಮನಮಂಸರ್ವಸಿದ್ಧಕರಂ ಶಿವಮ್॥6॥ ಗ್ರಹಪೀಡಾಹರಂ ವ್ಯಾಧಿದುಃಖ ದೋಷ ನಿವಾರಕಮ್। ಗೋಪ್ಯಾದ್ಗೋಪ್ಯತರಂ ಸ್ತೋತ್ರಂ ತ್ವಯಿ ಸ್ನೇಹಾತ್ ಪ್ರಭಾಷಿತಮ್॥7॥ ಶ್ರೀ ಬ್ರಹ್ಮಾಂಡಪುರಾಣೇ ಸುಬ್ರಹ್ಮಣ್ಯ ದ್ವಾದಶನಾಮಸ್ತೋತ್ರ॥

ಷಡ್ವಕ್ತ್ರಂ ಶಿಖಿವಾಹನಂ (ಸುಬ್ರಹ್ಮಣ್ಯ ಷೋಡಶನಾಮ ಸ್ತೋತ್ರ)

ಷಡ್ವಕ್ತ್ರಂ ಶಿಖಿವಾಹನಂ ತ್ರಿನಯನಂ ಚಿತ್ರಾಂಬರಾಲಂಕೃತಂ। ಶಕ್ತಿ ವಜ್ರಮಥೋ ತ್ರಿಶೂಲಮಭಯಂ ಖೇಟಂ ಧನುಃ ಸ್ವಸ್ತಿಕಂ॥ ಪಾಶಂ ಕುಕ್ಕುಟಮಂಕುಶಂ ಚ ವರದಂ ದೋರ್ಭಿರ್ದಧಾನಂ ಸದಾ। ಧ್ಯಾಯೇದೀಪ್ಸಿತ ಸದ್ಧಿದಂ ಶಿವಸುತಂ

ಸ್ಕಂದಂ ಸುರಾರಾಧಿತಂ॥ ಸುಬ್ರಹ್ಮಣ್ಯಂ ಪ್ರಣಮಾಮ್ಯಹಂ ಸರ್ವಜ್ಞ ಸರ್ವದಾ ಸದಾ। ಅಭೀಷ್ಟಫಲ ಸಿದ್ಧ್ಯರ್ಥಂ ಪ್ರವಕ್ಷ್ಯೇ ನಾಮ ಷೋಡಶಂ॥

ಕಂಗಳಿದ್ಯಾತಕೋ ಶ್ರೀ ಸುಬ್ರಹ್ಮಣ್ಯನ — ರಾಗ:ತೋಡಿ

ಕಂಗಳಿದ್ಯಾತಕೋ ಶ್ರೀ ಸುಬ್ರಹ್ಮಣ್ಯನ ನೋಡದಾ। ಕಂಗಳೊಳಗೆ ಮಂಗಳ ಮೂರುತಿ ಬಾಲಸುಬ್ರಹ್ಮಣ್ಯನ ನೋಡದ॥ಪ॥ ಊರಿನಿಂದ ದಣಿದು ಬಂದೆ। ತೇರನಾನು ನೋಡಲಿಲ್ಲ। ಮಡೆಯ ನಾನು ಹೊರಳಲಿಲ್ಲ। ಮೃತ್ಯು ಎನಗೆ ಒದಗಲಿಲ್ಲ॥1॥ ಘಾಟಿ ಇಳಿದುದು ವ್ಯರ್ಥವಾಯ್ತು। ಗರುಡನನ್ನು ನೋಡಲಿಲ್ಲ। ಕುಮಾರ ಧಾರೆಯ ಮಡಿಯು ಇಲ್ಲ। ಅದಕೆ ಮರುಗಿ ಫಲವಿನ್ನಿಲ್ಲ॥2॥ ಮಾಡಿದಂಥ ಪಾಪವೆಲ್ಲ। ನೋಡಿ ನಾನು ಕಳೆಯಲಿಲ್ಲ। ಆದಿ ಸುಬ್ರಹ್ಮಣ್ಯನ ನೋಡದೇ। ಬಾಳು ನಗೆಗೀಡಾಯಿತಲ್ಲ॥3॥ ಪ್ರಾಣಪತಿಯ ಮಾತಮೀರಿ। ಪ್ರಯಾಣ ಮಾಡಿ ಹೊರಟು ಬಂದೆ। ಪತಿಯ ಆಜ್ಞೆಗೆ ಮೀರಿದೆನೋ। ಫಲಿಸದೋ ಇದು ಇನ್ನೇನೂ॥4॥

ಸುಬ್ರಹ್ಮಣ್ಯಕೆ ಹೋಗುವ ಬನ್ನಿ — ರಾಗ:ಮಧ್ಯಮಾವತಿ-ತ್ರಿತಾಳ

ಸುಬ್ರಹ್ಮಣ್ಯಕೆ ಹೋಗುವ ಬನ್ನಿ। ಸುಬ್ಬಣ್ಣನ ನಾವ್ ಕಾಣುವ ಬನ್ನಿ। ಶುದ್ಧ ಮನವ ಹೊತ್ತುತನ್ನಿ। ಹಬ್ಬದೂಟವ ಮಾಡ ಬನ್ನಿ॥ಪ॥ ಸುಬ್ಬ ಸುಬ್ಬ ಗೋವಿಂದ ಸುಬ್ರಹ್ಮಣ್ಯ ಗೋವಿಂದ॥ಅ.ಪ॥ ಪರಶುರಾಮ ತಪಗೈಯ್ದಿಹ ಕ್ಷೇತ್ರ। ಋಷ್ಯ ಶೃಂಗರು ನೆಲೆಸಿದ ಕ್ಷೇತ್ರ। ಧರಣೀಪತಿ ಶ್ರೀ ಧರ್ಮರಾಜನ ಘೋರಶಾಪ ವಿಮೋಚನ ಕ್ಷೇತ್ರ॥1॥ ಕುಷ್ಟರೋಗದಿ ನರಳಿದ ಬ್ರಾಹ್ಮಣ। ಕೆಟ್ಟ ಶಾಪವ ಹೊತ್ತ ತರುಣ। ಉಚ್ಛಿಷ್ಟದಲಿ ಹೊರಳಿದ ಕಾರಣ। ಶ್ರೇಷ್ಠರಾದರು ಕೇಳೋ ಜಾಣ॥2॥ ಶೈಲಜಾಪತಿ ಶ್ರೀಕಂಠನಿಗೆ ಬಾಲನಾದ ಈ ಶರವಣಭವಗೆ। ಇಳೆಯೊಳು ನಮ್ಮ ಬಾಳು ಕೊನೆಗೆ। ಶೈಲಜಾಸುತನೊಲಿಸುವ ಕಡೆಗೆ॥3॥

ಕಂದ ಬಂದನೇ ಶ್ರೀ ಸ್ಕಂದ ಬಂದನೇ — ರಾಗ: ಹಿಂದೋಳ

ಕಂದ ಬಂದನೇ ಶ್ರೀ ಸ್ಕಂದ ಬಂದನೇ॥ಪ॥ ಅಂದವಾದ ನವಿಲನೇರಿ ಚೆಂದ ಮುಗುಳು ನಗೆಯ ಬೀರಿ। ಸುಂದರ ವದನದ ಬಾಲ ಚಂದಿರನಂತೆ। ಮುಡಿದು ನವಿಲುಗರಿಯ ಪಿಡಿದು ಶಕ್ತ್ಯಾಯುಧವ। ನಡುವಲ್ಲೆಡ ಕೈಯನಿಟ್ಟು ಮೆಲ್ಲಡಿಯನಿಕ್ಕುತ॥1॥ ಹಾರಕಿರೀಟ ಕವಚ ಕುಂಡಲದಿ। ಕೇಯೂರ ಮಣಿ ಕಂಕಣದಿ। ಕಾಲಂದುಗೆ ಘಲ್ ಘಲ್ ರವದಿ। ಅಸುರ ತಾರಕನನ್ನು ಹಿಸುಕಿ ಕೊಲ್ಲುತ। ನಗುತ ಶಿಶುರೂಪದಿ ಬಂದನೇ। ವಸುಧೆಯೊಳಗೆ ನಿಂದನೇ॥2॥

ನಲಿದಾಡು ನಲಿದಾಡು ನಾಗ — ರಾಗ: ಸುನಾದವಿನೋದಿನಿ-ಆದಿತಾಳ

ನಲಿದಾಡು ನಲಿದಾಡು ನಾಗ। ಶಿವ ಹರನ ಜಟೆಯೊಳು ನೀ। ಹರುಷದಲಿ ಹೊಳೆಯುತಲಿ॥ಪ॥ ಕೈಲಾಸವಾಸನ ಕರದ ಕಂಕಣವಾಗು। ನೀ ನೀಲಕಂಠನ ಮಾಲಾಭರಣವಾಗು। ಅರುಣಾ ಚಲೇಶ್ವರನ ಅಂಗಭೂಷಣವಾಗು। ಅದ್ಭುತದಿಂದಲಿ ಆನಂದದೊಳಾಡು॥ನಲಿ॥ ಗಾಮ ಗಾಮ ಗಸ ನೀಸಾ। ದಾನಿ ದಾನಿ ದಮ ಗಾಮ। ನೀಸ ನೀಸ ನಿದ ದಾನೀ। ಗಾಮ ಗಾಮ ಗಸ ನೀಸ। ನಿಸ ಗಸ ಗಸ ನಿದ। ದನಿ ಸನಿ ಸನಿ ದಮ। ಮದನಿದ ನಿದಮಗ। ಸನಿದಮ ಗಮಗಸ॥1॥ ಅರುಣಾಚಲೇಶ್ವರನ ಒಲಿಸಲು ನೀನಾಡು। ಶಿರದಲ್ಲಿ ನವರತ್ನ ಮಣಿಹೊಳೆಯೆ ನೀನಾಡು। ಶಾರದಾದಾಸಿ ತಾ ಭಜಿಸೆ ನೀನಾಡು। ಆಡಾಡು ಆಡಾಡು ಆಡಾಡು ಆಡಾಡು। ಆಡಾಡು ಆಡಾಡು ಹೆಡೆಬಿಚ್ಚಿ ನೀನಾಡು॥2॥ ಗಾಮ ದಾನಿ ದಮ ಗಾಮಗಸಾ। ನೀಸ ಗಾಮ ಗಸ ನಿಸಗಸಗಾ॥ ಗಗಮಮ ದದಮಮ। ದದನಿನಿಸಾ। ನಿಸಗಸ ಗಮಗಸ ಸಗಸನಿ ಸಾ॥ ಸಗಾಸ ನಿಸಾನಿ ದನೀದ ಮದಾಮ। ಗಮಾಗ ಸಾ; ಸನಿದಮ ಗಮಗಸ॥3॥

ಹುತ್ತದಿಂದ ಎದ್ದು ಬಂದು

ಹುತ್ತದಿಂದ ಎದ್ದು ಬಂದು ಭಕ್ತರನ್ನು ಕಾಯುವಂತೆ ನಾಗರೂಪ ಧರಿಸಿ ಬಂದ ಸುಬ್ರಹ್ಮಣ್ಯ। ಶೂರನೀತಾ ಸುರಧೀರನೀತ। ಶೂರನೀತ ಸುರಧೀರನೀತ ಸ್ವಾಮಿ ಸ್ಕಂದಸ್ವಾಮಿ ಗತಿ ನೀನೆ ಎಂದೆಸ್ವಾಮಿ। ನೀನೆ ಎಂದು ಸುಬ್ರಹ್ಮಣ್ಯ, ಸುಬ್ರಹ್ಮಣ್ಯ, ಸುಬ್ರಹ್ಮಣ್ಯ ಕುಕ್ಕೆ ಸುಬ್ರಹ್ಮಣ್ಯ॥1॥ ಪಾರ್ವತಿಯ ಮುದ್ದು ಕಂದ। ತಾರಕನ ಕೊಂದ ಧೀರ। ಕುಕ್ಕೆ ಕ್ಷೇತ್ರದಲ್ಲಿ ನಿಂತ ಕಾರ್ತಿಕೇಯ। ಕುಕ್ಕೆ ಸುಬ್ರಹ್ಮಣ್ಯ॥ ಕೈಲಾಸದಿಂದ ಇಳಿದು ಬಂದ। ಭೂಲೋಕವ ಸುತ್ತಿಬಂದು ಕುಕ್ಕೆ ಕ್ಷೇತ್ರದಲ್ಲಿ ನಿಂತ ಸ್ಕಂದಸ್ವಾಮಿ। ನೀನು ಗೌರಿತನಯ। ರೋಗರುಜಿನ ದೋಷಗಳಿಗೆ ಮುಕ್ತಿಯನ್ನು ನೀಡುವಂತೆ ದೇವ ನೀನು। ಸುಬ್ರಹ್ಮಣ್ಯ ಹರಸಯ್ಯ ದೇವ ಹರಸಯ್ಯ। ಧಾರಾ ತೀರ್ಥದಲ್ಲಿ ಮಿಂದು। ಉರುಳು ಸೇವೆಯನ್ನು ಮಾಡಿ ನಿನ್ನ ಗುಡಿಯ ಮುಂದೆ ನಾವು ನಿಂತೆವಯ್ಯ ನೀನು ಹರಸು ದೇವ। ಸುಬ್ರಹ್ಮಣ್ಯ ಸುಬ್ರಹ್ಮಣ್ಯ। ಸುಬ್ರಹ್ಮಣ್ಯ॥2॥ ತಾರಕಾನ ಕೊಲ್ಲಲ್ಲೆಂದು। ಕೈಲಾಸದಿ ಇಳಿದು ಬಂದು। ಕುಕ್ಕೆ ಕ್ಷೇತ್ರದಲ್ಲಿ ನಿಂತ ಕಾರ್ತಿಕೇಯ ನೀನು ಗಾಂಗೇಯ। ದೂರ ದೂರಿನಿಂದ ಬಂದ। ಭಕ್ತರೆಲ್ಲ ನಿನ್ನ ನೋಡಿ। ಸುತ್ತಿ ಸುತ್ತಿ ನಿನ್ನ ನಾಮ ಜಪಿಸಿಹರು। ಮಂತ್ರ ಪಠಿಸುತಿಹರು॥ ಲಕ್ಷ ಲಕ್ಷ ದೀಪ ಹಚ್ಚಿ। ನಿನ್ನ ಸೇವೆ ಮಾಡಲೆಂದು ಗುಡಿಯ ಮುಂದೆ ನಿಂತಿಹರು ಸ್ಕಂದಸ್ವಾಮಿ। ಕುಕ್ಕೆ ಸುಬ್ರಹ್ಮಣ್ಯ। ಕಷ್ಟನಷ್ಟ ದೋಷಕಳೆದು। ಮುಕ್ತಿಯನ್ನು ಬೇಡಲೆಂದು। ನಿನ್ನ ಮುಂದೆ ನಿಂತಿಹರು। ಎದ್ದು ಬಾರೋ। ಸುಬ್ರಹ್ಮಣ್ಯ ಸ್ವಾಮಿ। ಸುಬ್ರಹ್ಮಣ್ಯ ಸುಬ್ರಹ್ಮಣ್ಯ ಕುಕ್ಕೆ ಸುಬ್ರಹ್ಮಣ್ಯ॥3॥ ಪ್ರಾರ್ಥನೆಯ ಮಾಡುತಲಿ ಹರಕೆಯನ್ನು ಹೊತ್ತು ಕೊಂಡು ಯಾತ್ರೆ ಮಾಡಿ ನಿನ್ನ ಬಳಿಗೆ ಬಂದೆವಯ್ಯಾ। ಸ್ವಾಮಿ ಸುಬ್ರಹ್ಮಣ್ಯ। ಪಾದ ತೀರ್ಥದಲ್ಲಿ ಮಿಂದು ಮಡಿಯ ವಸ್ತ್ರವನ್ನು ಉಟ್ಟು। ಉರುಳು ಸೇವೆ ಗೈದು ಬಳಿಗೆ ಬಂದೆವಯ್ಯ। ನಾವು ಬಂದೇವಯ್ಯಾ। ನಾಗದೋಷವನ್ನು ಕಳೆದು। ಮುಕ್ತಿಯನ್ನು ಪಡೆಯಲೆಂದು ನಿನ್ನ ಬಳಿಗೆ ಬಂದೆವಯ್ಯ ನಾಗರಾಜ ಕುಕ್ಕೆ ಸುಬ್ರಹ್ಮಣ್ಯ। ಕಾರ್ತಿಕೇಯ ಸ್ಕಂದಸ್ವಾಮಿ। ಅನಂತಾದಿ ನಾಮಗಳ ಭಕ್ತರಿಂದ ಪೂಜೆ ಪಡೆವ ಸುಬ್ರಹ್ಮಣ್ಯ ಕುಕ್ಕೆ ಸುಬ್ರಹ್ಮಣ್ಯ ಸುಬ್ರಹ್ಮಣ್ಯ ಸುಬ್ರಹ್ಮಣ್ಯ ಕುಕ್ಕೆ ಸುಬ್ರಹ್ಮಣ್ಯ ಹುತ್ತದಿಂದ ಎದ್ದು ಬಂದು ಭಕ್ತರನ್ನು ಕಾಯುವಂತೆ ನಾಗರೂಪಧರಿಸಿ ಬಂದ ಸುಬ್ರಹ್ಮಣ್ಯ॥

ಶಕ್ತಿಹಸ್ತಂ ವಿರೂಪಾಕ್ಷಂ

ಶಕ್ತಿಹಸ್ತಂ ವಿರೂಪಾಕ್ಷಂ ಶಿಖಿವಾಹಂ ಷಡಾನನಂ। ದಾರುಣಂ ರಿಪುರೋಗಘ್ನಂ ಭಾವಯೇ ಕುಕ್ಕಟಧ್ವಜಂ॥

ಸುಬ್ರಹ್ಮಣ್ಯನೆ ಸುಂದರ ರೂಪನೆ

ಸುಬ್ರಹ್ಮಣ್ಯನೆ ಸುಂದರ ರೂಪನೆ। ಸುರಸೇನಾಪತಿ ಸುಕುಮಾರ॥ಪ॥ ಅನಲ ಸಂಭವ ಆಶ್ರಿತ ಪಾಲಕ। ಅಮಿತ ಪರಾಕ್ರಮ ಅಗಣಿತ ಮಹಿಮ॥ ಬಾಲ ಸೂರ್ಯನೆ ಬ್ರಹ್ಮಚಾರಿ ಮಯೂರ ವಾಹನ ಮನ್ಮಥನೆ॥1॥ ಷಣ್ಮುಖದೇವ ಶರವಣ ಭವನೆ। ಶಕ್ತ್ಯಾಯುಧಧರ ಶಂಭುಕುಮಾರ। ಕಾರ್ತೀಕೇಯನೆ ಕುಕ್ಕಟಧ್ವಜನೆ। ತಾರಕ ಭಂಜನ ಸ್ಕಂದನೇ॥2॥ ಉರಗ ರೂಪಧರ ಉಮಾತನಯನೆ। ಗಜಮುಖ ಸೋದರ ಗಾನವಿಲೋಲ॥ ಜಯರಾಮ ವಿಠಲನ ಪದಸೇವೆ ಎನಗಿತ್ತು। ಪಾಪವ ಕೆಳಯೋ ಪಾವನ ಚರಣ॥3॥

ಘಾಟಿಯ ಕ್ಷೇತ್ರದಿ ನೆಲಸಿದ ದೇವನೆ

ಘಾಟಿಯ ಕ್ಷೇತ್ರದಿ ನೆಲಸಿದ ದೇವನೆ। ಸುಬ್ರಹ್ಮಣ್ಯನೆ ನಮೊ ನಮೊ॥ ಸಾಟಿಯು ಇಲ್ಲದ ನಿನ್ನ ಮಹಿಮೆಯ। ಬಣ್ಣಿಸಲಾಗದು ನಮೋ ನಮೊ॥ ದುಷ್ಟರ ಶಿಕ್ಷಕ ಶಿಷ್ಟರ ರಕ್ಷಕ। ಸೃಷ್ಟಿಯ ಪಾಲನೆ ನಮೋ ನಮೊ। ಕಷ್ಟವನಳಿಸಿ ಇಷ್ಟವ ಸಲಿವು ಕುಷ್ಯ ಪೊತ್ತಿಹ ನಮೋ ನಮೊ॥1॥ ಷಷ್ಠಿಯ ಮೂರು ಬರುತಿರೆ ಭಕ್ತರು। ನಿಟ್ಟುಪ ವಾಸವ ಗೈಯುವರು। ನಿಷ್ಠೆಯಿಂದಲಿ ಪೂಜಿಪ ಭಕ್ತಗೆ। ಅಷ್ಟೈಶ್ವರ್ಯವ ನೀಡು ನಮೋ॥2॥ ವಲ್ಮೀಕದಲಿ ವಾಸಿಪ ದೇವನೆ। ವಲ್ಲಿಯ ನಾಥನೆ ನಮೋ ನಮೊ। ನಿರ್ಮಲ ಚಿತ್ತದಿ ಭಜಿಸುವ ಮನುಜಗೆ ಕರ್ಮವ ಕಳೆವನೆ ನಮೋನಮೋ॥3॥ ವಾಸುಕಿ ತಕ್ಷಕ ಪದ್ಮ ಕಾಳಿಂಗ। ಕಾರ್ಕೋಟಕನೆ ನಮೋ ನಮೋ। ಶೇಷ ಮಹಾಪದ್ಮ ಅನಂತನಾಗನೆ। ಶಂಖ ಪಾಲನೆ ನಮೋ ನಮೊ॥5॥

ಮೃತ್ತಿಕಾ ನಿಲಯದೊಳು ನೆಲಸಿರುವವನೇ — ರಾಗ: ಷಣ್ಮುಖಪ್ರಿಯ

ಮೃತ್ತಿಕಾ ನಿಲಯದೊಳು ನೆಲಸಿರುವವನೇ। ದರುಶನದಿಂದೆಲ್ಲರ ಪಾಪ ಕಳೆವ ಷಣ್ಮುಖನೇ॥ಪ॥ ಶಿವನ ಕಂಠಾಭರಣ ಹೇ ಫಣಿರಾಜ। ಮೂಷಿಕ ವಾಹನನ ಬಲು ಪ್ರೀತಿಯಗ್ರಜ। ಪಾರ್ವತಿಯ ಪ್ರಿಯಪುತ್ರ ನಾಗರಾಜ। ನಮಿಸುವೆನು ಶಿರಭಾಗಿ ಹೇ ದಿವ್ಯತೇಜ॥1॥ ದೇವಸೇನವಳ್ಳಿಯರ ಅಂಬುಜಾಕ್ಷ। ಕರೆಯುವರು ನಿನ್ನನು ಸುರ ಸೈನ್ಯರಕ್ಷಾ। ತಾರಕಾಸುರನಿಗೆ ನೀಡಿದೆ ಮೋಕ್ಷ। ಇರಲಿ ಭಕ್ತರ ಮೇಲೆ ಕರುಣಾ ಕಟಾಕ್ಷ॥2॥

ಹರ ಹರ ಹರ ಹರ ಸುಬ್ರಹ್ಮಣ್ಯಂ

ಹರ ಹರ ಹರ ಹರ ಸುಬ್ರಹ್ಮಣ್ಯಂ। ಶಿವ ಶಿವ ಶಿವ ಶಿವ ಸುಬ್ರಹ್ಮಣ್ಯಂ। ಶಿವ ಶಿವ ಶಿವ ಶಿವ ಸುಬ್ರಹ್ಮಣ್ಯಂ। ಹರ ಹರ ಹರ ಹರ ಸುಬ್ರಹ್ಮಣ್ಯಂ॥1॥ ಹರ ಹರ ಹರ ಹರ ಸುಬ್ರಹ್ಮಣ್ಯಂ। ಶಿವ ಶಿವ ಶಿವ ಶಿವ ಸುಬ್ರಹ್ಮಣ್ಯಂ। ಶಿವ ಶಿವ ಶಿವ ಶಿವ ಸುಬ್ರಹ್ಮಣ್ಯಂ। ಹರ ಹರ ಹರ ಹರ ಸುಬ್ರಹ್ಮಣ್ಯಂ॥2॥ ಶಿವ ಶರವಣ ಭವ ಸುಬ್ರಹ್ಮಣ್ಯಂ। ಹರ ಶರವಣ ಭವ ಸುಬ್ರಹ್ಮಣ್ಯಂ। ಹರ ಶರವಣ ಭವ ಸುಬ್ರಹ್ಮಣ್ಯಂ। ಶಿವ ಶರವಣ ಭವ ಸುಬ್ರಹ್ಮಣ್ಯಂ॥3॥ ಸುರಾಗ್ರಗಣ್ಯ ಸುಬ್ರಹ್ಮಣ್ಯಂ। ಸತ್ಕುಲ ದೀಪಕ ಸುಬ್ರಹ್ಮಣ್ಯಂ। ಸತ್ಪಾರಾದಿತ ಸುಬ್ರಹ್ಮಣ್ಯಂ। ನಿತ್ಯಾನ್ನಪ್ರದ ಸುಬ್ರಹ್ಮಣ್ಯಂ॥4॥ ಅನಾಥ ನಾಥ ಸುಬ್ರಹ್ಮಣ್ಯಂ। ದೀನೋದ್ಧಾರಕ ಸುಬ್ರಹ್ಮಣ್ಯಂ। ಪತಿತ ಸುಪಾವನ ಸುಬ್ರಹ್ಮಣ್ಯಂ। ದೇವ ಶಿಖಾಮಣಿ ಸುಬ್ರಹ್ಮಣ್ಯಂ॥5॥ ತಾರಕ ಭಂಜನ ಸುಬ್ರಹ್ಮಣ್ಯಂ। ಭಯ ನಿವಾರಣ ಸುಬ್ರಹ್ಮಣ್ಯಂ। ಸುರಸೇನಾಧಿಪ ಸುಬ್ರಹ್ಮಣ್ಯಂ। ತ್ರಿಭುವನ ವೀರ ಸುಬ್ರಹ್ಮಣ್ಯಂ॥6॥ ಕುಷ್ಟರೋಗ ಹರ ಸುಬ್ರಹ್ಮಣ್ಯಂ। ಆರ್ತ ಜನಹಿತ ಸುಬ್ರಹ್ಮಣ್ಯಂ। ಶರಣ ಶರಣ್ಯ ಸುಬ್ರಹ್ಮಣ್ಯಂ। ಭಕ್ತಿ ಮುಕ್ತಿದಾ ಸುಬ್ರಹ್ಮಣ್ಯಂ॥7॥ ಪಾರ್ವತಿ ತನಯ ಸುಬ್ರಹ್ಮಣ್ಯಂ। ವಿನಾಯಕ ಪ್ರಿಯ ಸುಬ್ರಹ್ಮಣ್ಯಂ। ಶಂಕರ ತನಯ ಸುಬ್ರಹ್ಮಣ್ಯಂ। ಮಯೂರ ವಾಹನ ಸುಬ್ರಹ್ಮಣ್ಯಂ॥8॥ ದಿತಿಸುತ ಮರ್ದನ ಸುಬ್ರಹ್ಮಣ್ಯಂ। ಭುವನೋದ್ಧಾರಕ ಸುಬ್ರಹ್ಮಣ್ಯಂ। ಪರಮಪಾವನ ಸುಬ್ರಹ್ಮಣ್ಯಂ। ಕೃಪಾವಾರಿಧಿ ಸುಬ್ರಹ್ಮಣ್ಯಂ॥9॥ ದೀನರಕ್ಷಕ ಸುಬ್ರಹ್ಮಣ್ಯಂ। ಅಭೀಷ್ಟದಾಯಕ ಸುಬ್ರಹ್ಮಣ್ಯಂ। ದ್ವಾದಶ ನೇತ್ರ ಸುಬ್ರಹ್ಮಣ್ಯಂ। ಪರಿಪಾಲಯ ಮಾಂ ಸುಬ್ರಹ್ಮಣ್ಯಂ॥10॥ ಪ್ರಣವ ಸ್ವರೂಪ ಸುಬ್ರಹ್ಮಣ್ಯಂ। ಸರ್ವಲಕ್ಷಣ ಸುಬ್ರಹ್ಮಣ್ಯಂ। ಸಾಮಗಾನ ಪ್ರಿಯ ಸುಬ್ರಹ್ಮಣ್ಯಂ। ಆನಂದ ರೂಪ ಸುಬ್ರಹ್ಮಣ್ಯಂ॥11॥ ಭಕ್ತಜನಪ್ರಿಯ ಸುಬ್ರಹ್ಮಣ್ಯಂ। ಪ್ರಸನ್ನವದನ ಸುಬ್ರಹ್ಮಣ್ಯಂ। ಮಂಗಳಮೂರ್ತಿ ಸುಬ್ರಹ್ಮಣ್ಯಂ। ಜಯ ಜಯ ಜಯ ಜಯ ಸುಬ್ರಹ್ಮಣ್ಯಂ॥12॥

ಉನದು ನಾಮಂ ಸೊಲ್ಲ ಸೊಲ್ಲ (ತಮಿಳು) — ರಾಗ: ಕಲ್ಯಾಣಿ

ಉನದು ನಾಮಂ ಸೊಲ್ಲ ಸೊಲ್ಲ। ಉಳ್ಳಮೆಲ್ಲಾಂ ಉರುಗುದೆ॥ಪ॥ ಎನದು ಮನಂ ನಿಗಳ್‌ದಿಡುಮೇ ಇನ್ಬಂ ಎಲ್ಲಾಂ ಪೊಂಗುದೆ। ನೀ ಆಡಿವರುಂ ಅಳಗೈ ಕಂಡಾಲ್ ಆನಂದಂ ಪೊಂಗುದೆ॥1॥ ಶಷ್ಟಿ ಪೂಜೈ ಸೈಯ್ಯ ಸೈಯ್ಯ ಶಾಬಂ ಎಲ್ಲಾಂ ತೀರುದೇ। ವೇಲ್ ಮುರುಗ ವೇಲಾ ಎನ್ರಾಲ್ ವೇದನೈಗಳ್ ತೀರುದೇ॥ ವಳ್ಳಿನಾಥನ್ ಎನ್ರು ಸೊನ್ನಾಲ್ ವಾನ್ ಮಳೆಯುಂ ಪೊಳಿಯುದೇ॥2॥

ಕೃತ್ತಿಕಾಸುತಂ ಶಕ್ತಿಬಾಲಕಂ — ರಾಗ: ಮಧ್ಯಮಾವತಿ

ಕೃತ್ತಿಕಾಸುತಂ। ಶಕ್ತಿಬಾಲಕಂ। ದುಷ್ಟನಿಗ್ರಹಂ। ಶಿಷ್ಟ ರಕ್ಷಕಂ। ವಲ್ಲಿನಾಯಕಂ। ಶ್ರೀನಿಕೇತನಂ। ವೇದನಾಯಕಂ। ವಿಶ್ವಪಾಲಕಂ॥1॥ ಶಾಂತಿದಾಯಕಂ। ಸತ್ಯಪೋಷಕಂ। ಭಕ್ತಪೋಷಕಂ। ಮುಕ್ತಿದಾಯಕಂ। ನಾಮಕೀರ್ತನಂ। ನಿತ್ಯಮಂಗಳಂ॥2॥ ಶರಣು ಮುರುಗಯ್ಯ। ಸ್ವಾಮಿ ಶರಣು ಮುರುಗಯ್ಯ। ಶರಣು ಮುರುಗಯ್ಯ ಸ್ವಾಮಿ ಶರಣು ಮುರುಗಯ್ಯ॥3॥

ನಮಾಮಿ ಸುಬ್ರಹ್ಮಣ್ಯಗೆ — ರಾಗ: ವಸಂತ

ನಮಾಮಿ ಸುಬ್ರಹ್ಮಣ್ಯಗೆ। ಜಗದತಾಪ ಹರಿಪಗೆ। ವಿಜಯಶಾಂತಿದಾತಗೆ। ಸಕಲ ಭಾಗ್ಯವಿಧಾತಗೆ॥ಪ॥ ಲೋಕಮಾನ್ಯ

ಶಿವನ ಸುತಗೆ ನಾಗಾಭರಣ ಶೂಲಪಾಣಿಗೆ। ಜ್ಞಾನಸಿಂಧು ವಿಶ್ವಮೂರ್ತಿಗೆ। ದೀನಬಂಧು ದಿವ್ಯತೇಜಗೆ।।1।। ಮೋಕ್ಷವೀವ ಸ್ಕಂದ ದೇವಗೆ ರುದ್ರರೂಪ ಉಮಾಸುತಗೆ। ಸತ್ಯಪ್ರೇಮ ಕಾರ್ತಿಕೇಯಗೆ। ನೇಮನಿಷ್ಠ ಭಕ್ತಪ್ರಿಯಗೆ।।2।। ಕಾಮಿತಾರ್ಥ ನೀಡುವವಗೆ। ಭೀತಿನಾಶ ಮಾಡುವವಗೆ। ವಜ್ರಕಾಯ ವೀರವಂತಗೆ। ಸರ್ಪರಾಜ ಎನಿಸಿದವಗೆ।।3।।

ನೀಲ ಮಯಿಲ್ ಮೀದು (ತಮಿಳು) **ರಾಗ: ರಂಜನಿ**

ನೀಲ ಮಯಿಲ್ ಮೀದು ಜ್ಞಾನ ವಲಮೆ ವಂದ। ನೀದಾನ್ ಎನಕ್ಕರುಳವೇಂಡುಂ ಮುರುಗಾ।।ಪ।। ನೀಲ ತಿರುಮಾಲಿನ್ ಸಿಂದೈ ಮಗ್ಝಿಳ್ ಮುರುಗಾ। ಸೇವಲ್ ಕೊಡಿ ಅಳಗಾಯ್ ತಾಂಗಿನಿರ್ಕುಂ ಷಣ್ಮುಗಾ।।1।। ವೇಲಿನ್ನೈ ಕೈಯಿಲ್ ಏಂದುಂ ವೇಲವನೆ। ಎಳಿಲ್ ವೇಳ ಮುಗಂ ಪಡೈತ್ತೋನ್ ಸೋದರನೆ। ಸೀರ್ಮಿಗು ವಳ್ಳಿದೈವಾನೈ ಮಣಾಳನೆ। ಎನ್‌ಸಿಂದೈ ಕುಹಂದವನೆ ಕಂದನೆ ಗುಹನೆ।।2।।

ಪರಿಸರ ಸುತನಿಗೆ ನಮೋ ನಮೋ **ರಾಗ: ಮೋಹನ**

ಪರಿಸರ ಸುತನಿಗೆ ನಮೋ ನಮೋ। ವಾರುಣಿ ಪತಿಗೆ ನಮೋ ನಮೋ।।ಪ।। ವಾಸುಕಿ ರೂಪದಿ ಶರಧಿಯ ಮಥಿಸಿದ। ಹರಿಯ ಮಂಚಕೆ ನಮೋ ನಮೋ।।ಅ.ಪ।। ಕರ್ಣರಹಿತನಿಗೆ ನಮೋ ನಮೋ। ಕಣ್ಣಿನಿಂದನೋಡುವಗೆ ನಮೋ ನಮೋ। ಉದರವೆ ಪಾದವ ಮಾಡುತ ಸರಸರ। ಸರಿಯುವ ದೇವಗೆ ನಮೋನಮೋ।।1।। ಕಾಲಿಲ್ಲದಾತನಿಗೆ ನಮೋ ನಮೋ। ಗಾಳಿಯನು ನುಂಗುವಗೆ ನಮೋ ನಮೋ। ಕಾಳಗ ಮಾಡುತ ಪಾರ್ಥನ ಮುಕುಟವ। ಬೀಳಿಸಿದಂತಗೆ ನಮೋ ನಮೋ।।2।।ಜೀವಾಭಿಮಾನಿಗೆ ನಮೋ ನಮೋ। ಭವನಾಗಿ ಇದ್ದವಗೆ ನಮೋ ನಮೋ। ಸಾವಿರ ವದನದಿ ಸ್ತವನವ ಮಾಡುತ। ಅವನಿಯ ಪೊತ್ತವಗೆ ನಮೋ ನಮೋ।।3।। ಹರಿಯಾ ಅಗ್ರಜಗೆ ನಮೋ ನಮೋ। ಹರಿಯ ಭಕ್ತರಿಷ್ಟಾರ್ಥಗಳ ಪೂರೈಸುವಗೆ ನಮೋ ನಮೋ ।।3।।

ಸಂಜಲಂತೀರ ದಯ್ಯೆಪುರಿವಾಯ್ (ತಮಿಳು) **ರಾಗ: ಶುಭಪಂತುವರಾಳಿ**

ಸಂಜಲಂತೀರ ದಯ್ಯೆ ಪುರಿವಾಯ್। ಅಂಜಲ್ ಎನ್ರೆಎನ್ನೈ। ಆಣೈತ್ತಿಡುವಾಯ್ ಮುರುಗ।।ಪ।। ಕಂಜಮಲರ್ ಪಾದಂ ತಂಜಮೆನ್ನ ಅಡ್ಡೆಂದೇನ್। ಕಂದನೆ ಗುಹನೆ ಕಾತರುಳ್‌ವಾಯ್ ನೀಯೆ।।1।। ಪಣ್ಣಿಸೈತ್ತು ಉನ್ನೈ ಪಾಡಿನೇನ್ ಮುರುಗ। ಭಕ್ತರ್‌ಕರುಳ್ ಸೈಯ್ಯುಂ ಪಾವೈ ಉಮೈಬಾಲ।। ಎಣ್ಣಿ ಎಣ್ಣೀನಿತ್ತಂ ಕಣ್ಣೀರ್ ಪೊಳಿಂದುಂ। ಎಳ್ಳಳವುಮ್ ಇರಂಗಿ ಎನಕ್ಕರುಳ್ ಪುರಿಯಾಯೋ।।2।।

ಸುಬ್ರಹ್ಮಣ್ಯ ಪ್ರಭೋ **ರಾಗ: ಹಿಂದೋಳ-ಆದಿತಾಳ**

ಸುಬ್ರಹ್ಮಣ್ಯ ಪ್ರಭೋ ಜಯ ಜಯ ಸುಬ್ರಹ್ಮಣ್ಯ ಪ್ರಭೋ।।ಪ।। ರೋಗನಿವಾರಕ ಸಂತತಿ ಕಾರಕ। ನಿನ್ನಯ ನಾಮವೆ ಮುಕ್ತಿಗೆ ತಾರಕ।।ಅ.ಪ।। ಭವದಲಿ ಬೀಳ್ವರು ನಿನ್ನನು ಮರೆಯಲು। ಭುವನವೆ ಗೆಲುವರು ನೀನು ಒಲಿಯಲು। ಬಾಳಲಿ ನಲಿವರು ನಿನ್ನ ಸ್ಮರಿಸಲು। ಕಾಲನ ಗೆಲುವರು ನೀನು ಹರಸಲು।।1।। ಚಂದನ ಕಸ್ತೂರಿ ಅರಿಶಿನ ಗಂಧದಿ। ಪಂಚಾಮೃತ ಅಭಿಷೇಕದಿ ಅರ್ಚಿಸಿ। ಈಶ ಸುತನೆ ಬಾ ಗಣೇಶ ಸೋದರ। ಎಂದು ಮೊರೆಯಿಡಲಾಲಿಸಿ ಪೊರೆಯೊ।।2।। ತೂಗುವನೊ ತಲೆ ತೂಗುವನೊ। ಆಡುವನೊ ನಲಿದಾಡುವನೋ। ನಲಿದಾಡಿ ಕುಣಿಯುವನೋ ದಯಮಾಡಿ ಹರಸುವನೊ।(2ನೇ ಕಾಲ)। ಕುಲಕಾಯ್ದು ಸಲಹುವನೋ ಭಕ್ತರ ಬಂಧು ತಾನಿವನೋ।।3।। ದುಷ್ಟರ ಕಾಡುವನೋ ಮನದಿಷ್ಟವ ನಡೆಸುವನೋ। ಅನುಗಾಲ ನೆನೆವರ ಕ್ಷೇಮಕ್ಕಾಗಿ ಸುತ್ತಮುತ್ತ ತಿರುಗುತಿಹನೋ।।4।।

ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ **ರಾಗ: ಯಮನ್**

ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಷಣ್ಮುಖನಾಥ ಸುಬ್ರಹ್ಮಣ್ಯಂ। ಶಿವಶಿವಶಿವ ಶಿವ ಸುಬ್ರಹ್ಮಣ್ಯಂ ಹರಹರಹರಹರ

ಸುಬ್ರಹ್ಮಣ್ಯಂ। ಶಿವ ಶಿವ ಹರಹರ ಸುಬ್ರಹ್ಮಣ್ಯಂ ಹರಹರ ಶಿವಶಿವ ಸುಬ್ರಹ್ಮಣ್ಯಂ। ಶಿವಶರವಣಭವ ಸುಬ್ರಹ್ಮಣ್ಯಂ। ಶಿವಶರವಣಭವ ಸುಬ್ರಹ್ಮಣ್ಯಂ। ಶಿವಶಿವ ಹರಹರ ಸುಬ್ರಹ್ಮಣ್ಯಂ ಹರಹರ ಶಿವಶಿವ ಸುಬ್ರಹ್ಮಣ್ಯಂ।

ಶ್ರೀ ಸುಬ್ರಹ್ಮಣ್ಯನೆ ಕುಕ್ಕೆಯಲಿ **ರಾಗ: ಯಮುನ್‌ಕಲ್ಯಾಣಿ-ಆದಿತಾಳ**

ಶ್ರೀ ಸುಬ್ರಹ್ಮಣ್ಯನೆ ಕುಕ್ಕೆಯಲಿ ನೆಲೆಸಿರುವೆ। ಏಳು ಹೆಡೆಯ ಸ್ವಾಮಿ ಏನು ಬೇಡಲಿ ನಾನು। ಷಷ್ಠಿ ಪೂಜಿತನೆ ಮೃತ್ಯು ನಿವಾರಕನೆ। ನಿಷ್ಠೆಯಲಿ ಭಜಿಪರ ಕಷ್ಟವ ಪೊರೆವನೆ॥ಪ॥ ಪಳನಿ ಸುಬ್ರಹ್ಮಣ್ಯನೆ ಶಿಖರದಿ ನೀ ನೆಲೆಸಿ। ಶಿಖಿ ವಾಹನದಿ ಮೆರೆಯುವ ಮುರುಗನೆ। ತ್ರಿಶೂಲ ಹಸ್ತದಿ ಪಿಡಿದು ವಟುವಾಗಿ ನಿಂತಿರುವ। ಶ್ರೀಕರ ಶುಭಕರ ಶಂಕರ ತನಯನೆ॥1॥ ಘಾಟಿ ಸುಬ್ರಹ್ಮಣ್ಯನೆ ಕಾಮಿತಾರ್ಥ ಫಲವ ನೀಡಿ। ರೋಗ ನಿವಾರಕನೆ ಕ್ಷೇಮದಾಯಕನೆ। ಹಾಲಿನಭಿಷೇಕದಿ ಆನಂದ ನೀಡುವನೆ। ಫಣಿರಾಜನೆ ನಿನಗೆ ಶಿರಬಾಗಿ ವಂದಿಸುವೆ॥2॥ ನಾಗಲ ಮಡಿಕೆ ನಾಗೇಂದ್ರನೆ ನಾನಾ ರೂಪಗಳಲ್ಲಿ। ದರುಶನ ನೀಡುತ್ತ ನೀ ನಿಂತಿರುವೆ। ಹೆಜ್ಜೆ ನಮಸ್ಕಾರಗಳು ಉರುಳು ಸೇವೆಗಳಿಂದ। ಭಕ್ತರಿಷ್ಟಾರ್ಥಗಳ ಪೂರೈಸುತಿರುವೆ॥3॥

ಷಡಾನನಾ ಷಡಾನನಾ **ರಾಗ: ಯಮುನ್‌ಕಲ್ಯಾಣಿ**

ಷಡಾನನಾ ಷಡಾನನಾ ಷಣ್ಮುಖನಾಥಾ ಷಡಾನನಾ। ಶಂಕರನಂದನ ಷಡಾನನಾ। ಸಂಕಟಹರಣ ಷಡಾನನಾ। ಪಂಕಜ ಲೋಚನ ಷಡಾನನಾ। ಪಾಹಿದಯಾಳೋ ಷಡಾನನಾ॥1॥ ವರಶಿಖಿವಾಹನ ಷಡಾನನಾ। ವಲ್ಲೀನಾಯಕ ಷಡಾನನಾ। ಸುರಮುನಿ ಸೇವಿತ ಷಡಾನನಾ। ಸುಬ್ರಹ್ಮಣ್ಯಂ ಷಡಾನನಾ॥2॥

ಸುಬ್ರಹ್ಮಣ್ಯ ಸುಬ್ರಹ್ಮಣ್ಯನೆ **ರಾಗ: ಶ್ರೀ**

ಸುಬ್ರಹ್ಮಣ್ಯ ಸುಬ್ರಹ್ಮಣ್ಯ ಸುಬ್ರಹ್ಮಣ್ಯನೆ। ತಾರಕನ ಕೊಂದಂಥ ಅಗ್ರಗಣ್ಯನೆ। ಪಾರ್ವತಿಯ ಪ್ರಿಯ ಪುತ್ರ ಸುಬ್ರಹ್ಮಣ್ಯನೆ। ಪಾಪವನು ಕಳೆವಂಥ ಸರ್ವಶ್ರೇಷ್ಠನೆ॥1॥ ಭಸ್ಮವನ್ನು ಧರಿಸಿದಂಥ ಭಸ್ಮಪ್ರಿಯನೆ। ಕೈಲಾಸ ಪುರವಾಸ ಪುಟ್ಟ ಕಂದನೆ। ಗಣಗಳೊಡೆಯ ಗಣಪಣ್ಣ ನಿನ್ನನುಜನು। ಹಣೆಗಣ್ಣ ಈಶ್ವರನು ನಿನ್ನಪ್ಪನು॥2॥ ಸುರರ ಕಷ್ಟವನ್ನು ಕಳೆದ ವೀರಪುತ್ರನೆ। ವೇಲಾಯುಧನಾದ ಸ್ವಾಮಿ ಪಳನಿಯಪ್ಪನೆ। ಮಹಾಮಹಿಮ ನಿನ್ನ ನಾಮ ನಂಬುವೆವು। ಜಗವ ಕಾಯೋ ಎಂದು ನಿನ್ನ ಬೇಡುವೆವು॥3॥ ಆರು ಮುಖವ ಹೊಂದಿದಂಥ ಆರ್ಮುಗಸ್ವಾಮಿ। ತಿರುತಣಿಯಲಿ ನೆಲೆಸಿರುವ ತಿರುತ್ತಣಿಸ್ವಾಮಿ। ಹರೋಹರ ಎನ್ನುವಂಥ ಭಕ್ತ ಸಾಗರ। ಹರಕೆಹೊತ್ತು ಬರುತಿಹರು ಕರುಣಾಸಾಗರ॥4॥ ಸೃಷ್ಟಿಯಲ್ಲಿ ಎಲ್ಲ ಜನರು ನಿನ್ನ ಪೂಜಿಸಿ। ಭಕ್ತಿಯಿಂದ ಕೈ ಮುಗಿಯುವರು ಕರವ ಜೋಡಿಸಿ। ಪ್ರೀತಿಯಿಂದ ನಿನ್ನ ಕರೆಯೆ ಸುಬ್ರಹ್ಮಣ್ಯನೆ। ಭಕ್ತಜನರ ಬಳಿಗೆ ಬರುವೆ ನಮ್ಮ ಅಣ್ಣನೆ॥5॥

ಬೆಳ್ಳಿಯ ಹೆಡೆಯ ನಾಗಪ್ಪ **ರಾಗ: ಮಧ್ಯಮಾವತಿ**

ಬೆಳ್ಳಿಯ ಹೆಡೆಯ ನಾಗಪ್ಪ। ಹೊಂದಲೆಯನು ತೂಗಪ್ಪ। ಮಿರಿಮಿರಿ ಮಿನುಗುವೆ ನಾಗಪ್ಪ। ನೀ ಗಿರಿಗಿರಿ ಸುತ್ತುವೆ ನಾಗಪ್ಪ॥1॥ ಹಾಲನೀಡುವೆ ನಾಗಪ್ಪ ನಿನ್ನ। ಹಾಲಾಹಲವನು ಬೆರಸದಿರಪ್ಪ। ಪಾಡಿ ಪೂಜಿಪೆ ನಾಗಪ್ಪ ಎನ್ನ। ಪಾಲಿಸಯ್ಯ ನಾಗಪ್ಪ॥2॥ ಏಳುಹೆಡೆಯ ನಾಗಪ್ಪ ಎನ್ನ। ಏಳು ತಲೆಮಾರು ಕಾಯಪ್ಪ। ನಿನ್ನ ಏಳು ಹೆಡೆಯನು ಬಿಚ್ಚಪ್ಪ। ಎನ್ನ ಕರವನು ಮುಗಿಯುವೆ ನಾಗಪ್ಪ॥3॥ ಸುಬ್ರಹ್ಮಣ್ಯನೆ ನಾಗಪ್ಪ ಶಿವಗಂಗೆಯೊಳುದಿಸಿದ ನಾಗಪ್ಪ। ಮುದ್ದು ಶಾರದದಾಸಿ ವಂದಿತನೆ। ಶಿವ ಸುಬ್ರಹ್ಮಣ್ಯನೆ ನಾಗಪ್ಪ॥4॥

ದುಷ್ಟರನು ದೂರ ಮಾಡೋ **ರಾಗ: ಶಿವರಂಜಿನಿ-ಆದಿತಾಳ**

ದುಷ್ಟರನು ದೂರ ಮಾಡೋ ನಾಗೇಂದ್ರನೆ ನೀನು। ಇಷ್ಟಾರ್ಥಗಳ ನಮಗೆ ಕೊಡದಿರಲು ಸರಿಯೇ॥ಪ॥ ಎನ್ನ

ಒಳಗಡಗಿರುವ ಕಳ್ಳರಿಗೆ ನಾಸೋತೆ। ಧ್ಯಾನಮಾಡುವ ದಾರಿ ನಮಗೆ ನೀ ತೋರೋ।।ಅ.ಪ.।। ಪುಷ್ಯಶುದ್ಧ ಷಷ್ಠಿ ನಿನ್ನ ಅಭಿಷೇಕಾಲಂಕಾರ। ಬ್ರಹ್ಮರಥೋತ್ಸವವೂ ವೈಭೋಗವೂ ನಿನಗೆ। ಹೆಜ್ಜೆ ನಮಸ್ಕಾರಗಳು ಉರುಳು ಸೇವೆಯಿಂದ। ಅನ್ನ ಸಂತರ್ಪಣೆ ಮಾಡಿ ವಂದಿಸುವರು।।1।। ಮಾಣಿಕ್ಯ ರತ್ನವಾ ಹಣೆಯಲಿ ಧರಿಸಿ ನೀ। ಹೆಡೆ ಎತ್ತಿ ನರ್ತಿಸುವ ನಟರಾಜನೆ ನೀನು। ಫಣಿರಾಜನೇ ನಿನಗೆ ನಾಗಸ್ವರಗಳ ನುಡಿಸಿ। ಭಕ್ತರಾನಂದದಿ ಭಜಿಸುವರು ಕುಕ್ಕೆಸ್ವಾಮಿಯೇ।।2।।

ಶರವಣಭವ ಗುಹನೇ (ತಮಿಳು) ರಾಗ: ಕನ್ನಡ-ಆದಿತಾಳ

ಶರವಣಭವ ಗುಹನೇ ಷಣ್ಮುಖನೆ।।ಪ।। ಶರವಣಭವ ಗುಹ ಷಣ್ಮುಖ ಪರಾತ್ಪರ ಮುರುಗಾ ಮುರುಗಾ।।ಅ.ಪ।। ವಳ್ಳಿಮನಾಳಾ ದೇವಾದಿದೇವ ಆರುಮುಗ ಘನಸ್ವಭಾವಾ। ವಡಿವೇಲಾ ದೀನದಯಾಳ ಮುರುಗಾ ಮುರುಗಾ।।2।।ಚರಣ।।

ಸುಬ್ರಹ್ಮಣ್ಯೇನ ರಾಗ: ಶುದ್ಧಧನ್ಯಾಸಿ-ಆದಿತಾಳ

ಸುಬ್ರಹ್ಮಣ್ಯೇನ ರಕ್ಷಿತೋಹಂ, ಅಷ್ಟಾದಶಲೋಚನಾಖಂಡೇನ।।ಪ।। ಪ್ರಬ್ರವಾಮಾದಿ ಪೂಜಿತ ಪದೇನ ಪುರಂದರ ಮನೋಲ್ಲಾಸ ಕರಣೇನ।।ಅ.ಪ।। ಕಂಕಶೈಲ ವಿಹಾರೇಣ ವರೇಣ ವಲ್ಲೀದೇವಸೇನಾರಮಣೇನ। ಅಕಾರ ವೃತ್ತೇನ ಸಾನಂದೇನ-ಭೋಗ ಮೋಕ್ಷ ಪ್ರದಾನೇನ ನಿತ್ಯೇನ। ವೇಂಕಟೇಶ್ವರ ಸುಪೂಜಿತೇನ-ವಿಚಿತ್ರವಿಶಾಖಾಮಹೋತ್ಸವೇನ ಶುಕರಹಸ್ಯ ಪ್ರಕಾಶ ಗುರುಗುಹೇನ ಕೃತ್ತಿಕಾಸುತ ಶುದ್ಧಧನ್ಯೇನ।।ಚ।।

ಸ್ವಾಮಿನಾಥ ರಾಗ: ನಾಟ-ಆದಿತಾಳ

ಸ್ವಾಮಿನಾಥ ಪರಿಪಾಲಯಾಶುಮಾಂ ಸ್ವಪ್ರಕಾಶ ವಲ್ಲೀಶ ಗುರುಗುಹ ದೇವಸೇನೇಶ।।ಸ್ವಾಮಿ।। ಕಾಮಜನಕ ಭಾರತೀಶ ಸೇವಿತ-ಕಾರ್ತಿಕೇಯ ನಾರದಾದಿಭಾವಿತ ವಾಮದೇವ ಪಾರ್ವತೀ ಸುಕುಮಾರ-ವಾರಿಜಾಸ್ತ್ರ ಸಮ್ಮೋಹಿತಾಕಾರ ಕಾಮಿತಾರ್ಥ ವಿತರಣನಿಪುಣ ಚರಣ ಕಾವ್ಯ ನಾಟಕಾಲಂಕಾರ ಭರಣ ಭೂಮಿ ಜಲಾಗ್ನಿವಾಯು ಗಗನಕಿರಣ ಬೋಧರೂಪ ನಿತ್ಯಾನಂದಕರಣ।।ಸ್ವಾಮಿ।।

ಶ್ರೀ ಗುರುಗುಹ ರಾಗ: ಶುದ್ಧಸಾವೇರಿ-ರೂಪಕತಾಳ

ಶ್ರೀ ಗುರುಗುಹ ತಾರಯಾಶುಮಾಂ ಶರವಣಭವ।।ಪ।। ಸುರಪತಿ ಶ್ರೀಪತಿ ರತಿಪತಿ ವಾಕ್ಪತಿ ಕ್ಷಿತಿಪತಿ ಪಶುಪತಿ ಸೇವಿತ।।ಅ.ಪ।। ರಾಗಾದಿರಹಿತ ಹೃದಯವಿಭಾವಿತ ಸುರಮುನಿ ಪೂಜಿತ ತ್ಯಾಗಾದಿ ರಾಜಕುಮಾರ। ತಾಪತ್ರಯಹರ ಕುಮಾರ ಯೋಗಿರಾಜ ವಿನುತಪಾದ ಭೂದೇವ ಕ್ರಿಯಾ। ಯೋಗಿರಾಜ ಯೋಗ ಭೇದಯುಕ್ತ ಮನೋಲಯ ವಿನೋದ।।ಚರಣ।।

ಶ್ರೀ ಶರವಣಭವುನೀ ರಾಗ: ಸುಮನಪ್ರಿಯ-ರೂಪಕತಾಳ

ಶ್ರೀ ಶರವಣಭವುನೀ ವಿನಾ ದೈವಮುಗ ತಾ ಕಲಿಲೋ।।ಪ।। ಈಶ ಪರಾಶಕ್ತಿಯನು ಏಕ ರೂಪಮುಖ ಜಲಧೇ।।ಅ.ಪ.।। ಷಣ್ಮುಗನೇ ಸಾಧನಮು ಸಕಲಜೀವಸಾಧನಂ। ಅನ್ನಿಯುನ್ನ ಮನಿವೆಲೆಯು ಹರಿಕೇಶಪುರ ಸದನಾ।।ಚರಣ।।

ಕಾವಾವಾ ಕಂದಾವಾ (ತಮಿಳು) ರಾಗ: ವರಾಳಿ-ಆದಿತಾಳ

ಕಾವಾವಾ ಕಂದಾವಾ ವಾ ಎನ್ನೈ ಕಾವಾ ವೇಲವಾ ಪಳನಿ ಮಲೈ ಯುರೈಯುಂ ಮುರುಗ।।ಪ।। ದೇವಾದಿದೇವನ್ ಮಗನೇ ವಾ ಪರದೇವಿ ಮಡಿಯಿಲ್ ಅಮರುಂ।ಗುಹನೇ ವಾ ವಳ್ಳಿದೈವಯಾನೈ ಮಣವಾಳ ವಾ। ಶರವಣಭವ ಪರಮದಯಾಳಾ। ಷಣ್ಮುಗ।।ಅ.ಪ।। ಆಪತ್ತಿರುಳರ ಅರುಳೊಳಿ ತರುಮಪ್ಪನೇ ಅಣ್ಣಲೇ ಅಯ್ಯವಾ।

ಪಾಪತ್ತಿರಳ್‌ತರುಮ್ ತಾಪಂ ಅಗಲವರುಂ ಪಳನಿ ವಳರ್‌ಕರುಣೈ। ಮಲೆಯ್ಯೆ ವಾ ತಾಪತ್ರಯ ವೈಯಿಲ್ ಅಗಲರ ನಿಳಲ್ ತರುವಾನ್ ತರುವೇ। ಎನ್ ಕುಲಗುರು ವೇ ವಾ। ಶ್ರೀ ಪದ್ಮನಾಭನ್ ಮರುಗಾ ರಾಮದಾಸನ್। ವಣಂಗುಂ ಮುತ್ತಯ್ಯವಾ ಪಿರೈವೋಡು॥ಚರಣ॥

ವಲ್ಲಿನಾಯಕು ನೀವೇ ಗತಿಯೆನಿ **ರಾಗ: ಷಣ್ಮುಖಪ್ರಿಯ**

ವಲ್ಲಿನಾಯಕು ನೀವೇ ಗತಿಯೆನಿ ಮನಸಾರಕ ನಮ್ಮಿ ನನ್ನ ಬ್ರೋವಮು॥ಪ॥ ತಲ್ಲಿತಂಡ್ರಿ ಗುರು ದೈವಮು ನೀವನಿ। ತೆಲೆಚಿ ನಿನ್ನ ಸಂತತಮು ಬ್ರೋವಮು॥ಅ.ಪ॥ ವರಮೈನನೇ ಮಹಿಮಲನು ಪೊಗಡ। ವಾರಿಕಾರ್ಯಮುನು। ವಹಿಂಪಗವ ನೀನೆ। ಚರಣಾಲಯಮುನಾ ತ್ಯಾಗಗಾ। ಬೆಟ್ಟಿದೇ ಷಣ್ಮುಗ ಹರಿಕೇಶ ಪುರವಾಸಿನಿ॥ಚರಣ॥

ಏನು ಬೇಡಲಿ ನಾನು **ರಾಗ: ಕಾನಡ-ಖಂಡಛಾಪುತಾಳ**

ಏನು ಬೇಡಲಿ ನಾನು ಆದಿಶೇಷನೆ ನಿನ್ನ। ನಿನ್ನ ದಯೆ ನಮಗಿರಲಿ ಇನ್ನೇನು ಬೇಡಲಿ॥ಪ॥ ಸುಂದರ ವದನನೆ ನಾಗನಂದನ ಕಂದ। ನಾಗಭೂಷಣನೆ ಆನಂದ ಕಂದನೆ। ಹಾಲು ತುಪ್ಪವ ನಿನಗೆ ಅಭಿಷೇಕ ಮಾಡುವೆ। ಹರುಷದಿ ಸ್ವೀಕರಿಸು ನಾಗನಂದನನೆ ನೀನು॥1॥ ಶಿವನ ಸುಕುಮಾರನೆ ಪಾಶಾಂಕುಶಧರನೆ। ಶಿಖಿವಾಹನನೆ ಶಂಕರ ಪುತ್ರನೆ। ತ್ರಿಶೂಲಧಾರನಾಗಿ ನಮಗೆ ನೆರಳಾಗಿರುವೆ। ನಾಗೇಂದ್ರನೇ ನಿನ್ನ ಇನ್ನೇನು ಬೇಡಲಿ॥2॥ ನೊಂದೆನಯ್ಯ ಈ ಮೋಹಪಾಶಕೆ ಸಿಲುಕಿ। ಮುಂದೆ ಎನ್ನ ಪಯಣದ ದಾರಿಕಾಣದೆ ನಾನು। ತಂದೆ ನೀನೇ ಕಾಯೋ ಎನ್ನ ತಪ್ಪುಗಳೆಣಿಸದೆ। ನಾಗರಾಜನೆ ನಿನ್ನ ಇನ್ನೇನು ಬೇಡಲಿ॥3॥

ಹೇ ಸ್ವಾಮಿನಾಥ ಕರುಣಾಕರ (ಸುಬ್ರಹ್ಮಣ್ಯಾಷ್ಟಕಂ)

ಹೇ ಸ್ವಾಮಿನಾಥ ಕರುಣಾಕರ ದೀನಬಂಧೋ। ಶ್ರೀ ಪಾರ್ವತೀಶ ಮುಖಪಂಕಜ ಪದ್ಮಬಂಧೋ। ಶ್ರೀಶಾದಿ ದೇವಗಣ ಪೂಜಿತ ಪಾದಪದ್ಮ। ವಲ್ಲೀಶನಾಥ ಮಮದೇಹಿ ಕಲಾವಲಂಬಂ ॥ದೇವಾದಿ ದೇವನುತ ದೇವಗಣಾಧಿನಾಥ। ದೇವೇಂದ್ರ ವಂದ್ಯ ಮೃದು ಪಂಕಜ ಮಂಜುಪಾದ। ದೇವರ್ಷಿ ನಾರದ ಮುನಿಂದ್ರ ಸುಗೀತಕೀರ್ತೇ। ವಲ್ಲೀಶನಾಥ ಮಮದೇಹಿ ಕರಾವಲಂಬಂ॥ ನಿತ್ಯನ್ನದಾನ ನಿರತಾಖಿಲ ರೋಗಹಾರಿನ್। ತಸ್ಮಾತ್ರದಾನ ಪರಿಪೂರಿತ ಭಕ್ತಕಾಮ। ಶ್ರುತ್ಯಾಗಮ ಪ್ರಣವ ವಾಚ್ಯ ನಿಜಸ್ವರೂಪ। ವಲ್ಲೀಶನಾಥ ಮಮದೇಹಿ ಕರಾವಲಂಬಂ॥ ನಿತ್ಯಾನ್ನದಾನ ನಿರತಾಖಿ ರೋಗಹಾರಿನ್। ತಸ್ಮಾತ್ರ ದಾನ ಪರಿಪೂರಿತ ಭಕ್ತಕಾಮ। ಶ್ರುತ್ಯಾಗಮ ಪ್ರಣವ ವಾಚ್ಯ ನಿಜಸ್ವರೂಪ। ವಲ್ಲೀಶನಾಥ ಮಮದೇಹಿ ಕರಾವಲಂಬಂ॥ ಕ್ರೌಂಚಾ ಸುರೇಂದ್ರ ಪರಿಖಂಡನ ಶಕ್ತಿಶೂಲ। ಪಾಶಾದಿ ಶಸ್ತ್ರ ಪರಿಮಂಡಿತ ದಿವ್ಯ ಪಾಣೇ। ಶ್ರೀಕುಂಡಲೀಶ ಧರತುಂಡ ಶೀಖೀಂದ್ರ ವಾಹ। ವಲ್ಲೀಶನಾಥ ಮಮದೇಹಿ ಕರಾವಲಂಬಂ॥ ದೇವಾದಿದೇವ ರಥ ಮಂಡಲ ಮಧ್ಯ ವೇದ್ಯ। ದೇವೇಂದ್ರ ಪೀಠ ನಗರಂ ಧೃಡ ಚಾಪ ಹಸ್ತಂ। ಶೂರಂ ನಿಹತ್ಯ ಸುರಕೋಟಿ ಭೀರಿಡ್ಯ ಮಾನಂ। ವಲ್ಲೀಶನಾಥ ಮಮದೇಹಿ ಕರಾವಲಂಬಂ॥ ಹಾರಾದಿ ರತ್ನ ಮಣಿಯುಕ್ತ ಕಿರೀಟ ಹಾರ। ಕೇಯೂರ ಕುಂಡಲ ಲಸತ್ಕ ವಚಾಭಿರಾಮ। ಹೇ ವೀರ ತಾರಕ ಜಯಾಮರ ಬೃಂದ ವಂದ್ಯ। ವಲ್ಲೀಶನಾಥ ಮಮದೇಹಿ ಕರಾವಲಂಬಂ॥ ಪಂಚಾಕ್ಷರಾದಿ ಮನುಮಂತ್ರಿತ ಗಾಂಗತೋಯೈಃ। ಪಂಚಾಮೃತೈಃ ಪ್ರಮುದಿತೇಂದ್ರ ಮುಖೈರ್ಮುನೀಂದ್ರೈಃ। ಪಟ್ಟಾಭಿಷಿಕ್ತ ಹರಿಯುಕ್ತ ಪರಾಸನಾಥ। ವಲ್ಲೀಶನಾಥ ಮಮದೇಹಿ ಕಲಾವಲಂಬಂ॥ ಶ್ರೀಕಾರ್ತಿಕೇಯ ಕರುಣಾಮೃತ ಪೂರ್ಣದೃಷ್ಟ್ಯಾ। ಕಾಮದಿ ರೋಗ ಕಲುಷೀಕೃತ ದುಷ್ಟಚಿತ್ತಂ। ಸಿಕ್ತ್ವಾಮಾಮವ ಕಳಾಧರ ಕಾಂತಿ ಕಾಂತ್ಯಾ। ವಲ್ಲೀಶನಾಥ ಮಮದೇಹಿ ಕರಾವಲಂಬಂ॥ ಸುಬ್ರಹ್ಮಣ್ಯಷ್ಟಕಂ ಪುಣ್ಯಂ ಯೇ ಪಠಂತಿ ದ್ವಿಜೋ ತ್ತಮಾಃ। ತೇ ಸರ್ವೇ ಮುಕ್ತಿಮಾಯಾಂತಿ ಸುಬ್ರಹ್ಮಣ್ಯ ಪ್ರಸಾದತಃ। ಸುಬ್ರಹ್ಮಣ್ಯಾಷ್ಟಕ ಮಿದಂ ಪ್ರಾಥರುತ್ಥಾಯ ಯಃ ಪಠೇತ್। ಕೋಟಿಜನ್ಮಕೃತಂ ಪಾಪಂ ತತ್ ಕ್ಷಣದೇವ ನಶ್ಯತಿ॥

ವಾಸುಕೀ ಭೂಷಣಗೆ ವಯ್ಯಾರದಿಂದಲಿ (ನಾಗಚೌತಿವ್ರತ ಕಥೆ) ರಾಗ: ಆನಂದಭೈರವಿ

ವಾಸುಕೀ ಭೂಷಣಗೆ ವಯ್ಯಾರದಿಂದಲಿ। ಸುವಾಸಿನಿಯರೊಲಿದುಪೂಜೆಯಮಾಡಲು। ಆ ಶುಭ ಚರಿತನ ಕಥೆಯ ನಾ ವರ್ಣಿಸುವೆ। ಈಶ ಕುಮಾರ ಪಾಲಿಸುವರಗಳಾ॥1॥ ಬಡ ಬ್ರಾಹ್ಮಣನ ಮಗಳು ಅಕಮಂಚಿ ಎಂಬಾಕೆ। ಗರುಡ ಪಂಚಮಿ ವ್ರತವು ತನಗೆಂದಳು। ತರಿಸಿಕೊಡುಬೇಕಾದ ಫಲವಸ್ತು ಎನುತಲೀ। ಒಡಹುಟ್ಟಿದಣ್ಣಗೆ ಒಡನೆ ನುಡಿದಳು॥2॥ ಅಂದ ಮಾತನು ಕೇಳಿ ಬಂದು ಸಂತೋಷದಲಿ ಚಂದದಾಕುಸುಮಗಳ ಕೊಯ್ಯುತಿರಲು। ಒಂದು ಕ್ಯಾದಿಗೆ ಒಳಗೆ ಪೊಂದಿಕೊಂಡನು ಶೇಷ ಬಂದು ಸೋಕಿತು ಅವನ ಕರಸ್ಥಳಗಳ॥3॥ ವಿಷವು ತಲೆಗೇರಿ ಪರವಶವಾಗಿ ಮಲಗಿರಲು। ಕುಸುಮಗಂಧಿನಿಗೆ ಅರುಹಿದರು ಬೇಗ। ಪಶುಪತಿ ಅಣ್ಣನ ಪಾಲಿಸಬೇಕು ನಾಗರ ಪೂಜಿಸುವೆನೆಂದಳು ಹರುಷದಿಂದ॥4॥ ನೆನೆಅಕ್ಕಿ ನೆನೆಗಡಲೆ ಗೊನೆಯ ಬಾಳೆಹಣ್ಣು ಘನವಾದ ಚಿಗುಳಿ ತಂಬಿಟ್ಟುಗಳನು। ಅರಳು ಹುರಿಗಡಲೆ ಹುಣಸೆಕಾಯಿ ಮೊದಲಾದ ಗರಳಗೆ ತೊಗೊಂಡು ತೆರಳಿ ಬಹೆನು॥5॥ ಹಳ್ಳದಲಿ ಮೈ ತೊಳೆದು ಮಿಂದು ಮಡಿಯನೆ ಉಟ್ಟು ಚಂದದಲಿ ಅರ್ಘ್ಯ ಪಾದ್ಯವನೆ ಬಿಟ್ಟು। ಅಂದು ಅಕಮಂಚಿಯು ಅತಿ ಭಕ್ತಿಯಿಂದಲಿ ಕಾಳಿಂಗರೊಡನೆ ಪೂಜಿಸುತ್ತಿದ್ದಳು॥6॥ ಹಳದಿಯಾ ವಸ್ತ್ರವು ಬಿಳಿಯ ಜನಿವಾರವು ಹೊಳೆವ ಮುತ್ತಿನ ಹಣಿಗೆ ಗಂಧಾಕ್ಷತೆ। ಹಳದಿಯಾ ಅಕ್ಷತೆ ಬಿಳಿಪುಷ್ಪವರ್ಪಿಸಿ ಬೆಳಗಿದಳೆ ಧೂಪದೀಪಾರತಿ॥7॥ ಹುತ್ತದಾ ಮಣ್ಣು ಹುಳಿಕಡ್ಡಿ ಕಾರಿಕಾಯಿ ಅಕ್ಷತೆಯ ತಂದು ಗರಳಗೆ ತಳೆಯಲು। ಎಚ್ಚತ್ತು ಮೈಮರೆತು ಎಷ್ಟೊತ್ತು ಮಲಗಿದೆನೆಂದು ತಟ್ಟನೇ ಮೈಮುರಿದು ಎದ್ದು ಕುಳಿತ॥8॥ ಮಂಡಲೋದ್ಧಾರಗೇ ಪುಂಡರೀಕಾಕ್ಷಗೆ ಮಂಡೇಲಿ ಶ್ರೀಜಗವ ಧರಿಸಿದವಗೆ। ತಂಡತಂಡದಿ ವೇದ ಘೋಷಣೆಯ ಪೊಗಳುವ ಉದ್ದಂಡ ಮೂರುತಿಗೆ ಜಯಜಯ ವೆಂದಳು॥9॥ ಎದ್ದ ಅಣ್ಣನನು ಭದ್ರೆ ತಾ ನೊಡಗೊಂಡು ಶುದ್ಧ ಬುದ್ಧಿಯಿಂದ ಮನೆಗೆ ಬರಲು । ಸುಬ್ಬರಾಯನು ತಾನು ವೃದ್ಧಬ್ರಾಹ್ಮಣನಾಗಿ ಅಲ್ಲಿದ್ದ ಅಕ್ಮಂಚಿ ಮನೆಗೆ ಬಂದ॥10॥ ಕಡುಬು ಕಂಟಕಿ ಫಲವು ಒಡೆದ ತೆಂಗಿನಕಾಯಿ ಕಡು ರುಚಿಯಾದ ಶಾಲ್ಯಾನ್ನ ಘೃತವು। ಪರಿಪರಿಯ ಭಕ್ಷ್ಯಗಳ ಹಲವ ಸಮರ್ಪಿಸಿ ತನಿಯನೇ ಎರೆದು ವೀಳ್ಯವನಿತ್ತಳು॥11॥ ಹರಿಗೆ ಹಾಸಿಗೆಯಾದೆ ಹರಗೆ ಕುಂಡಲವಾದೆ ಹರಿಯೆ ಜೈಸುವ ಸಮರ್ಥ್ಯನಾದೆ। ಕರುಣೆಯಿಂದ ಭಜಿಸಲು ಕರೆದು ವರಗಳ ಕೊಡುವ ಕರಿಕಂಠ ನಿಮಗೆ ಜಯಜಯವೆಂದಳು॥12॥ಈ ನೋಹಿನೋತವರಿಗೇನು ಪುಣ್ಯದ ಫಲ ಆರೋಗ್ಯಮಸ್ತು ಐಶ್ವರ್ಯಮಸ್ತು ವಾಲೆಸೌಭಾಗ್ಯವನಿತ್ತು। ಒಡಹುಟ್ಟಿದಣ್ಣ ತಮ್ಮಂದಿರಾ ಕಾಳಿಂಗನೇ ರಕ್ಷಿಸು ಎಂದಳು॥13॥ ಈ ನರಲೋಕದೊಳುಳ್ಳ ನಾರಿಯಾರೆಲ್ಲರೂ ಈ ವ್ರತವ ಶೀಘ್ರದಿಂದ ಮಾಡಿದರೆ। ಓಲೆ ಸಂಪತ್ತು ಒಡ ಹುಟ್ಟಿದವರನು ಕರುಣಿಪ ನೆಂದರು॥14॥

ಹುತ್ತದ ಸುಬ್ರಾಯನಿಗೆ (ಆರತಿ) ರಾಗ: ಹಂಸಧ್ವನಿ

ಹುತ್ತದ ಸುಬ್ರಾಯನಿಗೆ ಹುತ್ತದಾ ನಾಗೇಂದ್ರನಿಗೆ। ಎತ್ತೆತ್ತಿ ಹೆಡೆಯ ಬಿಡುವೋಗೆ। ಬಿಡುವೋ ಸುಬ್ರಾಯನಿಗೆ ಮುತ್ತಿನಾರುತಿಯ ಬೆಳಗಿರೆ॥1॥ ಚಿನ್ನದ ಸುಬ್ರಾಯನಿಗೆ। ಹೊನ್ನಿನ ನಾಗೇಂದ್ರನಿಗೆ। ಒಮ್ಮೊಮ್ಮೆ ಹೆಡೆಯ ಬಿಡುವೋಗೆ। ಬಿಡುವೋ ಸುಬ್ರಾಯನಿಗೆ। ಹೊನ್ನಿನಾರುತಿಯಾ ಬೆಳಗಿರಿ॥2॥ ಹವಳದ ಸುಬ್ರಾಯನಿಗೆ। ಹವಳದಾ ನಾಗೇಂದ್ರನಿಗೆ। ಒಲಿದೊಲಿದು ಹೆಡೆಯಾ ಬಿಡುವೋಗೆ। ಬಿಡುವೋ ಸುಬ್ರಾಯನಿಗೆ ಹವಳದಾರುತಿಯಾ ಬೆಳಗಿರೆ॥3॥

ಜೋ ಜೋ ಫಣಿ ಭೂಷಣನೆ (ಲಾಲಿ) ರಾಗ: ಆನಂದಭೈರವಿ-ಛಾಪುತಾಳ

ಜೋ ಜೋ ಜೋ ಜೋ ಫಣಿ ಭೂಷಣನೆ। ಹೆಡೆಯ ರೂಪದಿ ಮಲಗು ಭಕ್ತರ ನಿಧಿಯೆ॥ಪ॥ ಕೆತ್ತನೆ ಕೆತ್ತಿದ ನಾಗಹಂಸದ ಮಂಚ। ಮೆತ್ತನೆ ಸುಪ್ಪತ್ತಿಗೆ ಹಾಸಿಗೆಯಲ್ಲಿ। ಕುಕ್ಕುಟ ಧ್ವಜ ರಾಜ ಒಲವಿನ ರೂಪ। ಹೆಡೆಯ ರೂಪದಿ ನೀನು ಹಾಯಾಗಿ ಮಲಗು॥1॥ ಹುತ್ತದಲ್ಲಿ ಮೃತ್ತಿಕೆ ಹಾಸಿಗೆ ಮೇಲೆ। ಸದ್ದುಗದ್ದಲವಿಲ್ಲದೆ ಮಲಗೂ ಕುಕ್ಕೆಸ್ವಾಮಿ। ಭಕ್ತರು ಘಂಟೆಯ ನಾದವ ಮಾಡುತ್ತಾ। ಹಾಲೆರೆದು ಮೃತ್ತಿಕೆ ಧರಿಸಿ ಪಾಡಿ ತೂಗುವರು॥2॥

ಏರು ಮಯಿಲೇರಿ ವಿಳೆಯಾಡುಂ (ತಮಿಳು-ಲಾಲಿ) ರಾಗ: ಕುರಂಜಿ

ಏರು ಮಯಿಲೇರಿ ವಿಳೆಯಾಡುಂ ಮುಗಂ ಒನ್ರೇ। ಈಶನುಡನ್ ಜ್ಞಾನಮೊಳಿ ಪೇಸುಮುಗಂ ಒನ್ರೇ॥ಲಾಲಿ॥ ಕೂರುಂ ಅಡಿಯಾರ್‌ಗಳ್ ವಿನ್ಯೈತ್ತೀರ್ತಮುಗಂ ಒನ್ರೇ। ಕುನ್ರುರುವರ್ ವೇಲ್‌ವಾಂಗಿ ನಿನ್ರುಮುಗಂ ಒನ್ರೇ॥ಲಾಲಿ॥ ಮಾರು ಪಡುಸೂರರೈ ವದೈತ್ತಮುಗಂ ಒನ್ರೇ। ವಳ್ಳಿಯೈ ಮಣಂಪಿರಯವಂದಮುಗಂ ಒನ್ರೇ॥ಲಾಲಿ॥ ಆರುಮುಗಮಾನ ಪೊರುಳ್ ನೀ ಅರುಳ ವೇಂಡುಂ। ಆದಿ ಅರುಣಾಚಲಂ ಅಮರ್ಂದ ಪೆರುಮಾಳೆ॥ಲಾಲಿ॥

❖ ❖ ❖

28. ಶ್ರಾವಣ ಸಂಪತ್ ಶುಕ್ರವಾರದ ಲಕ್ಷ್ಮೀಪೂಜೆ

ಭಾಗ್ಯದ ಲಕ್ಷ್ಮೀ ಬಾರಮ್ಮ ರಾಗ: ಮಧ್ಯಮಾವತಿ-ಆದಿತಾಳ

ಭಾಗ್ಯದ ಲಕ್ಷ್ಮೀ ಬಾರಮ್ಮ ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮ॥ಪ॥ ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ। ಗೆಜ್ಜೆಯ ಕಾಲಿನ ನಾದವ ತೋರುತ। ಸಜ್ಜನ ಸಾಧು ಪೂಜೆಯ ವೇಳೆಗೆ। ಮಜ್ಜಿಗೆಯೊಳಗಿನ ಬೆಣ್ಣೆಯಂದದಿ॥1॥ ಕನಕವೃಷ್ಟಿಯ ಕರೆಯುತ ಬಾರೆ। ಮನಕಾಮನೆಯ ಸಿದ್ಧಿಯ ತೋರೆ। ದಿನಕರ ಕೋಟಿ ತೇಜದಿ ಪೊಳೆಯುವ। ಜನಕರಾಯನ ಕುಮಾರಿ ಬೇಗ॥2॥ ಶಂಕೆಯಿಲ್ಲದ ಭಾಗ್ಯವ ಕೊಟ್ಟು। ಕಂಕಣ ಕೈಯ ತಿರುಹುತ ಬಾರೆ। ಕುಂಕುಮಾಂಕಿತೆ ಪಂಕಜಲೋಚನೆ। ವೆಂಕಟರಮಣನ ಬಿಂಕದ ರಾಣಿ॥3॥ ಅತ್ತಿತ್ತಗಲದೆ ಭಕ್ತರ ಮನೆಯೊಳು। ನಿತ್ಯ ಮಹೋತ್ಸವ ನಿತ್ಯ ಸುಮಂಗಳ। ಸತ್ಯವ ತೋರುತ ಸಾಧು ಸಜ್ಜನರ। ಚಿತ್ತದಿ ಹೊಳೆಯುವ ಪುತ್ಥಳಿ ಬೊಂಬೆ॥4॥ ಸಕ್ಕರೆ ತುಪ್ಪ ಕಾಲುವೆ ಹರಿಸಿ। ಶುಕ್ರವಾರದ ಪೂಜೆಯ ವೇಳೆಗೆ। ಅಕ್ಕರೆಯುಳ್ಳ ಅಳಗಿರಿರಂಗನ। ಚೊಕ್ಕ ಪುರಂದರವಿಠಲನ ರಾಣಿ॥5॥

ಭಾಗ್ಯಲಕ್ಷ್ಮೀ ನೀ ಬಾರಮ್ಮ ರಾಗ: ಶ್ರೀ

ಭಾಗ್ಯಲಕ್ಷ್ಮೀ ನೀ ಬಾರಮ್ಮ ಸೌಭಾಗ್ಯ ನೀಡಿ ನೀ ಸಲಹಮ್ಮ॥ಪ॥ ಶ್ರೀಕರಿ ಶುಭಕರಿ ಲೋಕೇಶ್ವರಿಯೆ ಶೋಕ ದಾರಿದ್ರ್ಯ ವಿನಾಶಿನಿಯೆ। ಶ್ರೀ ಕಟಾಕ್ಷದಿ ಈಕ್ಷಿಸು ಮಾತೆಯೆ ಶ್ರೀಕರ ಪಾದವ ಅರ್ಚಿಸುವೆ॥1॥ ಶುಕ್ರವಾರದೀ ಶುಭವೇಳೆಯಲಿ ಭಕ್ತಿಭಾವದಿಂ ಅರ್ಚಿಸುವೆ। ಭಕ್ತರಕ್ಷೆ ಶ್ರೀ ಕೃಷ್ಣನ ಮಡದಿಯೆ ಶ್ರೀಕರ ಪಾದವ ಅರ್ಚಿಸುವೆ॥2॥

ಬಾರಮ್ಮ ಭಾಗ್ಯ ನಿಧಿಯೇ ರಾಗ: ಮಧ್ಯಮಾವತಿ

ಬಾರಮ್ಮ ಭಾಗ್ಯ ನಿಧಿಯೇ। ಭಾಗ್ಯಾದ ಲಕ್ಷ್ಮಿ ಬಾರೆ॥ಪ॥ ಕಮಲದದಲ್ಲಿ ಜನಿಸಿ ಕಮಲಾಕ್ಷಿ ಎಂದೆನಿಸಿ। ಕಸ್ತೂರಿ ತಿಲಕವ ಇರಿಸಿ ಭಕ್ತರ ಕಷ್ಟವ ಹರಿಸಿ॥1॥ ಮುತ್ತಿನ ಮಂಟಪ ರಚಿಸಿ। ಆರ್ತಿಯಿಂದಲಿ ಕರೆವೆ ನಾ। ಅಂಬುಜಾಕ್ಷಿಯೆ ನೀ ಬಾರೇ। ಕ್ಷೀರಸಾಗರ ತನಯೆ॥2॥ ನೀನಿರುವಾ ಸ್ಥಳವೆಲ್ಲಾ ವೈಕುಂಠಕೆ ಸಮನಮ್ಮ। ನಿಮ್ಮಯ ಸೇವೆಯೊಳಿರುವಾ ಜನರೇ ಧನ್ಯರು॥ ತಾಯೆ॥3॥

ಶುಕ್ರವಾರ ಬಂದಾಗ ರಾಗ: ಮಧ್ಯಮಾವತಿ

ಶುಕ್ರವಾರ ಬಂದಾಗ ಶುಭದ ಶಕುನ ತಂದಾಗ। ಶುಭ್ರಮನದಿ ಪೂಜಿಸಿದಾಗ ಒಲಿವಳಮ್ಮ ಭಾಗ್ಯಲಕ್ಷ್ಮೀ॥ಪ॥ ಮನೆಯ ತುಂಬ ಮಕ್ಕಳು ಬೇಕೆ। ಕೊಡುವಳಮ್ಮ ಸಂತಾನ ಲಕ್ಷ್ಮೀ। ದಾರಿದ್ರ್ಯವ ನೀಗಬೇಕೇ। ಧನ ಕೊಡುವಳು ಧನಲಕ್ಷ್ಮೀ॥1॥ ಜ್ಞಾನಜ್ಯೋತಿ ಬೆಳಗಲು ಬೇಕೇ। ವಿದ್ಯೆತರುವ ವಿದ್ಯಾಲಕ್ಷ್ಮೀ। ಕೊಟ್ಟ ಕೆಲಸ ಕೈಗೂಡಬೇಕೇ। ಜಯ ತರುವಳು ವಿಜಯಲಕ್ಷ್ಮೀ॥2॥ ಮನೆಯ ಕಣಜ ತುಂಬ ಬೇಕೇ। ಕೊಡುವಳಮ್ಮ ಧಾನ್ಯಲಕ್ಷ್ಮೀ। ಇಟ್ಟ ಹೆಜ್ಜೆ ಮುಂದಿಡಬೇಕೇ। ಧೈರ್ಯವ ಕೊಡುವಳು ಧೈರ್ಯಲಕ್ಷ್ಮೀ॥3॥ ಅರಿಶಿನ ಕುಂಕುಮವನು ಬೆಳಸಿ। ನಲಿವಳಮ್ಮ ಆದಿಲಕ್ಷ್ಮೀ। ಮಂಗಳೆಯರ ಮನಸಿಗೆ। ಹರುಷ ತರುವ ಮಹಾಲಕ್ಷ್ಮೀ॥4॥

ಶೃಂಗಾರವಾಗಿಹಳು ಶ್ರೀಮಹಾಲಕ್ಷ್ಮೀ **ರಾಗ : ಕಾಂಬೋಜಿ-ಝಂಪೆತಾಳ**

ಶೃಂಗಾರವಾಗಿಹಳು ಶ್ರೀ ಮಹಾಲಕ್ಷ್ಮೀ। ಬಂಗಾರದಾ ಮಂಟಪದಿ ಬಂದು ಕುಳಿತಿಹಳು॥ಪ॥ ತಾವರೆಯ ಕಮಲದೊಳು ತಾ ಬಂದು ಜನಿಸಿಹಳು। ಭಾನುಕೋಟಿ ಪ್ರಭೆಯಂತೆ ಹೊಳೆಯುತಿಹಳು। ಜರಿಯ ಸೀರೆಯನುಟ್ಟು ಜರಿಯ ಕುಬುಸವ ತೊಟ್ಟು। ನಡೆಮುಡಿಯ ಮೇಲೆ ನಡೆದು ಬರುತಿಹಳು॥1॥ ಎಡಬಲದಿ ಗಜಲಕ್ಷ್ಮೀ ನಡುವೆ ತಾವರೆಲಕ್ಷ್ಮೀ। ಥಳಥಳನೆ ಹೊಳೆಯುತಿಹ ಶ್ರೀ ಮಹಾಲಕ್ಷ್ಮೀ। ಬಡವರಾದವರನ್ನು ಬಿಡದೆ ಪೊರೆಯುವಲಕ್ಷ್ಮೀ। ಸಡಗರದಿ ಬರುತಿಹಳು ಶ್ರೀ ಮಹಾಲಕ್ಷ್ಮೀ॥2॥ ಶುಕ್ರವಾರದ ದಿನದಿ ಆರ್ಕೈಯಿಂದಾಡುವಳು। ಭಕ್ತರಿಗೆ ಬೇಡಿದ ವರವ ಕೊಡುತಿಹಳು। ಅರ್ಥಿಯಿಂದಲಿ ಪೊಗಳುವಾ ಭಕ್ತರಿಗೆ। ಅಷ್ಟಸೌಭಾಗ್ಯವನು ಕೊಡುತಿಹಳು ಲಕ್ಷ್ಮೀ॥3॥ ಶ್ರಾವಣ ಮಾಸದಲಿ ಪ್ರೇಮದಿಂದಲಿ ಲಕ್ಷ್ಮೀ। ತಾನೊಲಿದು ಬರುತಿಹಳು ಮನೆಮನೆಗೆ। ಪ್ರೇಮದಿಂದಲಿ ಪೊಗಳುವಾ ಭಕ್ತರಿಗೆ। ಮಂಗಳ ಸೌಭಾಗ್ಯವನು ಕೊಡುತಿಹಳು ಲಕ್ಷ್ಮೀ॥4॥ ನರಸಿಂಹ ವಿಠಲನಾ ಹರಸಿ ಸ್ವೀಕರಿಸಮ್ಮ। ಸರಸವಾಡುತಲೊಮ್ಮೆ ಸಲಹು ಮಾತೆ। ಮಾಡಿದಪರಾಧವನು ಮನದಿ ಎಣಿಸದೆ ನೀನು। ಕಾಪಾಡಬೇಕೆಂದು ಪಾದಕೆ ಎರಗುವೆನು॥5॥

ಶ್ರೀ ಮಹಾಲಕ್ಷ್ಮೀ ರಾವಮ್ಮ ರಾಗ: ಶ್ರೀ-ರೂಪಕತಾಳ

ಶ್ರೀ ಮಹಾಲಕ್ಷ್ಮೀ ರಾವಮ್ಮ ಕ್ಷೀರಾಬ್ಧಿಶಯನಕು ಸೇವಲುಚೇಸಿತಿವಮ್ಮ॥ಪ॥ ಸ್ತ್ರೀಲಂದರೂ ವಾಕಿಟಲೊ ದೀಪಾಲು ವೆಲಗಿಂಚಿ। ನೀ ಸೇವ ಚೇಯುಟಕು ಕಾಚಿಯುನ್ನಾರಮ್ಮ। ಪಟ್ಟು ಚೀರ ರವಿಕೆ ತೊಡಗಿ ನಡುಮುಕು ಡಾಬುವೇಕಿ ವಂಕಿನಾಗೊತ್ತುಲು ಕಾಸಲು ದಂಡಲುವೇಸಿ। ನುದಿಟ ಕುಂಕುಮ ಬೊಟ್ಟು ಪಾಪಡಿ ಬಟ್ಟುವೇಸಿ। ಮಿರ ಮಿರ ಮೆರಪುಲತೋ ಅಂದಮುಲು ಕಲಗಿಂಚಿತಿವಮ್ಮ ಶ್ರೀ ಮಹಾಲಕ್ಷ್ಮೀ॥1॥ ಸಂಪತ್ತು ಶುಕ್ರವಾರಮುಲು ಭಕ್ತುಲಿಂಟಿಕಿ ವಚ್ಚಿ। ಶುಭಮುಲು ಕಲಗಿಂಚಿ ದೀವಿಂಚವಮ್ಮ। ಮಲ್ಲಲು ಜಾಜುಲು ಭಕ್ಷ್ಯಭೋಜ್ಯಾಲು ತೆಚ್ಚಿ। ನಿನ್ನು ಪುಚ್ಚುಕೋಮನಿ ವೇಡುಚುನ್ನಾರಮ್ಮ। ಎಲ್ಲ ಕಾಲಮುಲೋನು ಪಸುಪು ಕುಂಕುಮತೋನು। ಪಚ್ಚಗ ಉಂಡಾಲನಿ ದೀವಿಂಚವಮ್ಮ॥2॥

ಹರನ ಕುಮಾರನ ಚರಣ (ಶ್ರಾವಣ 5 ಶುಕ್ರವಾರದ ಲಕ್ಷ್ಮೀಯ ಹಾಡು)

ಹರನ ಕುಮಾರನ ಚರಣ ಕಮಲಕ್ಕೆ ಗಳಿಗೆರೆಗಿ। ಶಾರದೆಗೆ ವಂದಿಸುವೆ। ಶರಧಿ ಶಯನನಿಗೆ ಶಿರಗೊಡ್ಡಿ ಬೇಡುವೆ। ಶರಧಿಸುತರ ಕಥೆಯೊರವೆ (ಪೇಳುವೆ) ಸಾಕ್ಷಾತ್ ಶ್ರೀಹರಿವಕ್ಷಸ್ಥಳವಾಸಿಯೇ। ಇಕ್ಷುಕ್ಷೇಪಣನನ್ನೇ ಪಡೆದ। ಮೋಕ್ಷದಾಯಕಳೆ ಶ್ರೀಲಕ್ಷ್ಮೀಯೆ ಕರುಣಾಕಟಾಕ್ಷದಿ ನೋಡಬೇಕೆನ್ನ॥ ಶ್ರಾವಣಮಾಸದ ಮೊದಲ ಶುಕ್ರವಾರ। ಮಾಧವನರಸಿ ಮಹಾಲಕ್ಷ್ಮೀ। ದೇವಿಯ ಮಹಿಮೆ ಕೊಂಡಾಡುವುದೀಕಥೆ। ಕೇಳುವುದು ಕಿವಿಗೊಟ್ಟು ಜನರು॥ ಇರುತಿರಲೊಂದು ಪಟ್ಟಣದೊಳು ಬ್ರಾಹ್ಮಣ ಮಡದಿಮಕ್ಕಳು ಸರಿತಾಗಿ। ಹಿಡಿದು ತಂಬೂರಿ ತಂಬಿಗೆಯ ಗೋಪಾಳಕ್ಕೆ ಬಿಡದೈಯ್ದು ಮನೆ ತಿರುಗುತಲಿ॥ ಸೊಸೆಯರು ನಾಲ್ಕು ಮಂದಿಯು ಗಂಡು ಮಕ್ಕಳು। ಹಸುಗೂಸುಗಳು ಮನೆತುಂಬ। ಅಶನ ವಸನಕ್ಕಿಲ್ಲ ಹಸಿದ ಮಕ್ಕಳಿಗ್ಹಾಲು ಮೊಸರು ಅನ್ನವು ಮೊದಲಿಲ್ಲ॥ ಅತಿ ಗುಣವಂತರು ಗತಿಯಿಲ್ಲ ಗ್ರಾಸಕ್ಕೆ। ಮಿತಭೋಜನವ ಮಾಡುವುದು। ವ್ರತನೇಮ ನಿಷ್ಠೆ ನಿರತ ದರಿದ್ರನನ್ನು ಶ್ರೀಪತಿ ಸತಿ ದಯದಿ ನೋಡುವಳು॥ ಒಂದು ದಿನ ಮಂದಿರದಲ್ಲಿ ಚಂದದಿ ಸುಣ್ಣ ಸಾರಣೆಯು ರಂಗವಲ್ಲಿಯ ಚಿತ್ರ ಬಣ್ಣ ಕಾರಣೆ ಮಾಡಿ। ಮುಂದೆ ತೋರಣ ಕಟ್ಟುತಿಹರು॥ ಮನೆಮನೆಯಲ್ಲಿ ಮಹಾಲಕ್ಷ್ಮೀ ದೇವಿಯರ ಪಟವ ಬರೆಯುವುದನೆ ತಾ ಕಂಡು। ಇದು ಏನು ನೋಹಿ (ವ್ರತ) ಎನಗೆ ಹೇಳಬೇಕೆಂದು। ದೃಢಭಕ್ತಿಯಿಂದ ಕೇಳಿದನು॥ ಕ್ಷೀರಸಾಗರದಲ್ಲಿ ಹುಟ್ಟಿದ ಮಹಾಲಕ್ಷ್ಮೀ ದೇವಿ ದೇವರ ಪಟ್ಟದರಸಿ। ಶ್ರಾವಣ ಸಂಪತ್ತು ಶುಕ್ರವಾರ ನಾವು ಪೂಜೆಯ ಮಾಡಬೇಕು॥ ಎನಗೊಂದು ಪಟವ ಬರೆದು ಕೊಟ್ಟರೆ ನಮ್ಮ। ಮನೆಯೊಳಗಿಟ್ಟು ಪೂಜಿಪೆನು। ವಿನಯದಿಂದ ಹೇಳಿಕೊಂಡರೆ ಒಂದು ಪಟವನ್ನು ಬರೆದು ಕೊಟ್ಟರು ಬಲಗೈಲಿ॥ ಸಿರಿದೇವಿ ಪಟವ ಹಿಡಿದು ಗೋಪಾಳಕ್ಕೆ। ಹೋದನು ಮನೆಮನೆಯಲ್ಲಿ। ಗೋಧಿ ಅಕ್ಕಿ ಬೇಳೆ ಬೆಲ್ಲ ತುಪ್ಪವ ತಂದು। ನಿಂತಾರು ಹಿಡಿ ಹಿಡಿರೆನುತ॥ ತಂದ ಪದಾರ್ಥ ತನ್ನೆಂಡತಿ ಕರೆದು। ಮುಂದಿಟ್ಟು ವಾರ್ತೆಯನು ಹೇಳಿದನು। ಇಂದಿರಾದೇವಿ ಹಾಗೆಂದು ಪೂಜೆಯಮಾಡೆ। ಆನಂದ ಕೊಡುವಳು ನಮಗೆ॥ ಕಬ್ಬು ಬಿಲ್ಲೊಡೆವ ಕಾಮನ ಮಾತೆ ಮಹಾಲಕ್ಷ್ಮೀ। ಊರ್ವಿಯೊಳ್ ಉತ್ತಮಳೀಕೆ। ಹಬ್ಬದೂಟಕೆ ಬಂದ ಬ್ರಾಹ್ಮಣರಿಗೆ। ಮತ್ತೊಬ್ಬ ಮುತ್ತೈದೆಗ್ಹೇಳೆಂದ॥ ಚಿಕ್ಕ ಸೊಸೆಯು ಎಣ್ಣೆ ಕೈಯಲ್ಲಿ ಕುಂಕುಮ

ತಕ್ಕೊಂಡು ನಡೆದಳ್ಹಾದಿಯಲಿ। ಚಿಕ್ಕ ಚಿನ್ನದ ಗೊಂಬೆಯೆಂತಿದ್ದ ಮುತ್ತೈದೆ ಘಕ್ಕನೆ ಬಂದು ಕೇಳಿದಳು।। ಹುಡುಗಿ ನೀನೆತ್ತ ಪೋಗುವಿ ನಿಮ್ಮ ಮನೆಯಲ್ಲಿ। ಅಡಿಗೆ ಏನೇನುಮಾಡುವಿರೆ। ಹಿಡಿದೆಣ್ಣೆ ಕುಂಕುಮ ಕೊಡುವಿದಿನ್ಯಾರಿಗೆ। ಕೊಡಬಾರದೇನೇ ನೀನೆನಗೆ।। ಯಾರಾದರೇನಮ್ಮ ನಾರಿ ನೋಡದೆ ಮುಂಚೆ ನೀನೇ ಬಾ ನಮ್ಮ ಮಂದಿರಕೆ। ಹೇಳಿ ಮುತ್ತೈದೆಗೆ ಹಿಗ್ಗಿದಳ್। ಅತ್ತೆ ಮಾವನ ಮುಂದರುಹಿದಳು।। ಮನೆಯ ಸಾರಿಸಿ ಸುಣ್ಣ ಸಾರಣೆ ರಂಗೋಲೆಯ ಬರೆದು ಬಾಗಿಲಿಗೆ ಬಣ್ಣವನು। ತಳಿರು ತೋರಣ ಕಟ್ಟಿ ಸರ್ವರು ಸಂಭ್ರಮದಿಂದ ಎರೆದುಕೊಂಡರೆಲ್ಲರು ಬೇಗ।। ಕಮಲ ಕೇದಿಗೆ ಕಬ್ಬು ಕದಳಿಕಂಬ ಬಾಳೆಗೊನೆ ಕಟ್ಟಿ ಚಿತ್ರ ಮಂಟಪವು। ಎಡಬಲದಲ್ಲಿ ನಾಲ್ಕು ನಂದಾದೀವಿಗೆ ಹಚ್ಚಿ ನಡುವೆ ಶ್ರೀಪದ್ಮ ಪೀಠಗಳು।। ಚಟ್ಟಿಗೆ ಒಳಗ್ಹಾಕಿ ಐದು ಫಲಗಳ ತುಂಬಿ ಮುತ್ತೈದೆರೆಲ್ಲ ನೆರೆದು। ಕಟ್ಟಿದರು ತೋರಣ ಮಾಂಗಲ್ಯ ಮಹಲಕ್ಷ್ಮೀಗೆ ಪ್ರತಿಷ್ಠೆ ಮಾಡಿದರು ಸಂಭ್ರಮದಿ।। ಅರಿಷಿಣ ಕುಂಕುಮ ಗಂಧ ಬುಕ್ಕಿಟ್ಟು ಗೆಜ್ಜೆ ವಸ್ತ್ರ ಪಾರಿಜಾತ ಸಂಪಿಗೆಯ। ಮುಡಿಸಿ ಮಲ್ಲಿಗೆ ದಂಡೆ ಒಡಿಸಿ ತೆಂಗಿನಕಾಯಿ ಉಡಿತುಂಬುತ್ತಿತ್ತಿ ಫಲಗಳು।। ಭಕ್ಷ ಶಾವಿಗೆ ಪರಮಾನ್ನ ಚಿತ್ರಾನ್ನ ಸಣ್ಣಕ್ಕಿ ಶಾಲ್ಯಾನ್ನ ಸೂಪಗಳು। ಚಕ್ಕುಲಿ ಗಿಲಗಂಜಿ ಚಂದುಬ್ಬೇರುವ। ಹಪ್ಪಳ ಸಂಡಿಗೆ ಅಂಬೋಡೆಗಳು।। ಸಕ್ಕರೆ ಘೃತಕ್ಷೀರ ಸಕಲ ಪಕ್ವಾನ್ನ। ಮಂಡಿಗೆ ಬೀಸೋರಿಗೆ ಗುಳ್ಳೋರಿಗೆಗಳು। ಚಂದ್ರನಂತ್ಹೊಳೆವ ಶಾವಿಗೆ ಫೇಣೀ। ಆ ದಿವ್ಯ ಬುಂದೆ ಬುರಬುರಿ ಅನ್ನ ರಸಗಳು।। ಬೇಕಾದ ಬೇಸನ್ನ ಬಿಳಿಯದಳೆದುಂಡಿ। ಮೋತಿ ಚೂರಪು ಚೂರ್ನ ಲಾಡು। ಸೇತೂಟಕ ಬಿಳುಪಿನಂತೆ ಜಿಲೇಬಿ। ಸುಖಿನುಂಡೆ ಮುಖವಿಲಾಸಗಳು। ಹೋಳಿಗೆಣ್ಣೋರಿಗೆ ಹೊಯ್ದೋಸೆ ಆಹಾರ ತೈಲದಿ ಕರಿದ್ಹೂರಣ ಕಡುಬು। ಸುರುಳಿ ಹೋಳಿಗೆ ಉದ್ದಿನಬೇಳೆ ಮೆಣಸಿನಕಾಯಿ। ಇಂಗಿನಿದೊಪ್ಪುವ ಕಡುಬು।। ಸಾರು ಸಾಂಬಾರ ಸಾಸುವೆ ಕಾಯಿಪಲ್ಯದ ಉಪ್ಪೇರಿ ಉಪ್ಪಿನಕಾಯಿ ರಸವು। ಖೀರು ಮಾಲತಿ ಗವಲಿ ಪಾಯಸ ಪರಮಾನ್ನ। ಮುಚ್ಚೋರೆ ಚಟ್ನಿ ಕೋಸಂಬ್ರಿಗಳು।।25।। ಹಾಗಲಕಾಯಿ ಸವತೆ ಹಂತರದವರೆ ಹೀರೆ ಬಾಳೆ ಬೆಂಡೆ ಕುಂಬಳವು। ಮಾಗಿದ್ದಲಸಿನಕಾಯಿ ಕಲಸು ಮೇಲೋಗರ। ಗೆಣಸು ಗುಳ್ಳದಕಾಯಿ ಬಜ್ಜಿಗಳು।। ನಿಂಬೆ ಭಾತು ಸೌತೆಭಾತು ಕೇಸರಿಭಾತು ಕೆನೆಕೆನೆ ಮೊಸರು ಒಗ್ಗರಣೆ। ಹಸಿಯಲ್ಲ ಬಿಸಿಹಾಲು ಹೊಸಬೆಣ್ಣೆ ಯಿಂದೊಪ್ಪುರ। ಕಲಸು ಬಾಕಳಾ ಭಾತುಗಳು। ಮುದ್ದು ಮಹಾಲಕ್ಷ್ಮೀಗೆ ನೈವೇದ್ಯಮಾಡಿದರು ಅನಿರುದ್ಧ ಮೂರ್ತಿ ಸಹಿತಾಗ। ಶುದ್ಧ ಸುಣ್ಣವು ಎಲೆ ಅಡಿಕೆ ಯಾಲಕ್ಕಿ ಪತ್ರೆಕಾಯಿ ಕಾಚು ಲವಂಗ। ಹಚ್ಚಿ ಕೊಂಡೆಲ್ಲರು ಅರಷಿಣ ಗಂಧ ಕುಂಕುಮ। ಛತ್ರ ಚಾಮರ ಬೀಸುತಲಿ। ಅಚ್ಯುತನರಸಿ ಅನುಗ್ರಹದಿ ನೋಡಿದಳ್। ಮೆಚ್ಚಿ ಮುಚ್ಚಿದ ಕಣ್ಣನು ತೆರೆದು।। ಅಮರಾದಿ ಸುರರೊಡೆಯನ ರಾಣಿ ಲಕ್ಷ್ಮೀಗೆ ಸರ್ವ ಸಮರ್ಪಣೆ ಮಾಡಿ। ನಮೋ ನಮೋ ಎಂದು ಕೈಮುಗಿದು ಮಂತ್ರಾಕ್ಷತೆ ಶಿರದಲ್ಲಿ ತೂರುತ್ತ ಬೇಡುವರು।। ಹಾಡುತ್ತ ಪಾಡುತ್ತ ಮಾಡುತ್ತಲಾರತಿ। ಬೇಡುತ್ತ ಮುಡಿದ ಮಲ್ಲಿಗೆಯ ನೋಡುತ್ತ ನಲಿನಲಿದಾಡುತ್ತ ತಾ ದಯಮಾಡುತ್ತ ಕೊಟ್ಟಳಾಗ ವರವ।। ಹೊತ್ತು ಬಹಳಾಯಿತು ಮುತ್ತೈದೆ ಬರಲಿಲ್ಲ ಮತ್ತೇನು ಇದಕೆ ಉಪಾಯ। ಅಷ್ಟು ಅಡಿಗೆಯ ಬಡಿಸಿ ಕುಂಕುಮ ವೀಳ್ಯವಿಟ್ಟು ಬುಟ್ಟಿಯನು ಮುಚ್ಚಿದರು।। ಗಂಡ ಹೆಂಡಿರು ಕೂಡಿ ಬ್ರಾಹ್ಮಣರೊಡಗೂಡಿ ಉಂಡು ವೀಳ್ಯವನೆ ತಕ್ಕೊಂಡು। ಇಂದು ಎನಗೆ ಜಯ ಶುಭಕಾಲ ಬಂದಿತು ಹೀಗೆಂದು ಸಂತೋಷ ಪಡುವರು।। ಮರುದಿನ ಸಂಪತ್ತು ಶನಿವಾರ ಹಿಟ್ಟಿನ ಕಡಬು ಗವಲಿ ಪರಮಾನ್ನ। ತಿಳಿಗಾಣದ ಒಳ್ಳೆಣ್ಣೆ ಹಿಂಡಿಯ ಪಲ್ಯವನೆ ಲಕ್ಷ್ಮೀಯ ಪೂಜೆ ಮಾಡಿಟ್ಟರು ನೈವೇದ್ಯವನು।। ಎರಡನೆ ಶುಕ್ರವಾರದ ದಿನ ಮುತ್ತೈದೆಗೆ ದೃಢವಾಗಿ ಹೇಳಿಬಾ ಎನುತ। ಎಣ್ಣೆಗೈಯ ಮುಚ್ಚಿ ಕೊಂಡೆಣ್ಣೆ ಕುಂಕುಮವನು ಹಿಡಿದಳ್ ಇನ್ನೊಂದು ಪಥವನು।। ಬಜಾರ ಬಿಟ್ಟು ಬದಲು ಮಾರ್ಗ ಹಿಡಿಯಲು ಹಾದಿಗೆ ಬಂದಡ್ಡ ಕಟ್ಟಿ। ಆದಿ ಶುಕ್ರವಾರ ಹೇಳಿ ಎನ್ನನೆ ಬಿಟ್ಟು ಯಾರಿಗೆ ಹೇಳುವೆ ಭೋಜನಕೆ।। ನಮ್ಮ ಗೊಡವೆಯಾತಕಮ್ಮ ನಿನಗೆ। ಸುಮ್ಮನೆ ಹೋಗು ಶುಕ್ರವಾರದಲ್ಲಿ। ನಿಮ್ಮ ಎಲೆಯ ಬಡಿಸಿ ಅಂದಿಗಂದಿಗೆ ಅದೇ ಉಣಬೇಕಾದ್ದು ಹೋಗಮ್ಮ।। ತಂಗಳೂಟಗಳುಂಬೋ ಕಂಗಾಳಿ ನಾನಲ್ಲ। ಬಂಗಾರದಂಥ ಮುತ್ತೈದೆ। ತಿಂಗಳಾಗಲಿ ಹಣ್ಣು ನೂಲು ಕಟ್ಟನ್ನೆಲ್ಲ ತಂಗಳ ನಿನಗುಣಿಸುವೆನು।। ಬಡಿವಾರ ಮಾತೇಕೆ ಬಡಿಸಿಟ್ಟೆಲೆಯನುಂಬೋ ಬಡವೆಯಲ್ಲ ನಾ ಭಾಗ್ಯವಂತೆ। ತಡೆಯದೆ ಬರುವೆನು ತಾ ಎಣ್ಣೆ ಕುಂಕುಮ ಹಿಡಿದು ಎಳೆದುಕೊಂಡು ನಡೆದಳು।। ಕೊಟ್ಟೆಣ್ಣೆ ಕುಂಕುಮ ಥಟ್ಟನೆ ನಡದಳು। ಅಷ್ಟೂ ವಾರ್ತೆಯನೆ ಹೇಳಿದಳು।। ಇಂಥಾ ಮುತ್ತೈದೆ ದೇಶದ ಮೇಲೆ ಕಾಣೆನೊ ಎಷ್ಟೋಳಲಾಕೆ ಚೆಲ್ವಿಕೆಯ।। ಸಿರಿದೇವಿಗೆ ಪೂಜೆ ನೈವೇದ್ಯಗಳಾದವು ಬಡಿದವು ಮೂರು ಗಂಟೆಗಳು। ಬರಲಿಲ್ಲ ಮುತ್ತೈದೆ ಎಂದೆಲ್ಲ ಬಡಿಸಿಟ್ಟು ಸರ್ವರೂಟವನೆ ಮಾಡಿದರು।। ಮೂರನೆ ಶುಕ್ರವಾರ ಮುತ್ತೈದೆಗೆ ಹೇಳುವುದು

ಮತ್ಯಾರೆಂದ್ವಿಚಾರ ಮಾಡುವರು। ಮಾವನವರೆ ಎನ್ನ ಮಾತನೋಡಿರೆಂದು ತಾನ್ಹೋದಳಿನ್ನೊಬ್ಬ ಸೊಸೆಯು।। ಮುಡಿ ಬಾಗಿ ಮುಚ್ಚಿಕೊಂಡೆಣ್ಣೆ ಕುಂಕುಮವನು ನಡೆದಳಿನ್ನೊಂದು ಓಣಿಯಲಿ। ಬಡಬಡ ಬಂದು ಕೈ ಹಿಡಿದೆಣ್ಣೆ ಕುಂಕುಮ ಕೊಡುವುದಿನ್ಯಾರಿ ಗೌತಣವ।। ಔತಣವಲ್ಲಮ್ಮ ಅತಿ ಬಡವರು ನಾವು ಗತಿಯಿಲ್ಲ ಲಕ್ಷ್ಮಿ ಹಬ್ಬಕ್ಕೆ। ಸುತರಾಡಕ್ಕೆ ಹೋಗ್ಯಾರೆ ಹುಡುಕುತ ಬಂದೇ ಪತಿ ಬೈಯುವರೆನ್ನ ಮನೆಯಲ್ಲಿ।। ಒಗವು ತನದ ಮಾತಿನ ಬಗೆ ನಾನು ಬಲ್ಲೆನೆ। ಹಗರಣಗಿತ್ತಿ ನೀನ್ನೌದೆ। ಎರಡು ಶುಕ್ರವಾರ ಹೇಳಿ ಎನ್ನನು ಬಿಟ್ಟು ಬದಲ ಮುತ್ತೈದೆಗ್ಹೇಳುವರೆ।। ಎರಡ್ವಾರ ಔತಣ ಹೇಳಿ ನೀ ಬರದೆ ಊಟವಾಯಿತು। ಬರಡಾಕಳ ಹೈನು ಉಂಡಂತೆ। ಕಡಲೆಹೂರಣ ಕರಿಗಡಬು ಕಾಸಿದ ಬೆಣ್ಣೆ। ಕಾಸಿದ ತುಪ್ಪವ ಬಡಿಸೆನಗೆ।। ಮೆಚ್ಚಿಕೊಂಡಾಕೆ ಮಾತಿಗೆ ಮರುಳಾಗಿ। ಹಚ್ಚಿ ಕುಂಕುಮ ಎಣ್ಣೆಕೊಟ್ಟು। ನಿಶ್ಚಯವೇನಮ್ಮ ನೀ ಬರುವುದು ಎನಲು। ಈ ಕ್ಷಣ ಬರುವೆನ್ಹೋಗೆಂದ್ಲು।। ಬಂದ್ಹೇಳಿದಳೆ ಅವಳಂದ ಚಂದದ ಮಾತ। ಒಂದೊಂದು ಅಡಿಗೆ ವರ್ಣಿಸುತ। ಇಂದೀಕೆ ಮನಕೆ ಬಂದಂಥ ಅಡಿಗೆ ಮಾಡೋಣೆಂದು ಸಂತುಷ ಪಡುವರು।। ಕಡಲೆ ಹೂರಣ ಕಸಕಸೆ ಕೊಬ್ಬರಿ ಯಾಲಕ್ಕಿ। ಹುಡಿ ದ್ರಾಕ್ಷಿಹಳಕು ಉತ್ತತ್ತಿ। ಕಲಸಿ ಕಲ್ಲುಸಕ್ಕರೆ ಕಡುಬನೆ ಮಾಡಿ। ಕಾಸಿದತುಪ್ಪವ ಸೋಸಿಲಿಂದಾ। ವರಲಕ್ಷ್ಮಿ ಪೂಜೆನೇವೇದ್ಯಗಳಾದುವು। ಬಡೆದಾವು ನಾಲ್ಕು ಗಂಟೆಗಳು। ಬರಲಿಲ್ಲಿ ಮುತ್ತೈದೆ ಎಂದೆಲೆ ಬಡಿಸಿಟ್ಟು। ಸರ್ವರೂಟವನೇ ಮಾಡಿದರು।। ಹುಟ್ಟಿದ ಮೇಲಿಂಥ ಕಡುಬು ತಿಂದದ್ದಿಲ್ಲ। ಹೊಟ್ಟೆತುಂಬ ಉಂಡವರು ನಾವಲ್ಲ। ಮುತ್ತೈದೆ ಪುಣ್ಯದಿಂದೀ ಊಟದೊರಕೀತೆಂದು। ಅಷ್ಟಾರು ಸಂತೋಷ ಪಡುವರು। ನಾಲ್ಕನೇ ವಾರ ನಾ ಹೇಳಿ ಬರುವೆನೆಂದು ಆಕೆ ಹೋದಳುಹಿರಿಮಗನರಸಿ। ಬೇಕಾದವರು ಬಂದು ಕಾಡಿದರೂಕೂಡ। ಯಾಕೆನಗೊಬ್ಬರ ಭಿಡೆಯು।। ದೊಡ್ಡ ಬಾಗಿಲ ಬಿಟ್ಟು ದಿಡ್ಡಿ ಬಾಗಿಲಮುಂದೆ। ಸದ್ದು ಮಾಡದೆ ಬರುತಿರಲು। ವಜ್ರದ ಗೊಂಬೆಯಂತ್ಹೊಳೆವ ಮುತ್ತೈದೆ। ನಿಂತಿದ್ದಳೆದುರಿಗೆ ಬಂದು।। ಸರ್ವರೊಳಗೆ ಹಿರಿಯ ಸೊಸೆಯು ನೀನೆಂಬಂಥ। ಗರ್ವ ಅಹಂಕಾರದಿ ನೀನು।। ಸರಿಯಾಗಿ ಮೂರು ವಾರ ಹೇಳಿಯನ್ನಗೆ ಬಿಟ್ಟು। ಕರೆಯದುಂಬುವ ಕಾರಣವೇನೆ।। ಕರಿಯಲಿಕ್ಕೆ ಬರಲಿಕ್ಕೆ ಕಾಣೆ ನಿಮ್ಮನೆ ನಾನು।ತಿರುಗುವೆ ನಾರದನಂತೆ। ಇರುವ ಮುಂದಿರವ ತೋರಿದರೀಗಾ ನಾ ನಿಮ್ಮ । ಕರೆದುಣಿಸುವೆ ನಿಮಗೆಂದಳು।। ದೂರುಂಟು ನಮ್ಮನೆ ದಾರಿ ಅಸಾಧ್ಯವು। ನೋಡಿ ಬಂದವರು ಯಾರಿಲ್ಲ। ಆಹಾರ ನಿದ್ರೆಸಂಸಾರ ಸಮುದ್ರವು ಮೀರಿದವರಿಗೆ ಕಾಂಬುವುದು।। ಆಗಾರದೊಳಗಿನ ಅರಗಿಳಿ ಮರನೇರಿ ಮಾಗಿದ ಫಲವು ಮೆದ್ದಂತೆ। ಬೇಗ ಬಂದೀಗ ನಿಮ್ಮನೆಯಲ್ಲೂಟವ ಮಾಡಿ ತೇಗುತ ತೃಪ್ತಳಾಗುವೆನು।। ಮಾಯಾದೇವಿಯ ಮಾಯಾಮಾತಿಗೆ ಮರುಳಾಗಿ ತಾ ಕೊಟ್ಟೆಳೆಣ್ಣೆ ನಾ ಹೋದ ಕಾರ್ಯಕ್ಕೆ ಕುಂಕುಮವ। ಮಾಗೋದು ಹಣ್ಣೆಂದು। ಹೇಳಿಕೊಂಡಳು ಶಿಫಾರಸ್ಸು।। ಸಿರಿದೇವಿ ಪೂಜೆ ನೇವೇದ್ಯಗಳಾದುವು। ಹೊರಗಾರುಗಂಟೆ ಬಡೆದವು। ಬರಿಯ ಬಾರಿಸುಮಾತಿನ ಜಾಣೆ ಮುತ್ತೈದೆ ಬರಲಿಲ್ಯಾಕೆಂದು ಕೇಳಿದರು।। ಅಷ್ಟು ಅಡಿಗೆ ಬಡಿಸಿಟ್ಟು ಕುಂಕುವ ವೀಳ್ಯವಿಟ್ಟು ಬುಟ್ಟಿಯನೆ ಮುಚ್ಚಿದರು। ಕರ್ಪೂರದಡಿಕೆ ತಾಂಬೂಲವ ಸವಿದು। ಅತ್ಯಂತ ಹರುಷವ ಪಡೆವರು।। ಬಂದಿತಾಗೈದನೇ ಶುಕ್ರವಾರ ಮುತ್ತೈದೆಗೆ। ಇಂದು ನೀ ಹೇಳಿಬಾಯೆನುತಾ। ಹೆಂಡತಿ ಕರೆದು ಹೇಳಿ ಕುಂಕುಮೆಣ್ಣೆ ತಕ್ಕೊಂಡು ತಾ ನಡೆದಳು ಬೇಗ।। ಬೀದಿ ಬಿಟ್ಟು ಬದಲ್ಹಾದಿಗೆ ಬಂದಳು। ಹಾದಿಗೆ ಬಂದಡ್ಡ ಕಟ್ಟಿ। ನೀ ದಯಮಾಡಿ ಬಂದೆಯೆನಗೌತಣ ಅದರಿಂದ್ಹೇಳುವುದಕ್ಕೆ।। ಜಪ್ಪಿಸಿ ಬಂದು ಔತಣವ ತಕ್ಕೊಂಡು ನೀ ತಪ್ಪಿಸಿಕೊಂಡು ಹೋಗುವರೆ। ಒಪ್ಪತ್ತಾದರೂ ಊಟ ಮಾಡದವರ ಮಾತು ಒಪ್ಪಿಕೊಂಬುವದ್ಹೇಗೆ ಹೇಳಮ್ಮ ।। ಬಂದ ಔತಣ ಗಂಡುಮಕ್ಕಳ ಭಾಗ್ಯ। ಒಲ್ಲೆಂಬರುಂಟೆ ಲೋಕದಲ್ಲಿ। ಕಂಡಲ್ಲೌತಣ ಹೇಳಿ ಕರೆಯದಿರುವುದೇ ಚಂದವೇ ನಿಮ್ಮ ನಡತೆಯು।। ಲಕ್ಷಣವಂತೆ ನಾನೆದುರಿಗೆ ಬಂದರೆ। ಲಕ್ಷಣ ಶುಭ ಶಕುನಗಳು। ಇಕ್ಷುಮೇಲೆ ಜೇನು ಇಟ್ಟಂತೆ ಬರುವೆನು ಲಕ್ಷ್ಮೀಸರಿಗೆ ನಾ ಬಂದು ಕೂಡುವೆನು।। ಅವಕಾಶ ಕೊಡುವೆನು ಸಾವಕಾಶ ಅಡಿಗೆ ಮಾಡು। ದಿನಕರ ಮುಳುಗೋ ಕಾಲದಲ್ಲಿ। ದನಕರು ಬರುವ ವೇಳೆಗೆ ನಾನು ಬರುವೆನು ಮನಕೆ ಸಂದೇಹ ಬೇಡೆಂದು।। ಅಂಗಳ ಸಾರಿಸು ರಂಗುತೋರಣ ಕಟ್ಟಿ। ರಂಗವಲ್ಲಿಯ ಚಿತ್ರ ಬರೆದು। ಅಂಬರೂದಿನ ಕಡ್ಡಿ ಅರಮನೆ ಬಾಗಿಲ ಮುಂದೊಂದ ಇಡಿಸಿ ಹಿಲಾಲು।। ಮಡಿಸೀರೆಯನೆ ಬಿಟ್ಟು ಮಡಿ ಪೀತಾಂಬರವುಟ್ಟು। ಕಡಗ ಕಂಕಣ ಕೈಯಲ್ಲಿಟ್ಟು। ದೃಢವಾದ ಮುತ್ತಿನ ಮುಖರವೊಂದಡ್ಡಿಕೆ ಬುಗುಡಿ ಬಾವುಲಿ ಹೊಳೆಯುತಲಿ।। ಕಂಚು ಕಲಶ ಕದಳಾರತಿ ತಕ್ಕೊಂಡು ಮುಂಚೆ ಬಂದಿದಿರುಗೊಂಡೆನ್ನ। ಮಿಂಚಿನಂತೊಳೆವ ಚಿನ್ನದ ಹಲಿಗೆ ತೂಗೋ ಮಂಚದಲಿ ಬಂದು ಕೂಡ್ರುವೆನು।। ಅರಮನೆಯಲ್ಲಾ ನಾವಿರುವುದು ಮೂರಂಕಣ। ಮನೆ ಮುಂದೆ ಮುರುಕು ಚಪ್ಪರವು। ಮರದ ಮಣೆ

ನಮ್ಮಲ್ಲಿರುವುದೆ ಚಿನ್ನದ ಹಲಿಗೆಯ ಮಂಚಿಲ್ಲಿ ತರುವೆನು।। ಬಂಗಾರದ ಬಾಳೆಯೆಲೆ ಬೆಳ್ಳಿ ಬಟ್ಟಲು। ಮಂಡಿಗೆ ತುಪ್ಪ ಸಕ್ಕರೆಯು। ಉಂಡು ಕೂಡುವೆನೆ ಕುಂದಣಕೆತ್ತಿದ ತಬಕದಲಿ ತಂದು ನೀಡೆನಗೆ ತಾಂಬೂಲ।। ಹುಟ್ಟಿದ ಮೇಲೆ ಈ ಬಟ್ಟಿಲೇಲಿ ಸುಣ್ಣ ಹಚ್ಚಿಕೊಂಡದ್ದು ನಾನರಿಯೆ। ಕರ್ಪೂರದ ಅಡಕೆ ಮುತ್ತಿನ ಸಣ್ಣ ಬಿಳಿಯಲೆ ಹಚ್ಚಿ ನೀ ಮಡಚಿಕೊಡೆನಗೆ।। ಬಂಗಾರವೆಂಬುದು ನಮ್ಮ ಕಂಗಳು ಕಂಡಿಲ್ಲ ಮಂಗಳಸೂತ್ರ ವೊಂದ್ಹೊರತು। ಕಂದಣದ ತಬಕಿಲ್ಲ ಒಡಕೊಂದು ಹಿತ್ತಾಳೆ ತುಂಡಾದ ತಾಟೋಂದಿರುವುದು।। ಮಡಿಸೀರೆ ಬಿಟ್ಟರಿನ್ನೊಂದು ಸೀರೆಯೆನಗಿಲ್ಲ ಮಡಿಪೀತಾಂಬರವೇ ಕಂಡಿಲ್ಲ। ಕಡಗ ಕಂಕಣವಿಲ್ಲ ಕರಿಯ ಗಾಜಿನ ಬಳೆ ಇರಲಮ್ಮ ನಿಮ್ಮದಯೆ ನಮಗೆ।। ಬುಟ್ಟದ ಬುಗುಡಿ ಅಂಚು ಜರಿತಾರಿ। ಚಿನ್ನದ ಥಳುಕಿರುವ। ಕುಪ್ಪಸ ಹೊಲಿಸಿ ಕೊಟ್ಟರೆ ಒಂದರೆಕ್ಷಣ। ತೊಟ್ಟು ನಿಮಗೆ ಕೊಟ್ಟು ಬಿಡುವೆ।। ಹುಟ್ಟು ಬಡವರು ನಾವ್ ಅಷ್ಟ ದರಿದ್ರರು। ನಿತ್ಯ ಯಾತ್ರೆಯಲಿ ಬದುಕುವವರು। ಚಿತ್ತಕ್ಕೆ ತಂದು ನೀ ದಯಮಾಡಿ ಬರುವದೆಂದ್ಹಷ್ಟ ಮುಗಿದು ಹೇಳಿದಳು।। ಮತ್ತೆ ಮಹಾಲಕ್ಷ್ಮೀ ಪಚ್ಚಕೂರ್ಪರ ಪುನಗಿನ ಎಣ್ಣೆ ಸಂಪಿಗೆಯ ತೈಲ। ಕಸ್ತೂರಿ ಬೆರಸಿದ ಬಿಸಿನೀರು ಅರಿಶಿನ ಹಚ್ಚಿ ತಾನೆರೆಕೊಂಡಳಾಗ।।75।। ಸುರುಳಿಗುರುಳಿಗೆ ಬೈತಲೆ ತಿದ್ದಿ ತಳಪಾಕಿ। ಚೌರಿರಾಗುಟಿ ಚಂದ್ರ ಗೊಂಡ್ಯ ಗಿಳಿಗೆಜ್ಜೆ ಹೆರಳ ಭಂಗಾರ ಕೇದಿಗೆಮೇಲೆ ಅರಳ ಮಲ್ಲಿಗೆ ಮಾಲೆ ಮುಡಿದು।। ಬಿಚ್ಚಿ ತಾನುಟ್ಟಳು ಬಿಳಿಯ ಪೀತಾಂಬರ। ಅಚ್ಚ ವಜ್ರದ ಶರಗ್ಹೊದ್ದು। ಕುತ್ತಣೆ ಕುಪ್ಪಸ ಮುತ್ತಿನ ಗೊಂಡ್ಯಕತೋಳಿಗೆ ಕಟ್ಟುತ್ತಿದ್ದರು ಬಾಜುಬಂದು।। ವಜ್ರದ ವಂಕಿ ನಾಗಮುರಗಿ ಅಡ್ಡಿಗೆ ಕೆಜ್ಜಡಿಕೆ ಕೊರಳಿಲ್ಲಿ ದೊಡ್ಡಸರಿಗೆ ಮೇಲಡ್ಡಿಗೆ ಮುತ್ತಿನ ಕೆಂಪು ತಳಕು ಬೆಳಕು ಹೊಳೆಯುತಲಿ।। ಪುತ್ತಳಿಸರ ಚಂದ್ರಹಾರ ಮೋಹನಮಾಲೆ। ಕಟ್ಟಿದಳಾಗ ಕಂಠಿಕಟ್ಟಾಣಿ। ಪಚ್ಚ ಮಾಣಿಕ್ಯ ರತ್ನಪದಕ ಅದರ ಮೇಲೆ ಜರ್ತಾರಿ ನಲಿದುಡುತಿರಲು।। ನಡುವಿಗೆ ನವರತ್ನ ಪಟ್ಟಿ ಕನಲ ದ್ವಾರ್ಯ ಕಡಗ ಕಂಕಣ ಹಸ್ತ ಕಡಗ ಬಿಡಿಮುತ್ತು ಬಿಗಿದೊಜ್ರವಾಲೆ ಬುಗುಡಿ ಚಂದ್ರಮುರವು ಮುತ್ತಿನ ಸರಪಳಿಯು।। ಸಾಲು ಕುಂದಣದಾಣಿ ಮುತ್ತಿನ ಮುಖರ ಬುಲಾಕು ಬಾಲಕದೊಜ್ರಹರಳು। ತೀಡಿಕಾಡಿಗೆ ಹಚ್ಚಿ ತಿದ್ದಿ ಕುಂಕುಮ ಹಚ್ಚಿ ಮೇಲೆ ಹವಳದ ಕುಡಿಯಂತೆ।। ಪಿಲ್ಲೆ ಕಾಲುಂಗರ ಲುಲ್ಲುರುಳಿ ಪೈಜಣಿ ಘಲ್ಲುಘಲ್ಲೆಂದ್ಹೆಜ್ಜೆ ಇಡುತ। ತೆಳ್ಳನ್ನ ಪಾದ ಪುತ್ಥಳಿಯಂತೆ ಹೊಳೆಯುತ। ಚಿನ್ನದ ಬಳ್ಳಿಯಂದದಿ ಬಳುಕುತಲಿ।। ಬೆಳ್ಳನೆರಳಿಯ ಮಿಳ್ಳಿತನ್ನ ಕಿರು ಬೆಳ್ಳಿನಲಿ ಹಿಡಿದಲ್ಲಾಡಿಸುತಲಿ। ಗಲ್ಲ ಮಿಂಚುಗಳಂತೆ ಥಳಥಳಿಸುತ ಬೀದಿಯಲ್ಲಿ ಬಂದಳು ಗಜಗಮನೆ।। ದೇವಲೋಕದಿಂದ ಇಳಿದಿಲ್ಲಿಬಂದಳೋ। ಹರಸತಿಯೇ ಅರಸುತಲೆ। ಮೋರೆ ನೋಡಲು ಮೂರ್ಛೆ ಬರುವು ದೋದಾರು ಮುಂಗಾರು ಮಿಂಚುಗಳಂತೋರುವುದೋ।। ಇಂದ್ರನರಸಿಯೋ ಚಂದ್ರಮನ ರೋಹಿಣಿಯೋ। ಸುಂದರ ಸೂರ್ಯನರಸಿಯೋ ಗಂಧರ್ವನರಸಿಯೋ। ಗಗನದಿಂದಿಳಿದಂತೆ ಗಂಗೆ ಶ್ಯಾಮಲೆ ಸೀತಾಂಗನೆಯೋ।। ರತಿಯೋ ರೇವತಿಯೋ ಅರುಂಧತಿಯೋ ಪಾರ್ವತಿಯೋ ಭಾರತಿ ಭಾಗ್ಯವಂತೆ ಸರಸ್ವತಿಯೋ। ಪತಿಗಳೈವರ ಸತಿಯೋ ಪಾಂಡವರ ರಸಿಯೋ। ದ್ರೌಪದಿ ಬಂದಳಿಲ್ಲಿಗೆಂಬುವರು।। ಸತ್ಯಭಾಮೆಯೋ ರುಕ್ಮಿಣಿ ಜಾಂಬುವಂತೆಯೋ। ಅಷ್ಟಮ ಸ್ತ್ರೀಯರೊಳಗೆ ಈಕೆ ಯಾರೋ। ಶ್ರೇಷ್ಠ ವೈಕುಂಠ ಕೊಲ್ಹಾಪುರ ಮಹಾಲಕ್ಷ್ಮೀ ಬಂದಳಿಲ್ಲೇಂಬುವರು।। ಹಸ್ತವ ಮುಗಿಯೋರು ಸಾಷ್ಟಾಂಗಕ್ಕೆರಗೋರು ಇತ್ತ ಬಾಯೆಂದು ಕರೆಯೋರು। ಇವತ್ತು ಶುಕ್ರವಾರವು ಸಾಕ್ಷಾತ್ ಲಕ್ಷ್ಮೀಬಂದಾಳೆಂಬವರು।। ರಾಜಾಧಿರಾಜರೆಲ್ಲರು ನಿಂತು ನೋಡಲು ಲಾಜವರದ ಗೊಂಬೆಯಂತೆ। ಭೋಜನಕೆತ್ತ ಪೋಗುವಳು ನೋಡೋಣೆಂದು ಬಹುಜನ ನಿಂತು ನೋಡುವರು।। ಮುಡಿಬಾಗಿ ನಡೆಯುತ ಮುಡಿದ ಹೂವ ಉದರಿಸುತ। ಮುಗುಳುನಗೆಯಿಂದ ನಗುತಲಿ। ಎಡಬಲದಲ್ಲಿ ವಾರೆ ನೋಟವ ನೋಡುತ್ತ। ನಡೆದಳು ಬಡವರಾ ಮನೆಗೆ।। ಸಿರಿದೇವಿ ತಾ ಕಣ್ಣು ತೆರೆದು ನೋಡುತಲಿರೆ। ಅರಮನೆಯಾಯಿತಾಕ್ಷಣದಿ। ಸುರಮಲ್ಲಿಗೆ ಶಾವಂತಿಗೆ ನಾನಾ ಫಲಗಳ। ವನವಾದವು ಆ ಮನೆಸುತ್ತ।। ಪಚ್ಚದಂತ್ಹೊಳೆವ ಶ್ರೀ ತುಳಸೀದೇವಿಯರಲ್ಲಿ। ಅಚ್ಚ ವಜ್ರದ ಗೊಂಬೆಯಂತೆ। ತಾ ನಲಿಯುತೆ ಹಿತದಿ ಅರ್ಚಿತವಾದ। ಕುರ್ಚಿಲಿ ಬಂದು ಕೂಡುವಳು।। ಬಡವನ ಮಡದಿಗೆ ಒಡವೆ ವಸ್ತ್ರವಾಯಿತು। ಕಡಗಕಂಕಣವು ಕೈಯಲ್ಲಿ ಮಡಿಸೀರುಟ್ಟಿದ್ಹೋಗಿ ಮಡಿ ಪೀತಾಂಬರವಾಯಿತು। ಅಡಿಗಡಿಗೆ ಎದುರುಗೊಂಬುವರು।। ಗಂಧಕುಸುಮ ಅರಿಶಿನ ದಿವ್ಯ ಬುಕ್ಕಿಟ್ಟು ತಂದಚ್ಚಿ ತಿಲಕ ಪಣೆಗೆ। ದುಂಡುಮಲ್ಲಿಗೆ ಮಾಲೆ ಪಾರಿಜಾತ ಸಂಪಿಗೆಮಾಲೆ। ದಂಡೆ ಮುಡಿಸುವರು ಜಡೆಮುಡಿಗೆ।। ಕಿತ್ತಳೆ ಫಲವು ಕೊಬ್ಬರಿ ಬಟ್ಟಲೊಳು ಹುರಿಗಡಲೆ ಹಾಕುಡಿಯ ತುಂಬುವರು। ಹಿಡಿದು ಕುಂದಣ ಹರಿವಾಣದೊಳಾರತಿ ಪಾಡುತ ಮಾಡಿ ಮುತ್ತಿನಾರುತಿಯ।। ಎಡಬಲದಲ್ಲಿ ಚಾಮರವನ್ನೇ ಬೀಸುವರು। ಹಿಡಿದು ನೋಡುವರು ಹಿಲಾಲು। ಬಿಡಿ

ಮಲ್ಲಿಗೆ ತಂದು ನಡೆಮುಡಿಹಾಸೋರು ಸಡಗರದಿಂದೆದ್ದಳಾಗ।। ಇಂದಿರಾದೇವಿ ಆನಂದದಿಂದ ಕುಳಿತಿರೆ। ಇಂದ್ರಾದಿಸುರರು ನೋಡುತಲಿ। ಮಂದಾರ ಮಲ್ಲಿಗೆ ಮಳೆಯು ಕರೆದರಾಗ ದುಂದುಭಿ ಭೇರಿಯಹೊಡೆದರು।। ಲಕ್ಷುಮಿದೇವಿ ತಾ ಫಕ್ಕನೆ ಬಂದಳು। ಹೊಕ್ಕಳು ದೇವರ ಮನೆಯಾ। ಚೊಕ್ಕ ಚಿನ್ನದ ಕೊಡವಾಗಿ ತಾ ಮಾಣಿಕ್ಯ ಮಂಚದಲ್ಲಿ ಕೂಡ್ರುವಳು।। ರನ್ನ ಮಾಣಿಕ್ಯ ನವರತ್ನದ ಹೊನ್ನು ಹಣವು। ಚೊಕ್ಕ ಚಿನ್ನ ವಾಯಿತಾ ಮನೆಯೆಲ್ಲ। ಬಣ್ಣದ್ದವಳ ಮುತ್ತು ರತ್ನವು ಮನೆಯೆಲ್ಲ ಚನ್ನ ಕೇಶವ ಕೃಪೆಯಿಂದ।। ಶುಕ್ರವಾರವೇ ಶುಭಕಾಲ ಇವರಿಗೆ ಸಿಕ್ಕಳು ಸಿಂಧುನಂದನೆಯು। ಬೊಕ್ಕಸದ ಭಂಡಾರ ಭಾಗ್ಯದ ಜಯಲಕ್ಷ್ಮೀ ಸಿಕ್ಕಿದಳಿವರಿಗೆಂಬುವರು।। ನಾಲ್ಕುವಾರದ ಎಲೆತೆಗೆದು ನೋಡುತಲಿರೆ ಹಾಕಿದನ್ನವು ಅಣೆಮುತ್ತು। ಪಾಕ ಪಲ್ಯ ಪಚ್ಚಿ ಪರಮಾನ್ನವು ಬಂಗಾರಖಚಿತ ಬಾಳೆಯೆಲೆಯು।। ಬಂದು ನೋಡಿದರೆ ನಾಲ್ಕು ಮಂದಿ ಸೊಸೆಯರು ಹಂಚಿಕೊಂಡು ತಲಾಗೊಂದೊಂದೆಲೆಯೆ। ಹಿಂದೆ ಮಾಡಿದ ಪುಣ್ಯ ಬಂದೊದಗಿತು ನಮಗೆಂದು ಸಂತೋಷಪಡುವರು।। ಕರ್ಪೂರದಾರತಿ ಮಾಡಿಕಾಯಿ ಒಡೆದು ಬುಕ್ಕಿಟ್ಟು ಕುಂಕುಮ ಹಚ್ಚುವರು। ಪಟ್ಟಣದ ಜನರು ಪತ್ತಲು। ಸೀರೆ ಕುಪ್ಪಸ ಲಕ್ಷ್ಮೀಗೆ ಉಡುಗೊರೆ ಕೊಡುವರು।। ಬಡವರ ಮನೆಗೆ ನಡೆದು ಬಂದ ಲಕ್ಷ್ಮಿ ಭಾಗ್ಯ ಕೊಡವಾಗಿ ಕೂತಂಥ ಕಥೆಯ। ದೃಢ ಭಕ್ತಿಲಿಂದ್ಹೇಳಿಕೇಳಿದ ಜನರಿಗೆ ಸಾಯುಜ್ಯ ಪದವಿ ಕೊಡುವಳು।। ಮುದದಿಂದ ಮೂರ್ಜಗದೊಡೆಯ ನಾರಾಯಣನ ಎದೆಯಲ್ಲಿರುವ ವರಲಕ್ಷ್ಮೀ। ನಮ್ಮ ಸದನಕ್ಕೆ ಬಂದು ಸಂಪತ್ತು ಶುಕ್ರವಾರ ಸಮದೃಷ್ಟಿಯಿಂದ ನೋಡಿದಳು।। ಗಂಡಹೆಂಡಿರು ಕೂಡಿ ಬ್ರಾಹ್ಮಣರೊಡಗೂಡಿ ಉಂಡು ವೀಳ್ಯವನೆ ತಕ್ಕೊಂಡು। ಮಂದಗಮನೆ ಲಕ್ಷ್ಮೀ ಮಹಿಮೆ ಕೊಂಡಾಡುತ್ತಾ ಆನಂದವಾಗಿರುತ್ತಿದ್ದರು।। ಕಿವುಡಾಗೆ ಕಿವಿ ಕುರುಡಾಗೆ ಕಣ್ಣು ಬರುವುದು। ಬರುಡಾಕಳ್ಹೈನವಾಗುವುದು। ಹಡೆಯದ ಬಂಜೆಹೊಟ್ಟೆಯಲಿ ಮಕ್ಕಳಾಗುವುದು ಪಡೆಯುವರು ಇಷ್ಟಫಲಗಳ।। ದನಕರು ತಳಿಯಾಗಿ ಧನಧಾನ್ಯ ಬೆಳೆಯಾಗಿ। ಅನುಗಾಲ ಶುಭಕಾರ್ಯವಾಗಿ। ಬರಿ ಕುಂಕುಮ ಅರಿಶಿನ ಮಾಂಗಲ್ಯ ಮುತ್ತೈದೆಗೆ ತನುಮನದವಳಾಗಿ ಕೊಡುವಳು।।108।। ಸಾಮಜವರದ ಸುಧಾಮಸಖನಾದ। ಸ್ವಾಮಿ ಶ್ರೀಹರಿಮೋಹದ ಸತಿ। ಶ್ರೀಮಹಾಲಕ್ಷ್ಮೀ ಪೂಜೆ ಮಾಡಿದವರಿಗೆ ಭೀಮೇಶಕೃಷ್ಣ ತಾನೊಲಿವಾ।।109।। ಶ್ರೀ ಕೃಷ್ಣಾರ್ಪಣಮಸ್ತು।।

ರುದ್ರಕುಮಾರನ ಚರಣಕ್ಕೊಂದನೆಮಾಡಿ (ಶ್ರಾವಣಶುಕ್ರವಾರ ಲಕ್ಷ್ಮೀಹಾಡು)

ರುದ್ರಕುಮಾರನ ಚರಣಕ್ಕೊಂದನೆ ಮಾಡಿ। ವಿದ್ಯಾಭಿಮಾನಿ ವಾಣಿಯನು ಪಾದ ಪದ್ಮಂಗಳಿಗೆರಗಿ ನಾ ಪೇಳುವೆ ಶುದ್ಧಾಗಿ ಕೊಡು ಮತಿಯ।।1।। ಶ್ರಾವಣಮಾಸ ಶುಕ್ರವಾರ ಶುಭಮುಹೂರ್ತ ಕಾಲದಿ। ಕಾಮಾಕ್ಷಿಯರಾಲಯದೊಳಗಿಟ್ಟು ಆದರದಿಂ ಪೂಜಿಸೆ। ಬೇಡಿದಿಷ್ಟಾರ್ಥ ನೀಡುವಳು।।2।। ಇರುತಿರಲೊಂದು ಪಟ್ಟಣದಲಿ ರಾಜಗೆ ತನಯರಿಲ್ಲದ ಕಾರಣದಿ। ವಿವಾಹದುದುತ್ಸವಕೆಂದು ತೆರಳೊ। ಪತಿಯ ನೋಡಿ ತೆಗೆದಿಟ್ಟ ಳಾತನಾಯುಧವ।।3।। ಪಟ್ಟದಾ ಕತ್ತಿಯ ಬಿಟ್ಟುಬಂದೆನೆಂದು ಅಟ್ಟಿದ ತನ್ನ ದೂತರನು। ನೆಟ್ಟನೆರಡುಕಾಲುಚಾಚಿ ತಾ ಕುಳಿತರೆ ಥಟ್ಟನೆ ದಾಟಿ ನಡೆದನು।।4।। ಮೂರು ತಿಂಗಳು ಗರ್ಭವಾಗುತ ಬಂದಿತು। ನೀಯೆನ್ನ ಕಾಲ ದಾಟುವರೆ। ಕೇಳಿ ಸಂಭ್ರಮದಿಂದ ಹೇಳೆ ರಾಜಗೆ ಹೋಗಿ ತಾಳಿದ ಪರಮ ಹರುಷವನು।।5।। ಮೂರುತಿಂಗಳು ಗರ್ಭಾವಾಗುತ ಬಂದಿತು। ನೀಯೆನ್ನ ಕಾಲ ದಾಟುವರೆ। ಕೇಳಿ ಸಂಭ್ರಮದಿಂದ ಹೇಳಿ ರಾಜಗೆ ಹೋಗಿ ತಾಳಿದ ಪರಮ ಹರುಷವನು।।5।। ಅಂಗನೆಯ ಗರ್ಭಾ ಚಂದದಿಂದೊದಗಿ ತೆಂದು ವಾರ್ತೆಯನೆ ಕೇಳುತಲಿ। ಬಂದ ದಿಬ್ಬಣದವರ ಹಿಂದಕ್ಕೆ ತಿರುಗಿಸಿ ಬಂದಿಳಿದನು ಅರಸು ಮಂದಿರಕೆ।।6।। ಅರಸನ ಅರಸಿಗೆ ಬೆರೆಸೀತು ಚಿಂತೆಯು। ಕರಿಸಿದಳಾ ತನ್ನ ದಾಸಿಯರ। ಕರೆದು ತಾರೆ ಸೂಲಗಿತ್ತಿಯ ಎನುತಲಿ। ತ್ವರಿತದಿಂ ಕಳುಹಿಸಿದಳು।।7।। ಸದ್ದು ಮಾಡದೆ ಸೂಲಗಿತ್ತಿಯ ಕರೆಸಿ ತಾನಿದ್ದ ವಾರ್ತೆಗಳ ಪೇಳಿದಳು। ಮುದ್ದು ಕೂಸಿನ ತಂದುಕೊಟ್ಟರೆ ನಿನಗೀಗ ಮತ್ತೋಲತುಂಬ್ಹೋನ್ನ ಕೊಡುವೆ।।8।। ಅಂದಾ ಮಾತಿಗೆ ಸಂದೇಹ ಬೇಡಿರಿ ಕಂದನ ತಂದು ಕೊಡುವೆನೆನಲು। ಹಾಗೆಂದು ಕೇರಿ ಕೇರಿ ಮಂದಿರವನೆ ಪೊಕ್ಕು। ಚೆಂದಾದಿ ಹುಡುಕಿ ನೋಡಿದಳು।।9।। ಹುಡುಕುತ್ತಾ ಬಂದಳು ಕಡೆಯ ಬಜಾರಕ್ಕೆ। ಬಡಬ್ರಾಹ್ಮಣನ ಮಂದಿರದಿ। ಮಡದಿಗೆ ಮೂರು ತಿಂಗಳು ಗರ್ಭವಾಗಿರೆ। ನುಡಿಸಿ ಮಾತನಾಡಿಸಿದಳು।।10।। ಪಡೆದ ಅತ್ತೆ ಮಾವ ಭಾವ ಮೈದಂದಿರು। ಒಡನೆ ಸಂತೈಸುವರಿಲ್ಲೆ। ಹಡೆದ ತಾಯ್ತಂದೆಯೂ ಇಲ್ಲವೆಂದೂ ಕಡೆಹಾಯಿಸಲೆನ್ನ ಕರೆಸೆಂದಳು।।11।। ಅಲ್ಲಿಯ ಸುದ್ದಿಯ ಮೆಲ್ಲನೆ ತಿಳಿದು ರಾಜನೊಲ್ಲಭೆಗಾಗ

ಅರುಹಿದಳು। ನಿಮ್ಮಲ್ಲಿ ಆಗುವ ಉತ್ಸವ ಕಾರ್ಯಗಳನ್ನು। ಉಲ್ಹಾಸದಿಂದ ನಡೆಸೆಂದಳು॥12॥ ಮೂರು ತಿಂಗಳಿಗೆ ರಾಜನರಸೀಗೆ ಮೊಗ್ಗೆಯ। ಐದು ತಿಂಗಳಿಗೆ ಹೂವೂ ಮೂಡಿಸಿ। ಎಂಟು ತಿಂಗಳಿಗೆ ಶ್ರೀಮಂತಾದ್ಯುತ್ಸವ ಮಾಡೆ ಬಂತಾಗ ನವಮಾಸಗಳು॥13॥ ವಿಪ್ರಾನ ಮಡದಿಗೆ ವತ್ತಿ ಬಂದಿತು ಬೇನೆ। ವರ್ತಮಾನವನೆ ಕೇಳುತಲಿ। ನೃಪತಿಯ ಅರಸಿಗೆ ಮತ್ತಾಗಲೆ ಹತ್ತಿತು ಬೇನೆ ಎಂಬುವರು॥14॥ ಅರ್ತಿಯಿಂದಲೆ ಬರುವಾಕೆ ಸಂಗಡಲೊಂದು ಪುತ್ರನ ಕರೆದುತಂದಿಹಳು। ಕರ್ಪೂರದ ವೀಳ್ಯ ಕೈಗಳಲ್ಲಿ ಕೊಟ್ಟು। ಹೆಚ್ಚುಪಚಾರವನು ಮಾಡುವಳು॥15॥ ವಿಪ್ರನ ಮಡದಿಗೆ ಒತ್ತಿ ಬಂದಿತು ಬೇನೆ। ಕಟ್ಟಿ ಕಣ್ಣುಗಳ ನಿಚ್ಚಣಿಕೆ। ಹತ್ತಿಳಿಯುತ್ತ ಹಡದಾಳು ಗಂಡು ಕುವರನ। ಎತ್ತಿಕೊಂಡ್ಹೋ ದರಾಕ್ಷಣದಿ॥16॥ ಕಲ್ಲುಗುಂಡನು ಹಡದಿ ನೀ। ಎಂಬು ಸೊಲ್ಲು ಕೇಳುತ್ತ ತಲ್ಲಣಿಸಿ। ಎಲ್ಲಿದ್ದರೆನ್ನ ಕುಮಾರ ಸುಖದಿ ಬಾಳಲಿ। ಇಂತೆಲ್ಲ ನೇಮವ ನಡೆಸಿದಳು॥17॥ ಗುಂಡು ಕಲ್ಲನೆ ಹಾಕಿ ಮಂಡೆ ಗಟ್ಟಿನೆ ಕಟ್ಟಿ। ಚೆಂದದಿ ಕೋಗಿಲು ಪೂಜೆ। ಆನಂದದಿಂದಲಿ ಆರತಿ ಅಕ್ಷತೆ ಮಾಡಿಸಿ। ಅಂದು ಕಳೆದಳು ಶೋಕರಾತ್ರೆ॥18॥ ಮೂರನೆಯ ದಿನದಲ್ಲಿ ಮೂಬಟ್ಟಲನೆ ಮಾಡಿ। ಐದನೆಯ ದಿನ ಜೀವುತಿಯು। ಏಳನೆಯ ದಿನ ಗೆದ್ವಿಳ್ಯಗಳ ಬೀರಿ। ಒಂಭತ್ತನೆ ದಿನದಿ ಕಡುಬುಗಳು॥19॥ ಹತ್ತನೆ ದಿನದಲ್ಲಿ ಈರುಳುಗಳ ಮಾಡಿ। ಹನ್ನೊಂದನೆ ದಿನ ನೀರೆರೆದು। ಹನ್ನೆರಡನೆಯ ದಿನ ನಾಮಕರಣದುತ್ಸವವ। ಚೆನ್ನಾಗಿ ನಗುತ ಮಾಡಿದರು॥20॥ ಇತ್ತ ಕೂಸಿಗೆ ಮಧುವಿತ್ತು ಜಾತಕ ಬರೆಸಿ। ಸಕ್ಕರೆ ಸಗಟದಿಂದ ಹಂಚಿ। ದಕ್ಷಿಣೆ ತಾಂಬೂಲ ಸಹಿತ ಬ್ರಾಹ್ಮರಿಗೆಲ್ಲ। ಇಚ್ಛಾ ಭೋಜನವ ಮಾಡಿಸಿದರು॥21॥ ಹಾಲು ಕಡಗ ಗುಂಡು ಬಿಂದುಲಿ। ಅಸಲು ಪೂ ಮೇಲಕೆತ್ತಿಸಿದ ಅರಳೋಲೆಯು। ನೀಲದ ಬಾವುಲಿ ಚೌಕುಳಿಚಳತೆಂಬ। ರಾಜನ ಸುತಗೆ ಒಪ್ಪಿದವು॥22॥ ದಶರಾತ್ರಿಯಾಗಲು ಅರಸುಕುಮಾರಗೆ। ಶಶಿಮುಖಿಯರೆಲ್ಲ ನೆರೆದು। ಹೊಸ ವಜ್ರದ ಹೊನ್ನ ತೊಟ್ಟಿಲೊಳಿಟ್ಟು ತೂಗಿದರು। ಹೆಸರಿಟ್ಟು ಪಾಡಿ ತೂಗಿದರು॥23॥ ಚಿನ್ನದ ತೊಟ್ಟಿಲಿಗೆ ರನ್ನದ ಗೊಣಸು ಕನ್ನಡಿ। ಹೊಳವೋ ಮೇಲ್ಕಟ್ಟಿನ ಬೆಳಕು। ಇನ್ನಾದರು ಬಾರದೆ ನಿನ್ನ ಮನಸು। ಕನ್ಯೇರು ತೂಗ್ಯಾರು ಪವಡಿಸು ಜೋಜೋ॥24॥ ಜೋಜೋಜೋ ಲಕ್ಷ್ಮೀಯಪುತ್ರಾ। ಜೋಜೋಜೋಪರಮ ಪವಿತ್ರ ಜೋಜೋ। ಜೋಜೋಜೋಜೋ ಸುಲಲಿತ ಗಾತ್ರ। ಜೋಜೋಜೋಜೋ ಚಾರು ಚರಿತ್ರ ಜೋಜೋ॥25॥ ನಾಮಕರಣ ಚವುಲ ಜುಟ್ಟು ಉಪನಯನ। ಪ್ರೇಮದಿಂ ವಿದ್ಯವ ಕಲಿಸೇ। ಸೋಮನಂದದಿ ಹೊರಗ್ಹೊರಟು ತಮ್ಮಮ್ಮನ ನೋಡಿ ಮೋದಿಸಿದನಾಕ್ಷಣದಿ॥26॥ ಕತ್ತಲೊಳಗೆ ಬರುತಿರಲು ಬಾಗಿಲ ಮುಂದೆ ಕಟ್ಟಿದ ಗೋವುಕಾಣದಲೆ ವತ್ಸಾನು ಕಾಲುತುಳಿಯಲಾಗ ಅದು ಬಾಯಿಬಿಚ್ಚೊದರಿತು ಭಯದಿಂದ॥27॥ ಅಮ್ಮಾ ನೀ ಬಾರೆ ತಮ್ಮಮ್ಮಾನರಿಯದವ ನಮ್ಮನ್ನು ಬಲ್ಲನೆ ಪಾಪಿ। ಒಮ್ಮಲ್ಲ ಎರಡು ಬಾರಿ ಆಲಿಸಿ ಅದರ ಮಾತು। ತಮ್ಮ ಹಿರಿಯರನೆ ಕೇಳಿದನು॥28॥ ಮಂದಾಕಿನಿಯ ಸ್ನಾನಮಾಡಿ ಬಂದರೆ ಸಂದೇಹ ಪರಿಹಾರವಾಗುವುದು। ಹಾಗೆಂದು ಹೇಳಿದ ಹಿರಿಯರ ವಾಕ್ಯವ ಕೇಳಿ। ಗಂಗಾಯಾತ್ರೆಗೆ ತೆರಳಿದನು॥29॥ ನಡೆದು ಬಂದನೆನಡು ಮಾರ್ಗ। ಪಟ್ಟಾಣದಲ್ಲಿ ಹಡದವರ ಮನೆ ಮುಂದೆ। ಕೊಡಬೇಕು ನಮಗಿಷ್ಟು ಸ್ಥಳನೆಂದೆನುತಲಿ ನುಡಿದು ಪವಳಿಸಿದನಾಕ್ಷಣದಿ॥30॥ ಹೊರಗಿನಿಂದ ಶೆಟವಿ ಬಂದಳು ಮಹಾಲಕುಮಿ। ಒಳಗಿಂದ ನುಡಿದಳೆಯೆನ್ನ। ವರಪುತ್ರಾ ಅವನ ದಾಟಲು ನಿನ್ನ ಶಿರವು ಸಿಡಿದು ಸಹಸ್ರ ಹೋಳಾಗವುದು॥32॥ ಅದ ಕೇಳಿ ಶೆಟವೀ ತಿರುಗಿ ಹೋಗುತಲಿರೆ ಬದಿಯಲಿ ಬದುಕಿದ್ದ ಶಿಶುವು। ಇದು ನಿನ್ನ ಪುಣ್ಯದಿಂದಿಳಿದೀತೆಂದೆನುತಿರೆ ಅಧಿಕ ಸಂತೋಷವಾಗಿ ಹೊರಟ॥33॥ ಭಾಗೀರಥಿಯ ಸ್ನಾನವ ಮಾಡಿಕೊಂಡು ಪ್ರಯಾಗಕ್ಕಾಗಿ ನಡೆತರಲು। ಆಗ ಮಾಡಿದ ದಾನಧರ್ಮ ಕಾರ್ಯಂಗಳು। ತಾನಾಗ ಕಂಡನು ಚತುರ್ಹಸ್ತ ॥34॥ ನಾಲ್ಕು ಹಸ್ತವ ಕಂಡ ಕಾರಣವೇನೆಂದು। ವ್ಯಾಕುಲದಿಂದಕೇಳಿದನು। ಸಾಕಿದವರು ಹಡೆದವರು ನಿನ್ನ ಗುಂಟೆಂದು। ವಿವೇಕ ಬಲ್ಲವರು ಹೇಳಿದರು॥35॥ ಗೊತ್ತಿಲಿ ಬಂದನು ಪಟ್ಟಣದೊಳು ಆಗ। ಹೆತ್ತವರಾ ಮಂದಿರಕ್ಕೆ। ಹೊಸ್ತಿಲ ಹೊರಗೆ ಮಲಗಿರುವ ಕಾಲಕ್ಕೆ। ಮತ್ತಾಗ ಬಂದಳಾ ಸೆಟವಿ॥43॥ ಚೊಚ್ಚಿಲ ಮಗನಾ ದಾಟಲು ನಿನ್ನ ಶಿರವು ಬಿಚ್ಚಿ ಸಹಸ್ರೋಳಾಗುವುದು। ಲಕ್ಷ್ಮೀ ಮಾತಿಗೆ ಶಟದಿ ತೆರಳಿದಳೆಂದು ತುತ್ತೀಗೆ। ಮೃತ್ಯಾದಿ ಪಾಪಿ ನೀ ಎಂದೆನುತ॥44॥ ಸತ್ಯವಂತನೇ ನಿಮ್ಮ ಪುಣ್ಯದಿಂದಿಬ್ಬರು। ಪುತ್ರರು ಉಳಿದರೆಂದಳು। ಅರ್ಥಿಯಿಂದಲವರ ವಾಕ್ಯವ ಕೇಳುತ ತನ್ನ ಪಟ್ಟಣಕ್ಕೆ ನಡೆತಂದ॥45॥ ಗಂಗಾಸ್ನಾನವ ಮಾಡಿಕೊಂಡು ಕಾವಡಿಪೊತ್ತು ಬಂದ ಶ್ರಾವಣಮಾಸದಲಿ। ಅಂದಿನಾರಭ್ಯ ಬ್ರಾಹ್ಮಣರಿಗೆ ಮೃಷ್ಟಾನ್ನ ಕುಟುಂಬ ಭೋಜನ ಮಾಡಿಸಿದ ॥49॥ ನಿತ್ಯ ನಿತ್ಯದಿ ಭಕ್ಷ್ಯ ತುಪ್ಪ ಮಂಡಿಗೆ ಕ್ಷೀರ। ಸಕ್ಕರೆ ಸೂರೆ ಮಾಡುತಲಿ। ಗೊತ್ತಾಗದೆನ್ನ ಕಾರ್ಯಗಳು ಪಟ್ಟಣದಲಿ। ಮತ್ತಾರುಳಿದ ವರೆಂದ॥47॥

ಪಟ್ಟಣದೊಳು ಬಡ ಬ್ರಾಹ್ಮಣನ ರಸಿಯು ನಿಷ್ಟೀಲಿ ವ್ರತದಲ್ಲಿರುವವಳು। ಎಷ್ಟು ಕರೆದರೆ ಬರಳಾಕೆ ಶ್ರೀ ಗೌರಿಯ। ಲಕ್ಷ್ಮೀದೇವಿಯ ಪೂಜೆಯಂತೆ॥48॥ ನಾನೇ ಬಾರಲೋ ತನ್ನ ಮಂದಿರಕಾಗಲೆ। ತಾನೇ ಬರುವಳೋ ನಮ್ಮ ಮನೆಗೆ। ಮಾಡಿದಪ್ಪಣೆಗೆ ಜುಲಮಾನವ ಕೊಡುವಳೊ। ಕೇಳಿಬನ್ನಿರೆಂದು ಕಳುಹಿಸಿದನು॥49॥ ಇಷ್ಟು ಛಲಗಳೇಕೆ ಈಗ ಬರುವೆನೆಂದು ಲಕ್ಷ್ಮೀದೇವಿಯ ಪೂಜೆ। ಭಕ್ತಿಯಿಂದಾರತಿ ಮುಷ್ಟಕ್ಕಿಯನೆ ಉಡಿ। ಕಟ್ಟಿಬಂದಳೆ ಭಾಗ್ಯಶಾಲಿ॥50॥ ಬರುತಿರಲಾಗ ಅಂಗನೆ ಅರಮನೆ ಮುಂದೆ। ಹರಿದ ಕುಲ ಗಚ್ಚು ಕಾಲುವೆಯ। ಸ್ಥಿರವಾಗಲೆನ್ನ ಕುಮಾರನಿಗೆ ಆಯುಷ್ಯ ಗಳೆಂದು ಬದಲು ಮಾರ್ಗದಿ ನಡೆದಳು॥51॥ ಮೂರು ಕಾಲಿನ ಮಣೆ ತಂದಿಡುವರು ಆದರದಿ ಪಾದ ತೊಳೆಯುವರು ಹಸಿರ ಬಳೆಯನಿಡಿಸಿ ಪಚ್ಚೆ ಪೀತಾಂಬರ ಕುಪ್ಪುಸ ಸಹಿತ ಕೊಡುವರು॥52॥ ಮೇಲ್ಪಂಕ್ತಿಯೊಳಗೆ ಕುಳ್ಳಿರಿಸಿ ಉಪಚರಿಸುತ। ಕುಡಿ ಬಾಳೆಯೆಲೆಯ ನ್ಹಾಕುವರು। ಶಾಕ ಪರಮಾನ್ನ ಹೊಸ ಮೊರದಿ ಅನ್ನ ಸಾರು ಮೊಗಿಲೆ ಬಡಿಸುವರು॥53॥ ಮೂರು ಕಾಲಿನ ಮಣೆ ತಂದಿಟ್ಟರೆ। ಕೂಡಲಾಗದು ನಮ್ಮ ವ್ರತವು। ಹಾಗಲ್ಲಂದರವಾ ಗದೆ ಹಸಿರು ಬಳೆಯ ಬಿಟ್ಟು। ನೀಲವಿಟ್ಟಳು ಕರದಲ್ಲಿ॥54॥ ಹಸಿರು ಪೀತಾಂಬರ ಹಸನಾದ ಕುಡಿಯೆಲೆ। ಹೊಸಮರದೊಳಗೆ ಅನ್ನವನು। ಬಿಸಿಬಿಸಿ ಸಾರು ಮೊಗೆಯಲಿ ತಂದು ಬಡಿಸಲು ಶಶಿಮುಖಿ ಅದುವಲ್ಲೆನೆನುತ॥55॥ ಕಂದು ಕೆಂಪಿನ ಪೀತಾಂಬರ ಮಡಿ ಕೊಟ್ಟು। ಚೆಂದವಾದೆಲೆನಾನ್ಹಾಕಿದರು। ಬಂಗಾರದ್ಹರಿವಾಣದೊಳಗೆ ಅನ್ನವ ಬೆಳ್ಳಿ ತಂಬುಗೆಯಲಿ ಸಾರು ಬಡಿಸಿದರು॥56॥ ಬಡವನಾ ಮಡದಿಯ ಬಡಿವಾರ ನೋಡೀರೇ ಸಡಗರ ಬಂತೇನೀ ಹೊತ್ತು। ಪಡೆದಳಾ ಅರಿಸಿನ ಐಶ್ವರ್ಯಯೆನುತಲಿ। ನುಡಿದು ಹಾಸ್ಯವನೆ ಮಾಡಿದರು॥57॥ ಉಟ್ಟ ಪೀತಾಂಬರ ಕಟ್ಟಿದ ಉಡಿದಾರ। ರತ್ನದ ಕಡಗ ಕೈಯಲ್ಲಿ। ಪಚ್ಚದ ಪದಕ ಮುತ್ತಿನ ಕಂಠಿ ಕೊರಳಲ್ಲಿ ಪುತ್ಥಳಿ ಸರ ಹೊಳೆಯುತಲಿ॥58॥ ನೀಲಮಾಣಿಕ್ಯ ದುಂಗುರವ ನಿಟ್ಟು ಅಣಿಮುತ್ತಿಟ್ಟು ಕಿವಿಯಲಿ। ಪಾಣಿಯ ಮುಗಿದು ಬ್ರಾಹ್ಮಣರಿಗೆ। ಭೋಜನಕುಪಚಾರ ಹೇಳುತಲೇ ತಾ ಬಂದ॥59॥ ದೊರೆಯ ತುಪ್ಪವ ಬಡಿಸುತ್ತಾ। ಸಾಲೆಡೆಯಲ್ಲಿ ಬರುತಿರೆ। ತಾಯಿ ಸ್ತನಗಳು ಭರದಿಂದುಕ್ಕೇರಿ ತುಂಬಿತು ಕ್ಷೀರ ಮುಖದಲ್ಲಿ। ತೊರೆದು ಚಿಮ್ಮಿದವಾಕ್ಷಣದಿ॥60॥ ಪಾಲು ಬಿದ್ದರೆ ತನ್ನ ಶಾಲಿನಿಂದೊರೆಸುತ್ತ। ಮಹಲಿನ ಮೇಲೆ ನಡೆದಾನು। ಆಲಯಕೆ ಅವರನು ಬಿಡದಂತಪ್ಪಣೆ ಮಾಡಿ ತಾ ಮಲಗಿದ್ದ ಮಂಚದಲಿ॥61॥ ಹುಟ್ಟು ಬಡವಿಯ ದೌಲತ್ತಾನೆ ನೋಡಿರಿ। ಉಟ್ಟಾಳು ಪೀತಾಂಬರವ। ಘಟ್ಯಾಗಿ ಶೆರೆಗ್ಹೊದಿಯದೆ ತನ್ನ ಮಾನವ ಬಿಟ್ಟಾಳೆಂದಾಡಿಕೊಂಬುವರು॥62॥ ಎತ್ತ ನೋಡಿದರಿಲ್ಲ ಚಿತ್ತ ಚಂಚಲವಾಗಿ ಮತ್ತೆಲ್ಲೂ ಮಗನ ಕಾಣದಲೆ। ಹತ್ತಿ ಬಂದಳು ಮಹಲಿನೊಳಗೆ ಮಂಚದಲ್ಲಿ ಮಲಗಿರುವ ಮಗನನ್ನು ಕಂಡಳಾಗ॥63॥ ಏನು ಕಾರಣ ಮಲಗಿದಿ ಮಾತನಾಡೆಂದು। ಲಾಲಿಸಿ ಮಗನ ಮುದ್ದಿಸುತ। ಬಾಲಕ ನೀನಿಷ್ಟು ಬಳಲುವುದೇಕೆಂದು। ಕೇಳಿದಳತಿ ಮೋಹದಿಂದ॥64॥ ಹಡೆದವರಾರು ಎನ್ನೊಡನೆ ನೀ ಪೇಳೆಂದು। ಬಿಡು ಭಯ ಬೇಡವೆಂದನುತ। ಪಡೆಯಲಿಲ್ಲವ್ಹೋ ಎನ್ನ ಮೇಲೆ ರಾಜನು। ಮತ್ತೊಬ್ಬ ಮಡದಿಯ ತರ ಹೋದನೆಂದೆನುತ॥65॥ ಹೊನ್ನು ಹಣವ ಕೊಟ್ಟು ನಾ ನಿನ್ನ ತರಿಸಿದೆ। ಎನ್ನ ಕೂಸೆಂದು ಸಾಕಿದೆನು। ನೀನಾರ ಸುತನೋ ನಾನರಿಯೆನೆನುತಲಿ। ಬಣ್ಣಿಸಿ ಮಾತನಾಡಿದಳು॥66॥ ಆದರೇ ನಮ್ಮಯ್ಯ ರಾಜ್ಯಸಿಂಹಾನ। ಏರಿದೆ ನಿನ್ನ ಪುಣ್ಯದಲಿ। ನೀ ಮಾಡಿದುಪಕಾರ ಮರೆಯಲಾರೆನೆಂದು ಪಾದಕ್ಕೆ ಬಂದೆರಗಿದನು॥67॥ ಬಣ್ಣದಂದಣ ಕಳುಹಿದ ಸೂಲಗಿತ್ತಿಗೆ। ಮನ್ನಿಸಿ ಮಣೆಯ ಹಾಕಿದರು। ಅಣ್ಣಯ್ಯನೇ ಕರೆಸಿದ ಕಾರಣವೇನೆಂದು। ಬಣ್ಣಿಸಿ ಮಾತನಾಡಿದಳು॥68॥ ಎತ್ತಲಿಂದಲಿ ಎನ್ನ ತಂದ ವಾರ್ತೆಗಳನ್ನು ಸತ್ಯವಾಗ್ಹೇಳಬೇಕೆನಲು। ವಿಪ್ರನ ಸುತನಿಲ್ಲಿ ತಂದು ನಾಕೊಟ್ಟೆನೊ। ಮುತ್ತಲ್ಹೊನ್ನಿಗೆ ಆಸೆ ಮಾಡಿ॥69॥ ಹಾಕಿದೆ ಕಲ್ಲುಗುಂಡನೆ ನಿಮ್ಮಮ್ಮಾಗೆ। ಹೋಕದ ಮಾತುಗಳಾಡಿದೆನು। ಗೋಕುಲದಲಿ ಕೃಷ್ಣ ಬಂದಂತೆ ನಿನ್ನ ತಂದು ಸಾಕಿದಳೆಶೋದೆಯಂತೆ॥70॥ ಮಕ್ಕಳನಗಲಿ ದೇವಕಿಯಂದದಿ ನಿಮ್ಮಮ್ಮ। ಹೊಸ್ತಿಲ್ಹೊರಗೆ ಕುಳಿತಿಹಳು। ಅಕ್ಕರದಿಂದವರನ್ನು ಒಡಗೂಡೆಂದು। ಹಸ್ತವ ಮುಗಿದು ಹೇಳಿದಳು॥71॥ ಮುದುಕಿ ಮಾತನೆ ಕೇಳಿ ಪದಕ ಮುತ್ತಿನ ಕಂಠಿ। ನಗುತ ಹಾಕಿದ ಕೊರಳಲ್ಲಿ। ಜರತಾರಿ ಸೀರೆ ಕುಪ್ಪಸ ಉಡುಗೊರೆ ಕೊಟ್ಟು। ಕರೆಸಿದ ತಾಯಿ ತಂದೇರ ॥72॥ ಕರೆದಾರೆಂದರೆ ಕಂಪನ ಹುಟ್ಟಿತು ದೇಹಕ್ಕೆ। ಸುರಿಸುತ ಕಣ್ಣಲಿ ಜಲಗಳ। ದೊರೆತನಕ್ಕೆದುರು ನಾವೇನೆಂದು। ಮನದಲ್ಲಿ ಮರುಗುತ್ತ ಯೋಚನೆಮಾಡಿದರು॥73॥ ಹೊಡಿಸೋನೋ ಬಡಿಸೋನೋ ಬೈದು ಬಿಡಿವ್ಹೋನೋ। ಕೊಡಿಸೋನೋ ಜುಲ್ಮಾನೆಗಳ। ಇಡಿಸೋನೋ ಸೆರೆಮನೆಯೊಳಗೆ। ನಮ್ಮಿಂದ ನುಡಿಸಿಬಿಡುವನೋ ತಪ್ಪೆನುತ॥74॥ ಏನು ಮಾಡುವನೋ ಬಂಧು ಜನರೊಳು। ನಮ್ಮ

ಮಾನವ ಕಳೆದು ಬಿಡುವನೋ। ಮಾನಾಭಿಮಾನ ನಿನ್ನದು ಮಹಾಲಕ್ಷ್ಮೀ। ಪಾದವೇ ಗತಿ ಎಂದಳಾಕೆ॥75॥ ನಡುಗುತ್ತ ಬಂದರು ಮುಡಿಯು ಮುಂದಕ್ಕೆ ಬಾಗಿ। ಕಡು ಭಯದಿಂದ ನಿಂತಿರಲು। ಹಡೆದತಾಯಿ ತಂದೆ ನೀವೆಯೆನುತ ಬಂದು। ನುಡಿದು ತಾ ಚರಣಕ್ಕೆರಗಿದನು॥76॥ ಕಂದ ನಾನೆಂದರೆ ಸಂಭ್ರಮವಾಯಿತು। ಆನಂದಭಾಷ್ಪಗಳು ಉದುರಿದವು। ತಂದೆತಾಯಿ ಮಕ್ಕಳೊಂದಾದರೆನುತಲಿ ದುಂದುಭಿ ಭೇರಿ ಹೊಡೆದವು॥77॥ ಹರುಷದಿಂದಲಿ ಇಬ್ಬರೊಂದಾಗಿ ತಾಯಂದಿರು। ಬರಸೀದರಾಗ ಪತ್ರಿಕೆಗಳ। ಕರಸೀದರಾಬಂಧು ಬಳಗದಿಬ್ಬಣದವರ। ಅರಸನ ಮದುವೆ ಸಂಭ್ರಮದಿ॥78॥ ಹಾದಿಗ್ಗುಂದರ ಹಾಕಿ ಮೇಲೆ ತೋರಣ ಕಟ್ಟಿ। ಬೀದಿ ನೌಬತ್ತು ವಾಲಗವು। ಬ್ರಾಹ್ಮಣರೆಲ್ಲರೂ ನೆರೆದರು। ನಾಲ್ಕು ವೇದವ ಹೇಳುತ್ತ ಮಂಗಲಾಷ್ಟಕವ॥79॥ ವಲ್ಲಭನೆದುರಿಗೆ। ಚೆಲ್ವೆ ಸತಿ ತಂದು ಚೆಲ್ಲುತ ಮಂತ್ರಾಕ್ಷತೆಯ। ಮಲ್ಲಿಗೆ ಭಾಷಿಂಗವನು ಕಟ್ಟಿ ಕೊರಳ ಮಾಂಗಲ್ಯ ಬಂಧನ ಮಾಡಿದರು॥80॥ ಹಾಗಲ್ಹಂದರದೊಳು ಹಸುರಪತ್ತಲವನ್ನುಟ್ಟು। ಬೇಗ ನೇಮವ ಬಿಡಿಸಿದರು। ಡಾಗು ಬಾಳೆ ಕೂಡೆಲೆಯಭೂಮವನುಂಡು। ನಾಗವೋಲಿಗಳ ಮಾಡಿದರು॥81॥ ಅರಸಿನ ಕುಂಕುಮ ಅರಳು ಮಲ್ಲಿಗೆ ಜಾಜಿ। ಪರಿಪರಿ ಭಕ್ಷ್ಯ ಪಾಯಸವು। ನರಸಿಂಹನ ಅರಸಿಗರ್ಪಿಸಿ ಆರತಿ ಮಾಡಿ। ಮುತ್ತೈದೆತನವ ಬೇಡುವಳು॥82॥ ಮುತ್ತಿನ ಪಲ್ಲಕ್ಕಿಯೊಳಗೆ ಶ್ರೀಲಕ್ಷ್ಮಿಯ। ಪಟ್ಟಣದೊಳು ಮೆರೆಸುತಲಿ। ಅರ್ಥಿಯಿಂದಲಿ ಬಂದು ಅರಸು ಸಿಂಹಾಸನ ವನ್ನೊಪ್ಪಿದಳಾಗ ಮಹಾಲಕ್ಷ್ಮೀ॥83॥ ವರಸಿಂಹಾಸನದಲ್ಲಿ ಒಪ್ಪಿರುವ ಮಹ ಲಕ್ಷ್ಮೀಗೆ । ಅರಳು ಗಂಧ ಕುಂಕುಮ। ಪರಿಪರಿಯಲ್ಲಿ ದಿವ್ಯಾಂಗವನೆಲ್ಲ। ಫಲವರ್ಪಿಸಿ ಕೈಯ ಮುಗಿದು॥84॥ ಕಡಲಾಬ್ಧಿವಾಸನ ಮಡದಿ ಮಹಾಲಕ್ಷ್ಮೀಗೆ। ಒಡೆದು ತೆಂಗಿನಕಾಯಿ ಪಲವು। ಮಡದಿಯರೆಲ್ಲರು ಅರಸಿನ ಗಂಧ ಕುಂಕುಮಕೊಡುತ ಮುತ್ತುಗಳುಡಿ ತುಂಬಿದರು ॥85॥ ಮಂಗಳಂ ಜಯವೆನ್ನಿ ಮಂಗಳಂ ಶುಭವೆನ್ನಿ। ಮಂಗಳಾಂಗನೆ ಮಹಲಕ್ಷ್ಮೀ। ಕಂಗಳ ತೆರೆದು ಕಟಾಕ್ಷದಿ ನೋಡಲು। ಹಿಂಗೋದು ಸಕಲ ದಾರಿದ್ರ್ಯ॥86॥ ಬಿತ್ತಿದ ಬೆಳೆರಾಶಿ ಉಕ್ಕುವ ನವ ಧಾನ್ಯವು। ಉಕ್ಕುವ ಕ್ಷೀರದಂದದಲಿ। ಲೆಕ್ಕವಿಲ್ಲದೆ ಮನೆತುಂಬ ಮಕ್ಕಳಾಗೋರು। ಮುತ್ತೈದೆತನವ ಕೊಡುವಳು॥87॥ ತಾ ಸುರಕಾಮಧೇನುವಿನಂತೆ ಬಂದ। ಭೀಮೇಶಕೃಷ್ಣನ ಸಹಿತಾಗಿ। ಲೇಸಾಗಿ ಸಕಲ ಸಂಪತ್ತನೆಲ್ಲ ಕೊಟ್ಟು। ತಾ ವಾಸವಾದಳು ಮನೆಯಲ್ಲಿ॥88॥

ಎತ್ತುವೆನಾರತಿಯಾ ಶ್ರೀ ಲಕುಮಿಗೆ — ರಾಗ : ಸುರಟಿ

ಎತ್ತುವೆನಾರತಿಯಾ ಶ್ರೀ ಲಕುಮಿಗೆ। ಬೆಳಗುವೆನಾರತಿಯಾ॥ಪ॥ ಎತ್ತುವೆನಾರತಿ ಚಿತ್ತಜನಯ್ಯನ। ವಕ್ಷಸ್ಥಳದಲ್ಲೇ ವಾಸಮಾಡಿರುವಳಿಗೆ॥ಅ.ಪ॥ ವರವೈಕುಂಠದೊಳು ಶ್ರೀಹರಿಯ ಚರಣ ಒತ್ತುತ್ತಲಿರಲು। ಭರದಿಂದ ಭೃಗುಮುನಿ ಒದೆಯಲು ಆಕ್ಷಣ। ಶಿರಿದೇವಿ ಹರಿಕೂಡ ಹೂಡಿದಳ್ನಾಟಕ॥1॥ ಕೋಪವನಟಿಸುತ್ತ ಹರಿಕೂಡ ಪ್ರೇಮ ಕಲಹಮಾಡಿ। ಅಪಾರಮಹಿಮಳು ಕರವೀರ ಪುರದೊಳು। ಅನೇಕ ಭಕ್ತರ ಅಭೀಷ್ಟ ಸಲಿಸುತಲಿರುವಳಿಗೆ॥2॥ ಭಕುತ ಜನರೆಲ್ಲ ಬಹುವಿಧ ನತರಾಗಿ ಪ್ರಾರ್ಥಿಸಲು। ಸತತ ಶ್ರೀಮುದ್ದು ವಿಠ್ಠಲನ್ನ ಒಡಗೂಡಿ। ಕರೆದಲ್ಲೆ ಬರುವಂಥ ಕರಣಾಮಯಳಿಗೆ॥3॥

ಮಂಗಳಾರತಿ ತಂದು ಬೆಳಗಿರೆ — ರಾಗ: ಸುರುಟಿ

ಮಂಗಳಾರತಿ ತಂದು ಬೆಳಗಿರೆ ಅಂಬುಜಾಸನ ರಾಣಿಗೆ। ಅಂಬುಜಾಸನ ರಾಣಿಗೆ ವರ ಶುಕ್ರವಾರದ ಲಕ್ಷ್ಮೀಗೇ॥ಪ॥ ಶುದ್ಧನದಿಯಲಿ ಸ್ನಾನಮಾಡಿ ವಜ್ರ ಪೀಠದಿ (ನೆಲೆಸಿರೆ) ಕುಳಿತಿಹ। ತಿದ್ದಿ ತಿದ್ದಿ ತಿಲಕವಿಟ್ಟಂತ ವರಮಹಾಲಕ್ಷ್ಮೀದೇವಿಗೆ ॥1॥ ಎರೆದು ಪೀತಾಂಬರವ ಉಡಿಸಿ ಸರ್ವಾಭರಣವ ತೊಡಿಸಿರೆ। ಹರಳಿನೋಲೆ ಮೂಗುತ್ತಿಯಿಟ್ಟಂತ ವರಮಹಾಲಕ್ಷ್ಮೀ ದೇವಿಗೆ॥2॥ ಹುಟ್ಟು ಬಡವೆಯ ಕಷ್ಟಕಳೆದು ಕೊಟ್ಟು ಅರಸಿಯ ಸಿರಿಯನು। ಹೆತ್ತ ಕುವರನ ತೋರಿದಂತ ಶುಕ್ರವಾರದ ಲಕ್ಷ್ಮೀಗೆ॥3॥ ಹರಿಯ ನಂಬಿ ಕರವೀರ ರಾಜ್ಯವ ಭರದಿ ಸ್ಥಿರವಾಗಿತ್ತಳು। ಪರಮ ಭಕ್ತರು ಸ್ಮರಣೆ ಮಾಡಲು ಹರುಷದಿಂದೊಲಿವ ದೇವಿಗೆ॥4॥ ನಿಗಮ ವೇದ್ಯಳೇ ನಿಮ್ಮ ಗುಣಗಳ ಬಗೆ ಬಗೆಯಲಿ ಪೊಗಳುವೆ। ತೆಗೆದು ಭಾಗ್ಯವ ಎಮಗೆ ನೀಡ್ವ ಪರಮಮಂಗಳ ಲಕ್ಷ್ಮೀಗೆ॥5॥

ಮಂಗಳವೆನ್ನಿರಿ ರಂಗನರಾಣಿಗೆ ರಾಗ: ಪುನ್ನಾಗವರಾಳಿ

ಮಂಗಳವೆನ್ನಿರಿ ರಂಗನರಾಣಿಗೆ ಮಂಗಳವೆನ್ನಿರಿ ಮಹಾಲಕ್ಷ್ಮಿಗೆ॥ಪ॥ ಮಂಗಳ ಪಾಡಿರಿ ರುಕ್ಮಿಣಿಭಾಮೆಗೆ ಮಂಗಳವೆನ್ನಿರಿ ಮೈಥಿಲಿಗೆ॥ಅ.ಪ॥ ಕ್ಷೀರಶರಧಿಯಲಿ ಜನಿಸಿದ ದೇವಿಗೆ। ಮಾರನಜನನಿಗೆ ಮಂಗಳೆಗೆ। ಚಾರುಮತಿಗೆ ತನ್ನ ಭೂರಿದರ್ಶನವಿತ್ತ ಕಾರುಣ್ಯ ನಿಧಿ ವರಲಕ್ಷ್ಮಿಗೆ॥1॥ ಮುತ್ತಿನ ಆರುತಿ ರತ್ನದ ಆರುತಿ ಮುತ್ತೈದೆಯರೆಲ್ಲ ಬೆಳಗಿರೆ। ಹತ್ತವತಾರವನೆತ್ತಿದ ಹರಿಯ ಕಳತ್ರೆಗೆ ಕೋಮಲಗಾತ್ರೆಗೆ॥2॥ ಶೋಭನ ಪಾಡಿರೆ ಶ್ರೀ ರಮಾದೇವಿಗೆ ತ್ರಿಭುವನ ಜನನಿಗೆ ಲಕ್ಷ್ಮೀಗೆ। ಇಭರಾಜವರದ ಶ್ರೀ ನಾಗೇಶ ಶಯನನ ಶುಭವಕ್ಷದಿ ನೆಲೆಸಿರುವವಳಿಗೆ॥3॥

29. ಶ್ರಾವಣ ಸಂಪತ್ ಶನಿವಾರದ ಲಕ್ಷ್ಮೀಪೂಜೆ

ಬಾರೇ ಭಾಗ್ಯದ ನಿಧಿಯೇ ರಾಗ: ಶ್ರೀ

ಬಾರೇ ಭಾಗ್ಯದ ನಿಧಿಯೇ ಕರವೀರ ನಿವಾಸಿನಿ ಸಿರಿಯೇ॥ಪ॥ ಬಾರೆ ಬಾರೆ ಕರವೀರ ನಿವಾಸಿನಿ ಬಾರಿ ಬಾರಿಗೂ ಶುಭತೋರೆ ನಮ್ಮನೆಗೆ॥ಅ.ಪ॥ ಲೋಕಮಾತೆಯು ನೀನು ನಿನ್ನ ತೋಕಳಲ್ಲವೆ ನಾನು। ಆಕಳು ಕರುವನು ಸ್ವೀಕರಿಸುವ ಪರಿ ನೀ ಕಾಲ್ಹಾಕು ನಮ್ಮನೆಗೆ॥1॥ ನಿಗಮ ವೇದ್ಯಳು ನೀನು ನಿನ್ನ ಪೊಗಳಲಾರೆನೆ ನಾನು। ಮಗಳಪರಾಧವ ತೆಗೆದೆಣಿಸದೆ ನೀ ಲಘುಬಗೆಯಿಂದಲಿ ನಡೆನಮ್ಮನೆಗೆ॥2॥ ಕಡೆಗೆ ನಮ್ಮನೆ ವಾಸ ನಿನ್ನೊಡೆಯ ಅನಂತಾದ್ರೀಶ। ಒಡೆಯನಿದ್ದಲ್ಲಿಗೆ ಮಡದಿಯು ಬರುವುದು ರೂಢಿಗುಚಿತವಿದು ನಡೆನಮ್ಮನೆಗೆ॥3॥

ಮುತ್ತು ಐದನು ಎತ್ತಿ ಕೊಡುವಳು ರಾಗ: ಅಭೇರಿ-ಆದಿತಾಳ

ಮುತ್ತು ಐದನು ಎತ್ತಿ ಕೊಡುವಳು ಮುತ್ತೈದೆ ಲಕ್ಷ್ಮೀ। ನಿತ್ಯಪೂಜಿಪ ಸತ್ಯವಂತೆ ಕರುಣೆ ಕಲ್ಯಾಣಿ॥ಪ॥ ಅರಿಶಿನ ಕುಂಕುಮ ಕಂಚುಕ ಕಡಗ ಕರಿಮಣಿ ಮಾಂಗಲ್ಯ। ಧನಕನಕ ಮುತ್ತು ರತ್ನ ವಜ್ರ ವೈಢೂರ್ಯ॥1॥ ಭಂಗವ ಕಳೆಯುವ ರಂಗನಾಯಕಿ ಆನಂದೆ ಮಹಾಲಕ್ಷ್ಮಿ। ಭೃಂಗಪುತ್ಥಳಿ ಭವಭಯಹಾರಿಣಿ ಮಂಗಳಾಂಗಿ ಹರಿಣಿ॥2॥ ಆಪತ್‌ಬಾಂಧವ ಶ್ರೀನಿವಾಸನ ಹೃದಯ ಕಮಲದಿ ನೆಲಸಿ। ಶರಣೆಂದವರ ಕರೆದು ಕಾಯುವ ಸೌಭಾಗ್ಯದಾಯಿನಿ ಲಕ್ಷ್ಮೀ॥3॥

ಗಜವದನನ ಪಾದಾಂಬುಜಗಳಿಗೆರಗುವೆ (ಶ್ರಾವಣ ಸಂಪತ್ ಶನಿವಾರದ ಲಕ್ಷ್ಮೀಹಾಡು)

ಗಜವದನನ ಪಾದಾಂಬುಜಗಳಿಗೆರಗುವೆ। ಅಜನರಸಿಗೆ ನಮಸ್ಕರಿಸಿ। ತ್ರಿಜಗವಂದಿತ ಲಕ್ಷ್ಮೀನಾರಾಯಣಸ್ವಾಮಿ। ನಿಜಪತ್ನಿಯ ಕಥೆಯ ವರ್ಣಿಸುವೆ॥ ಅರಸನ ಸೇವೆ ಮಾಡುತೊಂದು ಪಟ್ಟಣದೊಳು। ಇರುತಿರ್ದ ಸೋಮೇಶಭಟ್ಟ। ಹರುಷದಿಂದಲಿ ಸೊಸೆಯರು ಗಂಡುಮಕ್ಕಳು ಭರಿತರಾದರು ಸುಖದಿಂದ॥ ಆ ಮಹಾ ಕ್ಷೀರಸಾಗರದಲ್ಲಿಜನಿಸಿದ। ಶ್ರೀ ಮಹಾಲಕ್ಷ್ಮೀದೇವಿಯನು। ನೇಮದಿಂದಿಟ್ಟು ನಿಷ್ಠೆಲಿ ಸೋಮೇಶಮ್ಮ। ತಾ ಮಹಾ ಸಂಭ್ರಮ ದಿಂದ॥ ಚಾರು ಪರಿಮಳ ಅರಸಿನ ಗಂಧ ಕುಂಕುಮ।ಕೇದಿಗೆ ಕುಸುಮ ಮಲ್ಲಿಗೆಯ। ಮಾಧವ ನರಸಿ ಮಹಾಲಕ್ಷ್ಮಿ ಗರ್ಚಿಸಿ। ಮಂಗಳಾರತಿಯ ಬೆಳಗಿದರು॥ ಎಣ್ಣೋರಿಗೆ ಭಕ್ಷ್ಯ ಸಣ್ಣ ಶಾವಿಗೆ ಪರಮಾನ್ನ। ಶಾಲ್ಯನ್ನ ಶಾಕಂಗಳನು। ಚೆನ್ನಾವಾಗಿದ್ದ ತಾಂಬೂಲವನರ್ಪಿಸಿ। ಆದರದಿಂದುಂಡರತಿ ಹರುಷದಿ॥ ಸುಂದರ ಲಕ್ಷ್ಮೀ ಶುಕ್ರವಾರ ಪೂಜಿಸಿ ಆನಂದದಿ ಶನಿವಾರದಲ್ಲಿ। ಕುಂದ ಮಂದಾರ ಮಲ್ಲಿಗೆ ಗಂಧ ಕುಂಕುಮ ಚೆಂದಿಂದಾರತಿ ಬೆಳಗಿದರು॥ ಹಿಟ್ಟಿನ ಕಡುಬು ಹಿಂಡಿ ಪಲ್ಯವನೆ ಮಾಡಿ। ಅಚ್ಚೆಳ್ಳುಗಾಣದೆಣ್ಣೆಯನು। ನುಚ್ಚು ಮಜ್ಜಿಗೆ ಹುಳಿ ತಿಳಿಯ ಕಟ್ಟಂಬಲಿ। ಇಟ್ಟರು ನೈವೇದ್ಯವನು॥ ಭೋಜನಕ್ಕೆನುತ ಕುಳ್ಳಿರುವೋ ಕಾಲಕೆ ಬಂದು। ರಾಜನ ಸತಿಯೂ ಕುಳ್ಳಿರಲು। ಸೋಜಿಗವೆ ನಿಮ್ಮ ಲಕ್ಷ್ಮಿಯ ಸಂಪತ್ತು ಮೂಜಗದೊಳು ಕಾಣೆನೆಂದು॥ ಬೇಕಾದರೊಂದು ಬೇಡಲರಸನ ಸತಿ। ಸಾಕು ದರಿದ್ರದಂಬಲಿಯು। ಹಾಕಿದರ್ ಹರಡಿ ಕಂಕಣದೊಳು ಸಿಕ್ಕೀತು ನಾ ಕೈಯ್ಯ ಇಡಲಾರೆನೆಂದ್ಲು॥ ಥಟ್ಟನೆದ್ದಾಕೆಕೊಂಡಷ್ಟು ಪದಾರ್ಥವ ಸಂತುಷ್ಟರಾಗುಂಡರವರು। ಕಟ್ಟಿದ್ದ ತೂಗುಮಣೆಯಲಿ ಕಾಲುಗಳಿಳಿಬಿಟ್ಟು ಕೂತಳೆ ರಾಜನರಸಿ॥10॥ ಒಂದೊಂದು ಅಡಿಗೆ ನಿಂದ್ಯವು ಮಾಡಿ। ನಗುತಿರೆ

ಕುಂದಿತು ಸಕಲ ಸಂಪತ್ತು। ಬಂದಿತು ಪರರಾಜರಿಂದ ಮುತ್ತಿಗೆ ಧೊರೆ। ಬಂಧನ ಮಾಡಬೇಕೆನುತ।। ಅರಿತು ಓಡುತಲಿರೆ ತ್ವರಿತದಿ ಬಂದ್ಯಾತನ ಅನುಸರಿಸ್ಯಾಗ ನಡೆದಳು। ದಿನ ತುಂಬಿದಂತೆ ಗರ್ಭಿಣಿಗಾಗ ಬಂದಾವ್ರ ಕ್ಷಣಕೊಮ್ಮೆ ಟೊಂಕ ಬೇನೆಗಳು।। ಪುತ್ಥಳಿಗೊಂಬೆಯಂದದಿ ಜೋಡುಮಕ್ಕಳು ಕಿತ್ತಳೆವನದಲಿ ಜನಿಸೆ। ಹೊಚ್ಚಿಟ್ಟಳಾ ಬಾಳೆಯೆಲೆ ಹಾಸಿ ಮಲಗಿಸಿ। ಥಟ್ಟನೆ ದಾಟಿ ನಡೆದಳು।। ಬೇಕಾದ ಫಲಗಳನೇಕ ಪುಷ್ಪಂಗುಳ ಜೋಕೆ ಮಾಡುತಾ ವನದೊಳು। ಕೋಗಿಲೆಗಿಳಿ ನವಿಲು ಹಿಂಡುಗಳನ ಕಂಡು ಹಾಕುತ್ತಿದ್ದವ್ರ ಕಾಲಗಳನು।। ನಸುಕಿನೊಳಗೆ ಬಂದಾ ಸೋಮೇಶಭಟ್ಟನು। ಹಸು ಮಕ್ಕಳನನೇ ಕಾಣುತಲಿ। ಮುಸುಕಿಟ್ಟು ತಂದು ಮುದ್ದಿಸುತ ತನ್ನಯ ಸತಿ ವಶಮಾಡಿ ಕೊಟ್ಟ ಕಯ್ಯೊಳಗೆ ।। ಹುಟ್ಟಲಿಲ್ಲವ್ರೊ ಹೆಚನ್ನ ಕೇಶವ ಕೃಪೆಯಿಂದಣ್ಣುಮಕ್ಕಳು। ನಮಗೀಗ। ಕೊಟ್ಟನು ದೇವನೆಂದೆನುತ। ಅರ್ತಿಯಿಂದಲಿ ಚನ್ನ ಕೇಶವ ಕೃಪೆಯಿಂದ ಮೂಬಟ್ಟಾಲಿರಲು ಮಾಡಿ। ತೊಟ್ಟಿಲೊಳಿಟ್ಟು ತೂಗಿದರು।। ನಾಮಕರಣ ಮಾಡುತ ಹೆಸರಿಟ್ಟರು। ಸಾಹಕ್ಕ ಧೇಹಕ್ಕನೆಂದೆನುತ। ಪ್ರಾಯಕ್ಕೆ ಬಂದಾ ಮಕ್ಕಳ ನೋಡಿ ಹುಡುಕಿದ। ಸೋಮಾರ್ಕರಂಥವರಗಳ।। ಅರಸನ ಕರೆದು ಅಕ್ಕನ ಕೊಟ್ಟರಾಗಲೇ। ಕರೆಸಿ ಪ್ರಧಾನಿಗೆ ತಂಗಿಯನು। ಹರುಷದಿಂದಲಿ ಧಾರೆಯೆರೆದು ಹೆಣ್ಣಮಕ್ಕಳ। ಕಳುಹಿಸಿದನವರ ಮಂದಿರಕೆ।। ಅಕ್ಕರೆಯಿಂದಲಿ ಹೇಳಿದಳು ಸೋಮೇಶಮ್ಮ। ಮಕ್ಕಳಿಗೆ ಕರೆದು ಬುದ್ಧಿಯನು। ಶುಕ್ರವಾರದ ಲಕ್ಷ್ಮಿ ಮರೆಯದೆ ಮಾಡೆ ಶ್ರೀ। ಲಕ್ಷುಮಿ ಒಲಿವಳೆಂದೆನುತ।। ಸಾಹಕ್ಕ ಮಾಡೆ ಸಂತಾನ ಸಂಪತ್ತಿಗೆ। ಸಹಾಯವಾದಳು ಮಹಾಲಕ್ಷ್ಮೀ। ದೇಹಕ್ಕ ಮರೆತು ದೇಹಕ್ಕೆ ಗ್ರಾಸವಿಲ್ಲದೆ। ರಾಯನ ಸೆರೆಹಾಕಿದಲು।।20।। ಪೊಡವಿ ಪಾಲಕನ ಬಂದ್ಹಿಡಿದು ಕೊಂಡೊಯ್ಯಲು ಉಡುಗೆ ತೊಡುಗೆ ವಸ್ತ್ರಾಭರಣ। ಅಡಗಿತು ಸಕಲ ಸಂಪತ್ತು ದೇಹಕ್ಕಗೆ।ದೃಢವಾಯಿತಾಗ ದಾರಿದ್ರ್ಯ।। ಮಾತನಾಡಿದರು ಮಕ್ಕಳ ತಾಯನೊಡಗೂಡಿ। ಈ ತೆರವಾಯಿತೇ ಬದುಕು। ಮಾತಾಪಿತ್ರ ಒಡಹುಟ್ಟಿದವರು ನಿನಗೆ ಮಾತನಾಡಿಸುವವರು ಯಾರಿಲ್ಲೆ।। ದೂರದಲ್ಲಿರುವ್ರೋರೆನ್ನ ತಂದೆತಾಯಿಗಳು। ಸಾರ್ಯಾದಲ್ಲಿರುವ್ರೋಳೊಬ್ಬ ತಂಗಿ। ಸೂರೆಹೊಯಿತು ಧೊರೆತನ ಭಾಗ್ಯ ಬಡ। ಪ್ರಧಾನಿ ಹೇಗಿರುವನೋ ನಾನರಿಯೇ।। ಕಂಡು ಬರುವೆನೆಂದು ಚಿಂದಿಮಯ್ಯಿಗೆ ಸುತ್ತಿ। ತುಂಡು ಕೋರಿಯ ಹೊದ್ದುಕೊಂಡು। ಮಂಡೆಗ್ಹಚ್ಚಿದ ತಾಳಪ್ರಣತಿ ಎಣ್ಣೆ ಹೊಳೆ। ದಂಡೇಲಿ ಬಂದು ಕುಳಿತನು।। ಪೋರ ನೀನಾರೆಂದು ವಿಚಾರವ ಮಾಡಲು। ನೀರಿಗೆ ಬಂದ ನಾರಿಯರು। ದೂರದಿ ಬಂದೆ ದೇಹಕ್ಕನ ಹಿರಿಯ। ಕುಮಾರನೆಂದ್ಹೇಳಿ ಕಳುಹಿಸಿದನು।। ಬಂದ್ಹೇಳಿದವನ ಅಂದ ಚೆಂದಗಳೆಲ್ಲ। ಕರೆತರಲು ಹಿತ್ತಲ ಬಾಗಿಲಿನಿಂದ। ಬಂದ್ಹೇಳಿಕೊಂಡ ದಾರಿದ್ರ್ಯ ಕಷ್ಟಗಳೆಲ್ಲ। ಉಂಡುಟ್ಟು ಸುಖದಿ ತಾನಿದ್ದ।। ಆಲಯಕ್ಹೋಗಿ ಬರುವೆನೆಂದಪ್ಪಣೆ ಕೇಳೆ। ಕಾಲಹರಣ ಮಾಡದಂತೆ। ಕೋಲಿನೊಳಗೆ ಹಣ ತುಂಬಿ ಕೈಯಲಿ ಕೊಟ್ಟು। ಆಲಸ್ಯವಿಲ್ಲದೆ ಕಳುಹಿದಳು।। ಬಾಲಕ ನಿನಗಿಂಥ ಕೋಲೇಕೆನುತಲಿ। ಗೋಪಾಲಕ ಸೆಳೆದು ಕೊಂಡೊಯ್ಯೇ। ನೂಲದವರಿಗಿಂಥ ವಸ್ತು ಯಾಕೆಂದ ಆಲೋಚಿಸುತ್ತ ತಾ ಬಂದ।। ಮಿಡುಕತ್ತು ಬಂದು ಮಾತಿಗೆರಗಿದಾಗ। ಒಡನುಡಿ ವಾರ್ತೆ ಕೇಳುತಲಿ। ಕೊಡುವಷ್ಟು ಕೊಟ್ಟರೆನಗೆದಕ್ಕದೆನುತಲಿ। ನಡೆದನು ಮತ್ತೊಬ್ಬ ತನಯ।। ತಳಪ್ರಣತಿ ಎಣ್ಣೆ ತಲೆಗೆ ಪೂಸಿಕೊಂಡು ಮೊಳ ಕೋರಿಯ ಹೊದ್ದುಕೊಂಡು। ಬಳಕುತ್ತ ಬಂದು ಭಾವಿಯ ಮೇಲೆ ಕುಳಿತ್ಹೇಳಿ। ಕಳುಹಿದನವರ ಮಂದಿರಕ್ಕೆ।।30।। ಗೊತ್ತಿಲಿ ಕರೆತಂದರಾ ಹಿತ್ತಲ ಬಾಗಿಲಲ್ಲೇ। ವಾರ್ತೆಗಳನೆ ಕೇಳುತ್ತ। ಅತ್ಯಂತ ಕರುಣದಿಂದಲೆ ಭಕ್ಷ್ಯ ಪಾಯಸ ಮೃಷ್ಟಾನ್ನವನು ಣೆಸಿದರು।। ನಿತ್ಯುಪವಾಸ ಮಾಡುವರೆನ್ನ ಮನೆಯಲ್ಲಿ। ಅಪ್ಪಣೆಗಳ ನೀಡೆಂದೆನುತ। ಬುತ್ತಿಯೊಳಗೆ ಹಣಕಟ್ಟಿ ಕಳುಹಲು। ಕಾಗೆ ಕಚ್ಚಿ ಕೊಂಡೊಯ್ಯಲಾಕ್ಷಣದಿ।। ಏನು ಹೇಳಲಿ ನಾ ಹೋದ ಕಾರ್ಯಗಳಿಗಿಂತ ಹೀನವಾಯಿತು ಹೀಗೆಂದೆನುತ। ನಾ ಹೋಗಿ ಬರುವೆನೆಂದೆನುತ ಮತ್ತೊಬ್ಬ ಕುಮಾರ ತೆರಳಿದನು।। ಹರುಕು ಕೋರಿಯನುಟ್ಟು ಒಡಕು ತಂಬಿಗೆ ಪಿಡಿದು। ಕೆರಕುಬುತ್ತಿಯನೆ ಕಟ್ಟಿಕೊಂಡು। ಗುರುತೇಳಿ ಕಳುಹೆ ಹಿತ್ತಿಲ ಬಾಗಿಲಿನಿಂದ ಕರೆತಂದರಾಗ ಮಂದಿರಕ್ಕೆ।। ಎರಡು ದಿನವಿಟ್ಟುಕೊಂಡುಪಚರಿಸುತ್ತ। ಬುರುಡೆಯೊಳಗೆ ಹಣವನ್ನು। ಕಡುಬೇಗದಿಂದ ಕೈಯಲಿ ತಂದು ಕೊಡಲಾಗ। ನಡೆದ ತಾ ನಡವಿಮಾರ್ಗದಲಿ।। ಸೆಳೆದುನಾಲಿಗೆ ಬಿಸಿಲೇರಿ ಬಾವಿಯಕಂಡು। ಇಳಿದ ಪಾವಡಿಗೆಯಲಿಟ್ಟು। ಬುಡುಬುಡು ಉರುಳಿ ಮಡುವ ಸೇರಲದಕಂಡು। ಮಿಡುಕುತ್ತ ಬಂದ ಮಂದಿರಕೆ।। ಗತಿಹೀನರೊಳು ನಮ್ಮಂಥ ನಿರ್ಭಾಗ್ಯರು ಪೃಥ್ವಿಯೊಳಗೆ ಕಾಣೆನೆಂದೆನುತ। ಅತಿಬಾಯಿ ಬಿಡುವ ಮಾತೆಯ ಕಂಡು ಮತ್ತೊಬ್ಬ ಸುತನಾಗ ತೆರಳಿ ನಡೆದನು।। ಸುಕ್ಕಿದ ಮೈಗೆ ಛಿದ್ರ ಬಟ್ಟೆಯ ಸುತ್ತಿ। ಕುಕ್ಕುತ್ತ ಶೀರುಹೇನುಗಳು। ಚಿಕ್ಕಮ್ಮ ಗ್ಹೇಳಿ ಕಳುಹೆ ಕರೆತಂದರು। ಹಿತ್ತಿಲ ಬಾಗಿಲಿನಿಂದಾಗ।। ಏಳೆಂಟು ದಿನದಲ್ಲಿ ಬಹುಳುಪಚರಿಸುತ್ತ। ಬಾಳುವಾ ಕ್ರಮ ಕೇಳಿತಲಿ। ಜಾಳಿಗಿಹೊನ್ನು ಚಮ್ಮಾಳಿಗೆಯಲಿ ತುಂಬಿ। ಕಾಲಮೆಟ್ಟಿಸಿ ಕಳುಹಿಸಿದಳು।।

ಅದು ಮೆಟ್ಟಿ ಬರುತಿರೆ ಒದಗಿ ಬಂದಾಶನಿ ಹುದಲು ಕಾಣದೆ ಸಿಗಿಬಿದ್ದು। ಎದೆ ಬಾಯಿ ಬಿಡುತ ಹುಡುಕಿದರಿಲ್ಲೆಂದು। ಎದುರಿಗೆ ಬಂದು ತಾ ನಿಂತ॥40॥ ನಾಲ್ಕು ಮಂದಿ ಸುದ್ದಿ ನಾನಾಪರಿ ಕೇಳಿ। ವ್ಯಾಕುಲವಾಯಿತು ಮನಕೆ। ನಾ ಕಂಡು ಬರುವೆನೆಂಬೆನುತ ದೇಹಕ್ಕ। ಆ ಕಾಲದಲಿ ತೆರಳಿದಳು॥ ಉಟ್ಟಳು ಮಾರು ಸೀರೆಯನ್ನು ತೋಳಿನಲಿ। ತೊಟ್ಟಳು ಚುದಿಕುಪ್ಪಸವ। ಕಟ್ಟಿದ ಜಡೆಗೆಣ್ಣೆ ಹಚ್ಚಿ ಗಂಟನೆ ಹಾಕಿ। ಬೊಟ್ಟು ಕುಂಕುಮವ ತೀಡಿದಳು॥ ಒಂದೊಂದು ಕರಿಯ ಗಾಜಿನ ಬಳೆ ಕೈಯಲ್ಲಿ। ಕಂದಿ ಕುಂದಿದ ಕೂಸನೆತ್ತಿ। ಬಂದಳು ದೇಹಕ್ಕನೆಂದೆನುತಲಿ। ತಂಗಿಗೆ ವಾರ್ತೆಯ ಕಳುಹಿದಳು॥ ಅಕ್ಕನ್ನ ಕರೆತಂದರಾ ಹಿತ್ತಲಿಂದಲಿ। ಶುಕ್ರವಾರದ ಶುಭದಿನದ। ಮಕ್ಕಳು ಸೊಸೆಯರೊಡಗೂಡಿ ಬಂದು ದೇಹಕ್ಕನ ಚರಣಕ್ಕೆರಗಿದರು॥ ಅಂದಗಲಿದ ಅಕ್ಕ ತಂಗಿಯರಿಬ್ಬರು। ಇಂದಿಗೆ ಕಲೆತೆವೆಂದೆನುತ। ಮಿಂದು ಮಡಿಯನುಟ್ಟು ಬಂದೆಲ್ಲಾ ಪರಿವಾರವ। ಅಂದು ಭೋಜನಕ್ಕೆ ಕುಳಿತರು॥ ಹೋಳಿಗೆ ಹೊಸಬೆಣ್ಣೆ ಕಾಸಿದಾ ತುಪ್ಪವು। ಕ್ಷೀರ ಶಾವಿಗೆಯ ಮೃಷ್ಟಾನ್ನ। ಬೇಗದಿಂದುಂಡು ಹಾಕುತಲೆ ತಾಂಬೂಲವ ತೂಗು ಮಂಚದಿ ಮಲಗಿದರು॥ ಬೆಳಗಾಗೆದ್ದು ಹೇಳಿದಳೆ ಆ ಸೊಸೆಯರ। ಕರೆದು ಸಾಹಕ್ಕ ಕೆಲಸವ। ಬಿಳಿಜೋಳ ಕುಟ್ಟಿ ಬೀಸಿರೆ ನೀವು ಇಂದಿನ। ಅಡುಗೆಯ ಕ್ರಮವ ಹೇಳಿದಳು॥ ಹುಳಿನುಚ್ಚು ಮಾಡಿರೆ ತಿಳಿಯ ಕಟ್ಟಂಬಲಿ। ಎಳೆಸೊಪ್ಪು ಹಿಂಡಿಪಲ್ಯವನು। ತರಿಸುವ ಗಾಣದ ಎಳ್ಳಿನ ತಿಳಿಎಣ್ಣೆ। ಹಿಟ್ಟಿನ ಕಡುಬು ನೀವ್ ಮಾಡಬೇಕೆನುತ॥ ಅದ ಕೇಳಿ ದೇಹಕ್ಕನ ಹೃದಯ ತಲ್ಲಣಿಸುತ್ತ। ಎದೆಯೊಳಗಲಗು ನೆಟ್ಟಂತೆ। ನದಿಯೊಳಗಲ್ಪ ಹಳ್ಳವು ಬಂದು ಸೇರಲು। ಅದು ಲಕ್ಷವಾಗಿ ತೋರುವದೋ॥ ಉರಿಯ ಒಳಗೆ ಎಣ್ಣೆ ಸುರಿವಿದಂತಾಯಿತು। ಸಿರಿಯ ಸಂಪತ್ತಿ ನಿಂದಾಕೆ। ಗರಗಸದಿಂದಲಿ ಕೊರೆದುಪ್ಪ ಸಾಸಿವೆ। ಅರೆದ್ದಚ್ಚಿದಂತ ಮಾತುಗಳು॥ ಹುಟ್ಟ ಬಡವರು ಬರಬಾರದು ಜಗದೊಳು। ಅಟ್ಟುಂಬೋರ ಮನೆಯ ಬಾಲಿಗಿಗೆ। ಕಷ್ಟದಿ ಕಾಲ ಕಳೆಯ ಲಾರ ದಿದ್ದರೆ। ಕಟ್ಟಡವಿ ಸೋರೋದೆ ಲೇಸು॥50॥ ಪರರ ಮನೆಯಲ್ಲಿ ಅಪಹಾಸ್ಯ ವಾಗು ವುದಕ್ಕಿಂತ। ವನವಾಸಗಳು ಲೇಸೆಂದೆನುತ। ಮನದಾ ಸಂತಾಪ ಸೈರಿಸಲಾರದೆಂದೆದ್ದಳು। ದನವನ್ನೇ ಕಟ್ಟೋ ಮಂದಿರಕೆ॥ ಎತ್ತಿನ ಗೋದಾನಿ ಒಳಗೆ ಕಂದಲದಂಟು। ಸಿಪ್ಪೆಗಳನೆ ಹೊದ್ದುಕೊಂಡು। ಕಚ್ಚುತ್ತಿರಲು ಚಿಕ್ಕಾಡು ಕ್ರಿಮಿಗಳೆಲ್ಲ। ಅತ್ತಿತ್ತಲುಗದೆ ಮಲಗಿದಳು॥ ಮದ್ಯಾನ್ಹವಾಯಿತು ಅಡಿಗೆ ದೇಹಕ್ಕನ ಸದ್ದು ಸುಳಿವು ಕಾಣಲಿಲ್ಲ। ನಿದ್ರೆಯಿಂದೆಲ್ಲೋ ಮಲಗಿದ್ದಳಾಕೆಯು। ಇದ್ದರಲ್ಲಿಂದಲಿ ಕರೆತನ್ನಿ॥ ಬಲ್ಲಷ್ಟು ಮನೆ ಹುಡುಕಿದೆವು ಅತ್ತೆಬಾಯಾರ। ಸೊಲ್ಲು ಸುಳಿವು ಕಾಣಲಿಲ್ಲ। ಎಲ್ಲಿ ಹುಡುಕಿದರಿಲ್ಲವೆನುತ ಬಂದಾಗ। ಎಲ್ಲ ಸೊಸೆಯರು ಹೇಳಿದರು॥ ಒಳಗೆಲ್ಲ ಹುಡುಕಿ ಬಂದೇವು ಸಂದುಗೊಂದಿಲಿ। ಆಕಳು ಕಟ್ಟುವಂಥ ಗೋದಾನಿಯಲೆ। ಸೆಳೆದು ದಂಟುಗಳು ಹಾಕುತ್ತಿರುವ ಗೋದಾನಿಯಲಿ। ಸುಳಿವು ಕಂಡ್ಹಿಡಿದರಾಕ್ಷಣದಿ॥ ಸಿಕ್ಕಾರು ನಮ್ಮ ಅತ್ತೆಯರು ಎಂದೆಬ್ಬಿಸುತಲಿ। ಹಸ್ತವಿಡಿದು ಕರೆ ತಂದೇವು। ಉಕ್ಕುವ ಉರಿಮೋರೆಯನ್ನು ನೋಡಿ ಮನದಾ। ಸಿಟ್ಟೇನೆನುತ ಕೇಳಿದರು॥ ಹೇಳುವುದೇನು ಕೇಳುವುದೇನು ನಿಮಗಿಂತ। ಹೀನವಾದೆನೆ ನಾನೆಂದೆನುತ। ಜೋಳದನ್ನವ ಕಾಣದೆ ನಾ ಬಂದೆನೆ। ನಾಳೆ ಪೋಗುವೆ ನಮ್ಮ ಮನೆಗೆ॥ ಭಕ್ಷ್ಯ ಪಾಯಸ ಮಾಡಿ ನಿನ್ನನ ದಿವಸ। ಈವತ್ತೇ ದುರ್ಭಿಕ್ಷದಡಿಗೆಯು। ಭಿಕ್ಷಕ್ಕೆ ಬಂದೇನೇ ನಿಮ್ಮ ಮನೆಗೆ ನಾನು। ಆ ಕ್ಷಣದಿ ಜಲವ ತುಂಬಿದಳು॥ ಅಕ್ಕನ ವಚನವ ಕೇಳಿ ಆಲೋಚಿಸಿ। ನಕ್ಕಳು ತನ್ನ ಮನದಲ್ಲಿ। ಶುಕ್ರವಾರದ ಲಕ್ಷ್ಮಿ ಮಾಡದೆ ನೀವಿಂಥ। ದುಃಖಕ್ಕೆ ಗುರಿಯಾದರೆಂದ್ಲು॥ ಬರುವ ಕಾಲದಲ್ಲಿ ಕರೆದು ನಮ್ಮಮ್ಮನು। ಅರುಹಲಿಲ್ಲವೆ ಲಕ್ಷ್ಮಿಯನ್ನು। ಸಿರಿಯ ಸಂಪತ್ತನ್ನೇ ಕೊಡುವಂಥ ಶನಿವಾರ। ಮರೆತುಬಿಟ್ಟೆಯೇನೆ ಅಕ್ಕಯ್ಯ॥60॥ ಲಕ್ಷುಮಿದೇವಿಯು ಆಲಸ್ಯ ಮಾಡಿದ್ದರಿಂದ। ಈಕ್ಷಿಸದೆ ತೊಲಗಿದಳು। ಈ ಕ್ಷಣದಲ್ಲಿ ನಮ್ಮ ಮನೆಯಲ್ಲಿ ಪೂಜಿಸು। ಸಾಕ್ಷಾತ್ ಶ್ರೀಲಕ್ಷ್ಮಿಯನ್ನು॥ ಎರೆದು ಪೀತಾಂಬರ ಉಡಿಸಿ ತಂದಿಟ್ಟರೆ। ಪರಿಪರಿ ವಸ್ತ್ರಾಭರಣ। ವರಮಣೆಯ ಮೇಲೆ ಮಂಟಪದೊಳು ಚಟ್ಟಂಗಿ। ಬರೆದಿಟ್ಟರಾಗ ಪೀಠದಲ್ಲಿ॥ ಮುಂದೆ ಕಟ್ಟಿಸಿದರು ಮಕರ ತೋರಣಗಳು। ದುಂದುಭಿ ಭೇರಿ ಬಡಿದವು। ಮಿಂದು ಮುತ್ತೈದೇರು ಸಹಿತ ಬ್ರಾಹ್ಮಣರೆಲ್ಲ। ಅಂದರು ವೇದೋಕ್ತ ಮಂತ್ರಗಳು॥ ಹಾಕಿದರೈದು ಫಲಗಳಕ್ಕಿ ಅದರೊಳು। ನಾಲ್ಕೆಂಟು ನಂದಾದೀವಿಗೆಯು। ಶ್ರೀಕಮಲ ಮಧ್ಯದಲ್ಲಿ ಸ್ಥಾಪನೆಮಾಡಿ। ಅನೇಕ ಭಕ್ತಿಯಿಂದ ಪೂಜಿಪರು॥ ಅರಿಸಿನ ಪಿಡಿದು ಹಚ್ಚುತಲಿ। ಶ್ರೀಲಕ್ಷುಮಿಗೆ ಸರಕಾನೆ ತಿರುವೆ ಮೋರೆಯನು। ಎಡಕ್ಹೋಗಿ ಎರಡು ಕೈ ಮುಗಿದ್ಹೇಳಿಕೊಂಡರೆ। ಬಲಕೆ ಬಂದಳೆ ಭಾಗ್ಯಲಕ್ಷ್ಮಿ॥ ಮಕ್ಕಳು ಮಾಡೋ ಮಹಾ ತಪ್ಪು ಅಪರಾಧ। ಹೆತ್ತ ಮಾತೆಯರೆಣಿಸುವರೆ। ಸತ್ಯವಂತಳು ಈಕೆ ಸಮರಿಲ್ಲ ಎನುತಲಿ। ಭಕ್ತಿಯಿಂ ಕರವ ಮುಗಿದಳು॥ ಸಾಹಕ್ಕನವಚನ ಕೇಳುತಲೇ ಶ್ರೀಲಕ್ಷುಮಿ। ದೇಹಕ್ಕ ನೆದುರಾಗಿ ನಿಂತು। ಕಾಯವಾಚಭಕ್ತಿ ಗೊಲಿದು ತಾ ಕಮಲಾದಳಾಯ ತಾಕ್ಷಿಯಲಿ ನೋಡಿದುಳ॥

ಕುಂಕುಮ ಗಂಧ ಬುಕ್ಕಿಟ್ಟು ಮಲ್ಲಿಗೆ ಜಾಜಿ। ಪಂಕಜ ಪಾರಿಜಾತವನು। ಶಂಕರ ಸುರಬ್ರಹ್ಮನೊಡೆಯನ ಅರಸಿಗೆ। ಅಲಂಕಾರ ಪೂಜೆ ಮಾಡಿದರು। ಕಡಲಾಬ್ಧಿವಾಸನ ಮಡದಿ ಮಹಲಕ್ಷ್ಮೀಗೆ ಒಡೆಸಿ ತೆಂಗಿನ ಕಾಯಿ ಫಲವು। ಮಡದಿಯರಿಗೆ ಅರಿಸಿನ ಗಂಧ ಕುಂಕುಮ। ಕೊಡುತ ಪುಷ್ಪಗಳುಡಿ ತುಂಬೆ॥ ಬಟ್ಟ ಮುತ್ತಿನ ಹಾರಿವಾಣದೊಳ್ ನೈವೇದ್ಯ। ಭಕ್ಷ್ಯ ಪಾಯಸ ಬಡಿಸಿದರು। ಸಂತುಷ್ಟಿಯಿಂದ ನೋಡುತಲಿ। ದೇಹಕ್ಕನ ಗಂಡನಿಗೆ ರಾಜ್ಯನೀಡಿದಳು॥ ಹೊಳೆವ ಚಿನ್ನದ ಹರಿವಾಣದೋಳ್ ನೇವೇದ್ಯ। ಕಡುಬು ಕಟ್ಟಂಬಲಿಯು ಪರಮಾನ್ನ। ತಿಳಿಗಾಣದೆಣ್ಣೆ ಹಿಂಡೀಪಲ್ಯವನು ಲಕ್ಷ್ಮಿ। ನಲಿನಲಿದಾಡಿ ನೋಡುತಲಿ॥ ಶಿರಹನಲ್ಲಾಡಿಸುತ್ತ ಸಿರಿಮುಡಿ ಮೇಲಿನ ವರಪಾರಿಜಾತಕುಸುಮವನು। ಅರಳು ಮಲ್ಲಿಗೆ ಅನಂತ ಹಸ್ತಗಳಿಂದ ವರವ ಕೊಬ್ಬಳು ವರಲಕ್ಷ್ಮಿ ॥70॥ ಅಕ್ಕ ತಂಗೇರಾಗ ಜತೇಯಲಾರತಿಯೆತ್ತಿ। ಮುತ್ತೈದೆಯರು ಹಾಡುತಲಿ। ಉತ್ತಮಾಂಗನಿಗೆ ಮಂತ್ರಾಕ್ಷತೆಗಳ ಹಾಕಿ। ಎತ್ತಿದಾರತಿ ಇಳಿಸಿದರು॥ ಉಂಡರು ಸಕಲ ಜನರು ಸಹಿತಾಗಿ। ತಕ್ಕೊಂಡು ಕರ್ಪೂರದ ವೀಳ್ಯಗಳ। ಉಂಡು ಸಂತೋಷದಿಂದಾಗ ಕೂತಿರಲು। ಬಂದೆರಗಿದರು ಬಾಲಕರು॥ ಅರಸ ತಾನಾಗಿಯೇ ಬಂದನೇನಮ್ಮಯ್ಯನು ಕರೆಸಿದ ನಿಮ್ಮನೆಂದೆನುತ। ಹರುಷದಿಂದವರ ಮಾತುಗಳ ಕೇಳಿ। ಆನಂದಭರಿತರಾದರೆ ಮನೆಯಲ್ಲಿ॥ ಗಡಗಡನಾಗ ಬಂದಾವು ತೇಜಿ ರಥಗಳು। ನುಡಿದವು ಭೇರಿ ವಾದ್ಯಗಳು। ಸಡಗರದಿಂದುಡು ಗೋರೆ ವೀಳ್ಯವ ಕೊಟ್ಟು ನಡದರು ತಮ್ಮ ಮಂದಿರಕೆ॥ ಅಕ್ಕ ತಂಗೇರು ಅಂದಣವೇರಿಕೊಂಡು ಲಕ್ಷ್ಮಿಯ। ಪಲ್ಲಕ್ಕಿಯೊಳಗೆ ಇರಿಸಿಕೊಂಡು। ಅರ್ತಿ ಯಿಂದಲಿ ಚಾಮರ ಬೀಸುತ। ತಮ್ಮ ಪಟ್ಟಣಕ್ಕೆ ನಡೆತಂದರು॥ ಆ ಗೋಪಾಲ ತಂದಾಗ ಕೈಯಲ್ಲಿ ಕೊಡೆ। ಈ ಕೋಲು ನಿಮ್ಮದೆಂದನುತ। ಹಾಕಿತು ಕಾಗೆ ಹಣದ ಬುತ್ತಿಗಂಟನು। ಸ್ವೀಕರಿಸಿದನೊಬ್ಬ ಸುತನು॥ ಮಡುವಿನೊಳಗಿ ಮುಳುಗಿ ಏಳುತಿರುವುದ ಕಂಡು। ಬುರುಡೆ ಹಣವ ಕೈಯ್ಗೊಂಡು। ನಡೆದ ಮಾರ್ಗದೊಳಗೆ ಹಾವಿಗೆ ಹಿರಿದುಕೊಂಡು ಹಿಗ್ಗಿ ನಡೆದರು॥ ದಢದಢನಾಗ ಬಂದಾ ಮಳೆ ಸುರಿಯಲು ಸಿರಿಲಕ್ಷ್ಮಿ ತೊಯ್ಯಲಾಗದೆಂದೆನ್ನ ಹರದೇರಿಬ್ಬರು ಸೆರಗನೆ ಮರೆಮಡಿ ಕತೆತಂದರಾ ತೋಟದಲಿ॥ ಒಂದು ಘಳಿಗೆ ಸ್ಥಳವ ಮಾಡಿಕೊಟ್ಟರೆ। ಬಂದೀತು ಬಹಳ ಪುಣ್ಯಗಳು। ಹಾಗೆಂದ ಮಾತಿಗೆ ಒಳಗಿನಿಂದ ಬಂದಾತನು ಇಲ್ಲೆಲ್ಲಿ ಸ್ಥಳವು ಹೋಗೆಂದ ॥80॥ ಮೋಹದಿ ಕರೆದು ಮನ್ನಿಸಿ ಮಹಾಲಕ್ಷುಮಿ ದೇವಿಗೆ ಸ್ಥಳವನೆ ಕೊಟ್ಟು। ನೀವು ಮತ್ತೀಗ ಕೋಪಿಸಲಾರದೀ ಲಕ್ಷ್ಮಿ ದ್ರೋಹಕ್ಕೆ ಒಳಗಾಗುವಿರೆಂದ್ಲು ॥ ಎತ್ತಣ ದ್ರೋಹ ಎಲ್ಲಿಯ ದ್ರೋಹ ಎನುತಲಿ ಪತ್ನಿಯ ಕರೆದು ಕೇಳಿದನು। ಸತ್ಯವಂತಳು ಈಕೆ ಸಮರಿಲ್ಲ ಎನುತಲಿ। ಭಕ್ತಿಯಿಂದಲಿ ಕರವ ಮುಗಿದಳು॥ ಹಿಂದಕ್ಕೆ ನಾ ಸೋಮೇಶಮ್ಮಾನ ಮನೆಯಲ್ಲಿ। ನಿಂದ್ಯ ಮಾಡಿದ ಶ್ರೀ ಲಕ್ಷ್ಮಿ। ಬಂದಿತು ನಮಗೆ ವನವಾಸವೆಂದೆನುತಲಿ। ಗಂಡಗೆ ತಿಳಿಯ ಹೇಳಿದಳು॥ ಹೊಳೆವ ಪುತ್ಥಳಿ ಗೊಂಬೆಯಂತಿದ್ದ ಮಕ್ಕಳ ನಾನು ಎಳೆ ಎಲೆ ಹಾಸಿ ಹೊಚ್ಚಿಟ್ಟೆ। ಹೊಳೆಯ ದಾಟುತ ಅಳಿದರೋ ಉಳಿದಿದ್ದಾರೊ ತಿಳಿಯಲಿಲ್ಲೆನುತ ಪೇಳಿದಳು॥ ಅವಳೆಂದ ಮಾತನೆ ಕೇಳಿ ತಂದೆತಾಯಿಯೆಂದು ಬಂದೆರಗಿದರು ಬಾಲೆಯರು। ಬಂದರೆಗಿದ ಬಾಲೆಯರನ್ನೇ ನೋಡಿ ಆನಂದಭವಿತರಾದರು॥ ಜಾತವಾದರೆ ಪಾರಿಜಾತದವನದಲ್ಲಿ। ಅನಾಥರಮಾಡಿ ನಾ ಬಂದೆ। ಪ್ರೀತಿಯಿಂದಲಿ ನಿಮ್ಮ ಸಲಹಿದವರ್ ಯಾರೆಂದು ಆ ತಾಯಿ ಸುತೆಯರ ಕೇಳಿದಳು॥ ತುಳಸಿಗೆನ್ನುತ ಬಂದು ಸೋಮೇಶಭಟ್ಟನು ಘಳಿಸಿಕೊಂಡೋಯ್ದು। ನಮ್ಮನ್ನು ಬೆಳೆಸಿ ಎರೆದು ಧಾರೆ ಎರೆದರಸು ಪ್ರಧಾನಿಗೆ। ಕಳಿಸಿಕೊಟ್ಟಳೆ ಸೋಮೇಶಮ್ಮ ॥ ಮೆಚ್ಚಿನ ಸೋಮೇಶಮ್ಮ ತಾ ಪೇಳಿದ। ಶುಕ್ರವಾರದ ಶುಭಲಕ್ಷ್ಮೀ। ಮಕ್ಕಳು ಸೊಸೆಯು ಸಂಪತ್ತು ಸೌಭಾಗ್ಯ। ಸೋಮೇಶ ಭಟ್ಟನ ಪುಣ್ಯವಿದೆಂದೆನಲು॥ ಹಿಂದಕ್ಕೆ ಸಾಕು ವನವಾಸವೆಂದೆನುತಲಿ। ತಂದುಕೊಟ್ಟರು ಉಡುಗೊರೆಯ। ಮುಂಗಯ್ಯ ಹಿಡಿದು ಮುಪ್ಪಿನ ತಾಯಿ ತಂದೇರ। ಅಂದವಣವನೆ ಏರಿಸಿದರು॥ ಭೋರೆಂಬೋ ನದಿಯು ದಾಟುತಲಿ ಕಟ್ಟಿಸಿದರು। ಊರಬಾಗಿಲಿಗೆ ತೋರಣವ। ಭೇರಿ ನಗಾರಿ ತುತ್ತೂರಿವಾದ್ಯಗಳಿಂದ ಸಾಲು ದೀವಟಿಗೆ ಸಂಭ್ರಮದಿ॥90॥ ಹಾಸುತ ನಡುಮುಡಿಗಳ ದಾರಿಯೊಳಗೆ। ಬೀಸುತ್ತ ಬಿಳಿಯ ಚಾಮರವ। ಸೋಸಿನಿಂದಲಿ ಕರೆತಂದರರಮನೆಗೆ। ಸಿಂಹಾನಸದಲೊಪ್ಪಿಸಿದರು॥ ಮಹಾಲಕ್ಷ್ಮೀಗೆ ಅರಳು ಪೂಗಂಧ ಕುಂಕುಮವಾ। ನಾರಿಯರು ಹರಿವಾಣದೊಳು ತಂದಿರಿಸಿ। ಪರಿಪರಿಯಲಿ ಸರ್ವಾಂಗ ಪೂಜೆಯಮಾಡಿ ಫಲಗಳನೊಪ್ಪಿಸಿ ಕೈಯ್ಯ ಮುಗಿಯೆ॥ ಕರಸಿದ ರಾಗ ಸಾಕಿದ ತಾಯಿತಂದೆಯರ। ಹರುಷವು ನಿಮ್ಮದೆಂದೆನುತ। ಅರಸು ಪ್ರಧಾನಿಯ ಕರಿಸಿ ತಾ ಬೈಗದಿ ಆನಂದ ಭರಿತರಾದಾರು। ಬಿತ್ತಿದ ಬೆಳೆರಾಶಿ ಉಕ್ಕುವ ನವಧಾನ್ಯ। ಉಕ್ಕುವಂದದಿ ಕ್ಷೀರರಸವು। ಲೆಕ್ಕವಲ್ಲದೆ ಮಕ್ಕಳಾಗೋರು ಮನೆತುಂಬ। ಮುತ್ತೈದೆತನವ ನೀಡುವಳು॥ ತಾ ಸುರಕಾಮಧೇನು ಎಂದೆನಿಸಿ

ಭೀಮೇಶಕೃಷ್ಣ ಸಹಿತನಾಗಿ। ಲೇಸಾಗಿದ್ದ ಸಂಪತ್ತನೆಲ್ಲ ಕೊಟ್ಟು। ವಾಸವಾದಳು ಮಹಾಲಕ್ಷ್ಮೀ।। ಮಂಗಳ ಜಯವೆನ್ನಿ ಮಂಗಳ ಶುಭವೆನ್ನಿ ಮಂಗಳಾಂಗನೆ ಮಹಾಲಕ್ಷ್ಮಿ ಕಂಗಳ ತೆರೆದು ಕಟಾಕ್ಷದಿ ನೋಡಲು। ಇಂಗೋದು ಸಕಲ ಪಾಪಗಳು।। ಬರಡು ಕರೆಯಲಿ। ಬಂಜೆಗೆ ಮಕ್ಕಳಾಗಲಿ। ಕುರುಡಗೆ ಕಂಗಳು ಬರಲಿ। ಬರ ಹರಿಯಲಿ ದಾರಿದ್ರ್ಯವು ತೊಲಗಲಿ। ಶ್ರೀ ಹರಿ ನಮ್ಮ ಹೃದಯದೊಳಗಿರಲಿ ।।ಕೃಷ್ಣಾರ್ಪಣಮಸ್ತು।।

ನೀರಜನಿಭ ನೇತ್ರೆಗೆ (ಆರತಿ) ರಾಗ: ಕಮಾಚ್

ನೀರಜನಿಭ ನೇತ್ರೆಗೆ ತಂದಾರುತಿಯನು ಮಾಡುವಾ। ಆರುತಿಯನು ಮಾಡುವಾ ತಂದಾರುತೀಯನು ಎತ್ತುವಾ।।ಪ।। ಕಮಲದಲ್ಲಿ ಉದ್ಭವಿಸಿದ ವಿಮಲ ಸುಗುಣ ನೇತ್ರೆಗೆ। ರಮಣೀಯರಾರುತಿಯನು ರಮಾಮಣಿಗೆ ಎತ್ತುವಾ।।1।। ಸರಸಿಜಾ ನೇತ್ರೆಗೆ ಪರಮ ಪವಿತ್ರೆಗೆ। ಹರುಷದಿಂದಲಾರುತಿಯನು ಸರಸಿಜಾಕ್ಷಿಗೆ ಎತ್ತುವಾ।।2।। ಇಂದಿರಾದೇವಿಗೆ ಗೋವಿಂದ ನರ್ಧಾಂಗಿಗೇ। ಚೆಂದದಿಂದಲಾರುತಿಯನು ಸುಂದರಾಂಗಿಗೆ ಎತ್ತುವಾ।।3।। ಕರಗಳನ್ನು ಮುಗಿದು ಬೇಡುವೆ ಕರುಣೆಯಿಂದಲೀ। ಕಮಲ ಲೋಕ ಜನನಿಗೆ ನರಹರಿಯ ಸತಿಗೆ ಎತ್ತುವಾ।।4।।

ಮಂಗಳಾರತಿ ಮಾಡುವೆ ಮಹಾಲಕ್ಷ್ಮೀಗೆ ರಾಗ: ಸುರುಟಿ

ಮಂಗಳಾರತಿ ಮಾಡುವೆ ಮಹಾಲಕ್ಷ್ಮಿಗೆ ಮಂಗಳಾರತಿ ಮಾಡುವೆ।।ಪ।। ಮಂಗಳಾರತಿ ಮಾಡಿ ಸಂಗೀತ ಪಾಡಿ ಶ್ರೀರಂಗನ ಸತಿಯ ಸರ್ವಾಂಗಗಳಿಗೆ ಶುಭ।।ಅ.ಪ.।। ಚಿತ್ರಗಳನೆ ಬರೆದು ರತ್ನ ತಟ್ಟೆಯಲಿ ಮುತ್ತು ಮಾಣಿಕ್ಯ ತುಂಬಿ। ಮುತ್ತೈದೆತನಗಳ ಕೊಟ್ಟು ರಕ್ಷಿಸು ಎಂದು ಚಿತ್ತಜನಯ್ಯನ ಮಿತ್ರೆ ಲಕ್ಷ್ಮೀಗೀಗ।।1।। ಸಾಲು ಸಾಲು ದೀಪಗಳ ಹಚ್ಚಿ ಸಂತೋಷದಿಂ ಪ್ರವಾಳ ಪಚ್ಚೆಯ ತುಂಬಿ। ಬಾಲ ಗೋಪಾಲನ ರಾಣಿಯ ಪಾಡುತ ನೀಲ ಕುಂತಳೆಗೀಗ ನೀರಾಜನವಿಟ್ಟು।।2।। ಶುಕ್ರವಾರದ ದಿನದಿ ಸಕ್ಕರೆ ಕ್ಷೀರ ಪಕ್ವಾನ್ನ ಉಣಬಡಿಸಿ। ಚೊಕ್ಕ ಚಿನ್ನದ ಹರಿವಾಣದ ಜ್ಯೋತಿ ತ್ರಿವಿಕ್ರಮ ನಾಗೇಶ ಶಯನನೊಲ್ಲಭಗೆ।।3।।

ಆರತಿಯ ಮಾಡುವೆವು ಲಕ್ಷ್ಮೀದೇವಿಗೆ

ಆರತಿಯ ಮಾಡುವೆವು ಲಕ್ಷ್ಮೀದೇವಿಗೆ। ಸಾಹೆಕ್ಕ ದೇಹಕ್ಕಗೆ ಸಂಪತ್ತು ಕೊಟ್ಟು ಲಕ್ಷ್ಮೀದೇವಿಗೆ।।ಪ।। ಸೋಮಕಾಂಬೆ ಪೂಜೆ ಮಾಡಿ ಭುಂಜಿಸುತಿರಲು। ರಾಜನರಸಿ ಆಡಿಗೆ ಕಂಡು ನಿಂದ್ಯ ಮಾಡಿದಳೂ।।1।। ನಿಂದ್ಯ ಮಾಡಿದ ಕಾರಣದಿಂದ ರಾಜ್ಯ ಹೋಗಲು। ಆಡವಿಯೊಳಗೆ ಎರಡು ಶಿಶುವು ಪೆತ್ತುವನಕೆ ನಡೆದಳು।।2।। ಸೋಮೇಶ ಭಟ್ಟ ತುಳಸಿಗೆಂದು ವನಕೆ ಬಂದನು। ಎರಡು ಮಕ್ಕಳ ಎತ್ತಿಕೊಂಡು ಮನೆಗೆ ಪೋದನು।।3।। ರಾಜ ಮಂತ್ರಿಗಳಿಗೆ ಮದುವೆ ಮಾಡಿಕೊಟ್ಟನು। ರಾಜನರಸಿ ದೇಹಕ್ಕ ಗೌರಿಯನ್ನೆ ಮರೆತಳು।।4।। ಸಾಹಿಕ್ಕನಾ ಮನೆಗೆ ಬಂಧು ಭೀಮೇಶನ ಕೃಷ್ಣನ ಸತಿಯ ಪೂಜಿಸಿ। ಮರಳಿ ತಮ್ಮ ರಾಜ್ಯ ಪಡೆದರು।।5।।

❖ ❖ ❖

30. ವರಮಹಾಲಕ್ಷ್ಮೀವ್ರತ

ಶ್ರೀಮತ್ ಸೌಭಾಗ್ಯಜನನೀ (ಧ್ಯಾನಶ್ಲೋಕ)

ಶ್ರೀಮತ್ ಸೌಭಾಗ್ಯಜನನೀಂ ಸ್ತೌಮಿಲಕ್ಷ್ಮೀಂ ಸನಾತನೀಂ। ಸರ್ವಕಾಮ ಫಲಾವಾಪ್ತಿ ಸಾಧನೈಕ ಸುಖಾವಹಾಮ್।।

ಬಂತಮ್ಮ ಇಂದು ಬಂತಮ್ಮ

ಬಂತಮ್ಮ ಇಂದು ಬಂತಮ್ಮ ।।ಪ।। ವರಲಕ್ಷ್ಮೀ ವ್ರತವಿಂದು ಬಂತಮ್ಮ। ಬಾರಮ್ಮ ತಾಯೇ ಬಾರಮ್ಮ ಪೂಜೆಯ

ಕೈಗೊಳ್ಳು ಬಾರಮ್ಮ ।। ಒಲವಿಂದ ವರಗಳ ತಾರಮ್ಮ ।।1।। ಹಾಲಿನ ಕಡಲಿಂದ ಬಂದವಳೇ। ಶೇಷಶಯನನ ಕೈಯ ಹಿಡಿದವಳೆ। ಕಮಲ ಪುಷ್ಪದೆ ನಿಂತಿರುವವಳೆ। ಭಾಗ್ಯದ ಬಾಗಿಲ ತೆರೆವವಳೆ।।2।। ಕೊಲ್ಲಾಪುರದಲಿ ನೆಲೆಸಿರುವವಳೆ। ಕೋಲಾಸುರ ಸಂಹಾರಿಣಿಯೇ। ಕಮಲನಾಭನ ಪ್ರಿಯಳೆ ಕಮಲೆ। ಕರುಣಾಮಯಿ ವರದಾಯಿನಿಯೇ।।3।। ಶ್ರಾವಣ ಮಾಸದೆ ಶುಕ್ಲ ಪಕ್ಷದೇ। ಎರಡನೇ ಶುಕ್ರವಾರ। ಶ್ರದ್ಧೆಯಿಂದ ಪೂಜಿಸೆ ನಿನ್ನ। ಸೌಭಾಗ್ಯ ನೀಡುವೆ ಕೈಯ್ಯಾರೆ।।4।।

ಬಾರೆ ಬಾ ಮನೆಗೆ — ರಾಗ: ನಾದನಾಮಕ್ರಿಯ

ಬಾರೆ ಬಾ ಮನೆಗೆ ವರಮಹಾಲಕ್ಷ್ಮಿ ।।ಪ।। ಬಾರಮ್ಮ ಮನೆಗೆ ನೀ ತೋರಮ್ಮ ಕರುಣವ। ಕೋರಿದಿಷ್ಟಾರ್ಥವ ಪಾಲಿಸಲು ಬೇಗ।।1।। ಕಡಗ ಕಂಕಣ ಬಳೆ ಸಡಗರದಿಂದಲಿ ತೊಟ್ಟು। ದೃಢವಂದಿತಳೆ ನಿನ್ನ ಅಡಿಗಡಿಗೆರಗುವೆ।।2।। ಹೊನ್ನ ಗಂಟೆಯು ಗೆಜ್ಜೆ ಸರ ಪದಕಗಳಿಂದ। ಹುಣ್ಣಿಮೆ ಚಂದ್ರನಂತ್ಹೊಳೆಯುತಲಿ ಬೇಗ।।3।। ದೋಷರಹಿತ ಶ್ರೀನಿವಾಸನನ್ನು ಭಜಿಸುವ। ದಾಸರಿಗೊಲಿದು ನಿತ್ಯ ಪೊರೆಯುವೋಳೆ।।4।।

ನಡೆದು ಬಾರಮ್ಮ ಮನೆಗೆ — ರಾಗ: ಮೋಹನ-ಆದಿತಾಳ

ನಡೆದು ಬಾರಮ್ಮ ಮನೆಗೆ ವರಮಹಾಲಕ್ಷ್ಮಿಯೇ।।ಪ।। ನಡೆನಡೆ ನಮ್ಮ ಮನೆಗೆ ನಡೆಮುಡಿ ಹಾಸುವೆ। ಅಡಿಗಡಿಗೆರಗುವೆ ಕಡಲಶಯನನ ರಾಣಿ।।1।। ಬಡವರ ಮನೆಗೆ ನೀ ತಡೆಯದೆ ಬಾರಮ್ಮ। ಕೊಡು ಕೊಡು ಸೌಭಾಗ್ಯ ಒಡೆಯಳೆ ಬೇಡುವೆ।।2।। ಮುತ್ತಿನ ಮಂಟಪದಿ ರತ್ನಕಂಬಳಿ ಹಾಸಿ। ಸುತ್ತು ಸಾಲಿನ ದೀಪ ಹಚ್ಚಿರುವೆ ಬಾರಮ್ಮ ।।3।। ಇಷ್ಟದಿಂದಲಿ ಬಂದು ಕಷ್ಟಗಳನ್ನೆಲ್ಲಾ। ದಿಟ್ಟದಿಂ ಪರಿಹರಿಸೆ ಶ್ರೇಷ್ಠ ವಿಪ್ರನರಾಣಿ।।4।। ಗೆಜ್ಜೆ ಪಾಡುಗರುಳಿ ಸದ್ದು ಘಲೀರೆನುತ। ಹೆಜ್ಜೆಯ ನಿಕ್ಕುತ ಬಾ ಸಜ್ಜನ ಪ್ರಿಯಳೆ।।5।। ಹರಿದ್ರಾ ಕುಂಕುಮವಿಟ್ಟು ಖಿಲದ್ವಜನೊಡಗೂಡಿ। ನಗೆಮೊಗತೋರುತ ಮಗುವಿನ ಮನೆಗೆ।।6।। ಕಂಕಣ ಕರಿಬಳೆ ಕಿಂಕಿಣಿನಾದದಿ। ಕುಂಕುಮಾಂಕಿತೆ ದೇವಿ ಬಿಂಕವಿಲ್ಲದೆ ತಾಯೆ।।7।। ಸಾಗರ ನಂದಿನಿ ಭೋಗಿ ಸನ್ನಿಭವೇಣಿ। ನಾಗೇಶ ಶಯನನ ಭೋಗದ ರಾಣಿಯೆ।।8।। ಮರುಗ ಮಲ್ಲಿಗೆ ಜಾಜಿ ಸುರಗಿ ಸಂಪಿಗೆ ದವನ। ಒಳ್ಳೆಯ ಸುಮಗಳಿಂದ ಅರ್ಚಿಸುವೆ ನಾನು।।9।। ಶುಕ್ರವಾರದ ಪೂಜೆ ಅರ್ತಿಯಿಂದಲಿ ಮಾಳ್ಪೆ। ಕರ್ತೃ ನರಸಿಂಹನೊಡನೆ ತಟ್ಟನೆ ಬಾರಮ್ಮ ।।10।।

ಕಮಲಾಮುಖೀ ಬಾ ಸುಂದರಿಯೇ — ರಾಗ: ಮಾರ್ಗಹಿಂದೋಳ

ಕಮಲಾಮುಖೀ ಬಾ ಸುಂದರಿಯೇ।।ಪ।। ಕಾಮಸುಂದರೀ ಭಾಮಿನೀಮಣಿಯೇ। ರಾಮರಾಜನಾ ವಾಮಭಾಗ ಪ್ರಿಯಳೇ।।ಅ.ಪ।। ಅಕ್ಕರಾದಿಂದಾ ಕರೆವೇ ಬಾರೇ। ಚಿಕ್ಕಮಕ್ಕಳೆಲ್ಲಾ ನಕ್ಕೂ ನಲಿಯುತಾಲೀ। ಶುಕ್ರವಾರದಿಂ ಶುಭದಿನಗಳಲ್ಲೀ। ಅಕ್ಕರಾದಿಂಬಾರೆ ತ್ರಿವಿಕ್ರಮ ಪ್ರಿಯಳೇ।।1।। ಹೆಜ್ಜೆಯಾ ಮೇಲೊಂದ್ಹೆಜ್ಜೆಯಾನಿಕ್ಕುತಾ ಬಾರೆ। ಗೆಜ್ಜೆ ಕಾಲ್ಗಡಾಗಾ ಘಲ್ಲುಘಲ್ಲೆನೂತಾ। ಸಜ್ಜನಾರೆಲ್ಲಾ ಸ್ತುತಿಗೈಯುವೋರೇ। ಮೂರ್ಜಗಾವನೆಲ್ಲಾ ಪರಿಪಾಲಿಸುವಳೇ।।2।। ತುಂಬೂರು ನಾರದ ಗಾನ ಮಾಡುವೋರೇ। ರಂಭೆ ಮೇನಕೆಯರೂ ನಾಟ್ಯವಾಡುತಿಹರೂ। ಕುಂಭಿಣೀ ಸತಿಯಾರೂ ಪಾಡಿ ಪೊಗಳುವೋರೇ। ಕಂಬುಕಂಠ ಲಕ್ಷ್ಮೀ ಹಸೆಗೆದ್ದು ಬಾರೇ।।3।।

ಬಂದಳು ನೋಡೆ ಮಂದಿರದೊಳು

ಬಂದಳು ನೋಡೆ ಮಂದಿರದೊಳು ಭಾಗ್ಯದಾಲಕ್ಷ್ಮೀ।।ಪ।। ಇಂದುವದನೆ ಮಂದಹಾಸದಿಂದ ನಗುತಲಿ।। ಅಂದಿಗೆ ಕಿರುಗೆಜ್ಜೆರುಳಿಯು ಘಿಲು ಘಿಲ್ಲೆನುತಲಿ। ಮುದದಿ ಪಾದವಿಕ್ಕುತ ಪದ್ಮನಾಭನರಸಿಯು।।1।। ಎಡಬಲಗಳಲಿ ಗಜಗಳಿಂದ ಪೂಜೆಗೊಳುತಲಿ।। ಬಿಡದೆ ತನ್ನ ಕರಕಮಲದಿ ವರವ ಕೊಡುತಲಿ।।2।। ಸೃಷ್ಟಿಗೊಡೆಯ ತಂದೆ ಜಗನ್ನಾಥ ವಿಠಲನ ಪಟ್ಟದರಸಿ ಅರ್ತಿಲಿಂದ ಭಕ್ತರ ಮನೆಗೆ।।3।।

ಬಳೆಯನಿಡಲು ಬಂದ ಬಳೆಗಾರನು

ಬಳೆಯನಿಡಲು ಬಂದ ಬಳೆಗಾರನು। ಮುತ್ತು ಮಾಣಿಕ್ಯದ ಪೆಟ್ಟಿಗೆಯೊಳಗೊಪ್ಪುವ ಅಚ್ಚ ನೀಲದ ಬಳೆಗಳ ನಂಬಟ್ಟು ಮಿತ್ರರ ಮನಸು ವಲಿಸಬೇಕೆನುತಲಿ ಕುಸುಮನಾಭನು ಬಳೆಗಾರ ನಾದ॥1॥ ರಂಗು ಮಾಣಿಕ್ಯದ ಪೆಟ್ಟಿಗೊಯೊಳಗೊಪ್ಪುವ ಅಂಬುನೀಲದ ಬಳೆಗಾಳ ನಿಂಬಿಟ್ಟ ರಂಭೇರ ಮನಸು ಒಲಿಸಬೇಕೆನುತಲಿ ರಂಗರಾಯನು ಬಳೆಗಾರನಾದ॥2॥ ಹಸಿರು ಹಂಗನ ಗರಿ ಜೇನುತುಪ್ಪದ ಬಳಿ ಕುಸಲದ ಕುಂದಣದ ಹಸಿರು ಬಳಿಹೊಸ ಪರಿ ಬಳೆಗಳ ಇಡುವೆನೆಂದೆನುತಲಿ ಶ್ರೀಕೃಷ್ಣರಾಯನು ಬಳೆಗಾರನಾದ॥3॥

ಪೂಜೆಮಾಡೋಣ ಬಾ ವರಲಕುಮಿಯ

ಪೂಜೆ ಮಾಡೋಣ ಬಾ ವರಲಕುಮಿಯ। ಪೂಜೆ ಮಾಡೋಣ ಬಾ॥ಪ॥ ಗಂಧದೆಣ್ಣೆ ಕುಂದಣದೆಣ್ಣೆ ಛಂದವಾದಪೂಗಳೆಣ್ಣೆ ಸುಂದರಾಂಗಿ ಮೈಗೆ ಪೂಸಿ ಆನಂದದೊಳಗೆ ಅಭ್ಯಂಗ ನೀಡೋಣ॥1॥ ಗಂಗೆ ಯಮುನೆ ಕೃಷ್ಣವೇಣಿ ತುಂಗವರದ ನದಿಯ ಜಲವ॥ ಹೊಂಗಲಸದಿಂತುಂಬಿ ರಂಗನಂಗನಿಯಳ ನೆರೆದು ಬೇಗ॥2॥ ಗಂಧ ಕುಂಕುಮಾಂಕಿತ ಪರಿಮಳದಿಂದ ಅರಿಶಿಣವನ್ನು ಶಿರಿಗೆ। ಹೊಂದಿಸಿ ಪೊಂದೆಡೆಗಳನ್ನು। ಇಂದು ನೋಡಿಕಣ್ಣ ತುಂಬ॥3॥ ಛತ್ರಚಾಮರ ವ್ಯಜನ ರೂಪ ಪಾತ್ರದೊಳಗೆ ಶಿರಿಯನಿರಿಸಿ॥ ಛತ್ರ ಚಿತ್ರ ಕುಸುಮ ಮಾಲೆ ಪತ್ರವಿಟ್ಟು ಕರವ ಮುಗಿದು॥4॥ ದೀಪಧೂಪ ಸಾಲುಗಳನ್ನು ಸೌಪಲಾದ್ಯಡಬಲದಲಿಟ್ಟು॥ ಶ್ರೀಪತಿ ರಮಣಿಯಳಿಗೊಲಿದು ಪೂರ್ಣದಿ ಶ್ರೀಹರಿಯ ನೆನೆದು॥5॥ ಭಕ್ಷ್ಯಪಾಯಿಸಕಲಸಾನ್ನವ ಅಕ್ಷಯ ಪಾತ್ರದೊಳು ಬಡಿಸಿ॥ ಲಕ್ಷ್ಮೀದೇವಿಗೆ ಅರ್ಪಿಸಿ ಕರಕುಕ್ಷಿಯೊಳಿಟ್ಟು। ಬೇಡಿಕೊಂಬೆ॥6॥ ಹಾಸುಮಂಚದೊಳಗೆ ಹರಿಯು ಪಾರ್ಶ್ವದೊಳಗೆ ಶಿರಯನಿರಿಸಿ॥ ಕೇಶರಾಕರ್ಪೂರ ಮಯಸುವಾಸಿತ ತಾಂಬುಲ ಕೊಟ್ಟು॥7॥ ಮುತ್ತು ರತ್ನ ವಜ್ರದಿಂದ ಕೆತ್ತಿದಾ ಹೊನ್ ತಾಟಿನಲ್ಲಿ ಇಟ್ಟು ಚಂದ್ರಕಾಂತೆ ಜೋಡು॥ ಎತ್ತಿ ತೂಗಿ ಬೆಳಗಿಪಾಡಿ॥8॥ ಪ್ರತಿಜನ್ಮ ಜನ್ಮದಲಿ ಶ್ರೇಷ್ಠ ಪತಿ ಸೌಭಾಗ್ಯ ಕೊಟ್ಟು॥ ಸಂಪತ್ತುಗಳ ಕೊಡುವ ಭೀಮೇಶ ಕೃಷ್ಣನ ಸತಿಯ॥9॥

ಆರೋಗಣೆ ಮಾಡಂಬುಜ ನಯನೆ (ನೈವೇದ್ಯ)

ಆರೋಗಣೆ ಮಾಡಂಬುಜ ನಯನೇ॥ ಸಾಮವೇದಸದನೆ॥ ಮಾರನಜನನಿಯೆ ಮಧುಸೂದನಪ್ರಿಯೆ॥ ಕಾಮಿತಫಲದಾಯಿತಾಯೇ॥ಪ॥ ಶುದ್ಧ ಸ್ನಾನವ ಮಾಡಿ ಸುದತಿಯರು ಮುದದಿಂದ॥ ಶುಭ್ರವಸ್ತ್ರವ ಉಡುಸಿ ಲಕ್ಷ್ಮೀಗೆ ತಿದ್ದಿ ತಿಲಕನಿಟ್ಟು ತೀವ್ರದಿ ಲಕ್ಷ್ಮೀಯ॥ ವಜ್ರಮಾಣಿಕದ ಮಂಟಪದಿ ಕುಳ್ಳಿರಿಸೊರು॥1॥ ಉಪ್ಪು ಉಪ್ಪಿನಕಾಯಿ ಹಪ್ಪಳ ಸಂಡಿಗಿ ಚಕ್ಕುಲಿಕರಚಿಕಾಯನು॥ ಅಷ್ಟು ಜೀನಸಿನ ಭಕ್ಷಂಗಳ ಬಡಿಸೆದ ಸರ್ಪಶಯನನ ರಾಣಿ ಭುಂಜಿಸು ಬೇಗನೆ॥2॥ ಮೀಸಲು ಮಂಡಿಗೆ ಸೂಸಲು ಎಣ್ಣೊರಿಗಿ ದ್ವಾಸಿಯು ನವನೀತಾ ಮೊದಲಾದ ಕಾಸಿದ ತುಪ್ಪಾ ಕೆನಿಮೊಸರು ಮಧುಕ್ಷೀರಾ॥ ಮೀಸಲದಡಿಗಿ ಸುವಾಸನಿಯರು ಬಡಿಸ್ಯಾರು॥3॥ ನಿರಾಹಾರದಿಂದಲಿ ಮಾಡಿದ ಅಡಿಗೆಯಾ ಲಲನೆರು ತಂದು ಬಡಿಸೋರು ಪುಡಿ ಎಣ್ಣೋರಿಗಿ ಸಿಖಿಯದ ಉಂಡಿಯ ಭೀಮೇಶ ಕೃಷ್ಣನ ಮಡದಿಗೆ ಬಡಿಸ್ಯಾರ॥4॥

ಬೇಡುವೇನೇ ಲಕ್ಷ್ಮೀ ಎನಗೆ (ವರಬೇಡಿದ್ದು) ರಾಗ: ಜುಂಜೋಟಿ-ರೂಪಕತಾಳ

ಬೇಡುವೇನೇ ಲಕ್ಷ್ಮೀ ಎನಗೆ ನೀಡೆ ವರವನು। ಪನ್ನಗಾದ್ರಿ ಶೇಷಶಯನ ವಿಠಲನ ಪ್ರಿಯೆ ॥ಪ॥ ತರುಣಿಯರಿಗೆ ವರವ ಕೊಡುವ ಸಿರಿಯು ನೀನೆಲೆ। ಕರುಣದಿಂದ ನೋಡಿ ಎನ್ನ ಪೊರೆವ ವರ ಮಹಾಲಕ್ಷ್ಮಿಯೆ॥1॥ ಎಷ್ಟು ಕಾಲದಿಂದ ನಿನ್ನ ಪುಟ್ಟ ಚರಣವ। ಮುಟ್ಟಿ ಭಜಿಸಿ ಪೂಜೆ ಮಾಳ್ಪೆ ಶ್ರೇಷ್ಠಳಾಮಾಡೇ॥2॥ ನಿನ್ನ ಹೊರತು ಜಗದೊಳಗೆ ಅನ್ಯರಾ ಕಾಣೆ। ಎನ್ನ ಪಾಪವನ್ನು ಕಳೆದು ಧನ್ಯಳಾಮಾಡೆ॥3॥

ವರಲಕ್ಷ್ಮೀ ಬಾರೆ ಎಂದು

ವರಲಕ್ಷ್ಮೀ ಬಾರೆ ಎಂದು ಎದುರುಗೊಂಡು ಕರೆತಂದರೂ ಒಳಗೇ॥ಪ॥ ಪರಿಪರಿವಿಧದಿಂದ ಗೃಹವಲಂಕರಿಸುತೆ ಸರಸಿಜಾಂಬಕಿಯರು ಮಂಗಳಸ್ನಾನವ ಮಾಡೆ। ಮುತ್ತೈದೆಯರೆಲ್ಲರೂ ಅಂಗಳ ಬಳಿದೂ ಕಸ್ತೂರಿ ತಳಿಯತೊಟ್ಟು ಮುತ್ತಿನ ರಂಗೋಲಿ ಮಕರ ತೋರಣ ಕಟ್ಟಿ ಛತ್ರ ಚಾಮರ ಪತಾಕೆಗಳಿಂದೊಪ್ಪುವೋ। ರತ್ನ ಮಂಟಪ ಮಧ್ಯದಲ್ಲಿ ಚಿತ್ರ ಸಿಂಹಾಸನದಿ ಭಕುತಿಲಿ। ಸತ್ಯನಾರಾಯಣನ ಮಡದಿಯ ಸತ್ಯವಂತರು ಕುಳ್ಳಿರಿಸುತಾ॥1॥ ಸರಸರನಾಗರವು ಕ್ಯಾದಿಗಿ ನಾಗಮುರಗಿ ಮುತ್ತಿನ ಓಲೆಯು ಸರಪಳಿ ಪೈಜಣೆ ಮುರುವು ಬಾವುಲಿ ಬುಗುಡಿ ಸ್ಥಿರವಾದ ಮಾಂಗಲ್ಯ ಸೂತ್ರ ಕಟ್ಟಿರೆ ನೀವು ಸುರಗಿ ಮಲ್ಲಿಗೆ ಪಾರಿಜಾತವು ಸರಸಿಜಂಗಳು ಸ್ವರ್ಣಕೇತಕಿ ಪರಿಮಳ ದ್ರವ್ಯಗಳು ಗಂಧವು ಅರಿಶಿನ ಕುಂಕುಮದೊಳರ್ಪಿಸಿ॥2॥ ಶ್ರೀಶನ ರಾಣಿಗೀಗ ಧೂಪದೀಪಾದಿಗಳ ಹಚ್ಚುತಾ ಲೇಸಾದ ಪರಮಾನ್ನ ಶಾಲ್ಯಾನ್ನ ದಧ್ಯಾನ್ನ ಮೀಸಲು ಹೋಳಿಗೆಯು ಮಂಡಿಗೆಯು ಫೇಣಿಯು ಬೇಸನ್ನು ಚಕ್ಕುಲಿಯು ತೇಂಗೊಳಲು ಕಡುಬುಗಳ ಘೃತ ದಧಿ ಸೋಗಿನಿಂದಲಿ ತಂದು ಬಡಿಸುತಾ॥3॥ ಸಾಗರಕನ್ನಿಕೆಗೇ ನಾರಿಕೇಳ ಬೇಗನೆ ಒಡೆಯುತ್ತಾ ಪೂರ್ಣಫಲವು ಏಲಕ್ಕಿ ಲವಂಗ ನಾಗವಲ್ಲಿಯ ಚೂರ್ಣ ಅರ್ಪಿಸಿ ನಗುತ್ತಾ ನಾಗವೇಣಿಯರ್ ಪೂಜಿಸಿ ಭೋಗಿಶಯನನ ಮನದಿ ನೆನೆದನುರಾಗದಿಂ ಕರದಲ್ಲಿ ಬಂಧಿಸಿ ಶೀಘ್ರದಿಂ ವರಗಳನು ಬೇಡುತ್ತಾ॥4॥ ಚಾರುಮತಿ ಸ್ವಪ್ನದಲ್ಲಿ ಇಂದೆ ಬಂದು ಕೋರಿದಭೀಷ್ಟವೀವ ಸಾರವ್ರತದ ಮಹಿಮೆ ಸಂತಸದಲಿ ಪೇಳ್ವ ವಾರಿಜಾಂಬಕಿ ಎದ್ದು ವ್ರತಮಾಡಿ ನಡೆದಳು ಸಾರಐಶ್ವರ್ಯಗಳು ಸಂತತಿ ಚಾರುತರ ಸುಜ್ಞಾನ ಕೀರ್ತಿಯು ವೀರರಘುಪತಿ ವಿಠ್ಠಲರಾಯನ ನಾರಿ ಲಕುಮಿಯ ಕರುಣದಿಂದಲೀ॥5॥

ಬಾರಮ್ಮ ಎಮ್ಮ ಮನೆಗೆ — ರಾಗ: ಭೈರವಿ

ಬಾರಮ್ಮ ಎಮ್ಮ ಮನೆಗೆ ವರಲಕ್ಷುಮಿ॥ಪ॥ ಬಾರೇ ಬಾರೇ ಕರವೀರ ನಿವಾಸಿನಿ ವಾರಿಜನಾಭನ ಪ್ರೇಮದ ಭಾಮಿನಿ। ಸಾರ ಸುಜನರಪರಾಧವಕ್ಷಮಿಸುತ ಚಾರು ಚರಣ ಗೆಜ್ಜೆಯ ಧ್ವನಿ ಮಾಡುತ॥1॥ ತಡ ಮಾಡದೆಲೆ ಬಾ ಕಡಲ ಕುಮಾರಿಯೆ। ಅಡಿಗಳಿಗೆರೆಗಿ ನಾ ನಡೆ ಮುಡಿ ಹಾಸುವೆ। ಬಡನಡು ಬಳುಕುತ ಬಿಡಿ ಹೂವು ಉದುರುತ। ಮೃಡಸಖ ಶ್ರೀ ಹರಿಯೊಡಗೂಡಿ ಬೇಗನೆ॥2॥ ದೃಢಸುಭಕುತಿಯಲಿ ಪೊಡಮಡುವೆನುನಾ। ಕಡುಮಮತೆಯ ತೋರುತ ಎನ್ನೆಡೆಗೆ। ನಡೆದು ಬಾರೆ ಮೆಲ್ಲಡಿಗಳನಿಡುತಲಿ। ಒಡೆಯ ನಾಗೇಶಶಯನನ ಮಡದಿಯೆ॥3॥

ಬಂದು ನೆಲಸೌ ಇಂದಿರೆ — ರಾಗ: ಅಭೇರಿ

ಬಂದು ನೆಲಸೌ ಇಂದಿರೆ ನಮ್ಮ ಮಂದಿರದೊಳಗಾನಂದದಿ। ಸುಂದರವಾದ ಪಾದಪದ್ಮಕೆ ಚಂದದಿ ವಂದಿಸಿ ಪೂಜಿಪೆನುತಾಯೇ॥ಪ॥ ಹಲವು ತಾಣದಿ ಕಾಣದೆ ನಿನ್ನನು ಬಳಲುತಲಿದ್ದೆನು ದೇವಿಯೆ। ನಳಿನನೇತ್ರೆ ಕರುಣದಿಂದೊಲಿದು ಪರಮಾದರದಿಂ ಬಂದೆಯಾ ತಾಯೇ॥1॥ ಮುತ್ತು ಮಾಣಿಕ್ಯ ಮಂಟಪದಲ್ಲಿ ಸುಚಿತ್ರದ ಪೀಠವನಿಟ್ಟಿರುವೆ। ವಿಷ್ಣು ಸಹಿತ ಲಕ್ಷ್ಮೀದೇವಿಯ ಭಕ್ತಿಯಿಂ ಧ್ಯಾನಿಸಿ ಬೇಡುವೆನು ತಾಯೆ॥2॥ ವರಮಣಿ ಖಚಿತದ ಸಿರಿಗಿಂಡಿಯೊಳು ಸುರನದಿ ಗಂಗೆಯತಂದಿಹೆನು। ಸರಸಿಜಾಕ್ಷಿಯ ಪಾದವ ತೊಳೆದು ಕರವಸ್ತ್ರಗಳಿಂದೊರೆಸುವೆನು ತಾಯೆ॥3॥ ಅಂಗಜಜನನಿಗೆ ಅಭಿಷೇಕವನು ಸಂಭ್ರಮದಿಂದಲಿ ಮಾಡುವೆನು। ಚಂದದ ಪೀತಾಂಬರವನು ತಂದು ಸುಂದರಿ ನಡುವಿಗೆ ಉಡಿಸುವೆನು ತಾಯೆ॥4॥ ಸಿರಿಮುಡಿ ಬಾಚುತ ಹೆರಳನು ಹಾಕುತ ಪರಿಪರಿಪುಷ್ಪಗಳ್ ಮುಡಿಸುವೆನು। ಸುರುಚಿರರೂಪೆಗೆ ಸರ್ವಾಭರಣವ ಹರುಷದೊಳಿಟ್ಟು ಪೂಜಿಪೆನು ತಾಯೆ॥5॥ ಅರಿಶಿನ ಕುಂಕುಮ ಗಂಧ ಅಕ್ಷತೆ ಪರಿಪರಿ ಪುಷ್ಪ ಮಾಲೆಗಳಾ। ಸಿರಿಧರನರಸಿಯ ಕೊರಳಿಗೆ ಹಾರವ ಪರಮಾದರದಿಂ ಹಾಕುವೆನು ತಾಯೆ॥6॥ ಪರಿಮಳ ವಾಸನೆಯಿಂದೊಡಗೂಡಿದ ಪರಿಮಳ ಧೂಪ ದೀಪಗಳಾ। ಬಗೆಬಗೆ ಭಕ್ಷ್ಯ ಪಾಯಸವಿತ್ತು ಸವಿಯಾರೋಗಣೇ ಮಾಡಿಸುವೆ ತಾಯೇ॥7॥ ಚರಣವ ತೊಳೆದು ದೇವಿಯೆ ನಿಮಗೆ ಕರ್ಪೂರ ವೀಳ್ಯವನಿರಿಸುವೆನು।

ಸರ್ಪಶಯನನ ರಾಣಿಯೆ ನಿಮಗೆ ಕರ್ಪೂರದಾರತಿ ಬೆಳಗುವೆನು ತಾಯೆ ||8|| ಮಂಗಳ ವಾದ್ಯಗಳಿಂದೊಡಗೂಡಿ ಅಂಗನೇಯರು ಹರುಷದಲೀ| ಮಂಗಳಾರುತಿ ಮಾಡುತ ಮುದದಿ ನಿಂದು ವಂದಿಸಿ ಬೇಡುವರು ತಾಯೆ||9|| ರಕ್ಷಿಸು ರಕ್ಷಿಸು ರಮಣಿಯೆ ಎಂದು ಪ್ರದಕ್ಷಿಣೆಯನ್ನೇ ಮಾಡುವೆನು| ರಕ್ಷಿಸಮ್ಮಾ ಲಕ್ಷ್ಮೀ ದೇವಿ ಭಕ್ತಿ ಭಿಕ್ಷವಾ ಬೇಡುವೆನು ತಾಯೆ||10||

ಇಂದು ಶುಕ್ರವಾರ ಶುಭವ ತರುವ ವಾರಾ

ಇಂದು ಶುಕ್ರವಾರ ಶುಭವ ತರುವ ವಾರಾ ಸುಮಂಗಲಿಯರೆಲ್ಲಾ ನಿನ್ನ ಪೂಜಿಸುವ ಪುಣ್ಯ ವಾರಾ||1|| ಮುಂಜಾನೆಯ ಮಡಿಯುಟ್ಟು ಕುಂಕುಮವ ಹಣೆಗಿಟ್ಟು| ರಂಗೋಲಿಯ ಬಾಗಿಲಿಗಿಟ್ಟು ಹಣ್ಣುಕಾಯಿ ನೀಡುವ ವಾರಾ||2|| ಮಲ್ಲಿಗೆ ಜಾಜಿ ಹೂಮಾಲೆ ಹಾಕಿ ಚಂದನ ಹಚ್ಚಿ ಸಿಂಗಾರ ಮಾಡಿ| ಕರ್ಪೂರದಾರತಿ ನಿನಗೇ ಬೆಳಗಿ ಭಕ್ತಿಯಿಂದಲಿ ಭಜಿಸುವವಾರಾ||3|| ಸುವಾಸಿನಿಯರಿಗೆ ಕುಂಕುಮಹಚ್ಚಿ ಸಂಭ್ರಮದಿಂದ ಬಾಗಿನ ನೀಡಿ| ಸರ್ವಮಂಗಳೆಯ ಕೀರ್ತಿಯ ಹಾಡಿ ಸಕಲ ಸೌಭಾಗ್ಯ ಬೇಡುವ ವಾರಾ||4||

ಕಣ್ಣ ತುಂಬ ಕಂಡೆನಮ್ಮ — ರಾಗ: ಶ್ರೀರಾಗ-ಆದಿತಾಳ

ಕಣ್ಣ ತುಂಬ ಕಂಡೆನಮ್ಮ ಕಮಲ ನೇತ್ರೆಯ| ವರ್ಣಿಸಲೆನ್ನಿಂದ ತರವೆ ಭಾಗ್ಯಲಕ್ಷ್ಮೀಯಾ||ಪ|| ಸಣ್ಣ ನಡುವಿನ ಬಾಲೆ ಸರಿಗೆ ಪೀತಾಂಬರದ ಮೇಲೆ| ಚಿನ್ನದ ವಡ್ಯಾಣವಿಟ್ಟ ಚೆಲುವೆ ಮೂರ್ತಿಯಾ||1|| ಕಣ್ಣಿಗೆ ಅಂಜನವ ಹಚ್ಚಿ ಕರ್ಣದಿ ಆಭೂಷಣವ ಧರಿಸಿ| ಕೆನ್ನೆಗೆ ಅರಿಶಿನವನ್ನೆ ತೊಡೆದು ಕದಪು ಹೊಳೆಯುತ್ತಾ||2|| ಕೊರಳೊಳಗ್ಹಾರ ಪದಕ ಮಧ್ಯ ಹೊಳೆಯುತ್ತಿರುವ ಸರಿಗೆ ಗೊಂಡ್ಯ ಕಿರುನಗೆಯ ತೋರುತ್ತಿರುವ ಹಸನ್ಮುಖಿ ಸುಂದರಿಯಾ||3|| ಕರವೀರ ಪುರದಲ್ಲಿ ನೆಲಸಿ ಭಕ್ತರಿಗೆ ಚೆಲುವೆ ಮೂರ್ತಿಯ ಅಭಯವ ಸಲಿಸಿ| ಸಿರಿ ಸಂಪದ ಸೌಭಾಗ್ಯ ಕೊಡುವ ವರಮಹಲಕ್ಷ್ಮಿಯ||4||

ಹೇಗೆ ಶೋಭಿಸುತಿಹಳೋ — ರಾಗ:ಕಾಂಭೋದಿ

ಹೇಗೆ ಶೋಭಿಸುತಿಹಳೋ| ಶ್ರೀವರ ಲಕ್ಷ್ಮೀ| ಎಂತು ಶೋಭಿಸುತಿಹಳೋ ದೇವಿಯು||ಪ||

ಕಂತುಪಿತನಾರ್ಧಾಂಗಿ ಲಕ್ಷ್ಮಿಯು| ಸಂತಸಾದೊಳು ಭಕ್ತ ಜನರಿಗೆ|| ಚಿಂತಿತಾರ್ಥವನಿತ್ತು ಪಾಲಿಪೊಳೆಂತು||1|| ಅಂದು ದೇವಾಸುರರು| ಅಂಬುಧಿಯ ಕಡೆಯಲು|| ಅಂಬುಜದೊಳು ಜನಿಸಿ| ಸಂಭ್ರಮದೀ ಬೇಗ| ಅಂಬುಜೋದ್ಭವ| ಅಮರಾವಂದಿತೆ| ಕಂಬುಕಂದರೀ| ಕಮಲಾನಾಭನ| ರಂಜಿಸುತ್ತಿಹ| ಹೃದಯ ಕಮಲದೊಳ್ ಇಂದಿರೆಯು ತಾನಿಂದು ಹರುಷದಿ||2|| ಕ್ಷೀರ ವಾರುಧಿ ಸಂಜಾತೇ| ಶ್ರೀಹರಿಪ್ರೀತೆ| ಸಾರಸದಳ ವಿನೂತೆ| ನಮಿಸುವೆನು ಮಾತೆ|| ನೀರೇನಿರಜ ನೇತ್ರೆ ನಿಮ್ಮಯ| ಚಾರುಚರಣವ| ತೋರಿ ಭಜಿಸುವೆ| ಸಾರತರ ಸೌಭಾಗ್ಯ| ಸಂಪದಾ ನಾರಿಮಣಿಯರಿಗಿತ್ತು ರಕ್ಷಿಪೊಳೆಂತು||3||

ಪೂಜಿಪೆನೇ ನಿನ್ನಾ — ರಾಗ: ಶುದ್ಧಧನ್ಯಾಸಿ-ಆದಿತಾಳ

ಪೂಜಿಪೆನೇ ನಿನ್ನಾ ... ಪೂಜಿಪೆನೇ ನಿನ್ನ| ಜಾಜಿ ಪುಷ್ಪಗಳಿಂದ ಮೂರ್ ಜಗನ್ಮಾತೆಯೇ||ಪ|| ಅಮರಾದಿ ಸುರರಿಂದ ಅಭಿವಂದಿತೆ ನಿನ್ನ| ಚರಣಾಂಬುಜವ ತೋರಿ ಪಾವನ್ನ ಮಾಡೆನ್ನ||ಅ.ಪ|| ಅಂಬುಜಾಕ್ಷಿಯೆ ನಿನಗೆ ಚಿನ್ನದ ಕುಂಭದಿಂದ| ಅಭಿಷೇಕ ಮಾಡುವೆನು| ಪೀತಾಂಬರವನುಟ್ಟು ಸರ್ವಾಭರಣ ತೊಟ್ಟು| ವರಮಣಿ ಮಂಟಪಕೆ ಬಾರೆ ನಾರಾಯಣಿ||1|| ಅರ್ಘ್ಯ ಪಾದ್ಯಾಚಮನ ಮಧುಪರ್ಕದಿಂದ| ಅಗ್ರಪೂಜೆಯ ಮಾಳ್ಪೆ| ಸಮುದ್ರ ಸುತಳೆ ಶುದ್ಧವಾದ ಮನಸಲಿ| ಶುಭ್ರವಾದ ವಸ್ತ್ರವನ್ನು ಅರ್ಪಿಸುವೆನಮ್ಮ||2|| ಅರಿಶಿನಕುಂಕುಮ ಕರದಲ್ಲಿ ಪಿಡಿದೆತ್ತಿ| ಹರುಷದಿಂದೇರಿಸುವೆ| ವರಮಹಾಲಕ್ಷ್ಮಿಯೇ ವರಗಳ ನೀಡೆಂದು| ಶಿರಬಾಗಿ ನಮಿಸುವೆ ಕರವೀರ ಪುರನಿಲಯೇ||3|| ಮಲ್ಲಿಗೆ ಕೇದಿಗೆ ಕಲ್ಹಾರ ಪುಷ್ಪಗಳನ್ನೆಲ್ಲಾ ಸಮರ್ಪಿಸುವೆ| ಬಲ್ಲಿದ ಭಕುತರ ಅಭೀಷ್ಟವ ಸಲ್ಲಿಸೆಂದು| ವೈಕುಂಠ ಕೊಲ್ಲಾಪುರದಲ್ಲಿರುವ ತಾಯೆ||4||

ಸಡಗರದಿಂದಲಿ ಮಡದಿಯರೆಲ್ಲರು। ಉಡಿಯ ತುಂಬುವರಮ್ಮಾ। ಬಿಡಿ ಬಿಡಿ ಮಲ್ಲಿಗೆ ನಡೆ ಮುಡಿಗ್ಹಾಸಲು। ಸಡಗರದಿಂದಲಿ ನಡೆದು ಬಾರಮ್ಮಾ ।।5।। ಶೇಷಶಯನನ ರಾಣಿ ದೋಷ ವರ್ಜಿಸು ಎಂದು। ಮೀಸಲು ತಂದಿಹೆನು। ಪಾಯಸ ಮೃಷ್ಟಾನ್ನ ಸಂತೃಪ್ತಳಾಗಿ ಉಂಡು। ಅಷ್ಟೈಶ್ವರ್ಯವ ನೀಡು ಲಕುಮಿ ದೇವಿಯೆ।।6।। ನಿತ್ಯ ತೃಪ್ತಳೆ ನಿನಗೆ ಮುತ್ತಿನಾರತಿ ಎತ್ತಿ। ಭಕ್ತಿಯಿಂದೆರಗುವೆನು। ದಾಂಪತ್ಯ ಸಂಪತ್ತು ಮುದ್ದು ಮಕ್ಕಳನಿತ್ತು। ಆಪತ್ತು ಬಿಡಿಸಮ್ಮ ಆದಿ ನಾರಾಯಣಿ।।7।।

ಶ್ರೀಲಕ್ಷ್ಮೀ ನಾ ನಿನ್ನ **ರಾಗ: ಆನಂದಭೈರವಿ-ಆದಿತಾಳ**

ಶ್ರೀಲಕ್ಷ್ಮೀ ನಾ ನಿನ್ನ ಪೂಜಿಸುವೆ ಎನ್ನ ಮೇಲೆ ಮನಸು ಇರಬಾರದೆ ಲಕ್ಷ್ಮೀದೇವಿ।।ಪ।। ಅರಿಶಿನ ಕುಂಕುಮ ಪೂಜಿಸಿ ನಿನಗೆ ಅರೆದು ಕೇಸರಿಗಂಧ ಲೇಪಿಸಿ। ಹಸನಾದ ಫಲಪುಷ್ಪ ಅರ್ಪಿಸಿ ನಿನಗೆ ತಾಂಬೂಲ ಇತ್ತು ಆರುತಿ ಎತ್ತಿ।।1।। ನಾರಾಯಣ ನಾಮ ಪಾರಾಯಣ ಅನುದಿನ। ಸರ್ವದಾ ನಾನಿನ್ನ ಸ್ತುತಿಸುವೆನು ತಾಯೆ।।2।। ಕ್ಷೀರಸಾಗರದಲ್ಲಿ ಜನಿಸಿದೆ ಶ್ರೀಲಕ್ಷ್ಮೀ ವರಲಕ್ಷ್ಮೀಯೇ ನಿನ್ನ ಪೂಜಿಸಿ। ಪರಬ್ರಹ್ಮನ ಮಾತೆ ಕರಗಳ ಮುಗಿವೆನು ಸ್ಥಿರವಾದ ಮಾಂಗಲ್ಯ ಭಾಗ್ಯವಕೊಡು।।3।। ಅಖಿಲ ಸಕಲವಾಕ್ಕು ಲಾಲಿಸು ದಿವ್ಯ ಸ್ತುತಿ ಶಾಸ್ತ್ರಮತಿ ಎನಗೆ ಬೋಧಿಸು। ಅಖಿಲಾಂಡ ಚರಿತಾ ಶ್ರೀ ಲಕ್ಷ್ಮೀ ನಾರಾಯಣನ ಹಿತವಾದ ಅನುಜ್ಞಾನ ಬೋಧಿಸುತಾಯೆ।।4।। ಕೃಷ್ಣ ನರಸಿಯೊಳು ಶ್ರೇಷ್ಠಳೆ ನಿನ್ನ ಮುಟ್ಟಿ ಪೂಜಿಸುವೆ ಸಂತೃಪ್ತಿಲೀ। ಅಷ್ಟೈಶ್ವರ್ಯ ಮುತ್ತೈದೆತನ ಪುತ್ರಸಂತಾನ ಕೊಡು ಲಕ್ಷ್ಮೀದೇವಿಯೆ।।5।।

ಜಾಜಿ ಮಲ್ಲಿಗೆ ಕೆಂಡ ಸಂಪಿಗೆ **ರಾಗ: ಶಂಕರಾಭರಣ-ನೋಟ್ಸ್**

ಜಾಜಿ ಮಲ್ಲಿಗೆ ಕೆಂಡ ಸಂಪಿಗೆ। ಕಮಲ ಪುಷ್ಪದಿ ನಿಂತ ಮಾತೆಗೆ। ಲಕ್ಷ್ಮೀಗೇ ವರಲಕ್ಷ್ಮೀಗೇ ನೀಡುವೇ ನಾ ಪೂಜೆಗೆ।।ಪ।। ಶ್ರಾವಣ ಮಾಸದೀ ದ್ವಿತೀಯ ವಾರದೀ। ಶುಕ್ರವಾರದೀ ಶುಭ ಮುಹೂರ್ತದೀ। ತಾಯಿ ಲಕ್ಷ್ಮೀಗೇ ಸ್ವಾಗತ ಕೋರಲು। ಮಂಟಪವನು ನಾ ಶೃಂಗರಿಸಿದೇ।।1।। ಮಾವಿನ ತೋರಣ ಎಲ್ಲೂ ನಗುತಿದೇ। ಬಣ್ಣದ ರಂಗೋಲಿ ಶುಭವ ತಿಳಿಸಿದೆ। ಪಂಚಾಮೃತವು ಸೌಗಂಧಿಸಿದೇ। ಅರಿಶಿನ ಕುಂಕುಮ ಅಲಂಕರಿಸಿದೇ।।2।। ಭಾಗ್ಯದ ಹೊಳೆಯನು ಹರಿಸು ಮಾತೆಯೇ। ಮನೆಯಲಿ ಬೆಳಕನು ನೀಡುತಾಯಿಯೇ। ಹಣೆಯಲೀ ಕುಂಕುಮ ಸ್ಥಿರವಗೊಳಿಸು ನೀ। ಸುಖದ ಸಂಗಮ ಮನಕೆ ನೀಡು ನೀ।।3।।

ಸಾರಸಾಕ್ಷೇರು ವರಲಕ್ಷ್ಮೀ ದೇವಿಗೆ **ರಾಗ: ಮಧ್ಯಮಾವತಿ**

ಸಾರಸಾಕ್ಷೇರು ವರಲಕ್ಷ್ಮೀ ದೇವಿಗೆ। ಪಾದ ಪೂಜೆಯ ಮಾಡಿ। ಧನ್ಯರಾಗಿ ಬಲು ಮಾನ್ಯರಾಗಿ ಭಾಗ್ಯವಂತರು ಸಂಪನ್ನರಾಗಿ।।ಪ।। ಮಂದ ಕುಂದರ ಸುಗಂಧ ಪುಷ್ಪ। ಚಂದ ಧೂಪ ಪತ್ರೆ ಅರ್ಘ್ಯದಿಂದ। ಚಂದ ಧೂಪಾದ್ಯವು ಆಚಮನವು। ಕುಂದಣಾ ಪೀಠಕೆ ಧೂಪಾ ದೀಪಾ।।1।। ಹಾರ ಕೇದಿಗೆ ಕಂಕಣ ವಂಕಿ। ತೋರ್ವದೊಡ್ಯಾಣವು ಪಾದ ಭೂಷಣ। ಓಲೆ ನಾಗರು ಬೇಸರಿ ಗೊಂಡ್ಯ। ಪೂರ್ವದ ಬುಗುಡಿ ಬುಲಾಕು ಮುಕುರ।।2।। ನಾರಿಕೇಳಂಜೂರ ವಿಧಪುರ ಸಾರ ದಾಳಿಂಬರಾ ದ್ರಾಕ್ಷಿ ಕದಳಿ। ಮೇಲೆ ಬಾದಾಮಿ ದಾಳಿಂಬ ಧಾನ್ಯ। ಆರುತಿ ವಂದನಾ ಭಕ್ತಿಯಿಂದ।।3।। ಲಾಡು ಮಂಡಿಗೆ ಚಿರೋಟಿ ಫೇಣೀ। ಹಪ್ಪಳಾ ಸಂಡಿಗಾಂಬೋಡೆ ಬೋಂಡಾ। ತಂಡ ತಂಡ ಪಾಯಸ ಕ್ಷೀರ ತುಪ್ಪ ಮಂಡಲ ಮಾಡಿ ನೇವೇದ್ಯಕಿಡುವೇ।।4।। ಆರತಿ ಎತ್ತಿರೆ ಮನ್ಮಥ ಪಿತನಿಗೆ ಮಂಗಳೆಂದು ಪಾಡಿರೆ ಗಂಗಾಜನಕಗೆ। ಆರತಿಮಾಡಿರೆ ಜಾನಕಿಗೆ। ಶುಭಮಂಗಳಂ ಶ್ರೀ ರಘುರಾಮ ವಿಠ್ಠಲಗೆ।।5।।

ಶ್ರೀ ವರಲಕ್ಷ್ಮೀದೇವಿ ಶ್ರೀ ವರಲಕ್ಷ್ಮೀದೇವಿ

ಶ್ರೀ ವರಲಕ್ಷ್ಮೀದೇವಿ ಶ್ರೀ ವರಲಕ್ಷ್ಮೀದೇವಿ।।ಪ।। ಸೌಭಾಗ್ಯವೀಯೆ ಸದಯೆ ಸಾಮ್ರಾಜ್ಯ ವೀಯೆ ಜನನೀ। ಸಕಲ ಲೋಕಕೆ ಸಾಕ್ಷಿಯಾಗಿರುವ ತಾಯೆ।।1।। ಶ್ರಾವಣ ಶುಕ್ರವಾರ ದಿನದಲಿ ಸಕಲಾಭೀಷ್ಟವೀಯೆ। ಶರಣಾಗತರನು ಕರುಣಿದಿ

ಕಾಯಲು ಬಾಬಾ।।2।। ಕೊಲ್ಹಾಪುರದಲ್ಲಿ ನೆಲೆಸಿ ಸಲ್ಲೀಲೆಯಿಂದಲೀ ಇರುವಾ। ಪರಮಪುರುಷ ಶ್ರೀಪುರಂದರ ವಿಠ್ಠಲನಾ ರಾಣಿ।।3।।

ನಮೋ ನಮಸ್ತೇ ಶ್ರೀ ವರಲಕ್ಷ್ಮೀ **ರಾಗ: ಕಲ್ಯಾಣಿ-ರೂಪಕತಾಳ**

ನಮೋ ನಮಸ್ತೇ ಶ್ರೀ ವರಲಕ್ಷ್ಮೀ। ನಮೋ ನಮಸ್ತೇ ಶ್ರೀ ಮಹಾಲಕ್ಷ್ಮೀ। ನಮೋ ನಮೋ...........।।ಪ।। ಶಂಖ ಚಕ್ರಗಧಾ ಪದ್ಮಧಾರಿಣಿ। ಸುವರ್ಣಮಯ ಭೂಷಿಣಿ। ಸಾಗರ ಸಂಭವ ಚಂದ್ರ ಸಹೋದರಿ। ತ್ರಿಭುವನದೀಶ್ವರಿ। ಹರಿಹೃದಯೇಶ್ವರಿ।।1।। ಆದಿ ಪರಾಶಕ್ತಿ ಅಖಿಲಾಂಡೇಶ್ವರಿ। ಆಗಮ ರೂಪಿಣಿ ದಾನವ ಭಯಂಕರಿ। ಮಂಗಳೆಯರ ವ್ರತನಿಷ್ಠೆಗೆ ಒಲಿದು। ಮಂಗಳ ಸೂತ್ರವ ಕಾಯುವ ಲಕ್ಷ್ಮೀ।।2।। ಶ್ರಾವಣ ಮಾಸದಿ ಶುಕ್ಲಪಕ್ಷದಿ। ಶುಕ್ರವಾರವೇ ಶುಭದಿನವೂ। ನಿನ್ನಯ ವ್ರತವನು ಮಾಡುವವರಿಗೆ। ಸದಾ ಶುಭವನು ನೀಡುವೆಯಮ್ಮಾ।।3।।

ಶ್ರೀ ವರಮಹಾಲಕ್ಷ್ಮೀದೇವೀ

ಶ್ರೀ ವರಮಹಾಲಕ್ಷ್ಮೀದೇವೀ ಪಾಹಿಮಾಂ।।ಪ।। ಭಾವಜ ಜನನೀ। ಮಾಧವ ಮೋಹಿನಿ ।।ಅ.ಪ.।। ಜಲನಿಧಿ ಗಂಭೀರೇ ಜಲಜ ಮನೋಹರೆ। ಜಲಜ ನಿಜಾಗಾರೆ। ಜಲಜನಾಭನ ನೀರೇ।।1।। ನರಹರಿ ಕಾಂತೇ ವರಗುಣವಂತೆ। ಚರಣವ ನಂಬಿದೆ। ಪರಿಪರಿ ಬೇಡುವೆ।।2।। ಸಕಲ ಸೌಭಾಗ್ಯದಾಯಕಿ ಜಗನ್ನಾಯಕಿ। ಅಕಲುಷ ನರಹರಿ। ಪ್ರಕಟಿತ ರಮಣೀ।।3।।

ವರಮಹಾಲಕ್ಷ್ಮೀ ವರದೆಕಲ್ಯಾಣಿ **ರಾಗ: ಕಲ್ಯಾಣಿ**

ವರಮಹಾಲಕ್ಷ್ಮೀ। ವರದೆಕಲ್ಯಾಣಿ। ಹರಿಮನೋವಲ್ಲಭೆ। ಪರಿಪಾಲಯಾಶುಮಾಂ।।ಪ।। ಲಕ್ಷ್ಮೀಕ್ಷೀರಸಾಗರ ಕನ್ಯೆ। ನೀರಜಲೋಚನೆ। ವಾರಿಜಾಸನಮುಖಿ ವಾರಗಮನೆ।।1।। ಸರಸೀಜಾಸನಾಸೀನೆ। ಸರಸೀಜ ಸುಮಾಪಾಣೆ। ಸರಸೀಜಸನಾಜನನೀ। ಸರಸೀಜಮಾನಿನಿ।।2।। ನೀರಜಾಸನಾ ತಾಯೇ। ಕರಹಾತಾವಿರಾಜೆ। ಶ್ಯಾಮಸುಂದರಾನಂದಾ ಸಂದೇಹವಾಹಿನಿ।।3।।

ವರಲಕ್ಷ್ಮೀ ನಮೋಸ್ತುತೆ **ರಾಗ: ಕೀರವಾಣಿ-ರೂಪಕತಾಳ**

ವರಲಕ್ಷ್ಮೀ ನಮೋಸ್ತುತೆ। ಶಂಕರ ಸಹೋದರಿ।।ಪ।। ಮಹಾವಿಷ್ಣು ರಾಣೀ ಮನ್ಮಥ ಜನನಿ।।ಅ.ಪ।। ಸಕಲ ಸಂಪ್ರದಾಯಿನಿ ಸಕಲ ಸೌಭಾಗ್ಯ ಪ್ರದಾಯಿನಿ ಶ್ವೇತ ಕಮಲ ಪೀಠಸ್ಥಿತೆ ಕೃಪಾಕರಿ ಶ್ರೀ ಲಕ್ಷ್ಮೀ।।ಚರಣ।।

ವರವ ಪಾಲಿಸೆ ವರಲಕ್ಷ್ಮೀಯೇ ನೀ **ರಾಗ:ಶ್ರೀ**

ವರವ ಪಾಲಿಸೆ ವರಲಕ್ಷ್ಮೀಯೇ ನೀ। ವರವ ಪಾಲಿಸೆ।।ಪ।। ಇಂದಿರಾ ದೇವಿಯೆ ವಂದಿಪೆ ತಾಯೆ। ಮಂದಹಾಸದಿ ತಾಯೆ ಮಂದರಧರ ಜಾಯೆ।।1।। ಹರಿದ್ರಾ ಕುಂಕುಮ ಸುರಗಿ ಪಾದರಿಯಿಂ ಪರಿಪರಿ ವಿಧದಲಿ ನೆರೆ ನಿಮ್ಮ ಪೂಜಿಪೆ।।2।। ವರದಾಯಕಿ ನೀ ಹರುಷದಿ ಕೂಡಿ। ಸರಸಿಜ ಭವನುತೆ। ಕರುಣಿಸು ಮಾತೆ।।3।।

ಹೂವ ಕೊಡಮ್ಮ ಒಲಿದು **ರಾಗ: ಮಧ್ಯಮಾವತಿ-ಆದಿತಾಳ**

ಹೂವ ಕೊಡಮ್ಮ ಒಲಿದು ಹೂವ ಕೊಡಮ್ಮ। ಬೇಡಿಕೊಂಬೆನು ನಿನ್ನ ಶ್ರೀ ವರಮಹಾಲಕ್ಷ್ಮೀ।।ಪ।। ಶೇಷಗಿರೀಶನ ಸತಿಯು ಮಹಾಲಕ್ಷ್ಮೀ (ನೀ)। ದೋಷಗಳನೆಲ್ಲ ಪರಿಹರಿಸಬೇಕಮ್ಮ ।।1।। ಕಂದರ್ಪನಯ್ಯನ ಕರುಣಾದಿಂ ಕಾಯ್ವೆ (ನೀ)। ಆದಿಯಾಗಿ ನೀನು ಬಂದು ನಿಂತ್ಯಲ್ಲೇ।।2।। ಆ ವಾರಿಧಿಯಲ್ಲಿ ಜನಿಸಿದೆ ತಾಯೆ (ನೀ)। ಶ್ರೀನಿವಾಸಗೆ ನೀನು ಮೋಹದ ಪ್ರಿಯೆ।।3।।

ಶ್ರೀ ವರಲಕ್ಷ್ಮೀ ನಮಸ್ತುಭ್ಯಂ ರಾಗ: ಶ್ರೀ-ರೂಪಕತಾಳ

ಶ್ರೀ ವರಲಕ್ಷ್ಮೀ ನಮಸ್ತುಭ್ಯಂ ವಸುಪ್ರದೇ ಶ್ರೀ ಸಾರಸಪದೇ ರಸಪದೇ ಸಪದೇ ಪದೇ॥ಪ॥ ಭಾವಜಜನಕ ಪ್ರಾಣವಲ್ಲಭೇ ಸುವರ್ಣಾಭೇ ಭಾನುಕೋಟಿ ಸಮಾನಪ್ರಭೇ ಭಕ್ತಸುಲಭೇ। ಸೇವಕಜನಪಾಲಿನ್ಯೈ ಶ್ರಿತಪಂಕಜಮಾಲಿನ್ಯೈ ಕೇವಲ ಗುಣಶಾಲಿನ್ಯೈ ಕೇಶವ ಹೃತ್ಖೇಳಿನ್ಯೈ॥ಅ.ಪ॥ ಶ್ರಾವಣ ಪೌರ್ಣಮೀ ಪೂರ್ವೋಕ್ತ ಶುಕ್ರವಾರೇ ಚಾರುಮತೀ ಪ್ರಭೃತಿಭಿಃ ಪೂಜಿತಾಕಾರೇ ದೇವಾದಿ ಗುರುಗುಹ ಸಮರ್ಪಿತ ಮಣಿಮಯ ಹಾರೇ ದೀನಜನ ಸಂರಕ್ಷಣ ನಿಪುಣೆ ಕನಕಧಾರೇ ಭಾವನಾ ಭೇದಚತುರೇ ಭಾರತೀ ಸನ್ನುತವರೇ ಕೈವಲ್ಯ ವಿತರಣಪರೇ ಕಾಂಕ್ಷಿತ ಫಲಪ್ರದಕರೇ॥

ಹಿರಣ್ಮಯೀ ಲಕ್ಷ್ಮೀ ಸದಾ ರಾಗ: ಲಲಿತ-ರೂಪಕತಾಳ

ಹಿರಣ್ಮಯೀ ಲಕ್ಷ್ಮೀ ಸದಾ ಭಜಾಮಿ ಹೀನಮಾನವಾಶ್ರಯಂ ತ್ಯಜ್ಯಾಮಿ॥ಪ॥ ಚಿರತರ ಸಂಪತ್ಪ್ರದಾಂ ಕ್ಷೀರಾಂಬುಧಿ ತನಯಾಂ ಹರಿ ವಕ್ಷಃ ಸ್ಥಲಾಲಯಾಂ ಹರಿಣೀಂ ಚರಣ ಕಿಸಲಯಾಂ॥ಅ.ಪ॥ ಶ್ವೇತದ್ವೀಪವಾಸಿನೀಂ ಶ್ರೀಕಮಲಾಂಬಿಕಾಂಪರಾಂ ಭೂತಭವ್ಯ ವಿಲಾಸಿನೀಂ ಭೂಸುರ ಪೂಜಿತಾಂ ವರಾಂ ಮಾತರಮಬ್ಜಮಾಲಿನೀಂ ಮಾಣಿಕ್ಯಾ ಭರಣ ಧರಾಂ ಗೀತವಾದ್ಯ ವಿನೋದಿನೀಂ ಗಿರಿಜಾಂ ತಾಂ ಇಂದಿರಾಂ ಶೀತಕಿರಣ ನಿಭವದನಾಂ ಶ್ರೀತಚಿಂತಾಮಣಿ ಸದನಾಂ ಪೀತವಸನಾಂ ಗುರುಗುಹ ಮಾತುಲಕಾಂತಾಂ ಲಲಿತಾಂ॥ಚ॥

ದೇವರಾದೇವಗೆ ದೇವಿಯ ಗಣಪಗೆ (ಲಕ್ಷ್ಮೀಸ್ತೋತ್ರ)

ದೇವರಾದೇವಗೆ ದೇವಿಯ ಗಣಪಗೆ। ಶಾರದದೇವಿ ಶರಣೆಂಬೆ ದೇವರ। ಸಾರ ಗೋಪ್ಪಂಥ ಕಥೆಪೇಳ್ವೆ॥1॥ ಸಂಜೆಯ ಸ್ತೋತ್ರವನು ಮುಂದಿದ್ದ ಅರ್ಥವನು। ಒಂದರ್ಹಿಂದೊಂದು ಅಣಿಮಾಡಿ ಹೇಳುವೆ। ಒಂದು ತಪ್ಪಿಲ್ಲದಿರುತಿದ್ದೆ॥2॥ ಹರಿಯ ಪಾದಗಳಲ್ಲಿ ವರದೇವಿ ನಿಂತಿರಲು। ಹರಿಹರಬ್ರಹ್ಮ ಶ್ರೀಕೃಷ್ಣ ದೇವರ। ಪುರಾಣವನು ಹೇಳತೊಡಗಿದರು॥3॥ ವಾಸರದಂಥಾ ನುಡಿ ಲೇಸಾದವಂಶಗಳು। ವಿಶ್ವಾಸದಿಂದ ಹೇಳಿಕೇಳಿದವರಿಗೆ। ಆದರದಿಂ ಈ ಹೋಳು ವರಗಳಾ॥4॥ ಯಾವಜಾತೀಗಾದರಿಹೋಳು ವರಗಳು। ಯಾವಾಗ್ಲು ಅವಳ ಸ್ಮರಣೇನ ಮಾಡ್ದವರಿಗೇ। ಬೇಗದಿಂ ಹೋಳುವರಗಳು॥5॥ ಎಂದಿನಂತೆ ವನಕಾಗಿ ಬಂದನಾ ಬ್ರಾಹ್ಮಣ। ಇಂದಿಗೇ ವರವ ಕೊಡುವೆನೆನ್ನುತ ದೇವಿ। ಬಂದು ನಿತಿದ್ದಳ್ವನದಲಿ॥6॥ ಮೂಲೇಲಿ ನಿಂತಿರಲು ವಿಪ್ರತಾ ಕಡೆನಿಂತು। ತಟ್ಟನೆ ಹೋಗಿ ದೇವಿಗೆ ತಾನು। ಸಾಷ್ಟಾಂಗಕ್ಕೆರಗಿ ಪೊಡವಂಟ॥7॥ ಉತ್ತಮ ವಾಗಿದ್ದಿ ಮುತ್ತೈದೆ ನೀ ಕೇಳು ನೀನು ಪ್ಪೋದುಠಾವೆಲ್ಲಿ ಇರವೆಲ್ಲಿ ಎಂದರೆ। ಒಪ್ಪಿಸಲಹುವ ಸುತರಿಲ್ಲ॥8॥ ಸುತರಿಲ್ಲ ಪಿತರಿಲ್ಲ ಮತಿವಂತ ನೀ ಕೇಳು। ಅತಿಶಯದಿಂದ ದ್ವಿಜನೀನು ಎನ್ನನು। ಸುಖಿಯ ಮಾಡಯ್ಯ ವನದಲಿ॥9॥ ಅಣ್ಣಯ್ಯ ನೀ ಕೇಳು ಕಣ್ಣಿಲ್ಲ ಕಾಲಿಲ್ಲ। ಅನ್ನವಾ ನಿಕ್ಕಿಸಲಹೋರು ಮುನ್ನಿಲ್ಲ। ನೀಬಂದದ್ದು ತಣ್ಣಗಾಯಿತು ಎನ್ನ ತನುವಿಗೆ॥10॥ ವಿಪ್ರ ಮಹಿಮನೆ ಕೇಳು ಅಪ್ರಾಯಮುದಿನಾದು। ಇಪ್ಪೋದು ಇನ್ನು ಮಣಿಮಂತ್ರಕಾಪುರ। ಇಪ್ಪೆನಾನಲ್ಲಿ ಇರುತಿಹೆ॥11॥ ಹಣ್ಣುಹಂಪಲುಗಳ ಬಣ್ಣವನೆ ನೋಡಿ। ಚೆನ್ನಾದವುಗಳನು ಶಿರಸಿನ ಮೇಲೆ। ಏರಿಸಿ। ತನ್ನ ಬೆನ್ನನೇರಿಸಿದ ಮುದುಕಿಯ॥12॥ ವನದಿಂದ ಹೊರಟನೆ ಅನುರಾಗದಿಂದಲಿ। ಎನಗಿಂದು ಪುಣ್ಯ ದೊರಕಿತೆಂದಾ ವಿಪ್ರ। ಸಂತೋಷದಿಂದ ಮನೆಗ್ಬಂದಾ॥13॥ ಪತಿಯ ಬರವನ್ನು ಸತಿಯು ತಾ ಕಾಯುತ। ಅತಿಶಯದಿಂದ ತಳಿಲ ಹಣ್ಣನೆ ತಂದು। ಪೃಥಿವಿ ಮೇಲಿಟ್ಟು ಪೊಟವಂಟ್ಲು॥14॥ ಹುಲ್ಲು ಮಣೆನಿಕ್ಕಿ ಚೆಲ್ವೆ ಕಾಲ್ತೊಳೆದು ಮುದುಕಿಗೆ। ಒಳ್ಳೆಯ ಉದಕ ಕೊಡುತಿದ್ದರಾಕೆಗೆ। ಮೆಲ್ಲನೆ ಆಡಿಗೆಗೆ ತೊಡಗಿದಳು॥15॥ ನಿತ್ಯಕರ್ಮ ನಿತ್ಯಪೂಜೆ ಚಚ್ಚರದಿಂದಾ ಮಾಡಿ। ಮುತ್ತೈದೆ ಹರಿಸಿರಿ ಊಣಲೇಳಿ ಎಂದರೆ। ವಿಪ್ರಕೇಳಯ್ಯ ಹಸಿವಿಲ್ಲ॥16॥ ಒಂದಕ್ಕೊಂದು ಇಲ್ಲ ಬಂದವರು ಊಣಲಿಲ್ಲ। ಕರೆತಂದಿರಿ ಮನೆಗೆ ಮುದಿಕಿಯ ಎನುತಲಿ। ಒಂದನೇ ನುಡಿದ್ಲು ಸತಿತಾನು॥17॥ ಅನ್ನವನು ನಾಮುನ್ನ ಯಾರಿಕ್ಕೊಡದುಂಡೆನೊ। ಅನ್ನವನುಂಡ ಬಗೆಯಿಂದ ದೇವರು ಅನ್ನವೇದೂರ ನಮಗೀಗ॥18॥ ವಸ್ತ್ರವ ನಾಮುನ್ನ ಯಾರಿಗೆಕೊಡದುಟ್ಟೆನೋ। ಅಚ್ಚುತ ನಾಭ ಹರಿಯೆಂದು ಅಡವಿಯ। ನಾರು ಸೀರೆಗಳ ತೆಗೆದುಟ್ಟೆ॥19॥ ಸೀರೆಯ ನಾಮುನ್ನ ಯಾರಿಗೆ ಕೊಂಡದುಟ್ಟೆನೋ।

ವಾರಿಜನಾಭ ಹರಿಯೆಂದು ಅಡವಿಯ ನಾರುಸೀರೆಗಳತೆಗೆದುಟ್ಟೆ।।20।। ದೇವಿ ಅವರ ಮನಸಿನ ಭಾವವನೆ ತಿಳಕೊಂಡು। ಬ್ರಾಹ್ಮಣ ಮನದೊಳಗೆ ಮರುಗಬೇಡ ಎನುತಲಿ। ದೇವಿ ಮಹಲಕ್ಷ್ಮಿ ನುಡಿದಳು।।21।। ಅಂಗಳದ ಒಳಗೆಲ್ಲ ಭಂಗಾರದ ರಾಶಿಹಾಕಿ। ಬಡವ ನೀನುಂಡು ಸುಖಿಯಾಗಿ ಬದುಕೆಂದು। ಮಡದಿ ಮಹಲಕ್ಷ್ಮೀ ನುಡಿದಳು।।22।। ತೊಟ್ಟಿಯ ಒಳಗೆಲ್ಲ ಮುತ್ತಿನ ರಾಶಿ ಹಾಕಿ। ವಿಪ್ರ ನೀನು ನುಂಡು ಸುಖಿಯಾಗಿ ಬದುಕೆಂದು ಮಿತ್ರೆ ಮಹಾಲಕ್ಷ್ಮೀ ನುಡಿದಳು।।23।। ನಡುಮನೆಯೊಳಗೆಲ್ಲ ಹವಳದ ರಾಶಿ ಹಾಕಿ। ಬಡವ ನೀನುಂಡು ಸುಖಿಯಾಗಿ ಬದುಕೆಂದು ಮಡದಿ ಮಹಾಲಕ್ಷ್ಮೀ ನುಡಿದಳು।।24।। ದೇವಿನೀನಿ ಪ್ಪೋದು (ನೀನಿರುವುದು) ಜಾಗ ಯಾವುದು ಎಂದು। ಬ್ರಾಹ್ಮಣ ಮನದಾಗೆ ನಸುನಗತ ತಾ ಕೇಳಿದಾ।।25।। ಊರ ಬಾಗಿಲ ಮುಂದೆ ಕೇರಿ ಹೆಬ್ಬಾಗಿಲ ಚತುರ್ಮುಖ ಬ್ರಹ್ಮನ ಹೂವಿನ ಹಾರದಲಿ ನಾನಿಪ್ಪೆ।।26।। ಮನೆಯ ಸಂದೀಲಿಪ್ಪೆ ಮನೆಯ ಗೋಡೆಯಲಿಪ್ಪೆ। ಈಶಾನ್ಯದ ಮೂಲೆಯ ತಿರುವಿನ ಬಾಗಿಲ। ಒಲೆಯ ಸಂದಿಯಲಿ ನಾನಿಪ್ಪೆ।।27।। ಉಚ್ಚಕ್ಕನ ಮನೆಯಲಿ ಕುಸ್ತೀಯು ಕಲಹವು। ನುಚ್ಚುನುಚ್ಚಾಗಿ ಒಡೆದಿರುವ ಗೃಹಗಳ। ಮೆಟ್ಟಿಕಾಣಯ್ಯ ಎಲವಿಪ್ರ।।28।। ಆ ಕಡೇಲಿ ಕಸ ಈ ಕಡೇಲಿ ಮುಸುರೆ। ಆ ಕಡೆ ಈ ಕಡೆ ಅಪಶಬ್ದವಾಡುವ ಪಾಪೀನ ನೋಡೆ ಎಲವಿಪ್ರ।।29।। ಶುಕ್ರವಾರದ ದಿನ ಭತ್ತ ಕುಟ್ಟುವವಳ। ಸಂಜೆಯ ಹೊತ್ತಿನಲೀ ಕಸವತೆಗೆಯದವಳ। ದೃಷ್ಟಿಸಿ ನೋಡೆ ಎಲ ವಿಪ್ರ।।30।। ಅಣ್ಣಾನ ಮಗಳನು ಅಳಿಸಿ ತಾ ಬೈವೊಳ। ಬೆಣ್ಣೆಯಾನೊರಸಿ ನೇವೇದ್ಯಕ್ಕಿಡುವೋಳ। ಕಣ್ಣಲಿ ನೋಡೆ ಎಲವಿಪ್ರ।।31।। ಈ ಕಥೆಯ ಯಾವಾಗ ಹೇಳಿದರು ನಾರೇರಿಗೊಲಿವೆನು। ಅಷ್ಟಮಿ ಶುಕ್ರವಾರ ಹೇಳಿ ಕೇಳಿದವರಿಗೆ ಲಕ್ಷ್ಮೀ ಸಂಪತ್ತು ಕೊಡುವೆನು।।32।।

ಶ್ರಾವಣಮಾಸದಲಿ ನಡುವಿನ ಶುಕ್ರವಾರದಲಿ — ರಾಗ:ಕಾಂಭೋದಿ

ಶ್ರಾವಣಮಾಸದಲಿ ನಡುವಿನ ಶುಕ್ರವಾರದಲಿ। ಭೋರೆಂಬ ಪಂಚದಾವಾದ್ಯದೊಳಗೇ। ತಾರೆ ಚಂದ್ರಾಬಲ ರೋಹಿಣೀನಕ್ಷತ್ರ। ತಾ ಒಲಿದು ಬಂದಳೇ ಭಾಗ್ಯಲಕ್ಷ್ಮೀ।।1।। ಹಚ್ಚೇಲಿ ಸಾರಿಸಿ ಹವಳದಲಿ ಗುಡಿಕಟ್ಟಿ। ಅಚ್ಚ ಮಾಣಿಕ್ಯದ ರಂಗವಲ್ಲಿ ಇಟ್ಟು। ಅಚ್ಯುತನ ರಾಣಿ ಮಹಾಲಕ್ಷ್ಮಿ ಬರುತಾಳೆಂದು। ಕಟ್ಟೋರು ಮಕರ ಗುಡಿ ತೋರಣಗಳ।।2।। ಶುಕ್ರವಾರದ ತೇದಿ ಶುದ್ಧ ಅಷ್ಟಮಿ ದಿನದಲಿ। ಅಷ್ಟ ಮಂಗಳಗಳು ಆ ದಿನದಲಿ। ಅಚ್ಯುತನ ರಾಣಿಗೆ ಆರೋಗಣೆಮಾಡಿ। ಪಟ್ಟ ಸಾಮ್ರಾಜ್ಯವಾಳೋ ಮನೆಯಲಿ।।3।। ಹೊನ್ನಮಳೆ ಕರೆಯಲಿ ಹಿಡಿದೊಡವೆ ಕೈಸೇರಲಿ। ಅನ್ನ ಉದಕವು ಮನೆಯಲಿ ಧನಧಾನ್ಯವು। ನಮ್ಮ ಅಣ್ಣಯ್ಯಗೆ ವರವಕೊಡು ಮಹಲಕ್ಷ್ಮಿ। ನಿನ್ನನ್ನು ಸೌಭಾಗ್ಯದಿಂ ಎದುರು ಗೊಂಬೆ।।4।। ನೀನೊಬ್ಬಳುಂಟಾದರೆ ನೀನೇ ಕೊಡಬಹುದು। ನೀನಿಲ್ಲದೇಯಾರು ಲೋಕವಿಲ್ಲ। ನಾ ಮಾಡಿದಾ ಸೇವೆ ನಿನಗನುಕೂಲವಾದರೇ। ಬೇಗ ಬಾ ಮಹಲಕ್ಷ್ಮೀ ನಮ್ಮ ಮನೆಗೆ।।5।। ಬಂದೇನು ಎಂದು ಬಹು ದಂಡಿಗೆಯನೇರಿದಳು। ಅಂದಿಗೆ ಕಂಕಣಗಳೆಲ್ಲ ಧರಿಸಿ। ಸೂರ್ಯಚಂದ್ರಮರಂತೆ ದಿಕ್ಕು ಥಳಥಳಿಸುತ್ತ। ಬಂದಳೇ ಮಹಾಲಕ್ಷ್ಮಿ ನಮ್ಮ ಮನೆಗೆ।।6।। ರಕ್ಕಸರ ಬಲೆಯೊಳಗೆ ಸಿಕ್ಕ ಸೆರೆಯಲಿ ಬಿದ್ದು। ಎಷ್ಟು ಭಂಗ ಪಟ್ಟೆಯೋ ಲಂಕೆಯೊಳಗೆ। ಸುತ್ತರಘುರಾಮರು ಮುತ್ತಿಗೆಯನ್ನಾಕಲು।ಬಿಟ್ಟು ಬಂದಳು ಮಹಲಕ್ಷ್ಮೀ ನಮ್ಮ ಮನೆಗೆ।।7।। ಮಂಗಳಂ ಮಂಗಳಂ ಕಮಲಮುಖಿ ತಾಯಿಗೆ। ಮಂಗಳಂ ಮಂಗಳಂ ಕಮಲನಾಭನ ರಾಣಿಗೆ। ಮಂಗಳಂ ಮಂಗಳಂ ನಿತ್ಯ ಹೃದಯದೊಳಿರ್ಪ। ಮಾಂಗಲ್ಯ ಪದವಿಯ ಕೊಡುವ ಮಹಲಕ್ಷ್ಮೀಗೆ।।8।। ಜಯಮಂಗಳಂ ನಿತ್ಯ ಶುಭಮಂಗಳಂ।।

ನಮಸ್ತೇಸ್ತು ಮಹಾಮಾಯೇ (ಮಹಾಲಕ್ಷ್ಮೀ ಅಷ್ಟಕ) — ರಾಗ: ಕಾಂಬೋಜಿ

ನಮಸ್ತೇಸ್ತು ಮಹಾಮಾಯೇ ಶ್ರೀಪೀಠೇ ಸುರಪೂಜಿತೇ। ಶಂಖಚಕ್ರಗದಾಹಸ್ತೇ ಮಹಾಲಕ್ಷ್ಮೀ ನಮೋಸ್ತುತೇ।।1।। ನಮಸ್ತೇ ಗರುಡಾರೂಢೇ ಕೋಲಾಸುರ ಭಯಂಕರಿ। ಸರ್ವಪಾಪಹರೇ ದೇವಿ ಮಹಾಲಕ್ಷ್ಮೀ ನಮೋಸ್ತುತೇ।।2।। ಸರ್ವಜ್ಞೇ ಸರ್ವವರದೇ ಸರ್ವದುಷ್ಟ ಭಯಂಕರೀ। ಸರ್ವದುಃಖಹರೇ ದೇವಿ ಮಹಾಲಕ್ಷ್ಮೀ ನಮೋಸ್ತುತೇ।।3।। ಸಿದ್ಧಿ ಬುದ್ಧಿ ಪ್ರದೇ ದೇವಿ ಭಕ್ತಿ ಮುಕ್ತಿ ಪ್ರದಾಯಿನೀ। ಮಂತ್ರಮೂರ್ತೇ ಸದಾ ದೇವಿ ಮಹಾಲಕ್ಷ್ಮೀ ನಮೋಸ್ತುತೇ।।4।।

ಆದ್ಯಂತರಹಿತೇ ದೇವಿ ಆದಿಶಕ್ತಿ ಮಹೇಶ್ವರಿ। ಯೋಗಜ್ಞೇ ಯೋಗಸಂಭೂತೇ ಮಹಾಲಕ್ಷ್ಮೀ ನಮೋಸ್ತುತೇ॥5॥ ಸ್ಥೂಲಸೂಕ್ಷ್ಮ ಮಹಾರೌದ್ರೇ ಮಹಾಶಕ್ತಿ ಮಹೋದರೇ। ಮಹಾಪಾಪ ಹರೇ ದೇವಿ ಮಹಾಲಕ್ಷ್ಮೀ ನಮೋಸ್ತುತೇ॥6॥ ಪದ್ಮಾಸನಸ್ಥಿತೇ ದೇವಿ ಪರಬ್ರಹ್ಮ ಸ್ವರೂಪಿಣೇ। ಪರಮೇಷ್ಟಿ ಜಗನ್ಮಾತಮಹಾಲಕ್ಷ್ಮೀ ನಮೋಸ್ತುತೇ॥7॥ ಶ್ವೇತಾಂಬರಧರೇ ದೇವೀ ನಾನಾಲಂಕಾರ ಭೂಷಿತೇ। ಜಗತ ಸ್ಥಿತೇ ಜಗನ್ಮಾತಾ ಮಹಾಲಕ್ಷ್ಮೀ ನಮೋಸ್ತುತೇ॥8॥ ಮಹಾಲಕ್ಷ್ಮ್ಯಷ್ಟಕಂ ಸ್ತೋತ್ರಂ ಯಃ ಪಠೇದ್ಭಕ್ತಿಮಾನ್ನರಃ। ಸರ್ವಸಿದ್ಧಿ ಮವಾಪ್ನೋತಿ ರಾಜ್ಯಂ ಪ್ರಾಪ್ನೋತಿ ಸರ್ವದಾ॥9॥ ಏಕಕಾಲೇ ಪಠೇನ್ನಿತ್ಯಂ ಮಹಾಪಾಪವಿನಾಶಕಂ। ದ್ವಿಕಾಲಂ ಯಃ ಪಠೇನ್ನಿತ್ಯಂ ಧನಧಾನ್ಯ ಸಮನ್ವಿತಂ॥10॥ ತ್ರಿಕಾಲಂ ಪಠೇನ್ನಿತ್ಯಂ ಮಹಾಶತ್ರುವಿನಾಶನಂ। ಮಹಾಲಕ್ಷ್ಮೀರ್ಭವೇನ್ನಿತ್ಯಂ ಪ್ರಸನ್ನಾ ವರದಾ ಶುಭಂ॥11॥

ಶ್ರೀದೇವಿ ಪ್ರಥಮಂ ನಾಮ (ಲಕ್ಷ್ಮೀದ್ವಾದಶನಾಮ)

ಶ್ರೀದೇವಿ ಪ್ರಥಮಂ ನಾಮ ದ್ವಿತೀಯಮಮೃತೋದ್ಭವಾ। ತೃತೀಯಂ ಕಮಲಾ ಪ್ರೋಕ್ತಾ ಚತುರ್ಥಂ ಸುರಸುಂದರೀ॥1॥ ಪಂಚಮಂ ದೇವಗರ್ಭಾಚ ಷಷ್ಟಂ ಚ ಮಧುಸೂದನೀ। ಸಪ್ತಮಂ ತು ವರಾರೋಹಾ ಅಷ್ಟಮಂ ಹರಿವಲ್ಲಭಾ॥2॥ ನವಮಂ ಶಾರ್ಙ್ಗಿಣೀ ಪ್ರೋಕ್ತಾ ದಶಮಂ ದೇವ ದೇವತಾ। ಏಕಾದಶಂ ತು ಲಕ್ಷ್ಮೀಃ ಸ್ಯಾತ್ ದ್ವಾದಶಂ ಭುವನೇಶ್ವರೀ॥3॥ ಏತದ್ವಾದಶನಾಮಾನಿ ತ್ರಿಸಂಧ್ಯ ಯಃ ಪಠೇನ್ನರಃ। ಆಯುರಾರೋಗ್ಯಮೈಶ್ವರ್ಯಮತಿ ಪುಣ್ಯ ಫಲಪ್ರದಮ್॥4॥ ದ್ವಿಮಾಸಂ ಸರ್ವಕಾರ್ಯಾಣಿ ಷಣ್ಮಾಸಾ ದ್ರಾಜ್ಯಮೇವ ಚ। ಸಂವತ್ಸರಂ ತು ಪೂಜಾಯಾಃ ಶ್ರೀಲಕ್ಷ್ಮ್ಯಾಂ ಪೂಜ್ಯ ಏವ ಚ॥5॥ ಲಕ್ಷ್ಮೀ ಕ್ಷೀರಸಮುದ್ರರಾಜತನಯಾಂ ಶ್ರೀರಂಗಧಾಮೇಶ್ವರೀಂ। ದಾಸೀಂ ಭೂತ ಸಮಸ್ತ ದೇವವನಿತಾಂ ಲೋಕೈಕ ದೀಪಾಂಕುರಮ್। ಶ್ರೀ ಮನ್ಮಂದ ಕಟಾಕ್ಷಲಬ್ಧವಿಭವ ಬ್ರಹ್ಮೇಂದ್ರ ಗಂಗಾಧರಾಂ। ತಾಂ ತ್ರೈಲೋಕ್ಯ ಕುಟುಂಬಿನೀಂ ಸರಸಿಜಾಂ ವಂದೇ ಮುಕುಂದ ಪ್ರಿಯಾಮ್॥6॥

ಮಾತರ್ನಮಾಮಿ ಕಮಲೆ (ಐಶ್ವರ್ಯದೇವತೆ ಶ್ಲೋಕ-ಅಗಸ್ತ್ಯಕೃತ)

ಮಾತರ್ನಮಾಮಿ ಕಮಲೆ ಕಮಲಾಯತಾಕ್ಷಿ। ಶ್ರೀ ವಿಷ್ಣು ಹೃತ್ಕಮಲವಾಸಿನಿ ವಿಶ್ವ ಮಾತೆ। ಕ್ಷೀರೋದಜೇ ಕಮಲ ಕೋಮಲ ಗರ್ಭಗೌರಿ। ಲಕ್ಷ್ಮೀ ಪ್ರಸೀದ ಸತತಂ ನಮತಾ ಶರಣ್ಯೆ॥1॥ ತ್ವಂ ಶ್ರೀ ರೂಪೇಂದ್ರ ಸದನೆ ಮದನೈಕ ಮಾತೆ। ಜ್ಯೋತ್ಸ್ನಾಸಿ ಚಾರುತರ ಚಂದ್ರ ಮನೋಹರಾಸ್ಯೇ। ಸೂರ್ಯ ಪ್ರಭಾಸಿ ಚ ಜಗತ್ರಿತಯೇ ಪ್ರಭಾಸಿ ಲಕ್ಷ್ಮೀ ಪ್ರಸೀದ ಸತತಂ ನಮತಾಂ ಶರಣ್ಯೆ॥2॥ ತ್ವಂ ಜಾತ ವೇದಸೀ ಸದಾ ದಹನಾತ್ಮ ಶಕ್ತಿ। ವೇದ ಸ್ತ್ವಯಾ ಜಗದಿದಂ ವಿವಿಧಂ ವಿದದ್ಯಾತ್। ವಿಶ್ವಂಬರೋಪಿ ಬಿಬ್ರಯಾದಖಿಲಂ ಭವತ್ಯಾ। ಲಕ್ಷ್ಮೀ ಪ್ರಸೀದ ಸತತಂ ನಮತಾಂ ಶರಣ್ಯೆ॥3॥ ತ್ವತ್ಕತ್ಯರ್ತಮೇತದ ಮತೀ ಹರತೇ ಹರೋಪಿ। ತ್ವಂ ಪಾಸಿ ಹಂಸಿ ವಿದದಾಸಿ ಪರಾಪರಾಸಿ। ಇಡ್ಯೋ ಬಭೂವ ಪರಿರಷ್ಯಮತೇತ್ವದಾಶ್ಯಾ। ಲಕ್ಷ್ಮೀ ಪ್ರಸೀದ ಸತತಂ ನಮತಾಂ ಶರಣ್ಯೆ॥4॥ ಶೂರಃ ಸ ಏವ ಕುಲಶೀಲ ಸಗುಣಾನಂ ಬುಧಃ ಸದನ್ಯೋಮಾನ್ಯಃ ಕಲಾಕಲಃ ಸಹ ಏಕ ಶುಚಿಃ ಸಹಿಪುಮಾನ ಸಕಲೇಪಿಲೋಕಃ। ಸಶ್ರೀ ಕಮೇರವ ಸಕತೇ ತ ದಿ ಹಾಸ್ತಿ ನಾನ್ಯತ್॥5॥ ತ್ವತ್ ಸ್ಪಷ್ಟ ಮೇವ ಸಕಲಂ ಶುಚಿತಾಂ ಲಭೇತ್। ತ್ವತ್ತ್ಯಕ್ತ ಮೇವ ಸಕಲಂ ತ್ವಶುಚೀಹ ಲಕ್ಷ್ಮೀಂ। ತ್ವನ್ನಾಮಯತ್ರ ಚನು ಪುಂಗಲೇವತತ್ರ। ಶ್ರೀವಿಷ್ಣುಪ್ರಿಯಾಮಿತಿ ಸದಾ ಜಪತಾಂ ತ್ವಂ ದುಃಖ ತಂ॥6॥ ಲಕ್ಷ್ಮೀಂ ಶ್ರೀಯಂಚ ಕಮಲಾಲಯಂಚ। ಪದ್ಮಾಂ ರಮಾಂ ನಲಿನಯುಗ್ಮ ಕಲಾಂಚಮಾಂಚ। ಕ್ಷೀರೋ ಜಾಮಾಮೃತ ಕುಂಭ ಕರಾ ವಿರಾಂಚ। ಶ್ರೀವಿಷ್ಣುಪತ್ನಿ ಕಮಲೇ ಕಮಲಾಲಯೇ॥7॥ ಯತ್ರಾ ಪತ್ತೇತ್ವವ ಶುಭೇ ಕರುಣಾ ಕಟಾಕ್ಷೇ। ಯಸ್ಮಿನ್ ವಸೇಃ ಕ್ಷಣ ಮಹೋ ಪುರುಷಸ್ವ। ಸ್ತ್ರೀಣೆ ತೃಣೆ ಸರಸಿದೇವ ಕುತಿಗ್ರುಹೇಸ ರತ್ನೇ ಪತ ತೃಣೆ ಪಶೌ ಶಯನೇ ಧರಾಯಾಂ॥8॥

ಮಾತು ಲಕ್ಷ್ಮೀ ಕರೋ ಕೃಪಾಕರೋ (ಲಕ್ಷ್ಮೀ ಚಾಲೀಸಾ)

ಮಾತು ಲಕ್ಷ್ಮೀ ಕರೋ ಕೃಪಾ। ಕರೋ ಹೃದಯ ಮೇಂ ವಾಸ। ಮನೋಕಾಮನಾ ಸಿದ್ಧಿ ಕರಿ। ಪುರವಹು ಮೇರೀ ಆಸ॥ ಸಿಂಧು ಸುತಾ ಮೈಂ ಸುಮಿರೌಂ ತೋಹೀ। ಜ್ಞಾನ ಬುದ್ಧಿ ವಿದ್ಯಾ ದೋ ಮೋಹೀ॥ ತುಮ ಸಮಾನ ನಹಿಂ ಕೋಯೀ ಉಪಕಾರೀ।

ಸಬ ವಿಧಿ ಪುರಬಹು ಆಸ ಹಮಾರೀ।। ಜೈ ಜೈ ಜಗತ್ ಜನನಿ ಜಗದಂಬಾ। ಸಬಕೆ ತುಮಹೀ ಹೋ ಅವಲಂಬಾ।। ತುಮ ಹೀ ಹೋ ಘಟ ಘಟ ಕೇ ವಾಸೀ। ವಿನತೀ ಯಹೀ ಹಮಾರೀ ಖಾಸೀ।। ಜಗ ಜನನೀ ಜಯ ಸಿಂಧು ಕುಮಾರೀ। ದೀನನ ಕೀ ತುಮ ಹೋ ಹಿತಕಾರೀ।। ವಿನದೌಂ ನಿತ್ಯ ತುಮಹಿಂ ಮಹಾರಾನೀ। ಕೃಪಾ ಕರೋ ಜಗ ಜನನಿ ಭವಾನೀ।। ಕೆಹೀ ವಿಧಿ ಸ್ತುತಿ ಕರೋಂ ತಿಹಾರೀ। ಸುಧಿ ಲೀಜೈ ಅಪರಾಧ ಬಿಸಾರೀ। ಕೃಪಾ ದೃಷ್ಟಿ ಚಿತವೋ ಮಮ ಓರೀ। ಜಗತ ಜನನಿ ವಿನತೀ ಸುನ ಮೋರಿ।। ಜ್ಞಾನ ಬುದ್ಧಿ ಜಯ ಸುಖ ಕೀ ದಾತಾ। ಸಂಕಟ ಹರೋ ಹಮಾರೀ ಮಾತಾ।। ಕ್ಷೀರ ಸಿಂಧು ಜಬ ವಿಷ್ಣು ಮಥಾಯೋ। ಚೌದಹ ರತ್ನ ಸಿಂಧು ಮೇಂ ಪಾಯೋ।। ಚೌದಹ ರತ್ನ ಮೇ ತುಮ ಸುಖರಾಸೀ। ಸೇವಾಕಿಯೋ ಪ್ರಭಹಿಂ ಬನೀ ದಾಸೀ।। ಜಬ ಜಬ ಜನ್ಮ ಜಹಾಂ ಪ್ರಭು ಲೀನ್ಹಾ। ರೂಪ ಬದಲ ತಹಂ ಸೇವಾ ಕೀನ್ಹಾ।। ಸ್ವಯಂ ವಿಷ್ಣು ಜಬ ನರ ತನು ಧಾರಾ। ಲೀನ್ಹೇಉ ಅವಧಪುರೀ ಅವತಾರಾ।। ತಬತುಮ ಪ್ರಕಟ ಜನಕಪುರ ಮಾಹೀಂ। ಸೇವಾ ಕಿಯೋ ಹೃದಯ ಪುಲಕಾಹೀಂ।। ಅಪನಾಯಾ ತೋಹಿ ಅಂತರ್ಯಾಮೀ। ವಿಶ್ವ ವಿದಿತ ತ್ರಿಭುವನ ಕೀ ಸ್ವಾಮೀ।। ತುಮ ಸಬ ಪ್ರಬಲ ಶಕ್ತಿ ನಹಿಂ ಆನೀ। ಕಹಂ ತಕ ಮಹಿಮಾ ಕಹೌಂ ಬಖಾನೀ।। ಮನ ಕ್ರಮ ವಚನ ಕರೈ ಸೇವಕಾಯೀ। ಮನ ಇಚ್ಛಿತ ವಾಂಛಿತ ಫಲ ಪಾಯೀ।। ತಜಿ ಛಲ ಕಪಟ ಔರ ಚತುರಾಯೀ। ಪೂಜಹಿಂ ವಿವಿಧ ಭಾಂತಿ ಮನ ಲಾಯೀ।। ಔರ್ ಹಾಲ ಮೈಂ ಕಹೌಂ ಬುಜಾಯೀ। ಜೋ ಯಹ ಪಾಠ ಕರೇ ಮನ ಲಾಯೀ। ತಾಕೋ ಕೋಯೀ ಕಷ್ಟ ನ ಹೋಯೀ। ಮನ ಇಚ್ಛಿತ ಪಾವೈ ಫಲ ಸೋಯೀ।। ತ್ರಾಹಿ ತ್ರಾಹಿ ಜಯ ದುಃಖ ನಿವಾರಿಣೀ। ತ್ರಿವಿಧ ತಾಪ ಭವ ಬಂಧನ ಹಾರಿಣೀ।। ಜೋ ಯಹ ಚಾಲೀಸಾ ಪಢೇ ಔರ ಪಢಾವೇ। ಧ್ಯಾನ ಲಗಾಕರ ಸುನೆ ಸುನಾವೈ।। ತಾಕೋ ಕೋಯೀ ನ ರೋಗ ಸತಾವೈ। ಪುತ್ರ ಆದಿ ಧನ ಸಂಪತ್ತಿ ಪಾವೈ।। ಪುತ್ರ ಹೀನ ಔರ ಸಂಪತ್ತಿ ಹೀನಾ।। ಅಂಧಾ ಬಧಿರ ಕೋಢೀ ಅತಿ ದೀನಾ।। ವಿಪ್ರ ಬೊಲಾಯ ಕೈ ಪಾಠ ಕರಾವೈ। ಶಂಕಾ ದಿಲ ಮೇಂ ಕಭೀ ನ ಲಾವೈ।। ಪಾಠ ಕರಾವೈ ದಿನ ಚಾಲೀಸಾ।। ತಾ ಪರ ಕೃಪಾ ಕರೈ ಗೌರೀಸಾ।। ಸುಖ ಸಂಪತ್ತಿ ಬಹುತ ಸೀಪಾವೈ। ಕಮೀ ನಹೀಂ ಕಾಹೂ ಕೀ ಆವೈ।। ಬಾರಹ ಮಾಸ ಕರೇ ಜೋ ಪೂಜಾ। ತೆಹಿ ಸಮ ಧನ್ಯ ಔರ ನಹಿಂ ದೂಜಾ।। ಪ್ರತಿದಿನ ಪಾಠ ಕರೈ ಮನ ಮಾಹೀಂ।ಉನ ಸಮ ಕೋಯೀ ಜಗ ಮೇಂ ನಾಹೀಂ। ಬಹು ವಿಧಿ ಕ್ಯಾಮೈಂ ಕರೌಂ ಬಡಾಯೀ। ಲೇಯ ಪರೀಕ್ಷಾ ಧ್ಯಾನ ಲಗಾಯೀ।। ಕರಿ ವಿಶ್ವಾಸ ಕರೈಂ ವ್ರತ ನೇಮಾ। ಹೋಯ ಸಿದ್ಧ ಉಪಜೈ ಉರ ಪ್ರೇಮಾ।। ಜಯ ಜಯ ಜಯ ಲಕ್ಷ್ಮೀ ಮಹಾರಾನೀ। ಸಬಮೇಂ ವ್ಯಾಪಿತ ಹೋ ಗುಣ ಖಾನೀ।। ತುಮ್ಹಾರೋ ತೇಜ ಪ್ರಬಲ ಜಗ ಮಾಹೀಂ। ತುಮ ಸಮ ಕೋವು ದಯಾಲ ಕಹೂಂ ನಾಹೀಂ।। ಮೋಹಿ ಅನಾಥ ಕೀ ಸುಧಿ ಅಬ ಲೀಜೈ। ಸಂಕಟ ಕಾಟಿ ಭಕ್ತಿ ಮೋಹಿ ದೀಜೇ। ಭೂಲ ಚೂಕ ಕರಿ ಕ್ಷಮಾ ಹಮಾರೀ। ದರ್ಶನ ದೀಜೈ ದಶಾ ನಿಹಾರಿ।। ಬಿನ ದರಶನ ವ್ಯಾಕುಲ ಅಧಿಕಾರೀ। ತುಮಹಿಂ ಅಕ್ಷತ ದುಃಖ ಸಹತೆ ಭಾರೀ।। ನಹಿಂ ಮೇಹಿಂ ಜ್ಞಾನ ಬುದ್ಧಿ ಹೈ ತನ ಮೇಂ। ಸಬ ಜಾನತ ಹೋ ಅಪನೇ ಮನ ಮೇಂ।। ರೂಪ ಚತುರ್ಭುಜ ಕರಕೆ ಧಾರಣ। ಕಷ್ಟ ಮೋರ ಅಬ ಕರಹು ನಿವಾರಣ।। ಕಹಿ ಪ್ರಕಾರ ಮೈಂ ಕರೌಂ ಬಡಾಯೀ। ಜ್ಞಾನ ಬುದ್ಧಿ ಮೋಹಿಂ ನಹಿಂ ಅಧಿಕಾಯೀ।।

ದೋಹಾ

ತ್ರಾಹಿ - ತ್ರಾಹೀ ದುಃಖ ಹಾರಿಣೀ। ಹರೋ ಬೇಗಿ ಸಬ ತ್ರಾಸ। ಜಯತಿ ಜಯತಿ ಜಯ ಲಕ್ಷ್ಮೀ। ಕರೋ ಶತ್ರುನ ಕಾ ನಾಶ।। ಹರಿ ಧರಿ ಧ್ಯಾನ ನಿತ, ವಿನಯ ಕರತ ಕರ ಜೋರ। ಮಾತು ಲಕ್ಷ್ಮೀ ದಾಸ ಪರ। ಕರಹು ದಯಾ ಕಾ ಕೋರ।।

ಜಯಮಂಗಳಂ ನಿತ್ಯ ಕೈಲಾಸಪರ್ವತದ(ವರಮಹಾಲಕ್ಷ್ಮೀಕಥೆ) ರಾಗ: ಆನಂದಭೈರವಿ

ಜಯಮಂಗಳಂ ನಿತ್ಯ ಶುಭಮಂಗಳಂ। ಜಯ ಮಂಗಳಂ ನಿತ್ಯ ಶುಭಮಂಗಳಂ। ಕೈಲಾಸ ಪರ್ವತದ ಶಿಖರದಾ ವಿಸ್ತಾರ। ಪೊಗಳಲಿಂದೆನ್ನ ನಾಲಿಗೆಗೆ ಅಳವೆ। ನವರತ್ನದ ಪೀಠದಲಿ ಶಿವನು ತಾ ಕುಳ್ಳಿರಲು। ಕೆಲದಲ್ಲಿ ಇದ್ದಳೇ ಮಹಾದೇವಿಯು।।1।। ಚರಣಕ್ಕೆರಗಿ ಕರವ ಮುಗಿದು ತಾ ನಿಂತಳು। ಮೃದುವಾಣಿಯಾಗ ವಿನಯದಿಂದಲೆ ಧರಣಿಯೊಳಗೆ ಮಿಗಿಲಾದ ವ್ರತವು ಯಾವುದೆಂದು। ತರುಣಿ ನುಡಿದಲೆ ತನ್ನ ಪತಿಯ ಕೂಡೆ।।2।। ರಂಭೆ ಪಾರ್ವತಿ ಕೇಳು ಕೌಂಡಿನ್ಯ ನಗರಕ್ಕೆ। ಬಂಗಾರದ ಕೋಟೆ ಬೆಳ್ಳಿಯ ತೆನೆಯುಖ। ತುಂಬಿದಾ ಪಟ್ಟಣದ ಒಳಗೆ ಬಡ ಬ್ರಾಹ್ಮಣನ ಹೆಂಡತಿ ಇದ್ದಾಳೆ ಚಾರುಮತಿಯು।।3।। ಪತಿ ಭಕ್ತಿಯುಳ್ಳಾಕೆ ಅತಿ ಸೌಮ್ಯವಂತಳು। ಮತಿವಂತೆ ಆಕೆಯ ಭಾವಕ್ಕೆ ಮೆಚ್ಚಿ। ಸ್ವಪ್ನದಲ್ಲೇ ಲಕ್ಷ್ಮಿ ಪ್ರತ್ಯಕ್ಷವಾದ ಕಥೆಯ। ಹೇಳುವೆ

ನೀಗ ಕೇಳೆಂದರು॥4॥ ಮುತ್ತಿನ ಮೈ ತೊಡಿಗೆ ನವರತ್ನದ ಆಭರಣ। ಪಟ್ಟೆಯ ಸೀರೆ ಕುಪ್ಪುಸವ ತೊಟ್ಟು। ಮುತ್ತಿನ ಬಿಟ್ಟೆಟ್ಟು ಅಚ್ಚ ಮಲ್ಲಿಗೆ ಹೂವು। ಮಿತ್ರೆಯಾ ಮುಡಿ ಮೇಲೆ ಮಿಡಿಯುತ್ತಿತ್ತು॥5॥ ಮತ್ತೆ ಚಾರುಮತಿಯ ಹಸ್ತವನೆ ಹಿಡಿದ್ದೆಬಿಸಿ। ಏಳು ಏಳುಮ್ಮ ಏಳೆನುತಲೇ। ಭಕ್ತಿಯಿಂದಲೆ ಎನ್ನ ಪೂಜೆಯ ಮಾಡಿದರೆ। ಇಷ್ಟಾರ್ಥ ಕೊಡುವೆನೆಂದಳು ಲಕ್ಷುಮಿ॥6॥ ಬೇಗನೆ ಎದ್ದಳು ಪಾದವ ತೊಳೆದಳು। ಷೋಡಷೋಪಚಾರಗಳ ಮಾಡಿದಳು। ದೇವಿಯನು ಪೂಜಿಸಿ ಮಂಗಳಾರತಿ ಎತ್ತಿ ಕೋಳಿ ಕೂಗಲು ಎಚ್ಚರವಾಯಿತು॥7॥ ಎಚ್ಚೆತ್ತು ಎದ್ದುಳು ಮತ್ತೆ ಯಾರನು ಕಾಣದೆ। ಪ್ರತ್ಯಕ್ಷವಾದಳೆ ಲಕ್ಷ್ಮಿದೇವಿ। ಮತ್ತೆ ತಮ್ಮರಸರಿಗೆ ವಂದನೆಯನೆ ಮಾಡಿ। ಮೌನದೊಳಿದ್ದಳೆ ಚಾರುಮತಿಯು॥8॥ ಬೆಳಗಾಗ ಎದ್ದಳು ಚರಣ ಮುಖವನೆ ತೊಳೆದು। ಮೈಲಿಗೆ ಬಿಟ್ಟು ಮಡಿಯನ್ನೇ ಉಟ್ಟು। ಹಣೆಗೆ ಕುಂಕುಮವಿಟ್ಟು ಕೇರಿಯ ಒಳಗಿದ್ದ ಹಿರಿಯರಿಗೆ ಅರುಹಿದಳೆ ಸ್ವಪ್ನವನ್ನು॥9॥ ಮುತ್ತೈದೆ ಬಂದಳು ಪ್ರತ್ಯಕ್ಷವಾದಳು। ಹಸ್ತವನಿಟ್ಟಳು ಶಿರದ ಮೇಲೆ। ಭಕ್ತವತ್ಸಲನ ಅರ್ಧಾಂಗಿ ಆಕೆ ಹೌದೆಂದು। ಥಟ್ಟನೆ ನುಡಿದರೆ ಹಿರಿಯರೆಲ್ಲಾ॥10॥ ಲಕ್ಷ್ಮೀ ಆಕೇ ಹೌದು ಭಕ್ತಿಲಿ ಪೂಜಿಸು। ಶೀಘ್ರದಲಿ ವ್ರತವ ಆಚರಿಸೆಂದರೆ। ಕಟ್ಟಿ ಕೊಂಡಿರಿ ವಾರ ಮುಹೂರ್ತ ಗಳನೆನುತಲೆ। ಹಿರಿಯರ ಕೇಳಿದಳೆ ಚಾರುಮತಿಯು॥11॥ ಶ್ರಾವಣ ಮಾಸದ ನಡುವಿನ ಶುಕ್ರವಾರದಲಿ। ಭೋರೆಂಬೊ ಪೂರ್ಣಿಮೆಯ ದಿವಸದಲ್ಲಿ। ಮಹಾಲಕ್ಷ್ಮೀ ದೇವಿಯ ಪೂಜೆಯ ಮಾಡಿದರೆ। ಕಾಮ್ಯಾರ್ಥ ಕೊಡುವಳೆಂದರು ವಿಪ್ರರು॥12॥ ಸುಮ್ಮಾನದಿಂದಲೇ ಮನೆಗೆ ತಾ ಬಂದಳು। ಅನುಮತಿಗಾಗಿ ತನ್ನ ಪತಿಯ ಕೇಳೆ। ಘನವಾದ ವ್ರತವನು ಪೇಳಿದರು ವಿಪ್ರರು। ಅನುಮಾನವಿಲ್ಲದೆ ಮಾಡೆಂದನು॥13॥ ಮನೆಯ ಸಾರಿಸಿ ಒಲಿದು ತಳಿರು ತೋರಣ ಕಟ್ಟಿ। ನಡುವೆ ಸುವರ್ಣ ಕುಂಡಲವ ರಚಿಸಿ। ತೊಡೆದು ಸುಣ್ಣ ಜೌಜು ಪರಿಪರಿಯ ಚಿತ್ರಗಳ ಘನ ಹರುಷದಿಂದಲಿ ಬರೆದಳೂ॥14॥ ಐದು ಫಲ ಅಕ್ಕಿಯನು ಅದರೊಳಗೆ ತುಂಬಿರಿಸಿ। ಕೊರಳಿಗೆ ಮಂಗಳ ಸೂತ್ರವನೆ ರಚಿಸಿ। ಎದುರ್ಗೊಂಡು ಆಕೆಯನು ಪೀಠದಲಿ ಕುಳ್ಳಿರಿಸಿ। ಕಟ್ಟುವರು ಮಕರ ತೋರಣ ಗುಡಿಗಳ॥15॥ ಮಂಗಳ ಸ್ನಾನವ ಮಾಡಿ ಬಂಗಾರ ಬೆಳ್ಳಿಯನಿಟ್ಟು। ದೇವಿಗೆ ಸೀರೆ ಕುಪ್ಪುಸವ ತೊಡಿಸಿ। ಒಂಭತ್ತು ಎಳೆದಾರ ಹಂಗು ನೂಲು ಬತ್ತಿ। ಮಂಗಳಾರತಿ ಗಳುಹಿತವಾದವು॥16॥ ಹರಿದ್ರಾ ಕುಪ್ಪಸ ಪೀತಾಂಬರ। ಪರಮಾತ್ಮನರಸಿಯನು ಪೂಜೆಯ ಮಾಡಿದರು। ವರವ ಬೇಡಿದರೆ ಬಹು ಭಕ್ತಿಯಿಂದ॥17॥ ಅಕ್ಷರ ವಂತನಿಗೆ ಉತ್ತಮ ಬ್ರಾಹ್ಮಣಗೆ। ಮಕ್ಕಳೊಂದಿಗಿತ್ತಿ ಮುತ್ತೈದೆಯಾ। ದಂಪತಿಗಳನು ಕರೆದು ಮೊರದ ಬಾಗಿನವಿತ್ತು। ದಕ್ಷಿಣೆ ತಾಂಬೂಲಗಳ ಸಮರ್ಪಿಸಿದರು॥18॥ ಪ್ರಾರ್ಥನೆಯ ಮಾಡಿದರು ಸತಿಪತಿಗಳೀರ್ವರೂ। ಕಂಸಾರಿ ಮಡದಿಯಾ ಪೂಜೆಯನು ಮಾಡಿ। ಕನಸಿನಲಿ ಕಂಡದ್ದು ಮನಸಿನಲಿ ಉಂಟಾಯ್ತೆಂದು। ಸಂಶಯವಿಲ್ಲವ ಭಾಗ್ಯ ಕೊಟ್ಟಳಾಕೆ॥19॥ ಆಟಕೋಟಿ ವ್ರತ ಎಂದು ತಿಳಿಯಲು ಬೇಡಿರಿ। ಪಾಠಿಸಿ ಹೇಳ್ದೋರ್ಗೆ ಪುಣ್ಯವುಂಟು। ಕೋಟಿ ತೀರ್ಥನ ರಾಣಿ, ಪೂಜೇನ ಮಾಡಿದರೆ। ಕೋಟಿ ಸಂಪತ್ತುಗಳ ಕೊಟ್ಟಳಾಕೆ॥20॥ ಮಂಗಳಂ ಮಾಧವನ ಅರಸಿ ಸಿರಿದೇವಿಗೆ। ಮಂಗಳಂ ಸಾಗರನ ತನುಜಾತೆಗೇ। ಮಂಗಳಂ ವರಮಹಾಲಕ್ಷ್ಮೀ ಗೌರಮ್ಮಗೇ। ಜಯಮಂಗಳಂ ನಿತ್ಯ ಶುಭಮಂಗಳಂ॥21॥

ಕಡುಚೆಲ್ವ ರತ್ನ (ವರಮಹಾಲಕ್ಷ್ಮೀ ವ್ರತಕಥೆ) — ರಾಗ: ಆನಂದಭೈರವಿ

ಕಡುಚೆಲ್ವ ರತ್ನ ಶಿಖರಗಳಿಂದ ರಚಿತಮಯ। ಆಗಿರ್ಪ ಕೈಲಾಸಗಿರಿಯ ಮೇಲೇ ನಡುವೆ ಉದ್ಯಾನವನದ। ಪಾರಿಜಾತದ ನಡುವೇ ಮೃಡನೊಪ್ಪೆ ಹೊನ್ನ ಸಿಂಹಾಸನದಲೀ॥1॥ ಇಂದ್ರಾದಿ ಸುರರು। ನಾರದ ಸನಕಾದಿಗಳು ಚಂದ್ರಶೇಖರಗೆ ಓಲಗವ ಕೊಡಲೂ। ಅಂದು ಪಾರ್ವತಿದೇವಿ ಪತಿಗೆ ಬಿನ್ನಹ ಮಾಡೀ। ಸಂದದಲಿ ಸಕಲ ಧರ್ಮಗಳು ಕೇಳೆ॥2॥ ವ್ರತಮಧ್ಯದೊಳಗುಳ್ಳ। ಅತಿ ಪುಣ್ಯಕರವಾದ। ಸತಿಯರಿಗೆ ಸಕಲ ಸಂಪತ್ತನೀವೋ। ಪತಿನೀನೆ ಹೇಳೆಂದು ಪಾರ್ವತಿಯು ಕೇಳಲೂ। ತನ್ನ ಸತಿಗೆ ಹಿತವಾಗಿ ಶಂಕರ ಹೇಳಿದಾ॥3॥ ಚೂತ ಸಿಂಹಾಕರಾ। ಸಿಂಹಾಸನ ರೂಪದ ಕಥೇ। ಮತ್ತೆ ಬಹುಶಾಸ್ತ್ರ ಪುರಾಣದರ್ಥಾ। ಒಪ್ಪದಲಿ ಚಾರುಮತಿ ಎಂಬಾಕೆ ಕುಂಡಲೀ। ಎಂಬ ಪಟ್ಟಣದೊಳಗೆ ಸತಿ ಒಬ್ಬಳೂ॥4॥ ಆಕೆ ಸ್ವಪ್ನದಲ್ಲಿ ಲೋಕಮಾತೇ ಲಕ್ಷ್ಮೀ ಬೇಕಾದ ವರಗಳನು ಕೊಡುವೆನೆನುತಾ। ಶೀಘ್ರದಲಿ ಬಂದು ಪ್ರತ್ಯಕ್ಷವಾದಳೂ। ನೀ ಕೇಳೆ ಪಾರ್ವತಿ ಕಥೆ ಎಂದರೂ॥5॥ ಸ್ವಪ್ನ ಕಂಡೆಚ್ಚರಿತು। ಒಪ್ಪದಲಿ ಚಾರುಮತಿ। ತಪ್ಪದೇ ನೆಂಟರಿಷ್ಟರಿಗೆ ಹೇಳಿ। ಅಪ್ರಮೇಯನ ರಾಣಿ। ವರಲಕ್ಷ್ಮೀ ದೇವಿಯಾ। ಕಲ್ಪೋಕ್ತದಿಂದ ಪೂಜೆಗೊಂಬರೂ॥6॥ ಶ್ರಾವಣಾ ಮಾಸದಲಿ। ನಡುವಿನಾ ಭಾರ್ಗವಾರದಲಿ।

ಶುಕ್ಲಪಕ್ಷದಲಿ। ಶುಭಯೋಗದಲ್ಲೀ। ಪ್ರೇಮದಲಿ ಶ್ರೀ ಮಹಾಲಕ್ಷ್ಮೀ ಬರುತಾಳೆಂದೂ। ಆ ಮಹಾಸತಿಯರೆಲ್ಲರೂ ಎದುರ್ಗೊಂ ಡರೂ॥7॥ ಕಂಬೆಣ್ಣೇನೊತ್ತಿ। ರಂಭೆ ಮಹಾಲಕ್ಷ್ಮಿಗೇ। ಹೊಂಬಣ್ಣದರಿಶಿನವ ತೆಗೆದು ಹಚ್ಚೀ। ತುಂಬೆಗುರುಳಿಗೆ ಚೆಲ್ವ ಗಂಧದ್ಗುಗ್ಗುಳವಿರಿಸೀ। ಅಂಬುಜಮುಖಿಗೆ ಮಜ್ಜನವೆರೆದರೂ॥8॥ ನಿತ್ಯಾನುಪಾಯಿಗೇ। ನೀಡಿಗೇಶವನೆ ವರೆಸಿ ಮಿತ್ರೇರು ದೇವಿ ಪರಾಕು ಎನ್ನುತ್ತಾ। ಹಯವಕ್ತಳಾಗೀ ಭಕ್ತಜನರ ಕಾಯ್ವಳಿಗೇ ಮತ್ತೆ ಕನ್ನಡಿ ತಂದು ಪಿಡಿದರಾಗ॥9॥ ಭಕ್ತರಿಗೆ ಅಭಯವಾ ನೀ ಹಾಡುವ್ರೋ ಹಸ್ತಕ್ಕೆ। ಮಿತ್ರೆ ಧರಿಸಿದಳು। ಕಂಕಣವು ಕಡಗಾ। ಕೆತ್ತಿಸಿದ ಹೊನ್ನಬಳೆ। ಮಿತ್ರೆ ತನ್ನ ಕರಗಳಿಗೇ। ಮುತ್ತಿನಂಗುರ ಮುದ್ದು ಬೆರಳಿಗೀಗಾ॥10॥ ಶೃಂಗಾರ ದೇವಿಗೇ। ಚೆಂಗಾವಿ ಕುಪ್ಪಸಾ। ಬಂಗಾರ ಬಾಹುಪುರಿ ಭುಜ ಕೀರ್ತಿಯಾ। ರಂಗು ನೀಲದ ಚೆಲ್ವ। ರತ್ನ ಮಣಿ ತಾಯಿತವ್ರೂ। ಅಂಗನೆಗೆ ತೋಳಬಂದಿಗಳು ಒಪ್ಪೇ॥11॥ ಹಸ್ತ ಕಡಗದ ಮುಂದೆ। ಹವಳದಾ ಕೈಕಟ್ಟು। ಅಚ್ಚ ನೀಲದ ಬಳೆಯು ಬಿಚ್ಚು ಬಳೆಯೂ। ಅಂಗನೆಗೆ ರಂಗು ಮಾಣಿಕದ ಉಂಗುರಗಳೂ। ಮುಂಗೈ ಮುರಾರಿಯೂ ಸರವನೊಪ್ಪೆ॥12॥ ಒಗ್ಗುರಳು ಮುತ್ತಿನ ಚಿಂತಾಕುಸರಿಗೇಯೂ। ಅನರ್ಘ್ಯವಾದ ಕೊರಳ ಆಭರಣವ್ರೂ। ಸುಜ್ಞಾನಿಗಳಿಗೆ ಚಿಂತಿಸಲಳವೆ ಮನದೊಳಗೇ। ಶುಭಲಗ್ನದಲಿ ಶ್ರೀಹರಿ ಇಟ್ಟ ಕೊರಳ ಪದಕಾ॥13॥ ಇಂದಿರೇ ಕೊರಳಿಗೆ ಕುಂದಣವು ಹೊಳೆವಂತೆ। ಚಂದಣವು ಗಂಧವ್ರೂ ಜವ್ವಾಜಿಯೂ। ಚಂದದಲಿ ಪುನಗು ಪಚ್ಚೇಲಿ ಪೂಜೇಮಾಡೇ। ವರಲಕ್ಷ್ಮೀಗೇ ಶೃಂಗಾರ ಮಾಡಿದರೂ॥14॥ ಮುಡಿವ್ರೋಳು ಮಲ್ಲಿಗೇ। ಒಡನೆ ಸಂಪಿಗೆ ಜಾಜಿ ಎಡೆಗೆಡೆಗೆ ಹೊಂಗ್ಯಾದಿಗೇ ದವನವ್ರೋ। ನಿಡಿಗೇಶನ ರಾಣಿ। ಕಡುಚೆಲ್ವ ತುರುಬಿಗೇ। ಜಗದೋಡೆಯನಾ ರಾಣಿ ಮುಡಿದಳೆ ಕುಸುಮವಾ॥15॥ ಕುಂಭ ಕುಚದಾಮೇಲೆ। ಇಂಬಿಟ್ಟ ಹಾರಗಳು। ಕಂಬು ಕಂಠಾಮಾಲೆ ಸರಗಳೊಪ್ಪೇ। ಗೊಂಡ್ಯ ಪೇಂಡೇ ಸರಾ। ಹವಳ ಗೌಳೀ ಸರಾ। ಹೊಳೆವ್ರೊ ಮುತ್ತಿನ ಸರವು ಹೊಂಬಾಳೆಯೂ॥16॥ ಜಾತಿ ಮುತ್ತನೆ ಪೋಲ್ವೋ। ನೂತನ ತಂಡಿಲ ತುಂಬಿ। ಶ್ರೀಸತಿಗೆ ಹೊನ್ನ ಕಲಶವನೆ ಇರಿಸೇ। ಬೇಕಾದ ಪಂಚವಿಧ ಫಲ್ವಂಗಳನೇ ತುಂಬೀ। ಜಗನ್ಮಾತೆಯನು ತಾವೆದುರ್ಗೊಂಡರಾಗಾ॥17॥ ಪದ್ಮಾಸನೇ ಪದ್ಮ ಕರದಲ್ಲಿ ಪಿಡಿದಿಹಳು। ಪದ್ಮಾಕ್ಷಿ ಪದ್ಮಮುಖಿ ಪದ್ಮಾಲಯೇ। ಪದ್ಮಜಾಂಬಿಕೆ ನಿಮ್ಮ ಗರ್ಭದಿ ಬಂದೆನಗೇ। ಪದ್ಮಲೋಚನೆ ಪಟ್ಟದರಸಿ ಬಾರೇ॥18॥ ಬಾರೆ ಬಹು ಶ್ರೀದುರ್ಗಿ ಬಾರೇ ಮಹಾಮಾಯೇ ಬಾರೇ ಶ್ರೀಲಕ್ಷ್ಮೀ ನೀ ಬಾರೆದೇವೀ। ಬಾ ನಿನ್ನ ಭಜಿಸುವೇ। ಬಾರೆನ್ನ ಮನೆಗೀಗಾ। ಬಾರೇ ದಾಕ್ಷಾಯಿಣೀ ಪದ್ಮಿಣೀನೂ॥19॥ ಬಂದಳೇ ಜಗದೇಕಾನಂದನಾರ್ಧಾಂಗಿ ಶ್ರೀ। ಬಂದಳು ನಂದಗುಣಸಾಂದ್ರ ನರಸೀ। ನಿಂದಳೇ ನಿಗಮಗೋಚರನ ಪಟ್ಟದರಾಣಿ। ಕುಂದದೇ ವರಗಳನು ಕೊಡುವ್ರೊ ದೇವಿ॥20॥ ರತ್ನ ಪೀಠದ ಮೇಲೆ ಸನ್ನಿಧಾನವ ಮಾಡಿ। ಚಿನ್ನದ್ಹರಿವಾಣದಲಿ ಪಾದ ತೊಳೆದೂ। ಸಣ್ಣ ವಸ್ತ್ರಗಳಿಂದ ದೇವಿ ಪಾದವನೊರಸೀ। ಕನ್ಯೆಯರು ಕಮಲ ಮುಖಿಗೆ ನೇಮದೀ॥21॥ ರತ್ನಮಯವಾಗಿದ್ದ। ಸ್ವರ್ಣ ಮಂಟಪದಲ್ಲಿ। ಸುವರ್ಣ ಪಾತ್ರೆಗಳಲ್ಲಿ ಸ್ವಯಂಪಾಕವ್ರೂ। ನಮ್ಮ ಸೊಸೆ ವಾಣೀ ಭಾರತೀದೇವೀ ಜಾಣೇರೂ। ಚೆನ್ನಾಗಿ ನೈವೇದ್ಯಗಳನಿಟ್ಟರಾಗಾ॥22॥ ರೊಟ್ಟಿಗೇ ಸಕ್ಕರೇ। ಬಟ್ಟಲು ಪಾಯಸಾ। ಬಟ್ಟಲಲಿ ತಿಳಿತುಪ್ಪ।ಪಂಚಭಕ್ಷ್ಯಾ। ಕುಟ್ಟಿದೇಲಕ್ಕಿ ಕೇಸರಿ। ಗಟ್ಟಿಮೊಸರನೂ। ಶ್ರೀಪತಿ ರಾಣಿಗೆ ಆರೋಗಣೇ॥23॥ ಹಣ್ಣ ಶೀಕರಣೆ ಸೂಪ। ಶಾಖ ತಿಳಿಸಾರು ಮೊಸರು। ಹೂರಣದ ಕಡುಬು ಸಕ್ಕರೆಯು ಜೇನು। ಬಗೆಬಗೆಯ ಭಕ್ಷ ಬಾಳೆಹಣ್ಣು ನೈವೇದ್ಯಾ। ಆ ಪರಮ ಭಕ್ತರಣಿ ಮಾಡಿ ಬಡಿಸೇ॥24॥ ಪುಡಿಗಡುಬು ಹೊಯ್ಗಡುಬು ಹೂರಣದ ಕಡುಬು ಅತಿರಸಾ ಕಡಬು ಚಕ್ಕುಲಿಯು ದೋಸೆಯೊಪ್ಪೆ। ಹೂರಿಗೆಣ್ಣೂರಿಗೇ। ಕರಿಗಡಬುಒಬ್ಬಟ್ಟು ತೆಂಗಿನಕಾಯಿ ಕರ್ಜಿಕಾಯಿ। ಪರಿಪರಿ ಭಕ್ಷ್ಯವ್ರೂ॥25॥ ಎಳ್ಳು ಸೂಸಲಿಗೆ। ತೆಂಗಿನಾಕಾಯಿ ತುರಿದ್ಹಾಕೀ। ಮೆಲ್ಲನೆ ಅಟ್ಟ ಹೂರಣದ ಕಡುಬು। ಬೆಳ್ಳಿ ಹರಿವಾಣದಲಿ। ತುಂಬು ತುಪ್ಪವ ಸುರಿದೂ। ಕನ್ಯೆಯರು ಕಮಲಮುಖಿಗತಿ ನೇಮದೀ॥26॥ ಸಿರಿಹೊನ್ನೆ ತಳಿ ನಿಮ್ಮ ಚರಣ ಕಮಲಕೆ ಪೂಜೆ। ಕರುಣಾ ಕಟಾಕ್ಷಿಗೇ। ಕಟಿಗೆ ಪೂಜೇ। ಹರಿವಕ್ಷವಾಸಿಗೇ। ಹೃದಯಪೂಜೇಮಾಡಿ। ವರಲಕ್ಷ್ಮೀಗೇ ಸರ್ವಾಂಗ ಪೂಜೇ॥27॥ ಧೂಪದೀಪಗಳಿಂದ ನೈವೇದ್ಯಗಳ ಮಾಡಿ। ಕಾಂತೆಯರು ಹೊನ್ನ ಹರಿವಾಣದಲ್ಲೀ। ಬೇಕಾದ ಪಂಚ। ಭಕ್ಷ ರಸಾಯನಗಳೂ। ಆ ಪರಮ ಭಕ್ತರಣಿಮಾಡಿ ಬಡಿಸೇ॥28॥ ಖಳನ ಕುಳ ವೈರಿಗೇ। ಎಳುನೀರು ಪಾನಕಾ। ತಿಳಿನೀರು ಮಜ್ಜಿಗೇ। ಶೀತಳುದುಕಾ। ಬಿಳಿಲಿನಂದದಲಿ। ಎಡೆಗೆಡೆಗೆ ನಾ ಬೀಸುತ್ತಾ। ನಳಿನಮುಖಿಗೀಗ ಕರ್ಪೂರ ವೀಳ್ಯಾ॥29॥ ಆನಂದ ತೀರ್ಥಮಣಿ। ಬಂಧು ಕರುಣಾಸಿಂಧು। ಸುಜ್ಞಾನದಲಿ ಪರಿಪೂರ್ಣ ಳೆನಿಸೀ। ಮುನಿಯದೇ ಮನದಲ್ಲಿ ಸ್ಥಿರವಾಗಿ

ನೆಲಸಮ್ಮಾ। ವಾಣಿಪತಿ ಪಿತರ ರಾಣಿಗಾರುತಿ ಬೆಳಗುವೇ॥30॥ ಮುತ್ತೈದೆತನವನೂ। ಮುಡಿವೋ ಪ್ರಸಾದವನು। ಪುತ್ರ ಸಂತಾನವನು। ಸೌಭಾಗ್ಯತನವನೂ। ಕೊಟ್ಟರೆಂದೆಂದಿಗೂ। ದೇವಿ ನಿಮ್ಮ ಕರಗಳಿಂದಾ। ಭಕ್ತರಿಗೆ ದಯಮಾಡು ಮಹಲಕ್ಷ್ಮೀ ನೀನೂ॥31॥ ಇಂದಿರಾ ಲೋಕಮಾತೆಗೇ। ಮಹತಾಯಿಗೇ। ಚಂದ್ರಮನ ಕಳೆಯುಳ್ಳ ಸುಂದರಿಗೆ। ಮಂದರೋದ್ಧರನರಸಿ। ತಾಯಿ ಮಹಲಕ್ಷ್ಮೀಗೇ। ಮಂದರೋದ್ಧಾರಿಗೇ। ಮಂತ್ರಪುಷ್ಪ॥32॥ ಜಯತು ಭವಾನಿಗೇ। ಜಯತು ಸುವಾಣಿಗೇ। ಜಯಜಯತು ಸಕಲಗುಣ ಸಂಪನ್ನೆಗೇ। ಜಯತು ಮೂರ್ಲೋಕಕ್ಕೆ ಬೇಡಿದ್ವರಗಳ ಕೊಡುವೋ। ಪಾರ್ವತಿ ಪರಮೇಶ್ವರರಿಗೆ ಶುಭಮಂಗಳಾ॥33॥

ಶೋಭಾನವೆನ್ನಿರೆ ಸುರರೊಳು (ಶ್ರೀಲಕ್ಷ್ಮೀ ಶೋಭಾನೆ) ರಾಗ: ಆನಂದಭೈರವಿ-ಛಾಪುತಾಳ

ಶೋಭಾನವೆನ್ನಿರೆ ಸುರರೊಳು ಸುಭಗನಿಗೆ ಶೋಭಾನವೆನ್ನೀ ಸುಗುಣನಿಗೆ। ಶೋಭಾನವೆನ್ನಿರೆ ತ್ರಿವಿಕ್ರಮರಾಯಗೆ ಶೋಭಾನವೆನ್ನಿ ಸುರಪ್ರಿಯಗೆ ಶೋಭಾನೆ॥ಪ॥ ಲಕ್ಷ್ಮೀನಾರಾಯಣರ ಚರಣಕ್ಕೆ ಶರಣೆಂಬೆ ಪಕ್ಷಿವಾಹನಗೆರಗುವೆ। ಪಕ್ಷಿವಾಹನಗೆರಗುವೆ ಅನುದಿನ ರಕ್ಷಿಸಲಿ ನಮ್ಮ ವಧೂವರರ ಶೋಭಾನೆ॥1॥ ಪಾಲಸಾಗರವನ್ನು ಲೀಲೆಯಲಿ ಕಡೆಯಲು ಬಾಲೆ ಮಹಾಲಕ್ಷ್ಮಿ ಉದಿಸಿದಳು। ಬಾಲೆಮಹಾಲಕ್ಷುಮಿ ಉದಿಸಿದಳಾದೇವಿ ಪಾಲಿಸಲಿ ನಮ್ಮವಧೂವರರ ಶೋಭಾನೆ॥2॥ ಬೊಮ್ಮನ ಪ್ರಳಯದಲಿ ತನ್ನರಸಿಯೊಡಗೂಡಿ ಸುಮ್ಮನೆಯಾಗಿ ಮಲಗಿಪ್ಪ। ನಮ್ಮ ನಾರಾಯಣಗು ಈ ರಮ್ಮೆಗಡಿಗಡಿಗು ಜನ್ಮವೆಂಬುದು ಅವತಾರ ಶೋಭಾನೆ॥3॥ ಕಂಬುಕಂಠದ ಸುತ್ತ ಕಟ್ಟಿದ ಮಂಗಳಸೂತ್ರ ಅಂಬುಜವೆರಡು ಕರಯುಗದಿ। ಅಂಬುಜವೆರಡು ಕರಯುಗದಿ ಧರಿಸಿ ಪೀತಾಂಬರವನುಟ್ಟು ಮೆರೆದಳೆ ಶೋಭಾನೆ॥4॥ ಒಂದು ಕರದಿಂದ ಅಭಯವನೀವಳೆ ಮತ್ತೊಂದು ಕೈಯಿಂದ ವರಗಳ। ಕುಂದಿಲ್ಲದಾನಂದ ಸಂದೋಹ ಉಣಿಸುವ ಇಂದಿರೆ ನಮ್ಮ ಸಲಹಲಿ ಶೋಭಾನೆ॥5॥ ಪೊಳೆವ ಕಾಂಚಿಯ ಧಾಮ ಉಲಿವ ಕಿಂಕಿಣಿಗಳು ನಲಿವ ಕಾಲಂದುಗೆ ಘಲುಕೆನಲು ನಳಿನಳಿಸುವ ಮುದ್ದು ಮುಖದ ಚೆಲುವೆಲಕ್ಷ್ಮಿಸಲಹಲಿ ನಮ್ಮವಧೂವರರ ಶೋಭಾನೆ॥6॥ ರನ್ನದ ಮೊಲೆಗಟ್ಟು ಚಿನ್ನದಾಭರಣಗಳ ಚೆನ್ನೆ ಮಹಲಕುಮಿ ಧರಿಸಿದಳೆ। ಚೆನ್ನೆ ಮಹಲಕುಮಿ ಧರಿಸಿದಳಾ ದೇವಿ ತನ್ನ ಮನೆಯ ವಧೂವರರ ಸಲಹಲಿ ಶೋಭಾನೆ॥7॥ ಕುಂಭಕುಚದ ಮೇಲೆ ಇಂಬಿಟ್ಟ ಹಾರಗಳು ದುಂಬಿಗುರುಳ ಮುಖಕಮಲ। ದುಂಬಿಗುರುಳ ಮುಖಕಮಲದ ಮಹಲಕ್ಷ್ಮೀ ಜಗದಂಬೆ ವಧೂವರರ ಸಲಹಲಿ ಶೋಭಾನೆ॥8॥ ಮುತ್ತಿನ ಓಲೆಯನ್ನಿಟ್ಟಳೆ ಮಹಲಕುಮಿ ಕಸ್ತೂರಿತಿಲಕ ಧರಿಸಿದಳು। ಕಸ್ತೂರಿತಿಲಕ ಧರಿಸಿದಳಾ ದೇವಿ ಸರ್ವತ್ರ ವಧೂವರರ ಸಲಹಲಿ ಶೋಭಾನೆ॥9॥ ಅಂಬುಜನಯನಗಳು ಬಿಂಬಾಧರ ಶಶಿಬಿಂಬದಂತೆಸೆವ ಮೂಗುತಿಮಣಿಯು ಶಶಿಬಿಂಬದಂತೆಸೆವ ಮೂಗುತಿ ಮಣಿಯ ಮಹಲಕ್ಷ್ಮಿ ಉಂಬುದಕೀಯಲಿ ವಧೂವರರ್ಗೆ ಶೋಭಾನೆ॥10॥ ಮುತ್ತಿನಕ್ಷತೆಯಿಟ್ಟು ನವರತ್ನದ ಮುಕುಟವ ನೆತ್ತಿಯ ಮೇಲೆ ಧರಿಸಿದಳೇ ನೆತ್ತಿಯ ಮೇಲೆ ಧರಿಸಿದಳಾ ದೇವಿ ತನ್ನ ಭಕ್ತ ಜನರ ಸಲಹಲಿ ಶೋಭಾನೆ॥11॥ ಕುಂದ ಮಂದಾರ ಜಾಜೀ ಕುಸುಮಗಳ ವೃಂದವ ಚೆಂದದ ತುರುಬಿಗೆ ತುರುಬಿದಳೆ ಕುಂದಣವರ್ಣದ ಕೋಮಲೆ ಮಹಲಕ್ಷ್ಮಿ ಕೃಪೆಯಿಂದ ವಧೂ-ವರರ ಸಲಹಲಿ ಶೋಭಾನೆ॥12॥ ಎಂದೆಂದಿಗೂ ಬಾಡದ ಅರವಿಂದ ಮಾಲೆಯ ಇಂದಿರೆ ಪೊಳೆವ ಕೊರಳಲ್ಲಿ ಇಂದಿರೆ ಪೊಳೆವ ಕೊರಳಲ್ಲಿ ಧರಿಸಿದಳೆ ಅವಳಿಂದು ವಧೂವರರ ಸಲಹಲಿ ಶೋಭಾನೆ॥13॥ ದೇವಾಂಗ ಪಟ್ಟೆಯ ಮೇಲು ಹೊದ್ದಿಕೆಯ ಭಾಮೆ ಮಹಲಕ್ಷುಮಿ ಧರಿಸಿದಳೇ ಭಾಮೇ ಮಹಲಕ್ಷುಮಿ ಧರಿಸಿದಳಾದೇವಿ ತನ್ನ ಸೇವಕ ಜನರ ಸಲಹಲಿ ಶೋಭಾನೆ॥14॥ ಈ ಲಕುಮಿ ದೇವಿಯ ಕಾಲುಂಗುರ ಘಲುಕೆನಲು ಲೋಲಾಕ್ಷಿ ಮೆಲ್ಲನೆ ನಡೆತಂದಳು। ಸಾಲಾಗಿ ಕುಳ್ಳಿರ್ದ ಸುರರ ಸಭೆಯ ಕಂಡು ಆಲೋಚಿಸಿದಳು ಮನದಲ್ಲಿ ಶೋಭಾನೆ॥15॥ ತನ್ನ ಮಕ್ಕಳ ಕುಂದ ತಾನೇ ಪೇಳುವುದಕ್ಕೆ ಮನದಿ ನಾಚಿ ಮಹಲಕುಮಿ। ತನ್ನಾಮದಿಂದಲಿ ಕರೆಯದೆ ಒಬ್ಬೊಬ್ಬರ ಉನ್ನತ ದೋಷಗಳನೆಣಿಸಿದಳು ಶೋಭಾನೆ॥16॥ ಕೆಲವರು ತಲೆಯೂರಿ ತಪಗೈಯ್ಯು ಪುಣ್ಯವ ಗಳಿಸಿದ್ದರೇನೂ ಫಲವಿಲ್ಲ। ಜ್ವಲಿಸುವ ಕೋಪದಿ ಶಾಪವ ಕೊಡುವರು ಲಲನೆಯರಿವರ ಒಲಿಸುವರೆ ಶೋಭಾನೆ॥17॥ ಎಲ್ಲ ಶಾಸ್ತ್ರವನೋದಿ ದುರ್ಲಭ ಜ್ಞಾನವ ಕಲ್ಪಿಸಿ ಕೊಡುವ ಗುರುಗಳು ಬಲ್ಲಿದ ಧನಕ್ಕೆ ಮರುಳಾಗಿ ಇಬ್ಬರು ಸಲ್ಲದ ಪುರೋಹಿತಕೊಳಗಾದರು ಶೋಭಾನೆ॥18॥ ಕಾಮವರ್ಜಿತನೊಬ್ಬ ಕಾಮಿನಿಗೆ ಸೋತೊಬ್ಬ ಭಾಮಿನಿಯ ಹಿಂದೆ

ಹಾರಿದವ ಕಾಮಾಂಧನಾಗಿ ಮುನಿಯ ಕಾಮಿನಿಗಯ್ದಿದನೊಬ್ಬ ಕಾಮದಿಂ ಗುರುತಲ್ಪಗಾಮಿಯೊಬ್ಬ ಶೋಭಾನೆ॥19॥ ನಶ್ವರೈಶ್ವರ್ಯವ ಬಯಸುವನೊಬ್ಬ ಪರರಾಶ್ರಿಯಿಸಿ ಬಾಳುವ ಈಶ್ವರನೊಬ್ಬ ಹಾಸ್ಯವ ಮಾಡಿ ಹಲ್ಲುದುರಿಸಿಕೊಂಡವನೊಬ್ಬ ಅದೃಶ್ಯಾಂಘ್ರಿಯೊಬ್ಬ ಒಕ್ಕಣ್ಣನೊಬ್ಬ ಶೋಭಾನೆ॥20॥ ಮಾವನ ಕೊಂದೊಬ್ಬ ಮರುಳಾಗಿಹನು ಗಡ ಹಾರ್ವನ ಕೊಂದೊಬ್ಬ ಬಳಲಿದ ಜೀವರ ಕೊಂದೊಬ್ಬ ಕುಲಗೇಡೆಂದೆನಿಸುವ ಶಿವನಿಂದೊಬ್ಬ ಬಯಲಾದ ಶೋಭಾನೆ॥21॥ ಧರ್ಮವುಂಟೊಬ್ಬನಲಿ ಹೆಮ್ಮೆಯ ಹೆಸರಿಗೆ ಅಮ್ಮಮ್ಮ ತಕ್ಕ ಗುಣವಿಲ್ಲ ಕ್ಷಮೆಯ ಬಿಟ್ಟೊಬ್ಬ ನರಕದಲಿ ಜೀವರ ಮರ್ಮವ ಮೆಟ್ಟಿ ಕೊಲಿಸುವ ಶೋಭಾನೆ॥22॥ ಖಳನಂತೆ ಒಬ್ಬ ತನಗೆ ಸಲ್ಲದ ಭಾಗ್ಯವ ಬಲ್ಲಿದಗಂಜಿ ಬಯಲಾದ ದುರ್ಲಭ ಮುಕ್ತಿಗೆ ದೂರವೆಂದೆನಿಸುವ ಪಾತಾಳ ತಳಕ್ಕೆ ಇಳಿದ ಗಢ ಶೋಭಾನೆ॥23॥ ಎಲ್ಲರಾಯುಷ್ಯವ ಶಿಂಶುಮಾರದೇವ ಸಲ್ಲೀಲೆಯಿಂದ ತೊಲಗಿಸುವ। ಒಲ್ಲೆ ನಾನಿವರ ನಿತ್ಯಮುತ್ತೈದೆಯೆಂದು ಬಲ್ಲವರೆನ್ನ ಭಜಿಸುವರು ಶೋಭಾನೆ॥24॥ ಪ್ರಕೃತಿಯ ಗುಣದಿಂದ ಕಟ್ಟುವಡೆದು ನಾನಾ ವಿಕೃತಿಯೊಳಗಾಗಿ ಭವದಲ್ಲಿ ಸುಖ ದುಃಖಉಂಬೊ ಬೊಮ್ಮಾದಿ ಜೀವರ ದುಃಖಕ್ಕೆ ದೂರಳೆನಿಪ ಎಣೆಗೆಣೆಯ ಶೋಭಾನೆ॥25॥ ಒಬ್ಬನಾವನ ಮಗ ಮತ್ತೊಬ್ಬನಾವನ ಮೊಮ್ಮಗ ಒಬ್ಬನಾವನಿಗೆ ಶಹನಾಹ ಒಬ್ಬನಾವನ ಪೊರುವ ಮತ್ತಿಬ್ಬರಾವನಿಗಂಜಿ ಅಬ್ಬರದಲಾವಾಗ ಸುಳಿವರು ಶೋಭಾನೆ॥26॥ ಒಬ್ಬನಾವನ ನಾಮಕಂಜಿ ಬೆಚ್ಚುವಗಢ ಸರ್ವರಿಗಾವ ಅಮೃತವ ಸರ್ವರಿಗಾವ ಅಮೃತವನುಣಿಸುವ ಅವನೊಬ್ಬನೆ ನಿರನಿಷ್ಠ ನಿರವದ್ಯ ಶೋಭಾನೆ॥27॥ ನಿರನಿಷ್ಠ ನಿರವದ್ಯ ಎಂಬ ಶ್ರುತ್ಯರ್ಥವ ಒರೆದು ನೋಡಲು ನರಹರಿಗೆ ನರಕಯಾತನೆ ಸಲ್ಲ ದುರಿತಾತಿದೂರನಿಗೆ ಮರುಳ ಮನಬಂದಂತೆ ನುಡಿಯದಿರು ಶೋಭಾನೆ॥28॥ ಒಂದೊಂದು ಗುಣಗಳು ಇದ್ದಾವು ಇವರಲ್ಲಿ ಸಂದಣಿಸಿವೆ ಬಹು ದೋಷ ಕುಂದೆಳ್ಳಷ್ಟಿಲ್ಲದ ಮುಕುಂದನೆ ತನಗೆಂದು ಇಂದಿರೆ ಪತಿಯ ನೆನೆದಳು ಶೋಭಾನೆ॥29॥ ದೇವರ್ಷಿ ವಿಪ್ರರ ಕೊಂದು ತನ್ನುದರದೊಳಿಟ್ಟು ತೀವ್ರಿದ್ದ ಹರಿಗೆ ದುರಿತವ ಭಾವಜ್ಞರೆಂಬೊರೆ ಆಲದೆಲೆಯ ಮೇಲೆ ಶಿವನ ಲಿಂಗವ ನಿಲಿಸುವರೆ ಶೋಭಾನೆ॥30॥ ಹಸಿತೃಷೆ ಜರೆ ಮರಣ ರೋಗರುಜಿನಗಳೆಂಬ ಅಸುರ ಪಿಶಾಚಿಗಳ ಭಯವೆಂಬ ವ್ಯಸನ ಬರಬಾರದು ಎಂಬ ನಾರಾಯಣನಿಗೆ ಪಶುಮೊದಲಾಗಿ ನೆನೆಯದು ಶೋಭಾನೆ॥31॥ ತಾ ದುಃಖಿಯಾದರೆ ಸುರರಾತಾರ್ತಿಯ ಕಳೆದು ಮೋದವೀವುದಕ್ಕೆ ಧರೆಗಾಗಿ ಮಾಧವ ಬಾಹನೆ ಕೆಸರೊಳು ಮುಳುಗಿದ ಪರರ ಭಾದಿಪ ಕೆಸರ ಬಿಡಿಸುವನೆ ಶೋಭಾನೆ॥32॥ ಬೊಮ್ಮನಾಲಯದಲಿ ಇದ್ದವಗೆ ಲಯವುಂಟೆ ಜನ್ಮಲಯವಿಲ್ಲದವನಿಗೆ ಆಮ್ಮಿಯನುಣಿಸಿದ್ದ ಯಶೋದೆಯಾಗಿದ್ದಳೆ ಅಮ್ಮ ಇವಗೆ ಹಸಿತೃಷೆಯುಂಟೆ ಶೋಭಾನೆ॥33॥ ಆಗ ಭಕ್ಷ್ಯ ಭೋಜ್ಯವಿತ್ತು ಪೂಜಿಸುವಯೋಗಿಗೆ ಉಂಟೇ ಧನಧಾನ್ಯ ಆಗ ದೊರಕೊಂಬುದೇ ಪಾಕಮಾಡುವ ವಹ್ನಿಮತ್ತಾಗಲೆಲ್ಲಿಹುದು ವಿಚಾರಿಸಿರೊ ಶೋಭಾನೆ॥34॥ ರೋಗವನೀವ ವಾತ ಪಿತ್ತ ಶ್ಲೇಷ್ಮ ಆಗ ಕೂಡುವುದೇ ರಮೆಯೊಡನೆ ಭೋಗಿಸುವವಗೆ ದುರಿತವ ನೆನೆವರೆ ಈ ಗುಣನಿಧಿಗೆ ಎಣೆಯುಂಟೆ ಶೋಭಾನೆ॥35॥ ರಮ್ಮೆದೇವಿಯರನಪ್ಪಿಕೊಂಡಿಪ್ಪುದು ರಮ್ಮೆಯರಸಗೆ ರತಿ ಕಾಣಿರೋ ಅಮ್ಮೋಘವೀರ್ಯವು ಚಲಿಸಿದರೆ ಪ್ರಳಯದಲಿ ಕುಮಾರರ್ ಯಾಕೆ ಜನಿಸರು ಶೋಭಾನೆ॥36॥ ಏಕತ್ರ ನಿರ್ಣೀತ ಶಾಸ್ತ್ರಾರ್ಥ ಪರತ್ರಾಪಿಬೇಕೆಂಬ ನ್ಯಾಯವ ತಿಳಿದುಕೋ ಶ್ರೀಕೃಷ್ಣನೊಬ್ಬನೆ ಸರ್ವದೋಷಕ್ಕೆ ಸಿಲುಕನೆಂಬುದು ಸಲಹಲಿಕೆ ಶೋಭಾನೆ॥37॥ ಎಲ್ಲ ಜಗವ ನುಂಗಿ ದಕ್ಕಿಸಿಕೊಂಡವಗೆ ಸಲ್ಲದು ರೋಗ ರುಜಿನವು ಬಲ್ಲ ವೈದ್ಯರು ಕೇಳಿ ಅಜೀರ್ತಿಮೂಲವೆಲ್ಲ ಇಲ್ಲ ಸಮಸ್ತ ರುಜಿನವು ಶೋಭಾನೆ॥38॥ ಇಂಥಾ ಮೂರುತಿಯ ಒಳಗೊಂಬ ನರಕ ಬಹುಭ್ರಾಂತ ನೀನೆಲ್ಲಿಂದ ತೋರಿಸುವೆಯೊ। ಸಂತೆಯ ಮರುಳ ಹೋಗೆಲೋ ನಿನ್ನ ಮಾತ ಸಂತರು ಕೇಳಿ ಸೊಗಸರು ಶೋಭಾನೆ॥39॥ ಶ್ರೀ ನಾರಾಯಣರ ಜನನೀಜನಕರ ನಾನೆಂಬ ವಾದೀ ನುಡಿಯೆಲೊ ಜಾಣರದರಿಂದರಿಯ ಮೂಲರೂಪವ ತೋರಿ ಶ್ರೀ ನರಸಿಂಹನ ಆವತಾರ ಶೋಭಾನೆ॥40॥ ಅಂಬುಧಿಯ ಉದಕದಲ್ಲಿ ಒಡೆದು ಮೂಡಿದ ಕೂರ್ಮನೆಂಬ ಶ್ರೀಹರಿಯ ಪಿತ ಎಂಬ ಶ್ರೀ ಹರಿಯ ಪಿತನಾರು ಅದರಂದ ಸ್ವಾಯಂಭುಗಳೆಲ್ಲ ಅವತಾರ ಶೋಭಾನೆ॥41॥ ದೇವಕಿಯ ಗರ್ಭದಲಿ ದೇವನವತರಿಸಿದ ಭಾವವನು ಬಲ್ಲ ವಿವೇಕಿಗಳು ಈ ವಸುಧೆಯೊಳಗೆ ಕೃಷ್ಣಗೆ ಜನ್ಮವ ಆವ ಪರಿಯಲ್ಲಿ ನುಡಿಯುವಿಯೋ ಶೋಭಾನೆ॥42॥ ಆವಳಿಸುವಾಗ ಯಶೋದಾದೇವಿಗೆ ದೇವ ತನ್ನೊಳಗೆ ಹುದುಗಿದ್ದ ಭುವನವೆಲ್ಲವ ತೋರಿದುದಿಲ್ಲವೆ ಆ ವಿಷ್ಣು ಗರ್ಭದೊಳಡಗುವನೆ ಶೋಭಾನೆ॥43॥ ಆನೆಯ ಮಾನದಲಿ ಅಡಗಿಸಿದವರುಂಟೆ ಅನೇಕ ಕೋಟಿ ಅಜಾಂಡವ

ಅಣುರೇಣುಕೂಪದಲ್ಲಿ ಆಳ್ದ ಶ್ರೀ ಹರಿಯ ಜನನಿ ಜಠರವು ಒಳಗೊಂಬುದೆ ಶೋಭಾನೆ॥44॥ ಅದರಿಂದ ಕೃಷ್ಣನಿಗೆ ಪರನಾರೀಸಂಗವ ಕೋವಿದರಾದ ಬುಧರು ನುಡಿವಾರೆ ಸದರವೆ ಆ ಮಾತು ಸರ್ವ ವೇದಂಗಳು ಮುದದಿಂದ ತಾವು ಸ್ತುತಿಸುವುವು ಶೋಭಾನೆ॥46॥ ಎಂದ ಭಾಗವತದ ಚೆಂದದ ಮಾತನು ಮಂದ ಮಾನವ ಮನಸಿಗೆ ತುಂದಕೊ ಜಗಕ್ಕೆ ಕೈವಲ್ಯವೀವ ಮುಕುಂದಗೆ ಕುಂದುಕೊರತೆ ಸಲ್ಲದು ಶೋಭಾನೆ॥47॥ ಹತ್ತು ವರ್ಷಗಳ ಕೆಳಗೆ ಮಕ್ಕಳಾಟಿಕೆಯಲ್ಲಿ ಚಿತ್ತಸ್ತ್ರೀಯರಿಗೆ ಎರಗುವುದೆ ಅರ್ತಿಯಿಂದರ್ಚಿಸಿದ ಗೋಕುಲದ ಕನ್ಯೆಯರು ಸತ್ಯಸಂಕಲ್ಪ ಬೆರೆತಿದ್ದ ಶೋಭಾನೆ॥48॥ ಹತ್ತು ಮತ್ತಾರುಸಾಸಿರ ಸ್ತ್ರೀಯರಲಿ ಹತ್ತು ಹತ್ತೆನಿಪ ಕ್ರಮದಿಂದ ಪುತ್ರ ವೀರ್ಯದಲಿ ಸೃಷ್ಟಿಸಿದವರುಂಟೆ ಅರ್ತಿಯ ಸೃಷ್ಟಿ ಹರಿಗಿದು ಶೋಭಾನೆ॥49॥ ರೋಮರೋಮಕೂಪ ಕೋಟಿವ್ಯಂಕಗಳ ನಿರ್ಮಿಸಿ ಗೋಪಾಲರ ತೆರಳಿಸಿದ ನಮ್ಮ ಶ್ರೀ ಕೃಷ್ಣನು ಮಕ್ಕಳ ಸೃಜಿಸುವ ಮಹಿಮೆ ಬಲ್ಲವರಿಗೆ ಸಲಹಲಿಕ್ಕೆ ಶೋಭಾನೆ॥50॥ ಮಣ್ಣನೇಕೆ ಮೆದ್ದೆಯೆಂಬ ಯಶೋದೆಗೆ ಸಣ್ಣ ಬಾಯೊಳಗೆ ಜಗಂಗಳ ಕಣ್ಣಾರೆ ತೋರಿದ ನಮ್ಮ ಶ್ರೀ ಕೃಷ್ಣನ ಘನತೆ ಬಲ್ಲವರಿಗೆ ಸಲಹಲಿಕೆ ಶೋಭಾನೆ॥51॥ ನಾರದ ಸನಕಾದಿ ಮೊದಲಾದ ಯೋಗಿಗಳು ನಾರಿಯರಿಗೆ ಮರುಳಾಹರೆ ಓರಂತೆ ಶ್ರೀಕೃಷ್ಣ ನಡಿಗಡಿಗೆರಗುವರೆ ಆರಾಧಿಸುತ್ತ ಭಜಿಸುವರೆ ಶೋಭಾನೆ॥52॥ ಅಂಬುಜಸಂಭವ ತ್ರಿಯಂಬಕ ಮೊದಲಾದ ನಂಬಿದವರಿಗೆ ವರವಿತ್ತ ಸಂಭ್ರಮದ ಸುರರು ಎಳ್ಳಷ್ಟು ಕೋಪಕ್ಕೆ ಇಂಬಿದ್ದರಿವನ ಭಜಿಸುವರೆ ಶೋಭಾನೆ॥53॥ ಅವನಂಗುಷ್ಟವ ತೊಳೆವ ಗಂಗಾದೇವಿ ಪಾವನಳೆನಿಸಿ ಮೆರೆವಾಳೆ ಜೀವನ ಸೇರುವ ಪಾಪವಕಳೆವಳು ಈ ವಾಸುದೇವಗೆ ಎಣೆಯುಂಟೆ ಶೋಭಾನೆ॥54॥ ಕಿಲ್ಬಿಷವಿದ್ದರೆ ಅಗ್ರಪೂಜೆಯನು ಸರ್ವರಾಯರ ಸಭೆಯೊಳಗೆ ಉಬ್ಬಿದ ಮನದಿಂದ ಧರ್ಮಜ ಮಾಡುವನೆಲೆ ಕೊಬ್ಬದಿರಲೋ ಪರವಾದಿ ಶೋಭಾನೆ॥55॥ ಸಾವಿಲ್ಲದ ಹರಿಗೆ ನರಕಯಾತನೆ ಸಲ್ಲ ಜೀವಂತರಿಗೆ ನರಕದಲಿ ನೋವನೀವನು ನಿಮ್ಮ ಯಮದೇವನು ನೋವಾ ನೀ ಹರಿಯ ಗುಣವರಿಯ ಶೋಭಾನೆ॥56॥ ನರಕವಾಳುವ ಯಮಧರ್ಮರಾಯ ತನ್ನ ನರಜನ್ಮದೊಳಗೆ ಪೊರಳಿಸಿ ಮರಳಿ ತನ್ನರಕದಲಿ ಪೊರಳಿಸಿ ಕೊಲುವನು ಕುರು ನಿನ್ನ ಕುಹಕ ಕೊಳದಲ್ಲಿ ಶೋಭಾನೆ॥57॥ ಬೊಮ್ಮನ ನೂರು ವರ್ಷ ಪರಿಯಂತ ಪ್ರಳಯದಲಿ ಸುಮ್ಮನೆಯಾಗಿ ಮಲಗಿಪ್ಪ ನಮ್ಮ ನಾರಾಯಣಗೆ ಹಸಿತೃಷೆ ಜರಾಮರಣ ದುಷ್ಕರ್ಮದುಃಖಗಳ ತೊಡೆಸುವರೆ ಶೋಭಾನೆ॥58॥ ರಕ್ಕಸರಸ್ತ್ರಗಳಿಂದ ಗಾಯವಡೆಯದೆ ಅಕ್ಷಯ ಕಾಯದ ಶ್ರೀಕೃಷ್ಣ ತುಚ್ಛ ಯಮಭಟರ ಶಸ್ತ್ರಕಳುಕುವನಲ್ಲ ಹುಚ್ಚ ನೀ ಹರಿಯ ಗುಣವರಿಯ ಶೋಭಾನೆ॥59॥ ಕಿಚ್ಚ ನುಂಗಿದನು ನಮ್ಮ ಶ್ರೀಕೃಷ್ಣನು ತುಚ್ಛನರಕದೊಳು ಅನಲನಿಗೆ ಬೆಚ್ಚುವನಲ್ಲ ಅದರಿಂದವಗೆ ನರಕ ಮೆಚ್ಚರು ಎಲ್ಲ ಬುಧರಲ್ಲಿ ಶೋಭಾನೆ॥60॥ ಮನೆಯಲ್ಲಿ ಕ್ಷಮೆಯ ತಾಳ್ದ ವೀರಭಟ ರಣರಂಗದಲಿ ಕ್ಷಮಿಸುವನೆ ಅಣುವಾಗಿ ನಮ್ಮ ಹಿತಕೆ ಮನದೊಳಗಿನ ಕೃಷ್ಣ ಮುನಿವ ಕಾಲಕ್ಕೆ ಮಹತ್ತಾಹ ಶೋಭಾನೆ॥61॥ ತಾಯ ಪೊಟ್ಟೆಯಿಂದ ಮೂಲರೂಪನ ತೋರಿ ಆಯುಧಸಹಿತ ಪೊರವಂಟ ನ್ಯಾಯಕೋವಿದರು ಪುಟ್ಟಿದನೆಂಬರೆ ಬಾಯಿಗೆ ಬಂದಂತೆ ಬೊಗಳದಿರು ಶೋಭಾನೆ॥62॥ ಉಟ್ಟ ಪೀತಾಂಬರ ತೊಟ್ಟ ಭೂಷಣಂಗಳು ಇಟ್ಟ ನವರತ್ನದ ಕಿರೀಟವು ಮೆಟ್ಟಿದ ಕುರುಹ ಎದೆಯಲ್ಲಿ ತೋರಿದ ಶ್ರೀ ವಿಠ್ಠಲ ಪುಟ್ಟಿದನೆನಬಹುದೆ ಶೋಭಾನೆ॥63॥ ಋಷಭ್ಟಂಸಮಹಿಷ ಮೇಷ ಮೂಷಕವಾಹನವೇರಿ ಮಾನಿಸರಂತೆ ಸುಳಿವಸುರರೆಲ್ಲ ಎಸೆವ ದೇವೇಶಾನರ ಸಾಹಸಕ್ಕೆ ಮಡಿದರು ಕುಸುಮನಾಭನಿಗೆ ಸರಿಯುಂಟೆ ಶೋಭಾನೆ॥64॥ ಒಂದೊಂದು ಗುಣಗಳು ಇದ್ದಾವು ಇವರಲ್ಲಿ ಸಂದಣಿಸಿವೆ ಬಹುದೋಷ ಕುಂದೆಳ್ಳಷ್ಟಿಲ್ಲದ ಮುಕುಂದನೆ ತನಗೆಂದು ಇಂದಿರೆ ಪತಿಯ ನೆನೆದಳು ಶೋಭಾನೆ॥65॥ ಇಂತು ಚಿಂತಿಸಿ ರಮೆ ಸಂತರಾಮನ ಪದವ ಸಂತೋಷ ಮನದಿ ನೆನೆವುತ್ತ ಸಂತೋಷ ಮನದಿ ನೆನೆವುತ್ತ ತನ್ನ ಶ್ರೀಕಾಂತ ನಿದ್ದೆಡೆಗೆ ನಡೆದಳು ಶೋಭಾನೆ॥66॥ ಕಂದರ್ಪ ಕೋಟಿಗಳ ಗೆಲುವ ಸೌಂದರ್ಯದ ಚಂದವಾಗಿದ್ದ ಚಲುವನ ಇಂದಿರೆ ಕಂಡು ಇವನೆ ತನಗೆ ಪತಿಯೆಂದವನ ಬಳಿಗೆ ನಡೆದಳು ಶೋಭಾನೆ॥67॥ ಈ ತೆರದಿ ಸುರರ ಸುತ್ತ ನೋಡುತ್ತ ಲಕ್ಷ್ಮಿ ಚಿತ್ತವ ಕೊಡದೆ ನಸುನಗುತ ಚಿತ್ತವ ಕೊಡದೆ ನಸುನಗುತ ಬಂದು ಪುರುಷೋತ್ತಮನ ಕಂಡು ನಮಿಸಿದಳು ಶೋಭಾನೆ॥68॥ ನಾನಾ ಕುಸುಮಗಳಿಂದ ಮಾಡಿದ ಮಾಲೆಯ ಶ್ರೀ ನಾರಿ ತನ್ನ ಕರದಲ್ಲಿ ಪೀನಕಂಧರದ ತ್ರಿವಿಕ್ರಮರಾಯನ ಕೊರಳಿನ ಮೇಲಿಟ್ಟು ನಮಿಸಿದಳು ಶೋಭಾನೆ॥69॥ ಉಟ್ಟ ಪೊಂಬಟ್ಟೆಯು ತೊಟ್ಟಾಭರಣಂಗಳು ಇಟ್ಟ ನವರತ್ನದ ಮುಕುಟವು ದುಷ್ಟಮರ್ದನನೆಂಬ ಕಡೆಯ ಪೆಂಡೆಯಗಳ ಇಟ್ಟಿದ್ದ ಹರಿಗೆ ವಧುವಾದಳು ಶೋಭಾನೆ॥70॥ ಕೊಂಬು ಕಹಳೆ ತಾಳ

ಮದ್ದಳೆಗಳು ತಂಬಟೆ ಭೇರಿ ಪಟಹಗಳು ಭೊಂ ಭೊಂ ಎಂಬ ಶಂಖ ಡೊಳ್ಳು ಮೌರಿಗಳು ಅಂಬುಧಿಯ ಮನೆಯಲ್ಲೆಸದವು ಶೋಭಾನೆ॥71॥ ಅರ್ಘ್ಯಪಾದ್ಯಾಚಮನ ಮೊದಲಾದ ಷೋಡಷಾನರ್ಘ್ಯ ಪೂಜೆಯಿತ್ತನಳಿಯನಿಗೆ ಒಗ್ಗಿದ ಮನದಿಂದ ಧಾರೆಯೆರೆದನೆ ಸಿಂಧು ಸದ್ಗತಿಯಿತ್ತು ಸಲಹೆಂದ ಶೋಭಾನೆ॥72॥ ವೇದೋಕ್ತ ಮಂತ್ರ ಪೇಳಿ ವಸಿಷ್ಠ ನಾರದ ಮೊದಲಾದ ಮುನೀಂದ್ರರು ಮುದದಿಂದ ವಧೂವರರ ಮೇಲೆ ಶೋಭಾನದಕ್ಷತೆಯನು ಮೋದವೀವುತ್ತ ತಳಿದರು ಶೋಭಾನೆ॥73॥ ಸಂಭ್ರಮದಿಂದಂಬರದಿ ದುಂದುಭಿ ಮೊಳಗಲು ತುಂಬುರು ನಾರದರು ಸ್ತುತಿಸುತ್ತ ತುಂಬುರು ನಾರದರು ಸ್ತುತಿಸುತ್ತ ಪಾಡಿದರು ಪೀತಾಂಬರಧರನ ಮಹಿಮೆಯ ಶೋಭಾನೆ॥74॥ ದೇವನಾರಿಯರೆಲ್ಲ ಬಂದೊದಗಿ ಪಾಠಕರು ಓವಿ ಪಾಡುತ್ತ ಕುಣಿದರು ದೇವತರುವಿನ ಹೂವಿನ ಮಳೆಗಳ ಶ್ರೀ ವರನ ಮೇಲೆ ಕರೆದರು ಶೋಭಾನೆ॥75॥ ಮುತ್ತು ರತ್ನಗಳಿಂದ ಕೆತ್ತಿಸಿದ ಹಸೆಗೆ ನವರತ್ನ ಮಂಟಪವ ಪಸರಿಸಿ ನವರತ್ನ ಮಂಟಪವ ಪಸರಿಸಿ ಕೃಷ್ಣನ ಮುತ್ತೈದೆಯರೆಲ್ಲ ಕರೆದರು ಶೋಭಾನೆ॥76॥ ಶೇಷಶಯನನೆ ಬಾ ದೋಷದೂರನೆ ಬಾ ಭಾಸುರಕಾಯ ಹರಿಯೆ ಬಾ ಭಾಸುರಕಾಯ ಹರಿಯೆ ಬಾ ಶ್ರೀಕೃಷ್ಣ ವಿಲಾಸದಿಂದೆಮ್ಮ ಹಸೆಗೆ ಬಾ ಶೋಭಾನೆ॥77॥ ಕಂಜಲೋಚನನೆ ಬಾ ಮಂಜುಳಮೂರ್ತಿಯೆ ಬಾ ಕುಂಜರ ವರದಾಯಕನೆ ಬಾ ಕುಂಜರವರದಾಯಕನೆ ಬಾ ಶ್ರೀಕೃಷ್ಣ ನಿರಂಜನ ನಮ್ಮ ಹಸೆಗೆ ಬಾ ಶೋಭಾನೆ॥78॥ ಆದಿಕಾಲದಲ್ಲಿ ಆಲದೆಲೆಯ ಮೇಲೆ ಶ್ರೀ ದೇವಿಯರೊಡನೆ ಪವಡಿಸಿದ ಶ್ರೀದೇವಿಯೊಡನೆ ಪವಡಿಸಿದ ಶ್ರೀಕೃಷ್ಣ ಮೋದದಿಂದೆಮ್ಮ ಹಸೆಗೆ ಬಾ ಶೋಭಾನೆ॥79॥ ಆದಿಕಾರಣನಾಗಿ ಆಗ ಮಲಗಿದ್ದು ಮೋದಜೀವರ ತನ್ನ ಉದರದಲಿ ಮೋದಜೀವರ ತನ್ನುದರದಲಿ ಇಂಬಿಟ್ಟ ಅನಾದಿ ಮೂರುತಿಯೆ ಹಸೆಗೆ ಬಾ ಶೋಭಾನೆ॥80॥ ಚಿನ್ಮಯವೆನಿಪ ನಿಮ್ಮ ಮನೆಗಳಲ್ಲಿ ಜ್ಯೋತಿರ್ಮಯವಾದ ಪದ್ಮದಲಿ ರಮ್ಮೆಯರೊಡಗೂಡಿ ರಮಿಸುವ ಶ್ರೀಕೃಷ್ಣ ನಮ್ಮ ಮನೆಯ ಹಸೆಗೆ ಬಾ ಶೋಭಾನೆ॥81॥ ನಾನಾವತಾರದಲಿ ನಂಬಿದ ಸುರರಿಗೆ ಆನಂದವೀವ ಕರುಣಿ ಬಾ ಆನಂದವೀವ ಕರುಣಿ ಬಾ ಶ್ರೀಕೃಷ್ಣ ಶ್ರೀನಾರಿಯರೊಡನೆ ಹಸೆಗೇಳು ಶೋಭಾನೆ॥82॥ ಬೊಮ್ಮನಾಲಯದಲ್ಲಿ ರನ್ನ ಪೀಠದಿ ಕುಳಿತು ಒಮ್ಮನದಿ ನೇಹವ ಮಾಡುವ ನಿರ್ಮಲ ಪೂಜೆಯ ಕೈಗೊಂಬ ಶ್ರೀಕೃಷ್ಣ ಪರಮಮೂರುತಿಯೆ ಹಸೆಗೆ ಬಾ ಶೋಭಾನೆ॥83॥ ಮುಖ್ಯಪ್ರಾಣನ ಮನೆಯಲ್ಲಿ ಭಾರತಿ ದೇವಿ ಉಣಲಿಕ್ಕಿ ಬಡಿಸಿದ ರಸಾಯನವ ಸಕ್ಕರೆಗೂಡಿದ ಪಾಯಸ ಸವಿಯುವ ರಕ್ಕಸವೈರಿಯೆ ಹಸೆಗೆ ಬಾ ಶೋಭಾನೆ॥84॥ ರುದ್ರನ ಮನೆಯಲ್ಲಿ ರುದ್ರಾಣಿದೇವಿಯರು ಭದ್ರಮಂಟಪದಿ ಕುಳ್ಳಿರಿಸಿ ಸ್ವಾದ್ವನ್ನಂಗಳ ಬಡಿಸಲು ಕೈಗೊಂಡ ಮುದ್ದು ನರಸಿಂಹ ಹಸೆಗೆ ಬಾ ಶೋಭಾನೆ॥85॥ ಗರುಡನ ಮೇಲೇರಿ ಗಗನ ಮಾರ್ಗದಲ್ಲಿ ತರತರದಿ ಸ್ತುತಿಪ ಸುರಸ್ತ್ರೀಯರ ಮೆರೆವ ಗಂಧರ್ವರ ಗಾನವ ಸವಿಯುವ ನರಹರಿ ನಮ್ಮ ಹಸೆಗೆ ಬಾ ಶೋಭಾನೆ॥86॥ ನಿಮ್ಮಣ್ಣನ ಮನೆಯಸುಧರ್ಮಸಭೆಯಲ್ಲಿ ಉಮ್ಮೆಯರಸ ನಮಿಸಿದ ಧರ್ಮರಕ್ಷಕನೆನಿಪ ಕೃಷ್ಣ ಕೃಪೆಯಿಂದ ಪರಮಮೂರುತಿಯೆ ಹಸೆಗೆ ಬಾ ಶೋಭಾನೆ॥87॥ ಇಂದ್ರನ ಮನೆಗ್ಹೋಗಿ ಅದಿತಿಗೆ ಕುಂಡಲವಿತ್ತು ಅಂದದ ಪೂಜೆಯ ಕೈಗೊಂಡು ಅಂದದ ಪೂಜೆಯ ಕೈಗೊಂಡು ಸುರತರುವ ಇಂದಿರೆಗಿತ್ತ ಹರಿಯೆ ಬಾ ಶೋಭಾನೆ॥88॥ ನಿಮ್ಮ ನೆನೆವ ಮುನಿಹೃದಯದಲ್ಲಿ ನೆಲೆಸಿದ ಧರ್ಮರಕ್ಷಕನೆನಿಸುವ ಸಮ್ಮತವಾಗಿದ್ದ ಪೂಜೆಯ ಕೈಕೊಂಬ ನಿಸ್ಸೀಮ ಮಹಿಮ ಹಸೆಗೆ ಬಾ ಶೋಭಾನೆ॥89॥ ಮುತ್ತಿನ ಸತ್ತಿಗೆಯ ನವರತ್ನದ ಚಾಮ ಸುತ್ತನಲಿವ ಅಪ್ಸರ ಸ್ತ್ರೀಯರ ನೃತ್ಯವ ನೋಡುತ ಚಿತ್ರ ವಾದ್ಯಂಗಳ ಸಂಪತ್ತಿನ ಹರಿಯೆ ಹಸೆಗೆ ಬಾ ಶೋಭಾನೆ॥90॥ ಎನಲು ನಗುತ ಬಂದು ಹಸೆಯ ಮೇಲೆ ವನಿತೆ ಲಕ್ಷ್ಮಿಯೊಡಗೂಡಿ ಅನಂತ ವೈಭವದಿ ಕುಳಿತ ಕೃಷ್ಣನ ನಾಲ್ಕು ದಿನದುತ್ಸವ ನಡೆಸಿದರು ಶೋಭಾನೆ॥91॥ ಅತ್ತೇರೆನಿಪ ಗಂಗೇ ಯಮುನೇ ಸರಸ್ವತಿ ಭಾರತಿ ಮೊದಲಾದ ಸುರಸ್ತ್ರೀಯರು ಮುತ್ತಿನಾಕ್ಷತೆಯನ್ನು ಶೋಭಾನವೆನುತಲಿ ತಮ್ಮ ಅರ್ತಿಯಳಿಯಗೆ ತಳಿದರು ಶೋಭಾನೆ॥92॥ ರತ್ನದಾರತಿಗೆ ಸುತ್ತಮುತ್ತನೆ ತುಂಬಿ ಮುತ್ತೈದೆಯರೆಲ್ಲ ಧವಳದ ಮುತ್ತೈದೆಯರೆಲ್ಲ ಧವಳದ ಪದವಪಾಡುತ್ತಲೆತ್ತಿದರೆ ಸಿರಿವರಗೆ ಶೋಭಾನೆ॥93॥ ಬೊಮ್ಮ ತನ್ನರಸಿ ಕೂಡಿ ಬಂದೆರಗಿದ ಉಮ್ಮೆಯರಸ ನಮಿಸಿದ ಅಮ್ಮರರೆಲ್ಲರು ಬಗೆಬಗೆ ಉಡುಗೊರೆಗಳ ರಮ್ಮೆಯರಸಗೆ ಸಲಿಸಿದರು ಶೋಭಾನೆ॥94॥ ಸತ್ಯಲೋಕದ ಬೊಮ್ಮ ಕೌಸ್ತುಭರತ್ನವನಿತ್ತ ಮುಕ್ತಾಸುರರು ಮುದದಿಂದ ಮುತ್ತಿನ ಕಂಠೀಸರವ ಮುಖ್ಯಪ್ರಾಣವನಿತ್ತ ಮಸ್ತಕದ ಮಣಿಯ ಶಿವನಿತ್ತ ಶೋಭಾನೆ॥95॥ ತನ್ನರಸಿ ಕೂಡೆ ಸವಿನುಡಿ ನುಡಿವಾಗ ವನದಲ್ಲಿದ್ದಗ್ನಿ ಕೆಡದಂತೆ ವಹ್ನಿ ಪ್ರತಿಷ್ಠೆ ಮಾಡಿ ಅವನೊಳಗಿದ್ದ ತನ್ನಾಹುತಿ ದಿಬ್ಬಣ ಸುರರಿಗೆ

ಶೋಭಾನೆ॥96॥ ಕೊಬ್ಬಿದ ಖಳರೋಡಿಸಿ ಅಮೃತಾನ್ನ ಊಟಕ್ಕೆ ಉಬ್ಬಿದ ಹರುಷದಿ ಉಣಿಸಲು ಉಬ್ಬಿದ ಹರುಷದಿ ಉಣಿಸಬೇಕೆಂದು ಸಿಂಧು ಸರ್ವರಿಗೆಡೆದು ಮಾಡಿಸಿದ ಶೋಭಾನೆ॥97॥ ಮಾವನ ಮನೆಯಲ್ಲಿ ದೇವರೀಗೌತಣವ ದಾನವರು ಕೆಡಿಸದೆ ಬಿಡರೆಂದು ದಾನವರು ಕೆಡಿಸದೆ ಬಿಡರೆಂದು ಶ್ರೀಕೃಷ್ಣದೇವ ಸ್ತ್ರೀವೇಷವ ಧರಿಸಿದ ಶೋಭಾನೆ॥98॥ ತನ್ನ ಸೌಂದರ್ಯದಿಂದುನ್ನತನಮಯವಾದ ಲಾವಣ್ಯದಿಂ ಮೆರೆವ ನಿಜಪತಿಯ ಹೆಣ್ಣುರೂಪವ ಕಂಡು ಕನ್ಯೆ ಮಹಾಲಕ್ಷುಮಿ ಇವಗನ್ಯರೇಕೆಂದು ಬೆರಗಾದಳು ಶೋಭಾನೆ॥99॥ ಲಾವಣ್ಯಮಯವಾದ ಹರಿಯ ಸ್ತ್ರೀವೇಷಕ್ಕೆ ಭಾವಕಿಯರೆಲ್ಲ ಮರುಳಾಗಿ ಮಾವರ ಸುಧೆಯ ಕ್ರಮದಿಂದ ಬಡಿಸಿ ತನ್ನ ಸೇವಕ ಸುರರಿಗುಣಿಸಿದ ಶೋಭಾನೆ॥100॥ ನಾಗನ ಮೇಲೆ ತಾ ಮಲಗಿದ್ದಾಗ ಆಗಲೆ ಜಗವ ಜತನದಿ ಆಗಲೆ ಜಗವ ಜತನದಿ ಧರಿಸೆಂದು ನಾಗಬಲಿಯ ನಡೆಸಿದರು ಶೋಭಾನೆ॥101॥ ಕ್ಷುಧೆಯ ಕಳೆವ ನವರತ್ನದ ಮಾಲೆಯ ಮುದದಿಂದ ವಾರಿಧಿ ವಿಧಿಗಿತ್ತ ಚದುರೆ ವರವ ವಾಯುದೇವರಿಗಿತ್ತ ವಧುವಿನ ಕಲೆಯ ಶಿವಗಿತ್ತ ಶೋಭಾನೆ॥102॥ ಶಕ್ರ ಮೊದಲಾದ ದಿಕ್ಪಾಲಕರಿಗೆ ಸೊಕ್ಕಿದ ಚೌದಂತ ಗಜಂಗಳ ಉಕ್ಕಿದ ಮನದಿಂದ ಕೊಟ್ಟ ವರುಣದೇವ ಮದುಮಕ್ಕಳಾಯುಷ್ಯವ ಬೆಳೆಸೆಂದ॥103॥ ಮತ್ತೆ ದೇವೇಂದ್ರಗೆ ಪಾರಿಜಾತವನಿತ್ತ ಚಿತ್ತವ ಸೆಳೆವಪ್ಸರ ಸ್ತ್ರೀಯರ ಹತ್ತು ಸಾವಿರ ಕೊಟ್ಟ ವರುಣದೇವ ಹರಿ ಭಕ್ತಿಯ ಮನದಲ್ಲಿ ಬೆಳೆಸೆಂದ ಶೋಭಾನೆ॥104॥ ಪೊಳೆವ ನವರತ್ನದ ರಾಶಿಯ ತೆಗೆತೆಗೆದು ಉಳಿದ ಅಮರರಿಗೆ ಸಲಿಸಿದ ಉಳಿದ ಅಮರರಿಗೆ ಸಲಿಸಿದ ಸಮುದ್ರ ಕಳುಹಿಸಿದನವರವರ ಮನೆಗಳಿಗೆ ಶೋಭಾನೆ॥105॥ ಉನ್ನತ ನವರತ್ನಮಯವಾದ ಅರಮನೆಯ ಚನ್ನೇಮಗಳಿಂದ ವಿರಚಿಸಿ ತನ್ನ ಅಳಿಯಗೆ ಸ್ಥಿರವಾಗಿ ಮಾಡಿಕೊಟ್ಟ ಇನ್ನೊಂದು ಕಡೆಯಡಿಯಿಡದಂತೆ ಶೋಭಾನೆ॥106॥ ಹಯವದನ ತನ್ನ ಪ್ರಿಯಳಾದ ಲಕ್ಷ್ಮಿಗೆ ಜಯವಿತ್ತ ಕ್ಷೀರಾಂಬುಧಿಯಲ್ಲಿ ಜಯವಿತ್ತ ಕ್ಷೀರಾಂಬುಧಿಯಲ್ಲಿ ಶ್ರೀಕೃಷ್ಣ ದಯದಿ ನಮ್ಮೆಲ್ಲರ ಸಲಹಲಿ ಶೋಭಾನೆ॥107॥ ಈ ಪದವ ಮಾಡಿದ ವಾದಿರಾಜಮುನಿಗೆ ಶ್ರೀಪತಿಯಾದ ಹಯವದನ ತಾಪವ ಕಳೆದು ತನ್ನ ಶ್ರೀಚರಣ ಸಮೀಪದಲ್ಲಿಟ್ಟು ಸಲಹಲಿ ಶೋಭಾನೆ॥108॥ ಇಂತು ಸ್ವಪ್ನದಲ್ಲಿ ಕೊಂಡಾಡಿಸಿಕೊಂಡ ಲಕ್ಷ್ಮೀಕಾಂತನ ಕಂದನೆನಿಸುವ ಸಂತರ ಮೆಚ್ಚಿನ ವಾದಿರಾಜೇಂದ್ರ ಮುನಿ ಪಂಥದಿ ಪೇಳಿದ ಪದವಿದು ಶೋಭಾನೆ॥109॥ ಶ್ರೀಯರಸ ಹಯವದನಪ್ರಿಯವಾದಿರಾಜ ರಾಯ ರಚಿಸಿದ ಪದವಿದು ಆಯುಷ್ಯಭವಿಷ್ಯ ದಿನದಿನಕ್ಕೆ ಹೆಚ್ಚುವುದು ನಿರಾಯಾಸದಿಂದ ಸುಖಿಪರು ಶೋಭಾನೆ॥110॥ ಬೊಮ್ಮಾನ ದಿನದಲ್ಲಿ ಒಮ್ಮೊಮ್ಮೆ ಈ ಮದುವೆ ಕ್ರಮದಿಮಾಡಿ ವಿನೋದಿಸುವ ನಮ್ಮ ನಾರಾಯಣಗೂ ಈರಮ್ಮೆ ಗಡಿಗಡಿಗೂ ಅಸುರಮೋಹನ ನರನಟನೆ ಶೋಭಾನೆ॥111॥ ಮದುವೆಯ ಮನೆಯಲ್ಲಿ ಈ ಪದವ ಪಾಡಿದರೆ ಮದುಮಕ್ಕಳಿಗೆ ಮುದವಹುದು ವಧುಗಳಿಗೆ ಓಲೆಭಾಗ್ಯ ದಿನದಿನಕ್ಕೆ ಹೆಚ್ಚುವುದು ಮದನನಯ್ಯನ ಕೃಪೆಯಿಂದ ಶೋಭಾನೆ॥112॥ ಶೋಭಾನವನ್ನಿರೆ ಸುರರೊಳು ಸುಭಗನಿಗೆ ಶೋಭಾನವೆನ್ನೀ ಸುಗುಣನಿಗೆ ಶೋಭಾನವೆನ್ನೀರೆ ತ್ರಿವಿಕ್ರಮರಾಯಗೆ ಶೋಭಾನವೆನ್ನೀ ಸುರಪ್ರಿಯಗೆ ಶೋಭಾನೆ॥ಪ॥

ಆರುತಿಗೈಯುವೆ ವರಮಹಾಲಕ್ಷ್ಮೀಗೆ — ರಾಗ: ಕೀರವಾಣಿ

ಆರುತಿಗೈಯುವೆ ವರಮಹಾಲಕ್ಷ್ಮೀಗೆ॥ಪ॥ ಅರ್ಥಿಯಿಂದಾರುತೀ। ಮುತ್ತೈದೇರೆಲ್ಲರೂ। ಅತ್ಯಂತ ಹರುಷದೀ। ವರಮಹಾಲಕ್ಷ್ಮೀಗೇ॥1॥ ಶರಧಿ ರಾಜನ ಸುತೆಗೆ। ಸುರಮುನಿವಂದಿತೆಗೇ। ಪರಮ ಭಕ್ತರ ಮಾತೆಗೆ। ವರಮಹಾಲಕ್ಷ್ಮೀಗೇ॥2॥ ಬಗೆ ಬಗೆ ಬಾಲೆಯರೂ। ಭಾಗ್ಯ ಸಂಪನ್ನೇರೂ। ಪರಮಭಕ್ತರ ಮಾತೆಗೆ। ವರಮಹಾಲಕ್ಷ್ಮೀಗೇ॥3॥

ಎತ್ತಿರೆ ಆರತಿ ಶ್ರೀ ವರಲಕ್ಷ್ಮೀಗೆ — ರಾಗ: ಪೂರ್ವಿಕಲ್ಯಾಣಿ

ಎತ್ತಿರೆ ಆರತಿ ಶ್ರೀ ವರಲಕ್ಷ್ಮಿಗೆ॥ಪ॥ ಚಿತ್ತಜನಯ್ಯನ ಮಡದಿ ಶ್ರೀಮಹಾಲಕ್ಷ್ಮಿಗೆ॥ಅ.ಪ.॥ ಕೊಲ್ಲೂರ ಮೂಕಾಂಬಿಕೆಗೆ ಕಟೀಲು ಪರಮೇಶ್ವರಿಗೆ। ಹೊರನಾಡ ಬೆಳಗುವ ಅನ್ನಪೂರ್ಣೇಶ್ವರಿಗೆ। ಮೈಸೂರ ಚಾಮುಂಡಿಗೆ ಮಧುರೆ ಮೀನಾಕ್ಷಿಗೆ। ಕಂಚಿ ಕಾಮಾಕ್ಷಿಗೆ ಕಾಶಿ ವಿಶಾಲಾಕ್ಷಿಗೆ॥1॥ ವೇದಮಾತೆ ಶ್ರೀ ಗಾಯತ್ರಿ ದೇವಿಗೆ। ನಾದಲೋಲೆ ಶ್ರೀ ಶೃಂಗೇರಿ ಶಾರದೆಗೆ। ಕಮಲನಾಭನ ಅರಸಿ ಮುದ್ದು ರುಕುಮಿಣಿಗೆ। ಮುತ್ತಿನ ಆರತಿ ಅರ್ಥಿಯಿಂ ಬೆಳಗಿರೆ॥2॥ ಅಭಯವನೀಡುವ ಒಲವನು

ತೋರುತ। ವರಗಳ ನೀಡುವ ಪದುಮಾವತಿಗೆ। ಸವದತ್ತಿ ಎಲ್ಲಮ್ಮನಿಗೆ ಪೆನುಕೊಂಡ ವಾಸವಿಗೆ। ಕುಂಕುಮದಾರತಿ ಬೆಳಗಿರೆ।।3।।

ಲಕ್ಷ್ಮೀದೇವಿಗೆ ತಂದೆತ್ತಿದರು **ರಾಗ: ದರ್ಬಾರ್-ಆದಿತಾಳ**

ಲಕ್ಷ್ಮೀದೇವಿಗೆ ತಂದೆತ್ತಿದರು ಮುತ್ತಿನಾರುತಿಯ।।ಪ।। ಯಾದವಗಿರಿಲಕ್ಷ್ಮೀ ಎದುಗಿರಿ ತಾಯೆ ನೀನು। ನಿನ್ನ ಸೇವೆಯನು ಮಾಡುವರ ಪಾಪವನು ಪರಿಹರಿಸೆ ।।1।। ಕಾವೇರಿ ತೀರವಾಸ ರಂಗನಾಯಕಿ ತಾಯೆ। ಕರುಣದಿಂದಲಿ ಕಾಯೆ ಶ್ರೀ ವರಮಹಾಲಕ್ಷ್ಮೀಯೆ।।2।। ಶೇಷ ಶಯನನ ರಾಣಿ ಪದ್ಮಿಣಿ ದೇವಿಗೆ। ಕುಂಕುಮದ ಆರತಿಯ ಎತ್ತುವೆವು ಹರುಷದಲಿ।।3।

ಕ್ಷೀರಸಾಗರ ಪುತ್ರಿ (ಆರತಿ)

ಕ್ಷೀರಸಾಗರ ಪುತ್ರಿ। ಕ್ಷೀರಾಬ್ಧಿ ಶಯನನ। ಮಡದಿ ಮಹಾಲಕ್ಷ್ಮಿ ನಿನಗಾರತೀ।।ಪ।। ಪಂಕಜಲೋಚನೆ। ಪಂಕಜ ಮುಖಿತಾಯೆ। ಪಂಕಜವಾಸಿನಿ ಪುಷ್ಪಾರತೀ।। ಶ್ರೀವರ ಮಹಾಲಕ್ಷ್ಮಿ ನಿನಗಾರತೀ।।ಅ.ಪ.।। ಶ್ರೀರಂಗನಾಯಕಿ ಶ್ರೀಪದುಮಾವತಿ। ಶ್ರೀಸೀತಾಮಾತೆಗೆ ಸೊಗದಾರತೀ। ಶ್ರೀದೇವಿ ಭೂದೇವಿ ಶ್ರೀರುಕ್ಮಿಣಿ ದೇವಿ। ಶ್ರೀಚಕ್ರವಾಸಿನಿ। ದೀಪಾರತಿ।। ಶ್ರೀವರ ಮಹಾಲಕ್ಷ್ಮಿ ನಿನಗಾರುತೀ।।1।। ಶ್ರೀಲಕ್ಷ್ಮಿ ಜಯಲಕ್ಷ್ಮಿ ವರಲಕ್ಷ್ಮಿ, ಧನಲಕ್ಷ್ಮಿ, ಭಾಗ್ಯಲಕ್ಷ್ಮಿಯೆ ತಾಯೆ ಮುದದಾರತೀ। ಶುಭಲಕ್ಷ್ಮಿ ಸುಖಲಕ್ಷ್ಮಿ, ಸತ್ಯಲಕ್ಷ್ಮಿ ದೇವಿ। ಮೋಕ್ಷ ಲಕ್ಷ್ಮಿಯೆ ಮಾತೆ ಮುದದಾರತಿ। ಶ್ರೀವರಮಹಾಲಕ್ಷ್ಮಿ ನಿನಗಾರತಿ।।2।।

ವರಕುಂಭದೊಳು ಬಂದು (ಲಾಲಿ) **ರಾಗ: ಕುರಂಜಿ**

ವರಕುಂಭದೊಳು ಬಂದು ವಾಸವಾಗಮ್ಮ। ಅನುಗಾಲ ಇರುವಂತೆ ದಯೆ ತೋರಿಸಮ್ಮ।।ಪ।। ಸ್ವಾರಸ್ಯ ಪಕ್ವಾನ್ನ ಸವಿದು ನೋಡಮ್ಮ। ವೆಂಕಟೇಶನರಾಣಿ ಭರದಿ ಮಲಗಮ್ಮ।।ಜೋಜೋ।। ವರ ಮಹಿಮೆ ತೋರಿ ಕೀರ್ತಿ ಕೊಡಮ್ಮ। ಮನದೊಳಗಿನ ಹರಕೆ ಕೈಗೂಡಿಸಮ್ಮ।।ಜೋ ಜೋ।। ಪುತ್ರರ ಫಲ ಕೊಟ್ಟು ತೋರಮ್ಮ ಈಗ। ನಮ್ಮ ಮನೆಯೊಳಗೆ ವಾಸವಾಗಮ್ಮ।।ಜೋಜೋ।। ಕನಕ ಭೂಷಣಗಳಿಂದ ಕರವ ಪಿಡಿಯಮ್ಮ । ಶ್ರೀ ಕೃಷ್ಣನ ರಾಣಿ ಹಾಡಿಹರಸಮ್ಮ।।ಜೋ ಜೋ।।

ಗುರುಭಕ್ತಿಯೆಂತೆಂಬ (ಆರತಿ-ಮಂಗಳ) **ರಾಗ: ಕಾಂಬೋಧಿ-ಆದಿತಾಳ**

ಗುರುಭಕ್ತಿಯೆಂತೆಂಬ ಕನಕದೋಲೆಯನಿಟ್ಟು। ಹರಿಧ್ಯಾನವೆಂಬ ಆಭರಣವಿಟ್ಟು। ಪರತತ್ತ್ವ ವೆಂತೆಂಬ ಪಾರಿಜಾತವ ಮುಡಿದು। ಪರಮಾತ್ಮ ಹರಿಗೆ ಆರತಿಯೆತ್ತಿರೆ।। ಜಯಮಂಗಳಂ ।। ಆದಿಮೂರುತಿಯೆಂಬ ಅಚ್ಚ ಅರಿಶಿನ ಬಳಿದು। ವೇದಮುಖನೆಂಬ ಕುಂಕುಮವನಿಟ್ಟು। ಸಾಧು ಸಜ್ಜನ ಸೇವೆಯೆಂಬ। ಸಂಪಿಗೆ ಮುಡಿದು ಮೋದದಿಂ ಲಕ್ಷ್ಮಿಗಾರತಿ ಯೆತ್ತಿರೆ।।ಜಯಮಂಗಳಂ।। ತನುವೆಂಬ ತಟ್ಟೆಯಲ್ಲಿ ಮನದ ಸೊಡಲನು ಇರಿಸಿ। ಘನ ಶಾಂತಿಯೆಂಬ ಆಜ್ಯವನು ತುಂಬಿ। ಆನಂದವೆಂತೆಂಬ ಬತ್ತಿಯನು ಹಚ್ಚಿಟ್ಟು। ಚಿನುಮಯ ಹರಿಗೆ ಆರತಿಯೆತ್ತಿರೆ।।ಜಯಮಂಗಳಂ।। ಕಾಮಾಂಧವಳಿದಂಥ ಕಮಲದ ತಟ್ಟೆಯಲಿ। ನೇಮವೆಂತೆಂಬ ಹರಿದ್ರವನು ಕದಡಿ।। ಆ ಮಹಾ ಸುಜ್ಞಾನವೆಂಬ ಸುಣ್ಣವ ಬೆರಸಿ। ಸೋಮಧರವಂದ್ಯಗಾರತಿ ಎತ್ತಿರೆ।।ಜಯಮಂಗಳಂ।। ನಾರದವಂದ್ಯಗೆ ನವನೀತ ಚೋರಗೆ। ನಾರಾಯಣಗೆ ಶ್ರೀವರಲಕ್ಷ್ಮಿಗೆ। ಸಾರಿದವರನು ಪೊರೆವ ಪುರಂದರವಿಠ್ಠಲಗೆ। ನೀರಜಮುಖಿಯರಾರುತಿ ಎತ್ತಿರೆ।।ಜಯಮಂಗಳಂ।।

❖ ❖ ❖

31. ಗಾಯತ್ರಿ ಉಪಾಸನೆ

ಪಾಹಿಮಾಂ ಗಾಯತ್ರಿ ಪ್ರಣವ **ರಾಗ: ಅಸಾವೇರಿ**

ಪಾಹಿಮಾಂ ಗಾಯತ್ರಿ ಪ್ರಣವ ಸ್ವರೂಪಿಣಿ ವಿಶ್ವಚೇತನ ತಾಯೆ ವಿಮಲ ಪ್ರಭಾವೇ।।ಪ।। ಸತ್ಯವೇ ಸೌಂದರ್ಯ ಸೌಂದರ್ಯವೇ ಸತ್ಯ। ದೇವಶ್ರೀ ನಂದಿನಿಯೆ ಸ್ತುತಿಸುವೆನು ನಿತ್ಯ ವಿಶ್ವಪ್ರೇಮವ ಬೆಳಸು ಆತ್ಮ ಪಾವನಗೊಳಿಸು। ಬ್ರಹ್ಮ ತೇಜೋಬಲವ ಉದ್ದೀಪ್ತಗೊಳಿಸು।।1।। ಓಜೋಸಿ ಸಹೋಸಿ ಬಲಮಸಿ ಭ್ರಾಜೋಸಿ। ಧಾಮನಾಮಾಸಿ ತಾಯೆ ವಿಶ್ವಮಸಿ। ಗಾಯತ್ರೀ ದೇವಿ ಸಾಕ್ಷಾತ್ಕಾರ। ಗೀತ ಬೋಧಸ್ವರ ಶಂಕರಾಚಾರ್ಯರ ಸ್ತುತಿ ಶಂಕರಿ।।2।।

ವೇದಮಾತಾ ಗಾಯತ್ರಿ **ರಾಗ: ಹಂಸಾನಂದಿ-ಏಕತಾಳ**

ವೇದಮಾತಾ ಗಾಯತ್ರಿ ಬ್ರಹ್ಮನ ರಾಣಿ ಸರಸ್ವತಿ ವಿದ್ಯಾ। ಪ್ರದಾಯಿನಿ ಶಾರದೆ ಧಿಯೋ ಯೋನಃ ಪ್ರಚೋದಯಾತ್।। ಸಂಧ್ಯಾರಾಣಿ ಗಾಯತ್ರಿ ತ್ರಿಕಾಲ ವಂದಿತೆ ಸಾವಿತ್ರಿ। ಬುದ್ಧಿ ಪ್ರದಾಯಿನಿ ಸರಸ್ವತಿ ಧಿಯೋಯೋನಃ ಪ್ರಚೋದಯಾತ್।। ಅಭಯಹಸ್ತ ವರದಾಯಿನೀ ಅರವಿಂದ ಯುಗಳೇ ಅಂಬಿಕೇ। ಅಂಕುಶಾಕುಶ ಧಾರಿಣಿ ಧಿಯೋಯೋನಃ ಪ್ರಚೋದಯಾತ್।। ಶಂಖ ಚಕ್ರ ಗಧಾಧಾರಿಣೀ ಶುಭ್ರ ಕಪಾಲಿನಿ। ಪಾರ್ವತಿ ಪಂಚ ವರ್ಣಮುಖಿ ಗಾಯತ್ರಿ ಧಿಯೋಯೋನಃ ಪ್ರಚೋದಯಾತ್।। ರತ್ನ ಮುಕುಟಧರೆ ರಂಜಿತೇ ಇಂದು ವದನೆ ವಾಗ್ದೇವಿಯೇ। ಪ್ರಣವ ತತ್ವಾರ್ಥ ಪ್ರದಾಯಿನಿ ಧಿಯೋಯೋನಃ ಪ್ರಚೋದಯಾತ್।।

ಬಂದು ಕೂತಿಹಳು ನೋಡಿ **ರಾಗ: ಕಾಂಬೋಧಿ**

ಬಂದು ಕೂತಿಹಳು ನೋಡಿ ಗಾಯಿತ್ರಿ ನೀವಿಂದು ಕಣ್ದೆರೆದು ನೋಡಿ।।ಪ।। ಒಂದು ನಿಮಿಷ ಧ್ಯಾನಿಸಲ್ ಭವ ಬಂಧನವ ತಾ ಕಳಚಿ। ಬ್ರಹ್ಮಾನಂದ ಶರಧಿಯೊಳದ್ದಿ ಸಲಹುವೆನೆಂದು। ಹೃದಯಾಂಗಣದಿ ಮುದದಿ।।ಅ.ಪ।। ಮಿರುಗುವ ವಜ್ರಗಳಾರು ಚತುರಾಶ್ರ। ಮೇಲೆಸೆವಾರು ಕಲಶಂಗಳು। ಅಸಮ ಸಿಂಹಾಸನದ ಮಧ್ಯದೊಳ್। ಮಸೆದು ಹತ್ತಾವತಾರ ಕೆತ್ತಿದ ಮಿಸುಣಿ ಒಡ್ಯಾಣವು ನಡುವಿಗೆ। ನಸುನಗುತ ಸಾವಿತ್ರಿ ದೇವಿಯು।।1।। ಮೂರು ವರ್ಣದ ಕಾಯವೂ ಗಾಯಿತ್ರಿಗೆ। ಆರು ವರ್ಣದ ಉಡಿಗೆಯೂ। ಏರಿ ಶಿರಗಳ ಪಂಚಬ್ರಹ್ಮರ। ಮೇರುವಿಗೆ ಹನ್ನೆರಡು ಗೊಣಸುಗಳ್। ಸೇರಿಸಿ ಉಯ್ಯಾಲೆ ಆಡುವ ಮೂರು ಲೋಕದ ಮುಕ್ತಿ ಕಾಂತೆಯು।।2।। ನೀಲ ದರ್ಪಣ ಪಿಡಿದು। ಕೆಂಪಿನ ಬಟ್ಟು ಫಾಲ ಮಧ್ಯದಿ ನೋಡಿಟ್ಟು। ವಾಲೆ ಝುಮುಕಿಯು ಶೃತಿಗೆ ಶಿರಸಿನ ಮೇಲೆ। ಸಾಸಿರ ದಳದ ಪದ್ಮವು ಲೀಲೆಯಿಂದೆಮ್ಮನೆಯೊಳಾಡುವ ಏಳು ಕೋಟಿ ಸುಮಂತ್ರ ದೇವತೆ।।3।। ವರ ಕುಚಯುಗಳ ಮಧ್ಯೆ। ದ್ವಾದಶ ವಜ್ರ। ಧರಿಸಿ ಸ್ಫುರಿಸಿ ತೋರುವ ಪದಕ। ಎರಡು ಮೂರೈದಾರು ಸೇರಿಹ ಸರವು। ಏಕಾವಳಿಯು ಕಂಠದಿ। ಧರಿಸಿ ವೈಖರಿ ರೂಪಿನಿಂದಲಿ ಮೆರೆವ ಬ್ರಹ್ಮಸಖಿ ಸರಸ್ವತಿ।।4।। ಚಿತ್ತಾ ನಕ್ಷತ್ರದಂತೆ। ವಿರಾಜಿಪೋ ಮುತ್ತಿನ ಮೂಗುತಿಯು। ಸತ್ವ ಚಿತ್ತಾನಂದ ರೂಪಿಣಿ। ಮಿಥ್ಯ ಮಾಯಾ ಕಲುಷಹಾರಿಣಿ। ಕರ್ತೃ ಶ್ರೀಮಹಲಿಂಗ ರಂಗನ ಶಕ್ತಿ ಸಾಕ್ಷಾತ್ ತ್ರಿಪುರ ಸುಂದರಿ।।5।।

ಜಯ ಗಾಯತ್ರೀ ಮಾತಾ **ರಾಗ: ರವಿಚಂದ್ರಿಕೆ**

ಜಯ ಗಾಯತ್ರೀ ಮಾತಾ ಜಯ ಜಯ ಗಾಯತ್ರಿ ಮಾತಾ।।ಪ।। ಬಣ್ಣಿಸಲಸದಳವೇ ಗಾಯತ್ರಿ ನಿನ್ನ ಮಹಿಮೆಯನ್ನು। ಪುಣ್ಯವಿದಮ್ಮ ಇಳೆಗೆ ಬಂದೇ ನೀ ಕಾಯಲು ನಮ್ಮನ್ನು।।ಅ.ಪ।। ವೇದ ಶಾಸ್ತ್ರಗಳ ಮೊದಲು ಬರುವ ಓಂಕಾರ ರೂಪಿ ನೀನು। ನಾದ ಬಿಂದು ಪಾತಾಳಾತೀತ ಆನಂದ ರೂಪಿ ನೀನು। ಸಾಧುಸಂತರೇಕಾಂತದಲ್ಲಿ ಜಪಿಸುವರು ಬಿಡದೆ ನಿನ್ನ। ಬುಧರಾದಿಯಾಗಿ ಪಡೆಯುವರು ಸದುಭಾವ ಚೆನ್ನ।।1।। ದೃಢ ಚಿತ್ತದಿಂದ ಜಪಮಾಡಿದರೆ ಆಗುವುದಾತ್ಮ ಶುದ್ಧಿ। ಮಂದಮತಿಜಡ ಬುದ್ಧಿ ಹೋಗಿ ಸಿಗುವುದು ಸರ್ವಸಿದ್ಧಿ। ಯಾರು ನಿನ್ನಯ ಮಹಾಮಂತ್ರವನು ನಿತ್ಯದಿ ಜಪಿಸುವರು। ಅವರು ಪಡೆವರು ಸಂಸಾರದಲಿ ಸುಖ ಶಾಂತಿಯನು ।।2।। ಮೂರು ಲೋಕದೊಳು ನಿನ್ನ ಮಹಿಮೆಯನು

ಅರಿತವರಾರಮ್ಮ। ಜರಾ ಮರಣವನು ದೂರಿರಿಸಿ ನಮ್ಮನ್ನು ಪಾರುಗಾಣಿಸಮ್ಮ। ಖ್ಯಾತಿವಂತಳೆ ನಿನ್ನ ಬಣ್ಣಿಸಲು ಮಾತು ಸಾಲದಮ್ಮ। ಪ್ರೀತಿಯಿಂದ ಕೃತಪುರ ಭಕುತನದೀ ಕವನ ಆಲಿಸಮ್ಮ॥3॥

ಗಾಯಿತ್ರಿ ಶುಭಗಾತ್ರಿ

ಗಾಯಿತ್ರಿ ಶುಭಗಾತ್ರಿ॥ಪ॥ ಮಾಯಾಭಿಧೆ ಪತಿ। ವೀರ್ಯಜಾತ ಶುಭ। ಕಾಯವುಮಾಭಿಧ। ಆರ್ಯನ ಪ್ರಿಯಸತಿ॥ಅ.ಪ.॥ ವೀಣೆ ಧರಳೆ ಹರಿ। ಗಾನ ಗುಣಂಗಳ। ಜಾಣೆಯೆ ಈ ತನು। ವೀಣೆಯಂತೆಸಗು ನೀರಜಾಕ್ಷ॥1॥ ನಿನಗಾರಿಲ್ಲವು ಸಮ ಮೂರುಲೋಕದಲಿ। ಮುರಾರಿಯೆನುತೆ ॥2॥ ಕಾವ ಕೊಲ್ವ ಗುರು। ಗೋವಿಂದ ವಿಠಲನ ಓವಿ ಹೃದಂಬರ। ಠಾವಿಲಿ ತೋರಿಸು॥3॥

ಗಾಯತ್ರಿದೇವಿ ಸಜ್ಜನ

ರಾಗ: ಬೃಂದಾವನಸಾರಂಗ-ಆದಿತಾಳ

ಗಾಯತ್ರಿದೇವಿ ಸಜ್ಜನ ಸೇವಿತೆ। ಮಾಯಾತೀತೆ ಮಂತ್ರಪೂರಿತೆ॥ಪ॥ ಪಂಚವಕ್ತ್ರಾದಿ ಸುಂದರ ವದನೆ। ಪಂಚವರ್ಣಾದಿ ಶೋಭಿತ ಕಾಂತಿಸದನೆ। ಪಂಚವಸ್ತ್ರ ರುದ್ರಾದಿ ಸುರಸಂವರ್ಧನೆ। ಪಂಚಭೂತಾದಿ ಮೂಲಾಧಾರಿಣಿ॥1॥ ಅಕ್ಷರಮಾಲಾಧರೆ ಓಂಕಾರ ರೂಪಿಣಿ। ವಕ್ಷದಿ ಭರಿಸಿಹ ವೇದಾಗಮಸಾರಿಣಿ। ಚಕ್ಷುಗೆ ಅಗೋಚರವಾದೆ ವಿಹಾರಿಣಿ। ರಕ್ಷಿಸು ಸುಮತಿಯಂ ಜ್ಞಾನಸ್ವರೂಪಿಣಿ॥2॥ ಕೋಟಿಕೋಟಿ ಭೃತ್ಯರಿಂ ಸೇವಿಪ ಚರಣೆ। ವಟುಗಳ ಆರಾಧ್ಯದೈವ ನೀನೆ। ಸಾಟಿ ಇಲ್ಲದ ಮಂತ್ರದ ಸುಸ್ವರಸಂಸೇವಿತೆ। ಮಾಟದಿ ಮನವನು ದೇವೀ ರೂಪಿಸೆ॥3॥

ಓಂ ಭೂರ್ಭುಃವಸ್ವಃ (ಗಾಯತ್ರಿಮಂತ್ರ)

ಓಂ ಭೂರ್ಭುವಸ್ವಃ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧೀಯೋ ಯೋನಃ ಪ್ರಚೋದಯಾತ್॥

ಮುಕ್ತಾ ವಿದ್ರುಮ ಹೇಮನೀಲ (ಗಾಯತ್ರಿ ಸ್ತೋತ್ರ)

ಮುಕ್ತಾ ವಿದ್ರುಮ ಹೇಮನೀಲ ಧವಲಚ್ಛಾಯೈರ್ಮುಖೈ ಸ್ತ್ರೀಕ್ಷಣೈಯುಕ್ತಾಮಿಂದುನಿಬದ್ಧ ರತ್ನಮಕುಟಾಂ ತತ್ವಾರ್ಥ ವರ್ಣಾತ್ಮಿಕಂ। ಗಾಯತ್ರಿಂ ವರದಾಭಯಾಂಕುಶಕಶಾಂ ಶೂಲಂ ಕಪಾಲಂ ಗುಣಂ ಶಂಖಂ। ಚಕ್ರಮಥಾರವಿಂದ ಯುಗಲಂ ಹಸ್ತೈರ್ವಹಂತೀಂ ಭಜೇ। ಋಗ್ಯಜುಃ ಸಾಮರ್ಥರ್ವಾಣಿ ಚಂಧಾಂಸಿ ಪರಿಕೀರ್ತಿತಾಃ। ಪರಬ್ರಹ್ಮ ಸ್ವರೂಪಾ ಸಾ ಗಾಯತ್ರೀ ದೇವತಾಸ್ಮೃತಾ॥

ಗಾಯತ್ರೀಂ ಸಕಲಾಗಮಾರ್ಥ(ಮಂತ್ರಜನನಿಗಾಯತ್ರೀ)

ಗಾಯತ್ರೀಂ ಸಕಲಾಗಮಾರ್ಥ ವಿದುಷಾಂ ಸ್ವಾರಸ್ಯ ಬೀಜೇಶ್ವರಿಮ್। ಸರ್ವಾಮ್ನಾಯ ಸಮಸ್ತ ಮಂತ್ರಜನನೀಂ ಸರ್ವಜ್ಞ ಧಾಮೇಶ್ವರೀಂ॥

ಹಂಸಸ್ಥಾ ಗರುಡಾರೂಢಾ ತಥಾ (ಗಾಯತ್ರಿಗೆ ನಮಸ್ಕಾರ)

ಹಂಸಸ್ಥಾ ಗರುಡಾರೂಢಾ ತಥಾ ವೃಷಭವಾಹಿನೀ। ಋಗ್ವೇದಾಧ್ಯಾಯಿನೀ ಭೂಮೌದೃಶ್ಯತೇ ಯಾತಪಸ್ವಿಭಿಃ॥ ಆದಿಶಕ್ತೇ ಜಗನ್ಮಾತರ್ಭಕ್ತಾನುಗ್ರಹಕಾರಿಣೀ। ಸರ್ವತ್ರ ವ್ಯಾಪಿಕೇಽನಂತೇ ಶ್ರೀಸಂಧ್ಯೇ ತೇ ನಮೋಸ್ತುತೇ॥

ಸಂಧ್ಯಾದೇವಿ ಸಾವಿತ್ರೀಂ

ರಾಗ: ದೇವಕ್ರಿಯ-ದಿತಾಳ

ಸಂಧ್ಯಾದೇವಿ ಸಾವಿತ್ರೀಂ ವರಗಾಯತ್ರೀಂ ಸರಸ್ವತೀಂ ಭಜೇಹಂ॥ಪ॥ ವಿಂಧ್ಯಾಚಲ ನಿವಾಸಿತ ವಿಶಾಲಿನಿಂ ವಿಧಿ ಗುರುಗುಹ ಸನ್ನುತ ವರದಾಯಿನೀಂ॥ಅ.ಪ॥ ಗುಪ್ತತರ ಮಾರ್ಗ ಕುಲಯೋಗಿನೀಂ ಗುಣಿನೀಂ ಗೋವಿಂದ ಜನನೀಂ ನಳಿನೀಂ ಸತ್ಯ ಸಂಕಲ್ಪ ತಮೋಪಹಾರಿಣೀಂ ಸಕಾರರೂಪಿಣೀಂ ಸಂಪ್ರದಾಯಿನೀಂ ಸಪ್ತಸ್ವರ ಮಾತೃಕಾರೂಪಿಣೀಂ ಸಂಸಾರ ದುಃಖ ಶಮನೀಂ ತತ್ವದ ಲಕ್ಷ್ಯಾರ್ಥರೂಪಿಣೀಂ ಸಮಯಾಚಾರ ಪ್ರವರ್ತಿನೀಂ॥ಚ॥

ಗಾನದಲಿ ನಿತ್ಯ ಗಾಯತ್ರಿ

ಗಾನದಲಿ ನಿತ್ಯ ಗಾಯತ್ರಿ। ತಾನ ಭರ್ಗಶ್ರೀ ನಿತ್ಯ ವಿಸ್ತೃತ।।ಪ।। ಜೀವಕಾತರ ಎಂದೆಂದೂ। ಭವದ ಅಂತರ ತತ್ತಿಗೆ। ಪರಿಚೋದನೆಯೂ ಅಲ್ಲಿಯೇ। ಸರ ಆಚಾರವಿಚಾರ।।1।। ಇಡಿ ಸೃಷ್ಟಿ ಪುಳಕ ಅವತಾರ। ಗಾಢ ಒಳಗಟ್ಟಿ ಬಹುಕಾತರ। ಚೋದ ಚೋದನೆಯ ಮೂಲಕ್ಕೆ ಹೋಗಿ ಮುಟ್ಟ್ಯಾನ ಪರಮ ಗುರಿ।।2।। ಕೈ ಹಣ್ಣು ರುಚಿ ಸರ್ವಸ್ವ। ಮೋಹದಿ ಬರಿ। ಹಾಳಾಗದಂತೆ ತಿರುಚಕ್ರ। ತಾಳ ವರಹವಿಠ್ಠಲಾಧೀಶ।।3।।

ಶ್ರೀ ಗಾಯತ್ರೀ ಜಗನ್ಮಾತಾ ಪರಬ್ರಹ್ಮ (ಗಾಯತ್ರೀ-ಅಷ್ಟೋತ್ತರ)

ಶ್ರೀಗಾಯತ್ರೀ ಜಗನ್ಮಾತಾ ಪರಬ್ರಹ್ಮ ಸ್ವರೂಪಿಣೀ। ಪರಮಾರ್ಥ ಪ್ರದಾಜಪ್ಯಾ ಬ್ರಹ್ಮ ತೇಜೋ ವಿವರ್ದಿನೀ। ಬ್ರಹ್ಮಾಸ್ತ್ರ ರೂಪಿಣೀ ಭವ್ಯಾ ತ್ರಿಕಾಲ ಧ್ಯೇಯ ರೂಪಿಣೀ। ತ್ರಿಮೂರ್ತಿರೂಪ ಸರ್ವಜ್ಞಾ ವೇದ ಮಾತಾ ಮನೋನ್ಮನೀ। ಬಾಲಿಕಾ ತರುಣೀ ವೃದ್ಧಾ ಸೂರ್ಯ ಮಂಡಲವಾಸಿನೀ। ವಂದೇಹ ದಾನವಧ್ವಂಸಾಕಾರಿಣೀ ಸರ್ವ ಕಾರಿಣಾ। ಹಂಸಾರೂಢಾ ವೃಷಭಾರೂಢಾ ಗರುಡಾ ರೋಹಿಣೀ ಶುಭಾ। ಷಟ್ಕುಕ್ಷಿಃ ತ್ರಿಪದಾ ಶುದ್ಧಾ ಪಂಚಶೀರ್ಷಾ ತ್ರಿಲೋಚನಾ। ತ್ರಿವೇದ ರೂಪಾ ತ್ರಿವಿಧಾ ತ್ರಿವರ್ಗ ಫಲದಾಯಿನೀ। ದಶಹಸ್ತಾ ಚಂದ್ರವರ್ಣಾ ವಿಶ್ವಾಮಿತ್ರ ವರಪ್ರದಾ। ದಶಾಯುಧಧರಾನ್ನಿತ್ಯಾ ಸಂತುಷ್ಟಾಖ್ಯಾಧಿರ ಪ್ರಜಾ। ಆದಿಶಕ್ತಿರ್ ಮಹಾವಿದ್ಯಾ ಸುಷುಮ್ನಾಖ್ಯಾ ಸರಸ್ವತೀ। ಚತುರ್ವಿಂಶತ್ಯಕ್ಷರಾಢ್ಯಾ ಸಾವಿತ್ರೀ ಸತ್ಯವತ್ಸಲಾ। ಸಂಧ್ಯಾರಾತ್ರಿಪ್ರಭಾತಾಖ್ಯಾ ಸಾಂಖ್ಯಾಯನ ಕುಲೋದ್ಭವಾ। ಸರ್ವೇಶ್ವರೀ ಸರ್ವವಿದ್ಯಾ ಸರ್ವ ಮಂತ್ರಾಧಿರವ್ಯಯಾ। ಶುಭವಸ್ತ್ರಾ ಶುದ್ಧ ವಿದ್ಯಾ ಶುಕ್ಲಮಾಲಿಲ್ಯಾನುಲೇಪನಾ। ಸುರಸಿಂಧು ಸಮಾ ಸೌಮ್ಯಾ ಬ್ರಹ್ಮಲೋಕನಿವಾಸಿನೀ। ಪ್ರಣವಃ ಪ್ರತಿಪಾದ್ಯಾರ್ಥಂ ಪ್ರಣತೋದ್ಧರಣಃ ಕ್ಷಮಾ। ಜಲಾಂಜಲೀ ಸುಸಂತುಷ್ಟಾ ಜಲಗರ್ಭ ಜಲ ಪ್ರಿಯಾ। ಸ್ವಾಹಾ ಸ್ವಧಾ ಸುಧಾ ಸಂಸ್ಥಾ ಶ್ರೌಷಡ್ವ ಷಡ್ವಷಟ್ಕ್ರಿಯಾ। ಸುರಭಿಃ ಶೋಡಷಃ ಕಲಾ ಮುನಿ ಬೃಂದ ನಿಷೇವಿತಾ। ಯಜ್ಞಪ್ರಿಯಾ ಯಜ್ಞಮೂರ್ತೀ ಸುಸ್ಕ್ರುವಾಜ್ಯ ಸ್ವರೂಪಿಣೀ। ಅಕ್ಷಮಾಲಾಧರಾ ಚಾಕ್ಷಾ ಮಾಲಾ ಸಂಸ್ಥಾಕ್ಷರಾಕೃತಿಃ। ಮಧುಚ್ಛಂದ ಋಷಿ ಪ್ರೀತಾ ಸ್ವಚ್ಛಂದಚ್ಛಂದ ಸಾಂ ನಿಧಿ। ಅಂಗುಳೀ ಪರ್ವ ಸಂಸ್ಥಾನಾ ಚತುರ್ವಿಂಶತೀ ಮುದ್ರಿಕಾ। ಬ್ರಹ್ಮಮೂರ್ತಿ ರುದ್ರಶಿಖಾ ಸಹಸ್ರ ಪರಮಾಂಬಿಕಾ। ವಿಷ್ಣು ಹೃದ್ಗಾಚಾಗ್ನಿ ಮುಖೀ ಶತಮಧ್ಯಾ ದಶಾವರಾ। ಸಹಸ್ರ ದಳ ಪದ್ಮಸ್ಥಾ ಹಂಸರೂಪಾ ನಿರಂಜನಾ। ಚರಾಚರಸ್ಥಾ ಚತುರಾ ಸೂರ್ಯಕೋಟಿ ಸಮಪ್ರಭಾ। ಪಂಚವರ್ಣಮುಖೀ ಧಾತ್ರೀ ಚಂದ್ರಕೋಟಿಶುಚಿಸ್ಮಿತಾ। ಮಹಾಮಾಯಾ ವಿಚಿತ್ರಾಂಗೀ ಮಾಯಾ ಬೀಜ ನಿವಾಸಿನೀ। ಸರ್ವಯಂತ್ರಾತ್ಮಿಕಾ ಸರ್ವತಂತ್ರ ರೂಪಾ ಜಗದ್ಧಿತಾ। ಮರ್ಯಾದಾ ಪಾಲಿಕಾ ಮಾನ್ಯಾ ಮಹಾಮಂತ್ರ ಫಲಪ್ರದಾ। ಇತ್ಯಷ್ಟೋತ್ತರ ನಾಮಾನಿ ಗಾಯಿತ್ರ್ಯಾ ಪ್ರೋಕ್ತುವಾನ್ ಮುನಿಃ। ಏತದಷ್ಟೋತ್ತರ ಶತಂ ನಿತ್ಯಂ ಭಕ್ತಿ ಯಥಃ ಶುಚಿಃ। ತ್ರಿಸಂಧ್ಯಯಃ ಪಠೇನ್ನರಃ ಸರ್ವಸಿದ್ಧಿಮವಾಪ್ನುಯಾತ್।

ಜಯತಿ ಜಯ್ ಗಾಯತ್ರೀ ಮಾತಾ, (ಆರತಿ)

ಜಯತಿ ಜಯ್ ಗಾಯತ್ರೀ ಮಾತಾ, ಜಯತಿ ಜಯ್ ಗಾಯತ್ರೀ ಮಾತಾ।।ಪ।। ಆದಿ ಶಕ್ತಿ ತುಮ್ ಅಲಖ್ ನಿರಂಜನೀ ಜಗ ಪಾಲನ್ ಕರ್‌ತಿ। ದುಃಖ್ ಶೋಕ್ ಭಯ್ ಕ್ಲೇಶ್ ಕಲುಷ್ ದಾರಿದ್ರ್ಯ ದೈನ್ಯ್ ಹತ್ರೀ।।1।। ಬ್ರಹ್ಮರೂಪಣೀ ಪ್ರಣತ್ ಪಾಲಿನೀ, ಜಗತ್ ಧಾತ್ರೀ ಅಂಬೇ। ಭವ ಭಯ ಹಾರೀ, ಜನ್ ಹಿತಕಾರೀ, ಸುಖದಾ ಜಗದಂಬೇ।।2।। ಅವಿಕಾರೀ, ಅಘಹಾರೀ, ಅವಿಚಾಲಿತ್, ಅಮಲೇ, ಅವಿನಾಶೀ। ಭಯ್ ಹಾರಿಣಿ ಭವ್ ತಾರಿಣೀ, ಅನಘೇ ಅಜ್ ಆನಂದ್ ರಾಶೀ।।3।। ಕಾಮದೇನು ಸತ್ ಚಿತ್ ಆನಂದಾ ಜಯ್ ಗಂಗಾ ಗೀತಾ। ಸವಿತಾ ಕೀ ಶಾಶ್ವತೀ ಶಕ್ತಿ, ತುಮ್ ಸಾವಿತ್ರೀ ಸೀತಾ।।4।। ಋಕ್, ಯಜ್, ಸಾಮ್, ಅಥರ್ವ ಪ್ರಣ್‌ಯಿನೀ ಪ್ರಣವ್ ಮಹಾಮಹಿಮ್ ಉಚ್ಚಾರೇ।। ಕುಂಡಲಿನೀ ಸಹಸ್ರಾರ್ ಸುಷುಮ್ನಾ ಶೋಭಾ ಗುಣ್ ಗರಿಮೇ।।5।। ಸ್ವಾಹಾ ಸ್ವದಾಃ ಶಚೀ ಬ್ರಹ್ಮಾಣೀ ರಾಧಾ ರುದ್ರಾಣೀ। ಜಯ್ ಶತ್ ರೂಪಾ ವಾಣೀವಿದ್ಯಾ ಕಮಲಾ ಕಲ್ಯಾಣೀ।।6।। ಜನನೀ ಹಮ್ ಹೈಂ ದೀನ್ ಹೀನ್ ದುಃಖ್ ದರಿದ್ರಕೇ ಘೇರೇ। ಯದಪಿ ಕುಟಿಲ್ ಕಪಟೀ ಕಪೂತ್ ತಉ ಬಾಲಕ್ ಹೈಂ ತೇರೇ।।7।। ಸ್ನೇಹ್ ಸನೀ ಕರುಣಾಮಯ್ ಮಾತಾ ಚರಣ್

ಶರಣ್ ದೀಜೈ। ವಿಲಖ್ ರಹೇ ಹಮ್ ಶಿಶು ಸುತ್ ತೇರೇ ದಯಾದೃಷ್ಟಿ ಕೀಜೈ॥8॥ ಕಾಮ್ ಕ್ರೋಧ್ ಮದ್ ಲೋಭ್ ದಂಭ್ ದುರ್ಭಾವ್ ದ್ವೇಷ್ ಹರಿಯೇ। ಶುದ್ಧ ಬುದ್ಧಿ ನಿಷ್ಪಾಪ್ ಹೃದಯ್ ಮನ್ ಕೋ ಪವಿತ್ರ್ ಕರಿಯೇ॥9॥ ತುಮ್ ಸಮರ್ಥ್ ಸಬ್ ಭಾಂತಿ ತಾರಿಣಿ ಪುಷ್ಟಿ ತ್ರಾತಾ। ಸತ್ ಮಾರ್ಗ್ ಪರ್ ಹಮೇ ಚಲಾವೋ ಜೋ ಹೈ ಸುಖ್ ದಾತಾ॥10॥

❖ ❖ ❖

32. ಹಯಗ್ರೀವ ಜಯಂತಿ

ಮುದ್ರಾ ಪುಸ್ತಕ ಶಂಖಾಕ್ಷ **ರಾಗ: ಭೌಳಿ**

ಮುದ್ರಾ ಪುಸ್ತಕ ಶಂಖಾಕ್ಷ ವಿದ್ಯೋತಿತಕರಾಂಬುಜ। ಹೃದ್ಯಮೇಷ ಹಯಗ್ರೀವ ಮದ್ಧ್ಯಾನ ವಿಷಯೋ ಭವ॥ ಕರ್ತ್ರೇ ದರ್ತ್ರೇ ಚಹರ್ತ್ರೇ ಪಾತ್ರೇ ಚ ಹಯವಕ್ತ್ರಮೇ। ಪಿತ್ರೇ ಧಾತ್ರೇ ಧಿಯಾಂ ದಾತ್ರೇ ಸತ್ರೇಜಾಚಾಯತೇ ನಮಃ॥

ಕುದುರೆ ಬಂದದ ಚೆಲುವ **ರಾಗ: ಪುನ್ನಾಗವರಾಳಿ**

ಕುದುರೆ ಬಂದದ ಚೆಲುವ। ಕುದುರೆ ಬಂದದ॥ಪ॥ ಕುದುರೆ ಬಂದದ ವಾದಿರಾಜರ। ಮುದದಿ ಜ್ಞಾನ ಭಕುತಿ ಕೊಡುವ॥ಅ.ಪ॥ ಗರುವಿ ಮಹಾಲಕುಮಿ ತನ್ನ । ವರನೆಂದು ಒಲಿದು ಬರುವ। ಉರದಿ ಶ್ರೀವತ್ಸ ಕೌಸ್ತುಭ। ಧರಿಸಿ ತಾನು ಮೆರೆಯುವಂತೆ॥1॥ ಹಿಂಗಾಲು ರಕ್ಕಸರೊದಿದ ಕುದುರೇ। ಮುಂಗಾಲು ಕೆರಿಯ ಬಾಲವ ತೀಡಿ। ಮುಖವತಗ್ಗಿಸಿ ಕಿವಿಯ ನೆಗ್ಗಿಸಿ। ಅಡಿಗಡಿಗೆ ಹೂಂಕರಿಸುವ ಕುದುರೆ॥2॥ ಕುದುರೆ ಬಂದಿದೆ ವಾದಿರಾಜರ। ಭುಜದ ಮೇಲೆ ಪಾದವಿಟ್ಟು। ಪರಮ ಸಂಭ್ರಮದಿಂದ। ರಾಜರ ಹಯಗ್ರೀವ ವಲಿಸುವಂತೆ॥3॥ ಪಾಲಿಸಿ ವೇದವತಂದ ಕುದುರೆ। ಭೇದಿಸಿ ಕಳ್ಳರ ಕೊಂದ ಕುದುರೆ। ಸ್ವಾಧಿಯಲ್ಲಿ ನಿಂತ ಕುದುರೆ। ವಾದಿರಾಜರಿಗೆ ಒಲಿದ ಕುದುರೆ॥4॥ ಹಲ್ಲಣವಿಲ್ಲದ ನಿಲ್ಲದ ಕುದುರೆ। ಬಲ್ಲಿದ ಕಡಿವಾಣದ ಕುದುರೆ। ಕಡಲೆ ಬೆಲ್ಲ ಮೆಲ್ಲುವ ಕುದುರೆ। ಚೆಲುವ ಶ್ರೀ ಹಯವದನನೆಂಬ ಕುದುರೆ॥5॥

ಕೊಂಡಾಡಲಳವೇ ನಿನ್ನಯ **ರಾಗ: ಕಾಂಬೋದಿ**

ಕೊಂಡಾಡಲಳವೇ ನಿನ್ನಯ ಕೀರ್ತಿ। ಭೂಮಂಡಲದೊಳು ಹಯಗ್ರೀವ ಮೂರ್ತಿ॥ಪ॥ ವೇದಗಳ ಜಲದಿಂದ ನೀತಂದೆ। ಮಂದರಗಿರಿಯ ಬೆನ್ನು ಆತು ನಿಂದೆ। ಮೇದಿನಿಯ ಕದ್ದೊಯ್ದನ ಕೊಂದೆ। ಸಂವಾದನದಿಂದ ಕಂಬದಲಿ ನೀ ಬಂದೆ॥1॥ ಚರಣಾಗ್ರದಲಿ ನದಿಯನು ಪೆತ್ತೆ। ದೀಕ್ಷ ಪರಶು ಪಿಡಿದು ಬಾಹಜರ ಕಿತ್ತೆ। ನೆರೆನಂಬಿದವಗೆ ಸ್ಥಿರ ಪಟ್ಟವನಿತ್ತೆ। ದೊಡ್ಡ ದುರುಳ ಕಾಳಿಂಗನ ಶಿರದಿ ನಿಂತೆ॥2॥ ಪತಿವ್ರತೆಯರ ಮಾನ ಭೇದನ। ಚತುರ ತುರಗವನೇರಿ ನಲಿವವನ। ಕ್ಷಿತಿಯೊಳು ಉತ್ತಮ ವಾದಿರಾಜನ। ಸ್ವಾಮಿ ಸತತ ರಕ್ಷಿಪ ಹಯವದನ॥3॥

ಶ್ರೀವಾಗೀಶಾಯ ನಮೋ ನಮಃ **ರಾಗ: ಕೇದಾರ-ಆದಿತಾಳ**

ಶ್ರೀವಾಗೀಶಾಯ ನಮೋ ನಮಃ। ಶ್ರೀ ಲಕ್ಷ್ಮೀ ಸಮೇತ ಸಕಲ ವಿದ್ಯಾಧರ ಸುರ ಸೇವಿತ॥ಪ॥ ವೇದರಕ್ಷಣ ಹಯಗ್ರೀವ ವದನ। ಸೇವಿತ ಚತುರಾನನ ವಿಶಾದ ಹರಣ॥ಅ.ಪ.॥ ಮಧುಕೈಟಭ ಸಂಹಾರಾಯ ಜ್ಞಾನ ಪ್ರದಾಯ। ಸಕಲವೇದಸಾರಾಯ। ಸಕಲ ಮಂತ್ರ ಶರೀರಾಯ। ಶಂಖಚಕ್ರಧರಾಯ। ವರಪುಸ್ತಕ ಅಕ್ಷಮಾಲಾ। ಹಯಗ್ರೀವ ರೂಪಾಯ। ಆದಿಮಧ್ಯಾಂತರ ಹಿತಾಯ ॥ಚರಣ॥

ಹಯಗ್ರೀವ ಹಯಗ್ರೀವ ಹಯಗ್ರೀವೇತಿಯೋ **ರಾಗ: ರೇವತಿ**

ಹಯಗ್ರೀವ ಹಯಗ್ರೀವ ಹಯಗ್ರೀವೇತಿಯೋ ವದೇತ್। ತಸ್ಯ ನಿಃಸರತೇ ವಾಣಿ ಜುಹ್ನು ಕನ್ಯಾ ಪ್ರವಾಹವತ್॥1॥
ಹಯಗ್ರೀವ ಹಯಗ್ರೀವ ಹಯಗ್ರೀವೇತಿ ವಾದಿನಮ್। ನರಂ ಮುಂಚಂತಿ ಪಾಪಾನಿ ದರಿದ್ರಮಿವ ಯೋಷಿತಃ॥2॥
ಹಯಗ್ರೀವ ಹಯಗ್ರೀವ ಹಯಗ್ರೀವೇತಿ ಯೋ ಧ್ವನಿಃ। ವಿಶೋಭತೇ ಚ ವೈಕುಂಠ ಕಾವಾಟೋದ್ಘಾಟನಧ್ವನಿಃ॥3॥
ಶ್ಲೋಕತ್ರಯಮಿದಂ ಪುಣ್ಯಂ ಹಯಗ್ರೀವ ಪದಾಂಕಿತಮ್। ವಾದಿರಾಜಯತಿ ಪ್ರೋಕ್ತಂ ಪಠತಾಂ ಸಂಪದಾಂ ಪದಮ್॥4॥

ಜ್ಞಾನಾನಂದಮಯಂ ದೇವಂ (ಶ್ರೀಹಯಗ್ರೀವ ಸ್ತೋತ್ರ) **ರಾಗ: ಆನಂದಭೈರವಿ**

ಜ್ಞಾನಾನಂದಮಯಂ ದೇವಂ ನಿರ್ಮಲಸ್ಫಟಿಕಾಕೃತಿಮ್। ಆಧಾರಂ ಸರ್ವವಿದ್ಯಾನಾಂ ಹಯಗ್ರೀವ ಮುಪಾಸ್ಮಹೇ॥1॥
ಸ್ವತಸ್ಸಿದ್ಧಂ ಶುದ್ಧ ಸ್ಫಟಿಕಮಣಿ ಭೂಭೃತ್ ಪ್ರತಿಭಟಂ। ಸುಧಾಸಧ್ರೀಚೀಭಿಃ ದ್ಯುತಿಭಿರವದಾತ ತ್ರಿಭುವನಮ್।
ಅನಂತೈಸ್ತ್ರಯ್ಯಂತೈರನುವಿಹಿತ ಹೇಷಾಹಲಹಲಂ। ಹತಾಶೇಷ ವದ್ಯಂ ಹಯವದನಮೀಡೀಮಹಿ ಮಹಃ॥2॥
ಸಮಾಹಾರಃ ಸಾಮ್ನಾಂ ಪ್ರತಿಪದ ಮೃಚಾಂ ಧಾಮ ಯಜುಷಾಂ ಲಯಃ ಪ್ರತ್ಯೂಹಾನಾಂ ಲಹರಿವಿತತಿರ್ಭೋಧ
ಜಲಧೇಃ। ಕಥಾದರ್ಪಕ್ಷುಭ್ಯತ್ ಕಥಕಕುಲ ಕೋಲಾಹಲಭವಂ। ಹರತ್ವಂತರ್ಧ್ವಾತಂ ಹಯವದನ ಹೇಷಹಲಹಲಃ॥3॥
ಪ್ರಾಚೀ ಸಂಧ್ಯಾ ಕಾಚಿದಂತರ್ನಿಶಾಯಾಃ ಪ್ರಜ್ಞಾದೃಷ್ಟೇರಂಜನ ಶ್ರೀರಪೂರ್ವಾ। ವಕ್ತ್ರೀ ವೇದಾನ್ ಭಾತು ಮೇ ವಾಜಿವಕ್ತ್ರಾ
ವಾಗೀಶಾಖ್ಯಾ ವಾಸುದೇವಸ್ಯ ಮೂರ್ತಿಃ॥4॥ ವಿಶುದ್ಧ ವಿಜ್ಞಾನ ಘನ ಸ್ವರೂಪಂ ವಿಜ್ಞಾನ ವಿಶ್ರಾಣನ ಬದ್ಧದೀಕ್ಷಂ।
ದಯಾನಿಧಿಂ ದೇಹಭೃತಾಂ ಶರಣ್ಯಂ। ದೇವಂ ಹಯಗ್ರೀವಮಹಂ ಪ್ರಪದ್ಯೇ॥5॥ ಅಪೌರುಷೇಯೈರಪಿ ವಾಕ್
ಪ್ರಪಂಚೈಃ ಅದ್ಯಾಪಿ ತೇ ಭೂತಿಮದೃಷ್ಟಪಾರಾಂ। ಸ್ತುವನ್ನಹಂ ಮುಗ್ಧ ಇತಿ ತ್ವಯೈವ ಕಾರುಣ್ಯತೋ ನಾಥ
ಕಟಾಕ್ಷಣೀಯಃ॥6॥ ದಾಕ್ಷಿಣ್ಯರಮ್ಯಾ ಗಿರಿಶಸ್ಯ ಮೂರ್ತಿಃ ದೇವೀ ಸರೋಜಾಸನ ಧರ್ಮಪತ್ನೀ। ವ್ಯಾಸಾದಯೋಽಪಿ
ವ್ಯಪದೇಶ್ಯವಾಚಃ ಸ್ಫುರಂತಿ ಸರ್ವೇ ತವ ಶಕ್ತಿಲೇಶೈಃ॥7॥ ಮಂದೋಽಭವಿಷ್ಯನ್ನಿಯತಂ ವಿರಿಂಚೋ ವಾಚಾಂ ನಿಧೇ
ವಂಚಿತ ಭಾಗಧೇಯಃ। ದೈತ್ಯಾಪನೀತಾನ್ ದಯಯೈವ ಭೂಯೋಽಪಿ ಅಧ್ಯಾಪಯಿಷ್ಯೋ ನಿಗಮಾನ್ನ
ಚೇತ್ತ್ವಮ್॥8॥ ವಿತರ್ಕಡೋಲಾಂ ವ್ಯವಧೂಯ ಸತ್ತ್ವೇ ಬೃಹಸ್ಪತಿಂ ವರ್ತಯಸೇ ಯತಸ್ತ್ವಂ। ತೇನೈವ ದೇವ
ತ್ರಿದಶೇಶ್ವರಾಣಾಂ ಅಸ್ಪೃಷ್ಟ ಡೋಲಾಯಿತಂ ಆಧಿರಾಜ್ಯಂ॥9॥ ಅಗ್ನೌ ಸಮಿದ್ಧಾರ್ಚಿಷಿ ಸಪ್ತತಂತೋಃ ಆತಸ್ಥಿವಾನ್
ಮಂತ್ರಮಯಂ ಶರೀರಂ। ಅಖಂಡ ಸಾರೈರ್ಹ ವಿಷಾಂ ಪ್ರದಾನೈಃ। ಅಪ್ಯಾಯನಂ ವ್ಯೋಮಸದಾಂ ವಿಧತ್ಸೇ॥10॥
ಯನ್ಮೂಲಮೀದೃಕ್ ಪ್ರತಿಭಾತಿ ತತ್ತ್ವಂ ಯಾ ಮೂಲಮಾಮ್ನಾಯ ಮಹಾದ್ರುಮಾಣಾಂ। ತತ್ತ್ವೇನ ಜಾನಂತಿ
ವಿಶುದ್ಧಸತ್ವಾಃ ತಾಮಕ್ಷ ರಾಮಕ್ಷರಮಾತೃಕಾಂ ತ್ವಾಂ॥11॥ ಅವ್ಯಾಕೃತಾತ್ ವ್ಯಾಕೃತವಾನಸಿ ತ್ವಂ ನಾಮಾನಿ ರೂಪಾಣಿ
ಚ ಯಾನಿ ಪೂರ್ವಂ। ಶಂಸಂತಿ ತೇಷಾಂ ಚರಮಾಂ ಪ್ರತಿಷ್ಠಾಂ। ವಾಗೀಶ್ವರ ತ್ವಾಂ ತ್ವದುಪಜ್ಞ ವಾಚಃ॥12॥ ಮುಗ್ಧೇಂದು
ನಿಷ್ಯಂದ ವಿಲೋಭನೀಯಾಂ। ಮೂರ್ತಿಂ ತವಾನಂದ ಸುಧಾ ಪ್ರಸೂತಿಮ್। ವಿಪಶ್ಚಿತಶ್ಚೇತಸಿ ಭಾವಯಂತೇ
ವೇಲಾಮುದಾರಾಮಿವ ದುಗ್ಧಸಿಂಧೋಃ॥13॥ ಮನೋಗತಂ ಪಶ್ಯತಿ ಯಃ ಸದಾ ತ್ವಾಂ ಮನೀಷಿಣಾಂ ಮಾನಸ
ರಾಜಹಂಸಮ್। ಸ್ವಯಂ ಪುರೋಭಾವ ವಿವಾದಭಾಜಃ ಕಿಂ ಕುರ್ವತೇ ತಸ್ಯ ಗಿರೋ ಯಥಾರ್ಹಮ್॥14॥ ಅಪಿ
ಕ್ಷಣಾರ್ಧಂ ಕಲಯಂತಿ ಯೇ ತ್ವಾಂ ಆಪ್ಲಾವಯಂತಂ ವಿಶದೈರ್ಮಯೂಖೈಃ। ವಾಚಾಂ ಪ್ರವಾಹೈರ ನಿವಾರಿತೈಸ್ತೇ
ಮಂದಾಕಿನೀಂ ಮಂದಯಿತುಂ ಕ್ಷಮಂತೇ॥15॥ ಸ್ವಾಮಿನ್ ಭವದ್ ಧ್ಯಾನ ಸುಧಾಭಿಷೇಕಾತ್ ವಹಂತಿ ಧನ್ಯಾಃ
ಪುಲಕಾನುಬಂಧಂ। ಅಲಕ್ಷಿತೇ ಕ್ವಾಪಿ ನಿರೂಢ ಮೂಲಂ ಅಂಗೇಷ್ವಿವಾನಂದಥು ಮಂಕುರಂತಮ್ ॥16॥ ಸ್ವಾಮಿನ್
ಪ್ರತೀಚಾ ಹೃದಯೇನ ಧನ್ಯಾಃ ತ್ವದ್‌ಧ್ಯಾನ ಚಂದ್ರೋದಯ ವರ್ಧಮಾನಮ್। ಅಮಾಂತ ಮಾನಂದ ಪಯೋಧೀಮಂತಃ
ಪಯೋಭಿರಕ್ಷ್ಣಾಂ ಪರಿವಾಹಯಂತಿ॥17॥ ಸ್ವೈರಾನು ಭಾವಾಃ ತ್ವದಧೀನ ಭಾವಾಃ ಸಮೃದ್ಧವೀರ್ಯಾಃ ತದ್ವನುಗ್ರಹೇಣ।
ವಿಪಶ್ಚಿತೋ ನಾಥ ತರಂತಿ ಮಾಯಾಂ ವೈಹಾರಿಕೀಂ ಮೋಹನ ಪಿಂಛಿಕಾ ತೇ॥18॥ ಪ್ರಾಜ್ನೈರ್ಮಿತಾನಾಂ ತಪಸಾಂ
ವಿಪಾಕಾಃ ಪ್ರತ್ಯಗ್ರ ನಿಃಶ್ರೇಯಸ ಸಂಪದೋ ಮೇ। ಸಮೇಧಿಷೀರನ್ ತವ ಪಾದಪದ್ಮೇ ಸಂಕಲ್ಪ ಚಿಂತಾಮಣೀಯಃ

ಪ್ರಣಾಮಾಃ।।19।। ವಿಲುಪ್ತ ಮೂರ್ಧನ್ಯ ಲಿಪಿಕ್ರಮಾಣಾಂ ಸುರೇಂದ್ರ ಚೂಡಾಪದ ಲಾಲಿತಾನಾಂ। ತ್ವದಂಘ್ರಿ ರಾಜೀವ ರಜಃ ಕಣಾನಾಂ ಭೂಯಾನ್ ಪ್ರಸಾದೋ ಮಯಿ ನಾಥ ಭೂಯಾತ್।।20।। ಪರಿಸ್ಫುರ ನ್ನೂಪುರ ಚಿತ್ರಭಾನುಪ್ರಕಾಶ ನಿರ್ಧೂತ ತಮೋನುಷಂಗಾಮ್। ಪದದ್ವಯೀಂ ತೇ ಪರಿ ಚಿನ್ಮಹೇ(ಂತಃ ಪ್ರಬೋಧ ರಾಜೀವ ವಿಭಾತ ಸಂಧ್ಯಾಮ್।।21।। ತ್ವತ್ಕಿಂಕ ರಾಲಂಕ ರಣೋಚಿತಾನಾಂ ತ್ವಯ್ಯೈವ ಕಲ್ಪಾಂತರ ಪಾಲಿತಾನಾಮ್। ಮಂಜುಪ್ರಣಾದಂ ಮಣಿನೂಪುರಂ ತೇ ಮಂಜೂಷಿಕಾಂ ವೇದಗಿರಾಂ ಪ್ರತೀಮಃ।।22।। ಸಂಚಿಂತಯಾಮಿ ಪ್ರತಿಭಾ ದಶಾಸ್ಥಾನ್ ಸಂಧುಕ್ಷಯಂತಂ ಸಮಯಪ್ರದೀಪಾನ್। ವಿಜ್ಞಾನ ಕಲ್ಪದ್ರುಮ ಪಲ್ಲವಾಭಂ ವ್ಯಾಖ್ಯಾನ ಮುದ್ರಾ ಮಧುರಂ ಕರಂ ತೇ।।23।। ಚಿತ್ತೇ ಕರೋಮಿ ಸ್ಫುರಿತಾಕ್ಷ ಮಾಲಂ ಸವ್ಯೇತರಂ ನಾಥ ಕರಂ ತ್ವದೀಯಮ್। ಜ್ಞಾನಾಮೃತೋದಂಚನ ಲಂಪಟಾನಾಂ (ಲಾಲಸಾನಾಂ) ಲೀಲಾಘಟೀ ಯಂತ್ರಮಿವಾಶ್ರಿತಾನಾಮ್।।24।। ಪ್ರಬೋಧ ಸಿಂದೋರರುಣೈಃ ಪ್ರಕಾಶೈಃ ಪ್ರವಾಳ ಸಂಘಾತಮಿವೋದ್ವಹಂತಮ್। ವಿಭಾವಯೇ ದೇವ ಸಪುಸ್ತಕಂ ತೇ ವಾಮಂ ಕರಂ ದಕ್ಷಿಣಮಾಶ್ರಿತಾನಾಮ್।।25।। ತಮಾಂಸಿ ಭಿತ್ವಾ ವಿಶದೈರ್ಮಯೂಖೈಃ ಸಂಪ್ರೀಣಯಂತಂ ವಿದುಷಶ್ಚಕೋರಾನ್। ನಿಶಾಮಯೇ ತ್ವಾಂ ನವಪುಂಡರೀಕೇ ಶರದ್ಘನೇ ಚಂದ್ರಮಿವ ಸ್ಫುರಂತಮ್।।26।। ದಿಶಂತು ಮೇ ದೇವ ಸದಾ ತ್ವದೀಯಾಃ ದಯಾ ತರಂಗಾನುಚರಾಃ ಕಟಾಕ್ಷಾಃ। ಶ್ರೋತ್ರೇಷು ಪುಂಸಾಮಮೃತಂ ಕ್ಷರಂತೀಂ ಸರಸ್ವತೀಂ ಸಂಶ್ರಿತ ಕಾಮಧೇನುಮ್।।27।। ವಿಶೇಷವಿತ್ ಪಾರಿಷದೇಷು ನಾಥ ವಿದಗ್ಧಗೋಷ್ಠೀ ಸಮರಾಂಗಣೇಷು। ಜಿಗೀಷತೋ ಮೇ ಕವಿತಾರ್ಕಿಕೇನ್ದ್ರಾನ್ ಜಿಹ್ವಾಗ್ರ ಸಿಂಹಾಸನಮಭ್ಯು ಪೇಯಾಃ।।28।। ತ್ವಾಂ ಚಿಂತಯನ್ ತ್ವನ್ಮಯ ತಾಂ ಪ್ರಪನ್ನಃ ತ್ವಾಂ ಉದ್ಗೃಣನ್ ಶಬ್ದಮಯೇನ ಧಾಮ್ನಾ। ಸ್ವಾಮಿನ್ ಸಮಾಜೇಷು ಸಮೇಧಿ ಷೀಯ ಸ್ವಚ್ಛಂದ ವಾದಾಹವ ಬದ್ಧಶೂರಃ।।29।। ನಾನಾವಿಧಾನಾಂ ಅಗತಿಃ ಕಲಾನಾಂ ನ ಚಾಪಿ ತೀರ್ಥೇಷು ಕೃತಾವತಾರಃ। ಧ್ರುವಂ ತವಾನಾಥಪರಿಗ್ರಹಾಯಾಃ ನವಂನವಂ ಪಾತ್ರ ಮಹಂ ದಯಾಯಾಃ।।30।। ಅಕಂಪನೀಯಾನ್ಯಪ ನೀತಿ ಭೇದೈಃ ಅಲಂಕೃಷೀರನ್ ಹೃದಯಂ ಮದೀಯ ಮ್। ಶಂಕಾಕಳಂಕಾಪಗ ಮೋಜ್ವಲಾನಿ ತತ್ತ್ವಾನಿ ಸಮ್ಯಂಚಿ ತವ ಪ್ರಸಾದಾತ್।।31।। ವ್ಯಾಖ್ಯಾ ಮುದ್ರಾಂ ಕರಸರಸಿಜೈಃ ಪುಸ್ತಕಂ ಶಂಖಚಕ್ರೇ ಭಿಭ್ರದ್ಭಿನ್ನ ಸ್ಫಟಿಕರುಚಿರೇ ಪುಂಡರೀಕೇ ನಿಷಣ್ಣಃ। ಅಮ್ಲಾನ ಶ್ರೀರಮೃತ ವಿಶದೈರಂಶುಭಿಃ ಪ್ಲಾವಯನ್ಮಾಮ್ ಅವಿರ್ಭೂಯಾದನ ಘಮಹಿಮಾ ಮಾನಸೇ ವಾಗಧೀಶಃ।।32।। ವಾಗರ್ಥ ಸಿದ್ಧಿಹೇತೋಃ ಪಠತ ಹಯಗ್ರೀವ ಸಂಸ್ತುತಿಂ ಭಕ್ತ್ಯಾ। ಕವಿತಾರ್ಕಿಕ ಕೇಸರಿಣಾ ವೇಂಕಟನಾಥೇನ ವಿರಚಿತಾಮೇತಾಮ್।।33।। ಅಭಂ ಗುರು ಕಲಾದಾನ ಸ್ಥೂಲಲಕ್ಷ ತ್ವಮೀಯುಷೇ। ತುಂಗಾಯ ಮಹತೇ ತಸ್ಮೈ ತುರಂಗಾಯ ಮುಖೇ ನಮಃ।।34।।

ಆವ ರೀತಿಯಿಂದ ನೀ ಎನ್ನ ಸಲಹುವಿ — ರಾಗ: ರೀತಿಗೌಳ

ಆವ ರೀತಿಯಿಂದ ನೀ ಎನ್ನ ಸಲಹುವಿ। ಶ್ರೀ ವಿಭು ಹಯವದನ।।ಪ।। ಈ ವಿಧ ಭವದೋಳ್ ಇಷ್ಟು ಬವಣೆ ಪಟ್ಟೆ। ತಾವರೆದಳ ನಯನಾ। ಹಯವದನ।।ಅ.ಪ।। ಅಂಗನೆಯರಲ್ಲಿ ಅಧಿಕ ಮೋಹದಿಂದ। ಅಂಗ ಶೃಂಗಾರವ ಮಾಡಿ। ಮಂಗಳಾಂಗನೆ ನಿನ್ನ ಮಹಿಮೆಯ ಪೊಗಳದೆ। ಭಂಗಕ್ಕೆ ಗುರಿಯಾದೆನೋ। ಹಯವದನ।।1।। ಕಾಮನ ಬಾಧೆಯ ತಾಳಲಾರದೆ ಕಂಡ। ಕಾಮಿನಿಯರನೆ ಕೂಡಿ। ನೇಮ ನಿಷ್ಠೆಯಿಂದ ನಿನ್ನನು ಭಜಿಸದೆ। ಪಾಮರ ನಾನಾದೆನೋ। ಹಯವದನ।।2।। ಹೀನ ಗುಣಗಳೆಲ್ಲ ಹಯಮುಖದೇವನೆ। ವರ್ಜಿಸುವಂತೆ ಮಾಡೋ। ಜ್ಞಾನಿಗಳರಸನೆ ದಯವಿತ್ತು ನಿನ್ನನ್ನೇ। ಧ್ಯಾನಿಸುವಂತೆ ಮಾಡೋ। ಹಯವದನ।।3।।

ವಾದಿರಾಜರ ಭಜಿಸಿರೋ — ರಾಗ: ಮೋಹನ

ವಾದಿರಾಜರ ಭಜಿಸಿರೋ।।ಪ।। ವಾದಿರಾಜರ ಭಜಿಸಿ ಮೋದಮಪ್ಪುದು ನಿಮಗೆ। ಮೋದಮುನಿದರ್ಶನ ಸುಬೋಧವಾಗುವುದಹಿತ ಬಾಧೆ ತಪ್ಪಿಸಿ ವೇದವಾದೋದಿ ತನ ಪದ್ಮ ಪಾದಯುಗ್ಮವ ತೋರುವ।।ಅ.ಪ.।। ಪೂವಿನಾಕರದ ದ್ವಿಜದೇವ ರಾಮನು ಗೌರಿ ದೇವಿಯುದರದಿ ಶಾರ್ವರೀವತ್ಸರದಿ ಮೌನಿ। ದೇವ ವಾಗೀಶರ ಶುಭಾವಹಾಣತಿಯಂತೆ ಭೂವರಾಹಾಖ್ಯದಿ ಜನ್ಮಿ ಸಿ ಕೋವಿದೋತ್ತಮ ಹಯಗ್ರೀವ ಪದಸಂಸಕ್ತ ಭಾವ ಭವಿಷ್ಯದ್ವಾಯು

ಶ್ರೀವಾದಿರಾಜಯತಿ ಭಾವುಕಾಬ್ಜಮಲ ವಿಭಾವಸೋದ್ದಾಮಕವಿ ಶ್ರೀವ್ಯಾಸರಲಿ ಓದಿದ॥1॥ ಸೋದೆಯೊಳು ಶ್ರೀಮದ್ವ ವೇದಪೀಠವನೇರಿ ಸಾಧುಸಂಸೇವ್ಯ ಪ್ರತಿವಾದಿನಿಗ್ರಹಶೀಲ ಈ ಧರಾವಲಯ ಮರುನಾದಗುಡೆ ಕೀರ್ತಿಯ ಮಹೋದಧಿಯ ಘೋಷದಿಂದ ಬಾದರಾಯಣರ ಸಿರಿಪಾದದಲಿ ಪಂಚಮೋ ವೇದಕ್ಕೆ ವ್ಯಾಖ್ಯಾನವಾದ ಲಕ್ಷಾಭರಣ ಮೋದದಿಂ ದರ್ಪಿಸಿ ವಿದ್ಯಾಧಿತೇವತೆಯಂತೆ ವಾದದಿಗ್ವಿಜಯ ಮಾಡ್ದ॥2॥ ಕ್ಷೇತ್ರವೆಲ್ಲವ ತಿರುಗಿ ಸೂತ್ರಾಖ್ಯಸಮಯ ಸರ್ವತ್ರ ಡಂಗುರ ಹೊಯ್ಸಿ ಪಾತ್ರರಾದವರ ಪರಮಾರ್ಥ ಸಾಧನೆಗೆ ಗುರ್ವರ್ಥದೀಪಿಕಮುಖ ಪವಿತ್ರಸೋಳಗ್ರಂಥವ ತತ್ರಾಪಿ ಕರ್ನಾಟಕ ಭ್ರಾತ್ರರಿಗೆ ವೇದಾಂತ ಸೂತ್ರಾರ್ಥ ತಿಳಿಸಿ ಕೃತಾರ್ಥರನುಮಾಡಲತ್ಯರ್ಥಪ್ರಸಾದ ಕರವರ್ಷಿಸುವ ತೆರದಿ ಹರಿಕೀರ್ತನೆಯ ಮಾಡಿ ಮೆರೆದ॥3॥ ವಾಜಿಮುಖನಂಘ್ರಿ ದ್ವಯರಾಜೀವಮಧುರಾಜ ಸೋಜಿಗಾಮಲಚರ್ಯ ಭೋಜ ಕುಲ ಗುರುರಾಜ ರಾಜಿಸುವ ಶರಣಸುರಭೂಜ ಸಕಲ ಸುಕಲಾಭ್ರಾಜಿತ ಯಶಾದಿರಾಜ ಪೂಜಿತ ಮಹಾ ಭೂತರಾಜ ಭೋ ಪರಿವ್ರಾಜ ಈ ಜಗತ್ರಯಭಾರ ಯೋಜನನೆ ಋಜುರಾಜ ಬೀಜಮಂತ್ರಾರ್ಥ ನಿರ್ವ್ಯಾಜಭಕ್ತಿಲಿ ಮುಕ್ತಿ ಭಾಜನೆನಿಸೆನ್ನ ಸಹಜ ॥4॥ ಭೋಗಪುರಿರಾಜನ ಕುರೋಗವನು ಕಳೆದು ನೀ ಭೋಗಿಭಯಬಿಡಿಸಿಲಿಯ ಯೋಗ ಕ್ಷೇಮವವಮಾಡಿ ಯೋಗಸಾಮರ್ಥ್ಯದಿಂದ ಘಟನಾಘಟನಗಳ ಆಗುಮಾಡುತ ಸರ್ವದಾ ಆಗದವ ಗರ ಬಡಿಸೆ ಲಾಘವದಲರಗಿಸಿದೆ ಈಗ ಸಮಯ ಲ್ಲೆಂದು ಖೇಗದೂತರನಟ್ಟಿ ಭೂಗಗನಪಾತಾಳಕಾಗರ ತ್ರಿವಿಕ್ರಮನ ದೇಗುಲದೊಳಿರಿಸಿ ಮೆರೆದೇ॥5॥ ಕೊಚ್ಚಿ ಕೇರಳ ಚೋಳ ಕಚ್ಛಕ ಕರ್ನಾಟಕ ಪುರಿ ಮಚ್ಛಲೀ ಗಯ ಕಾಶಿ ಉಚ್ಛ ಬದಲೀ ಸೇತು ಸ್ವೇಚ್ಛಾಯಟನ ದಿಂದುಚ್ಛ್ರಾಯರಾಗಿ ಬಹುಮೆಚ್ಚು ಕಾಣಿಕೆ ಪಡೆಯುತಾ ಸಚ್ಛಾಸ್ತ್ರಪ್ರಣವ ಮಂತ್ರೋಚ್ಛಾರಣೆ ಯೊಳಖಿಳ ತುಚ್ಛರನು ಸದೆಬಡಿದು ಸಚ್ಚರಿತ್ರರ ಮಾಡಿ ಅಚ್ಚಸುಖ ತೀರ್ಥಮತದ್ವೆಚ್ಛಾಳಿಕೆಯ ಮೆರೆಸಿ ಪ್ರಚ್ಛನ ಕಲಿಯಕೊಂದು॥6॥ ಉಡುಪಿಯಲಿ ಪರ್ಯಾಯ ವೇರ್ಪಡಿಸಿ ದಿಗ್ಸಂಚಾರ ನಡೆವವೊಲು ಸಚ್ಛಿಷ್ಯಗಡಣವನು ನಿರ್ಮಿಸಿ ಕೊಂಡಡೆ ಹಾಯ್ದು ಕಷ್ಟಗಳ ಹುಡಿ ಮಾಡಿ ಶ್ರೀಕೃಷ್ಣನಡಿದಾವರೆ ಗಳಲ್ಲೀ ಬಡಗು ಮೂಡಲು ತೆಂಕ ಪಡುವಲಾಸ್ಯದ ಕಪ್ಪ ಕಡಗೋಲುಕರನ ಮೆಲ್ಲಡಿಯಸೇವೆಗೆ ನಿತ್ಯ ಸಡಿಲವಾಗದ ಸಿಸ್ತಿನೊಡನೆ ಸಂಸ್ಥಾಪಿಸಿದ ಪೊಡವಿಜನ ಪೊಗಳುತಿರಲು॥7॥ ಹರಿಕಥಾಮೃತಲಹರಿ ಎರಡು ದಡಮೀರ್ದುದೋ ಪರಿಪರಿ ಪುರಾಣೋಕ್ತಿ ಕರಣಾನುಭವ ವಾಯ್ತೋ ಸರುವೋಪ ನಿಷದರ್ಥ ಪುರುಷಾಕೃತಿಯ ತಾಳ್ದು ನೆರೆಮಾರ್ಗ ತೋರುತಿಹುದೋ ಅರರೆ ಬ್ರಹ್ಮಜ್ಞಾನ ಗುರುವಾಗಿ ಬಂದಿಹುದೋ ಸರುವಜ್ಞ ತೀರ್ಥಾರ್ಯರ ಪರಾವತಾರವೋ ಅರಿಯಲರಿದೆಂದಖಿಳ ಧರಣೀಸುರರಚ್ಚರಿಯ ಶರಧಿಯಳ ಗೋಲಾಡ್ದರು॥8॥ ಪೂರ್ವೋಕ್ತ ಮಹಿಮೆ ನೂರಾರುವರ್ಷವು ತೋರಿ ಶಾರ್ವರೀ ಫಾಲ್ಗುಣದ ಪರಮೂರು ಸೋದೆಯಲಿ ಸರ್ವಜನ ಸ್ತುತಿಸುತಿರೆ ಸರ್ವಲೋಕಶರಣ್ಯ ಗರ್ಪಿಸಿದನ್ನೆ ದೇಹವ ಊರ್ವಿಲುದಯದಿ ಭಕ್ತಿ ಪೂರ್ವಕೀ ಪದ ಪಠಿಸೆ ದುರ್ವಿಭಾವ್ಯನು ತಂದೆ ವೆಂಕಟೇಶ ವಿಠ್ಠಲನು ಸರ್ವಾರ್ಥಪ್ರದನಾಗಿ ನಿರ್ವಾಹ ಮಾಡುವನು ಉರ್ವ ಭವಬಂಧದಿಂದ॥9॥

ದಯವಾಗೋ ದಯವಾಗೋ

ರಾಗ: ಪೂರ್ವಿ- ಆದಿತಾಳ

ದಯವಾಗೋ ದಯವಾಗೋ ಹಯಮುಖ ಭಯಕೃದ್ಭಯನಾಶನನೀ॥ಪ॥ ದ್ರೌಪದಿ ಮೊರೆಕೇಳ್ದಾಪದ್ಬಾಂದವ-ನೀಪೊರೆ ಎಮ್ಮ ರಮಾಪತೆ ನಿರುತ ॥1॥ ಖರಮುಖನರಕಾದ್ಯರ ಸಂಹರಿಸಿದ-ಪರಮಪುರುಷ ಗಹ್ವರಹರನರಹರಿ ॥2॥ ಶತ್ರುತಾಪನ ಜಗತ್ರಯವ್ಯಾಪ್ತಪ-ವಿತ್ರವಾಣಿ ಸರ್ವತ್ರದಿ ಎಮಗೇ ॥3॥ ಎಷ್ಟೆಂದುಸುರಲಿ ದುಷ್ಟಜನರು ಬಲು-ಕಷ್ಟ ಬಡಿಪ ಬಗೆ ಜಿಷ್ಣು ಸಾರಥೇ ॥4॥ ಗೋ ಭೂಸುರರಿಗೆ ಭೂಭುಜರಭಯಪ-ರಾಭವಗೈವುದು ಶ್ರೀಭೂರಮಣಾ ॥5॥ ಅಪ್ರಮೇಯ ನೀ ಕ್ಷಿಪ್ರದಿ ಒಲಿದು ಜಯಪ್ರದನಾಗು ವಸುಪ್ರದ ವರದಾ ॥6॥ ಯಾತಕೆ ಎಮ್ಮನು ಭೀತಿ ಗೊಳಿಪೆ ಪುರು-ಹೂತನುತ ಜಗನ್ನಾಥ ವಿಠಲಾ ॥7॥

ಜಯಪ್ರದನು ಜಗಕೆ **ರಾಗ:-ಅಸಾವೇರಿ-ಝಂಪೆತಾಳ**

ಜಯಪ್ರದನು ಜಗಕೆ ಶ್ರೀ ಹಯವದನ ಮೂರ್ತಿಯಿರೆ। ಭಯವ್ಯಾಕೆ ಭಕ್ತ ಜನಕೆ ।।ಪ।। ನಯದಿಂದ ಗೆಲಿಸುವನು ನಾಲ್ದಿಕ್ಕಿನೊಳಗಿದ್ದು। ಮಾಯವಾದಿಗಳನ್ನು ।।ಅ.ಪ।। ಆದಿಯಲಿ ಬ್ರಹ್ಮನಿಗೆ ಭೀತಿಯನು ಬಿಡಿಸಿದ। ನಾದಮಯನಾದ ದೇವ ಭೇದವಿಲ್ಲದೆ ಎಲ್ಲಾ। ಭೇದವೆಂಬುವರನ್ನು। ಕಾದ ಬಾಣಲೆಗೆ ತಟ್ಟಿ ಮೋದಿಸಿ ಕೊಲುವ।।1।। ಉದಯದಲಿ ಎದ್ದು ನರ ಸದಮಲಾತ್ಮಕನಾಗಿ। ಹೃದಯದೊಳಗೆ ಹರಿಯ ತಂದು ಮುಂದು। ಸದಯನು ನೀನೆನುತ ಸದ್ವೃತ್ತಿ ಉದಯನು ನೀನೆನುತ। ದಧಿ ಚೋರ ಕೃಷ್ಣನ್ನ ಮುದದಿ ಭಜಿಪರಿಗೆ ।।2 ।। ದುಷ್ಟಮಲ್ಲರ ಎದೆ ಮೆಟ್ಟಿ ಮೆರೆವ ಜಗ। ಜಟ್ಟಿ ಮಧ್ವರಾಯರ ಮುಟ್ಟಿ ಭಜಿಸುತ ನಿತ್ಯ। ಇಷ್ಟವನು ಬೇಡಿದರೆ ಕಷ್ಟಗಳನು ಕಳೆವ ಉ। ತ್ಕೃಷ್ಟ ಹಯವದನ ದೊರೆ।।3।।

ಹಯವದನಾ ಪಾಲಿಸೋ **ರಾಗ: ಅಭೋಗಿ**

ಹಯವದನಾ ಪಾಲಿಸೋ। ಹಯದೈತ್ಯ ನಿಧನಾ।।ಪ।। ಭಯಕೃತು ಭಯಹರ। ದಯದೃಶ ತೋರಯ್ಯ ।।ಅ.ಪ.।। ಅಜ ಜನಕನೆ ಹರಿ। ದ್ವಿಜವರ ವಂದ್ಯನೆ। ನಿಜಪದ ಹೃದಯಾಂ। ಬುಜದಲಿ ತೋರುತ।।1।। ವಾದಿಭ ಮೃಗರಾಜ। ವರ ವಾದಿರಾಜರ ಕರ। ಆದರದಲಿ ಪಿಡಿ। ದಾದರಿಸಿದನೇ।।2।। ಅರಿದರ ವರಗ್ರಂಥ। ಜಪಸರ ಧರ। ವರ ಉರಗಾತಪ। ಧರಿಸಿಹೆ ಶಿರಿಯನು।।3 ।। ಭಾವಕೆ ಒಲಿವನೆ। ಭಾವದೊಳಗೆ ನಿಲ್ಲು। ಗೋವಿದಾಂಪತಿ ಗುರು। ಗೋವಿಂದ ವಿಠಲಾ।।4।।

ಹಯವದನ ಈ ಭವಭಯ **ರಾಗ: ಸಿಂಧುಭೈರವಿ**

ಹಯವದನ ಈ ಭವಭಯ ತಾರಿಸೋ। ಸುಜ್ಞಾನ ಪ್ರೇರಿಸೋ।।ಪ।। ಮಾಯದ ಮೃಗದ ಬಾಯಿಗೀಡಾದೆ। ಕಾಯುವ ದಾತರ ಕಾಣೆ ಹರಿಯೇ। ನಾಯಿಯ ತೆರದಿ ಮಬ್ಬಿಲಿ ಮೆರೆದೆ। ದೋಷವ ನೋಡದೆ ಕಾಯೋ।।1 ।। ಬಂದೆನು ಭೂಸುರನಾಗುತ ಜಗದಿ। ಪೊಂದದೆ ತವಪಾದಹರಿಯೇ। ನಂದನ ಸುತ ನೀ ಬಂಧನ ಬಿಡಿಸೋ। ಕಂದನ ಮರೆಯುವರೇನೋ।।2 ।। ಮನ್ನಿಸೊ ಶಾಮಸುಂದರ ವಿಠಲ। ಎನ್ನಯ ಭಾರ ನಿನಗೊಪ್ಪಿಸಿದೆನೊ ಹರಿಯೇ। ಇನ್ನು ತೋರಿಸು ನಿನ್ನಯ ಚರಣ। ಕರುಣಾಭರಣ ದೇವಾ।।3 ।।

ಗುರುಭಕ್ತಿ ಬೇಕು (ಉಗಾಭೋಗ) **ರಾಗ: ರೇವತಿ**

ಗುರುಭಕ್ತಿ ಬೇಕು। ಹಿರಿಯರ ಕರುಣ ಬೇಕು। ಹರಿಕಥೆಗಳ ನಿತ್ಯ ಕೇಳುತಿರಬೇಕು। ವಿರಕುತಿ ಬೇಕು। ವಿಷ್ಣುವಿನಾರಾಧನೆ ಬೇಕು। ವರ ಮಂತ್ರ ಜಪಬೇಕು। ತಪಬೇಕು ಪರಗತಿಗೆ। ಸಾರಿ ಹಯವದನರ ಪರಮಾನುಗ್ರಹಬೇಕು। ವಿಷಯ ನಿಗ್ರಹ ಬೇಕು।।

ಆವ ಕಡೆಯಿಂದ ಬಂದೆ **ರಾಗ: ಅಭೇರಿ**

ಆವ ಕಡೆಯಿಂದ ಬಂದೆ ವಾಜಿವದನನೆ। ಭಾವಿಸುತ ವಾದಿರಾಜ ಮುನಿಯ ಕಾಣುತ।।ಪ।। ನೇವರಿಸಿ ಮೈಯ ತೆಡವಿ ನೇಹದಿಂದಲಿ। ಮೇಲು ನೈವೇದ್ಯವನ್ನು ಇತ್ತು ಭಜಿಸುವೆ ।।ಅ.ಪ.।। ಭಕುತಿ ಕಡಲೆ ಜ್ಞಾನ ವೈರಾಗ್ಯ ಬೆಲ್ಲದ। ಮುಕುತಿ ಆನಂದ ಸುಖ ಕ್ಷೀರ ಲಡ್ಡಿಗೆ। ಯುಕುತಿ ಧ್ಯಾನಕೊಟ್ಟು ನೀನು ಎಲ್ಲ ಮಾತಲಿ। ಶಕುತಿ ಸಂತೋಷ ಮಹಿಮೆ ತೋರ ಬಂದೆಯ ।।1।। ಹೆರ್ತ ತುಪ್ಪ ಸಕ್ಕರೆಯ ಮಾಡಿ ಮುದ್ದೆಯ। ತುತ್ತು ಮಾಡಿ ಕೊಡಲು ಅದನು ಮೆಲುತ ಮೆಚ್ಚುತ। ಅತ್ಯಂತ ಸಂತೋಷ ನೀನು ಆಟ ತೋರುತ। ಭೃತ್ಯ ವಾದಿರಾಜ ಮುನಿಯ ಸಲಹ ಬಂದೆಯ ।।2।। ಫಲವ ಕೊಟ್ಟು ರಕ್ಷಿಸಿದಿ ವಾಜಿ ವದನನೆ। ನಿಲುವೊ ಜ್ಞಾನ ಭಕ್ತಿಯನ್ನು ನೀಡ ಬಂದೆಯ। ಸುಲಭ ಸುಮುಖ ಸುಪ್ರಸನ್ನ ಹಯವದನನೆ। ಚೆಲುವ ಚಿನ್ಮಯಮೂರ್ತಿ ನಮ್ಮ ಸಲಹ ಬಂದೆಯ।।3।।

ವೇದವ ತಂದು ವಿಧಿಗೀವಂದೇ **ರಾಗ: ಮಧ್ಯಮಾವತಿ**

ವೇದವ ತಂದು ವಿಧಿಗೀವಂದೇ। ನೀ। ಸಾಧು ಜನರ ಸಲಹಲಿ ಬಂದೆ ।।ಪ।। ಮೋದದಿಂದೆಮ್ಮ ಮನದಿ ನಿಂದೇ ನೀ। ಬಾಧಿಪ ದುರಿತತಿಯ ಕೊಂದೆ।।ಅ.ಪ।। ಸಕಲಸುರರಿಗೆ ಶಿರೋರನ್ನ ನೀ। ಅಕಳಂಕಾಶ್ರಿತ ಜನಮಾನ್ಯ। ನಿಖಿಲ ನಿಗಮ ನಿಕರದಿ ವರ್ಣ್ಯ ನಿನ್ನ। ಕರುಣಾಕಟಾಕ್ಷದಿ ನೋಡೆನ್ನ।।1।। ಕೈವಲ್ಯ ಪದವಿಯ ಕೊಡಬಲ್ಲ ನಿನ್ನ। ಸೇವಿಪ ಸುಜನರಿಗೆಣೆಯಿಲ್ಲ। ಭಾವಜಕೋಟಿಯಿಂದತಿ ಚೆಲ್ವ ನೀಲ। ಶ್ರೀ ವನಿತೆಗೆ ಸಿಲಕುವನಲ್ಲ।।2।। ಹಯವದನ ಹೃದಯ ಸದನ। ಜಯ ಶಶಿವರ್ಣ ಜಗತಿಪೂರ್ಣ। ಭಯಹರ ಭಾಸುರ ಸಿರಿಚರಣ ನಿನ್ನ। ದಯಪಾತ್ರಾನುದ್ಧರಿಸೆನ್ನ।।3।।

ನಾರಾಯಣ ನಾರಾಯಣ **ರಾಗ: ಮೋಹನ-ಆದಿತಾಳ**

ನಾರಾಯಣ ನಾರಾಯಣ ನಾರಾಯಣ ನಾರಾಯಣ। ನಾರಾಯಣ ಲಕ್ಷುಮಿ ಅರಸನೆ।।ಪ।। ನಾರಾಯಣ ಲಕ್ಷುಮಿ ಅರಸನೆ ಹಯವದನ। ಸ್ವಾಮಿ ನೀ ಒಲಿದು ದಯವಾಗು।।ಅ.ಪ.।। ಕಾಮನೆಂಬ ಕೊಂಡ ಕ್ರೋಧವೆಂಬಕನ್ನಡಿ। ಲೋಭ ಮೋಹಗಳನುವಾದೋ। ಲೋಭಮೋಹಗಳನುವಾದೋ ಹಯವದನ। ಸ್ವಾಮಿ ನೀ ಒಲಿದು ದಯವಾಗು।।1।। ಮನುಗಳ ಕಾಲದಲಿ ಜಲದೊಳಗವತರಿಸಿ। ಜಗವೇಳು ಧರೆಯ ನೆಗಹಿದೆ। ಜಗವೇಳು ಧರೆಯ ನೆಗಹಿದೆ ಹಯವದನ। ಮತ್ಸ್ಯಾವತಾರ ದಯವಾಗು।।2 ।। ಕೂರ್ಮಾವತಾರದಿ ಭೂಮಿಯ ನೆಗಹಿದೆ ಕೂಡೆಸಜ್ಜನರ ಸಲಹಿದೆ। ಕೂಡೆ ಸಜ್ಜನರ ಸಲಹಿದೆ ಹಯವದನ। ಕೂರ್ಮಾವತಾರ ದಯವಾಗು।।3।। ವರಹಾವತಾರದಲಿ ದುರುಳ ದಾನವಗಂಜಿ। ಕೋರೆ ದಾಡಿಯಲಿ ನೆಗಹಿದೆ। ಕೋರೆದಾಡಿಯಲಿ ನೆಗಹಿದೆ ಹಯವದನ। ವರಹಾವತಾರ ದಯವಾಗು।।4।। ಸೊಕ್ಕಿದ ಅಸುರನ ಕರುಳ ಕುಕ್ಕಿಮಾಲೆಯಮಾಡಿ। ಭಕ್ತನಿಗಭಯ ಸಲಿಸಿದೆ। ಭಕ್ತನಿಗಭಯ ಸಲಿಸಿದೆ ಹಯವದನ। ಅಪ್ಪ ನರಸಿಂಹ ದಯವಾಗು।।5।। ವಾಮನನಾಗಿ ನೀ ಭೂಮಿ ದಾನವ ಬೇಡಿ। ಭೂಮಿ ಪಾದದಲಿ ಅಳೆದೆಯೋ। ಭೂಮಿ ಪಾದದಲಿ ಅಳೆದೆಯೋ ಹಯವದನ। ವಾಮನಾವತಾರ ದಯವಾಗು।।6।। ಹೆತ್ತವಳ ಶಿರ ಕಡಿದು ಕ್ಷತ್ರಿಯ ಕುಲ ಸವರಿ। ಮತ್ತೆ ಕೊಡಲಿಯ ಪಿಡಿದೆಯೊ। ಮತ್ತೆ ಕೊಡಲಿಯ ಪಿಡಿದೆಯೊ ಹಯವದನ। ಅಪ್ಪ ಭಾರ್ಗವನೆ ದಯವಾಗು।।7।। ಸೀತೆಗೋಸ್ಕರವಾಗಿ ಸೇತುವೆ ಕಟ್ಟಿಸಿದೆ। ಪಾತಕಿ ರಾವಣನ ಮಡುಹಿದೆ। ಪಾತಕಿ ರಾವಣನ ಮಡುಹಿದೆ ಹಯವದನ। ಖ್ಯಾತ ರಘುನಾಥ ದಯವಾಗು।।8।। ಕೃಷ್ಣವತಾರದಲಿ ದುಷ್ಟ ಕಂಸನ ಕೊಂದೆ। ಹೆತ್ತವಳ ಬಂಧನ ಬಿಡಿಸಿದೆ। ಹೆತ್ತವಳ ಬಂಧನ ಬಿಡಿಸಿದೆ ಹಯವದನ। ಕೃಷ್ಣಾವತಾರ ದಯವಾಗು।।9 ।। ಉತ್ತಮ ಸತಿಯರ ಹೆಚ್ಚಿನ ವ್ರತ ಸವರಿ। ಮತ್ತೆ ಹಯವೇರಿ ಮೆರೆದೆಯೋ। ಮತ್ತೆ ಹಯವೇರಿ ಮೆರೆದೆಯೊ ಹಯವದನ। ಉತ್ತಮ ಬೌದ್ಧ ಕಲ್ಕಿದಯವಾಗು।।10।। ಅಂಗಜನಯ್ಯನೆ ಮಂಗಳ ಮಹಿಮನೆ। ಗಂಗೆಯ ಪೆತ್ತ ಗರುವನೆ। ಗಂಗೆಯ ಪೆತ್ತ ಗರುವನೆ ಹಯವದನ। ಮಂಗಳ ಮಹಿಮ ದಯವಾಗು।।11।।

ನೀನೇ ದಯಾಪರನೊ **ರಾಗ: ಹಿಂದೋಳ**

ನೀನೇ ದಯಾಪರನೊ ನಿನ್ನವರ ಸಾಧನವೊ।।ಪ।। ಮುದ್ದು ಹಯವದನ ಸುಖಸದನ ಪೇಳಿದನ।।ಅ.ಪ.।। ಮದಕರಿಯು ಸರಸಿಯೊಳು ಮಕರಿಬಾಧೆಗೆ ಸಿಲುಕಿ। ಪದುಮೇಶ ಪದುಮಾಕ್ಷ ಪದುಮನಾಭ। ಪದುಮ ಸಂಭವನಯ್ಯ ಪಾಹಿಪಾಹಿ ಎನಲು। ಒದಗಿ ಪಾಲಿಸಿದೆ ತವ ದಯವೊಂದೆ ಸಾಧನವು।।1।। ಅಂತ್ಯಜಳ ಸಹವಾಸದಿ ವಿಪ್ರವರನೊಬ್ಬ। ಸಂತೋಷದಿಂದ ಬಹುಕಾಲ ಕಳೆದು। ಅಂತ್ಯಕಾಲಕೆ ತನ್ನ ಮಗನ ಕರೆಯಲು ಕಾಯ್ದೆ। ಕಂತುಜನಕ ನಿನ್ನ ದಯವೊಂದೆ ಸಾಧನವು।।2 ।। ಅವರವರ ಯೋಗ್ಯತೆಯನರಿತು ಪ್ರೇರಕನಾಗಿ। ಅವರಿಂದ ನುಡಿಸಿ ಅವರ ನುಡಿಗಳಿಗೆ ಹಿಗ್ಗಿ। ಅವರಿಗೊಲಿದೆ ನಮ್ಮ ಪುರಂದರವಿಠಲ। ಅವನೀಶನೆ ನಿನ್ನ ದಯವೊಂದೆ ಸಾಧನವು।।3 ।।

ದಯಮಾಡಿ ಸಲಹಯ್ಯ **ರಾಗ: ಷಣ್ಮುಖಪ್ರಿಯ**

ದಯಮಾಡಿ ಸಲಹಯ್ಯ ಭಯನಿವಾರಣನೇ। ಹಯವದನ ನಿನ್ನ ಚರಣ ನಂಬಿದೆನೊ ಜೀಯ ।।ಪ।। ಕ್ಷಣಕ್ಷಣಕೆ ನಾ

ಮಾಡಿದಂಥ ಪಾಪಂಗಳನೂ। ಎಣಿಸಲಳವಲ್ಲ ಅಷ್ಟಿಷ್ಟುಯೆಂದು। ಫಣಿಶಾಯಿ ನೀನೆನ್ನ ಅವಗುಣಗಳೆಣಿಸದೆ। ನೆನಹಿನಾತುರಕೊಟ್ಟು ದಾಸನೆಂದೆನಿಸಯ್ಯ।।1।। ಕಂಡಕಂಡ ಕಡೆಗೆ ಪೋಪ ಚಂಚಲ ಮನವು। ಪಿಂಡ ತಿಂಬಲ್ಲಿ ಬಹುನಿಷ್ಠತಾನು। ಭಂಡಾಟದವನೆಂದು ಬಯಲಿಗೆ ತಾರಣ। ಕೊಂಡಾಡುವಂತೆ ಭಕುತಿಯನು ಕೊಟ್ಟು ಸಲಹಯ್ಯ।।2।। ಜಾತಿಧರ್ಮವ ಬಿಟ್ಟು ಅಜಾಮಿಳನು ಇರುತಿರಲು। ಪ್ರೀತಿಯಿಂದಲಿ ಮುಕುತಿ ಕೊಡಲಿಲ್ಲವೆ। ಖ್ಯಾತಿಯನು ಕೇಳಿ ನಾ ಮೊರೆಹೊಕ್ಕೆ ಸಲಹಯ್ಯ। ವಾತಜನ ಪರಿಪಾಲ ಶ್ರೀರಂಗವಿಠಲ।।3।।

ದಯಬೀರೋ ದಯಾನಿಧೆ **ರಾಗ: ಕಲ್ಯಾಣಿ**

ದಯಬೀರೋ ದಯಾನಿಧೆ। ದಯಬೀರೋ ।।ಪ।। ದಯಬೀರೆ ದುರ್ಭವ ಭಯ ಪರಿಹರ। ನಿರ್ಭಯನಾಮಕ ಹರಿ। ಹಯಮುಖ ಕೃಷ್ಣಯ್ಯ ।।ಅ.ಪ.।। ಪಾಪಿ ನಾನಹುದೋ। ಹೇ ಪಾವನ ಮೂರ್ತೇ। ನೀ ಪೋಷಿಸದಿರೆ। ಕಾಪಾಡುವರ್ಯಾರೋ ।।1।। ದಿನದಿನಕನೇಕ। ಲಂಕಾರ ಭೂಷಿತ। ದಿನಮಣಿ ಅಮಿತಾಭ। ಘನ ಮಹಿಮನೆ ಕೃಷ್ಣ ।।2।। ಕಡಗೋಲು ನೇಣನು। ಪಿಡಿದು ಭಕ್ತೀ ಎಂಬ। ಮುಡುಪ ಕೊಳ್ಳುವ ಗುರು। ಗೋವಿಂದ ವಿಠಲಯ್ಯ।।3।।

ದಯಬರದೆ ನಿನಗಿನ್ನೂ **ರಾಗ:ಆನಂದಭೈರವಿ,ಅಟ್ಟತಾಳ**

ದಯಬರದೆ ನಿನಗಿನ್ನೂ ಹಯಕಂದರ। ಭಯನಿವಾರಣ ವಾದಿರಾಜ ವರದ।।ಪ।। ಹಿಂದನಂತಾನಂತ ಜನ್ಮಗಳ ನೀನಿತ್ತೆ। ಮುಂದೆ ಜನ್ಮಗಳಿಗೆಲ್ಲಘಗಳ।। ತಂದೆ ನೀ ಮಾಡಿಸುವಿ ಸೋಜಿಗವಿದೇನೆಂದು। ಶೃತಿವೃಂದ ಹೊಗಳುತಿರೆ ಬಹು ಕರುಣಿ ನೀನೆಂದು ।।1।। ಅಚ್ಚ ಭಕುತಿ ಜ್ಞಾನ ಕೊಟ್ಟು ಸಲಹೆಂದು ಸಿರಿ। ಅಚ್ಯುತನೆ ನಿನಗೆ ಮೊರೆಹೊಕ್ಕೆನೊ।। ಸಚ್ಛಾಸ್ತ್ರ ಸನ್ನುತನೆ ಲಲನೆಯರ ಕುಡಿಗಣ್ಣಿಗಿಚ್ಚೆ ನೂಕುವರೆ ಅಕಟಕಟ ।।2।। ಪಾದಕೆ ಬಿದ್ದವರನೊದ್ದು ನೂಕುವರೇನೊ। ಶ್ರೀಧರಾ ಒದ್ದವರ ನೀ ಪೊರೆದೆಲ್ಯೆ।। ಬಾದರಾಯಣ ವಿಠಲ ಸಲಹು ಇನ್ನಾದರೂ। ನೀ ದೂರ ನೋಡದೆಲೆ ವಿಧಿಭವ ಸನ್ನುತನೆ।।3।।

ಪ್ರಸನ್ನ ವದನ **ರಾಗ: ಹಂಸಧ್ವನಿ**

ಪ್ರಸನ್ನ ವದನ ಹಯಸೂದನ ಪಾಲಿಸು ಹಯವದನ।।ಪ।। ಚಂದ್ರಮಂಡಲ ಗ್ರಹ ಮಾಲಾನಂದ ವಿಶಾಲ। ಇಂದಿರೆ ರಮಣ ಖಗಗಮನ। ಸ್ಕಂದನಾಂಗದರವಿಂದ ಗದಾಕರ। ಸುಂದರಗಾತ್ರದಿ ವಂದ್ಯ ವಿಧಾತ್ರ ।।1।। ನಿಗಮೋದ್ಧಾರ ಕಾಷ ವಾರಕ ತ್ರಿಜಗ ರಕ್ಷಕ। ಮೃಗಮುಖನ್ರದೇಹಿ ಧಾರ್ಮಿಕ। ದ್ಯುಗಶಶಿ ಸಮತೇಜ ದೃಗಯುತ ಗಜರಾಜ। ನಿಗಡ ಶಿಥಿಲಕಾರಿ ಬಿಗಡರ ಭಾರಿ।।2।। ಗುರುವಿನ ಬಾಲ ಪಾಲನಶೀಲ ಸಾಗರಸುತೆ ಲೋಲ। ಗುರುವಾದಿರಾಜಾರ್ಚಿತ ಪಾದಾಬ್ಜ। ವರಸೋದೆ ಮಠವಾಸ ಸುರಮುನಿ ಪರಿತೋಷ। ಪ್ರಸನ್ನ ವೆಂಕಟೇಶ ಹರಿತುರಗಾಸ್ಯ।।3।।

ಅನಂತಾನಂತ ಪಾಪ **ರಾಗ: ಕಮಾಚ್**

ಅನಂತಾನಂತ ಪಾಪ ಮಾಡುವೆ ನಾನು।।ಪ।। ಅನಂತ ದಯಾನಿಧೆ ನೀನೂ ಹಯವದನ ।।ಅ.ಪ.।। ಮೇರು ಮಂದರಾದಿಗಳು ದಾರು ಎನ್ನ ಪಾತಕಕ್ಕೆ। ಸರಿಗಾಣೆಸೆನೆಂದರೆ ಪಾಪ ಕ್ಷೋಣಿ ಪರಿಮಾಣುಗಳಿಗೆ।।1।। ಪೇಳು ಪಾಪವೆಂದೆನಲು ಪೇಳಲಿಕ್ಕೆ ಬಲು ಲಜ್ಜೆಗಳು ಅಂಡಲೆವುತಿದೆ ತಿಳಿದಾತ ನೀನಲ್ಲವೆ।।2।। ಎನಗೊಂದು ಉಪಾಯವ ಅನಾಯಾಸ ಮಾಡುವಂಥ। ನಿನ್ನ ನಾಮ ಸುಧೆಯನ್ನು ಎನಗೀಯೋ ಮುದದಿಂದ ।।3।। ಏಸುಕಾಲ ಸ್ವಾಮಿ ನೀನು ದಾಸನು ಆಸು ಕಾಲದವನು। ವಾಸುದೇವ ವಿಠಲನೆ ನೀ ಸಡಲ ಬಿಡುವರೇನೊ।।4 ।।

ಅಂಕದ ಮೇಲೆ ಬಿಂಕದಿ ಕುಳಿತ **ರಾಗ: ಶ್ರೀ**

ಅಂಕದ ಮೇಲೆ ಬಿಂಕದಿ ಕುಳಿತ। ಪಂಕಜಪಾಣಿ ಶ್ರೀಲಕ್ಷ್ಮಿಯ ಸಹಿತ।।ಪ।। ಶಂಕರಾದಿ ವಂದ್ಯ ಹಯಗ್ರೀವ ಮೂರುತಿ। ಶಂಕೆಯಿಲ್ಲದೆ ಬಂದ ಜ್ಞಾನಾನಂದ।।ಅ.ಪ.।। ನಿರ್ಮಲ ಸ್ಪಟಿಕ ಅಶ್ವಾಕೃತಿ ದೇವ। ಧರ್ಮ ಮೋಕ್ಷದ ಪ್ರತೀಕ ದೇವ।।

ಚರ್ಮ ಚಕ್ಷುವಿಗೆ ಅಗೋಚರನು ಇವ। ದುರ್ಮಾರ್ಗತೊರಸಿ ಸನ್ಮಾರ್ಗ ತೋರುವ॥1 ॥ ವೇದಸ್ವರೂಪ ವೇದ ಪ್ರತಿಪಾದ್ಯ। ಮೋದ ಶರೀರ ಅಚ್ಛೇದ್ಯ ಅಭೇದ್ಯ॥ ವಾದಿರಾಜರ ಹೂರಣ ನೈವೇದ್ಯ। ಸಾದರದಿ ಉಂಡ ಮುನಿಜನವಂದ್ಯ॥2॥ ಅಂಗನೆ ಸಹಿತ ಅಲೌಕಿಕ ಶರೀರಧಾರಿ। ಆಗಸವೆ ಶಿರ ವಿಶ್ವ ಶರೀರಿ। ಯೋಗಾಸನದಿ ಕುಳಿತಿಹ ರಕ್ಕಸಾರಿ। ಮಂಗಳಾಂಗ ಹರಿವಿಠ್ಠಲ ಅಘಹಾರಿ॥3॥

ವಾದಿರಾಜರಿಗೊಲಿದು ಬಂದು

ವಾದಿರಾಜರಿಗೊಲಿದು ಬಂದು ಸೋದೆ ಪುರದಲಿ ನಿಂತಾ ಕುದುರೆ। ಕುದುರೆಯ ಕಂಡೀರಾ ಬಿಳಿ ಕುದುರೆಯ ಕಂಡೀರಾ॥ಪ॥ ಮಧ್ವರಾಯರಿಗೆ ಒಲಿದಾ ಕುದುರೆ। ವಾದಿರಾಜರಿಗೆ ಪೊರೆವಾ ಕುದುರು। ಸೋದೆಯ ಪುರದೊಳು ನಿಂತಾ ಕುದುರೇ। ಮೋದದಿಂದಲಿ ಮೆರೆದಾ ಕುದುರೆ॥1॥ ಮಂದರಗಿರಿಯ ನೆತ್ತಿದ ಕುದುರೆ। ಚಂದಿರನಂತೆ ಪೊಳೆವಾ ಕುದುರೆ। ಇಂದಿರಾ ದೇವಿಯ ಅಮೃತವನಿತ್ತಾ ಕುದುರೆ। ಬಂದರೆ ನರರಿಗೆ ಬೆದರದ ಕುದುರೆ॥2॥ ಸುರರಿಗೆ ಅಮೃತವನಿತ್ತಾ ಕುದುರೆ। ನರನಾ ರಥವನೇರಿದ ಕುದುರೆ। ಸ್ಮರನ ತಾತ ಎನಿಪ ಕುದುರೆ। ಸುತರರ ಭೂಮಿಗೆ ತಂದ ಕುದುರೆ॥3॥ ಕಡಲೆ ಹೂರಣದ ಮೆಲುವಾ ಕುದುರೆ। ಸೋದೆಯ ಪುರದೊಳು ಮೆರೆದಾ ಕುದುರೆ। ಪುಂಡಲೀಕನಿಗೆ ಒಲಿದಾ ಕುದುರೆ। ಪಾಂಡವರನ್ನು ಪೊರೆದಾ ಕುದುರೆ॥4॥ ರಾಜ ನಾಥನೆನಿಪಾ ಕುದುರೆ। ಭಜಿಪ ಜನರ ಪೊರೆವಾ ಕುದುರೆ। ಕುಂಜಸುತೆಗೆ ವರವಿತ್ತಾ ಕುದುರೆ। ಕಂಜನಾದ ಹಯವನ ಕುದುರೆ॥5॥

ನಿತ್ಯ ನಿಗಮ ನಿಕರ ನಿಶ್ಚಿತ

ರಾಗ: ಆನಂದಭೈರವಿ

ನಿತ್ಯ ನಿಗಮ ನಿಕರ ನಿಶ್ಚಿತ ನಿರ್ಮಲ ನಿನ್ನವನ್ನ। ಸತ್ಯಸಂಧ ಹಯವದನ್ನ ಸಲಹಬೇಕೆನ್ನ॥ಪ॥ ಉದಧಿ ಸುತೆಯ ಉರದಿ ಧರಿಸಿ ಉತ್ತಮೋತ್ತಮ। ಸುಧೆಯ ನುಣಿಸಿ ಸುರರ ಪೊರೆದೆ ಸುಜನ ಸುಖಕರ॥ ಮಧುರ ವಚನ ಮಾನ್ಯರಚನ ಮೃತ್ಯುಮೋಚನ। ಕದನ ಕರ್ಕಶ ಕಲಿಮಲಘ್ನ ಕಮಲಲೋಚನ॥1 ॥ ಮಂಗಳಾಂಗ ಮದ್ಯರಹಿತ ಮದನಮೋಹನ। ಕಣ್ಣೆ ಎನಗೆ ಕಾಣಿಸು ನಿನ್ನ ಕಾಯ ಕಾಂತಿಯ॥ ಭಂಗ ರಹಿತ ಭವ್ಯ ಚರಿತ ಭಯಕೆ ಭಯ ಹರ। ರಂಗರಾಯ ಶಸಿಕರರಸ ರಕ್ಷಿಸಬೇಕೆನ್ನ॥2॥ ಮಧುಕೈಟಭರ ಮರ್ಧಿಸಿ ಮತಿಯ ಮಗಗಿತ್ತನೆ। ಆದರಿಂದ ಅಮರರೆಲ್ಲ ಅರಿತು ಕೊಂಡರು॥ ಇದರಿಗೊಂಡು ಇವನ ನೋಡಿ ಇರವ ಮರೆತರು। ಹೃದಯಸದನ ಹಯವದನ್ನ ಪೊರೆಯಬೇಕೆನ್ನ॥3॥

ದಯಾನಿಧೆ ದಯಮಾಡಬೇಕು

ದಯಾನಿಧೆ ದಯಮಾಡಬೇಕು॥ಪ॥ ದಯಮಾಡಬೇಕು ಎನ್ನಯ ದೋಷಾವೆಣಿಸದೆ। ಹಯಮುಖ ಲೋಕಾಶ್ರಯ ವ್ಯಾಪ್ತ ಪರಮಾಪ್ತ॥ಅ.ಪ.॥ ನಿನ್ನ ನಂಬಿದ ಭಕುತರನ್ನ ಚೆನ್ನಾಗಿ ಕಾಯ್ದಾ। ಘನ್ನ ಕೀರುತಿ ಕೇಳಿ ಮನ್ನಾದಿ ನಮಿಸುವೆ। ಬನ್ನಾಬಡಿಸದೆ ಸಂಪನ್ನ ಗುಣಾರ್ಣವ॥1॥ ಮಾನಿ ಮಾನದನೇ ದ್ರೌಪದಿ ಅಭಿಮಾನ ರಕ್ಷಕನೇ। ಭಾನು ಜನಕ ಮುಖ್ಯಪ್ರಾಣ ವಂದಿತಾಂಘ್ರಿ। ನೀನೊಲೆಯದಿರೆ ಸುಜ್ಞಾನ ಮಾರ್ಗವ ಕಾಣೆ॥2॥ ಹರಿ ಕೋಟಿ ತೇಜಾ ಕಾಮಿತ ಕಲ್ಪತರು ಮಹಾರಾಜಾ। ಸುರನದಿ ಜನಕ ಅಸುರ ಶೀಕ್ಷಾ ಕಮಲಾಕ್ಷ। ಕರುಣ ಕಪಿಲ ವ್ಯಾಸಗುರು ಪ್ರಾಣೇಶವಿಠ್ಠಲಾ॥3॥

ಕುದುರೆ ರೂಪ ತಾಳಿದನು

ಕುದುರೆ ರೂಪ ತಾಳಿದನು। ನಮ್ಮ। ಪದುಮನಾಭ ತನ್ನ ಭಕುತರಿಗೊಲಿದು॥ಪ॥ ಸದಮಲಗುರು ಶ್ರೀವಾದಿರಾಜರಿಗೆ। ಮುದದಿಂದಲಿ ತಾ ಆಭಯವ ನೀಡಲು ॥ಅ.ಪ.॥ ತಡಮಾಡದೆ ಕಡಲೆಯ ಖಾದ್ಯವ। ಸಡಗರದಿಂದಲಿ ಮೆಲ್ಲಬೇಕೆನ್ನುತ। ದೃಢಭಕುತಿಯಲಿ ನೀಡಲು ಗುರುವರ। ಗಡನೆ ಬಂದು ಹೆಗಲೇರಿ ನಿಲ್ಲಲು॥1॥ ಸೋದಾಪುರದಲಿ ವಾದಿರಾಜರಿಗೆ। ಮೋದಪಡಿಸುತಿಹ ಸಾದರದಿಂದಲಿ। ಮದಮತ್ಸರ ಬಿಟ್ಟು ತುತಿಪ ಸುಜನರಿಗೆ। ಕಾದುಕುಳಿತಿಹನು ವರಗಳ ನೀಡಲು॥2॥ ಗುರುಶಾಮಸುಂದರ ಈ ರೂಪತಾಳಲು। ಧರೆಯೊಳಗಾಯಿತು ಹರುಷಗಳು। ಸುರರು ಎಲ್ಲ ಸೇರಿ ಸೇವೆಗೆ ಬರುವರು। ನಿರುತ ಭಾಗ್ಯವ ಪಡೆದು ಮೆರೆಯುವರು॥3॥

ದಯದಿಂದಲಿ ನೋಡೋ ಎನ್ನ

ದಯದಿಂದಲಿ ನೋಡೋ ಎನ್ನ। ಹಯವದನಾ ಶ್ರೀಹರಿ।। ಬೇಡಿಕೊಂಬೆನೋ ನಿನ್ನ ಆನಂದ ಘನ್ನಾ। ವರಗಳ ನೀಡಿ। ಭಕುತರ ಕೂಡಿ ಆಡುವೆ ನೀ ನಿತ್ಯ। ಸುಜನರ ಕಾಡಿ ಕೆಣಕುವ ಈ ಯೋಡಿ। ದುರಿತಗಳ ಓಡಿಸಿ ಅನುದಿನ। ಸಾಮಗಾನ ಪ್ರೇಮಾ। ಬ್ರಹ್ಮಾದಿಗಳಿಗೆ ಕಾಮಿತಪ್ರದ ರಾಮಾ। ಜಯ ಜನರುಜಾಪತಿ ಭೂಮಾ। ದೈತ್ಯವಿರಾಮಾ ಪರಿಪೂರ್ಣರಾಮಾ। ಶಾಮಸುಂದರ ಶಕಟಾಸುರ ಮರ್ಧನ। ಸಾಮಜ ವರದನೆ ಮಾತುಳಾಂತಕ। ಮಾ ಮನೋಹರ ಮದನ ಜನಕನೆ ಕರುಣಿಸಿ ಎನ್ನನು। ಏನು ಬಲ್ಲೆ ನಾನು ನಿನ್ನ ಮಹಿಮೆಯನ್ನು। ದೀನ ಸುರಧೇನು ಬಣ್ಣಿಸಲವೆ ನಿನ್ನ ಮಹತ್ತನ್ನು। ಮುನಿ ಮೌನಿವರರಿಂದ ಅನಘನೆ। ನಿನ್ನಮಿತ ಗುಣಗಣನ ಕಾಣದೇ। ಲಕುಮಿ ಮನದಲ್ಲಿ ಅನುವು ತಪ್ಪೆ। ದಿವಿಜ ಮನುಜ ಲತೆಗಳೆಲ್ಲಾ ನಮೋ ನಮೋ। ಎಂದೊರಲ್ಲದೆ ಸ್ವಾಮಿ ನಿತ್ಯ। ಹಾಟಕಾಂಬರಧರ ಶ್ರೀವತ್ಸಾಲಾಂಛನ। ಜಟಾ ಮಕುಟ ಕುಂಡಲ ಕೈಟಭಾಂತಕನೆ। ಕಡಲ ಮಂದಿರ ಕುಟಿಲ ಕುಟುಮತಿ। ಖಳರನು ಶಿಕ್ಷಿಸಿ ಕೈಯ ಬಿಡದೆ ಎನ್ನಾ। ಮಾನಿಧಿ ವಿಠಲ ಕಾಲಿಗೆ ಬೀಳುವೆ।।

ಓಂ ರಮಾಮಣ (ಪ್ರಾರ್ಥನಾ ದಶಕ ಸ್ತೋತ್ರ)

ಓಂ ರಮಾರಮಣ ಮಧ್ವಾದಿ ದೇಶಿಕ ಶ್ರಿ ಹೃದಬ್ಬಗ। ಹಯಗ್ರೀವ ಕೃಪಾಲೋ ಮೇ ಪ್ರಾರ್ಥನಾಂ ಶೃಣು ಸಾದರಂ।।1।। ಅಯೋಗ್ಯ ವಿಷಯೇ ಸ್ವಾಮಿನ್ ಸರ್ವಧ ನ ಮನೋಭವೇತ್। ಚಾಂಚಲ್ಯಂ ಮೂಲತಃ ಛಿಂದಿ ದುರಾಶಾ ಹರದೂರತಃ।। ದುರ್ಬುದ್ಧಿಂ ಚನ ಮೇ ದೇಹಿ ದುಶ್ಶಾಸ್ತ್ರಾ ವರ್ತನೇ ರತಿಂ। ಪಾಪಯಸ್ವ ಚ ದುರ್ಮಾನಂ ದುರ್ಗುಣಂ ಮೋಚಯ ಪ್ರಭೋ।। ದುಃಸ್ಸಂಗಂ ದುಷ್ಕ್ರಿಯಾಂ ಛಿಂದಿ ಹರ ಲೋಕಾಟನಾತ್ವದೌ। ಮನಿ ಯೋಜಯ ಚಕ್ಷೂಂಷಿ ಪರದಾರಾದಿ ದರ್ಶನೇ।। ದುಷ್ಪ್ರತಿಗ್ರಹ ದುಸ್ಪರ್ಷೇ ಕಕ್ಶೌ ಮಾ ಚೋದಯ ಧೃವಂ। ಅಗಮ್ಯ ಗಮನೇ ಗುಹ್ಯಂ ಘ್ರಾಣಮಾಘ್ರಾಣನೇ ಸತಾಂ।। ಆಕರ್ಷತು ಜಿಹ್ವಾಂ ಮೇ ಲೋಕವಾರ್ತಾ ದುರನ್ನತಃ। ದುರ್ವಾತಾದುಷ್ಟ ಶಬ್ದೇ ಭ್ಯೋ ನಿವರ್ತಯ ಹರೇ ಶ್ರುತಿ।। ಭಗವದಿಚ್ಛಾನು ಗಂ ಚೇತೋ ಯೋಗ್ಯ ಸದ್ವಿಷಯಂ ಭವೇತ್। ಯದೃಚ್ಛಾ ಲಾಭ ಸಂತೃಪ್ತಂ ನಿಶ್ಚಾಂಚಲ್ಯ ಭವೇತ್ತ್ವಯಿ।। ಸುಜ್ಞಾನಂ ಸರ್ವಥಾ ದೇಹಿ ಸಚ್ಛಾಸ್ತ್ರಾಂ ವರ್ತನೇ ರತಿ। ಸತ್ಸಂಗಂ ಸತ್ಕ್ರಿಯಾಂ ಚೈವ ಪಾದೌ ತ್ವತ್ಕ್ಷೇತ್ರ ಸರ್ಪಣೇ।। ಶ್ರೀ ಮಧ್ವಶಾಸ್ತ್ರ ಶ್ರವಣೇ ನಿಯುಕ್ತ್ವ ಶ್ರವಣೇ ಸದಾ। ಹಯಾಸ್ಯ ಚಕ್ಷೂಂಷಿ ಚ ಮೇ ದರ್ಶನೇ ಸನ್ನಿಯೋ ಜಯ।। ಕರೌ ತ್ವದರ್ಚನೇ ನಿತ್ಯಂ ಸುಖ ತೀರ್ಥಸ್ಯ ಲೇಖನೇ। ತ್ವದಾಲಾಪೇ ತ್ವದುಚ್ಛಿಷ್ಟ ಭೋಜನೇ ಕುರು ಜೀಹ್ವಿಕಾಂ।। ಘ್ರಾಣಂ ಭವತು ನಿರ್ಮಾಲ್ಯಾ ಘ್ರಾಣನೇ ನಮನೇ ಶಿರಃ। ದೇಹಿ ಮೇ ತು ಜ್ಞಾನ ಭಕ್ತಿ ಪಶುಪುತ್ರ ಧನಾಧಿಕಂ।। ಪ್ರಾರ್ಥನಾ ದಶಕ ಸ್ತೋತ್ರಂ ತ್ರಿಕಾಲೇ ಯಃ ಪಠೇನ್ನರಃ। ತಸ್ಯಾಭೀಷ್ಟಂ ಹಯಾಘ್ಯೋಸೌ ದತ್ವಾ ರಕ್ಷತಿ ಸರ್ವದಾಂ।। ಇತಿ ಶ್ರೀ ಮಧ್ವಾದಿರಾಜ ಪೂಜ್ಯ ಚರಣ ವಿರಚಿತಂ ಪ್ರಾರ್ಥನಾ ದಶಕ ಸ್ತೋತ್ರಂ ಸಂಪೂರ್ಣಂ।।

ಇಂದಿರೆ ಅರಸ

ಇಂದಿರೆ ಅರಸ ಚಂದ್ರ ಮಂಡಲ । ಮಂದಿರಾಖಿಳ ವಂದ್ಯ ಹಯಮುಖ । ಎಂದೆಂದೆನ್ನ ಮನದಿಂದಗಲದಿರು । ಮಂದರಾದ್ರಿಧರ ।।ಪ।। ತುಂಗ ಮಹಿಮ ತುರಂಗ ವದನ ಶು-। ಭಾಂಗ ರಿಪುಕುಲ ಭಂಗ ಸುಜನರ । ಸಂಗ ಎನ್ನಂತರಂಗ ಮಲಿನವ ।ಹಿಂಗಿಸುವುದೆಂತೊ । ಮಂಗಳಾಂಗ ತರಂಗದುಬ್ಬಿಗೆ । ತಿಂಗಳೆನಿಸುವ ಅಂಗಜನ ತಂದೆ ।ರಂಗ ನಿನ್ನ ಪಾದಕೆಂಗಮಲದಲ್ಲಿ । ಭೃಂಗನಪು?ದೆಂತೊ ।।1।। ವಾರಿಜಾಕ್ಷ ಮುರಾರಿ ಮದವೆಂಬೋ । ಮಾರಿಮುಸುಕಿತುಸಾರಿಮತ್ಸರ । ಮಾರನೊಡಗೂಡಿ ದಾರಿ ತಪ್ಪಿಸಿ । ಗಾರು ಮಾಡಿತೆನ್ನ ನಾ-। ನಾರೆ ಕ್ರೋಧ ಮಹೋರಗನವಿಷ-। ಧಾರೆಗೆ ಭಯಕಾರಿ ಹರಿ ನಿನ್ನ । ಚಾರು ಚರಣವ ಸಾರಿದೆನಿಂದು । ತೋರಿ ಸಲಹಬೇಕು ।।2।। ಧನ್ಯ ಸುರರ ಜೀವನ್ನ ಕರುಣ ಸಂ-। ಪನ್ನ ನಿತ್ಯ ಪ್ರಸನ್ನ ಚಿನುಮಯ ।ಪನ್ನಗಾರಿವಾಹನ್ನ ಶಶಿ ಸಮ-। ವರ್ನ ಹಯವದನ ನಿನ್ನ ಪಾದ ಪಾವನ್ನ ಸುರತರು-। ವಿನ್ನ ನೆಳಲೊಳಿಟ್ಟೆನ್ನ ಸಲಹ ಬೇ-। ಕನ್ಯಥಾಗತಿ ಶೂನ್ಯನಾನೆಲೊ । ಪೂರ್ಣ ಪುರುಷರನ್ನ ।।3।।

ಹಯವದನ ಹಯವದನ

ಹಯವದನ ಹಯವದನ ಹಯವದನ ಪಾಹಿಮಾಂ ।ಹಯವದನ ಹಯವದನ ಹಯವದನ ರಕ್ಷಮಾಂ ।।1।।ಲಕ್ಷ್ಮೀಶ ಶ್ರೀರಮಣ ಹಯವದನ ಪಾಹಿಮಾಂ ।ದುರ್ಗೇಶ ಭೂರಮಣ ಹಯವದನ ರಕ್ಷಮಾಂ ।।2।।ಹನುಮೇಶ ರಘುನಾಥ ಹಯವದನ ಪಾಹಿಮಾಂ ।ಭೀಮೇಶ ಯದುನಾಥ ಹಯವದನ ರಕ್ಷಮಾಂ ।।3।।ಮಧ್ವೇಶ ಶುಕತಾತ ಹಯಶೀರ್ಷ ಪಾಹಿಮಾಂ ।ಸೋದೇಶ ವಾದೀಶ ಹಯಶೀರ್ಷ ರಕ್ಷಮಾಂ ।।4।।ಹಯವದನ ಪಾಹಿಮಾಂ । ಹಯವದನ ರಕ್ಷಮಾಂ ।ಸೋದೇಶ ಪಾಹಿಮಾಂ ವಾದೀಶ ರಕ್ಷಮಾಂ ।।5।।ಪೊರೆಯಯ್ಯ ಹಯವದನ ಹಯವದನ ಪೊರೆಯಯ್ಯ ।ಸಲಹಯ್ಯ ಹಯವದನ ಹಯವದನ ಸಲಹಯ್ಯ ।।6।।ದಯಮಾಡೋ ಹಯವದನ ಹಯವದನ ದಯಮಾಡೋ ।ಕರುಣಾಳು ಹಯವದನ ಹಯವದನ ಕರುಣಾಳು ।।7।।

ಭಯವ ಪರಿಹರ ಮಾಡೋ **ರಾಗ ? ಕಾಂಬೋದಿ, ತಾಳ - ಝಂಪಿ**

ಭಯವ ಪರಿಹರ ಮಾಡೋ ಭಕ್ತ ಬಂದೊ ।ಹಯಗ್ರೀವ ನಿನ್ನ ಪಾದ ಹಗಲಿರುಳು ನಂಬಿದರ ।।ಪ।।ಸಲ್ಲುವದೆ ನಿನಗೆ ಸಾರ್ವಭೌಮಾನೆಂಬಾ ನುಡಿ ।ಸೊಲ್ಲು ನಡದಲಿ ನೀನು ಇಲ್ಲಿದಂಡೆ ।ಫುಲ್ಲಲೋಚನೆ ಹರೆ ಬಲ್ಲಿದನೆ ಶಿಶುವು ನಿಂ ।ದಲ್ಲಿ ರೂಪವ ತೋರಿ ಕೊಲ್ಲಿಧಿರಣ್ಯಕನಂದು ।।1।।ಉರಗಶಾಯಿಯೇ ನೀನು ತಿರಗಿನಾ ಪೇಳಲೇನು ।ನರರ ಮನೋಭಾವ ನೀ ನರಿತಿಲ್ಲವೇ ।ಕರಕರಿಯ ಕಷ್ಟಕಾಮಾದಿಗಳ ಕಾಟದಲಿ ।ಮರತ ಕಾಲಕು ನಿನ್ನ ಮನಮುಟ್ಟಿ ನೆನವುವರ ।।2।।ಹರಿ ನಿನ್ನ ನಾಮವನು ಮರದೊಮ್ಮೆ ನೆನಿಸಲು ।ಹರಿದು ಪೋಗವೆ ವಿಷಯ ದುರ್ವಿಷಯವೂ । ಹರನ ಪರಿಪಾಲಿಸಿದ ವರದಗುರು ಮುದ್ದುಕೃಷ್ಣ ।ಪರಲೋಕ ಮಾರ್ಗವನು ಪರಮಾದರದಿ ತೋರಿ ।।3।।

ದಯವಾಗೋದಯವಾಗೋ **ರಾಗ : ಪೂರ್ವಿ, ತಾಳ: ತ್ರಿವಿಡಿ**

ದಯವಾಗೋ ದಯವಾಗೋ ।ಹಯಮುಖ ಭಯಕೃದ್ಭಯನಾಶ ನೀ ।।ಪ।।ದ್ರೌಪದಿ ಮೊರೆ ಕೇಳ್ದಾಪದ್ಬಾಂಧವ ।ನೀ ಪೊರೆ ಎಮ್ಮ ರಮಾಪತೆ ನಿರುತಾ ।।1।।ಖರಮುರ ನರಕಾದ್ಯರ ಸಂಹರಿಸಿದ ।ಪರಮ ಪುರುಷಗಂ ಹರಿಶರಹರಣಾ।।2।।ಶತ್ರುತಾಪನ ಜಗತ್ರಯ ವ್ಯಾಪ್ತ । ಪವಿತ್ರಪಾಣಿ ಸರ್ವತ್ರದಿ ಎಮಗೆ ।।3।।ಎಷ್ಟೆಂದುಸರಲಿ ದುಷ್ಟಜನರು ಬಲು ।ಕಷ್ಟ ಬಡಿಪ ಬಗೆ ಜಿಷ್ಣು ಸಾರಥೆ ।।4।।ಗೋಭೂಸುರರಿಗೆ ಭೂಭುಜರ ಭಯ ಪ ।ರಾಭವಗೈಪದು ಶ್ರೀ ಭೂರಮಣ ।।5।।ಅಪ್ರಮೇಯ ನೀ ಕ್ಷಿಪ್ರದಿ ವಲಿದು ।ಜಯಪ್ರದನಾಗುವ ಸುಪ್ರದ ವರದಾ ।।6।।ಯಾತಕೆ ಎಮ್ಮನು ಭೀತಿಗೊಳಿಪಿ ಪುರು ।ಹೂತನುತ ಜಗನ್ನಾಥ ವಿಠಲಾ ।।7।।

ದಿಕ್ಕು ತೋಚದಲ್ಲೋ **ರಾಗ-ಮೋಹನ, ತಾಳ - ಆದಿ**

ದಿಕ್ಕು ತೋಚದಲ್ಲೋ ಹಯಮುಖಾ ಎನ್ನ ವಡಲ। ದುಃಖ ಕೇಳಿ ಸಲಹೋ ಶಿವಸಖಾ।।ಪ।। ಮರ್ಕಟಗಳ ಚಪಲದಂತೆ ಕಕ್ಕವಿಕ್ಕಿ ಮಾಡಿ ಕುಮಾ। ರ್ಗಕ್ಕೆ ಎಳೆದು ತತ್ವ ದೇವರ್ಕಳೆಲ್ಲ ನಗುತ್ತಾರೆ।।ಅ.ಪ.।। ನಿನ್ನ ಪಾದದಲ್ಲಿ ಮನವನೂ ನಿಲ್ಲಿಸದಲೆ। ಹೊನ್ನು ಹೆಣ್ಣಿನಲ್ಲಿ ರತಿಯನೂ। ಚನ್ನವಾಗಿ ಕೊಟ್ಟು ಎನಗೆ ಹೆಣ್ಣು ನಾಯಿ ಹಿಂದೆ ಅಲಿವ। ಕುನ್ನಿಯಂತೆ ಮಾಡಿ ಇಕ್ಕೊ ಬನ್ನ ಬಡಿಸುತ್ತೈಧಾರೆ।।1।। ಬ್ಯಾಸರಿಕೆ ಎನ್ನೆ ಕೊಡುವರೋ ನಿನ್ನ ಧ್ಯಾನ। ಲೇಶವಾದರೂನು ನೀಡರೊ। ದೋಷಿ ಎನಿಸಿ ಎನ್ನ ತಾವು ದೋಷ ದೂರರಾಗಿ ಸಂ। ತೋಷ ಬಡುತಲಿಹ್ಯರು। ನಾ ದ್ವೇಷಿ ಏನೊ ಇವರಿಗೆಲ್ಲಾ।।2।। ನಾಯಾರಿಗಿನ್ನುಸರಲ್ಕೈ ಸಕಲ ತತ್ವ। ನಾಯಕರಿಗೆ ನಾಥ ನೀನೆಲ್ಕೈ। ವಾಯುವಿನುತ ಶ್ರೀಶ ಬಾದರಾಯಣವಿಠ್ಠಲ ನೀನೆ। ಕಾಯಬೇಕೋ ಕರುಣಿ ನಿನಗೆ ಬಾಯಿಬಿಟ್ಟು ಬೇಡಿಕೊಂಬೆ।।3।।

ದಯ ಬಾರದೆ ನಿನಗಿನ್ನು ರಾಗ-ಕಾಂಬೋದಿ, ತಾಳ - ಝಂಪಿ

ದಯ ಬಾರದೆ ನಿನಗಿನ್ನು ಹಯಕಂದರಾ ।।ಪ।।ಭಯನಿವಾರಣ ವಾದಿರಾಜವರದಾ ।।ಅ ಪ।।ಹಿಂದಿನಂತಾನಂತ ಜನ್ಮಗಳು ನೀನಿತ್ತೆ ।ಮುಂದೆ ಬಹು ಜನ್ಮಗಳಿಗೆಲ್ಲಘಗಳಾ ।ತಂದೆ ನೀ ಮಾಡಿಸಿದ್ಧಿ ಸೋಜಿಗವಿದೇನು ಶೃತಿ ।ವೃಂದ ಹೊಗಳುತಲಿದೆ ಬಹು ಕರುಣಿ ನೀನೆಂದು ।।1।।ಅಚ್ಚ ಭಕುತಿ ಜ್ಞಾನಕೊಟ್ಟು ಸಲಹೆಂದು ಸಿರಿ ।ಅಚ್ಯುತನೆ ನಿನಗೆ ನಾ ಮೊರೆ ಹೊಕ್ಕೆನೊ । ಸಚ್ಛಾಸ್ತ್ರ ಸನ್ನುತನೆ ಲಲನೆಯರ ಕುಡಿಗಣ್ಣ ।ಗಿಚ್ಚಿನೊಳಗೆನ್ನ ನೂಕುವರೆ ಅಕಟಕಟಾ ।।2।।ಪಾದಕ್ಕೆ ಬಿದ್ದವರನೊದ್ದು ನೂಕುವರೇನೊ ।ಶ್ರೀಧರಾ ವದ್ದವನ ನೀ ಪೊರದೆಲೈ ।ಬಾದರಾಯಣವಿಠಲ ಸಲಹು ಇನ್ನಾದರೂ ।ನೀ ದೂರು ನೋಡದಲೆ ವಿಧಿಭವಾ ಸನ್ನುತನೆ ।।3।।

ಕರುಣದಿಂ ಪಾಲಿಸೋ ರಾಗ: ತೋಡಿ-ಅಟ್ಟತಾಳ

ಕರುಣದಿಂ ಪಾಲಿಸೆನ್ನ। ಶ್ರೀ ಹಯವದನ।।ಪ।। ಕರುಣದಿ ಪಾಲಿಸೋ ಕರಿವರದನೆ ನಿನ್ನ। ಚರಣಕಮಲಗಳಿಗೆರಗಿ ಬೇಡಿಕೊಂಬೆ।।ಅ.ಪ.।। ಅಗಣಿತಮಹಿಮನೆ ನಗಪಾಣಿ ಶ್ರೀಶನೆ। ಖಗವರವಾಹನ ನಿಗಮಗೋಚರ ನರ। ಮೃಗರೂಪ ಮೂ। ರ್ಜಗ ದೊಡೆಯನೆ ನಿನ್ನ। ಮಿಗೆಹರುಷದಿಂ। ಪೊಗಳುವ ಸುಖವಿತ್ತು। ಹಗಲಿರುಳೆನ್ನದೆ ಅಘಕಳೆದು ಕಾಯೋ।। ಗಗನಾಳಕವಂದಿತ ತ್ವರಿತದಿ ಕರ। ಮುಗಿದು ಬೇಡುವೆ ಸಂತತ ಮರೆಯದೆ ಪೊರೆ ಪ-ನ್ನಗಶಾಯಿ ಶ್ರೀಭೂನಾಥ ನಿನ್ನಯ ಪಾದ-ಯುಗಸೇವೆ ನೀಡಯ್ಯ ನಗವೈರಿಮಗಸೂತ।।1।। ಕ್ಷಿತಿಜೆ ರಮಣ ದ್ರೌಪದಿ ರಕ್ಷಕನೆ ನೀನು। ಸುರ ತತಿಸನ್ನುತ ಪತಿತೋದ್ಧಾರಕ ಮನ್ಮಥಪಿತ ಮುರಹರ - ಶ್ರುತಿಪ್ರತಿಪಾದ್ಯನೆ ಸಂ-ತತ ನಿನ್ನಯ ಪಾದ ಶತಪತ್ರ ನಂಬಿದೆ। ಹಿತದಿ ಎನ್ನಯ ದುರ್ಮತಿ ಕಳೆದು ಕಾಯೊ।। ಶತಮಖಾನುಜ ಗೋವಿಂದ ಬಾಗುವೆ ಶಿರ। ದಿತಿಜಾರಿ ನಿತ್ಯಾನಂದ ಮಾತುಳವೈರಿ।। ವಿತತಮಹಿಮ ಮುಕುಂದ ನಿನ್ನನುದಿನ। ಸ್ತುತಿಪ ಭಾಗ್ಯವ ಕೊಡು ಕೃತಿಪತಿ ಭರದಿಂದ।।2।। ಇಂದಿರಾಧವಶ್ಯಾಮಸುಂದರವಿಠಲನೆ। ಮಂದರಗಿರಿಪೊತ್ತ ಮಂದಜಾಸನಪಿತ। ವಂದಿಪಭಕ್ತಮಂದಾರ ಮಾಧವ ಸುರ-। ವೃಂದವಿನುತ ದಯಾಸಿಂಧು ದೀನಬಂಧು। ಇಂದು ನಿನ್ನಯ ಪಾದ ಪೊಂದಿದೆ ಸಂತತ।। ಕಂದನೆಂದರಿದೆನ್ನ ಕುಂದು ಎಣಿಸದೆ ದಯ-ದಿಂದ ಪಾಲಿಸು ಹೇ ದೇವ ನಂಬಿದೆ ದಶ- ಕಂಧರಾಂತಕ ರಾಘವ ಬೇಡುವೆ ದಶ-ಶ್ಯಂದನಸುತ ವರವ ಪಾಲಿಸಿ ಕಾಯೋ। ಕಂದರ್ಪಪಿತ ಕುಂತಿನಂದರ ಭಾವ।।3।।

ಮಾಂಪಾಹಿ ಮಾಂಪಾಹಿ

ಮಾಂಪಾಹಿ ಮಾಂಪಾಹಿ ಹಯಮುಖಾ ।ಮಧ್ವಮುನಿಸಖಾ ನಿರ್ಜರಕುಲತಿಲಕಾ ।।ಪ।।

ಶ್ಲೋಕ

ಜಯ ಜಯ ಜಗದೀಶಾ ಜನ್ಮ ದುರವಾದಿ ನಾಶಾ ।ಲಯವಿರಹಿತ ದೋಷದೂರ ಚಂದ್ರಪ್ರಕಾಶಾ ।
ಭಯಹರ ಭವಪೋಶಾ ಭಾಗ್ಯಲಕ್ಷ್ಮೀನಿವಾಸಾ ।ಜಯ ಜಯ ಕಮಲಾಸನಾದಿ ವಂದಿತ ಸುರೇಶಾ ।।1।।

ಪದ

ಪಂಚ ವೃಂದಾವನ ಮಂದಿರಾ ಪಲ್ಲವಧರಾ ಪರಿಶುದ್ಧ ಸಾಕಾರಾ ।
ಪಂಚಕೋಶದೊಳು ವ್ಯಾಪ್ತನೆ ನಿರ್ಲಿಪ್ತನೆ ನಿರ್ಗತ ಸುಷುಪ್ತನೆ ।
ಮಿಂಚಿನಂದದಿ ಪೊಳೆವುತಲಿಪ್ಪಾ ಸಜ್ಜನ ಕಲ್ಪಾವೃಕ್ಷವೊ ನಮ್ಮಪ್ಪಾ ।
ಸಂಚಿತಾಗಾಮಿಯ ನೀಗೂವಾ ಜೀವರಜೀವಾ ತೋರಿಸೊ ನಿನ್ನ ಮುಖವಾ ।।1।।

ಶ್ಲೋಕ

ಸುಖಮಯ ಶುಭಕಾಯಾ ಸೂಜ್ಞ ಸಜ್ಜನ ಸಹಾಯಾ ।ಮುಖದೊಳುದಿಸಿ ಬಂದಾ ಮಾ ಮನೋಹರ ಮುಕುಂದಾ ।
ಶುಕಮುನಿ ಹೃದಯಾಬ್ಜಾವಾಸಾ ಪಾಲಿತ ಸುಕುಬ್ಜಾ ।ಸುಖದ ಮತಿಯ ನೀಡೊ ಸ್ವಾಮಿನೀ ಕೃಪೆಯ ಮಾಡೊ ।।2।।

ಪದ

ಚಂದ್ರಮಂಡಲವಾಸಾ ನಿರ್ದೋಷಾ ಚಾರುತರವೇಷಾ ವಾಮನ ದತ್ತ ಹಂಸಾ ।
ಇಂದಿರಾ ಕರಕಂಜಮೃತಧಾರಾಸಿಕ್ತ ಶರೀರಾ ನಿರುಪಮ ನಿರ್ವಿಕಾರಾ ।

ಕುಂದೇದುನಿಭ ಕೋಮಲಕಾಯಾ ಕಂಜಜನೈಯ್ಯಾ ಕೈವಲ್ಯೋಪಾಯಾ ।
ಸಂದೇಹ ಭ್ರಮರಣದಹನ ಖಗವಾಹನ ಹಯ ದೈತೇಯಹನನಾ ।।2।।
ಶ್ಲೋಕ
ವಿಧಿಗೆ ವಿಮಲ ಜ್ಞಾನಾ ಬೋಧಿಸಿದಂಥ ಜಾಣಾ । ಸದಯ ಹಾಸಾವಲೋಕಾ ಸರ್ವದಾ ನೀ ವಿಶೋಕಾ।
ವದಗಿ ದಯದಿ ವಾಕು ಕೇಳಿ ನೀ ಸಲಹಬೇಕೋ ।ಮದಡಮತಿಯು ನಾನು ಸ್ವಾಮಿ ಬಹು ಕರುಣಿ ನೀನು ।।3।।
ಪದ
ಸಕಲ ವಿದ್ಯಗಳ ಮುಕ್ಕಳಿಸುವಾ ಅತಿಚಲುವಾ ವದನದ ಹೆದ್ದೆ?ವಾ ।
ನಿಖಿಳ ಜಗದಾಶ್ರಯಮೂರ್ತಿ ನಿರ್ಮಲಕೀರ್ತಿ ನಮೋನಮೋ ಪಾರ್ಥಸಾರ್ಥಿ ।
ಅಕುಟಿಲ ಅಮಿತ ರೂಪಾತ್ಮಕಾ ನೀಲಾಳಕ ಧೃತ ಕಸ್ತೂರಿ ತಿಲಕಾ ।
ಪ್ರಕಟನಾಗು ಮನ್ಮನದೊಳು ಮಾತನುಕೇಳು ನಾ ನಿನ್ನವರವರಾಳು ।।3।।
ಶ್ಲೋಕ
ಕರಿಧ್ರುವ ಪ್ರಹ್ಲಾದಾವರದ ಕೈವಲ್ಯಮೋದಾ ।ವರವ ಕೊಡು ಸ್ವಾಮಿ ಸರ್ವ ಜಗದಂತರ್ಯಾಮಿ ।
ಸುರರಿಗೆ ಸುಧೆಯನ್ನು ಉಣಿಸಿ ಉದ್ಧಾರವನ್ನೂ ।ಹರಿಯೆ ಹರುಷದಿಂದ ಮಾಡಿದ್ಯೊ ಹೇ ಮುಕುಂದಾ ।।4।।
ಪದ
ಶಂಖಾಕ್ಷಮಾಲಿಕೆ ಪುಸ್ತಕ ಬೋಧದಾಯಕಾ ಮುದ್ರಾಧಾರಿ ಮಜ್ಜನಕಾ ।
ಕಿಂಕರಿ ಕೃತ ಚತುರ್ಮುಖ ಶಿವಾ ಕೃಪಣರಕಾವಾ ದಾನವವಂಶ ದಾವಾ ।
ಯಂಕಾಮಯ ಎಂಬೊ ಶೃತಿಪಾದ್ಯಾ ಸಿರಿಮೊಗ ಮುದ್ದಾನಾಡುವನಿರವದ್ಯಾ ।
ಡೊಂಕುಮಾತುಗಳ ಎಣಿಸಬ್ಯಾಡಾ ನಾ ಬಲುಮೂಢಾ ಕಾಣೆನು ನಿನಗೀಡಾ ।।4।।
ಶ್ಲೋಕ
ಅಗಣಿತ ಗುಣಪೂರ್ಣ ಆನನ ಪ್ರಿಯನೆ ನಿನ್ನಾ ।ಬಗೆ ತಿಳಿದವನಾವಾ ಭಾಪು ವೃಕೋದರನ ಭಾವಾ ।
ಜಗವ ಮನಿಯ ಮಾಡಿ ಜಲಜಮಂದಿರಳಾ ಕೂಡಿ ।ಬಗೆಬಗೆಯಾಟಗಳನಾಡೀ ಮೋಹಿಸುವ ಪ್ರಬಲ ರೂಢಿ ।।5।।
ಪದ
ನಾನಾಯೋನಿಗಳಲ್ಲೆನ್ನನು ತಂದೆ ನಿನ್ನಾಜ್ಞದಿ ಬಂದೆ ನೀನೆ ಗತಿ ಮುಂದೆ ।
ಏನಾದರು ಮಾಡು ಎನ್ನನು ನಿನ್ನಾಧೀನನು ದೀನಜನ ಸುರಧೇನು ।
ನೀ ನಂಬಿದವರ ಬಿಡುವನಲ್ಲಾ ಸಂಶಯಸಲ್ಲಾ ಸಾರುತಿದೆ ವೇದವೆಲ್ಲಾ ।
ಜ್ಞಾನಿ ಪ್ರಹ್ಲಾದನಿದಕೆ ಸಾಕ್ಷಿ ನೀ ನಿರಪೇಕ್ಷಿ ಕೇಳೋ ಸರ್ವಾಪರೋಕ್ಷಿ ।।5।।
ಶ್ಲೋಕ
ಅಮೃತಮಯ ಶರೀರಾ ಆದಿ ಮಧ್ಯಾಂತದೂರಾ ।ಕ್ರಿಮಿಗೊಲಿದು ರಾಜ್ಯಾ ಕರುಣಿಸಿದಿ ಲೋಕ ಪೂಜ್ಯಾ ।
ಮಮಕುಲವಹ ದೈವಾ ಮಾಧವಾ ಮಹಾನುಭಾವಾ ।ಅಮಲ ನಿಖಿಳ ಕರ್ತಾ ಕಾರ್ಯ ಕರ್ಮಾತಿರಿಕ್ತ ।।6।।
ಪದ
ಜನ್ಯ ಜನಕ ಜಗಜ್ಜೀವನ ಜನಿಮರಣಾ ದೂರ ದುರ್ಜಯ ದ್ರುಹೀಣಾ ।
ಮಾನ್ಯಮಾನದ ಮನ್ಮಥನೈಯ್ಯಾ ನಿರ್ಜಿತಮಾಯಾ ಋಗ್ಯೈಜುಸ್ಸಾಮಮೇಯಾ ।
ಪೂರ್ಣಪುರುಷ ಪುರುಷೋತ್ತುಮಾ ಪುಣ್ಯದನಾಮಾ ನಾರದಮುನಿಪ್ರೇಮಾ ।
ಸನ್ನುತ ಸಚ್ಚಿದಾನಂದಾದಿ ಗುಣ ವಾರಿಧಿ ಶ್ರೀ ಭೂದುರ್ಗಾ ವಿನೋದಿ ।।6।।
ಶ್ಲೋಕ

ಗಗನ ನದಿಯಪೆತ್ತಾ ಗಾಯನಪ್ರಿಯ ಸಮರ್ಥಾ ।ನಿಗಮನುತ ಚರಿತ್ರಾ ನಿತ್ಯ ಮುಕ್ತಾಕಳತ್ರಾ ।
ಮುಗುವೆ ಕರವೆ ನಿನಗೆ ಮುಂದೆ ಕರದೆನ್ನ ಬ್ಯಾಗೆ ।ದುಗುಡಜನರ ಸಂಗಾದೂರನೆನಿಸಯ್ಯ ರಂಗಾ ।।7।।
ಪದ
ಮಣಿಮಯಮಕುಟ ಸುಕುಂಡಲಾ ಅಂಗದಗಳ ದಿವ್ಯಮಂದಾರಮಾಲಾ ।
ಇನನಂತ್ತೊಪು ?ವ ಕೌಸ್ತುಭಮಣಿ ಪಂಕಜಪಾಣಿ ವಕ್ಷದಿ ನಾಗವೇಣಿ ।
ಯನು ಧರಿಸಿದ ಸುಂದರಮಾರಾ ಮೋಹನಾಕಾರಾ ಧೃತ ಪೀತಾಂಬರ ।
ಕನಕವಜ್ರದ ಕಾಂಚಿಯದಾಮ ಕಟಿಯಲಿ ರಮಾಮನೋಹರ ತ್ರಿಧಾಮಾ ।
ಘನವಾದ ಧವಳಾಗಾರದ ಅಲ್ಲಿ ಸರ್ವದಾ ಆಡುವ ಪೂರ್ಣಬೋಧಾ ।।7।।
ಶ್ಲೋಕ
ಅಸಮನಧಿಕ ಮೂರ್ತೆ ಅಧ್ಭುತಾನಂತ ಕೀರ್ತೆ ।ಪಶುಪತಿ ಘನಚಾಪಾ ಪಳದಿ ಭೇದಿಸಿದ ಭೂಪಾ ।
ದಶಶಿರಯಮಧೀರಾ ದೀರ್ಘಬಾಹುಗಳ ಧಾರಾ ।ಅಸಜನುತ ಪದಾಬ್ಜಾ ಕೊಟ್ಟ್ಯೋ ವಿಭೀಷಣಗ ರಾಜ್ಯಾ ।।8।।
ಪದ
ಅದ್ವಿತಿಮಹಿಮ ದಯಾರ್ಣವಾ ನಮ್ಮನುಕಾವಾ ನಿನ್ನ ಮರದೀ ತನುವಾ ।
ನಿದ್ರಾಹಾರಗಳಿಂದ ಬೆಳಸೀದೆ ಪಾಪಾಘಳಸೀದೆ ಮನವಿಷಯಕೊಪ್ಪಿಸಿದೆ ।
ಬುದ್ಧಿಪೂರ್ವಕ ವಾರನಾರಿಯಾಸೇರಿ ಕೋರಿಯಾ ಕರ್ಮ ಮಾಡಿದೆನಯ್ಯಾ ।
ಬುದ್ಧಿವಂತರಾಪಾದಾ ಸೇರಾದೆ ದ್ರೋಹಕ್ಕೊಳಗಾದೆ ಕ್ಷಮಿಸೋ ದಯಾ ಜಲಧೇ ।।8।।
ಶ್ಲೋಕ
ಮುಕುತಾ ಮುಕುತರೀಶಾ ಮೂಲಕಾರಣಮದೀಶಾ ।ಮುಕುತರ ಸುರವೃಕ್ಷಾ ಮೋಕ್ಷದಾತಾನಪೇಕ್ಷಾ ।
ವಿಕಟನಗ ವಿಹಾರಾ ವಿಶ್ವ ತೈಜಸ ಸಮೀರಾ ।ಭಕುತರ ನುಡಿ ಕೇಳಿ ಕಾಯೋ ಕಾರುಣ್ಯಶಾಲಿ ।।9।।
ಪದ
ವಾದಿರಾಜಮುನಿ ಹೃದಯಾ ಸುಕೃತಾಲಯಾ ಅಪ್ರಾಕೃತ ಗುಣನಿಲಯಾ ।
ವೇದೋಕ್ತ ತದನುಕ್ತಖಿಲ ಗುಣಗಣ ಮಂಡನಾ ಧರಣಿದೇವಿ ಶರಣ ।
ಆದರದಿಂದ ಈಕಡೆ ನೋಡು ನೀ ದಯಮಾಡು ನಿನ್ನ ಧ್ಯಾನವ ನೀಡೂ ।
ಬಾದರಾಯಣವಿಠಲತಂದೆ ನೀನೆ ಗತಿ ಎಂದೆ ಅನ್ಯರಪಾದಾಹೊಂದೆ ।।9।।

ಶ್ರೀ ಹಯಗ್ರೀವ ಪಂಚಕಮ್

ಲಶ್ರೀಸಾಶಯ ಪರಿಸರಂತಮಕ್ಶೈರ್ಹಯೈಃ। ಕುಮೇಧುಸಿ ಕುಮೇಧಸಿ ಸ್ಥಿರತಯಾ ನಿಬದ್ಧಂಸದಾ। ಖ(ತ್ವ) ರಸ್ವನಖರಸ್ವನೈಃ ಪರಪುಮರ್ಥನೋತ್ಶೈರ್ಮಿತಂ। ಮನೋರಥ ಮನೋರಥ ಪ್ರತಿನಿಧಿಂ ಬಿಭರ್ಮಿಪ್ರಭೋ।।1।। ಮಹಂ ಬಹುಮಹಂ ಬಹು ಪ್ರಕಟಮೇವ ಕೃತ್ವಾ ರಹಃಸಮೇತ್ಯ ಹಿ ಸಮೇತ್ಯ ಹಿ ತ್ವಿಟುದರಂ ಪಿಬಾಮ್ಯಚ್ಯುತ। ನರಪ್ರಿಯಂ ನರಪ್ರಿಯಂ ವಿರಚಯಾಮಿನೂನಂ ಪ್ರಭೋ ನತೇ ಸ್ಥಿರನತೇ ಸ್ಥಿರಪ್ರಿಯ। ಮಹೋ ಕದಾಽಪ್ಯಾ ಚರಮ್।।2।। ನಮಸ್ತವ ನಮಸ್ತವ ಪ್ರಿಯಪುರಘ್ನದೀನಸ್ಯ ಮೇ ಮನೋಹರ ಮನೋಹರಾಚ್ಯುತ ಪದಾಂಬುಜೇ ಸ್ಥಾಪಯ। ಹೃಷೀಕಪ ಹೃಷೀಕಪಾಲಕ ಮುಕುಂದ ತೈಸ್ಸನ್ನತೈಃ ಸಹಾಖಿಲಸಹಾಖಿಲಾವಪನಮುಂಚ ಮಾಮಾಶ್ರಿತಮ್।।3।। ಮತಾಂ ಸ್ತುತಿಮತಾಂ ಸ್ತುತಿಂ ತುರಗವಕ್ತ್ರತುಭ್ಯಂನಮೋದಿ ಶಾಂತರ ದಿಶಾಂತರ ಸ್ಫುರಿತ ಚಾರುಮರ್ಕೀಸ್ತವ ಸುದಾಮವ ಸುದಾಮವತ್ವರಿಸರದ್ದಿಯೋ ಮೇಽನ್ವಹಂ ಪದಾಂಬುಜಾಭ್ಯುದಯ ಪೂತಲೋಕತ್ರಯ।।4।। ವಿಷೋಪಮ ವಿಷೋಪಮೈರ್ವಿಷಯ ರಾಶಿಭಿರ್ವಂಚಿತಂ ಸದಾಸುರಸ ದಾಸುರಪ್ರಿಯ ಜಿಘೃಕ್ಷಯಾಂ ಧಾಯಿತಮ್। ಭವಜ್ಜನಭವಜ್ಜನಾಂತರ ಕೃತಾರ್ತಿ

ಮೂಲಘ್ನ ಮಾಂ ಹಯಾನನ ಹಯಾನಸಾರ್ದನ ನ ಮುಂಚ ಭಕ್ತಂತವ॥5॥ ಹಯಾಸ್ಯನುತಿ ಪಂಚಕಂಭವಜ ವೇದನಾ ಪಂಚಕಂ ವಿರಕ್ತಿ ಮತಿ ಸಾಧಕಂ ವಿಮಲ ವೃತ್ತಿಸಂಶೋಧಕಂ। ದಶ ಪ್ರಮತಿಸನ್ನತಿ ಸ್ತುತಿರತೇನ ಕರ್ಮಂದಿನಾ। ಮುಕುಂದಮನನಾರ್ಥಿನಾ ವ್ಯರಚಿ ವಾದಿರಾಜೇನ ಹಿ॥6॥

॥ ಇತಿ ಶ್ರೀ ವಾದಿರಾಜಯತಿ ಕೃತಂ ಹಯಗ್ರೀವ ಪಂಚಕಂ ಸಂಪೂರ್ಣಂ॥

ಲಾಲಿ ಶ್ರೀ ಹಯವದನ — ರಾಗ: ಕುರಂಜಿ-ಆದಿತಾಳ

ಲಾಲಿ ಶ್ರೀ ಹಯವದನ। ಲಾಲಿರಂಗವಿಠಲ। ಲಾಲಿ ಗೋಪಿನಾಥ। ಲಕ್ಷ್ಮೀ ಸಮೇತ ಲಾಲಿ॥ಪ॥ ಮುತ್ತು ಮಾಣಿಕ್ಯಮಯದ ತೊಟ್ಟಿಲೊಳಗಿನ ಗೊಲ್ಲ। ಎತ್ತಿದರೆ ಎನ್ನಯ್ಯ। ಕೈಯ್ಯೊಳಗೆ ನಿಲ್ಲ। ಭಕ್ತರಿಗೆ ವರವನ್ನು ಕೊಡಲು ಹೊತ್ತಿಲ್ಲ। ಪುತ್ರನ್ನ ಎತ್ತಿಕೋ ನಂದ ಗೋಪಾಲ॥1॥ ಮನೆಯೊಳಗೆ ಇರನೀತ ಬಲುರಚ್ಚೆವಂತ। ಮನೆವಾರ್ತೆ ಯಾರು ಮಾಡುವರು ಶ್ರೀಕಾಂತ। ಗುಣಗುಣಿಗಳೊಳಗಿಪ್ಪ ಬಹುಗುಣವಂತ। ಗುಣಬದ್ದನಾಗದಿಹ। ಶ್ರೀಲಕ್ಷ್ಮೀಕಾಂತ॥2॥ ಕ್ಷೀರಾಂಬುಧಿ ನಿಧಿಯೊಳಗೆ ಸಜ್ಜೆಯೊಳಗಿರುವ। ಶ್ರೀರಮಣ ಭಕ್ತರಿಚ್ಚೆಗೆ ನಲಿದು ಬರುವ। ಕಾರುಣ್ಯ "ಹಯವದನ" ಕಾಯುವ ತುರುಕರುವ। ನೀರೆ ಗೋಪಿಯರಲ್ಲಿ ಮೆರೆವ ಕಡುಚಲುವ॥3॥

ಲಲಿಮೀರ ನೂಚೇರು ಲಾವಣ್ಯ ನಿಧುಲು (ಲಾಲಿ) — ರಾಗ: ಆನಂದಭೈರವಿ

ಲಲಿಮೀರ ನೂಚೇರು ಲಾವಣ್ಯನಿಧುಲು। ಲಲಿತ ಹೃದಯುಲ ಲಕ್ಷ್ಮೀ ಹಯವದನುಲನು ॥ಪ॥ಲಾಲಿ ಜೋಜೋ॥ ವೇದಸ್ವರೂಪುನಿ ವೇದಾಂತ ವೇಧ್ಯುನಿ। ನಿಧುಲಕು ನಿಧಿಯೈನ ನಿಗಮಾಂತನಿಧಿನೀ॥1॥ ಪರುವಾಲ ಪ್ರೇಯಸಿನಿ ಪವಳಿಂಚು ಪ್ರಿಯಸಖಿನೀ। ಪೆನಗೊನಿ ಪವಳಿಂಚು ಪುರುಷಪುಂಗವುನಿ॥2॥

ಜಯಮಂಗಲಂ ನಿತ್ಯ ಶುಭಮಂಗಲಂ ಭಯನಿವಾರಣಾ

ಜಯಮಂಗಲಂ ನಿತ್ಯ ಶುಭಮಂಗಲಂ। ಭಯನಿವಾರಣಾ ನಮ್ಮ। ಹಯವದನ ಮೂರುತಿಗೆ॥ಪ॥ ಶ್ರೀ ರಮಾದೇವಿಗೆ। ಹಿರಿಯ ಮಗ ಬ್ರಹ್ಮನಿಗೆ। ಮೂರು ಅವತಾರ ಮಾರುತಿರಾಯರಿಗೆ॥ ಆ ಶಾರದಾದೇವಿ ಭಾರತಿ ದ್ರೌಪದಿಗೆ। ಗರುಡ ಶೇಷರಿಗೆ ಮಹಾರುದ್ರ ದೇವರಿಗೆ॥1॥ ತುಲಸಿ ಸೌಪರ್ಣಿ ವಾರುಣಿ ದೇವಿ ಪಾರ್ವತಿಗೆ। ಸರ್ವದೇವತೆಗಳ ಅವರವರ ಪತ್ನಿಯರಿಗೆ॥ ದೇವ ಋಷಿ ಬ್ರಹ್ಮ ಅವರವರ ಪತ್ನಿಯರು। ರಾಜಋಷಿ ಮಾನುಷೋತ್ತಮರು ಯತಿಗಳಿಗೆ॥2॥ ಮಂಗಳಾರತಿ ಭಕ್ತಿಯಿಂದ ಮಾಡಲು ಸದಾ। ಮಂಗಲವೆ ಆಗುವುದು ರಂಗನೊಲಿವಾ॥ ಮಂಗಲಾಂಗಿಯು ಮಹಾಲಕುಮಿ ತಾ ಒಲಿವಳು। ಮಂಗಳನೊಲಿಯುವನು। ಭೂಪತಿ ವಿಠಲ ದೂತಾ॥3॥

ಜಯಮಂಗಳಂ ನಿತ್ಯ ಶುಭಮಂಗಳಂ ಮಂಗಳಂ ಹಯವದನ — ರಾಗ: ಭೈರವಿ, ಝಂಪೆತಾಳ

ಜಯಮಂಗಳಂ ನಿತ್ಯ ಶುಭಮಂಗಳಂ॥ಪ॥ ಮಂಗಳಂ ಹಯವದನ ಪದಕಂಜಮಧಪನಿಗೆ। ಮಂಗಳಂ ವಜ್ರಧಾರನಿಗೆ ಮಂಗಳಂ॥ಅ.ಪ.॥ ಮಂಗಳಂ ವಾಗೀಶ ಕರಕಂಜಜಾತನಿಗೆ। ಮಂಗಳಂ ಗುರು ವಾದಿರಾಜರಾಯರಿಗೆ॥ ಮಂಜುಳಾಕಾರಗೆ ಮಹಿಮ ಗುರುವಂತನಿಗೆ। ಕಂಜದಳ ನೇತ್ರಗೆ ಕಾಮಾರಿಗೆ॥1॥ ಅಂಜನಾಸುತಮತಗೆ ಅನುಕೂಲನಾದವಗೆ। ರಂಜಿಸಿ ಮುನಿವರ್ಯ ದ್ವೈತ ಧೀರನಿಗೆ॥ ಪರಿ ಪರಿ ಚರಿತ್ರನಿಗೆ ಪರಿಪೂರ್ಣ ಚಿತ್ಸುಖಿಗೆ। ಪರಮಹಂಸಾಚಾರ್ಯ ಗುರುವರ್ಯಗೆ॥2॥ ಶರಣಜನ ಪಾಲಕಗೆ ಸದ್ಧರ್ಮನಿರತನಿಗೆ ಉರಗ ಭೂಷಣಗೆ ಉರ್ವಿಯೊಳು ಮೆರೆವವಗೆ॥ ವಿದ್ವದಾರ್ಯನಿಗೆ ಪುಂಡ್ರಾಂಕಿತಗೆ ಉತ್ಕೃಷ್ಟ ತೇಜನಿಗೆ। ಮುದ್ದು ಹಯವದನನ ಮುದದಿಂದ ಪೂಜಿಪಗೆ॥3॥

❖ ❖ ❖

33. ಶ್ರೀರಾಘವೇಂದ್ರ ಸ್ವಾಮಿಗಳ ಆರಾಧನೆ

ಪೂಜ್ಯಾಯ ರಾಘವೇಂದ್ರಾಯ

ಪೂಜ್ಯಾಯ ರಾಘವೇಂದ್ರಾಯ ಸತ್ಯ ಧರ್ಮ ರತಾಯಚ। ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ।। (ಧ್ಯಾನಶ್ಲೋಕ)

ಇಕ್ಷ್ವಾಕು ವಂಶ್ಯನೃಪ(ಶ್ರೀರಾಘವೇಂದ್ರ ಸುಪ್ರಭಾತಂ)

ಇಕ್ಷ್ವಾಕು ವಂಶ್ಯನೃಪ ಮೌಕ್ತಿಕಭೂಷಿತಾತ್ಮನ್। ಶ್ರೀಬ್ರಹ್ಮಹಸ್ತನಲಿನಾರ್ಚಿತ ಪಾದಪದ್ಮ। ಆನಂದತೀರ್ಥಮುಖತೀರ್ಥ ನಿಷೇವ್ಯಮಾಣ। ಶ್ರೀಮೂಲರಾಮ, ಭಗನ್।ತವಸುಪ್ರಭಾತಂ।।1।। ಶ್ರೀದಿಗ್ವಿಜಯರಾಮಸ್ತುತಿ- ಮಧ್ವಾಖ್ಯಭಾವಿವಿಧಿ ನಿರ್ಮಿತರೌಪ್ಯ ಮೂರ್ತೆ। ರಮ್ಯಾಂಘ್ರಿ ಪೀಠವಿಲಸತ್‌ಸ್ವದಶಾವತಾರ। ಶೀರ್ಷಾಂಘ್ರಿಶೋಭಿತಸುದರ್ಶನ ದರ್ಶನೀಯ। ಶ್ರೀ ರಾಮದಿಗ್ವಿಜಯಿನಸ್ತವ ಸುಪ್ರಭಾತಂ।।2।। ಶ್ರೀಜಯರಾಮಸ್ತುತಿ- ಟೀಕಾಕೃತೀದ್ಧಜಯತೀರ್ಥ ಸಮರ್ಥಿತಾಗ್ರ್ಯ। ಸ್ವೋರಸ್ಥಸೀತ ಜಯರಾಮ ಜಗಜನ್ನಿಯಂತಃ। ಶ್ರೀಭ್ವಾದಿಪಾರ್ಶ್ವಪರಿಶೋಧಿತ ವಾಸುದೇವ। ಶ್ರೀವ್ಯಾಸದೇವ ಕಲಯೇ ತವ ಸುಪ್ರಭಾತಂ।।3।। ಶ್ರೀನ್ಯಸಿಂಹಸ್ತುತಿ- ಸ್ವಪ್ನೋಪಬ್ದವಿಬು ದೇಂದ್ರ ಕರಾರ್ಚ್ಯ, ಬಾಹು। ದ್ವ್ಯಷ್ಟಾಭಿತ ಶೋಧಿತ ಹಿರಣ್ಯಕಗರ್ವಹಾರಿನ್। "ದುರ್ವಾದಿ ವಾರಣವಿದಾರಣ" ದಕ್ಷಕಾರಿನ್। ಶ್ರೀಮಜ್ಜಯೀಂದ್ರ ಸುಯಮೀಂದ್ರ ಸುಯಮೀಷ್ಟದ ಸುಪ್ರಭಾತಂ।।4।। ಶ್ರೀಲಕ್ಷ್ಮೀನಾರಾಯಣ ಮತ್ತು ಶ್ರೀಸಂತಾನ ಕೃಷ್ಣದೇವರ ಸ್ತುತಿ- ಶ್ರೀಮತ್ಸು ದೀಂದ್ರಕರಪಂಕಜಸೇವ್ಯ ವೀಶ ಸ್ಕಾಂಧಾಧಿರೂಢಕಮಲೇಶ। ಸುವರ್ಣಮೂರ್ತೆ। ಶ್ರೀರಾಘವೇಂದ್ರ ಸುಕರಾರ್ಚಿತ ಸರ್ವದಶ್ರೀ ಸಂತಾನಕೃಷ್ಣ ಭವತ್ರಾತವ ಸುಪ್ರಭಾತಂ।।5।। ಶ್ರೀಕೃಷ್ಣಸ್ತುತಿ- ಸಂಪೂರ್ಣ ಭೋಧಸುಖಪೂರ್ಣ ಗುಣೈಕಮೂರ್ತಿ। ಲಕ್ಷ್ಮ್ಯಾದಿಭಿನ್ನ ಶುಭಜೀವ ಗಣಾದ್ವರಿಷ್ಠ। ಜನ್ಮಾದ್ಯಮುಷ್ಯ ವಿದಧತ್ ಶ್ರುತಿಗಮ್ಯ ಕೃಷ್ಣ। ಶ್ರೀರೌಪ್ಯಪೀಠ ವಸತೇ ತವ ಸುಪ್ರಭಾತಂ।।6।। ಶ್ರೀವೆಂಕಟೇಶಸ್ತುತಿ- ವೇದೈಕವೇದ್ಯ ಭವವೈದ್ಯ ಸುದೇವತಾದ್ಯ। ಬ್ರಹ್ಮಾದಿವಂದ್ಯ ನಿರವದ್ಯಸದ್ಗುಣಾಢ್ಯ। ಮಧ್ವಾದ್ಯಪೀಠಗಯತೀಂದ್ರ ನೀಷೇವ್ಯಮಾಣ। ಭೋವೆಂಕಟೇಶ ಭವತಾತ್ತವ ಸುಪ್ರಭಾತಂ।।7।। ಶ್ರೀಲಕ್ಷ್ಮೀ ಸ್ತುತಿ- ಕೀಲಾಲಜಾಕ್ಷ ಮದುವೈರಿ ಮನೋನುಕೂಲ। ಲೀಲಾವಿಲಾಸರಸೀಕೆಖಿಲೋಕ ಮಾತಃ। ನೀಲಾಲಕಾಲಿಕಲಿತಾಮಲ ಫಾಲದೇಶೆ। ಬಾಲಾರ್ಕಭೆ ಸುಕಮಾಲೆ। ತವಸುಪ್ರಭಾತಂ ।।8।। ಅವತಾರತ್ರಯ ವಾಯುದೇವಸ್ತುತಿ- ಶ್ರೀರಾಮಚಂದ್ರ ಪರಿಷೇವಕ ಭೋ ಹನುಮಾನ್। ಭೋ ಭೀಮೇಭೀಮಕೃತಿತೋಷಿಕೃಷ್ಣ ಜಿಷ್ಣೋ। ಭೋ ಮದ್ವ ಮದ್ವ ಹಿತದೇವಸುತತ್ತ್ವನೇತಃ। ಶ್ರೀಭಾರತೀಶ ಸುಮತೇತವ ಸುಪ್ರಭಾತಂ।।9।। ಶ್ರೀಜಯತೀರ್ಥ ಸ್ತುತಿ- ಅ ಕ್ಷೋಭ್ಯತೀರ್ಥ ಘೃಥುತೀರ್ಥಸಮುಸ್ಥಿತ ಶ್ರೀ। ವಕ್ಷೋಭಿನೇತ್ರರುಚಿಪಾತ್ರ ಸದರ್ಚ್ಯಗಾತ್ರ। ರಕ್ಷೋಭಿಜಾತಮತ ಜಾತತಮಸ್ಸುಧಾಂಶೋ। ಟೀಕಾಕೃದಾಢ್ಯ ಜಯರಾಟ್ ತವ ಸುಪ್ರಭಾತಂ।।10।। ಶ್ರೀವ್ಯಾಸರಾಜಸ್ತುತಿ- ಸಂಸಾರತಾಪತತಿಶಾಮಕ ಚಂದ್ರಿಕಾಢ್ಯ। ನ್ಯಾಯೊಮೃತಾಪಹೃತಸಾಧು ಕುಮರ್ತ್ಯಭಾವ। ಸತ್ತರ್ಕತಾಂಡವವಿನಿರ್ಜಿತ ದುರ್ಗಿರೀಶ। ಶ್ರೀವ್ಯಾಸರಾಜ ಭವಾತ್ ತವ ಸುಪ್ರಭಾತಂ।।11।। ಶ್ರೀರಾಘವೇಂದ್ರ ಸ್ತುತಿ- ಮಿತ್ರಾಕ್ಷಮಾಪತಿವರೋತ್ಥ ಪವಿತ್ರಮೀರ್ತೇ। ಪ್ರತೀಶವಾಹಿಕರುಣಾಪ್ತ ಶುಭಾರ್ಥ ಪೂರ್ತೇ। ಸುತ್ರಾಮಲೋಕಸುರಗೀತ ಚರಿತ್ರಕೀರ್ತೇ। ಶ್ರೀರಾಘವೇಂದ್ರಯತಿರಾಟ್ ತವ ಸುಪ್ರಭಾತಂ।।12।। ಪೂರ್ಣಪ್ರಭೋಧಪರಿಪೂರ್ಣ ಕೃಪಾ ಪ್ರಪೂರ್ಣ। ಚೂರ್ಣೀಕೃತಾಘ ಕರುಣಾರ್ಣವ ಸ್ವರ್ಣಕಾಂತ। ನಿರ್ಣೀತಪೂರ್ಣಮತಿಭಾವ ಸುರ್ಪೂರ್ಣಟೀಕಾ। ಕೃಧ್ಭಾವದೀಪ ಕಕೃತೀಢ್ಯ ತವ ಸುಪ್ರಭಾತಂ।।13।। ತುಂಗಾತರಂಗ ಪರಿಪೂರಿಪೂತಸುಮಂತ್ರಸದ್ಮ। ರಂಗಾರಿ ಪುತ್ರವಿಹಿತಾಮ ಲಯಜಙ್ಗರಂಗೇ। ಶೃಂಗಾರಬೃಂದನೇಶ ಪದಾಬ್ಜಸಂಗಿ। ಭುಂಗಾದ್ಯತೇ ಭವತುಮಂಗಳ ಸುಪ್ರಭಾತಂ।।14।। ಸಂತಾಪ ಸಂಸ್ಕೃತಿಪಾಪ ವಿಸಂಚಿತ ಹಂತಃ। ಸಂತೋಷಕಾಂತಿಧನಸಂತತಿದೀಪ್ರಾದಾತಃ। ಹಂತಖಿಲವ್ರತಿಕುಲೇಢ್ಯ ಸದಂತರಂಗ। ಮಂತ್ರಾಲಯೇಶ ಭವತಾತ್ ತವ ಸುಪ್ರಭಾತಂ।।15।। ಭೋಗಾನ್ ಪ್ರದಾತರಪ್ರನೇತರಿ ಹೋರುರೋಗಾನ್

ಯೋಗಾನ್ವಿಧಾತರಪಹರ್ತ ರಘಾರಿ ವೇಗಾನ್ ರಾಗನ್ ನಿಹಂತರಧಿ ಯಂತರಸಂಗಿನಾಗಾನ್ ಶ್ರೀರಾಘವೇಂದ್ರ ಯತಿರಾಜ। ತವಸುಪ್ರಭಾತಮ್ ।।16।। ತಂಜಾಪುರೇ ವಿಜಯ ರಾಘವ ಭೂಪದತ್ತಾಂ ಮಾಲಾಂಸಮರ್ಪ್ಯ ರುಚಿರಾಮನಲಾಯ ಭೂಯಃ। ಸ್ವೀಕೃತ್ಯ ಭೂಮಿಪಯೇಥ ಪರೇದ್ಯುರಗ್ನೇಃ ಸಂದರ್ಶ್ಯ ಸನ್ನುತ ಗುರೋ ತವ ಸುಪ್ರಭಾತಮ್।।17।। ವೇದೋಪ್ರಮಾಣಮಿತಿ ಭೂಸುರನಿಂದಕಂ, ಗೋ ಮಂತ್ರೇಣ ತಂ ಮುಸಲಮಂಕುರಿತಂ ವಿತನ್ವನ್। ವೇದಪ್ರಭಾವಶರಣಾಗತಸ್ವೈರಸಂಗಂ ಭಕ್ತಂ ಧರೇಶಮಕರೋಸ್ತವ ಸುಪ್ರಭಾತಮ್।।18।। ಚೌತೇರಸೇ ಹಿ ಪತಿತಂ ಮರಣಂಗತಂ ತಂ ಗ್ರಾಮಾಧಿನಾಯಶಿಶುಂ ನಿಜಮಂತ್ರಶಕ್ತ್ಯಾ। ಸಂಜೀವಯನ್ ಪರಿಮಳಾರ್ಯ। ಕಿರೀಟಶೈಲಂ ಸಂಪ್ರಾಪ್ಯಸರ್ವವಿನುಸ್ತವ ಸುಪ್ರಭಾತಮ್।।19।। ಶಿಷ್ಟಾಯ, ಶಾಂತಹೃದಯಾಯ ಕವೀಶ್ವ ರಾಯ, ಸನ್ನಂತ್ರಧಾಮಲಸಿತಾಯ, ವರಪ್ರದಾಯ। ಭಕ್ತಾಯ, ಮುಕ್ತಿದರತಾಯ, ವಿಧೀಢ್ಯ ವಿಷ್ಣು-ಚಿತ್ತಾಯ, ಭಕ್ತನಿವಹಾಯ ಚ, ಸುಪ್ರಭಾತಮ್।।20।। ಸತ್ಯೇಶಸೇವಕ ಗುಣೋಜ್ವಲ, ಶಂಕುಕರ್ಣ ಪ್ರಹ್ಲಾದರೂಪಪರಿಸೇವಿತ ಶ್ರೀನೃಸಿಂಹ। ವ್ಯಾಸಾರ್ಯರೂಪಪರಿತೋಷಿತ ಯಾದವೇಂದ್ರ ಶ್ರೀರಾಘವೇಂದ್ರ ಭವತಾತ್ ತವ ಸುಪ್ರಭಾತಮ್।।21।। ಶ್ರೀದಾಯ, ಮಾಧವ, ಶಿವಧವ ಭೇದತತ್ತ್ವಬೋಧಾಯ, ಸಾಧುಭವವೇದನನೋದನೇನ। ಮೋದಾಯ, ಯಾದವಪರತ್ವ ಸುಸಾಧನಾಯ, ಬೃಂದಾವನೇ ನಿವಸತ್ತ ಸ್ತವ ಸುಪ್ರಭಾತಮ್।।22।। ವೇದತ್ರಯೀನಿಖಿಲಮಂತ್ರ ಪುರಾಣಗೀತಾ-ಭಾಷ್ಯಾಣ್ಯ ಥೋಪನಿಷದಾಂ ದಶಕಂ ವಿವೃಣ್ವನ್। ದ್ವೈತಾಗಮಂ ಸುದೃಡಮಾಶು ವಿದಾಯ, ಲೋಕ ಮಾನ್ಯೋಸಿ, ಮಂತ್ರನಿಲಯಾಧಿಪ ಸುಪ್ರಭಾತಮ್।।23।। ವೃಂದಾರಕೇಂದ್ರ ಪರಿವಂದಿತನಂದ ನಂದಿಪಾದಾರವಿಂದ ಮಕರಂದ ಸುಧಾಪ್ರಮೋದಿನ್। ವಂದಾರುಬೃಂದಾವರದೇಂದ್ರ। ಮುನೀಂದ್ರ ಭಕ್ತ ವೃಂದಾವನಾಖಿಲಗುರೋ ತವ ಸುಪ್ರಭಾತಂ।।24।। ಸಿದ್ಧಿಮಸೂದ ಇತಿ ಯಾವನ ಭೂಮಿಪಾಲೋಭಕ್ಯಂ, ಪರೀಕ್ಷಣಕೃತೇರ್ಪಿತವಾನ್, ಫಲಾದಿ। ಮಂತ್ರೋಕ್ಷಣೇನ ಕೃತವಾನ್ ಸತು, ಮಂತ್ರಸದ್ಮ ದತ್ವಾ, ನನಾಮ, ಮಹಿಮಾದ್ಭುತ ಸುಪ್ರಭಾತಂ।।25।। ಮಂತ್ರಾಲಯೇಶ ಪರಿಶೋಭಿವರಾತ್ಮ ಚಿತ್ತ ಮಂತ್ರಾಲಯೇಶಕರುಣಾಪ್ತಸಮಸ್ತವಿತ್ತ। ಮಂತ್ರಯೇಶಪರಿಸೇವನಮತ್ತ ಚಿತ್ರ ಮಂತ್ರಲಯೇಶ ಕಲಯೇ ತವ ಸುಪ್ರಭಾತಂ।।26।। ಶ್ರೀಮೂಲರಾಮ ಪದಪಂಕಜಭೃಂಗ ರಾಜ ಶ್ರೀಮಧ್ವರಾಜ ಮತಸಾರಸಹಂಸರಾಜ। ಶ್ರೀರಾಘವೇಂದ್ರ ವರವಂಶಜಯೋಗಿರಾಜ। ಶ್ರೀಸಂಯಮೀಂದ್ರ ಗುರುರಾಜ ಶುಭಸುಪ್ರಭಾತಂ।।27।। ಏತಲ್ಲಿಲೇಖ ಶುಭದಾಯಕ ಸುಪ್ರಭಾತಸ್ತೋತ್ರಂ ಗುರೋಃ ಕರುಣಯಾ ಗುರುರಾಜನಾಮಾ। ಪ್ರಾತಃ ಪ್ರಬುದ್ಧ್ಯ, ಪಠತೀಹ ಜನೋ, ಯ ಏತತ್, ಸ ಪ್ರಾಪ್ನುಯಾದ್ಧಿ ಸಕಲಾರ್ಥಸುಮಂಗಲಾನಿ।।28।।

ಬ್ರಹ್ಮ ದೇವ ಕರಾರ್ಚಿತ (ಶ್ರೀ ರಾಘವೇಂದ್ರ ಸುಪ್ರಭಾತಮ್)

ಬ್ರಹ್ಮ ದೇವ ಕರಾರ್ಚಿತ ರಾಮಚಂದ್ರ। ಮಧ್ವಸನ್ಮುನಿ ಮಹಿಮ ಚರಿತು। ರಾಘವೇಂದ್ರ ಯತೀಂದ್ರ ರಾರಾಧ್ಯಮೂರ್ತಿ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ।।ಜನತೆಗೆ ವಾರ್ತೆಯಿತ್ತ ಶ್ರೀ ರಾಮದೂತ। ಕೃಷ್ಣ ಮೂರುತಿದಾಸ ಶ್ರೀ ಭೀಮಸೇನ। ವ್ಯಾಸಮುನಿಶಿಷ್ಯವರ್ಯ ಶ್ರೀ ಮಧ್ವರಾಯ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ।। ಸತ್ಯ ಲೋಕಾಧಿಪತಿವಾಣಿ ಸತ್ಯ ಮಾಡಿ। ಜನಿಸಿದ ಮೃತ್ಯುಲೋಕದಿ ಶಂಖು ಕರ್ಣ। ಆಶ್ರಿತಾಮರ ಭೋಜ। ಪ್ರಲ್ಹಾದರಾಜ ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ।। ಚುದ್ರಿಕಾಚಾರ್ಯ ಕರ್ನಾಟಕದ ಚಕ್ರವರ್ತಿ। ವಿಜಯ ನಗರಾಧಿಪನೆ ಕಾಯ್ದ ವಿಬುಧವಂದ್ಯ। ಗೋಪಿಕೃಷ್ಣ ಕುಣಿಸಿದ ಭೂಪ ನೀನೇ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ।।ವೇಂಕಟೇಶ್ವರ ವರಪುತ್ರ ವೆಂಕಟಾಚಾರ್ಯ। ವೀರ ತಿಮ್ಮಣ್ಣ ಸತ್ಪುತ್ರ ವೆಂಕಟಾಚಾರ್ಯ। ಗೋಪಿಕಾಂಬಿಯ ವರಪುತ್ರ ವೆಂಕಟಾಚಾರ್ಯ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ।। ತಿಳಿಸಿದಳು ವಾಣಿ ನಿಮ್ಮಯ ಧ್ಯೇಯವನ್ನು। ಶ್ರೀಸುಧೀಂದ್ರರು ರಾಮಾಜ್ಞೆ ಶಿರದಿ ಧರಿಸಿ ಆಶ್ರಯವನ್ನಿತ್ತರೈ ವೆಂಕಟಾಚಾರ್ಯ ನಿಮಗೆ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ।। ಜಗವು ಬಾಯಲಿ ಕಂಡಂತೆ ಶಾಸ್ತ್ರವೆಲ್ಲ। ಬುಟ್ಟಿ ಸಂಗ್ರಹದಲಿ ಕಂಡು ಪರಿಮಳಾಚಾರ್ಯ ನಿಮಗೆ ಮುದದಿ ಮೆಚ್ಚಿದ ಜೈಮಿನಿ ಮುನಿಯು ಕೂಡ।ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ।। ಬ್ರಹ್ಮ ಸೂತ್ರಕೆ ಟಿಪ್ಪಣೆ ಬರೆದ ಸುಕವಿ। ಪರಿಮಳಾಯ ಹೋಕಾರ್ಯಂ

ಮರೆಯಲಹುದೆ ವೇದಗಳಿಗೆಲ್ಲ ಭಾಷ್ಯವಂ ಬರೆದ ದೇವ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ಶ್ರೀಮಹಾನಂದ ತೀರ್ಥರು ಜಯವೇಂದ್ರ ರಾಮಚಂದ್ರ ಕವೀಂದ್ರರು ರಾಮಪೂಜೆ। ಮಾಡಿದ ನಿಮ್ಮ ವೈಭವ ನೋಡುತಿಹರು। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ಧೀರ ನೀ ವಿತ್ತ ಮಣ್ಣೆ ಬಂಗಾರವಾಯ್ತು। ನೀ ಹರಸೆ ದಡ್ಡ ವೆಂಕಣ್ಣ ಮಂತ್ರಿಯಾದ। ಘೋರ ಕ್ಷಾಮವು ನೀ ಬರೆ ದೂರವಾಯ್ತು। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ಗಾನ ವಿದ್ಯಾ ವಿಶಾರದಾ ಗಾನಲೋಲ। ನಿಪುಣ ಸಂಗೀತವೆತ್ತರು ನಿನ್ನ ಮಹಿಮೆ। ನೋಡಿ ಕೊಂಡಾಡಿ ಕುಣಿದಾಡಿ ಪಾಡುತಿಹರು। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ಮೂಕನು ವಾಗ್ಮಿ ಮಾಡಿದ ಭೂಪ ನೀನು। ಕುರುಡಂಗೆ ಕಣ್ಣು ಕೊಡುತಿರ್ಪ ಗುರುವು ನೀನು। ಆಯುರಾರೋಗ್ಯಗಳ ನೀಡುಯತಿವರೇಣ್ಯ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ಪಂಢರೀಪುರ ತಿರುಪತಿ ಬದರಿಕಾದಿ ಸಕಲಯಾತ್ರೆಯ ಫಲವು ಮಂಚಾಲೆಯಲ್ಲಿ। ಪ್ರಾಪ್ತವಹುದೆಂದು ಬಂದಿಹರು ಭಕ್ತರೆಲ್ಲ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ಹರಿಕಥಾಮೃತ ಸಾರವಂ ಬರೆದು ಸುಕವಿ ನಿನ್ನ ಸೋದರ ಕುಳಿತಿಹ ನಿನ್ನ ಮುಂದೆ। ಕೂಗಿ ಕರೆಯುವ ವೀಕ್ಷಿಸೈ ಯೋಗಿವರ್ಯ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ಶ್ರೀಗುರು ಸ್ತುತಿ ರಚಿಸಿದ ಶಿಷ್ಯರತ್ನ। ಶ್ರೀಮದಪ್ಪಣ್ಣಾಚಾರ್ಯನು ಶಿರವಬಾಗಿ। ಮುಂದೆ ನಿಂತಿಹ ವೀಕ್ಷಿಸೈ ಪರಿಮಳಾಚಾರ್ಯ ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ಗುರು ಗುಣಸ್ತುತಿ ರಚಿಸಿದ ಕೋವಿದಮಣಿ। ನಿಮ್ಮ ಮರಿಮಗ ವಾದೀಂದ್ರ ನಿಯಮಿ। ಬಂದು ನಿಂತಹ ವೀಕ್ಷಿಸೈ ಪರಿಮಳಾಚಾರ್ಯ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ವರದ ವಸುಯೀಂದ್ರ। ಧೀರೇಂದ್ರ ವರಮುನೀಂದ್ರ। ಶ್ರೀ ಸುಶೀಲೇಂದ್ರ ಸುಯಮೀಂದ್ರ ಸುಮತೀಂದ್ರ। ರಾದಿಯತಿವರ ರಾದಿ ಕಾದಿಹರು ನೋಡು। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ದೇಶಿಕೋತ್ತಮ ಸುಜಯೀಂದ್ರ ತೀರ್ಥರು। ಕನಕ ಕವಚವ ತೊಡಿಸಿದ ಘನಮುನಿಂದ್ರ। ಬಂದು ನಿಂತಿಹ ವೀಕ್ಷಿಸೈ ಪರಿಮಳಾಚಾರ್ಯ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ರಜತ ರಥ ಸೇವೆ ನಿಮಗಿದು ಶ್ರೀರಾಘವೇಂದ್ರ। ಮೊದಲು ಕನಕಾಭಿಷೇಕ ಮುಗಿಯಲೆಂದು। ನಿಂತಿಹರು ಸಿದ್ಧರಾಗಿ ಶ್ರೀಮಂತರೆಲ್ಲ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ಶ್ರೀವಿರೋಧಿ ಶ್ರಾವಣ ಬಹುಳ ಬಿದಿಗೆ। ದಿವ್ಯ ಬೃಂದಾವನವ ಪೊಕ್ಕು ದೇಶಿಕೇಂದ್ರ। ಮೂರು ನೂರಬ್ಧಮುತ್ಸವ ಮುದದಿ ಕಂಡೆ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ಬೇಡಿ ಬೇಡಿದ ವರಗಳ ನೀಡುತಿರ್ಪ। ದೇವಮಣಿ ನೀನೇ ಸ್ರೀ ಸುರಧೇನು ನೀನೆ। ಭಕ್ತವಾಂಛಿತವೀವ ಕಲ್ಪತರು ನೀನೇ। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ಭಕ್ತವತ್ಸಲ ಭವದೀಯ ಭಕ್ತ ಗುಣವ। ತುಂಗೆಯಲಿ ಮಿಂದು ಮಡಿಯುಟ್ಟು ದೀಕ್ಷೆಯಿಂದ। ಸೇವಿಪರು ನಿನ್ನ ಬೇಗ ಪ್ರಸನ್ನನಾಗು। ಸುಪ್ರಭಾತವು ನಿಮಗೆ ಶ್ರೀರಾಘವೇಂದ್ರ॥ ಮೂಲ ರಾಯರು ಪೂಜಿಪ ಪುಣ್ಯ ಮೂರ್ತಿ। ಭೀಮಕವಿ ನಾನು ನಿಮ್ಮಯ ನಾಮಬಲದಿ। ಪೂರ್ವಬೋಧ ಪೂರ್ಣಾಂಬುಧಿ ಪೂರ್ಣಚಂದ್ರ। ರಮಣಗುಣಸಾಂದ್ರ ಮಂಗಳಂ ಶ್ರೀ ರಾಘವೇಂದ್ರ॥

ತ್ವನ್ಮಂಗಲಾನನ ಸರೋಜಸುರಂಗಧಾಮ್ನಿ (ಶ್ರೀ ರಾಘವೇಂದ್ರ ಸುಪ್ರಭಾತಮ್)

ತ್ವನ್ಮಂಗಲಾನನ ಸರೋಜಸುರಂಗಧಾಮ್ನಿ। ನೃತ್ಯದ್ವಿರಿಂಚರಮಣೀಕಬರೀವಿಲಾಸತ್॥ ಮಂದಂ ಗಲತ್ಕುಸುಮ ಸಂತತಿರೇವ, ವಾಣೀ। ಹೃದ್ಯಾನು ಹಂತ। ಗುರುರಾಜ ಶುಭಪ್ರಭಾತಂ॥1॥ ತ್ರಿಶಂತ್ಸುವತ್ಸರಮಪಾರದಯಾರ್ದ್ರ ದೃಷ್ಟ್ಯಾ। ಸಂವೀಕ್ಷ್ಯಪಾನ್ ನಿಜಜನಾನ್ ಗುರುರಾಘವೇಂದ್ರ ॥ ಶ್ರೀಸಂಯಮೀಂದ್ರ ಪರಿಕಲ್ಪತ "ಸಪ್ತರಾತ್ರ। ಭಕ್ತ್ಯುತ್ಸವೇನ" ಮುದಿತೋಸಿ ಶುಭಪ್ರಭಾತಂ॥2॥ ಉತ್ತಿಷ್ಠ ಜಾಗೃಹಿ ಗುರೋ ಬಹಿರೇಹಿ ಪಾಹಿ। ಬೃಂದಾವನಾತ್ ಶ್ರೀಶತಮಾನಶುಭೋತ್ಸವೇದ್ಯ॥ ಭಕ್ತಾಘಭಂಜನಮನೋರಥ ಪೂರಣಾಯ। ಸನ್ಮಂಗಲಾಯ ಲಯೋ ತವ ಸುಪ್ರಭಾತಂ॥3॥ ವಾಕ್ಯಾರ್ಥ-ಮಂತ್ರ-ಹರಿಗೀತ-ಪುರಾಣ-ವೇದ-। ಪಾರಾಯಣಾಮಿತ-ಸುಗಾಯನ ವಾದ್ಯಘೋಷ್ಟೈಃ ॥ ಸಂಪ್ರಾರ್ಥಯಂತಿ ಸುಜಯಿಂದ್ರ ಯತೀಶ್ವರಾಃ ಸದ್। ವೃಂದಾವನಾಯ ಕಲಯೇ ತವ ಸುಪ್ರಭಾತಂ॥4॥ ಶ್ರೀರಾಘವತ್ರಿಶತವರ್ಷ ಮಹೋತ್ಸವೇಸ್ಮಿನ್। ತ್ವತ್ಪಾದಪದ್ಮ ಪರಿಸೇವನಮಾನಸಾ ಯೇ॥ ಸಂಪ್ರಾರ್ಥಯಂತಿ ಮಿಲಿತಾಸ್ತ್ವದನುಗ್ರಹಾರ್ಥ। ಮುತ್ತಿಷ್ಠ ಬೃಂದಸದನಾತ್ತವ ಸುಪ್ರಭಾತಂ॥5॥

ರಾಯರ ಕಂಡೀರ **ರಾಗ: ಪುನ್ನಾಗವರಾಳಿ**

ರಾಯರ ಕಂಡೀರ ರಾಘವೇಂದ್ರರ ಕಂಡೀರ॥ಪ॥ ಮಂತ್ರಾಲಯದಲಿ ವಾಸಿಪರಿವರು ಮೂಲರಾಮನ ಪೂಜಿಪರಿವರು। ಭಕ್ತರ ಸಲಹುವ ರಾಯರು ಇವರು। ಮುಕ್ತಿಯ ನೀಡುವ ಗುರುಗಳು ಇವರು॥1॥ ಹೊಳೆಯುವ ತುಳಸಿ ಮಾಲೆಯಧರಿಸಿ। ಕರದಲಿ ದಂಡ ಕಮಂಡಲ ಪಿಡಿದು। ಘನತರವಾದ ಪಾದುಕೆ ಮೆಟ್ಟಿ। ನಮ್ಮ ಕಣ್ಣಿಗೆ ಗೋಚರಿಪರಿವರು॥2॥ ಪ್ರಥಮದಲ್ಲಿ ಪ್ರಹ್ಲಾದರಾಗಿಹರು। ದ್ವಿತೀಯದಲ್ಲಿ ಶ್ರೀವ್ಯಾಸರಾಗಿಹರು। ತೃತೀಯದಲ್ಲಿ ಶ್ರೀ ರಾಘವೇಂದ್ರರು। ಶೇಷಗಿರೀಶನ ದಾಸರು ಇವರು ರಾಯರು॥3॥

ನಿಲ್ಲು ಹಂಸವೇ ಎಲ್ಲಿ ಹಾರುವೆ **ರಾಗ: ಹಿಂದೋಳ-ಆದಿತಾಳ**

ನಿಲ್ಲು ಹಂಸವೇ ಎಲ್ಲಿ ಹಾರುವೆ। ಸೇರಿಸೆನ್ನ ರಾಘವೇಂದ್ರ ಸನ್ನಿಧಾನಕೆ॥ಪ॥ ಜ್ಞಾನವೆಂಬ ನವರತ್ನದ ಮಂಟಪದಿ। ಜ್ಞಾನಲೋಲ ರಾಯರ ಕುಳ್ಳಿರಿಸಿ। ಅರ್ಪಿಸುವೆ ಈ ನನ್ನ ತನುಮನ। ಭಜಿಸುವೆ ಮೋದದಿಂದ ಅನುದಿನ॥1॥ ಕಾಡುಮೇಡು ಸುತ್ತಿ ಸೊರಗಿ ಬಳಲಿದೆ। ರಾಯರ ಸ್ವರೂಪವೆಲ್ಲೂ ಕಾಣದೆ। ಹಿಮದ ಗಿರಿಯ ಮೇಲೆ ಏರಿ ನೋಡಿದೆ। ಕಾಣಲಿಲ್ಲ ಪೂಜ್ಯ ರಾಘವೇಂದ್ರರಾಯರು॥2॥ ರಾಘವೇಂದ್ರ ರಾಘವೇಂದ್ರ ರಾಘವೇಂದ್ರ ಗುರು ರಾಘವೇಂದ್ರ॥

ಬಾರೋ ರಾಘವೇಂದ್ರ ಬಾರೋ

ಬಾರೋ ರಾಘವೇಂದ್ರ ಬಾರೋ। ಕಾರುಣ್ಯ ವಾರಿಧಿಯೇ ಬಾರೋ। ಆರಾಧಿಪ ಭಕ್ತರ ಭೀಷ್ಟ। ಪೂರೈಸುವ ಪ್ರಭುವೇ ಬಾರೋ॥ಪ॥ ರಾಜವಂಶೋದ್ಭವನ ಪಾದ। ರಾಜೀವ ಭೃಂಗನೇ ಬಾರೋ। ರಾಜಾಧಿರಾಜರೊಳುವಿ। ರಾಜಿಸುವ ಚಲುವ ಬಾರೋ॥1॥ ವ್ಯಾಸರಾಯನೆನಿಸಿ ನೃಪನ। ಕ್ಲೇಶ ಕಳೆದವನೆ ಬಾರೋ। ಶ್ರೀಸುಧೀಂದ್ರ ಕರಸಂಜಾತ। ವಾಸುದೇವಾರ್ಚಕನೆ ಬಾರೋ॥2॥ ಸನ್ಯಾಸ ಕುಲದೀಪ ಬಾರೋ। ಸನ್ನುತ ಮಹಿಮನೆ ಬಾರೋ। ಮಾನ್ಯ ಜಗನ್ನಾಥ ವಿಠಲ ಪ್ರ। ಸನ್ನ ಜನರ ಪ್ರೀಯ ಬಾರೋ॥3॥

ಏಕೆ ಬೃಂದಾವನದಿ ನೆಲೆಸಿರುವೆ **ರಾಗ: ಹಿಂದೋಳ-ಖಂಡಏಕತಾಳ**

ಏಕೆ ಬೃಂದಾವನದಿ ನೆಲೆಸಿರುವೆ ಗುರುವೆ। ನಾಕ ವಿಲಸಿತಕೀರ್ತೆ ಲಾವಣ್ಯಮೂರ್ತೆ॥ಪ॥ ಶ್ರೀಕಾಂತನೊಲಿಸಿದುದು ಸಾಕಾಗಲಿಲ್ಲೆಂದು। ಏಕಾಂತ ಬಯಸಿದೆಯಾ ಶ್ರೀರಾಘವೇಂದ್ರಾರ್ಯ ॥ಅ.ಪ॥ ಹಿಂದೆ ನಿನಗಾಗಿ ನರಹರಿಯು ಸ್ತಂಭದಿ ಬಂದ। ಮುಂದೆ ನಂದನಕಂದ ನಿನ್ನೆದುರು ಕುಣಿದ। ಒಂದುಕ್ಷಣ ನಿನ್ನ ಹರಿಯು ಬಿಟ್ಟಿರದೆ ನಲಿಯುತಿರೆ। ಇಂದಾರ ಒಲಿಸಲೆಂದಿಲ್ಲಿ ತಪಗೈಯುತಿಹೆಯಾ॥1॥ ಇಷ್ಟವಿಲ್ಲದೆ ರಾಜ್ಯವನು ಆಳಿ ಬಹುವರ್ಷಗಳು। ಶ್ರೇಷ್ಠ ನೀ ಬಹು ಬಳಲಿ ಆಯಾಸಗೊಂಡಿಹೆಯಾ? ದುಷ್ಟವಾದಿಗಳ ವಾಗ್ಯುದ್ಧದಲಿ ಜಯಿಸುತಲಿ। ಶ್ರೇಷ್ಠ ಗ್ರಂಥವ ಬರೆದು ಬರೆದು ಬೇಸರವಾಯ್ತೆ॥2॥ ಪರಿಪರಿಯಭೀಷ್ಟಗಳ ನೀಡೆಂದು ಜನ ಕಾಡೆ। ವರವಿತ್ತು ಸಾಕಾಯ್ತೆ ಕಮಲೇಶದಾಸ। ಧರೆಗೆ ಮರೆಯಾಗಿ ಬೃಂದಾವನವ ಸೇರಿದೊಡೆ। ಚರಣದಾಸರು ನಿನ್ನ ಬಿಡುವರೇನಯ್ಯ॥3॥ ವೀಣೆಯನು ನುಡಿಸುತಲಿ ವೇಣುಗೋಪಾಲನನು। ಜಾಣತನದಲಿ ಕುಣಿಸಿ ವೇಣು ಮೆರೆದೆ... । ಕಾಣದಿಹ ಪರಮಪದ ತಾಣವನ್ನು ತೋರುವ। ಪ್ರವೀಣ ಬೃಂದಾವನದಿಂದೆದ್ದು ಬಾರಯ್ಯ॥4॥

ಕರೆದರೆ ಬರಬಾರದೆ ಗುರುವೆ **ರಾಗ: ಕಲಾವತಿ-ಆದಿತಾಳ**

ಕರೆದರೆ ಬರಬಾರದೆ ಗುರುವೆ॥ಪ॥ ವರಮಂತ್ರಾಲಯ ಪುರಮಂದಿರದೊಳು। ತವ ಚರಣ ಸೇವಕರು ಕರವ ಮುಗಿದು ಕೂಗಿ॥1॥ ಹರಿದಾಸರು ಸುಸ್ವರಸಮ್ಮೇಳದಿ। ಪರವಶದಲಿ ಬಾಯ್ದೆರೆದು ಕೂಗಿ ॥2॥ ಪೂಶರಪಿತ ಕಮಲೇಶ ವಿಠಲನ। ದಾಸಾಗ್ರೇಸರರು ಈ ಸಮಯದಿ ॥3॥

ಎದ್ದು ಬರುತಾರೆ ನೋಡೆ **ರಾಗ: ಮೋಹನ-ಆದಿತಾಳ**

ಎದ್ದು ಬರುತಾರೆ ನೋಡೆ। ತಾವೆದ್ದು ಬರುತಾರೆ ನೋಡೆ। ಮುದ್ದು ಬೃಂದಾವನದ ಮಧ್ಯದೊಳಗಿಂದ॥ಪ॥ ತಿದ್ದಿ ಹಚ್ಚಿದ ನಾಮ। ಮುದ್ರೆಗಳೊಪ್ಪುತೀಗ॥ಅ.ಪ॥ ಗಳದೊಳು ಶ್ರೀತುಳಸಿ ನಳಿನಾಕ್ಷಿ ಮಾಲೆಯು। ಚಲುವ ಮುಖದೊಳು ಪೊಳೆವೊದಂತಗಳಿಂದ॥1॥ ಹೃದಯ ಸದನದಲ್ಲಿ ಪದುಮನಾಭನ ಭಜಿಸಿ। ಮುದಮನದಿಂದ ನಿತ್ಯ। ಸದಮಲ ರೂಪ ತಾಳಿ॥2॥ ದಾತ ಗುರು ಜಗನ್ನಾಥವಿಠಲನ್ನ। ಪ್ರೀತಿಯಪಡಿಸುತ ದೂತನ ಪೊರೆಯುತ॥3॥

ಕಂಡೇ ಕಣ್ಣಾರೆ ನಾ ರಾಘವೇಂದ್ರಯತಿಯಾ

ಕಂಡೇ ಕಣ್ಣಾರೆ ನಾ ರಾಘವೇಂದ್ರಯತಿಯಾ॥ಪ॥ ಪುಂಡರೀಕಾಕ್ಷನನ್ನೆ। ಒಲಿಸಿಕೊಂಡಿ ಹರಾ॥ಅ.ಪ॥ ದೇಶದೇಶದಿಂ ಭಕ್ತಜನರು। ದಾಸರಾಗಿ ಬಂದು ಇವರ । ಲೇಸಾಗಿ ಭಜಿಸೇ ಸಂತತ। ಬೇಸರಿಲ್ಲದೆ ಕಾಯುತಿಹರ॥1॥ ನೈಕರೋಗ ದುಃಖಗಳಿಂದ ಸಾಕಾಗಿ ಬಂದು ಇವರ ನೀ ಕಾಯೊಗುರುವೆ ಎನಲು॥2॥ ಶಂಕೆಇಲ್ಲದೆ ಭೀಷ್ಟ ವೀವರ ಮೋದ ತೀರ್ಥರ ಭೇದವಾದವೇ ಮೇದಿನಿಯೊಳು ಸಾಧುವೆಂದು। ಮೋದದಿಂದ ಸಾರಿಮೆರೆದ। ಶ್ರೀದ ಶ್ರೀಕಮಲೇಶದಾಸರು॥3।

ಬಂದು ನೋಡಿಲ್ಲಿ ನಿಂದಿಹನು ಗುರುರಾಯ **ರಾಗ:ಹಿಂದೋಳ-ಛಾಪುತಾಳ**

ಬಂದು ನೋಡಿಲ್ಲಿ ನಿಂದಿಹನು ಗುರುರಾಯ। ಅಂದದಾ ಪುಣ್ಯ ಧಾಮದೊಳು ಇಂದು॥ಪ॥ ಚೆಂದದಾ ಬೃಂದಾವನವು ತಾ ಹೊಳೆಯುತಿರೆ ಅಂದದಾ ಸುಮಗಳು ಅರೆ ಬಿರಿದು ನಗುತಲಿರೆ। ಭಕ್ತವೃಂದವು ತಾ ರಾಯರ ಸ್ತುತಿಸುತಿರೆ। ಮಂದಹಾಸದಿಂದಲಿ ನಿಂದಿಹನು ಗುರುರಾಯ ॥1॥ ವೀಣೆಯ ಝೇಂಕಾರ-ಎಲ್ಲೆಲ್ಲುತುಂಬಿರಲು। ವಾಣಿಯು ನಗುನಗುತ ಅಲ್ಲಲ್ಲಿ ನಿಂದಿರಲು। ದುಷ್ಕರ ಸುಳಿವುಗಳ ಮೆಟ್ಟಿ ತಾ ತುಳಿಯಲು। ಪಾದದೊಳು ಪಾದುಕೆಯ ಮೆಟ್ಟಿ ತಾ ನಿಂದಿಹನು॥2॥

ಕಂಡು ಧನ್ಯನಾದೆ ಗುರುಗಳ **ರಾಗ: ಹಂಸಾನಂದಿ-ಆದಿತಾಳ**

ಕಂಡು ಧನ್ಯನಾದೆ ಗುರುಗಳ। ಕಣ್ಣಾರೆ ನಾ॥ಪ॥ ಕಂಡು ಧನ್ಯನಾದೆ। ಈ ಗುರುಗಳ॥ಅ.ಪ॥ ತುಂಗಾತಟದಿ ಬಂದು ನಿಂತ। ಪಂಗುಬಧಿರಾದ್ಯಂಗಹೀನರ। ಅಂಗಗೈಸಿ ಸಲಹುವಾ। ನರಸಿಂಗನಂಘ್ರಿ ಭಜಕರಿವರ॥1॥ ಗುರುವರ ಸುಗುಣೇಂದ್ರರಿಂದ। ಪರಿಪರಿಯಲಿ ಸೇವೆಗೊಳುತ। ವರಮಂತ್ರಾಲಯ ಪುರದಿ ಮೆರೆವ। ಪರಿಮಳಾಖ್ಯ ಗ್ರಂಥಕರ್ತರ॥2॥ ಸೋಹಂ ಎನ್ನದೆ ಹರಿಯ। ದಾಸೋಹಂ ಎನ್ನಲು। ಒಲಿದು ವಿಜಯಮೋಹನವಿಠಲನ್ನ ಪರಮ। ಸ್ನೇಹದಿಂದ ತೋರುವವರ॥3॥

ಪೊಂದಿ ಬದುಕಿರೋ **ರಾಗ: ವಿಜಯನಾಗರಿ-ರೂಪಕತಾಳ**

ಪೊಂದಿ ಬದುಕಿರೋ। ರಾಘವೇಂದ್ರರಾಯರ॥ಪ॥ ಕುಂದದೆಮ್ಮನು ಕರುಣದಿಂದ ಪೊರೆವರಾ॥ಅ.ಪ॥ ನಂಬಿ ನುತಿಸುವ ಜನಕದಂಬಕಿಷ್ಟವ। ತುಂಬಿ ಕೊಡುವನು। ಅನ್ಯರ್ಥಂಬಲೀಯನು॥1॥ ಅಲವಬೋಧರ ಸುಮತ ಜಲಧಿಚಂದಿರ। ಒಲಿದು ಭಕ್ತರಾಕಾಯ್ವ। ಸುಲಭ ಸುಂದರ॥2॥ ಗುರು ಸುಧೀಂದ್ರರ। ವಿಮಲ ಕರಜರೆನಿಪರ। ಸ್ಮರಿಸಿ ಸುರುಚಿರ। ವಿಮಲಚರಣಪುಷ್ಕರ॥3॥ ಫಾಲಲೋಚನ ವಿನುತ। ಮೂಲರಾಮನ। ಲೀಲೆಯನುದಿನ ತುತಿಪ। ಶೀಲ ಸದ್ಗುಣ।4॥ ಭೂತಭಾವನ। ಜಗನ್ನಾಥವಿಠಲನ। ಪ್ರೀತಿಪಾತ್ರನಾ ನಂಬಿರೀತನನುದಿನ॥5॥

ಹರಿಸರ್ವೋತ್ತಮ **ರಾಗ: ಹಿಂದೋಳ-ಆದಿತಾಳ**

ಹರಿಸರ್ವೋತ್ತಮ ವಾಯುಜೀವೋತ್ತಮ। ಗುರುರಾಘವೇಂದ್ರರೆಂದರಿ ಮನವೇ॥ಪ॥ ನಿರುತ ನೀ ಗುರುಪದ ಭಜನೆಯ

ಮಾಡೆ। ದುರಿತಗಳೆಲ್ಲ ಓಡಿ ಪೋಗುವುವು॥ಅ.ಪ.॥ ಜಲಜಮಣಿ ಕಮಂಡಲ ದಂಡದಿಂದೊಪ್ಪುವ। ಕಮಲೇಶಪ್ರಿಯ ರಾಘವೇಂದ್ರರು॥ ಕಲಿಯುಗದಲಿ ಕಾಮಧೇನು ಸುರತರುವಂತೆ। ಎಲ್ಲರಿಷ್ಟವನೀವ ಗುರುವೆಂದರಿವರಯ್ಯ॥1॥

ರಾಘವೇಂದ್ರರಾಯರ ಪಾದಾಂಬುಜ — ರಾಗ: ಹಂಸಾನಂದಿ-ಆದಿತಾಳ

ರಾಘವೇಂದ್ರರಾಯರ ಪಾದಾಂಬುಜ। ಆರಾಧಕರ ಕೊಂಡಾಡಿರೊ॥ಪ॥ ನಾರಾಯಣ ನಾಮ ಪಾರಾಯಣರಾ। ಪಾದಾರವಿಂದ ಸುಖಸಾರವ ಬೇಡುವ॥1॥ ಸಾರಿ ಭಕ್ತರ ಪಾದಾರವಿಂದಕೆ, ನಮಸ್ಕಾರ ಮಾಡಿರೊ ಸಾಷ್ಟಾಂಗದಿಂದಲಿ। ಧೀರದಿ ಕಮಲೇಶ ವಿಠಲರಾಯನು ತಾ ಆರೋಗ್ಯವ ಕೊಟ್ಟು ಸಲಹುವ ಸಂತರ॥2॥

ರಾಘವೇಂದ್ರ ದಯೆತೋರೋ — ರಾಗ: ಚಕ್ರವಾಕ-ರೂಪಕತಾಳ

ರಾಘವೇಂದ್ರ ದಯೆತೋರೋ। ಬಾಗಿ ಭಜಿಪೆ ಮೌನಿ ಚಂದ್ರ॥ಪ॥ ರಾಗ ಬರಿದೆ ಜೀವನವೆಂಬ ಸಾಗರದೊಳು ಮುಳುಗುತಿಹೆನೊ। ಬೇಗ ಸುಮತಿ ವರವನಿತ್ತು ಸಾಗಿಸಯ್ಯ ಭವದನೌಕೆ॥1॥ ಭಂಗಗೊಳಿಸು ಸರ್ವಪಾಪ ಹಿಂಗಿಸಯ್ಯ ಭವದ ತಾಪ। ರಂಗಶ್ರೀ ಕಮಲೇಶನ ಪಡೆವ ಮಂಗಳ ಪದವ ತೋರಿಸಯ್ಯ॥2॥

ರೋಗಹರನೆ ಕೃಪಾಸಾಗರ ಶ್ರೀಗುರು — ರಾಗ: ಹಂಸಾನಂದಿ-ಅಟ್ಟತಾಳ

ರೋಗಹರನೆ ಕೃಪಾಸಾಗರ ಶ್ರೀಗುರು ರಾಘವೇಂದ್ರ ಪರಿಪಾಲಿಸೋ॥ಪ॥ ಸಂತತ ದುರ್ವಾದಿತಧ್ವಾಂತದಿವಾಕರ। ಸಂತವಿನುತ ಮಾತಲಾಲಿಸೋ॥1॥ ಪಾವನಗಾತ್ರ ಸುದೇವರಪರನೆ ತವ। ಸೇವಕಜನರೊಳಗಾಡಿಸೋ॥2॥ ಘನ್ನ ಮಹಿಮ ಜಗನ್ನಾಥ ವಿಠ್ಠಲಪ್ರಿಯ। ನಿನ್ನಾರಾಧನೆ ಮಾಡಿಸೋ॥3॥

ರಾಘವೇಂದ್ರ ನಮೋ ಗುರು

ರಾಘವೇಂದ್ರ ನಮೋ ಗುರು ರಾಘವೇಂದ್ರ ನಮೋ॥ಪ॥ ಗುರುರಾಘವೇಂದ್ರ ವರಯೋಗಿ ಸುಗುಣ ವೈರಾಗಿ। ಭಕುತ ಹಿತಕಾಗಿ। ಅವತರಿಸಿದ ಬಂದ ಯತಿಚಂದ್ರ॥1॥ ಪಿತನಿಂದ ಬಹಳ ವ್ಯಥೆಯಾಗಿ ಹರಿಯ ನೆರೆಕೂಗಿಕಂಬ ಗುಡುಗಾಗಿ। ನರಹರಿಯ ಕಂದ ಹಸುಳೇಂದ್ರ॥2॥ ಕುಹಯೋಗಕಳೆದ ದಿವಿಯೋಗಿ ಧರೆಧೊರೆಯಾಗಿ ಧರ್ಮಪ್ರಭುವಾಗಿ। ಕರುನಾಡ ನಾಳ್ದ ರಾಜೇಂದ್ರ॥3॥ ಸುರಧೇನು ಕಲ್ಪತರುವಂತೆ ಭಕುತ ಮನದಂತೆ ಸೌಖ್ಯಾ ದೊರೆವಂತೆ। ಸಲೆಕಾಯ್ದ ಕೀರ್ತಿಯುತಚಂದ್ರಾ॥4॥ ಗುರುಸಾರ್ವಭೌಮ ಜಗಜ್ಯೋತಿ ಮದ್ವಮತ ಕೀರ್ತಿ ಕಾವ್ಯ ಕಲೆ ಮೂರ್ತಿ। ಹರಿಕೃಪಾ ಪಾತ್ರಮಹಿಮೇಂದ್ರ॥5॥ ಸುಯಮೀಂದ್ರ ಸೇವ್ಯ ಗುರುರಾಜ ನಿತ್ಯನವತೇಜ ಸಂಭ್ರಮ ವಿರಾಜ। ಹೊಳೆಹೊಳೆವ ಚಿನ್ಮಯ ಮಹೇಂದ್ರ॥6॥ ಶಿರಬಾಗಿ ಮಣಿವೆ ಗುರುದೇವ ಯತಿಯೆ ನೀಡೆಮಗೆ ದಿವ್ಯಮತಿಭಾವ ವಿಠಲೇಶಪ್ರಿಯಪ್ರಭುಚಂದ್ರ॥7॥

ಕಾಯೋ ಗುರು ರಾಘವೇಂದ್ರ

ಕಾಯೋ ಗುರು ರಾಘವೇಂದ್ರ। ರಾಘವೇಂದ್ರ ಗುರುವೇ ಗತಿಯೋ ಭವ। ರೋಗ ಬ್ಯಾಗ ಕಳೆದೀಗ ಯೋಗಿವರ-ಕಾಯೋ॥1॥ ನಿನ್ನದಾಸನು ನಾನಲ್ಲವೋ ಈ। ಘನ್ನ ಬನ್ನ ಬಿಡಿಸೆನ್ನನು ಮನ್ನಿಸಿ॥2॥ ಅಭಿನವ ಜನಾರ್ಧನ ವಿಠಲನ ಪ್ರಿಯಾ। ಶುಭಕರತರ ಭಯದ ಪ್ರಬಲ ಅಬಲನಿಂ॥3॥

ದಯೆತೋರೋ ದೇವ ಗುರುರಾಜನೆ — ರಾಗ: ಗೌರಿಮನೋಹರಿ

ದಯೆತೋರೋ ದೇವ ಗುರುರಾಜನೆ। ಭಯವಾದುದೆನಗೆ ಭವಸಾಗರಾದಿ॥ಪ॥ ಮೋಹಜಾಲದಲ್ಲಿ ಮಂದಬುದ್ಧಿಯಾದೆ। ದೇಹ ಕರಗಿತಯ್ಯ ಪ್ರಹ್ಲಾದರಾಯ॥1॥ ಅನ್ನವಸ್ತ್ರಕ್ಕಾಗಿ ಅನ್ಯದಾಸನಾದೆ। ಭಂಗಪಟ್ಟೆನಯ್ಯ ಶ್ರೀವ್ಯಾಸರಾಯ॥2॥ ಹಟವೇಕೋ ಜೀಯ ದಿಟವಾಗಿ ಕಾಯೋ। ವಿಠಲೇಶಪ್ರಿಯ ಶ್ರೀ ರಾಘವೇಂದ್ರರಾಯ॥3॥

ನಮಿಸುವೆ ನಿತ್ಯವೂ ವರನೀಡುವ

ನಮಿಸುವೆ ನಿತ್ಯವೂ ವರನೀಡುವ ಮಾರುತಿ ಪ್ರಿಯ ರಾಘವೇಂದ್ರ। ಸ್ಮರಿಸುವೆ ನಿತ್ಯವು ನಿನ್ನಯ ಕೀರುತಿ ರಾಘವೇಂದ್ರ। ಬೆಳಗುವೆ ನಿತ್ಯವೂ ನಿನಗೆ ಆರುತಿ ರಾಘವೇಂದ್ರ। ಹಾಕುವೆ ನಿತ್ಯವೂ ಪ್ರದಕ್ಷಿಣೆ ಆಗಮಿಕ ಮಹಿಮಾ ಮೂರುತಿ ರಾಘವೇಂದ್ರ। ಅಕ್ಷತೆ ನೀಡಿ ಭಕ್ತರ ಕಷ್ಟ ನಿವಾರಿಸುವೆ ರಾಘವೇಂದ್ರ। ಅತಿ ಶ್ರೇಷ್ಠ ದ್ವೈತ ಗುರು ಸಾರ್ವಭೌಮ ರಾಘವೇಂದ್ರ। ಆರಾಧಿಸುವೆ ರಂಗ ವಿಠಲ ದಾಸನಾದ ನಿನ್ನನ್ನು ರಾಘವೇಂದ್ರ। ಆರತಿ ಮಾಡುವೆ ಭಕ್ತರ ಕಲ್ಪತರು ರಾಘವೇಂದ್ರ। ಇಷ್ಟಸಿದ್ಧಿ ಪ್ರದಾಯಕ ಮಂತ್ರಾಲಯವಾಸಿ ರಾಘವೇಂದ್ರ। ಇಂಥ। ನಮ್ಮ ಸ್ವಾಮಿ ವೀಣಾ ಪಂಡಿತ ಗಾನಯೋಗಿ ರಾಘವೇಂದ್ರ। ಈಜಿ ಜಯಿಸಬೇಕು ಎನ್ನುವ ಭಕ್ತರಿಗೆ ದಡವ ಸೇರಿಸುವ ರಾಘವೇಂದ್ರ। ಈ ಜಗದಲ್ಲಿ ಸರ್ವರೂ ನಿನ್ನಯ ಭಕ್ತರು ರಾಘವೇಂದ್ರ। ಉರುಳುಸೇವೆ ಮಾಡುವರು ಭಕ್ತರು ನಿನಗೆ ರಾಘವೇಂದ್ರ। ಉನ್ನತ ಮಟ್ಟಕ್ಕೇರಲು ನೀ ಅನುಗ್ರಹಿಸುವೆ ರಾಘವೇಂದ್ರ। ಊರು ಊರುಗಳಲ್ಲಿ ಭಕ್ತರಿಗೆ ನಿನ್ನಯ ಮಠವಿರುವುದು ರಾಘವೇಂದ್ರ। ಊಟಕೆ ದಾರಿ ತೋರಿಸುವೆ ರಾಘವೇಂದ್ರ। ಋಗ್ವೇದ ವಿವೃತಿ, ಗೀತಾ ವಿವೃತಿ ಇತ್ಯಾದಿಗ್ರಂಥಗಳು ರಚಿಸಿರುವೆ ರಾಘವೇಂದ್ರ। ಋಣಮುಕ್ತನಾಗಲು ಅನುಗ್ರಹಿಸಿ ದಾನಿಯಾಗಿಸುವೆ ರಾಘವೇಂದ್ರ। ಎಲ್ಲರ ಮನಸಲು ನೀನ ರಾಘವೇಂದ್ರ। ಎಲ್ಲರಿಗೂ ಸದ್ಗತಿ ತೋರಿಸುವೆ ರಾಘವೇಂದ್ರ। ಏಳು ಏಳು ಎಂದು ಭಕ್ತರನು ಎಬ್ಬಿಸುವೆ ರಾಘವೇಂದ್ರ।ಏಕಮಾನ್ಯ ಕರುಣಾಳು ರಾಘವೇಂದ್ರ। ಐಶ್ವರ್ಯ ನೀಡುವೆ ತುಂಗಾತೀರವಾಸಿ ರಾಘವೇಂದ್ರ। ಐಕ್ಯಮತ್ಯೆಗೆ ನಾಂದಿ ಹಾಡಿರುವ ರಾಘವೇಂದ್ರ। ಒಂದೇ ಏರಡೇ ಸಕಲ ಮತಸ್ಥರು ಭಕ್ತರು ನಿನಗೆ ರಾಘವೇಂದ್ರ। ಒಂದೇ ಮನಸ್ಸಿನಿಂದ ಪೂಜಿಸುವರು, ಜಪತಪ ತಿಳಿಯದ ಭಕ್ತರು ರಾಘವೇಂದ್ರ। ಓಡಿ ಓಡಿ ಭಕ್ತರು ನಿನ್ನಲ್ಲಿಗೆ ಬರುವರು ರಾಘವೇಂದ್ರ। ಓಲಗ ಭಜಂತ್ರಿಗಳಿಂದ ಮೆರೆಸುವರು ನಿನ್ನನ್ನು ರಾಘವೇಂದ್ರ। ಔಷಧವು ನಿನ್ನ ಸ್ಮರಣೆ ರೋಗಿಷ್ಠರಿಗೆ ರಾಘವೇಂದ್ರ। ಔತಣವೀಯುವೆ ಸಕಲರಿಗೂ ರಾಘವೇಂದ್ರ। ಅಂಟುರೋಗ ನಿವಾರಕ ರಾಘವೇಂದ್ರ। ಅಂಗಾರಪ್ರಿಯ ರಾಘವೇಂದ್ರ। ಅಃ। ನಿನ್ನಯ ಪವಾಡಕೆ ಮಣಿವೆ ರಾಘವೇಂದ್ರ। ಆಃ ನಿನ್ನಯ ಅಭಯ ಹಸ್ತಕೆ ಶರಣು ರಾಘವೇಂದ್ರ। ಕನಸಲಿ ಬಂದು ವರಗಳ ನೀಡುವೆ ರಾಘವೇಂದ್ರ। ಕದವ ತಟ್ಟಿ ಭಕ್ತರ ಬಾಗಿಲಿಗೆ ಬರುವೆ ರಾಘವೇಂದ್ರ। ಖರ್ಜೂರ ಕಲ್ಲುಸಕ್ಕರೆ ಅರ್ಪಿಸುವರು ನಿತ್ಯವೂ ನಿನಗೆ ರಾಘವೇಂದ್ರ। ಖಜಾನೆ ತುಂಬುವೆ ನಿನ್ನಯ ಭಕ್ತರಿಗೆ ರಾಘವೇಂದ್ರ। ಗಂಟೆ ಜಾಗಟೆಗಳ ಆರತಿ ನಿನಗೆ ರಾಘವೇಂದ್ರ। ಘನವಾದ ನೈಜ ಭಕ್ತಿಯ ಬೀಜ ಬಿತ್ತಿರುವೆ ಭಕ್ತರಿಗೆ ರಾಘವೇಂದ್ರ। ಘನತೆ ಗೌರವ ನಿನ್ನ ಭಕ್ತರಿಗೆ ರಾಘವೇಂದ್ರ। ಚರಿತ್ರವಂತ ಗುರುವರ ರಾಘವೇಂದ್ರ। ಚರಣಕೆ ನಿನ್ನಯ ಭಕ್ತರ ನಮಸ್ಕಾರ ರಾಘವೇಂದ್ರ। ಛತ್ರಿ ಚಾಮರಗಳ ಪೂಜೆ ನಿನಗೆ ರಾಘವೇಂದ್ರ। ಛತ್ರಗಳಿವೆ ನಿನ್ನಯ ಹೆಸರಲಿ ರಾಘವೇಂದ್ರ। ಜನಿಸಿದೆ ಕಾಂಚಿಪುರದ ಭುವನ ಗಿರಿಯಲಿ ರಾಘವೇಂದ್ರ। ಜನ್ಮ ಕೊಟ್ಟ ತಿಮ್ಮಣ್ಣ ಗೋಪಮ್ಮ ಪುಣ್ಯ ದಂಪತಿಗಳು ರಾಘವೇಂದ್ರ। ಝಗಝಗಿಸುವ ಬೃಂದಾವನದಲ್ಲಿರುವೆ ರಾಘವೇಂದ್ರ। ಝಗ ಝಗ ದೀಪಾರಾಧನೆ ನಿನಗೆ ರಾಘವೇಂದ್ರ। ಟಣಟಣ ಗಂಟೆ ಬಾರಿಸಿ ನಿನಗೆ ಆರತಿ ರಾಘವೇಂದ್ರ। ಟಪ ಟಪ ಮಳೆ ಸುರಿಸಿ ಕ್ಷಾಮ ಪರಿಹಾರ ಮಾಡಿದ ರಾಘವೇಂದ್ರ। ಠಕ್ಕರ ಶರಣಾಗತ ರಾಗಿಸುವೆ ರಾಘವೇಂದ್ರ। ಡಣಡಣ ಗಂಟೆಯನಾದ ಭಕ್ತರಿಗೆ ಚೇತನ ರಾಘವೇಂದ್ರ। ಡಮರುಗ ನಾದದಿಂದ ಮಂತ್ರಾಲಯ ಭಕ್ತರ ಬೀಡಾಯಿತು ರಾಘವೇಂದ್ರ। ಢಕ್ಕೆಯ ನಾದ ಕೇಳಿ ಭಕ್ತರು ಸೇರುವರು ರಾಘವೇಂದ್ರ। ಢಕ್ಕೆಯಬಾರಿಸಿ ನಿನಗೆ ಮಹಾಮಂಗಳಾರತಿ ರಾಘವೇಂದ್ರ। ವೆಂಕಣ್ಣ ಭಟ್ಟ ಜನ್ಮನಾಮ ನಿನಗೆ ರಾಘವೇಂದ್ರ। ವೆಂಕಟರಮಣನ ದರ್ಶನ ಪಡೆದ ರಾಘವೇಂದ್ರ। ತನುಮನಧನ ತ್ಯಾಗಗಳಿಂದ ಪೂಜಿಸುವರು ರಾಘವೇಂದ್ರ।ತಡಮಾಡದೆ ವರವನೀಡುವೆ ರಾಘವೇಂದ್ರ। ಥಳಥಳಿಸುವ ಬೃಂದಾವನ್ನೈಕ್ಯ ಶ್ರಾವಣ ಬಹುಳಬಿದಿಗೆ ರಾಘವೇಂದ್ರ। ಥಳಥಳ ವಸ್ತ್ರಾಲಂಕಾರದೊಂದಿಗೆ ಮಧ್ಯಾರಾಧನೆ ನಿನಗೆ ರಾಘವೇಂದ್ರ। ದಂಡಕೆ ಒಳಗಾದವರಿಗೆ ಪರಿಹಾರ ನೀಡುವ ರಾಘವೇಂದ್ರ। ದಂಡೆದಂಡೆಯ ತುಳಸಿಮಾಲೆಯಪೂಜೆ ನಿನಗೆ ರಾಘವೇಂದ್ರ। ಧನಕನಕಾದಿಗಳನು ನೀಡುವೆ ರಾಘವೇಂದ್ರ। ಧರ್ಮಕಾರ್ಯಗಳಿಗೆ ಹಾರೈಸುವೆ ರಾಘವೇಂದ್ರ। ನಡೆಯುವಾಗಲೂ ನಿನ್ನನು ಸ್ಮರಿಸುವೆ ರಾಘವೇಂದ್ರ। ನಮಸ್ಕಾರ ನಿತ್ಯವೂ ಸರ್ವಸೇವೆ ಪಡೆಯುವೆ ನಿನಗೆ ರಾಘವೇಂದ್ರ। ಪರಿಣಿತ ವಿದ್ಯಾಭ್ಯಾಸ ಫಲಿಸಿತು, ಗುರು ಶ್ರೀ ಸುಧೀಂದ್ರ ತೀರ್ಥರಿಂದ ರಾಘವೇಂದ್ರ। ಪಡೆದೆ ಶ್ರೀ ಗುರುರಾಘವೇಂದ್ರ। ತೀರ್ಥನಾಮ ಸನ್ಯಾಸತ್ವದಲಿ ರಾಘವೇಂದ್ರ। ಫಲಪುಷ್ಪಗಳು ನಿನಗೆ ಪ್ರಿಯ ರಾಘವೇಂದ್ರ। ಫಲಿಸುವುದು ಸರ್ವರ ಅಭೀಷ್ಟಗಳು ರಾಘವೇಂದ್ರ। ಬಂಜರುಭೂಮಿ ಮಂತ್ರಾಲಯ ಕ್ಷೇತ್ರವಾಯಿತು ರಾಘವೇಂದ್ರ। ಬಂಧು ಬಳಗ ನೀನೇ

ಮತಿಗೆಟ್ಟ ಭಕ್ತರಿಗೆ ರಾಘವೇಂದ್ರ। ಭಜನೆ ಪ್ರಿಯ ಮಂಚಾಲಮ್ಮನ ದರ್ಶನ ಪಡೆದ ರಾಘವೇಂದ್ರ। ಭಕ್ತರ ಏಕೈಕ ಗುರುರಾಯ ನೀನೆ ರಾಘವೇಂದ್ರ। ಮನ್ಮಥ ನಾಮ ಸಂವತ್ಸರ ಪಾಲ್ಗುಣ ಶುದ್ಧ ಸಪ್ತಮಿ ಗುರುವಾರ ಜನಿಸಿದೆ ರಾಘವೇಂದ್ರ। ಮಹಾಭಾಷ್ಯಾಚಾರ್ಯ ಪರಿಮಳಾಚಾರ್ಯ ಇತ್ಯಾದಿ ಬಿರುದುಗಳು ರಾಘವೇಂದ್ರ। ಯಂತ್ರಮಂತ್ರಗಳಿಲ್ಲದೆ ಸ್ಮರಣೆಯಲಿ ರೋಗ ನಿವಾರಿಸುವೆ ರಾಘವೇಂದ್ರ। ಯಮಪಾಶ ತಪ್ಪಿಸಿರುವೆ ದೇಸಾಯಿ ಕುಮಾರನಿಗೆ ರಾಘವೇಂದ್ರ। ರಕ್ಷಣೆಗೆ ನಿನ್ನಲ್ಲಿ ಶರಣಾಗತರಾಗುವರು ರಾಘವೇಂದ್ರ। ರಕ್ಷಿಸಿ ಬ್ರಹ್ಮ ರಾಕ್ಷಸನಿಗೆ ಶಾಪವಿಮೋಚನೆ ಮಾಡಿರುವೆ ರಾಘವೇಂದ್ರ। ಲಕ್ಷಲಕ್ಷ ಭಕ್ತರಿಗೆ ಪರಿಮಳ ಪ್ರಸಾದ ನೀಡುವೆ ರಾಘವೇಂದ್ರ। ಲಕ್ಷಗಟ್ಟಲೆ ದೀಪಗಳ ಆರಾಧನೆ ನಿನಗೆ ರಾಘವೇಂದ್ರ। ವಂದಿಸುವೆ ಸುಧಾಪಾಠ ಪಾರಂಗತ ರಾಘವೇಂದ್ರ। ವರಗಳ ನೀ ನೀಡುವೆ ಮೂಲಾರಾಮಾಧಾರಕ ರಾಘವೇಂದ್ರ। ಶೇಷವಿಲ್ಲದೆ ಪಾಪ ಹರಿಸುವೆ ರಾಘವೇಂದ್ರ। ಶೇಷಶಯನನನ್ನು ಪ್ರತ್ಯಕ್ಷಕಂಡ ಸ್ವಾಮಿ ರಾಘವೇಂದ್ರ। ಷಡ್ವರ್ಗ ನಿಗ್ರಹನೇ ರಾಘವೇಂದ್ರ। ಷೋಡಶಬಾಹು ನಾರಸಿಂಹನ ಕಂಡೆ ನೀನು ರಾಘವೇಂದ್ರ। ಸರಸ್ವತಿಬಾಯಿ ನಿನ್ನಯ ಪೂರ್ವಾಶ್ರಮ ಸತಿ ರಾಘವೇಂದ್ರ। ಸನ್ಯಾಸಿಯಾದೆ ನೀನು ಪಾಲ್ಗುಣ ಶುದ್ಧ ಬಿದಿಗೆದಿನ ರಾಘವೇಂದ್ರ। ಹಂಬಲಿಸಿ ಬೇಡುವ ಭಕ್ತರನು ಕಾಪಾಡುವೆ ರಾಘವೇಂದ್ರ। ಹನುಮ ಪ್ರಿಯನಾದ ನಿನ್ನನು ನಿತ್ಯವೂ ಸ್ಮರಿಸುವೆ ರಾಘವೇಂದ್ರ। ಕ್ಷಣಕ್ಷಣವೂ ಮನದಲಿ ಸ್ಮರಿಸುವೆ ರಾಘವೇಂದ್ರ। ಕ್ಷಮಿಸಿರುವೆ ನಿನ್ನನು ಪರೀಕ್ಷಿಸಿದ ಮುಸಲ್ಮಾನ ದೊರೆಯ ರಾಘವೇಂದ್ರ। ಜ್ಞಾನಜ್ಯೋತಿ ಪ್ರದಕ್ಷಿಣೆ ಪ್ರಿಯ ಗುರು ರಾಘವೇಂದ್ರ। ಜ್ಞಾನಿಗಳಾದರು ಭಕ್ತರು ನಿನ್ನಯ ಸ್ಮರಣೆಯಿಂದ ರಾಘವೇಂದ್ರ। ಓಂ ಶ್ರೀ ರಾಘವೇಂದ್ರಾಯ ನಮಃ॥

ಶ್ರೀಪೂರ್ಣಬೋಧಗುರುತೀರ್ಥಪಯೋಬ್ಧಿಪಾರಾ

ಶ್ರೀಪೂರ್ಣಬೋಧಗುರುತೀರ್ಥಪಯೋಬ್ಧಿಪಾರಾ। ಕಾಮಾರಿಮಾಕ್ಷವಿಷಮಾಕ್ಷಶಿರಸ್ಪೃಶಂತೀ। ಪೂರ್ವೋತ್ತರಾಮಿತ ತರಂಗಚರತ್ಸುಹಂಸಾ। ದೇವಾಲಿಸೇವಿತಪರಾಂಘ್ರಿಪಯೋಜಲಗ್ನಾ॥1॥ ಜೀವೇಶಭೇದಗುಣಪೂರ್ತಿಜಗತ್ಸುಸತ್ವ। ನೀಚೋಚ್ಚ ಭಾವಮುಖನಕ್ರಗಣೈಸ್ಸಮೇತಾ। ದುರ್ವಾದ್ಯ ಜಾಪತಿಗಿಲೈರ್ಗುರು ರಾಘವೇಂದ್ರವಾಗ್ದೇವತಾಸರಿದಮುಂ ವಿಮಲೀಕರೊತು॥2॥ ಶ್ರೀರಾಘ ವೇಂದ್ರಃ ಸಕಲಪ್ರದಾತಾ ಸ್ವಪಾದಕಂಜದ್ವಯಭಕ್ತಿಮದ್ಭ್ಯಃ। ಅಘಾದ್ರಿಸಂಭೇದನ ದೃಷ್ಟಿವಜ್ರಃ। ಕ್ಷಮಾಸುರೋಂದ್ರೋಽವತು ಮಾಂ ಸದಾಽಯಂ॥3॥ ಶ್ರೀರಾಘವೇಂದ್ರೋ ಹರಿಪಾದಕಂಜ ನಿಷೇವೇಣಾಲ್ಲಬ್ಧ ಸಮಸ್ತಸಂಪತ್। ದೇವಸ್ವಭಾವೋ ದಿವಿಜದ್ರುಮೋಽಯಂ। ಇಷ್ಟಪ್ರದೋಮೇ ಸತತಂ ಸಭೂಯಾತ್॥4॥ ಭವ್ಯಸ್ವರೂಪೋ ಭವದುಃಖತೂಲ ಸಂಘಾಗ್ನಿ ಚರ್ಯಃ ಸುಖ ಧೈರ್ಯಶಾಲೀ। ಸಮಸ್ತದುಷ್ಟಗ್ರಹ ನಿಗ್ರಹೇಶೋ ದುರತ್ಯ ಯೋಪಪ್ಲವಸಿಂಧುಸೇತುಃ॥5॥ ನಿರಸ್ತದೋಷೋನಿರವದ್ಯವೇಷಃ ಪ್ರತ್ಯರ್ಥಿಮೂಕತ್ವನಿದಾನಭಾಷಃ। ವಿದ್ವತ್ಪರಿಜ್ಞೇಯ ಮಹಾ ವಿಶೇಷೋ ವಾಗ್ವೈಖರೀನಿರ್ಜಿತಭವ್ಯಶೇಷಃ॥6॥ ಸಂತಾನಸಂಪತ್ಪರಿಶುದ್ಧಭಕ್ತಿಃ ವಿಜ್ಞಾನವಾಗ್ದೇ ಹಸುಪಾಟ ವಾದೀನ್। ದತ್ವಾಶರೀರೋತ್ಥ ಸಮಸ್ತ ದೋಷಾನ್। ಹತ್ವಾ ಸ ನೋಽವ್ಯಾದ್ಗುರು ರಾಘವೇಂದ್ರಃ॥7॥ ಯತ್ಪಾದೋದಕ ಸಂಚಯಃ ಸುರನದೀಮುಖ್ಯಾಪಗಾಸಾದಿತಾ। ಸಂಖ್ಯಾ ನುತ್ತಮಪುಣ್ಯಸಂಘ ವಿಲಸತ್ಪ್ರಖ್ಯಾತಪುಣ್ಯಾವಹಃ। ದುಸ್ತಾಪತ್ರಯ ನಾಶನೋ ಭುವಿ ಮಹಾವಂಧ್ಯಾ ಸುಪುತ್ರಪ್ರದಃ। ವ್ಯಂಗ್ಯಸ್ವಂಗಸಮೃದ್ಧಿದೋ ಗ್ರಹಮಹಾಪಾಪ ಹಸ್ತಂ ಶ್ರಯೇ॥8॥ ಯತ್ಪಾದಕಂಜ ರಜಸಾ ಪರಿಭೂಷಿತಾಂಗಾಃ। ಯತ್ಪಾದಪದ್ಮ ಮಧುಪಾಯಿತಮಾನಸಾ ಯೇ। ಯತ್ಪಾದಪದ್ಮ ಪರೀಕೀರ್ತನ ಜೀರ್ಣವಾಚಃ। ತದ್ದರ್ಶನಂ ದುರಿತಾಕಾನನದಾವಭೂತಂ॥9॥ ಸರ್ವತಂತ್ರ ಸ್ವತಂತ್ರೋಽಸೌ ಶ್ರೀಮದ್ವಮತವರ್ಧನಃ। ವಿಜಯೀಂದ್ರ ಕರಾಬ್ಜೋತ್ಥ ಸುಧೀಂದ್ರವರ ಪುತ್ರಕಃ। ಶ್ರೀರಾಘವೇಂದ್ರೋ ಯತಿರಾಟ್ ಗುರುರ್ಮೇ ಸ್ಯಾದ್ಭಯಾಪಹಃ। ಜ್ಞಾನಭಕ್ತಿ ಸುಪುತ್ರಾಯುಃ ಯಶಃ ಶ್ರೀಪುಣ್ಯವರ್ಧನಃ॥10॥ ಪ್ರತಿವಾದಿಜಯಸ್ವಾಂತ ಭೇದಚಿಹ್ನಾಃದರೋ ಗುರುಃ। ಸರ್ವವಿದ್ಯಾ ಪ್ರವೀಣೋಽನ್ಯೋ ರಾಘವೇಂದ್ರಾನ್ನ ವಿದ್ಯತೇ॥12॥ ಅಪರೋಕ್ಷಿಕೃತಶ್ರೀಶಃ ಸಮುಪೇಕ್ಷಿತಭಾವಜಃ। ಅಪೇಕ್ಷಿತವಾಪ್ರದಾತಾನ್ಯೋ ರಾಘೇವೇಂದ್ರಾನ್ನ ವಿದ್ಯತೇ॥13॥ ದಯಾದಾಕ್ಷಿಣ್ಯವೈರಾಗ್ಯ ವಾಕ್ಪಾಟವಮುಖಾಂಕಿತಃ। ಶಾಪಾನುಗ್ರಹಕ್ತೋಽನ್ಯೋ ರಾಘೇವೇಂದ್ರಾನ್ನ ವಿದ್ಯತೇ॥14॥ ಅಜ್ಞಾನವಿಸ್ಮೃತಿಭ್ರಾಂತಿಸಂಶಯಾಪಸ್ಮೃತಿಕ್ಷಯಾಃ। ತಂದ್ರಾಕಂಪವಚಃಕೌಂಠ್ಯ ಮುಖಾ ಯೇ ಚೇಂದ್ರಿಯೋದ್ಭವಾಃ। ದೋಷಾಸ್ತೇ ನಾಶಮಾಯಾಂತಿ ರಾಘವೇಂದ್ರ

ಪ್ರಸಾದತಃ॥15॥ ಓಂ ಶ್ರೀ ರಾಘವೇಂದ್ರಾಯ ನಮಃ ಇತ್ಯಾಷ್ಟಕ್ಷರಮಂತ್ರತಃ। ಜಪಿತಾದ್ಭಾವಿತಾ ನ್ನಿತ್ಯಂ ಇಷ್ಟಾರ್ಥಾಸ್ಯುರ್ನ ಸಂಶಯಃ॥16॥ ಹಂತು ನಃ ಕಾಯಜಾನ್ ದೋಷಾನ್ ಆತ್ಮಾತ್ಮೀಯ ಸಮುದ್ಭವಾನ್। ಸರ್ವಾನಪಿ ಪುಮರ್ಥಾಂಶ್ಚ ದದಾತು ಗುರುರಾತ್ಮ ವಿತ್॥17॥ ಇತಿ ಕಾಲತ್ರಯೇ ನಿತ್ಯಂ ಪ್ರಾರ್ಥನಾಂ ಯಃ ಕರೋತಿ ಸಃ। ಇಹಾಮುತ್ರಾಪ್ತಸರ್ವೇಷ್ಟೋ ಮೋದತೇ ನಾತ್ರಸಂಶಯಃ॥18॥ ಅಗಮ್ಯಾಮಹಿಮಾ ಲೋಕೇ ರಾಘವೇಂದ್ರೋ ಮಹಾಯಶಾಃ। ಶ್ರೀಮದ್ವಮತದುಗ್ಧಾಬ್ಧಿ ಚಂದ್ರೋಽವತು ಸದಾಽನಘಃ॥ ಸರ್ವಯಾತ್ರಫಲಾವಾಪ್ತ್ಯೈ ಯಥಾಶಕ್ತಿ ಪ್ರದಕ್ಷಿಣಂ। ಕರೋಮಿ ತವಸಿದ್ಧಸ್ಯ ಬೃಂದಾವನಗತಂ ಜಲಂ॥19॥ ಸರ್ವಯಾತ್ರಫಲಾ ವಾಪ್ತ್ಯೈ ಯಥಾ ಶಕ್ತಿ ಪ್ರದಕ್ಷಿಣಂ। ಕರೋಮಿ ತವಸಿದ್ಧಸ್ಯ ಬೃಂದಾವನಗತಂ ಜಲಂ॥20॥ ಶಿರಸಾ ಧಾರಯಾಮ್ಯದ್ಯ ಸರ್ವತೀರ್ಥಫಲಾಪ್ತಯೇ। ಸರ್ವಾಭೀಷ್ಟಾರ್ಥ ಸಿದ್ಧ್ಯರ್ಥಂ ನಮಸ್ಕಾರಂ ಕರೋಮ್ಯಹಂ। ತವಸಂಕೀರ್ತನಂ ವೇದ ಶಾಸ್ತ್ರಾರ್ಥಜ್ಞಾನಸಿದ್ಧಯೇ॥21॥ ಸಂಸಾರೇಽಕ್ಷಯಸಾಗರೇ ಪ್ರಕೃತಿತೋಽಗಾಧೆ, ಸದಾ ದುಸ್ತರೇ। ಸರ್ವಾವದ್ಯಜಲಗ್ರಹೈರನುಪಮೈಃ ಕಾಮಾದಿಭಂಗಾಕುಲೇ॥ ನನಾವಿಭ್ರಮ ದುರ್ಭಮೇಽಮಿತ ಭಯಸ್ತೋಮಾದಿಫೇನೋತ್ಕಟೇ। ದುಃಖೋತ್ಕೃಷ್ಟವಿಷೇ ಸಮುದ್ಧರ ಗುರೋ ಮಾಂ ಮಗ್ನರೂಪಂ ಸದಾ॥22॥ ರಾಘವೇಂದ್ರಗುರುಸ್ತೋತ್ರಂ ಯಃಪಠೇದ್ಭಕ್ತಿಪೂರ್ವಕಂ। ತಸ್ಯ ಕುಷ್ಠಾದಿರೋಗಾಣಾಂ ನಿವೃತ್ತಿಸ್ತ್ವರಯಾ ಭವೇತ್॥23॥ ಅಂಧೋಽಪಿ ದಿವ್ಯದೃಷ್ಟಿಸ್ಸ್ಯಾದೇಡ ಮೂಕೋಽಪಿ ವಾಕ್ಪತಿಃ॥ ಪೂರ್ಣಾಯುಃ ಪೂರ್ಣಸಂಪತ್ತಿಃ ಸ್ತೋತ್ರಸ್ಯಾಸ್ಯ ಜಪಾದ್ಭವೇತ್॥24॥ ಯಃ ಪಿಬೇಜ್ಜಲಮೇತೇನ ಸ್ತೋತ್ರೇಣೈವಾಭಿಮಂತ್ರಿತಂ। ತಸ್ಯ ಕುಕ್ಷಿಗತಾ ದೋಷಾಃ ಸರ್ವೇ ನಶ್ಯಂತಿ ತತ್ಕ್ಷಣಾತ್॥25॥ ಯದ್ಬೃಂದಾವನ ಮಾಸಾದ್ಯ ಪಂಗುಃ ಖಂಜೋಪಿ ವಾ ಜನಃ। ಸ್ತೋತ್ರೇಣಾನೇನ ಯಃ ಕುರ್ಯಾತ್ಪ್ರದಕ್ಷಿಣ ನಮಸ್ಕೃತೀ। ಸ ಜಂಘಾಲೋ ಭವೇದೇವ ಗುರುರಾಜಪ್ರಸಾದತಃ। ಸೋಮಸೂರ್ಯೋಪರಾಗೇ ಚ ಪುಷ್ಯಾರ್ಕಾದಿಸಮಾಗಮೇ॥27॥ ಯನುತ್ತಮಮಿದಂ ಸ್ತೋತ್ರಂ ಅಷ್ಟೋತ್ತರಶತಂ ಜಪೇತ್। ಭೂತಪ್ರೇತಪಿಶಾಚಾದಿ ಪಿಡಾ ತಸ್ಯ ನ ಜಾಯತೇ॥28॥ ಏತತ್ ಸ್ತೋತ್ರಂ ಸಮುಚ್ಚಾರ್ಯ ಗುರೋರ್ವೃಂದಾವನಾಂಕಿತೇ। ದೀಪಸಂಯೋಜನಾ ಜ್ಞಾನಂ ಪುತ್ರ ಲಾಭೋ ಭವೇದ್ಧ್ರುವಂ॥29॥ ಪರವಾದಿಜಯೋ ದಿವ್ಯ ಜ್ಞಾನಭಕ್ತ್ಯಾದಿವರ್ಧನಂ। ಸರ್ವಾಭೀಷ್ಟ ಪ್ರವೃದ್ಧಿಸ್ಸ್ಯಾನ್ನಾತ್ರಕಾರ್ಯಾ ವಿಚಾರಣಾ॥30॥ ರಾಜ ಚೋರಮಹಾವ್ಯಾಪ್ರ ಸರ್ಪನಕ್ರಾದಿಪೀಡನಂ। ನ ಜಾಯತೇಸ್ಯ ಸ್ತೋತ್ರಸ್ಯ ಪ್ರಭಾವನ್ನಾತ್ರ ಸಂಶಯಃ॥31॥ ಯೋ ಭಕ್ತ್ಯಾ ಗುರುರಾಘವೇಂದ್ರ ಚರಣದ್ವಂದ್ವಂ ಸ್ಮರನ್ ಯಃ ಪಠೇತ್। ಸ್ತೋತ್ರಂ ದಿವ್ಯಮಿದಂ ಸದಾ ನ ಹಿ ಭವೇತ್ ತಸ್ಯಾಸುಖಂ ಕಿಂಚನ॥ ಕಿಂತ್ವಿಷ್ಟಾರ್ಥಸಮೃದ್ಧಿರೇವ ಕಮಲಾ ನಾಥಪ್ರ ಸಾದೋದಯಾತ್। ಕೀರ್ತಿರ್ದಿಗ್ವಿದಿತಾ ವಿಭೂತಿರತುಲಾ ಸಾಕ್ಷೀ ಹಯಾ ಸ್ಯೋತ್ರಹಿ ॥32॥ ಇತಿ ಶ್ರೀರಾಘವೇಂದ್ರಾರ್ಯ ಗುರುರಾಜ ಪ್ರಸಾದತಃ। ಕೃತಂಸ್ತೋತ್ರ ಮಿದಂಪುಣ್ಯಂ ಶ್ರೀಮದ್ಭಿರಪ್ಪಣಾ ಭಿಧೈಃ॥ ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರತಾಯ ಚ ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ॥ ದುರ್ವಾದಿ ಧ್ವಾಂತರವಯೇ ವೈಷ್ಣವೇಂದೀವರೇಂದವೇ। ಶ್ರೀರಾಘವೇಂದ್ರ ಗುರುವೇ ನಮೋಽತ್ಯಂತ ದಯಾಲವೇ॥ ಅಘಂ ದ್ರಾವಯತೇ ಯಸ್ಮಾ ದ್ವೇಂಕಾರೋ ವಾಂಛಿತಪ್ರದಃ। ರಾಘವೇಂದ್ರಾಯತಿ ಸ್ತಸ್ಮಾಲ್ಲೋಕೇ ಖ್ಯಾತೋ ಭವಿಷ್ಯತಿ॥ ಮುಕೋಽಪಿ ಯತ್ಪ್ರಸಾದೇನ ಮುಕುಂದಶಯನಾಯತೇ। ರಾಜರಾಜಾ ಯತೇರಿಕ್ತೋ ರಾಘವೇಂದ್ರಂ ತಮಾಶ್ರಯೇ॥ ತಪ್ತಕಾಂಚನಸಂಕಾಶಂ ಅಕ್ಷಮಾಲಾಂ ಕಮಂಡಲುಮ್। ದೋರ್ಭ್ಯಾಂ ದಧಾನಂ ಕಾಷಾಯವಸನಂ ರಾಮ ಮಾನಸಂ। ಯೋಗೀಂದ್ರತೀರ್ಥ ವಂದ್ಯಾಂಘ್ರಿಂ ತುಲಸೀ ದಾಮ ಭೂಷಿತಂ। ಜ್ಞಾನಭಕ್ತಿತಪಃಪೂರ್ಣಂ ಧ್ಯಾಯೇದಿಷ್ಟಾರ್ಥಸಿದ್ಧಯೇ॥

ಶ್ರೀರಘುರಾಮ ಪದಾಂಬುಜ ಭೃಂಗನೆ (ಕನ್ನಡ ರಾಘವೇಂದ್ರಸ್ತೋತ್ರ)

ಶ್ರೀರಘುರಾಮ ಪದಾಂಬುಜ ಭೃಂಗನೆ। ಶ್ರೀ ರಾಘವೇಂದ್ರ ಸದ್ಗುವರನೆ। ಸಾರಿದೆ ನಿನ್ನ ಪಾದಾರವಿಂದ ಯುಗಳಾರಾಧನೆಯಿತ್ತು ಸಲಹೆಮ್ಮನು॥ಪ॥ ಶ್ರೀಮದ್ವಶಾಸ್ತ್ರಸುಧಾಂಬುಧಿಯೊಳು ಪುಟ್ಟಿ ಕಾಮಾರಿ ಶಿರಮುಟ್ಟಿ ಪೂರ್ವೋತ್ತರ ಆಮಹಾ ಅಲೆಯೊಳು ಚರಿಸಿ ದೇವಾಳಯಿಂ ಪ್ರೇಮದಿ ಸೇವ್ಯವಾಗಿರುವ ॥1॥ ಹರಿ ಪಾದಾಂಬುಜದಲ್ಲಿ ಬೆರೆದು ಪಂಚಭೇದ ವರ ತಾರತಮ್ಯದಿ ದುರ್ವಾದವ। ತರಿದ ಶ್ರೀ ಗುರು ವಾಗ್ದೇವತಾ ನದಿಯೆಮ್ಮ ನಿರುತ ನಿರ್ಮಲಗೈಸಿ ಕರುಣಿಸಲಿ॥2॥ ಗುರು ರಾಘವೇಂದ್ರನೆ

ಸಕಲಪ್ರದಾತನೆ ನಿರುತ ನಿನ್ನಡಿಯಲ್ಲಿ ಭಕ್ತಿಯೊಳು। ಇರುವರ ಪಾಪ ಪರ್ವತವನ್ನು ಛೇದಿಪೆ ವರದೃಷ್ಟಿಯೆಂಬ ವಜ್ರಾಯುಧದಿ।।3।। ಭೂ ವಿಭುಧೇಂದ್ರನೆ ಸೇವಿಸಿ ಹರಿಯ ಮಹಾ ವಿಭವವನೆಲ್ಲ ಪಡೆದವನೆ। ದೇವ ಸ್ವಭಾವನೆ ಯಾವಾಗಲೆಮ್ಮಿಷ್ಟ ದೇವ ತರುವಿನಂತೆ ನೀಡುವದು।।4।। ಶೀಲ ಸ್ವರೂಪನೆ ಸಂಸಾರದುಃಖದ ತೂಲರಾಶಿಗೆ ಕಾಲಾನಲನೆ। ಮೇಲೆನಿಸುವ ಸುಖಿ ಧೈರ್ಯಶಾಲಿಯೆ ಗ್ರಹಾಳಿಗಳನು ನಾಶಮಾಡುವನೆ।।5।। ಭವ ಶರಧಿಗೆ ಸೇತುವೆಯೆನಿಸಿರುವನೆ ಭುವಿಯೊಳು ದ್ವೇಷಿಗಳಿಲ್ಲದಿಹ। ಸು ವಿಮಲರೂಪನೆ ತವಕದಿ ಪರವಾದಿ ನಿವಹಕೆ ವಾಗ್ಬಂಧಗೈಯುವನೇ।।6।। ವರ ವಿದ್ವಜ್ಜನವರಿಯಲತ್ಯಧಿಕವಾಗಿರು ಜ್ಞಾನವುವಾಗ್ವೈಖರಿಯಿಂದಲಿ। ಪರವಾದಿಗಳ ಗೆದ್ದ ರಾಘವೇಂದ್ರ ಸುದ್ಗುರುವೆ ನಿಮ್ಮಿಷ್ಟವ ಸಲಿಸುವುದು।।7।। ಸಂತಾನ ಸಂಪತ್ತು ಭಕ್ತಿ ವಿಜ್ಞಾನವು ಮುಂತಾದ ವಾಗ್ದೇಹ ಪಾಟವವ। ಸಂತೋಷದಿಂದಿತ್ತು ನಮ್ಮ ಶರೀರದ ಸಂತಾಪರುಜೆಯ ನಿಗ್ರಹಿಸುವನೆ।।8।। ಮೇದಿನಿಯೊಳು ಗಂಗಾದಿ ತೀರ್ಥಾಧಿಕವಾದ ನಿನ್ನಯ ಪಾದೋದಕವು। ಮೋದವು ಬ್ರಹ್ಮಹತ್ಯಾದಿ ತ್ರೈತಾಪವ ಛೇದಿಸಿ ಸುಕೃತವ ಕೊಡುತಿಹುದು।।9।। ಭುವಿಯೊಳು ಬಂಜೆಗೆ ಮಕ್ಕಳ ಕೊಡುವುದು ಅವಯವದಖಿಳ ವೈಕಲ್ಯವನು। ತವಕದಿ ಸಕಲಗ್ರಹವ ನಿಗ್ರಹಿಸುತ ವಿವಿಧ ಪಾತಕ ಪರಿಹರಿಸುವುದು ।।10।। ನಿನ್ನ ಪದಾಬ್ಧದ ರಜಧರಿಸಿರುವರ ನಿನ್ನ ಪಾದಾಂಬುಜ ಕೀತಿಪರ। ಉನ್ನತ ಪರಿಪಕ್ವವಾದ ವಾಗ್ಮಿಗಳ ನಿನ್ನ ಸಂದರ್ಶಿಸೆ ದುರಿತಹರ।।11।। ಜಯ ಸರ್ವತಂತ್ರ ಸ್ವತಂತ್ರನೆ ಜಯಜಯ ಜಯಜಯ ಶ್ರೀ ಮಧ್ವ ಮತವರ್ಧನ। ಜಯ ವಿಜಯೀಂದ್ರರ ಕರಕಮಲ ಸಂಜಾತಜಯತು ಸುಧೀಂದ್ರರ ವರಪುತ್ರನೆ।।12।। ಪರಮ ಹಂಸೋತ್ತಮ ಪೂರ್ಣಾಯು ಜ್ಞಾನವು ನಿರುತ ಯಶವು ಪುಣ್ಯ ಭಕ್ತಿಯನು। ಸಿರಿಯ ಸುಪುತ್ರರ ವೃದ್ಧಿಗೊಳಿಸಿನು ಪರಿಪರಿ ಭಯವೆಲ್ಲ ಪರಿಹರಿಸೋ।।13।। ದುರುಳ ದುರ್ವಾದಿಗಳನು ನಿಗ್ರಹಿಸುವ ದುರುಳರ ಹೃದಯ ಪ್ರಭೇದಿಸುವ। "ಎರಡೆಂಬ" ಚಿಹ್ನೆಯ ಧರಿಸಿದ ವಿದ್ಯಾ ಪರಿಪೂರ್ಣ ಗುರುವನ್ಯರಿನ್ನಿಲ್ಲವು।।14।।ಹರಿಯ ಪ್ರಸನ್ನತೆ ಪಡೆದು ಪ್ರಸಿದ್ಧನಾಗಿರುತ ಸ್ಮರನ ಗೆಲಿದಿಷ್ಟಗಳ। ತ್ವರಿತದಿ ಕೊಡುವ ಶ್ರೀಗುರುರಾಘವೇಂದ್ರರ ಹೊರತನ್ನ ಗುರುವಿಲ್ಲ ಧರೆಯೊಳಗೆ।।15।। ಮರೆವು ಮೂರ್ಛಾ ಕ್ಷಯ ಅಜ್ಞಾನ ಭ್ರಾಂತಿ ಉರುತರ ಮೋಕತ್ವ ಸಂದೇಹವು। ಕರಚರಣದಕಂಪ। ಮೊದಲಾದ ಇಂದ್ರಿಯ ಪರ ದುಷ್ಟ ದೋಷವ ಪರಿಹರಿಸೋ ।।16।। "ಶ್ರೀ ರಾಘವೇಂದ್ರಾಯ ನಮಃ" ಎಂಬ ದಿವ್ಯ ಸಾರಾಷ್ಟಾಕ್ಷರ ಜಪಿಸುತಲಿ। ಆರಾಧಿಸುವರ ಇಷ್ಟಾರ್ಥ ಕೊಡುವೆಯೊ ಅದರದಿಂದಲಿ ಅನವರತ।।17।। ತನ್ನ ದೇಹದಿಂದ ಉತ್ಪನ್ನವಾಗುವ ತನ್ನಿಂದ ತನ್ನ ಬಂಧುಗಳಿಂದಾದ। ಉನ್ನತ ದೋಷಗಳನ್ನು ನಿವರ್ತಿಸಿ ಮುನ್ನ ಕೊಡುವೆ ಸಕಲೇಷ್ಟಗಳ।।18।। ಸ್ವಾರ್ಥಸಿದ್ಧಿಗೆ ಈ ಸ್ತೋತ್ರ ತ್ರಿಕಾಲದಿ ಪ್ರಾರ್ಥಿಸಲಿಹ ಪರದಿಷ್ಟಗಳ। ಅರ್ಥಿಯಿಂದಲಿ ಪಡೆದು ಕೃತಾರ್ಥನಾಗುವ ಯಥಾರ್ಥವು ಇದಕೆ ಸಂದೇಹವಿಲ್ಲ।।19।। ಈ ಮಹಿಯೊಳಗೆ ಅಗಮ್ಯಮಹಿಮ ಉದ್ದಾಮ ಸುಕೀರ್ತಿ ವಿಶಾರದನೆ। ಶ್ರೀಮದ್ವಮತ ದುಗ್ದಾಬ್ಧಿಗೆ ಚಂದ್ರನೆ ಸ್ವಾಮಿ ನಿರ್ದೋಷಿ ನೀ ಎನ್ನ ಕಾಯೋ।।20।। ವೃಂದಾವನದ ಪ್ರದಕ್ಷಿಣೆ ಮಾಡಲು ಪೊಂದುವ ಸಕಲ ಯಾತ್ರಾಫಲವ। ವೃಂದಾವನದ ಉದಕ ಬಿಂದು ಧರಿಸಲು ಸಂದೇಹವೇ ತೀರ್ಥಫಲ ಬರಲು।।21।। ನಮಿಸುವೆ ಸರ್ವಾಭೀಷ್ಟ ಸಿದ್ಧಿಗೆ ನಾನು ವಿಮಲ ಶಾಸ್ತ್ರಾರ್ಥ ಜ್ಞಾನಗಳು। ಕ್ರಮದಿ ಲಭಿಸೆ ನಿನ್ನ ನಾಮೋಚ್ಚರಣೆ ಅಮಿತ ಹರುಷದಿಂದ ಮಾಡು ವೆನು।।22।। ಪರಿಪರಿ ದುಃಖದಿ ಪರಿಪೂರ್ಣವಾಗಿಹ ಉರುತರ ಗಂಭೀರವಾಗಿರುವ। ಅರಿಯಲಸದಳ ಪಾತಾಳವು ಉತ್ತರಿಸಲಸಾಧ್ಯವು ಸಮವಿಲ್ಲದ।।23।। ನಿರುತ ದೋಷಗಳೆಂಬ ಜಲಪಿಶಾಚಿಗಳಿಂದ ಬೆರೆದರಿಷಡ್ವರ್ಗ ತರಂಗದಿ। ಪರಿಮಿತಿಯಿಲ್ಲದ ಭಯ ಸಮೂಹವೆ ಬಿಳಿ ನೊರೆಯು ವ್ಯಸನವಗಾಧವಾದ।।24।। ಎಂದಿಗು ಹಿಂಗದ ವಿಷಜಲವಿರುತಿಹ ಬಂಧಕವಾದ ಸಂಸಾರವೆಂಬ। ಸಿಂಧುವಿನೊಳು ಬಿದ್ದು ಮಗ್ನನಾದೆ ರಾಘವೇಂದ್ರ ಗುರುವೆ ಎನ್ನನುದ್ಧರಿಸೋ ।।25।। ನಿಷ್ಠೆಯಿಂದಲಿ ಸ್ತೋತ್ರ ಮಾಡಲಷ್ಟಾದಶ ಕುಷ್ಠಾಂಧ ಮೂಕ ಬಧಿರತ್ವ ಹರ। ಸೃಷ್ಟಿಯೊಳಗೆ ಪೂರ್ಣಾಯು ಸಂಪತ್ತಿ ಉತ್ಕೃಷ್ಟ ಸುಖಗಳನಿತ್ತು ಸಲಹುವೆಯೋ।।26।। ಮುದದಿಂ ಈ ಸ್ತೋತ್ರದಿಂದಭಿಮಂತ್ರಿತವಾದ ಉದಕ ಪ್ರಾಶನದಿಂದ ಉದರದೊಳು। ಉದುಭವಿಸಿದ ಮಹಾರೋಗಗಳೆಲ್ಲವು ಅಧಿಕ ಶೀಘ್ರದಿ ನಾಶವಾಗುವುವು।।27।। ವೃಂದಾವನದ ಬಳಿ ಸ್ತೋತ್ರ ಪ್ರದಕ್ಷಿಣೆಯಿಂದ ವಂದಿಸೆ ಕುಂಟನಾದವನು। ಚೆಂದದಿ ನಡೆಯುವ ಶಕ್ತಿಯ ಕಾಲೊಳು ಪೊಂದುವ ಗುರುವಿನನುಗ್ರಹದಿ।।28।। ರವಿ ಶಶಿಗ್ರಹಣ ಪುಷ್ಯಾರ್ಕಾದಿ ದಿನದಲ್ಲಿ ಸ್ತವನವ ನೂರೆಂಟುಸಲ ಮಾಡಲು। ತವಕದಿಂದಲಿ ಭೂತಪ್ರೇತ ಪಿಶಾಚಿಯ ವಿವಿಧ ಬಾಧೆಗಳೆಲ್ಲ ಪರಿಹಾರವು।।29।। ವಿಮಲ ವೃಂದಾವನದೆಡೆಯೊಳು ಸ್ತೋತ್ರದಿ ನಮಿಸುತ್ತ ದೀಪವನಿಡುವರು। ಶ್ರಮವಿಲ್ಲದೆ ಸುಜ್ಞಾನ ಸತ್ಪುತ್ರರ ಮಮತೆಯಿಂದಲಿ ಹೊಂದಿ

ಸುಖಿಸುವರು ॥30॥ ಪರವಾದಿಗಳ ದಿಗ್ವಿಜಯ ದಿವ್ಯಜ್ಞಾನ ಪರಿಪೂರ್ಣ ಭಕ್ತಿಯ ವರ್ಧಿಸುತ। ನಿರುತದಿ ಸಕಲೇಷ್ಟ ದೊರಕಿಪ ವಿಷಯದಿ ಬರಿದಾದ ಯೋಚನೆ ಫಲವಿಲ್ಲವು॥31॥ ಚೋರ ಮಹೋರಗ ನೃಪ ನಕ್ರವ್ಯಾಘ್ರಾದಿ ಘೋರಭಯವ ಪರಿಹರಿಸುವುದು । ಧಾರುಣಿಯೊಳಗೀ ಸ್ತೋತ್ರ ಪ್ರಭಾವವೆ ಸಾರುತಲಿಹುದು ಸಂದೇಹವಿಲ್ಲ॥32॥ ಪರಿಶುದ್ಧ ಭಕ್ತಯಿಂ ಗುರುರಾಘವೇಂದ್ರರ ಚರಣವ ಸ್ಮರಿಸಿ ಸಂಸ್ತುತಿಸುವರು। ಅರಿಯರು ಲವಲೇಶ ದುಃಖವ ಸ್ವಪ್ನದಿ ಹರಿಯ ಅನುಗ್ರಹ ಬಲದಿಂದಲಿ॥32॥ ವಸುಧೆಯೊಳಗೆ ಸಕಲೇಷ್ಟ ಸಮೃದ್ಧಿಯು ದಶದಿಶಿಯೊಳು ಕೀರ್ತಿ ಸಮವಿಲ್ಲದ। ಎಸೆವ ಐಶ್ವರ್ಯವು ದೊರೆಯುವುದಿದಕೆ ಹಯಾಸ್ಯನೆ ಸಾಕ್ಷಿಯಾಗಿರುತಿಹನು॥34॥ ಧರಯೊಳಗಿತಿಪೂಜ್ಯ ಗುರು ರಾಘವೇಂದ್ರನೆ ನಿರುತದಿ ಸತ್ಯಧರ್ಮದಿ ರತನೆ। ಸ್ಮರಿಸುವರಿಗೆ ಸುರತರುವೆ ನಮಿಪರಿಗೆ ಸುರಭಿಯೆನಿಸಿ ನಿತ್ಯ ಪೊರೆಯುವನೆ॥35॥ ಮಂಗಳ ಮಂತ್ರಾಲಯ ಪುರಕಧಿಪನೆ ಮಂಗಳ ತುಂಗಾತೀರದೊಳು। ಹಿಂಗದೆ ವಿಹರಿಸಿ ಶ್ರೀರಾಮಚಂದ್ರನ ಮಂಗಳ ಮೂರ್ತಿಯ ಪಾಡುವನೆ॥36॥

ಧರೆಯೋದ್ಧಾರಕೆ ಮೆರೆವರು (ಶ್ರೀರಾಘವೇಂದ್ರ ಗುರುಪದಹಾರ)

ಧರೆಯೋದ್ಧಾರಕೆ ಮೆರೆವರು ಗುರುಗಳು ವರಮಂತ್ರಾಲಯದಲ್ಲಿ। ವರ ಪ್ರಹ್ಲಾದರು ವ್ಯಾಸ ಪ್ರಭುಗಳು ವರ ತುಂಗಾತಟದಲ್ಲಿ॥1॥ ಕೊರೆದಿಹ ಕಂಬದಿ ಹರಿಯನು ತೋರಿಸಿ ಹರಿನಾಮವ ಜಗದಲ್ಲಿ। ಮೆರೆಸಿದ ಪ್ರಲ್ಹಾದರ ಮೆರೆವರ ವರ ತುಂಗಾತಟದಲ್ಲಿ॥2॥ ಹರಿಮತ ಸಾರುವ ಹರಿಪದ ಹಾರವ ಪರಿಪರಿ ವಿಧಪದದಲ್ಲಿ। ಇಳೆಯೊಳು ಸಾರಿದ ವ್ಯಾಸರು ಮೆರೆವರು ವರಮಂತ್ರಾಲಯದಲ್ಲಿ॥3॥ ಧರೆಯನು ಮುಸುಕಿದ ತಮವನು ತೆರೆಯಲು ಹರುಷದಿ ಕಲಿಯಗದಲ್ಲಿ। ಗುರುರಾಘವೇಂದ್ರರ ಕರೆ ಮೆರೆದಿಹರು ವರಮಂತ್ರಾಲಯದಲ್ಲಿ॥4॥ ತನುಮನಧನಗಳ ಕೊನೆಗಾಣದೆ ಭವನಚರಿಸುವ ಜನದಲ್ಲಿ। ಮಣಿದೀಪಕಮತಿ ಮನನಿಸಿ ಮೆರೆವರು ವರಮಂತ್ರಾಲಯದಲ್ಲಿ॥5॥ ವಿಷಯದಿ ವಿಷದಿಂದುಸಿರಿಡುತ ಬಲು ದೆಶೆಗೆಡುತಿಹ ಮನದಲ್ಲಿ। ಹೊಸಜ್ಯೋತಿಯ ಕರ ಮೆರೆಯಲು ಮೆರೆವರು ವರಮಂತ್ರಾಲಯದಲ್ಲಿ॥6॥ ದಿನ ಸಂಸಾರವ ನೆನೆದರೆ ಘೋರದ ಘನರಥರೆಡೆತಡದಲ್ಲಿ। ಮುನಿಮಹರಥಿಯಾಕ್ಷಣ ಬಂದೊಲಿದವರು ವರಮಂತ್ರಾಯಲಯದಲ್ಲಿ॥7॥ ಭುವಿಯೊಳು ಬಹುಪರಿ ಬಳಲುವ ಮನುಜರ ಬವಣೆಯ ಬಲು ತಿಳಿದಿಲ್ಲಿ। ತವಕದಿ ಬಿಡಿಸಲು ಅವತರಿಸಿರುವರು ವರಮಂತ್ರಾಲಯದಲ್ಲಿ॥8॥ ಕರೆದರೆ ಬರುವರು ಅರಘಳಿಗಿರದಲೆ ಕರಕಶಹೃದಯಿಗಳಲ್ಲಾ। ಧರೆಯೊಳು ಗುರುಗ ಳ ಮೊರೆಯಿಡಲಾರದ ನರರೇ ಪಾಪಿಗಳೆಲ್ಲಾ॥9॥ ಸುರತರು ಫಲಿತಿದೆ ವರಕರು ದೊರೆತಿದೆ ವರಮಂತ್ರಾಲಯದಲ್ಲಿ। ತೆರೆವುದು ಮುಸುಕನು ಸ್ಥಿರವಲ್ಲವು ತನು ಪರಸುಖಸಾಧನದಲ್ಲಿ॥10॥ ಗುರುತರ ತಪ ಸುಸಮಾಧಿಗಳಿಲ್ಲದೆ ದೊರೆವುದು ಸದ್ಗತಿ ಇಲ್ಲಿ। ಅರಿಯದೆ ವೇದಪುರಾಣ ಸುಶಾಸ್ತ್ರವ ದೊರೆವುದು ಸನ್ಮತಿ ಇಲ್ಲಿ॥11॥ ಮಾಧವ ಮತದಾಂಭೋನಿಧಿಗೆ ಚಂದ್ರರ ಧೀದಿತಿ ಮೊಳಗುವುದಿಲ್ಲಿ। ವಾದಿಗಳೆಲ್ಲರ ಮೋದದಿ ಜೈಸಿದ ನಾದವು ಮೊಳಗುವುದಲ್ಲಿ॥12॥ ವೇದಾಂತ ಪೂದೋಟದ ಪರಿಮಳಸಾಧಿಸಿ ದೊರೆತಿಹುದಿಲ್ಲಿ। ವೇದವಿಶಾರದೆ ಸ್ವಾದಿಸಿ ಸುಧೆಯ ವಿನೋದದಿ ರಮಿಸುವುದಿಲ್ಲಿ॥13॥ ಪಾವನತರಮಹ ಯಾತ್ರಾರ್ಥಿಗಳೋವಿಸಿ ನೆಲೆಸಿಹರಿಲ್ಲ। ಭೂವಲಯಕೆ ಸೆಲೆ ಆ ವೈಕುಂಠವು ಧಾವಿಸಿ ಬಂದಿಹುದಿಲ್ಲಿ॥14॥ ದನವಂತರಿಗಳು ತನುವದೋರಿರುವವು ಅನುದಿನ ಮನವೊಲಿದ್ದಿಲ್ಲಿ। ಘನರೋಗಿಗಳಿಗೆ ಧನುವೇರಿಸಿ ಆ ಕ್ಷಣದೊಳು ಎಳೆದೊಗೆಯುವರಿಲ್ಲಿ॥15॥ ಕಷ್ಟಾದಿಗಳೆಂಬ ಷ್ಟಾಶಗಳು ಶ್ರೇಷ್ಠಾಲಯದೊಳಗಿಲ್ಲಿ। ನಷ್ಟಾಗುತ ಸಕಲೇಷ್ಟವು ದೊರೆವುದು ಸೋತಿರೆ ಬಲ ಮುರಿದಿಲ್ಲಿ॥16॥ ಪ್ರೇತ ಪಿಶಾಚ ಗ್ರಹಾದಿಗಳೆಲ್ಲವು ಸೋತಿವೆ ಬಲ ಮುರಿದಿಲ್ಲಿ। ತಾತರ ಮೊರೆಯೊಳು ಯಾತರ ಭಯವಿದೆ ಜೋತಿರೆಪದಯುಗದಲ್ಲಿ॥17॥ ಅಂಧರು ಗುರುಗಳ ಸುಂದರಮೂರ್ತಿಯ ಕಣ್ದೆರೆದು ನೋಡುವರಿಲ್ಲಿ। ವಂಧ್ಯರು ಮಗುವೀವ ನಂದದೊಳು ಆನಂದದಿ ಪಾಡುವರಿಲ್ಲಿ॥18॥ ಜನುಮದ ಮೂಕರು ಚಿನುಮಯ ಮೂರ್ತಿಯ ವಿನುತದಿ ಕೀರ್ತಿಪರಿಲ್ಲಿ। ಘನಮಹಬಧಿರರು ಮನದಣಿ ಕೇಳುತ ಮುನಿಗಳ ಪ್ರಾರ್ಥಿಪರಿಲ್ಲಿ॥19॥ ಯಂತರ ತಂತರ ನಂತರ ಸ್ವತಂತ್ರರ ತಂತ್ರವು ರಾಜಿಪುದಿಲ್ಲಿ। ಅಂತರಹೊಳಹು ಗುರುವಂತರಗಾನ ನಿರಂತರ ಸುಖವಿಹುದಿಲ್ಲಿ॥20॥ ವ್ಯಂಗಕೆ

ಸ್ವಂಗವು ಭಂಗಕೆ ಸಿಂಗರ ಕಂಗೆಡೆ ಮಂಗಳವಿಲ್ಲಿ। ಕಂಗೊಳಿಪುದು ಸುರತರಂಗಿಣಿ ತೀರದ ಪುಂಗರಾವಲಯದಿಲ್ಲಿ॥21॥ ಭವಸಾಗರವನು ದಾಂಟಿಸೆ ಬಲು ಅನುಭವಿಕರು ನಾವಿಕರಿಲ್ಲಿ। ತವಕದಿನಿಂದರೆ ಸರೆಯುವದೇತಕೆ ಭುವಿಯೊಳು ಬಹುಪರಿ ಯಲ್ಲಿ॥22॥ ಸಂತತಿ ಸಂಪದ ಆಯುರಾರೋಗ್ಯವು ನಂದದಿ ದೊರೆಯುವಿದಿಲ್ಲಿ। ಚಿಂತಿಪು ದೇತಕೆ ಭ್ರಾಂತಿಯೊಳೆಲ್ಲರು ಪಂಥದಿ ಗುರುನಿಂತಲ್ಲಿ॥23॥ ರಾಜರ ರಾಜರ ಗುರುಮಹಾ ರಾಜರ ದೇಹವ ಬಣ್ಣಿಪುದೆಂತು। ರಾಜಿಪ ಶ್ರೀ ಹರಿಪಾದಸರೋಜವ ಪೂಜಿಪ ಸಂಪದ ರಿಂತು॥24॥ ಅನಘರು ಇವರಾಘನತೆಯ ನೆಲೆಯದು ಮನುಜರಿಗರಿಯುವುದೆಂತು। ಘನವ್ಯಾಪಕ ಜಗಜನಕ ಜನಾರ್ಧನ ಅಣಿಯಾಗಿರೆ ಬಲು ನಿಂತು॥25॥ ತುಂಗಾತೀರ ವಿರಾಜರ ಕೀರ್ತಿಯ ಬಂಗಾರದ ಹೊಳೆಯಲ್ಲಿ। ಶೃಂಗಾರದಿ ಪೊಂಗೊಳಲೂದುತ ಕಂಗೋಚರಿಸುವ ನಿಲ್ಲಿ॥26॥ ಅನಿಮಿಷರೆಲ್ಲರು ಮುನಿಕುಲದೊಂದಿಗೆ ಕುಣಿಯುವರನುನಯದಿಂದಾ। ವನಗೋಪಾಲನ ಘನತೆಯ ಕೀರ್ತಿಸಿ ವಿನುತದಿ ಸಂಭ್ರಮದಿಂದಾ॥27॥ ಭೂಸುರರೆಲ್ಲರು ಶ್ರೀಶನ ಗಣಗಳ ಸಾಸಿರ ನಾಮಗಳಿಂದಾ। ಕೇಶವನೊಲಿದ ತೋಷದಿ ತುತಿಪರು ಸೂಸುವ ಭಾಷ್ಪಗಳಿಂದಾ॥28॥ ಬೃಂದಾವನ ಗೋವಿಂದನು ಗುರುಗಳ ವೃಂದಾವನ-ದೊಳಗಿಂದು। ಮುಂದೋರದ ಭವಬಂಧದಿ ಸಿಲುಕಿದ ವೃಂದವ ಕರೆಯುವನಿಂದು॥29॥ ಸುಂದರ ಗುಡಿ ಶೃಂಗಾರದಿ ಶೋಭಿಪ ಚಂದದಿ ಮಂಟಪದಲ್ಲಿ। ವಂದಿತ ಗುರು ಬೃಂದಾರಕರೆಸೆವರು ಕುಂದದ ಕಾಂತಿಯೊಳಿಲ್ಲಿ॥30॥ ಮುತ್ತಿನ ಹಾರವು ಕತ್ತುರಿತಿಲಕವು ರತ್ನದಪತಕಗಳಿಂದ। ಚಿತ್ತದ ಭ್ರಾಂತಿಯನ್ನುತ್ತರಿಪುವು ಪುರೋಷೋತ್ತಮ ಗಾಯನದಿಂದಾ ॥31॥ ದ್ವಾದಶ ನಾಮವು ಮೋದದಿ ಗುರುಗಳ ಸಾದೃಶಸದ್ಗುರುವೆಂದು। ಭೂ ದಿವಿಜರಿಗನುವಾದಿಸಿ ತೋರ್ಪುದು ಶ್ರೀಧರಸಂಪದರೆಂದು॥32॥ ದಂಡಕಮಂಡಲ ಕೊಂಡಿಹ ವಸನದಿ ಮಂಡಿತ ಗುರುವರರಿಂದು। ಪಂಢರಿನಾಥನ ಖಂಡಿತಪ್ರೀಯರು ದಂಡಪ್ರಣಾಮಗಳಿಂದು॥33॥ ಎಳೆತುಳಸಿಯ ವನ ಮಾಲೆಯ ಕೊರಳೊಳು ವಿಲಸಿತಕುಸುಮ-ಗಳಿಂದ। ಕೊಳಲೂದುವ ಹರಿ ಕಳೆಯನು ತೋರ್ಪುದು ಮೊಳಗುವ ವಾದ್ಯಗಳಿಂದ॥34॥ ರಥವೇರಿದ ಗುರು ಪಥದೊಳು ಸಾಗಿರೆ ಪೃಥಿವಿಯು ಧಿಮಿಧಿಮಿಕೆಂದು। ರಥಿಕರ ಡಂಗುರ ನಾದನಿನಾದದಿ ಪ್ರತಿದನಿ ಕೊಡುತಿಹ ರಂದು॥35॥ ಭುವಿಯೊಳು ಮೊಳಗುವ ಜಯಭೇರಿಗೆ ಆ ದಿವಿಜರು ಸಂಭ್ರಮದಿಂದಾ। ಜವದೊಳು ಪೂಮಳೆಗರೆವರು ಘೋಷಿಸಿ ದಿನದುಂದುಭಿ ಧ್ವನಿಯಿಂದಾ॥36॥ ವರ ಮಂತ್ರಾಲಯ ಗುರು ಸಾಮ್ರಾಟರು ಮೆರೆದರು ವೈಭವದಿಂದಾ। ಗುರುಮದ್ವೇಶನ ಹಿರಿಯ ಪತಾಕೆಯತೆರೆದುದು ಬಹುಸಿರಿಯಿಂದಾ॥37॥ ಹರಿಯಂಕುರಿಸಿ ಗುರುಸಂದರ್ಶನ ಗುರುತರ ಪುಣ್ಯವದಿಂದು। ಗುರುಸಂಕೀರ್ತನೆ ಸಿರಿಸಂಪದದೊಳು ನಿರುತದಿ ಪಾಲಿಪುದೆಂತು॥38॥ ಗುರುಪಾದೋದಕ ಪೊರೆವುದು ಭಕ್ತರ ದುರಿತೌಘವ ಕಳೆದಿಂದು। ಗುರುಸೇವೆಯು ವರಪದವಿಯನೆರೆವುದು ಅರಿವುದು ಸತ್ಯವಿದೆಂದು॥39॥ ಗುರುಮಹಾರಾಜರೆ ವರಮುನಿತೇಜರೆ ಎರಗುವೆ ನಿಮ್ಮಡಿಗಿಂದು। ಸರಸಂಸಾರದೊಳಿರೆ-ತರುಗಾದೆನು ಪೊರೆವುದು ಕರುಣದೊಳಿಂದು ॥40॥ ಘನ ಭವರೋಗದಿ ಅನುಭವರೋಗದಿ ತನುಮನ ತಾಪದಿ ನೊಂದು। ದಿನದಿನಾ ಕೊರಗಿದೆ ಮನದೊಳು ಮರುಗದೆ ಕನಿಕರ ತೋರುವುದಿಂದು॥41॥ ಹಸಿತೃಷೆ ವಿಷಯದ ವ್ಯಸನದಿ ಬಹುಪರವಶನಾದೆನು ಸೆರೆಗೊಂಡು। ಬಿಸಜಾಕ್ಷನ ಪದ ತುಸು ಸಹ ನೆನೆಯದೆ ಪಶುಜೀವನ ಕೈಗೊಂಡು ॥42॥ ಶಿಶುವೆಂದರಿಯುತ ಶಶಿಹಾಸದಿ ನರಪಶು ಮಹಾಪಾಪಿಯ ನಿಂದು। ಅಸದಳ ಭಕುತಿಯೊಳೆಸೆಯುವ ಮತಿಮನನಿಸಿ ಸಲೆಪೊರೆಯುವದಿಂದು॥43॥ ಮೀಸಲ ಮುಡುಪಿದು ಸೂಸಿಕ ಹೃದಯದಿ ಭಾವಿಸಿ ಗುರುಪದಕೆಂದು। ಪೂಸಿದ ಪರಿಮಳ ವಾಸಿಸೆ ಬಲು ಸುವಿಕಾಸಿತ ಹಾರವಿದೆಂದು॥44॥ ಗುರುಪದ ಸೇವಿಸೆ ಹರುಷದಿ ಭಾವಿಸೆ ಗುರುಪದ ಹಾರವನಿಂದು। ಇರಿಸಿದೆ ಪದದೊಳು ಹರಿವಿಠಲೇಶನೆ ನಿರುತದಿ ಪಾಲಿಪುದೆಂದು॥45॥

ಕೇಳಿರಿ ಕೇಳಿರಿ ಕೇಳಿರಿ ಭಕ್ತರೆ **ರಾಗ: ಮಧ್ಯಮಾವತಿ**

ಕೇಳಿರಿ ಕೇಳಿರಿ ಕೇಳಿರಿ ಭಕ್ತರೆ ಮಂಚಾಲೆ ಗುರುಗಳ ಚರಿತೆಯನು। ಪೇಳುವೆ ಕೇಳಿರಿ ಭಕ್ತಿಯಲಿ ಗುರುರಾಘವೇಂದ್ರರಾ ಮಹಿಮೆಯನು॥ ಹಿಂದಕೆ ಹರಿಯ ಸೇವಿಸುತಿದ್ದನು ಶಂಕು ಕರ್ಣನೆಂಬೋ ರ್ವನು ತಾನು। ಭಕ್ತಿಲಿ ಹರಿಯನು ಭಜಿಸುತ

ಇರುತಿರೆ ಮುಕ್ತಿಯ ನೀಡೆಂದ್ಯಾಚಿಸಿದಾ॥ ಸೃಷ್ಟಿಕರ್ತನ ಸೇವೆಯ ಮಾಡೆಂದು ಅಂದನು ಶ್ರೀಹರಿ ತಾನಲ್ಲಿ। ಹರಿಯಾಣತಿಯನು ಶಿರದಲಿ ಧರಿಸಿ ಸೇವಿಸುತಿದ್ದನು ವಿನಯದಲಿ॥ ಬ್ರಹ್ಮನ ಪೂಜೆಗೆ ವೇಳೆಯು ಆಗಲು ಪುಷ್ಪವ ತಂದನು ತಡವಾಗಿ। ರಾಕ್ಷಸಕುಲದಲಿ ಧರೆಯಲಿ ಜನಿಸಿದ ಬ್ರಹ್ಮಶಾಪಕೆ ಗುರಿಯಾಗಿ॥ ಕಯಾಧು ಗರ್ಭದಿ ಅಡಗಿ ಕುಳಿತನು ಕೇಳಿದ ನಾರಾಯಣ ಮಹಿಮೆಯನು। ನಂತರ ಜನಿಸಿದ ರಾಕ್ಷಸ ಕುಲದಲಿ ಹರಿಭಕ್ತನು ತಾನಾಗಿ॥ ಹರಿ ಚರಿತ್ರೆಯ ಪಾಡುತ ಕೊಂಡಾಡುತ ಗಳಿಸಿದ ತಾನು ಒಲುಮೆಯನು। ಘೋರ ವಿಷವು ಅಮೃತವಾಯಿತು ಪಾನವ ಮಾಡಿದ ರೆಕ್ಷಣದಿ॥ ಕಮಲನಾಭನ ಕಂಬದಿ ಕರೆಯಲು ಕಂಭವು ಸೀಳಿತು ಆಗಲ್ಲೆ। ಪಿತನಿಗೆ ಮುಕುತಿ ನೀಡಲು ಬಂದನು ನರಸಿಂಹ ರೂಪಿ ತಾನಲ್ಲೇ॥ ರಾವಣನನುಜನಾಗುತ ಜನಿಸಿ ರಾಮನ ಸ್ತುತಿಸಿದ ತ್ರೇತೆಯಲಿ। ವಿಷ್ಣುವ ಭಜಿಸುತ ಕದನವ ಮಾಡಿದ ದ್ವಾಪರದಿ ಬಾಹ್ಲೀಕ ತಾನಲ್ಲಿ॥ ಕಲಿಯುಗ ಬಂದಿತು ಜನಿಸಿದ ತಾನು ರಾಮಾಚಾರ್ಯರ ಸುತನಾಗಿ। ಬ್ರಹ್ಮಣ್ಯ ತೀರ್ಥರ ಬಳಿತಾ ಬೆಳೆದು ಪಂಡಿತರಾದರು ವ್ಯಾಸರಾಜರಾಗಿ॥ ಸಂಚಿತ ಪುಣ್ಯದ ಹಂಚಿಕೆಯಾಗದೆ ಮತ್ತೆ ಜನಿಸಿದೆ ಧರೆಯಲ್ಲಿ। ವರವೆಂಕಟೇಶನಾ ನಾಮವ ಪಡೆದು ಗೋಪಿಕಾಂಬೆಯ ಗರ್ಭದಲೀ॥ ಅಂಬೆಗಾಲಿಕ್ಕುತ ಅಮ್ಮಾ ಎನುತ ಬೆಳೆದ ಬಾಲನಾಗ। ಬಾಲನ ಲೀಲೆಗೆ ಅಚ್ಚರಿಗೊಂಡು ಇರುತಿರಲು ಎಲ್ಲರು ಆಗ॥ ತಂದೆ ತಾಯಿಯರಾಶ್ರಯ ತಪ್ಪಲು ಭಾವನ ಬಳಿ ಬಾಲ್ಯದಿ ತಾ ಬೆಳೆದ। ಸರಸತಿಯೆಂಬ ಸತಿಯಂ ಪಡೆದು ಸುತನಂ ಕೂಡಿ ಇರುತಿರ್ದ॥ ಬಡತನ ಬೇಗೆಲೆ ಬೇಯುತಲಿದ್ದರು ಹರಿನಾಮವ ತಾ ಬಿಡದಿರಲು। ಹರಿಯ ಪ್ರೇರಣೆಯಿಂದಲಿ ಬಂದು ಸುಧೀಂದ್ರರಾ ಬಳಿ ಇರುತಿರಲು॥ ಪರಿಮಳ ಚಂದ್ರಿಕೆ ಗ್ರಂಥರಚನೆಯ ಕಾರ್ಯವು ಸಾಗಲು ಬೇಕೆಂದು। ಸ್ವಪ್ನದಿ ಶಾರದೆ ಆಜ್ಞೆಯನಿತ್ತಳು ಸಂನ್ಯಾಸಿಯಾಗಲು ಬೇಕೆಂದು॥ ಗುರುವಿಗೆ ವಿಷಯವ ನರುಹಿ ತಾ ಮಾಡಿದ ಸುತನಿಗೆ ಮುಂಜಿಯನು। ಮುಂಜಿಯ ಕಾರ್ಯವು ನೆರವೇರುತಲೆ ಮಾಂಗಲ್ಯವತಿಯ ತ್ಯಜಿಸಿದನು॥ ತಂಜಾವೂರಿಗೆ ನಡೆಯಲು ತಾನು ಸುಧೀಂದ್ರರಿತ್ತರು ದೀಕ್ಷೆಯನು। ಗುರುಗಳ ಇಷ್ಟವನೀಡೇರಿಸಲು ಶ್ರೀಮಠಪೀಠವನೇರಿದನು॥ ವಿಷಯವನರಿತಾ ಸರಸತಿ ತಾನು ಬಾವಿಗ್ಹಾರಿದಳು ಆಗಲ್ಲೇ। ಪಿಶಾಚಿ ಜನ್ಮವು ಪ್ರಾಪ್ತವಾಗಲು ಪರಿಹರಿಸಿದೆ ನೀ ಆಗಲ್ಲೇ॥ ಬ್ರಹ್ಮದೇವರ ಕರದಿಂಬಂದ ಮೂಲರಾಮರ ಅರ್ಚಿಸಿದೆ। ಪರಿಮಳ ಚಂದ್ರಿಕೆ ರಚಿಸಲು ನೀ ಪರಿಮಳಾಚಾರ್ಯನಾದೆ॥ ಅಗ್ನಿಸೂಕ್ತದಿಂ ಗಂಧವ ತೇಗೆದು ವಿಪ್ರರು ಭಾದೆ ಪಡುತಿರಲು। ವರುಣ ಸೂಕ್ತವ ನುಡಿದು ಭಾದೆಯ ಪರಿಹರಿಸಿದೆ ಆಕ್ಷಣದೀ॥ ಅಗ್ನಿಕುಂಡದಿ ಮಾಲೆಯ ತೆಗೆದು ಒನಕೆಯ ಚಿಗುರಿಸಿ ಮಹಿಮೆಯನು। ತೋರಿದೆ ಜಗಕೆ ದೈವ ಲೀಲೆಯ ನಡೆಸಿದೆ ನೀ ಸಂಚಾರವನು॥ ಮೃತನನ್ನೆಬ್ಬಿಸಿ ದೇಸಾಯಿ ಅವರಿಗೆ ತೋರಿದಿ ನಿನ್ನ ಮಹಿಮೆಯನು। ಪಲಲಗಳೆಲ್ಲಾ ಫಲವು ಆಗಲು ಬೆರಗಾದ ಮುಸಲ್ಮಾನ ತಾನೂ॥ ತಪ್ಪಿಗೆ ಕಾಣಿಕೆ ಸ್ವೀಕರಿಸೆನಲು ಮಂಚಾಲೆ ಗ್ರಾಮವ ಯಾಚಿಸಿದೆ। ಮಂತ್ರಾಲಯವನು ಬಿಟ್ಟು ಕೊಟ್ಟನು ಮುಸಲ್ಮಾನನ ನೀ ಅನುಗ್ರಹಿಸಿದೇ ಕರಿಯಾ ಶಿಲೆಯನಾ ತರಿಸಿದೆ ನೀನು ವೃಂದಾವನವ ಮಾಡಿಸಲು। ವೃಂದಾವನದಿ ನೆಲೆಸಿಹ ನೀನು ಭಕ್ತರೆಲ್ಲರ ರಕ್ಷಿಸುತಿರಲು। ವಿರೋಧಿ ಕೃತ್ ನಾಮ ಸಂವತ್ಸರದಂದು ಶ್ರಾವಣಮಾಸದ ಬಹುಳ ಬಿದಿಗೆಯಂದು। ನೆಲೆಸಿದೆ ನೀ ವೃಂದಾವನದೊಳ ಗಂದು ಅಪ್ಪಣಾಚಾರ್ಯರು ಸ್ತೋತ್ರಮಾಡುತ ಬಂದು। ಮಾತು ಹೊರಡದೆ ಕಂಬನಿ ಸೂಸುತ ನಿಂದು। "ಸಾಕ್ಷಿ ಹಯಾಸ್ತೋತ್ರಹಿ" ಎಂದು ನುಡಿದೆ ನೀನಂದು। ಆ ಸ್ತೋತ್ರವೆ ಭಕ್ತರ ಪ್ರಿಯವಾಯಿತಿಂದು। ಪಠಿಸುವವರಿಚ್ಚೆಗಳೀಡೇ ರುವುದಿಂದು॥ ಕಲಿಯುಗದ ಕಾಮಧೇನು ವೆಂದೆನಿಸಿ ನಿಂತೆಯೆ ನೀನಲ್ಲಿ। ಕರೆದವರ ಬಳಿ ಬರುವ ಬಂಧು ವರವ ನೀಡುವ ಕಲ್ಪವೃಕ್ಷವು ನೀನಿಲ್ಲಿ॥ ಗುರುರಾಘವೇಂದ್ರರಾ ಮಹಿಮೆಯ ಪಾಡುವ ದೆಸೆಯಿಂದ। ವರಾಹಹರಿ ವಿಠಲನು ತಾನು ಭಕ್ತಿಲಿ ಪಾಡುವ ಭಕುತರಿಗೆ। ಮುಕ್ತಿಮಾರ್ಗವ ತೋರುತ ನಿರುತದಿ ಸಾಧನವನ್ನು ಮಾಡಿಸುವ॥

ಜಯ ಜಯವೀವೇ ರಾಘವೇಂದ್ರ

ಜಯ ಜಯವೀವೇ ರಾಘವೇಂದ್ರ। ಭವಭಯನಾಶಕ ರಾಘವೇಂದ್ರ॥ ತುಂಗಾತೀರದಿ ರಾಘವೇಂದ್ರ। ಮಂಗಳ ಮಹಿಮನೆ ರಾಘವೇಂದ್ರ॥ ಅಂಗರಹಿತರಿಗೆ ರಾಘವೇಂದ್ರ। ತಿಮ್ಮಣ್ಣನ ಸುತ ರಾಘವೇಂದ್ರ॥ ಕಂಗಳಿಲ್ಲದವರಿಗೆ ರಾಘವೇಂದ್ರ। ಬೊಮ್ಮ ಮಾರುತಿಪ್ರಿಯ ರಾಘವೇಂದ್ರ॥ ವೆಂಕಟನಾಮಕ ರಾಘವೇಂದ್ರ। ಸಂಕಟಹಾರಕ ರಾಘವೇಂದ್ರ॥ ವೀಣಾಪಂಡಿತ ರಾಘವೇಂದ್ರ। ಗಾನವಿಶಾರದ ರಾಘವೇಂದ್ರ॥ ಸರಸ್ವತೀಯಾ ಪತಿ ರಾಘವೇಂದ್ರ।

ಸರಸ್ವತಿ ವಿದ್ಯಾ ರಾಘವೇಂದ್ರ।। ಕುಂಭಕೋಣವಾಸ ರಾಘವೇಂದ್ರ। ಸುಧೀಂದ್ರ ಶಿಷ್ಯ ರಾಘವೇಂದ್ರ।। ಪರಿಮಳ ಪಂಡಿತ ರಾಘವೇಂದ್ರ। ಭಾಷ್ಯಾಕಾರಗುರು ರಾಘವೇಂದ್ರ।। ಶಿಷ್ಯರ ವಿದ್ಯೆ ರಾಘವೇಂದ್ರ। ಆಯಾಸದಿಂಬರೆ ರಾಘವೇಂದ್ರ।। ಗಂಧವ ತೇಯೆನೆ ರಾಘವೇಂದ್ರ। ಅಗ್ನಿಸೂಕ್ತದಿಂ ರಾಘವೇಂದ್ರ।। ವಿಪ್ರರು ಲೇಪಿಸೆ ರಾಘವೇಂದ್ರ। ಕ್ಷಿಪ್ರದಿ ಮೈಯುರಿ ರಾಘವೇಂದ್ರ।। ಶರಣು ಹೋಗಲು ರಾಘವೇಂದ್ರ। ವರುಣ ಸೂಕ್ತದಿಂ ರಾಘವೇಂದ್ರ।। ಚಂದನ ವಾಯಿತು ರಾಘವೇಂದ್ರ। ಸುತನಿಗೆ ಮುಂಜಿಯು ರಾಘವೇಂದ್ರ।। ಸನ್ಯಾಸಿಯಾಗಲು ರಾಘವೇಂದ್ರ। ಶಾರದಾಜ್ಞೆಯು ರಾಘವೇಂದ್ರ।। ಆಶ್ರಮ ಧರಿಸಿದ ರಾಘವೇಂದ್ರ। ಪಿಶಾಚಿಯಾಗೆ ಸತಿ ರಾಘವೇಂದ್ರ।। ಮೋಕ್ಷವ ಗೈಸಿದ ರಾಘವೇಂದ್ರ। ಚತುಷಷ್ಟಿಕಲೆಯಿಂದ ರಾಘವೇಂದ್ರ।। ಅತುಳ ಪ್ರಕಾಶನು ರಾಘವೇಂದ್ರ। ಮೊದಲಿನ ಗುರು ರಾಘವೇಂದ್ರ।। ಯಾದವೇಂದ್ರರು ರಾಘವೇಂದ್ರ। ಅಧಿಕಾರ ನಮ್ಮದು ರಾಘವೇಂದ್ರ।। ಅಧಿಕ ತೊಂದರೆ ಕೊಡೆ ರಾಘವೇಂದ್ರ। ಹರಿಯ ಸ್ಮರಿಸಲು ರಾಘವೇಂದ್ರ।। ಪರಿಹಾರವಾಯಿತು ರಾಘವೇಂದ್ರ। ಬಡವೆಂಕಣ್ಣಗೆ ರಾಘವೇಂದ್ರ।। ಒಡೆಯನ ದಯದಿಂದ ರಾಘವೇಂದ್ರ। ದಿವಾನ ಗಿರಿಬರೆ ರಾಘವೇಂದ್ರ।। ದಿವಾನ ದೊರೆಗಳ ರಾಘವೇಂದ್ರ। ಮುಸಲ್ಮಾನ ದೊರೆ ರಾಘವೇಂದ್ರ।। ತಟ್ಟೇಲಿ ಭೋಜನ ರಾಘವೇಂದ್ರ। ಬಟ್ಟೆಯ ಮುಚ್ಚಿರೆ ರಾಘವೇಂದ್ರ।। ತೀರ್ಥವ ಪ್ರೋಕ್ಷಿಸೆ ರಾಘವೇಂದ್ರ। ತಟ್ಟೇಲಿ ಫಲಪುಷ್ಪ ರಾಘವೇಂದ್ರ। ವಂದಿಸಿದನು ದೊರೆ ರಾಘವೇಂದ್ರ।। ಮಾನ್ಯಗಳನು ಕೊಡೆ ರಾಘವೇಂದ್ರ।। ದೊರೆಯಾ ನೆನಪಿಗೆ ರಾಘವೇಂದ್ರ। ಗೋಪುರವಿರಿಸಿದ ರಾಘವೇಂದ್ರ।। ವೆಂಕಣ್ಣಗೆ ಪೇಳೆ ರಾಘವೇಂದ್ರ। ಮಾಧವಾರಾದಿ ರಾಘವೇಂದ್ರ।। ಕೆರೆಯ ಏರಿಯ ಮೇಲೆ ರಾಘವೇಂದ್ರ। ಕರಿಯ ಶಿಲೆಯೊಳು ರಾಘವೇಂದ್ರ।। ವೃಂದಾವನ ಮಾಡೆ ರಾಘವೇಂದ್ರ। ಉಳಿದಾ ಶಿಲೆಯೊಳು ರಾಘವೇಂದ್ರ।। ಮಾರುತಿಯನು ಮಾಡಿ ರಾಘವೇಂದ್ರ। ಕೀರುತಿ ಪಡೆದನು ರಾಘವೇಂದ್ರ।। ಉತ್ತಮ ದಿನದೊಳು ರಾಘವೇಂದ್ರ। ಶಿಷ್ಯರಿಗ್ಹೇಳುತ ರಾಘವೇಂದ್ರ।। ದಕ್ಷಿಣ ದ್ವಾರದಿ ರಾಘವೇಂದ್ರ। ಆ ಕ್ಷಣ ಹೊಕ್ಕರು ರಾಘವೇಂದ್ರ।। ಒಂದು ದಿನ ಶ್ರೀಗಳು ರಾಘವೇಂದ್ರ। ಮದುವೆಗೆ ಶಿಷ್ಯಕೇಳೆ ರಾಘವೇಂದ್ರ।। ಮೃತ್ತಿಕೆ ಕೊಡಲಾಗಿ ರಾಘವೇಂದ್ರ। ದ್ವಿಜಗೆಜಗಲಿಯೊಳು ರಾಘವೇಂದ್ರ।। ಬ್ರಹ್ಮಪಿಶಾಚವು ರಾಘವೇಂದ್ರ। ಮೃತ್ತಿಕೆ ಭರದಿಂದ ರಾಘವೇಂದ್ರ।। ಸುಟ್ಟು ಬೂದಿಯಾಗೆ ರಾಘವೇಂದ್ರ। ಶಿಷ್ಯನ ಮದುವೆಯು ರಾಘವೇಂದ್ರ।। ರತ್ನಹಾರ ಭರದಿಂದ ರಾಘವೇಂದ್ರ। ಅಗ್ನಿಯೊಳಿಟ್ಟರು ರಾಘವೇಂದ್ರ।। ಹಾರಬೇಕೆನ್ನಲು ರಾಘವೇಂದ್ರ। ಕುಂಡದಿ ತೆಗೆದರು ರಾಘವೇಂದ್ರ।। ನೀರಿನವನು ಕೇಳೆ ರಾಘವೇಂದ್ರ। ಮೋಕ್ಷಬೇಕೆನ್ನಲು ರಾಘವೇಂದ್ರ।। ಮುಕ್ತಿಯನಿತ್ತರು ರಾಘವೇಂದ್ರ। ದೇಸಾಯಿ ಒಂದು ದಿನ ರಾಘವೇಂದ್ರ।। ಗುರುಗಳು ಕರೆಸಲು ರಾಘವೇಂದ್ರ। ಮಾವಿನ ರಸದೊಳು ರಾಘವೇಂದ್ರ।। ಆಡುವ ಮಗುಬೀಳೆ ರಾಘವೇಂದ್ರ। ಮಗುಮೃತಿ ಹೊಂದಲು ರಾಘವೇಂದ್ರ।। ಅಂದು ವ್ಯಥಿಸಿದರು ರಾಘವೇಂದ್ರ। ರಾಮನದಯೆ ಯಿಂದ ರಾಘವೇಂದ್ರ।। ಜೀವವನಿತ್ತರು ರಾಘವೇಂದ್ರ। ಪರಿಜನ ಹರುಷದಿ ರಾಘವೇಂದ್ರ।। ತರುಳನ ಕರೆದರು ರಾಘವೇಂದ್ರ।ಗುರುಗಳು ಕರುಣಿಸಿ ರಾಘವೇಂದ್ರ।। ಪ್ರಾಣವನಿತ್ತರು ರಾಘವೇಂದ್ರ। ಒನಿಕೆ ಚಿಗುರಿಸಿ ರಾಘವೇಂದ್ರ।। ವಿಪ್ರರಿಗೆ ಸಿರಿಬಂತು ರಾಘವೇಂದ್ರ। ಶಿಷ್ಯನ ಮಗನೊಬ್ಬ ರಾಘವೇಂದ್ರ।। ಬಿಸಿಲಲಿ ಬಳಲಲು ರಾಘವೇಂದ್ರ।ಶಾಟಲಿ ನೆರಳನು ರಾಘವೇಂದ್ರ।। ಇಚ್ಛಾಭೋಜನ ರಾಘವೇಂದ್ರ। ಜಾತಕ ಬರೆಯಲು ರಾಘವೇಂದ್ರ।। ಒಂದು ನೂರು ಮನುಜಗೆ ರಾಘವೇಂದ್ರ। ಮೂರು ನೂರು ಗ್ರಂಥಕೆ ರಾಘವೇಂದ್ರ।। ಬೃಂದಾವನ ಕೇಳು ನೂರು ರಾಘವೇಂದ್ರ। ಪರಿಪರಿ ರೋಗಹರ ರಾಘವೇಂದ್ರ।। ಜಯಜಯ ಮಂಗಳ ರಾಘವೇಂದ್ರ। ಜಯಜಯ ವಿಠಲದಾಸ ರಾಘವೇಂದ್ರ।। ನಿತ್ಯಾನಂದ ದೊಳು ರಾಘವೇಂದ್ರ। ಜಯಜಯ ವಿಠಲದಾಸ ರಾಘವೇಂದ್ರ। ಶ್ರೀ ಕೃಷ್ಣಾರ್ಪಣ ಮಸ್ತು।।

ತೂಗಿರೆ ರಾಯರ ತೂಗಿರೆ ಗುರುಗಳ **ರಾಗ: ಲಾವಣಿ-ಆದಿತಾಳ**

ತೂಗಿರೆ ರಾಯರ ತೂಗಿರೆ ಗುರುಗಳ। ತೂಗಿರೆ ಯತಿಕುಲ ತಿಲಕರ।।ಪ।। ತೂಗಿರೆ ಯೋಗೀಂದ್ರಕರಕಮಲ ಪೂಜ್ಯರ। ತೂಗಿರೆ ಗುರುರಾಘವೇಂದ್ರರ।।ಅ.ಪ।। ಕುಂದಣಮಯವಾದ ಛಂದ ತೊಟ್ಟಿಲೊಳಾ।। ನಂದ ನಂದನ ಗೋವಿಂದ ಮುಕುಂದನ ನಂದದಿ ಭಜಿಪರ ತೂಗಿರೆ ।।1।। ಯೋಗನಿದ್ರೆಯನ್ನು ಬೇಗನೆ ಮಾಡುವ ಯೋಗಿಶ ವಂದ್ಯಾರ ತೂಗಿರೆ ಭೋಗಿಶಯನನ ಪಾದ ಯೋಗದಿ ಭಜಿಪರ ಭಾಗವತರನ್ನ ತೂಗಿರೆ।।2।। ಭಜಕ ಜನರುತಮ್ಮ ಭಜನೆಯ ಮಾಡಲು ಅವರ ನಿಜಗತಿಯಿಪ್ಪರ ತೂಗಿರೆ।। ನಿಜಗುರು ಜಗನ್ನಾಥವಿಠಲನ್ನ ಪದಕಂಜ। ಭಜನೆಯ ಮಾಳ್ಪರ ತೂಗಿರೆ।।4।।

ಮಂಗಳಂ ಜಯಮಂಗಳಂ – (ಪರಮಾಸನದಲಿ ಕುಳಿತವಗೆ)

ಮಂಗಳಂ ಜಯಮಂಗಳಂ।।ಪ।। ಪರಮಾಸನದಲಿಕುಳಿತವಗೆ। ಪರಮ ತತ್ವವನು ತಿಳಿದವಗೆ। ಹಿರಣ್ಯಕ ಪತ್ನಿಯ ಗರ್ಭದಲಿರುವಾಗ। ಗುರುನಾರದರಿಂದರಿತವಗೆ।।1।। ಐದು ವರ್ಷವುಳ್ಳವಗೆ। ಬೋದದಿ ವೃದ್ಧನಾದವಗೆ। ಸಾಧಿಸಿ ಮುಕ್ತಿಯ ಹಾದಿಬಲ್ಲವಗೆ। ಕಯಾಧುಪುತ್ರ ಪ್ರಹ್ಲಾದನಿಗೆ।।2।। ಬಾಲಲೀಲೆಯನು ಬಿಟ್ಟವಗೆ। ಬಾಲಕರಿಗೆ ಹಿತ ಪೇಳ್ದವಗೆ। ಭೋಲೋಕದಲಿ ವಿಶಾಲ ನಾರಸಿಂಹ। ಲೀಲೆಗೆ ಮುಖದಿ ಮೂಲನಿಗೆ।।3।। ಹರಿಯಭಕ್ತನಾಗಿರುವವಗೆ ಹರಿಗೆ ಅಂಜದೆಲೆ ಇರುವವಗೆ। ಹರಿಗಂಜಲು ವರಸುರರಂಜಲು। ನರಹರಿಯ ಸಿಟ್ಟು ಬಿಡಿಸಿರುವವಗೆ।।4।। ಸಂತತ ನಿಸ್ಪೃಹನಾದವಗೆ। ಸಂತೋಷದಿ ತಾ ಕುಳಿತವಗೆ। ಸಂತತ ಶ್ರೀಮದನಂತಾದ್ರೀಶನ। ಚಿಂತನ ದಿಂದಿರುವಂಥವಗೆ।।5।।

❖ ❖ ❖

34. ಗೋಕುಲಾಷ್ಟಮಿ
ಶ್ರೀ ಕೃಷ್ಣಾವತಾರ (ಕೃಷ್ಣ ಚರಿತ್ರೆ)

ಬಂದಿತು ಬಂದಿತು ಕೃಷ್ಣ ಜಯಂತಿ **ರಾಗ: ಸಾರಂಗ**

ಬಂದಿತು ಬಂದಿತು ಕೃಷ್ಣ ಜಯಂತಿ। ಅಂದದಿ ಕಣ್ ಮನ ತಣಿಪ ಜಯಂತಿ।।ಪ।। ಶ್ರಾವಣ ಅಷ್ಟಮಿ ನಡುರಾತ್ರಿ। ದೇವಜನಿಸಿದ ರೋಹಿಣಿ ನಕ್ಷತ್ರ।।1।। ಮುಚ್ಚೋರೆ ತೇಂಗೊಳು ಲಾಡು ಚಿರೋಟಿ। ಅಚ್ಯುತಗರ್ಪಿಸು ಅವಗಾರು ಸಾಟಿ।।2।। ಚಕ್ಕುಲಿ ಕಡುಬು ಜಿಲೇಬಿ ಅತಿರಸವ। ಅಕ್ಕರದಿಂ ನಾವು ಅರ್ಪಿಸಿ ನಲಿಯುವ।।3।। ಬಗೆ ಬಗೆ ಉಂಡೆಗಳ ಮಿಗಿಲು ಭಕ್ಷ್ಯಗಳ। ಜಗವ ಮೋಹಿಪ ನಮ್ಮ ಮಗುವಿಗರ್ಪಿಸುವ।।4।। ಕಂದ ಮೂಲ ಫಲ ವೃಂದವ ತಂದು। ನಂದನಿಗರ್ಪಿಸಿ ಕೊಳ್ಳು ನೀನೆಂದು।।5।। ಸುಂದರೇಶನ ಪಾಡುತಲೀ। ಚಿಂದದಿಂ ತೂಗು ನೀ ಜೋಜೋ ಎನ್ನುತ್ತಲಿ।।6।।

ಇದು ಸುದಿನ ಮಂಗಳ ದಿನ **ರಾಗ: ದುರ್ಗ-ಶುದ್ಧಸಾವೇರಿ**

ಇದು ಸುದಿನ ಮಂಗಳ ದಿನ ।ಶ್ರೀಕೃಷ್ಣ ಜನುಮದಿನ।।ಪ।। ಮುಗಿಲು ಮಳೆಯ ಕರೆದದಿನ। ಯಮುನೆ ಗೋದೆ ಮಿಂದದಿನ ।।ಅ.ಪ।। ಗೋಪಿತೊಟ್ಟಿಲಿಟ್ಟದಿನ। ಪಾಪಿ ಪುಣ್ಯ ಕಂಡದಿನ। ನಂದಗೋಕುಲ ನಲಿದ ದಿನ। ಚಿಂದದಿಂದ ಪೊಳೆದ ದಿನ।।1।। ಹೂವು ಹಣ್ಣು ವೀಳ್ಯ ದಿನ। ದೀಪಾರತಿ ಗಂಧದಿನ। ರಾಸಲೀಲೆ ಕುಣಿದ ದಿನ। ಗೀತಗಾನ ಪೊಳೆದ ದಿನ।।2।। ಸೆರೆಯ ದ್ವಾರ ತೆರೆದ ದಿನ। ಧರೆಯ ಪಾಪ ಹರಿದ ದಿನ। ಕಂಸಮರ್ದನ ಗೈದ ದಿನ। ದೀನರಾಸೆ ಸಂದ ದಿನ।।3।।

ಧೀರ ಕಂಸಾಸುರಗೆ ಬಳಿಕಾ

ಧೀರ ಕಂಸಾಸುರಗೆ ಬಳಿಕಾ। ನಾರದರುನಡೆತಂದು ಹೇಳಲು। ಸಾರೆಹುಟ್ಟಾ ಅನುಜಳುವರದಿ। ಎಂಟನೇ ಗರ್ಭಾ।।ಪ।। ಮಾರಿ ಆಯಿತು ನಿನ್ನ ಉದರಕೇ। ಕ್ರೂರ ದೃಷ್ಟಿಯ ನೋಡಿಕೋ ಎಂದು ಸಾರೆ। ಮೈದನ ಅನುಜಳನು ಸೆರೆಮನೆಯೊಳಗೆ ಇಟ್ಟಾ।।1।। ದಿಟ್ಟ ಕಂಸಾರಾಯ ನಿಮ್ಮನು। ಮೆಟ್ಟಿ ಕೊಲ್ಲುವರಕ್ಕಸ ಹಂತಕಾ।। ಹುಟ್ಟುವನು ನಿನ್ನುದರದಿ

ಶ್ರೀಕೃಷ್ಣನೆಂಬೂವನೂ।।2।। ಮುಟ್ಟದೂರದಿ ಗರ್ಭನಿಲುವುದು ಬೆಟ್ಟಕುದಂಕುಶವು ನಿನಮನಾ। ಇಷ್ಟವಾದರೆ। ಮುಷ್ಟಿ ಹೊನ್ನನ್ನು। ಕೊಟ್ಟುಕಳುಹೆನಗೇ।।3।। ಜೈಜೈ ಮಂಗಳಾ।। ಇಷ್ಟ ಗುರುವನು ಪೇಳೆದೇವಕೀ ಕೊಟ್ಟ ಉಡುಗರೆಗಳನು ಬೆನ್ನಿಗೇ ಕಟ್ಟಿಕೊಂಡಳೆ ಎಳೆಯ ಶಿಂಗನ ಬೆಟ್ಟವೇರಿದಳೂ।।4।। ಘಟ್ಟನೆರಗಿತು ಗರ್ಭ ಚಿನ್ಮಯಾ ದೃಷ್ಟಿತೋರಿತು ಎರಡುಮಾಸಕೇ। ಬಟ್ಟಮುಖ ಬಿಳುಪೇರಿಸೂರ್ಯ ಬಿಂಬವನೂ ಪ್ರಬಲಿಸಿತೂ।।5।। ಮೂರುಮಾಸಕೆ ಬಯಕೆ ತೋರಿತೂ ಚಾರುಫಲ ಪುಷ್ಪಗಳ ವ್ಯಸನವೂ ನಾರಿ ಬಯಸಲು ಸೆರೆಮನೆಯೊಳಗೆ। ಯಾರು ಮಾಡುವರೂ।।6।। ಆಯಿತಾನಾಲ್ಕನೆಯ ತಿಂಗಳೂ। ನಾರಿರನ್ನೆಳೆಗೈದು ತಿಂಗಳೂ। ಆರು ಮಾಸವು। ತುಂಬಲಾಕೆಗೆ ಗರ್ಭ ಪ್ರಭಲಸಿತೂ।।7।। ಮಾಸ ಆರೇಳಾಗುತಿರೆ ಕಡೂಬ್ಯಾಸರಾಯಿತು। ಎಂಟನೆತಿಂಗಳೂ। ಕೂಸ ಪಡೆದಳೂ। ಸರೆಮನೆವಳಗೆ। ಆಗ ದೇವಕಿಯೂ।।8।। ಕ್ಲೇಶದಿಂದ ವಸುದೇವ ನಿರುತಿರೇ। ದುಷ್ಟಕಂಸ ಗಂಜಿಮನೆಯಲೀ। ಆ ಶಿಶುವಕೊಂಡೊಯ್ದಾ। ಸರಿರಾತ್ರೆಯಲಿ ಗೋಕುಲಕೇ।।9।। ಸಾಳಸಂಕಳ ಕಳಚಿಹೋದವೊ ಕಾಲಲಿಂದಿಗೇ ತಾನೆ ಒಡೆಯಿತು। ಕಾಳುಗತ್ತಲೆ ಕವಿಯೆ ಶೇಷನ ಹೆಡೆಯ ಬೆಳಕೂ।।10।। ಲೋಲಲಾಂಗಿಯ ಅವಷದಿಯನೂ। ತಾಂಬೂಲ ಸಹಿತಲೆ ಕೊಟ್ಟು। ನಮ್ಮನೂ ಪಾಲಿಸಾಬೇಕೆನುತು। ಶಿಶುವ ಶೂರ್ಪದಲಿ ಇರಿಸಿದರೂ।।11।। ನಂದಗೋಕುಲದಿ ದುರ್ಗಿಯಾತಂದುದೇವಕಿ। ದೇವಿಯಲ್ಲಿಡೆ ಅಂದು ಗಾರ್ದಪ। ವದರೆ। ಬೇಗದಿ ಕಂಸಕೇಳಿದನೂ ।।12।। ಬಂದು ಶಿಲೆಗಪ್ಪಳಿಸೆ। ಗಗನದಿ ನಿಂದು ಪೇಳಿದಳ್। ಒಂದು ಮಾತನೂ ಇಂದು ನಿನ್ನ ಹಗೆ ಜನಿಸಿದನು। ಗೋಕುಲಕೆ ಹೋಗೆಂದೂ ಲಗುಬಗುವ ಇನ್ನೇನ ಹೇಳಲಿ। ನಂದಗೋಕುಲಕೆ।।13।। ನಂದಗೋಪಿಯಕಂದನಾದರೆ। ನಂದಗೋಪನ ಬಂಧುಗಳು ಸಹಿತಲೇ ಬಂದು ನಿಂದಾಗ್ನಿಯಲಿ ಇಳಿದೂ ಸ್ನಾನವನೆಮಾಡಿ।।14।। ಚೆಂದದಿಂದಲೆ ಮಧುವತಂದೂ। ಕುಂದದೆ ಶಿಶುವಿಂಗೆಊಡಿಯೆ। ಒಂದು ಜನಿವಾರವನು ಕೊಡಿ। ನಾವೆಬೆನ್ನು ಛೇದಿಸಲೀ।।15।। ಅರಸಿನಲಿ ಬಾಣಂತಿ ಮಲಗಿರೆ ಅರಿಸಿನದಪಾವಡವ ಕಟ್ಟಿರೆ। ಅರಸಿಶಿಶುವನು। ಕೈಲಿಕೊಡುವರೂ। ಆಗ ನಾರಿಯರೂ ಮಿಗೆ ಹರುಷದಿಂದೊಸಗೆ ಹೇಳಲೂ। ಪರಿಪರಿಯ ಮಾಣಿಕದ ತಳಿಯಲಿ ಸರಸಿಜಾಕ್ಷಿಯರು ಎತ್ತುತಿದ್ದರು। ಮುತ್ತಿನ ಮಂಗಳಾರುತಿಯಾ। ಜೈ ಜೈ ಮಂಗಳಾ16।। ಜಗದ ಜೀವಿ ಮಗನು ಆದರೆ। ಸಗಣಿಯಲಿ ತಂದಿರಿಸಿ ಸಖಿಯರೂ ನಗುತ ಬೆಚ್ಚಂಬಲಿಯ ತೋಳೆದರೂ ಆಗ ನಾರಿಯರೂ।।17।। ಮಿಗೆಹರುಷದಿಂದೊಸಗೆ ಹೇಳಲೂ। ಪರಿಪರಿಮಾಣಯಮಾಣಿಕದ ತಳಿಗೆಲೀ ಸರಸಿಜಾಕ್ಷಿಯರು ಎತ್ತುತಿದ್ದರೂ। ಮುತ್ತಿನ ಮಂಗಳಾರುತಿಯಾ।।18।। ಮಂಗಳಮ್ ಶ್ರೀಕೃಷ್ಣರಾಯಗೇ। ಮಂಗಳಮ್ ಗೋಕುಲೋ ದ್ಧಾರಗೇ। ಮಂಗಳಮ್ ಶ್ರೀ ಉಡುಪಿಯಲಿನೆಲಸಿದ ಶ್ರೀಕೃಷ್ಣಮೂರುತಿಗೇ।।19।।

ಮಳೆಯು ನಾಡ ತೊಯ್ಯುತಿರೆ — ರಾಗ: ಸಾವೇರಿ

ಮಳೆಯು ನಾಡ ತೊಯ್ಯುತಿರೆ। ಮಿಂಚಿಗಿರುಳು ಬೆದರುತಿರೆ। ಗೂಡ ಮುದ್ದು ಗೊಲ್ಲನೆಡೆಯೊಳೊಂದು। ಹಣತೆ ಮಿನುಗುತಿರೆ।। ಮುದವದೊಂದು ಮೊಳೆವುದು, ಬಗೆಯ ಕಣ್ಣ ತೆರೆವುದು।। ಹಿಂಸೆ ಸೆರೆಗೆ ಸಿಲುಕುತ। ಕಂಸ ಭಯಕೆ ನಡುಗುತ। ಹಡೆದ ಕೂಸು ಬಾಳ್ವುದೆಂತು ಎನುತ ತಲ್ಲಣಿಸುತ। ನೊಂದ ಪಿತರ ಚಿತ್ರವ ಕಾಂಬೆ ಕೃಷ್ಣನುದಯವ।। ಒಲುಮೆ ತೊಡರ ಕಳಚಲು ತಂದೆ ಶಿಶುವನಪ್ಪಲು। ತಾಯಿ ಕೊಡುವ ಕೊನೆಯ ಮುತ್ತು ಕಂಬನಿಯೊಳು ನೆನೆಯಲು। ಒಯ್ದನಂದು ಶಿಶುವನು ಬೆಳಗಿ ಗೋಪ ಗೃಹವನು।। ಸಾಸಿರಹೆಡೆ ಸರ್ಪವು ಸೋನೆಗಾಗೆ ಛತ್ರವು। ಮಾಯೆ ನಿದ್ರೆಗೊಂಡು ಜಗವೆ।ಕದಲದಡಗಿ ಶಬ್ದವು। ಯಮುನೆ ಬತ್ತಿ ಬಟ್ಟೆ ಗೊಡೆ। ಶಿಶುವ ಬಿಟ್ಟ ಗೊಲ್ಲನೆಡೆ।। ಮಾಯೆ ಹರಿಯೆ ಬಾಲನಳೆ। ಗೋಪಿ ಹರುಷ ಕೋಡಿಗೊಳೆ। ನಂದಗೋಪ ನೋಡಿ ನೋಡಿ। ಸುತನ ಮುದ್ದ ಸೂರೆಗೊಳೆ। ಅಂದು ಎಲ್ಲ ಗೋಕುಲ। ಹರುಷವಾಯ್ತು ದೇಗುಲ।।ಇಂತು ಗೊಲ್ಲನಾಗಿ ಹರಿ। ಕೊಳಲು ಕರದಿ ನವಿಲು ಗರಿ। ಶಿಖೆಯೊಳೆಸೆಯೆ ಬೃಂದಾವನದೊಳಾಡಿ ಗೋವ ಕಾದಪರಿ। ಜಗಕೆರಮ್ಯವಾದುದು। ಇಂದೂ ಮೋದವೀವುದು।। ಕುಳಿರ್ವನದಿ ಸೇರುವ। ಜೊನ್ನ ಕೂಟ ಕುಣಿತವ। ಕೊಳಲುಕರೆವ ಮೋಹದಿಂಪಿಗೊಲಿದು ತುಡಿವ ಹೃದಯವ। ನೆನೆಯಲೆಷ್ಟು ಮೋದವು। ಆಹಾ ಏನು ಮೋದವು।। ಕಾಳಿ ಮಡುವು ರಾಸದೆಡೆ। ಸುಖದಿ ಮೇವ ಗೋವ್‌ಗಳೆಡೆ।। ತಳಿತ ಕಳಿತ ವನದೊಳಾಡಿ। ಬುತ್ತಿ ಮೆಲುವ ಗೊಲ್ಲಪಡೆ। ಇಂದು ಬರಿಯ ನೆನಪದು। ಕವಿಯು ಕಾಂಬ ಕನಸದು।।

ಸೋನೆ ತಿರೆಯ ತೊಯ್ಯುತಿರೆ। ಮಿಂಚಿ ತಿಮಿರ ನಡುಗುತಿರೆ। ಗೂಡ ಗೊಲ್ಲ ಜೀವವೊಂದ ಹಿಡಿದು ನಿಂತು ಮನಕೆ ತೆರೆ। ಮುದವು ಮೊಳೆತು ನವೆವುದು। ಸುಯ್ಯಲೊಂದು ತರುವದು। ಇಂದು ನಮ್ಮ ಬಾಳ ಗೋಳು ಬಯಲು ಹುಸಿಯು ಎನಿಪುದು।।

ಶ್ರೀ ಕೃಷ್ಣ ಜನನ

ಹರಿಯವತರಿಸಿದ ಹರುಷದಲಿ **ರಾಗ: ಜುಂಜೋಟಿ**

ಹರಿಯವತರಿಸಿದ ಹರುಷದಲಿ ನಾರಿದೇವಕಿ ಸುತನೆನಿಸುತಲಿ।।ಪ।। ಅಣ್ಣ ಕಂಸ ಸಣ್ಣ ತಂಗಿ ಮಕ್ಕಳನೆಲ್ಲ ಕಣ್ಣೆತ್ತಿನೋಡದೆತಾ ಕೊಲ್ಲುತ್ತಿದ್ದನು। ಬಣ್ಣಿಪ ಎಂಟನೆಗರ್ಭ ಬಾಲೆಯಾಗಲು ಆ ಬಾಗಿಲಿಗೆ ಕಾವಲಿಟ್ಟು ಕಾದುಕೊಂಡಿದ್ದ ಕಂಸ ಕಾದುಕೊಂಡಿದ್ದ।।1।। ಕ್ರೂರಕಂಸನ ಸೆರೆಯೊಳಗೆ ಸುಂದರಿ ನಾರಿ ವಸುದೇವನಿರಲು। ಬಂಧನ ಬಿಡಿಸಿ ಭಕ್ತರ ಪೊರೆಯುವೆ ಎಂದು। ಮಂದರೋದ್ಧಾರನು ಅವತರಿಸಿದನು।।2।। ಅಷ್ಟಮಿತೇದಿ ನಕ್ಷತ್ರ ರೋಹಿಣಿಯಲಿ। ಅರ್ಧರಾತ್ರಿ ಕಾಳ ಅತಿ ಕತ್ತಲೆಯಲಿ। ಅದ್ಭುತ ಮಹಿಮೆ ಅವತರಿಸಲಾಗ। ಆ ಗ್ರಾಮದಲ್ಲೆಲ್ಲಾರು ನಿದ್ರೆ ಮಾಡುತ್ತಿದ್ದರು।।3।। ತಂದೆ ತಾಯಿ ಈರ್ವರು ಆ ಕಂದನಕಂಡು। ಒಂದು ತೋರದಂಜಿಮನ ನೊಂದು ರೋದಿಸೆ। ನಂದಗೋಕುಲಾದೊಳೆನ್ನನು ಸೇರಿಸೆನ್ನುತ। ಇಂದಿರೇಶಕಂದ ಕೃಷ್ಣ ಪೇಳಿದನಾಗ।।4।। ತಂದೆ ವಸುದೇವ ಬಂದ ಆಲಯಬಿಟ್ಟು ಇಂದಿರೇಶ ಕಂದ ಕೃಷ್ಣನ್ನಾ ಇಟ್ಟು। ಒಂದು ನಾರಿ ಶಿಶುವ ತಂದು ಸೆರೆಯೊಳಿಟ್ಟು। ಅಂದು ಸತಿ ಪತಿಮನ ನೊಂದು ರೋದಿಸೆ।।5।। ದುಷ್ಟ ಕಂಸ ಸಿಟ್ಟಿನಿಂದ ತಾನೆ ಶಿಶುವ ಮೆಟ್ಟಿ। ಪಾದದಿಂದೆತ್ತಿ ಆಕಾಶಕ್ಕಾಕಲು। ಕೆಟ್ಟಕಂಸ ನಿನ್ನ ವೈರಿ ಗೋಕುಲದಲ್ಲಿಹಾ। ಎಂದು ಘಟ್ಟಿಕೂಗಿ ಅಟ್ಟಹಾಸದಿಂದ್ದಾರಿದಳ್।।6।। ನಂದಗೋಪನಿಗೆ ಪುಟ್ಟಕಂದನಗುತ। ಇಂದು ಮುಖಿ ಯಶೋದೆಗಾನಂದ-ನೀಡುತ। ಅಂದುಯಾದವ ಕುಲಕೆ ದೀಪನಾಗುತ। ಸಿಂಧುಶಯನ ಮಾಡೋ ಪ್ರಿಯ ತಾನೆನುತ।।7।।

❖ ❖ ❖

ಶ್ರೀ ಕೃಷ್ಣನ ತೊಟ್ಟಿಲ ಪೂಜೆ

ತೊಟ್ಟಿಲು ಪೂಜೆ ಮಾಡಿರವ್ವ **ರಾಗ: ಸಾವೇರಿ**

ತೊಟ್ಟಿಲು ಪೂಜೆ ಮಾಡಿರವ್ವ ತೊಟ್ಟಿಲೊಳಗೆ ಇರಿಸಿರವ್ವ। ಏನಂತ ಹೆಸರಿಡ್ತೀರಿ ಪಾಪುಗೆ ಏನಂತ ಹೆಸರಿಡ್ತೀರಿ ? ಲಾಲಿ ಲಾಲಮ್ಮ ಲಾಲಿ ಲಾಲಿ ಲಾಲಮ್ಮ ಲಾಲಿ।। ಲಾಲಿ ಪರಮಾನಂದ ಗೋವಿಂದ ಲಾಲಿ। ರಾಮ ಲಾಲಿ ಕೃಷ್ಣ। ಲಾಲಿ।। ತೂಗಿರೆ ಅಲಂಕರಿಸಿದ ತೊಟ್ಟೀಲ। ರಕ್ಷೆಯನಿಟ್ಟು। ಗುಂಡಪ್ಪ ಸಹಿತ। ಆರತಿ ಎತ್ತಿ ಹರಸಿ ಪಾಡುತ್ತಾ।। ತೂಗುತೊಟ್ಟಿಲಿಗೊಂದು ಪಾಗುಪಟ್ಟೆಯ ಹಾಸಿ। ಮಾಗಾಯಿ ಮಗುವ ಮಲಗಿಸಿ - ಅವರಮ್ಮ। ಜೋಗುಳವ ಹಾಡ ತೊಡಗ್ಯಾಳು।।

ಎಸೆದಳೇ ಗೋಕುಲಾದಿ ಹಸಿಯಬಾಣಂತಿ **ರಾಗ: ಕಾಂಬೋದಿ**

ಎಸೆದಳೇ ಗೋಕುಲಾದಿ ಹಸಿಯಬಾಣಂತಿ ಗೋಪಿ। ವಸುದೇವ ಕೃಷ್ಣನೆಂಬೊ ಎಸಳ ಹಸುಗೂಸಿನ। ತಾಯಿಗೆ ಕುಶಲಾದಾರುತೀಯಾ ಬೆಳಗೀರೇ।।ಪ।। ಎಣ್ಣೆಗಮಟಿನಾ ಸೀರೆ। ಸಣ್ಣಸಾದಿನಾಬಟ್ಟು। ಕಾಂತೆ ಪ್ರಜ್ವಲಿಸುತಾ। ಕುಳಿತಳೇ ಗೋಪಿ।। ಕೂಗಿಲಾ ತಗ್ಗಿನಲ್ಲಿ ಆಗ ಜನಿಸಿದಾ ಶಿಶುವ। ಬೇಗ ಮೊರದಲ್ಲಿಟ್ಟು ಭಾಮೆ ನೋಡೆಂದರು।।1।। ಮೂರನೆ ದಿವಸಾದಲಿ। ಮೂಬಟ್ಟಲಿರುಲು ಮಾಡಿದರು। ನಾರಿಗೆ ನೀರೆರೆದು ಶುಂಠಿಬೆಲ್ಲವ ನಿರಿಸಿದರು।। ಕಂಬುಕಂಠದವಳೆ ಕಂದ ಕೃಷ್ಣನ ನೋಡೆಂದರು।।2।। ಐದನೇ ದಿವಸಾದಲಿ। ಐದೆಯರೆಲ್ಲರೂ ಕೂಡಿ ಹೊಯ್ದಹಿಟ್ಟಿನಾ ಕಡುಬು ಶಟವಿಗೇ ನೀಡಿ ಬಂದ ಲಕ್ಷ್ಮಿಗೇ ಮುದದಿಂ ಆಕ್ಷಯಾವ ನೀಡೆಂದರು।।3।। ಹತ್ತು ರಾತ್ರಿ ಕೆಳೆಯೇ ಹೊತ್ತ ಭಾರವಿಳಿಯೆ

ಬೆಳಗಿನಲಿ ಬೇಗ ನೀರೆರೆದು ಗೆದ್ದೆವೆಂದು ಗೆದ್ವೀಳ್ಯವ ನೀಡಿದರು।।4।।

ಕುಡಿ ಹಾಲನು ಬಾಲನೆ **ರಾಗ: ಮೋಹನ-ಮಿಶ್ರಛಾಪುತಾಳ**

ಕುಡಿ ಹಾಲನು ಬಾಲನೆ। ಗೋಪಾಲ ಲೋಲ।।ಪ।। ಕುಡಿಯೊ ಹಾಲನು ಪೊಡವಿ ಪಾಲನೆ। ಕಡಲ ಶಯನನೆ ಗರುಡ ಗಮನನೆ। ತಡವು ಮಾಡದೆ ತಂದ ಮೀಸಲ। ಹಳಿಯದೀರು ಮೃಡನ ಸಖನೇ।।1।। ದೇವಕೀ ವಸುದೇವರ ಉದರದಿ ಜನಿಸಿ ಬಾಲ ಲೀಲೆಯ ತೋರಿದೆ। ಮಾವ ಕಂಸನ ಕೊಂದು ಮಥುರೆಯಲಿ। ಮತ್ತೆ ಪೂತನಿ ಅಸುವ ಹೀರಿದೆ। ಮೂರು ಲೋಕವ ಬಾಯಲಿ ತೋರಿದ ಮೂಲಕರ್ತೃವೆ ನಿನ್ನವದನದಿ।।2।। ಮತ್ಸ್ಯ ಕೂರ್ಮವರಾಹ। ನಾರಸಿಂಹ ವಿಪ್ರವಾಮನ ಭಾರ್ಗವ। ದುಷ್ಟ ನಿಗ್ರಹ ರಾಮ ಕೃಷ್ಣನೆ ಬೌದ್ಧ ಕಲ್ಕಿನಿನ್ನ ಕೊರಳಿಗೆ। ಮುತ್ತಿನ್ಹಾರವ ಹಾಕಿ ಚಿನ್ನದ। ತೊಟ್ಟಿಲೊಳಿಟ್ಟು ತೂಗುವೆ।।3।।

ಬಜಬೆಣ್ಣೆ ಇಡುವೆನು ಬಾರೋ ರಂಗ **ರಾಗ: ಕಾಂಬೋದಿ-ಆದಿತಾಳ**

ಬಜಬೆಣ್ಣೆ ಇಡುವೆನು ಬಾರೋ ರಂಗ।।ಪ।। ಬಜ ಬೆಣ್ಣೆ ಇಡುವೆನು ನಿಜರೂಪ ತೋರೆನಗೆ। ಭಜನೆಯ ಮಾಡಿ ನಾ ಬೇಡುವೆ ರಂಗ।।ಅ.ಪ।। ಗೋಕುಲಕೆ ಪೋಗಿ ಗೋಕ್ಷೀರವನೆ ತಂದು। ಗೋವಿಂದನಾ ಸ್ಮರಣೆ ಮಾಡುವೆ ರಂಗ।।1।। ಹಸಿ ಅರಳವಲಕ್ಕಿ ಹೊಸ ಬೆಣ್ಣೆ ಕ್ಷೀರವು। ಮೊಸರಾ ಮೇಲಿನ ಕೆನೆ। ನೀಡುವೆ ರಂಗ।।2।। ಮಧುರಾ ಮಾವಿನ ಹಣ್ಣು। ಮತ್ತೆ ನೇರಳೆ ಹಣ್ಣು।। ಬದರಿ ದಾಳಿಂಬ ಫಲ। ನೀಡುವೆ ರಂಗ।।3।। ನಾರಿಯರೆಲ್ಲ ಬಂದು ನವನೀತವನ್ನೆ ತಂದು। ನಾರಾಯಣ ಸ್ತುತಿ ಮಾಡುತ ರಂಗ।।4।। ನಾರದ ವಂದ್ಯನೆ ನವನೀತ ಚೋರನೆ। ನಾರಾಯಣ ಹರಿ। ನಮೋ ಎಂಬೆ ರಂಗ।।5।।

ಕಪ್ಪನ್ನ ಚ್ಚಿದಳು ಗೋಪಿ **ರಾಗ: ಕಾಮಾಚ್-ಮಿಶ್ರಛಾಪುತಾಳ**

ಕಪ್ಪನ್ನಚ್ಚಿದಳು ಗೋಪಿ। ರಂಗಯ್ಯಗೇ ಕಪ್ಪನ್ನಚ್ಚಿದಳು ಗೋಪಿ।।ಪ।। ಇಟ್ಟ ಕಸ್ತೂರಿ ಹೊಳೆಯೇ ತೊಟ್ಟ ಹಸುರಂಗಿ ನೊಸಲಲಿ ಪದ್ಮದರಳೆಲೆ। ಸರ್ಪಶಯನ ಹರಿಗೇ। ದೃಷ್ಟಿ ತಾಕುವಂಥಾ ಚೆಲುವ ರಂಗಯ್ಯಗೇ।।1।। ಉಡಿಗಂಟೆ ಘಣೇರೆನ್ನುತಾ। ಕೃಷ್ಣಯ್ಯನ ಬಿಡುವ ಕಂಗಳ ಥಾಳಾ। ಜನನಿಯ ಮುಖವ ನೋಡಿ ನಸುನಗುತಿಹ। ಚಿನುಮಯಾತ್ಮಕಗೆ ಚಿನಿಪಾಲೆರೆದು ಮುದದಿ।।2।। ನಾಲ್ಕು ಹಸ್ತಗಳಿಂದಾ। ಕೃಷ್ಣಯ್ಯನ ಧೀಮಾಕು ಗುಂಡಿಗೆ ಚಂದಾ ಲೋಕ ನಾಯಕ ಜಗದೇಕ ಮೂರುತಿಗೇ। ಅನೇಕ ಭಕ್ತರ ಪರಿ ಪಾಲಿಪೋ ಹರಿಗೇ।।3।।

ಇಂದಿರಾ ರಮಣ ಗೋವಿಂದ ಕೇಶವಗೆ (ರಕ್ಷೆ ಇಟ್ಟಿದ್ದು) **ರಾಗ: ಭೈರವಿ**

ಇಂದಿರಾ ರಮಣ ಗೋವಿಂದ ಕೇಶವಗೇ। ಸಂಜೀಲಿ ಕಾಗಡಿ ತೊಟ್ಟಿಲನೆ ಕಟ್ಟಿದರೂ ಚಂದದಿಂದಲಿ।।ಪ।। ಅಂಗಾಲಿಗಿಡುವೇ ಆದಿತ್ಯಾನ ರಕ್ಷೆ। ಮುಂಗಾಲಿಗಿಡುವೇ ಮುಕುಂದಾನ ರಕ್ಷೆ। ಕಣಕಾಲಿಗಿಡುವೆ ಕಾಳಿಂಗನ ರಕ್ಷೆ। ಮಣಕಾಲಿಗಿಡುವೇನು ಮುದ್ದು ವಿಠಲಾನ ರಕ್ಷೇ।।1।। ತೊಡೆಗಳಿಗಿಡುವೇ ಮಿಸುಣಿ ಚಲ್ಲಣವೆಂಬೋ ರಕ್ಷೆ। ವೃಕ್ಷಸ್ಥಳಕ್ಕಿಡುವೆ ಶ್ರೀ ಲಕ್ಷ್ಮೀರಮಣನ ರಕ್ಷೆ। ಬೆನ್ನಿಗೆ ಮಂದರಾಗಿರಿ ಸರ್ವತನೇ ರಕ್ಷೇ। ಹೊಟ್ಟೆಗೆ ಇಡುವೆ ಮುದ್ದು ವಿಠಲಾನ ರಕ್ಷೇ।।2।। ಅಂಗೈಗೆ ಇಡುವೇ ಶ್ರೀರಂಗಾನ ರಕ್ಷೇ। ಮುಂಗೈಗೆ ಇಡುವೇ ಶಂಖುಗದ ಪದ್ಮಾದಾ ರಕ್ಷೇ। ಕೊರಳಿಗೆ ಕೌಸ್ತುಭ ಹಾರವೇ ರಕ್ಷೇ। ಕೇಳುವ ಕರ್ಣಾಕ್ಕೇ ವಾಯುದೇವರಾ ರಕ್ಷೇ।।3।। ಕೈಯೀಗೆ ಪುಟ್ಟ ಸಾಲಿಗ್ರಾಮದಾ ರಕ್ಷೇ। ನಾಲಿಗೆಗೇ ಸರಸ್ವತಾ ದೇವಿಯಾರಕ್ಷೇ।। ಆ ರಕ್ಷೇ ಈ ರಕ್ಷೇ ವಾಕ್ ದೇವಿಯಾ ರಕ್ಷೇ। ನಾನಿಡುವೇ ಪುರಂದರಾ ದೇವಿಯಾ ರಕ್ಷೇ।।4।।

ಇಂದಿರಾ ರಮಣ ಗೋವಿಂದ ಮಾಧವಗೇ (ರಕ್ಷೆ ಇಟ್ಟದ್ದು) ರಾಗ: ಚಂದ್ರಜ್ಯೋತಿ

ಇಂದಿರಾ ರಮಣ ಗೋವಿಂದ ಮಾಧವಗೇ। ಸಂಜೇಲಿ ಕಾವಡಿ ತೊಟ್ಟಿಲನು ಕಟ್ಟಿದರು।।ಪ।। ಚಂದದಿಂದಲಿ ಠಾಣ ದೀವಿಗೆಯ ರಚಿಸಿ। ಮುಂಗಾಲಿಗಿಡುವೆ ಮುನೀಂದ್ರರಾ ರಕ್ಷೆ।।1।। ರಕ್ಷೆ ಇಡುವೆವು ನಮ್ಮ ವಿಷ್ಣು ಮಾಧವಗೇ। ಚಿತ್ತ ಶುದ್ಧಿಯಲಿ ಶ್ರೀ ವೆಂಕಟೇಶ್ವರಗೇ।।2।। ಘನತರವಾದ ಪಾದದ ಹರಡುಗಳೆಸೆಯೆ। ಕಣಕಾಲಿಗಿಡುವೆ ಕಾಳಿಂಗನಾ ರಕ್ಷೆ।।3।। ಮಡುವಿನೊಳಗೆ ಧುಮುಕಿ ಹೆಡೆಯ ಸರ್ಪನ ತುಳಿದು। ನಡುವಿಗೇ ನಾಗಾಭರಣಗಳೆ ರಕ್ಷೆ।।4।। ಹಣೆಗೆ ಕಸ್ತೂರಿ ತಿಲಕಗಳೇ ರಕ್ಷೆ। ಸ್ವರ್ಣಮುಕುಟಕ್ಕೆ ಚಂದ್ರ ಸೂರ್ಯರೆ ರಕ್ಷೆ।।5।। ಕಣ್ಣ ಹುಬ್ಬಿಗೆ ಆ ಮನ್ಮಥನೇ ರಕ್ಷೆ। ಬೆನ್ನಿಗೆ ಮಂದರ ಪರ್ವತವೇ ರಕ್ಷೆ।।6।।

❖ ❖ ❖

ಶ್ರೀ ಕೃಷ್ಣನ ತೊಟ್ಟಿಲು ತೂಗಿದ್ದು

ಶ್ರಾವಣಾ ಬಹುಳ ಅಷ್ಟಮೀ (ಜೋ ಜೋ) ರಾಗ: ಕುರಂಜಿ

ಶ್ರಾವಣಾ ಬಹುಳ ಅಷ್ಟಮೀ ನಡುರಾತ್ರಿಯಲ್ಲಿ। ರೋಹಿಣಿ ನಕ್ಷತ್ರ ಶುಭಲಗ್ನದಲ್ಲಿ। ಶ್ರೀಕೃಷ್ಣ ಜನಿಸಿದ ಮಥುರಾಪುರದಲ್ಲಿ। ತಾಯಿ ದೇವಕಿ ದೇವಿ ಪಾಡಿತೂಗಿದಳು।।ಜೋ।। ಪಾಲಗಡಲೊಳು ಪವಡಿಸಿ। ಒಂದಾಲದೆಲೆಯ ಮೇಲೆ ಮಲಗಿದ। ಕಾಮಜಾಜನಕನು ಕೃಷ್ಣ ಜನಿಸಿದನೆಂದು। ತೂಗಿಪಾಡಿದರು।।ಜೋ।। ಅರಡಿ ಕಂಕಣ ವಂಕಿ ನಳಿತೋಳಿನಿಂದ। ಅರಳೆಲೆ ಮಾಗಾಯಿ ನಿನಗೊಪ್ಪುವುದು ಚೆಂದ। ಹುಲಿಯುಗುರು ವಡ್ಯಾಣ ಗೀರ್ಬಳೆಗಳಿಂದ। ಪರಮಾತ್ಮ ತೊಟ್ಟಿಲಲಿ ಮಲಗಿದೆಯೊ ಕೃಷ್ಣ।।ಜೋ।। ಎಡಹಸ್ತದಲ್ಲಿರುವೋ ಹಾವನೇ ಕಂಡು। ಬೆದರಿ ದೇವಕಿದೇವಿ ಹಿಂದಾಗಿನಿಂತು। ಕಡಗ ಕಂಕಣವಂಕಿ ನಳಿತೋಳುಗಳಿಂದಾ। ಜಡಿದು ತೊಟ್ಟಿಲ ಪಿಡಿದು ತೂಗಿದರು ಕೃಷ್ಣನಾ।।ಜೋ।।

ಜೋ ಜೋ ಬಾಲಕೃಷ್ಣ ರಾಗ: ಶಿವರಂಜಿನಿ–ಏಕತಾಳ

ಜೋ ಜೋ ಬಾಲಕೃಷ್ಣ। ಜೋಗುಳವ ಪಾಡುತ್ತ ತೂಗುವೆ ನಾ।।ಪ।। ಗೋಪಿಕನ್ನೆಯರು। ಬಹಳ ಹರಸುತ್ತಾ। ಲಾಲಿ ಪೇಳುತ್ತಾ। ಕಂದನೆ ಜೋ। ನಂದನೆ ಜೋ। ಯಶೋದ ಕಂದನೆ ಜೋ ಜೋ।।ಅ.ಪ।।ನವರತ್ನ ಕೆತ್ತಿದ ತೊಟ್ಟಿಲ ತಂದು। ನಾಗ ಸಂಪಿಗೆ ಜಾಜಿ ಪೂಗಳ ಚೆಲ್ಲಿ। ನಾಲ್ಕು ವರ್ಣಗಳೆಂಬ ಸರಪಣಿಯ ಕಟ್ಟಿ। ನಾಲ್ಕು ವೇದಗಳೆಂಬ ಜೋಗುಳವ ಪಾಡಿ।।1।। ಜೋ ಜೋಜೋ।। ಯಶೋದ ಕಂದನೆ ಜೋ ಜೋ। ಮುಕುಂದ ಮಾಧವ ಜೋಜೋ। ಗೋಕುಲವೆಲ್ಲವು ಜೋಜೋ। ಯಾದವನಾಥ ವೇದ ಸಂಗೀತ।।2।। ಮನವೆಂಬೊ ಮುತ್ತಿನ ತೊಟ್ಟಿಲ ತಂದು ನಾಲ್ಕು ಪುರುಷಾರ್ಥಗಳ। ಗುಣದಿಂದ ಕಟ್ಟಿ ಜೀವ ಪರಮಾರೆಂಬ ಹಾಸಿಗೆಯ ಹಾಸೀ। ಭಕ್ತಿ ಭಾವದ ಭರದಿ ಬೆರೆತ ಜೋಗುಳವ ಪಾಡಿ। ನಾದ ಸ್ವರೂಪನೆ ಜೋಜೋ।। ಸಾನಂದ ಬಂಧುರ ಜೋಜೋ। ಮೇದಿನಿ ಎಲ್ಲವು ಜೋಜೋ।।3।।

ಜೋ ಜೋ ಶ್ರೀ ಕೃಷ್ಣ ಪರಮಾನಂದ ರಾಗ: ಕುರಂಜಿ–ಆದಿತಾಳ

ಜೋ ಜೋ ಶ್ರೀ ಕೃಷ್ಣ ಪರಮಾನಂದ। ನಂದ ಗೋಪಿಯ ಕಂದ ಬಾಲಮುಕುಂದ।। ಜೋ ಜೋ।।ಪ।। ಪೆಟ್ಟಿಗೆಯೊಳಗಿದ್ದ ಪರಿಪೂರ್ಣ ಕಾಮ। ಮುಟ್ಟಿ ಭಜಿಸುವೆ ಮಹಾಯತಿಗಳ ಸೋಮ। ತೊಟ್ಟಿಲೊಳಗೆ ಮಲಗಿದ್ದ ಶ್ರೀರಾಮ। ಘಟ್ಯಾಗಿ ತೂಗಿದರು। ಯತಿಗಳ ಸ್ತೋಮ ಜೋ ಜೋ।।1।। ಪಟ್ಟಾವಳಿಯನುಟ್ಟು ಬಂದರು ಸುರರಾಗ। ಘಟಣೆ ಬಿದ್ದೀತೆಂದು ಮಹಪುಣ್ಯವೀಗ। ವಟಪತ್ರಕಲ್ಪನ್ನ ತೂಗಿರೇ ಬೇಗ। ಮಠದ ರಘುಪತಿ ಮಲಗಯ್ಯ ಬೇಗ।। ಜೋ ಜೋ।।2।। ಪಾಕಶಾಸನ ಬಂದು ಮಳೆಗಳನು ಕರೆಯೆ । ಗೋಕುಲವನು ಕಾಯ್ದ ಮಹಿಮೆಯು ಸರಿಯೆ। ಲೋಕದೊಳ್ ಅಜಭವರಿಗೆ ದೊಡ್ಡ ದೊರೆಯೆ । ಶ್ರೀಕಾಂತ ಸರ್ವೋತ್ತಮನೆ ಶ್ರೀಹರಿಯೇ।।ಜೋ ಜೋ।।3।।

ಆಲದೆಲೆಯ ಮೇಲೆ ಮಲಗಿದೆಯಾ ಕಂದ। ಮ್ಯಾಲೆಕಲ್ಪವದು ಸೃಷ್ಟಿಸಿತೋ ನಿನ್ನಿಂದ। ಬಾಲನ್ನ ಪಡೆದ್ಯೋ ನಾಭಿ ಕಮಲದಿಂದ। ಪಾಲಾಬ್ಧಿಶಯನ ಶ್ರೀರಮಣ ಮುಕುಂದಾ ।।ಜೋ ಜೋ।।4।। ಮಹಾ ಮುನಿ। ಸತ್ಯ ಭೋಧರಾಯರಿಂದಾ। ಪ್ರೇಮದಿಂದಲಿ ತೂಗಿಸಿಕೊಂಬೋದು। ಚಂದಾ ಸ್ವಾಮಿ ಕದರ ಮಂಡಲಗಿ ಹನುಮಯ್ಯಗಾನಂದ। ಪ್ರೇಮದಿಂದಲಿ ತೂಗಿದರು ಗೋವಿಂದಾ ।।ಜೋಜೋ।।5।।

ಕಂದನ ತೂಗಿದಳು ಯಶೋದೆ — ರಾಗ: ಸಾವೇರಿ

ಕಂದನ ತೂಗಿದಳು ಯಶೋದೆ। ಕಂದನ ತೂಗಿದಳು।।ಪ।। ಇಂದಿರರಮಣನ। ಅಂದವ ನೋಡುತ। ಮಂದಹಾಸನ ನೋಡಿ। ಆನಂದದಿ ಹಿಗ್ಗುತ।।1।। ಝುಗಝುಗಿಸುವನಿನ್ನ। ಜಗಿಲು ತೊಟ್ಟಿಲೊಳಗೆ। ಜಗನ್ನಾಥನೀನೆಂದು। ಮಗನೆಂದು ನಲಿಯುತ।।2।। ತಾಮರಸಾಕ್ಷನ ಕೋಮಲಾಂಗಿಯು ನೋಡಿ। ಆ ಮಹಿಮೆಯ ನೋಡಿ ಪ್ರೇಮ ಭರಿತಳಾಗಿ।।3।।

ಪಾಡಿ ತೂಗಿದಳೆ ಪರಮಾತ್ಮನ್ನ — ರಾಗ: ಕುರಂಜಿ

ಪಾಡಿ ತೂಗಿದಳೆ ಪರಮಾತ್ಮನ್ನ। ಗೋಪಮ್ಮ ತಾನು। ನೋಡಿ ಹಿಗ್ಗಿದಳೆ ಹರಿಸರ್ವೋತ್ತಮನಾ।।ಪ।। ಕ್ಷೀರಸಾಗರದ ಶ್ರೀಹರಿ ತಾನು। ಆಲದೆಲೆ ಮೇಲೆ ಬಾಲಾ ರೂಪಿಲಿ ಪವಡಿಸಿದನು। ಪಾದದುಂಗುಷ್ಟವ। ವೇದಾಂತವೇದ್ಯನು ಚೀಪುತ ತಾನು। ಹರಿಯವತರಿಸಿದನು। ಮಾಧವ ಮಧುಸೂದನ ಮನ್ಮಥ ಜನಕ ಯಾದವಕುಲನಂದನ ಕಂದನ।।1।। ಚಲಮಾಡಿ ನೀನಳದಿರುಕಂದ। ಅಳದಿದ್ದರೆ ನಿನಗೆ। ನೊರೆಹಾಲು ಸಕ್ಕರೆ ಕುಡಿಸಿ ಸಂತೈಸಿ। ಅಳದಿರುಕಂದ ಅಚ್ಯುತಾನಂತನೆ ಬೇಲದ್ಹಣ್ಣು ಪಾನಕ ಬೆಲ್ಲವ ಕೊಡುವೆರಂಗ।।2।। ಮುತ್ತು ಮಾಣಿಕ್ಯದ ಮಂಟಪರಚಿಸಿ। ವಿಚಿತ್ರವಾದ ನವರತ್ನ ಮಾಣಿಕದಗಿಳಿಗಳ ತರಿಸಿ।। ಹಸ್ತಕಡಗಗೆಜ್ಜೆ ಘಲು ಘಲು ಎನ್ನುತ ಹತ್ತವತಾರದಿ ಹರಿಯ ಕೊಂಡಾಡುತ।।3।। ಪನ್ನಗಶಯನ ಪಾವನ ಚರಿತ। ನಂದತನಯಗೆ ಹೊನ್ನು ಗುಬ್ಬಿಯ ತಾ ತೋರಿಸುತಾ।। ತಂದೆ ತಾಯಿ ಮುಖನೋಡುತ ನಗುತ। ಪನ್ನಂಗಗಿರಿಧರ ಚನ್ನಕೇಶವನಾ ।।4।।

ಲಾಲಿ ಬ್ರಹ್ಮಾದಿಗಳು ಕ್ಷೀರಸಾಗರಕೆ ಪೋಗಿ — ರಾಗ: ಆನಂದಭೈರವಿ

ಲಾಲಿ ಬ್ರಹ್ಮಾದಿಗಳು ಕ್ಷೀರಸಾಗರಕೆ ಪೋಗಿ। ಲಕ್ಷ್ಮೀನಾರಾಯಣರ ಚರಣಕ್ಕೆ ಎರಗಿ।।ಪ।। ಭೂ ಭಾರ ಹರಣವನು ಮಾಡಬೇಕಾಗಿ। ಧರೆಯೊಳು ಜನಿಸಿದನು ಗೊಲ್ಲ ತಾನಾಗಿ।।ಅ.ಪ।। ಐದನೆಯ ಮಾಸದ ಅಸಿತ ಪಕ್ಷದಲ್ಲೀ। ಐದು ಮೂರನೇ ದಿನದಿ ಭುವಿಗೆ ಬಂದೇ। ಐದನೇ ದಿನದಲ್ಲಿ ಪೂತನಿಯ ಕೊಂದೂ। ಐದು ಆರನೇ ದಿನದಿ ಶಕಟನ್ನ ಬಡಿದೇ।।1।। ಚಂದ್ರವಂಶದಿ ಬಂದ ಚಂದ್ರಶೇಖರ ವಂದ್ಯ। ಚಂದ್ರ ಸೋದರಿ ರಮಣ ದೇವಕಿಯ ಕಂದಾ। ಚಂದ್ರಿಕೆಯ ಚೆಲ್ಲಿದನು ಮುದ್ದು ಮುಖದಿಂದಾ। ಚಂದ್ರನಂದದಿ ಬಂದು ಕಾಂತಿಯನು ತಾಳ್ದ।।2।। ಚಿಣ್ಣ ಬಾಲರೊಡನೆ ಮನೆಮನೆಗೆ ಬಂದು। ಅಣ್ಣ ರಾಮನ ಕೂಡಿ ಬೆಣ್ಣೆಯನು ಮೆದ್ದ। ಬಣ್ಣಿಸಿ ಹರಸಿದ ಗೋಪಿಗೆ ತಾನೂ। ಸಣ್ಣ ಬಾಯೊಳಗೆ ಮೂರು ಜಗವನ್ನೇ ತೋರ್ದ।।3।। ಗಾಳಿ ಅಸುರನಾ ಕೊಂದೆ ಬಾಲತನದಲ್ಲೀ। ಗೂಳಿ ರೂಪದಿ ಬಂದ ಅಸುರನಾ ಸೀಳ್ದೆ। ಕಾಳಿಂಗ ಫಣೆ ಮೇಲೆ ಥಕಧಿಮಿ ಎಂದೂ। ಧೂಳಿ ನರ್ತನ ಗೈದು ಅಟ್ಟಿದೆಯೋ ಹರಿಯೇ।।4।। ಹರಿಯ ಪೂಜೆಯ ಬಿಡಿಸಿ ಗಿರಿಯ ಮೇಲೆತ್ತಿ। ಧರೆಯನ್ನು ರಕ್ಷಿಸಿದ ಸುರವಂದ್ಯ ಹರಿಯೇ। ಮರಳಿ ಮರಳಿ ನಿನ್ನ ಸ್ಮರಣೆಯನು ನೀಡಿ ಸಿರಿರಮಣ ಕಾಯಯ್ಯ ವರಾಹ ಹರಿ ವಿಠಲಾ।।5।।

ಹೋವಳ್ಳಾಯಿ ಎಲೆ ರಂಗ — ರಾಗ: ಆನಂದಭೈರವಿ-ಏಕತಾಳ

ಹೋವಳ್ಳಾಯಿ ಎಲೆ ರಂಗ। ಸುಮ್ಮನೆ ಮಲಗೋ ಗೋವಿಂದ।।ಪ।। ಉತ್ತುತ್ತೆ ಖರ್ಜೂರದ್ಹಣ್ಣು। ಚಪ್ಪರ ದ್ರಾಕ್ಷಿಯ ಹಣ್ಣು।। ಫಲವೆಷ್ಟು ಕೊಟ್ಟರೂ ಏನು ಮಾಡಿದರು। ಅತ್ತಳುತ್ತೀಯೋ ಗೋವಿಂದ।।1।। ಒಬ್ಬಜೋಗಿ ಬಂದಿದ್ದಾನೆ। ಅಂಗಳದಲ್ಲಿ ನಿಂತಿದ್ದಾನೆ।। ಇನ್ನೊಬ್ಬ ಜೋಗಿ ಬಂದಿದ್ದಾನೆ। ತೊಟ್ಟಿಯೊಳಗೆ ನಿಂತಿದ್ದಾನೆ।।2।।

ಮಲಗೆಲೋ ಗೋಪಾಲ **ರಾಗ: ನೀಲಾಂಬರಿ**

ಮಲಗೆಲೋ ಗೋಪಾಲ। ಎನ್ನಯ ಕರವು ನೋಯುತಿಹುದು ಶ್ರೀಕೃಷ್ಣ॥ಪ॥ ತಿರುಗುತಿರುಗಿ ವನದೀ ನಿನ್ನಯ ಪಾದವು ನೋಯುತಿಹುದೇ॥ಅ.ಪ॥ ಮುರುಳಿಯ ಬಾರಿಸಿದಾ ನಿನ್ನಯ ಬೆರಳು ನೋಯುತಿಹುದೇ ಶ್ರೀಕೃಷ್ಣಾ। ಒರಳ ಬಲದಿ ಎಳೆದೂ ನಿನ್ನಯ ಕರುಳು ನೋಯುತಿಹುದೇ ಶ್ರೀಕೃಷ್ಣಾ॥1॥ ದುಷ್ಟ ಪೂತನಿ ವಿಷದೀ ನಿನ್ನಯ ಹೊಟ್ಟೆ ನೋಯುತಿಹುದೆ। ಶ್ರೀಕೃಷ್ಣ ದಿಟ್ಟ ನಾರಿಯರಾ ಕ್ರೂರ ದೃಷ್ಟಿ ತಾಕಿತೇನೋ ಶ್ರೀಕೃಷ್ಣಾ॥2॥ ಎನ್ನ ಕೊರತೆಗಳನು ಬೇಗನೆ। ನಿನ್ನ ಮನಕೆ ತಿಳಿದು। ಚಿನ್ನ ನಿದ್ರೆ ಬರಲೂ ಮನದೀ ಪ್ರಸನ್ನ ಹರಿಯ ನೆನೆಯೋ ಶ್ರೀಕೃಷ್ಣ॥3॥

ಗೋಪಿಯ ಭಾಗ್ಯವಿದು **ರಾಗ: ಬೇಹಾಗ್-ಆದಿತಾಳ**

ಗೋಪಿಯ ಭಾಗ್ಯವಿದು। ಶ್ರೀಪತಿ ತಾ ಶಿಶುರೂಪಿನಲಿರುವುದು॥ಪ॥ ಕಡು ಮುದ್ದು ರಂಗನ ತೊಡೆಯಮೇಲೆತ್ತುತ। ಜಡೆಯ ಹೆಣೆದು ಹೂ ಮುಡಿಸಿ ಬೇಗ। ಬಿಡದೆ ಮುತ್ತಿನ ಚಂದರ ಛಲೆಯನು। ಸಡಗರದಿಂದ ಅಲಂಕರಿಸಿದಳು॥1॥ ನಿತ್ಯ ನಿರ್ಮಲನಿಗೆ ನೀರನೆರೆದು ತಂದೆತ್ತಿ। ತೊಡೆಯೊಳಿಟ್ಟು ಮೊಲೆಯೂಡಿ। ಮುತ್ತು ಕೊಟ್ಟು ಬಲು ವಿಧದಿಂದಾಡಿಸಿ । ಅರ್ಥಿಯಿಂದಲಿ ತಾ ತೂಗಿದಳು॥2॥ ದೃಷ್ಟಿ ತಾಕೀತೆಂದಿಟ್ಟು ವಿಭೂತಿಯ। ತಟ್ಟೆಯೊಳಾರತಿ ಗಳ ಬೆಳಗಿ। ಥಟ್ಟನೆ ಉಪ್ಪು ಬೇವು ನಿವಾಳಿಸಿ। ತೊಟ್ಟಿಲೊಳಿಟ್ಟು ತಾ ತೂಗಿದಳು॥3॥ ಎನ್ನಯ ರನ್ನನೆ ಸುಮ್ಮನಿರೋ। ದೊಡ್ಡ ಗುಮ್ಮನು ಬರುವನು ಅಳಬೇಡ। ಸುಮ್ಮನೆ ಇರು ನಿನಗಮ್ಮಿ ಕೊಡುವೆನೆಂದು। ಬೊಮ್ಮನ ಪಿತನ ತಾ ತೂಗಿದಳು॥4॥ ಮಾಧವ ಜೋ ಮಧುಸೂದನ ಜೋ ಜೋ। ಯಾದವ ರಾಯ ಶ್ರೀರಂಗನೆ ಜೋ। ಆದಿಮೂರುತಿ ನಮ್ಮ ಪುರಂದರವಿಠಲನ। ಆದರದಿಂದ ತಾ ತೂಗಿದಳು॥5॥

ಜಸೋದಾ ಹರಿ ಪಾಲನೈ (ಹಿಂದಿ) **ರಾಗ: ಜುಂಜೋಟಿ**

ಜಸೋದಾ ಹರಿ ಪಾಲನೈ ಝುಲಾವೈ। ಹಲರಾವೈ, ದುಲರಾಇ ಮಲ್ಹಾವೈ। ಜೋಇ-ಸೋಇ ಕಛು ಗಾವೈ॥ಪ॥ ಮೇರೇ ಲಾಲ್ ಕೌಂ ಆಉ ನಿಂದರಿಯಾ। ಕಾಹೈಂ ನ ಆನಿ ಸುವಾವೈ। ತೂ ಕಾಹೈಂ ನಹೀಂ ಬೆಗಿಹಿಂ ಆವೈ। ತೋಕೌ ಕಾನ್ಹ ಬುಲಾವೈ॥1॥ ಕಬಹುಂ ಪಲಕ್ ಹರಿ ಮೂಂದ ಲೇತ ಹೈಂ। ಕಬಹುಂ ಅಧರ್ ಫರ್‌ಕಾವೈ। ಸೋವತ್ ಜಾನಿ ಮೌನ್ ಹ್ವೈ ಕೈ ರಹಿ। ಕರಿ-ಕರಿ ಸೈನ ಬತಾವೈ॥2॥ ಇಹಿಂ ಅಂತರ್ ಅಕುಲಾಇ ಉಠೆ ಹರಿ। ಜಸುಮತಿ ಮಧುರೈಂ ಗಾವೈ। ಜೋ ಸುಖ್ ಸೂರ್ ಅಮರ್-ಮುನಿ ದುರ್‌ಲಭ್। ಸೋ ನಂದ ಭಾಮಿನಿ ಪಾವೈ॥3॥

ಆಲದೆಲೆಯ ಮೇಲೆ ಮಲಗಿದ **ರಾಗ: ಕಲ್ಯಾಣಿ**

ಆಲದೆಲೆಯ ಮೇಲೆ ಮಲಗಿದ ಬಾಲಕೃಷ್ಣನ ನೋಡುವ ಬನ್ನಿ॥ಪ॥ ಅಂಗಿ ತೊಡಿಸಿ ಉಂಗುರವಿಟ್ಟು ಕಂಗಳಿಗೆ ಕಪ್ಪಹಚ್ಚಿ। ಅಂಗಳದೊಳಗಾಡುವ ರಂಗನ ಅಂಗನೆಯರು ಬಣ್ಣಿಸಿ ಕರೆವರೊ॥1॥ ಬಾಲರೂಪ ಧರಿಸಿ ತನ್ನಯ ಲೀಲೆಗಳನು ಜಗಕೆ ತೋರಿ ಚಾತುರಂಗ ಜಾಲವ ಮಾಡಿ ಗೋಪಿಯೊಡನೆ ನಾಟ್ಯವ ಮಾಡಿ॥2॥ ಹತ್ತು ಲೋಕಕ್ಕೆ ಅರಸು ತನ್ನಯ ಪೊಕ್ಕುಳೊಳಗೆ ಅಜನ ಪಡೆದು। ವಕ್ಷಸ್ಥಳದಿ ಲಕ್ಷ್ಮೀ ವರಿಸಿ ಪಕ್ಷಿವಾಹನ ಲಕ್ಷ್ಮೀರಮಣ॥3॥ ಕೃಷ್ಣ ಹಸಿದಾನೆಂದು ಗೋಪಿ ಬಟ್ಟಲೊಳಗೆ ಕ್ಷೀರ ಕೊಡಲು। ಕೆಟ್ಟ ಪಾಪಿದೃಷ್ಟಿ ತಾಕಿ ಕೊಟ್ಟ ಕ್ಷೀರವೆಲ್ಲಾ ಬಿಟ್ಟು॥4॥ ವಲ್ಲಿಹೊದಿಸಿ ಮಲ್ಲಿಗೆ ಮುಡಿಸಿ ಕಲ್ಲುಸಕ್ಕರೆ ಕೈಗೆ ಕೊಡಲು ಫುಲ್ಲಲೋಚನ ಪುರಂದರ ವಿಠಲ ತಾನು ಒಬ್ಬನೆಂದು॥5॥

ಲಾಲಿಸಿದಳು ಮಗನ ಯಶೋದೆ **ರಾಗ: ಆರಭಿ-ಆದಿತಾಳ**

ಲಾಲಿಸಿದಳು ಮಗನ ಯಶೋದೆ। ಲಾಲಿಸಿದಳು ಮಗನ॥ಪ॥ ಅರಳೆಲೆ ಮಾಗಾಯಿ ಬೆರಳಿಗುಂಗುರವಿಟ್ಟು। ತರಳನ ಮೈಸಿರಿ ತರುಣಿ ನೋಡುತ ಹಿಗ್ಗಿ॥1॥ ಬಾಲಕನೆ ಕೆನೆಹಾಲು ಮೊಸರನೀವೆ। ಲೀಲೆಯಿಂದಲಿ ಎನ್ನ ತೋಳಮೇಲ್ ಮಲಗೆಂದು॥2॥ ಮುಗುಳು ನಗೆಯಿಂದ ಮುದ್ದುತಾ ತಾರೆಂದು। ಜಗದೊಡೆಯನ ಶ್ರೀ ಪುರಂದರವಿಠಲನ॥3॥

ಬೆಳಗಿರೆ ಶ್ರೀ ಬಾಲಕೃಷ್ಣಗಾರತಿಯನು (ಆರತಿ) **ರಾಗ: ನಾದನಾಮಕ್ರಿಯ**

ಬೆಳಗಿರೆ ಶ್ರೀ ಬಾಲಕೃಷ್ಣಗಾರತಿಯನು॥ಪ॥ ಕುಂದ ಕುಸುಮ ಮಂದಹಾಸ ಇಂದಿರೇಯಾ ಅರವಿಂದ ನಂದ ಸುಖಾನಂದರೂಪ ಇಂದುಮುಖಿಯರಾನಂದದಿಂದಲಿ॥1॥ ವಿವಿಧ ನಾಟ್ಯ ಗಾನದಿಂದಾ ... ಭುವನವನೇ ಮೋಹಿಸಿರುವಾ ದಿವಿಜವಂದ್ಯ ನಾದ ಕೃಷ್ಣ ಭುವಿಯೊಳು ಮುದದಿಂದ ಪಾಡಿ॥2॥ ಜ್ಞಾನಲೀಲ ಮೌನಿಗಳಿಗೆ ಮಾನುನೀಯರಿಗೆಲ್ಲಾ ಜ್ಞಾನ ಭಾಗ್ಯವನೀವ ದೇವ ಶ್ರೀನಿಧಿ ಭಕುತರಿಗೊಲಿವ ಹರಿಗೆ॥3॥

ಎಂಥಾ ಪುಣ್ಯವಂತೆಯೇ ಯಶೋದ **ರಾಗ: ನೀಲಾಂಬರಿ**

ಎಂಥಾ ಪುಣ್ಯವಂತೆಯೇ ಯಶೋದ ಎಂದರೂ। ಗೋಪಿಕಂದನಿಗಾರತೀಯ ಬೆಳಗೀರೇ॥ಪ॥ ಹರಿಯ ನೀರೆ ಕರೆದುತಾರೆ। ಮೊರವನಿರಿಸೆ ಮಗುವ ತೋರಿಸೆ। ಎರೆದು ಕಣ್ಣಿಗೆ ಕಪ್ಪನ್ಹಚ್ಚಿ। ಅರಿವೆಯಿಂದ ಮೈಯನೊರೆಸೆ॥1॥ ಸಕ್ಕರೆ ನಿಂಬೆ ಹಣ್ಣು ತಾರೆ। ಹೊಕ್ಕಳ ಚೂರಿಯಿಂದ ತಿವಿಯೆ। ಮಕ್ಕಳ ಮಾಣಿಕವೆಂದು ಕರೆಯೇ। ಅಕ್ಕರದಾರತಿ ಮಾಡಿ ಸುರಿಯೇ॥2॥

ಪೆರುಮೆಯಾನ ಅಷ್ಟಮಿಯಿಲ್ (ತಮಿಳು-ಮಂಗಳ) **ರಾಗ: ಕುರಂಜಿ**

ಪೆರುಮೆಯಾನ ಅಷ್ಟಮಿಯಿಲ್ ಪಿರಂದವರ್ಕು ಮಂಗಳಂ। ಉಚಿತಮಾನ ರೋಹಿಣಿಯಿಲ್ ಉದಿತ್ತವರ್ಕು ಮಂಗಳಂ॥ ಶ್ರೇಷ್ಠಮಾನ ಜಯಂತಿಯಿಲ್ ಜನಿತ್ತವರ್ಕು ಮಂಗಳಂ। ನಂದಗೋಪ ಮೈಂದನಾಯ್ ಪಿರಂದವರ್ಕು ಮಂಗಳಂ॥1॥ ಎಂಗಳ್ ಯಶೋದೈ ಇಳಂ ಶಿಂಗತ್ತುಕ್ಕು ಮಂಗಳಂ। ಆಯಿರ್ ಕುಲಂ ವಿಳಂಗ ವೈತ್ತ ದೀಪತ್ತುಕ್ಕು ಮಂಗಳಂ। ಗೋಕುಲತ್ತೈ ಉದ್ಧರಿತ್ತಾ ಕೊಳಂದೈಕ್ಕು ಮಂಗಳಂ। ಗೋಪಾಲ ಬಾಲನುಕ್ಕು ಮಂಗಳಂ ಶುಭಮಂಗಳಂ॥

ಸುಖಿಯಾಗಿರು ಸಂತತಂ (ಆಶೀರ್ವಾದ) **ರಾಗ: ಮೋಹನ**

ಸುಖಿಯಾಗಿರು ಸಂತತಂ, ನಿಖಿಲಾತ್ಮ ನಾಯಕ। ವೇದ ವೇದಾಂತಗಳನೋದುತ। ವಾದದೀ ಬ್ರಹ್ಮವಾದದೀ। ಆದರಿಸಿ ಜಗದೊಳಾದಿ ಕಾರಣವನು। ತಿಳಿದು॥ಪ॥ಸುಖಿಯಾಗಿರು॥ ಶೀಲವತಿ ಯಾಗಿರುವ ಬಾಲೆಯ ವರಿಸುತ। ಬಾಲಕನಾ ಪಡೆದು। ಲೋಲನೆನಿಸಿ ಸುಗುಣನೆನಿಸು॥1॥ ತಂದೆ ತಾಯಿಗಳಿಗೆರಗಿ ಮೋದದಿ ಸೇವಿಸಿ ಸಂಭಾವಿಸಿ। ಕುಂದದೊಳಗಾನಂದವನ್ನು ಕಂದ ನೀ ಪಡೆ ಎನ್ನುತಲೆ॥2॥

❖ ❖ ❖

ನೀರೆ ನೀ ಕರೆತಾರೆ

ನೀರೆ ನೀ ಕರೆತಾರೆ ಮಾರಸುಂದರನ। ಮಾರಸುಂದರನ ಸುಕುಮಾರ ಸುಂದರನ॥ಪ॥ ಗೊಲ್ಲರ ಮನೆಯೊಳಗಿದ್ದ ಪಾಲ್ಮೊಸರ। ಮೆಲ್ಲನೆ ಮೆಲ್ಲುವ ವಲ್ಲಭ ಹರಿಯ॥1॥ ಯಾದವರನೆಲ್ಲ ಆದರಿಸಿದವನ। ವೇದವೇದಾಂತನ ಯಾದವ ಪ್ರಿಯನ॥2॥ ವರಗೌರಿಪುರದಲ್ಲಿ ವಾಸವಾಗಿಹನ। ವರದ ಪುರಂದರ ವಿಠಲರಾಯನ॥3॥

ಕೃಷ್ಣ ಬಾರೋ ಕೃಷ್ಣ ಬಾರೋ **ರಾಗ: ಕಾಪಿ-ಆದಿತಾಳ**

ಕೃಷ್ಣ ಬಾರೋ ಕೃಷ್ಣ ಬಾರೋ। ಕೃಷ್ಣಯ್ಯ ನೀ ಬಾರಯ್ಯ॥ಪ॥ ಸಣ್ಣ ಹೆಜ್ಜೆಯನಿಟ್ಟು ಗೆಜ್ಜೆನಾದಗಳಿಂದ॥ಅ.ಪ॥ ಮನ್ಮಥಜನಕನೆ ಬೇಗನೆ ಬಾರೊ। ಕಮಲಾಪತಿ ನೀ ಬಾರೊ। ಅಮಿತಪರಾಕ್ರಮ ಶಂಕರ ಬಾರೊ। ಕಮನೀಯಗಾತ್ರನೆ ಬಾರಯ್ಯ ದೊರೆಯೆ॥1॥ ಸುರುಳು ಕೇಶಗಳ ಒಲಿವ ಅಂದ। ಭರದಿ ಕಸ್ತೂರಿತಿಲಕದ ಚಂದ। ಶಿರದಿ ಒಪ್ಪುವ ನವಿಲು ಕಣ್ಗಳಿಂದ ತರತರದಾಭರಣಗಳ ಧರಿಸಿ ನೀ ಬಾರೊ॥2॥ ಹಾಲು ಬೆಣ್ಣೆಗಳ ಕೈಯಲಿ ಕೊಡುವೆ। ಮೇಲಾಗಿ ಭಕ್ಷ್ಯಗಳ ಬಚ್ಚಿಟ್ಟು ತರುವೆ। ಜಾಲಮಾಡದೆ ನೀ ಬಾರಯ್ಯ ಮರಿಯೆ। ಬಾಲ ಎನ್ನ ತಂದೆ ಪುರಂದರವಿಠಲ॥3॥

ಬಾರೈ ನಂದನ ಕಂದನೆ **ರಾಗ: ಜಂಜೂಟಿ**

ಬಾರೈ ನಂದನ ಕಂದನೆ। ನೀರಜನೇತ್ರಾ॥ಪ॥ ನೀಲಮಣಿ ಮಂಟಪ। ಮೇಲು ಮಾಣಿಕ ಕಲಶ। ಸಾಲು ಝಲ್ಲರಿ ರತ್ನ ಜಾಲ ಪೀಠಕೆ ನೀ॥1॥ ಮುತ್ತಿನಕ್ಷತೆಗಳ। ನೆತ್ತಿಯೊಳಿಡಲೆಳಸೀ। ಸುತ್ತ ಭೂಸುರರೆಲ್ಲ। ಸುತ್ಯ ಬಾರೆನ್ನುವರು॥2॥ ಶೃಂಗಾರ ಶೀಲನೇ। ಸಂಗೀತ ಲೋಲನೇ। ರಂಗನಾಯಕಿ ಸಹಿತೋತ್ತುಂಗ ಪೀಠಕೆ॥3॥ ಅಂಗನೆಯರ ಕೂಡಿ। ಮಂಗಳಾಂಗನ ಪಾಡಿ। ರಂಗಬಾರೆನ್ನುವರು। ಮಾಂಗಿರಿನಿಲಯಾ॥4॥

ಬಾರೋ ಮುರಳೀಧರ **ರಾಗ: ಮಾಂಡ್**

ಬಾರೋ ಮುರಳೀಧರ ರಂಗ॥ಪ॥ ರಂಗ ಮುರಳೀಧರ ಕೃಷ್ಣ ಮುರಳೀಧರ॥ಅ.ಪ॥ ಕರುಣಾಕರ ಪಾಲಿಪರ ಅನ್ಯರ ಕಾಣೆ। ಶರಣಾಗತರನು ಪೊರೆಯುವ ದೊರೆ ನೀನೆ॥1॥ ನವನೀರಜ ಶ್ಯಾಮಲ ಕೋಮಲಚಿತ್ರ। ಕುವಲಯ ದಳನೇತ್ರ ಸಜ್ಜನನುತ ಪಾತ್ರ॥2॥ ಕೊಳಲಧ್ವನಿ ಕೇಳುತ ಪ್ರೇಮದಿ ಬಂದ। ಲಲನೆಯರಿಗೆ ಸುಖವೀವ ವಿಠ್ಠಲರಾಯ॥3॥

ಬಾರೋ ಮುರಾರಿ ಬಾಲಕ ಶೌರಿ **ರಾಗ: ಕಾನಡ-ಆದಿತಾಳ**

ಬಾರೋ ಮುರಾರಿ ಬಾಲಕ ಶೌರಿ ಸಾರವಿಚಾರಿ ಸಂತೋಷಕಾರಿ॥ಪ॥ ಆಟ ಸಾಕೇಳೋ ಮೈ ಎಲ್ಲ ಧೂಳೋ। ಊಟಮಾಡೇಳೋ ಕೃಷ್ಣಕೃಪಾಳೋ॥ಅ.ಪ.॥ ಅರುಣಾಬ್ಜ ಚರಣ ಮಂಜುಳಾಭರಣ। ಪರಮ ವಿತರಣ ಪನ್ನಗಶಯನ। ಮನೆಗೆದ್ದು ಬಾರೋ ಕೊನೆಗೈಯ್ಯ ತೋರೋ। ಚಿನುಮ ಬಾರೋ ನಗೆಮುಖ ತೋರೋ॥1॥ ವೆಂಕಟರಮಣ ಕಿಂಕರಾಮರಗಣ। ವಂದಿತ ಚರಣ। ಅರವಿಂದ ನಯನ। ಶರದಿಂದು ವದನಾ। ವರಯದು ಸದನಾ। ಸಿರಿಹಯ ವದನಾ॥2॥

ದಿನ ಒಳ್ಳೆಯದೆಂದು (ಕಿವಿ ಚುಚ್ಚಿದ್ದು) **ರಾಗ : ಅಭೇರಿ-ಆದಿತಾಳ**

ದಿನ ಒಳ್ಳೆಯದೆಂದು ಗೋಕುಲ ಶೃಂಗಾರವ ಮಾಡಿ। ಮದನನೈಯ್ಯನ ಕಿವಿಗಳ ಚುಚ್ಚಿದರು॥1॥ ವಾರ ಒಳ್ಳೆಯದೆಂದು ನಾರಿಯರೆಲ್ಲರು। ಮಾರ ಸುಂದರನ ಕಿವಿಗಳ ಚುಚ್ಚಿದರು॥2॥ ನಕ್ಷತ್ರ ಒಳ್ಳೆಯದೆಂದು ಮಿತ್ರೆಯರೆಲ್ಲರು। ನಕ್ಷತ್ರ ತೇಜನ ಕಿವಿಗಳ ಚುಚ್ಚಿದರು॥3॥ ಯೋಗ ಒಳ್ಳೆಯದೆಂದು ನಾಗವೇಣಿಯರೆಲ್ಲ। ಭೋಗಿಶಯನನ ಕಿವಿಗಳ ಚುಚ್ಚಿದರು॥4॥ ಕರಣ ಒಳ್ಳೆಯದೆಂದು ತರುಣಿಯರೆಲ್ಲ ರವಿ ಕಿರಣ ತೇಜನ ದಿವ್ಯ ಕಿವಿಗಳ ಚುಚ್ಚಿದರು॥5॥ ಹಸುಗೂಸೆನುತಲೆ ಕುಸುಮ ಗಂಧಿಯರೆಲ್ಲ। ಕುಸುಮದಿಂದಲೆ ಎಳೆ ಕಿವಿಗಳ ಊರಿದರು॥6॥

ಫಲಗಳನ್ನು ಎರೆಯಿರೀಗ (ಸಂಕ್ರಾಂತಿ ಸಂಜೆ) **ರಾಗ: ಶಂಕರಾಭರಣ**

ಫಲಗಳನ್ನು ಎರೆಯಿರೀಗ ಪದುಮನಾಭಗೆ। ಮುದದಿಸತಿಯ ಶಿರದೀಕರಗಳಿಡುತಾಕೃಷ್ಣಗೆ॥ಪ॥ ಪಟ್ಟೆಪೀತಾಂಬರವನುಟ್ಟು।ಸಿಸ್ತಿನಿಂದಲೀ। ಉತ್ತರಾಯಣ ಹಬ್ಬವೆಂದು। ವಿಸ್ತಾರದಲೀ॥1॥ ಎಳ್ಳು, ಕಬ್ಬು, ಹಣ್ಣು, ಒಳ್ಳೇ ಬೆಳ್ಳಿಕಂಚುನು। ಎಲ್ಲಾಬೀದಿ ಬೀರೀಬಂದ। ಫುಲ್ಲನಾಭಗೆ...॥2॥ ಪುತ್ಥಳೀ ಕಾಸುಗಳು ಬದರೀ। ಫಲಗಳೆರೆಯುತ। ಮುತ್ತು, ಹವಳಸೂರೆಮಾಡಿ। ಮಿತ್ರೇರ್ ಹರಸುತಾ॥3॥ ಪೂತನೀಯ ಅಸುವ ಹೀರಿ। ಮಾತೆಗೋಪಿಗೆ ಭೀತಿ ಆಗುವಂತೆ ಬಾಯೊಳ್। ಜಗವ ತೋರ್ದಗೆ॥4॥ ಕರುಳಮಾಲೆ ಕೊರಳಿಗ್ಹಾಕಿ। ಮೆರೆವೋಧೀರಗೇ। ಯದುಗಿರಿಯಲ್ಲಿರುವ ಲಕ್ಷ್ಮೀನಾರಸಿಂಹಗೇ॥5॥

ಫಲವನೆರೆದರು (ಸಂಕ್ರಾಂತಿ ಸಂಜೆ) **ರಾಗ: ಶಂಕರಾಭರಣ-ಆದಿತಾಳ**

ಫಲವನೆರೆದರು ಭಕ್ತಿಲಿ ಲಲನೆ ಮುಖಿಯರರ್ಥಿಯಲಿ॥ಪ॥ ಕಾಸು ಹಣವ ತಂದರು। ಕೂಸನ್ನಸೆಗೆ ಕರೆದರು॥ ಸುವಾಸಿನಿಯರ್ ನೆರೆದರು। ಕೂಸಿನ್ ತಲೆಮೇಲೆರೆದರು॥1॥ ಹೊನ್ನು ಹಣವ ತಂದರು। ಚಿಣ್ಣನ್ ಹಸೆಗೆ ಕರೆದರು।

ಕನ್ನೆಯರೆಲ್ಲ ನೆರೆದರು। ಚಿನ್ನನ್ ತಲೆಮೇಲೆರೆದರು।।2।। ಬೋರೆ ಫಲವ ತಂದರು। ಬಾಲನ್ನಸೆಗೆ ಕರೆದರು। ಬಾಲೆಯರೆಲ್ಲ ನೆರೆದರು। ಬಾಲನ್ ತಲೆಮೇಲೆರೆದರು।।3।। ಕಬ್ಬು ಎಳ್ಳು ಬೆಲ್ಲ ತರಿಸಿ। ಕಡಲೆ ಕೊಬ್ಬರಿ ಬೆರಸಿ। ಕುಸುರಿ ಕಾಳಿನ ಹಾರವ ಹಾಕಿ। ಶೃಂಗರಿಸಿ।4।। ಉತ್ತರಾಯಣೆ ಹಬ್ಬವೆಂದು ಉತ್ತುಮ ಸತಿಯರು ಬಂದು। ಚಿತ್ತಜಪಿತನ ಶಿರದಮೇಲೆ। ಮುತ್ತು ಹವಳ ಕಲಸಿ ಬೆರಸಿ।। ಫಲವನೆರೆದರು ಎಲಚಿ ಫಲವನೆರೆದರು।।5।। ನಾರೀ ಮಣಿಯರೆಲ್ಲಾ ಸೇರಿ। ನಾರಸಿಂಹ ಹರಿಯ ಕರೆದು। ತಾರೆ ತಾರಮ್ಮಯ್ಯನೆಂದು ಹಾರಿ ಬೀಳುವ ಕೃಷ್ಣನ ಶಿರದಿ। ಎಲಚಿ ಫಲವನೆರೆದರು।।6।।

ಅಂಗ ಸಿಂಗರಿಸಿ ರಂಗಗೇ ಮಂಗಳಾರತಿ — ರಾಗ: ಸಾರಂಗ

ಅಂಗ ಸಿಂಗರಿಸಿ ರಂಗಗೇ ಮಂಗಳಾರತಿ ಎತ್ತಿರೇ। ಸಂಗೀತ ಸ್ವರದಿಂದಲಿ। ಸಾರಂಗದಿಂದಲಿ ಪಾಡಿರೆ।।ಪ।। ಕೋಟಿಸೂರ್ಯನ ಮುಕುಟಕ್ಕೆ। ರತ್ನದ ಕಿರೀಟಿಡೆ। ಲಲಾಟಕಕ್ಷತೆಯನಿಟ್ಟು। ಕಸ್ತೂರಿಯ ಬಟ್ಟಿಡೆ।।1।। ವಸುದೇವಸುತನ ಕೊರಳಿಗೆ। ಅಸಳಿಪು ಸರಪಳಿ।ಹೊಸ ಮುತ್ತಿನರಳೆಲೆ। ವೈಜಯಂತಿವನಮಾಲೆ।।2।। ಪೊಡವಿ ಪಾಲಕನ ನಡುವಿಗೆ ಉಡುದಾರ ಗೆಜ್ಜೆನಿಡೆ। ಕಡಲ ಶಯನನಾ ಕೈಗೆ। ಕಡಗ ಸರಪಳಿಯನಿಡೆ।।3।। ಮತ್ಸ್ಯಾವತಾರನ ಪಾದಕೆ। ಪಚ್ಚೆಯ ಪಾದುಕೆನಿಡೆ। ಅಚ್ಯುತನಿಗೆ ಅಚ್ಚ ಮಲ್ಲಿಗೆ। ಬಿಚ್ಚಿದ ಕ್ಯಾದಿಗೆ ಜಡೆ।।4।। ರಜತ ಪೀಠದ ಪುರದ ಒಳಗೆ। ಲಕ್ಷ್ಮೀನಾರಾಯಣ ಕುಳ್ಳಿರೇ। ಅರ್ಥಿಲಿ ಬಳ್ಳಾರಿವಾಸಗೆ। ಕರ್ಪೂರದಾರತಿ ಮಾಡೆ।।5।।

ಬಾಳು ಸೌಖ್ಯದಿಂ ತನಯನೆ (ಆಶೀರ್ವಾದ) — ರಾಗ : ಬಿಲಹರಿ

ಬಾಳು ಸೌಖ್ಯದಿಂ ತನಯನೆ ಬಾಳು ಸೌಖ್ಯದಿಂ।।ಪ।। ಲೀಲೆಯೊಳನುದಿನ ಸಂತಸವಾಂತು ನೀನ್।।ಅ.ಪ।। ಮುರಹರ ನಿನಗಾಯುಶ್ಯವನೀಯಲಿ। ಮುರಹರ ಆರೋಗ್ಯವ ಕೊಡಲಿ। ನಿರುತವು ನೀನ್ ಸುರರನು ಸ್ಮರಿಸಲಿ।।1।। ಪಾರ್ವತಿ ನಿಮ್ಮನು ಪಾಲಿಸಲನುದಿನ। ಶಾರದೆ ನಿನ್ನನು ಸೇರಿರಲಿ। ನೀರಮಣಿಯು ನಿನ್ನ ಸಾರುತ ಪೊಂದಲಿ।।2।। ಇಂದ್ರನಂತ ವರಭೋಗವ ಹೊಂದುತ। ಚಂದ್ರನಂತೆ ಲೀಲೆಯ ಪಡುತಾ। ಸುಂದರ ಮಂದಿರಕಾನಂದ ವನಿತ್ತು।।3।। ಅನ್ನದಾನ ಭೂದಾನವ ಗೈಯುತಾ। ಕನ್ಯಾದಾನವ ವಿರಚಿಸುತೆ। ಮನ್ನಿಸಿ ಗುರುಗಳ। ಹಿರಿಯರ ಸ್ಮರಿಸುತಲಿ।।4।। ಮಾನವಂತ ನೀನಾಗಿರು ಬಾಲನೇ। ಜ್ಞಾನವಂತ ನೀನಾಗಿರು ಸತತ। ದೇನು ಪುರೀಶನ।ಶ್ರೀಶನ ಸೇವಿಸಿ।।5।।

❖ ❖ ❖

ಶ್ರೀ ಕೃಷ್ಣನ ಬಾಲಲೀಲೆಗಳ ವರ್ಣನೆ

ಅಂಬೆಗಾಲಿಕ್ಕುತಲಿ ಬಂದ ಗೋವಿಂದ — ರಾಗ: ಕಲ್ಯಾಣಿ-ಖಂಡಏಕತಾಳ

ಅಂಬೆಗಾಲಿಕ್ಕುತಲಿ ಬಂದ ಗೋವಿಂದ।।ಪ।। ಅಂಬುಜನಾಭ ದಯದಿಂದ ಎನ್ನಮನೆಗೆ।।ಅ.ಪ।। ಜಲಚರ ಜಲವಾಸ ಧರಣಿಧರ ಮೃಗರೂಪ। ನೆಲನಳೆದು ಮೂರಡಿ ಮಾಡಿ ಬಂದ। ಕುಲನಾಶ ವನವಾಸ ನವನೀತ ಚೋರನಿವ। ಲಲನೆಯರ ವ್ರತಭಂಗ ವಾಹನತುರಂಗ।।1।। ಕಣ್ಣು ಬಿಡುವನು ತನ್ನ ಬೆನ್ನ ತಗ್ಗಿಸುವನು। ಮಣ್ಣು ಕೆದರಿ ಕೋರೆ ಬಾಯ ತೆರೆದು। ಚಿಣ್ಣ ಭಾರ್ಗವ ಲಕ್ಷ್ಮಣನಣ್ಣ ಬೆಣ್ಣೆಯ ಕಳ್ಳ। ಮಾನವ ಬಿಟ್ಟು ಕುದುರೆಯನೇರಿದ।।2।। ನೀರಪೊಕ್ಕನು ಗಿರಿಯ ನೆಗಹಿ ಧರಣಿಯ ತಂದು। ನರಮೃಗ ಬಲಿಬಂಧ ಕೊರಳುಗೊಯಿಕ। ಶರಮುರಿದೊರಳೆಳೆದು ನಿರವಾಣೆ ಹಯ ಹತ್ತಿ। ಪುರಂದರವಿಠಲ ಮನೆಗೆ ತಾ ಬಂದ।।3।।

ಅಂಬೆಗಾಲಿಕ್ಕಿ ಬಂದನೇ — ರಾಗ: ಕಲ್ಯಾಣಿ

ಅಂಬೆಗಾಲಿಕ್ಕಿ ಬಂದನೇ ದೇವಕಿಕಂದ ಅಂಬೆಗಾಲಿಕ್ಕಿ ಬಂದನೆ।।ಪ।। ಅಂಬೆಗಾಲಿಕ್ಕಿ ಬಂದ ಮುದ್ದು ನಂದನ ಕಂದ। ಚಿನ್ಮಯ ರೂಪ ಶ್ರೀ ಮಳೂರು ಕೃಷ್ಣನೇ।।1।। ಅಂಬೆಗಾಲಿಕ್ಕಿ ಬಂದು ಏನೂ ತಿಳಿಯದಂತೆ ತೋರಿ। ಮರುಳು ಮಾಡಿ

ಪೋಪ ಮಳೂರು ಕೃಷ್ಣನೇ॥2॥ ಅಂಬೆಗಾಲಿಕ್ಕಿ ಬಂದು ಪುರಂದರದಾಸರಿಗೆ। ಚಂದದಿ ಲೀಲೆಯ ತೋರಿ ನಲಿದವನೆ॥3॥ ಬೆಣ್ಣೆ ಕೈಯಲಿ ಹಿಡಿದು ತಿನ್ನುತ ನೀನು। ಸಾರಿ ಸಮೃದ್ಧಿ ಜನಕೆ ನೀಡುತ ತೃಪ್ತಿಯನು॥4॥

ಉದಯಕಾಲದೊಳೆದ್ದು ಗೋಪಿಯು

ಉದಯಕಾಲದೊಳೆದ್ದು ಗೋಪಿಯು ದಧಿಯಮಥಿಸುವೇನೆಂಬ ಸಮಯದೀ॥ಪ॥ ಯದುವರೇಣ್ಯನು ಎದ್ದು ತೊಟ್ಟಿಲೊಳ್ ತೊದಲ ನುಡಿಯಲೀ..। ತಾಯ ಕರೆದನು ನುಡಿಯ ಲಾಲಿಸಿ। ನಳಿನನೇತ್ರನ ತೊಡೆಯಲೇರಿಸಿ। ತೆರೆದ ಸ್ತನಗಳ ಕೊಡುವೆನೆಂದರೇ ಕಣ್ಣಮುಚ್ಚುವ ಒಡನೆ ಮಲಗುವಾ।... ಮಲಗದೇಳುವ ನಿದ್ರೆ ತೀರದೆನ್ನದ ಕಾರಣ ಬುದ್ಧಿ ಸಾಲದು ಮುದ್ದು ಮಗುವಿಗೆ॥1॥ ಹದ್ದು ಭವಡಿಸೆಂದೆದ್ದು ಬೇಗನೇ ಕದ್ದು ಕೆಲಸವ ತಿದ್ದರಷ್ಟರೊಳ್ ಅಮ್ಮ ಬಾರೇ। ಎನ್ನಗಲ ಬೇಡವ್ವೋ ಗುಮ್ಮ ಬರುತಿದೆ ಗುಡುಗುಡಿನುತಿದೆ ಅಮ್ಮಿ ಕೊಡು ಒಲ್ಲೆನೆಂದರೇ। ತಿಂಬೆನೆನುತಿದೆ ತಾಳಲಾರೆನು ಶ್ರೀಧರವಿಠಲನ ಮಧುರವಾಣಿಗೆ ಮೋದಪಡುತಲಿ। ಮಾನಿನಿಮಣಿ ವೇದಗೋಚರ ನೀ ಏಳಬೇಡವೋ ಪಾಡಿತೂಗುವೇ ಪವಡಿಸೆಂದಳು॥2॥

ತಪ್ಪೆಜ್ಜೆಯನ್ನಿಕ್ಕುತ — ರಾಗ: ಅಭೇರಿ

ತಪ್ಪೆಜ್ಜೆಯನ್ನಿಕ್ಕುತ ಎನ್ನಪ್ಪ ಬಾರೋ ನೀ ಎನ್ನಯ್ಯ ಬಾರೋ। ನೀ ಕುಪ್ಪಿ ಕುಪ್ಪಿ ಕುಣಿ ಕುಣಿದಾಡುತ ಕೃಷ್ಣ ಬಾರೋ॥ಪ॥ ಅರಳೆಲೆ ಮಾಗಾಯಿಗಳು ಅಲುಗು ಅಲುಗುತ್ತಾ। ಮುದ್ದು ಬೆರಳುಂಗುರ ಹುಲಿಯುಗುರು ಹೊಳೆ ಹೊಳೆಯುತ್ತಾ। ಕರಕಮಲವ ನೀಡಿ ನೀಡಿ ಜಗ್ಗಿ ಹಿಗ್ಗುತ್ತಾ। ಮೈ ಸಿರಿಯಿಂದಾತ ಕುಣಿದು ಕುಣಿದು ಶಿಸ್ತು ತೋರುತ್ತಾ ॥1॥ ಘೊನ್ನ ಘಲ್ಲು ಘಲ್ಲು ಘಲ್ಲು ಘಲ್ಲು ಪೌಳಿಯಿಂದಾ। ಚರಣಂಗಳ ತಟ್ಟುತ ಗುಮ್ಮ ಗುಮ್ಮಿ ನಿಂದ। ರಂಗುರಕ್ತಿಯಿಂದ ತೋರೋ ಹರುಷದಿಂದ। ನಿನ್ನಂಗಿಯ ತೊಡುವೆ ಬಾರೋ॥2॥ ಮಂಗಳಾಂಗ ಕಿರು ನಗೆಮೊಗದ ಚೆಲುವ। ಅರುಣ ನೇತ್ರಾ ಘನ ಪುರಿಯಾ ರಂಭಜನಕ। ಪುಣ್ಯನೇತ್ರಾ ಅರಸು ವೆಂಕಟರಮಣ ಜಾಲಕ್ಷೇತ್ರ। ಮುದ್ದು ಪೊಳೆವ ಲಕ್ಷ್ಮೀಯ ಕಾಂತಾ ಪುಣ್ಯ ನೇತ್ರ॥3॥

ಮಕ್ಕಳ ಮಾಣಿಕವೇ ಮೋಹನ್ನ — ರಾಗ: ಮೋಹನ

ಮಕ್ಕಳ ಮಾಣಿಕವೇ ಮೋಹನ್ನ। ಬಾ ರಂಗೈಯ್ಯಾ ಮಕ್ಕಳ ಮಾಣಿಕವೆ ಮೋಹನ್ನ। ಎನ್ನಕ್ಕರದ ಗುಣನಿಧೆ ಬಾ ರಂಗೈಯ್ಯಾ॥ಪ॥ ಅಪ್ಪುತಪ್ಪುಹೆಜ್ಜೆನಿಕ್ಕುತ್ತ ಬಾಯೊಳು ಜೊಲ್ಲು। ಸುಪ್ಪಾಣಿಮುತ್ತಂತೆ ಸುರಿಯುತಾ ಬಾರಂಗೈಯ್ಯಾ। ನಿನಗೊಪ್ಪುವಾಭರಣ ನೀಡುವೆನೊ ಅದನೊಲ್ಲದಿದ್ದರೆ ತುಪ್ಪಾಕಜ್ಜಾಯ ಕೊಡುವೆನೂ॥1॥ ಅಂದಿಗೆ ಕಿರುಗೆಜ್ಜೆ ಅಲಗೊತ್ತು ಕೈಯೊಳಗಿದ್ದು। ಬಿಂದುಲಿ ಬಾಜುಬಂದು ತಿರುಹೂತ ಬಾರಂಗೈಯ್ಯಾ। ಬಂದೆನ್ನ ಬಿಗಿಯಪ್ಪಿಕೊಳ್ಳಯ್ಯ ಅದನೊಲ್ಲದಿದ್ದರೆ ಅಂದವಾದ ಒಂದು ಮುತ್ತು ತಾರಯ್ಯ॥2॥ ಓಡಿಓಡಿ ಬಾರೋ ವಸುದೇವನಂದನಾ ಕಂದ। ನೋಡಿ ನೋಡಿ ನಗುತ ಬಾರೋ ರಂಗಯ್ಯ। ಕಾಡ ಬೇಡ ಎನ್ನಯ್ಯಾ ಹೆಳವನಕಟ್ಟೆ ಕೋಡಗಲ್ಲ ವಾಸ ವೆಂಕಟ॥3॥

ತೋಳು ತೋಳು ತೋಳು ರಂಗ ತೋಳನ್ನಾಡೈ — ರಾಗ: ಮಾಂಡ್-ಆದಿತಾಳ

ತೋಳು ತೋಳು ತೋಳು ರಂಗ ತೋಳನ್ನಾಡೈ।ಸ್ವಾಮಿ। ನೀಲವರ್ಣದ ಬಾಲಕೃಷ್ಣನೇ ತೋಳನ್ನಾಡೈ॥ಪ॥ ಹುಲಿಯುಗುರು ಅರಳೆಲೆ ಮಾಗಾಯಿಗಳನ್ನಿಟ್ಟ ತೋಳನ್ನಾಡೈ॥ ಸ್ವಾಮಿ ಘಳಿರೆಂಬ ಗೆಜ್ಜೆಯಲಿ ನಲಿವುತ್ತ ತೋಳನ್ನಾಡೈ॥ ನೆಲುವಿಗೆ ನಿಲುಕದೆ ಒರಳ ತಂದಿಟ್ಟ ತೋಳನ್ನಾಡೈ॥ ಸ್ವಾಮಿ ಚೆಲುವ ಮಕ್ಕಳ ಮುದ್ದು ಮಾಣಿಕವೆ ತೋಳನ್ನಾಡೈ॥1॥ ಪೂತನಿಯೆಂಬವಳಸುವನೆ ಹೀರಿದ ತೋಳನ್ನಾಡೈ। ಸ್ವಾಮಿ ಮಾತೆಯಪಿತನಅಗ್ರಜನ ಮಡುಹಿದ ತೋಳನ್ನಾಡೈ॥ ಮಾತಿಗೆ ಶಿಶುಪಾಲನ ಶ್ರೀ ತುಳಸಿಯ ಪ್ರಿಯನಿತ್ಯ ವಿನೋದಿ ತೋಳನ್ನಾಡೈ। ಶಿರವತರಿದ ತೋಳನ್ನಾಡೈ ಸ್ವಾಮಿ ಶ್ರೀ ತುಲಸಿಯ ಪ್ರಿಯ ನಿತ್ಯವಿನೋದಿ ತೋಳನ್ನಾಡೈ॥2॥ ದಟ್ಟಡಿಯಿಡುತಲಿ ಬೆಣ್ಣೆಯ ಮೆಲುವ ತೋಳನ್ನಾಡೈ। ಸ್ವಾಮಿ ಕಟ್ಟಿದ ಕರಡಿ ಕರುವೆಂದೆಳೆದ ತೋಳನ್ನಾಡೈ॥ ಬಟ್ಟಲ ಹಾಲ ಒಲ್ಲೆಂದು

ಕಾಡಿದ ತೋಳನ್ನಾಡೈ। ಸ್ವಾಮಿ ಬಟ್ಟಲೊಳುಣಿಸೆ ನಗುವಾತನೆ ತೋಳನ್ನಾಡೈ॥3॥ ಸಜ್ಜನ ಸತ್ಯಕೆ ಧರ್ಮವ ನಡೆಸಿದ ತೋಳನ್ನಾಡೈ। ಸ್ವಾಮಿ ಅರ್ಜುನನ ರಥಕೆ ಸಾರಥವ ಮಾಡಿದ ತೋಳನ್ನಾಡೈ। ಲಜ್ಜೆಗೇಡಾದ ದ್ರೌಪದಿಯ ಕಾಯ್ದ ತೋಳನ್ನಾಡೈ। ಸ್ವಾಮಿ ವಜ್ರಪಂಜರ ಪಾಂಡವಪ್ರಿಯ ತೋಳನ್ನಾಡೈ॥4॥ ಅಂಬೆಗಾಲಲಿ ಬಂದು ಒರಳ ಎಳೆದವನೆ ತೋಳನ್ನಾಡೈ। ಸ್ವಾಮಿ ತುಂಬಿದ ಬಂಡಿಯ ಮುರಿಯಲ್ ಒದ್ದವನೇ ತೋಳನ್ನಾಡೈ। ಕಂಬದಿಂದಲಿ ಅವತರಿಸಿದವನೆ ತೋಳನ್ನಾಡೈ ಸ್ವಾಮಿ। ನಂಬಿದವರನು ಪೊರೇವ ಕೃಷ್ಣ ತೋಳನ್ನಾಡೈ॥5॥ ಕಾಲಕೂಟನ ವಿಷವನು ಕಲಕಿದ ತೋಳನ್ನಾಡೈ ಸ್ವಾಮಿ। ಕಾಳಿಗನ ಹೆಡೆಯನು ತುಳಿದೇ ತೋಳನ್ನಾಡೈ। ಕಾನನದಲಿ ದಶಕಂಠನ ಮಡುಹಿದೆ ತೊಳನ್ನಾಡೈ ಸ್ವಾಮಿ। ಸ್ಯಾಲಗ ವೈರಿಯ ಕರುಣೆಗಳರಸನೆ ತೋಳನ್ನಾಡೈ॥6॥ ನಖದಿಂದ ಹಿರಣ್ಯಕನುದರ ಬಗಿದ ತೋಳನ್ನಾಡೈ। ಸ್ವಾಮಿ ಸುಖದಿಂದಲಿ ಭಕ್ತ ಪ್ರಹ್ಲಾದನ ಕಾಯ್ದ ತೋಳನ್ನಾಡೈ॥ ಖಣಿತಗೆಡಿಸಿದ ಗೋಪ ಸ್ತ್ರೀಯರ ತೋಳನ್ನಾಡೈ। ಸ್ವಾಮಿ ಸುಖತೀರ್ಥರ ಪತಿ ಶ್ರೀಪುರಂದರವಿಠಲನ ತೋಳನ್ನಾಡೈ॥7॥

ಅಳುವುದ್ಯಾತಕೋ ರಂಗ — ರಾಗ: ವಸಂತ-ಆದಿತಾಳ

ಅಳುವುದ್ಯಾತಕೋ ರಂಗ। ಅತ್ತರಂಜಿಪ ಗುಮ್ಮಾ ॥ಪ॥ ಪುಟ್ಟಿದೇಳು ದಿವಸದಲಿ ದುಷ್ಟ ಪೂತನಿಯ ಕೊಂದೆ। ಮುಟ್ಟಿ ವಿಷದ ಮೊಲೆಯುಂಡ ಕಾರಣ। ದೃಷ್ಟಿ ತಾಕಿತೆ ನಿನಗೆ ರಂಗಯ್ಯ॥1॥ ಬಾಲಕತನದಿ ಗೋಪಾಲಕರೊಡಗೂಡಿ। ಕಾಳಿಂದಿ ಮಡುವನು ಕಲಕಿದ ಕಾರಣ। ಕಾಲು ಉಳುಕಿತೆ ನಿನಗೆ ರಂಗಯ್ಯ॥2॥ ತುರುವ ಕಾಯಲು ಪೋಗೆ ಭರದಿ ಇಂದ್ರ ಮಳೆಗರೆಯೆ। ಬೆರಳಲಿ ಬೆಟ್ಟವನೆತ್ತಿದ ಕಾರಣ। ಬೆರಳು ಉಳುಕಿತೆ ನಿನಗೆ ರಂಗಯ್ಯ॥3॥ ವಸುದೇವ ಸುತನಾಗಿ ಅಸುರರೆಲ್ಲರ ಮಡುಹಿ। ಹೆಸರಿನ ಮಲ್ಲರ ಮಡುಹಿದ ಕಾರಣ। ಕಿಸರು ತಾಕಿತೇ ನಿನಗೆ ರಂಗಯ್ಯ॥4॥ ಶರಣು ವೇಲಾಪುರದ ಚೆಲುವ ಚನ್ನಿಗರಾಯ। ಪರಿಪರಿ ವಿಧದಿಂದ ಶರಣರ ಪೊರೆಯುವ। ವರದ ಪುರಂದರವಿಠಲರಾಯ॥5॥

ಗುಮ್ಮನ ಕರೆಯದಿರೇ ಅಮ್ಮ — ರಾಗ: ದುರ್ಗ-ಛಾಪುತಾಳ

ಗುಮ್ಮನ ಕರೆಯದಿರೇ ಅಮ್ಮ ನೀನು॥ಪ॥ ಸುಮ್ಮನೆ ಇದ್ದೇನು ಅಮ್ಮಿಯ ಬೇಡೆನು। ಮಮ್ಮು ಉಣ್ಣುತೇನೆ ಅಮ್ಮ ಅಳುವುದಿಲ್ಲ॥ಅ.ಪ॥ ಹೆಣ್ಣು ಗಳಿರುವಲ್ಲಿ ಹೋಗಿ। ಅವರ ಕಣ್ಣು ಮುಚ್ಚುವುದಿಲ್ಲವೆ। ಚಿಣ್ಣರ ಬಡಿಯೆನು ಅಣ್ಣನ ಬೈಯೆನು। ಬೆಣ್ಣೆಯ ಬೇಡೆನು ಮಣ್ಣು ತಿನ್ನುವುದಿಲ್ಲ॥1॥ ಬಾವಿಗೆ ಪೋಗೆ ಕಾಣೆ ಅಮ್ಮ ನಾನು ಹಾವಿನೊಳಾಡೆ ಕಾಣೆ। ಆವಿನ ಮೊಲೆಯೂಡೆ ಕರುಗಳ ಬಿಡೆ ನೋಡೆ। ದೇವರಂತೆ ಒಂದು ಠಾವಿಲಿ ಕೂಡುವೆ॥2॥ ಮಗನ ಮಾತ ಕೇಳಿ ಗೋಪಿದೇವಿ ಮುಗುಳು ನಗೆ ನಗುತ। ಜಗದೊಡೆಯನ ಶ್ರೀಪುರಂದರವಿಠಲನ। ಬಿಗಿದಪ್ಪಿಕೊಂಡಳು ಮೋಹದಿಂದಲಾಗ॥3॥

ಗುಮ್ಮನೆಲ್ಲಿಹ ತೋರಮ್ಮ

ಗುಮ್ಮನೆಲ್ಲಿಹ ತೋರಮ್ಮ । ಸುಮ್ಮನಂಜಿಸಬೇಡಮ್ಮ ॥ಪ॥ ಪಂಚಶತ್ಕೋಟಿ ವಿಸ್ತೀರ್ಣದ ಭೂಮಿಯ। ವಂಚನೆಯಿಲ್ಲದೆ ತಿರುಗಿ ಬಂದೆನು ನಾನು। ಹಂಚಿಸಿ ಕೊಟ್ಟೆನು ಅವರಿಗೆ ನಾ। ಹಾಂಗೂ ನೋಡಿದರೂ ಕಾಣೆನು ಗುಮ್ಮನ॥ಅ.ಪ.॥ ಸಿಂಧುವಿನೊಳಗೆ ಆನಂದದಿ ಮಲಗಿದ್ದೆ। ಗುಂದು ನಾಭಿಕಮಲದಿ ಬೊಮ್ಮನ ಪುಟ್ಟಿಸಿದೆ। ಅಂಧಕಾರದಿ ಪೋಗಿ ಒಬ್ಬನೆ ಮಲಗಿದೆ। ಹಾಂಗೂ ನೋಡಿದರೂ ಕಾಣೆನು ಗುಮ್ಮನ॥1॥ ಈರೇಳು ಲೋಕವ ಉದರದೊಳಗೆ ಇಟ್ಟು। ತೋರಿದೆ ಬ್ರಹ್ಮಾಂಡವ ಬಾಯಲಿ ನಾನು। ಘೋರ ರೂಪದಿ ಬಂದ ಗಾಳಿ ಅಸುರನನು ಕೊಂದೆ॥ ಹಾಂಗೂ ನೋಡಿದರೂ ಕಾಣೆನು ಗುಮ್ಮನು॥2॥ ಕಾಳಿಯ ಮಡು ಧುಮುಕಿ। ಕಾಳಿಂಗನ್ಹೆಡೆ ತುಳಿದು। ಮೇಲೆ ನಾನಾವಿಧ ನಾಟ್ಯವಾಡುತಲಿದ್ದೆ॥ ಒಲಿದು ಭಾಗ್ಯವನಿತ್ತೆ ನಾಗಪತ್ನಿಯರಿಗೆ। ಹಾಂಗೂ ನೋಡಿದರೂ ಕಾಣೆನು ಗುಮ್ಮನ ॥3॥ ಅಕ್ರೂರಗೆ ವಿಶ್ವರೂಪವ ತೋರಿದೆ। ಛಕ್ಕನೆ ರಥವೇರಿ ಮಥುರೆಗೆ ಪೋದೆ॥ ಸೊಕ್ಕಿದ ರಜಕನ ಕೊಂದು ಮಡಿಯನುಟ್ಟೆ। ಹಾಂಗೂ ನೋಡಿದರೂ ಕಾಣೆನು ಗುಮ್ಮನ॥4॥ ಬಿಲ್ಲ ಹಬ್ಬಕ್ಕೆ ಪೋಗಿ ಮಲ್ಲರ ಮಡುಹಿದೆ ಅಲ್ಲಿ ಮಾವನ ಕೊಂದು ಮುತ್ಯಾಗೆ ಒಲಿದೆ॥ ಚೆಲ್ವ ಗೋಪಾಲ ಶ್ರೀ ಪುರಂದರ ವಿಠಲನ। ಬಾರಿ ಬಾರಿಗೆ ನೀ ಬೆದರಿಸಬೇಡಮ್ಮ ॥5॥

ಯಶೋದೆಯೆ ಅಮ್ಮ **ರಾಗ: ಸಿಂಧುಭೈರವಿ**

ಯಶೋದೆಯೆ ಅಮ್ಮ। ಎನ್ನನ್ನು ಎತ್ತಿ ಕೊಳ್ಳಮ್ಮ ।।ಪ।। ಬಿಸಿನೀರು ಕಾಸಬೇಡೆ। ಅಮ್ಮ ನೀನು ಬುಕ್ಕಚ್ಚಿ ಮಾಡಿಸಬೇಡೆ। ಬಿಸಿಮೊಮ್ಮು ಉಪ್ಪು ತಾಯಿ ಅಮ್ಮ ನಾನು ಉಣಲಾರೇ। ಉತ್ತುತ್ತೆ ಹಣ್ಣು ಬೆಣ್ಣೆ ತಿಂದೇನೆ।।1।। ಕಳ್ಳ ಕೃಷ್ಣ ಎನ್ನುತಾರೆ। ಬಂದನೆಂದು ಬೇಗ ಬೇಗ ತಿನ್ನುತಾರೆ। ಗಲ್ಲ ಕಚ್ಚಿ ಕಚ್ಚಿ ಎನ್ನ ಹಲ್ಲು ಬಾಯಿ ನೋಯುತಿದೆ। ವಲ್ಲಭೇರು ಎನ್ನ ಕಾಡಿ ಕೊಲ್ಲುತಾರೆ।।2।। ಸುಮ್ಮಾನೆ ಮಲಗಬೇಡೆ ಅಮ್ಮ ನೀನು। ಎನ್ನ ಕಡೆ ಮೋರೆ ಮಾಡೆ। ಚಿಕ್ಕಾವು ಕಂಡರೆ ಅಂಜಿಕೆ ಬರುತಿವೆ। ಕ್ಷಣಹೊತ್ತು ಎನ್ನ ಕೂಡೆ ಮಾತನಾಡೆ।।3।। ನಕ್ಷತ್ರ ತಂದುಕೊಡೆ। ಚಂದ್ರಮನ ಇತ್ತಿತ್ತ ಕರೆದುತಾರೆ। ಈಕ್ಷಿಸಿ ನಲಿವಂಥ ಪುರಂದರವಿಠಲನ। ಒಂದು ಬಾರಿ ಮುದ್ದಾಡಿ ಚಂದನೋಡೆ।।4।।

ತೆಗೆ ನಿನ್ನ ಮುಸುಕವನು ಗೋಪಮ್ಮ ತಾಯೆ

ತೆಗೆ ನಿನ್ನ ಮುಸುಕವನು ಗೋಪಮ್ಮ ತಾಯೆ।।ಪ।। ತೆಗೆ ನಿನ್ನ ಮುಸುಕವಜಿಗಿದುಂಬೆ ಕ್ಷೀರವ। ಜಗವನೆಲ್ಲವ ಸುತ್ತಿ। ಬಾಯಾರಿಬಂದೆನಮ್ಮಾ।।ಅ.ಪ।। ಗೋವು ಕಾಯಲು ಪೋಗಿ। ದಾವ್ವತ್ತಿ ಬಂದೆನಮ್ಮಾ।।ಅ.ಪ।। ದೇವಕಿ ದೇವಿಯೇ ಅವಸರವಾಗಿದೇ।।1।। ಕಾಳಿಯ ಮಡುವಿಲಿ ಧುಮುಕಿ। ಏಳು ಹೆಡೆಯ ತುಳಿದೆ। ಕಾಳಿಂಗನ ತುಳಿದು। ಬಹಳ ಶ್ರಮಪಟ್ಟು ಬಂದೇ।।2।। ತ್ವರದಿ ತೊಡೆಯ ಮೇಲೆಕರೆದು ಕೊಳ್ಳಮ್ಮ ತಾಯೆ। ಪುರಂದರ ವಿಠಲ ವರದ ಸರ್ವೋತ್ತಮನಾ।।3।।

ಹಸಿವೆಯಾಗುತಿದೆ ಅಮ್ಮ ಕೇಳೆ **ರಾಗ: ಕಾಪಿ-ಏಕತಾಳ**

ಹಸಿವೆಯಾಗುತಿದೆ ಅಮ್ಮ ಕೇಳೆ। ಹಸನಾದ ಅವಲಕ್ಕಿಬೆಲ್ಲ ಕಲಸಿಕೊಡೆ।।ಪ।। ಬಿಸಿಬಿಸಿ ಅನ್ನ ಕೈ ಸುಡುತಿದೆ ಬದಿಯಲಿ ಕೊಡೆ।।ಅ.ಪ।। ಖಾರ ಸಾರು ಮಾಡಬೇಡ ಉಣ್ಣಲಾರನೆ। ಎನಗೆ। ಸೀ ಸಾರು ಮಾಡಿದರೆ ಬೇಗ ಉಂಬುವೆ।।1।। ತೋಡ ತುಪ್ಪ ಹಾಕಿದರೆ ನೆಲಕೆ ಒತ್ತುವೆ ।ಎನಗೆ। ಗಟ್ಟಿ ತುಪ್ಪ ಹಾಕಿದರೆ ಬೇಗ ನುಂಗುವೆ।।2।। ನೀರು ಮೊಸರು ಹಾಕಿದರೆ ನೆಲಕೆ ಎಸೆವೆ। ಎನಗೆ ಗಟ್ಟಿ ಮೊಸರು ಹಾಕಿದರೆ ಥಟ್ಟನುಂಗುವೆ।।3।। ತಟ್ಟನೇಳೊ ಕೃಷ್ಣರಾಯ ಬಟ್ಟಲು ತೊಳೆದೇನು। ನಿನಗೆ ಉಕ್ಕುವ ಹಾಲಿನ ಕೆನೆಯ ಕೈಯಲಿ ಕೊಟ್ಟು ಕಳುಹುವೆನು।।4।। ಕಂದರೆಲ್ಲ ಕರೆಯ ಬಂದರಮ್ಮ ಕೇಳೆ ಬಾಳೆ। ಹಣ್ಣು ಬೆಲ್ಲ ಚೂರು ಕೈಯಲ್ಲಿ ಕೊಡೆ।।5।। ಕಂದರೆಲ್ಲ ಕರೆಯಬಂದರು ತಾಯಿ ಕೇಳೆ। ಸಕ್ಕರೆ। ಕೊಬ್ಬರಿಯ ಕುಟ್ಟಿ ಸೆರಗಲಿ ಹಾಕೆ।।6।। ವೃಂದಾವನದೊಳಗೆ ಬಂದು ಅಮ್ಮ ಕೇಳೆ। ಬಲು। ಚಂದದ ಗೊಂಬೆಯ ಹೂಡಿ ಕಟ್ಟಿಕೊಡೆ।।7।। ಒಳಗೆ ಆಡು ಒಳಗೆ ಆಡು ಬಾರೊ ರಂಗ। ಅಲ್ಲಿ। ಹೊರಗೆ ಬೂಚಿಮುಖದ ಹುಲಿ ತಿರುಗುತಿದೆ।।8।। ಓಡಿ ಬಾರೋ ಓಡಿಬಾರೋ ಪುರಂದರ ವಿಠಲ।ಅಲ್ಲಿ। ಆಡಿನ ಮುಖದ ಹುಲಿ ತಿರುಗುತಿದೆ।।9।।

ಕಡೆಗೋಲ ತಾರೆನ್ನ ಚಿನ್ನವೇ **ರಾಗ: ಯಮನ್-ಆದಿತಾಳ**

ಕಡೆಗೋಲ ತಾರೆನ್ನ ಚಿನ್ನವೇ ಮೊಸರೊಡೆದರೆ ಬೆಣ್ಣೆ ಬಾರದು ಮುದ್ದುರಂಗ।।ಪ।। ಅಣ್ಣನ ಒಡಗೊಂಡು ಬಾರಯ್ಯ। ಸವಿ ಬೆಣ್ಣೆಯ ಮುದ್ದೆಯ ಮೆಲುವಿರಂತೆ। ಬಣ್ಣದ ಸರವನ್ನು ಕೊರಳಲ್ಲಿ ಹಾಕುವೆ। ಚಿಣ್ಣರೊಡನೆ ಆಡಕಳುಹುವೆ ರಂಗ।।1।। ಪುಟ್ಟ ಬಚ್ಚಿಯ ತಂದು ನಿನ್ನಯ ಚಿನ್ನದ ತೊಟ್ಟಿಲ ಕಾಲಿಗೆ ಕಟ್ಟಿಸುವೆ। ಬಟ್ಟಲು ತುಂಬಿದ ಸಕ್ಕರೆ ನಿನಗೀವೆ। ಕಟ್ಟಾಣಿ ಮುತ್ತಿನ ಸರವನೀವೆ।।2।। ಬಡವರ ಭಾಗ್ಯದನಿಧಿಯೆ। ಗೋಕುಲದೊಡೆಯನೆ ಮಾಣಿಕ್ಯದ ಹರಳೆ। ಕಡುಮುದ್ದು ಉಡುಪಿನ ಬಾಲಕೃಷ್ಣಯ್ಯ। ದುಡುಕು ಮಾಡುವರೇನೋ ಪೆಂಗಳೊಳು ರಂಗ।।3।।

ಹರವಿಯಲೀ ದಧೀ ಇಟ್ಟು (ಮಜ್ಜಿಗೆ ಕಡೆಯುವ ಹಾಡು) **ಜಾನಪದ ಧಾಟಿ**

ಹರವಿಯಲೀ ದಧೀ ಇಟ್ಟು ಕಡಹದ ಕಾಲ್ಮಣಿ ಇಟ್ಟು, ಮರುಗ ಮಲ್ಲಿಗೆಯಾ ಮುಡಿ ಸುತ್ತಿ ಗೋಪಿದೇವಿ ನಡು ಬಳಲಿ ಮೊಸರಾ ಕಡೆದಾಳು।।1।। ಚಿನ್ನದ ಕಡೆಗೋಲು ರನ್ನದ ತೆಗೆನೇಣು ಸಣ್ಣಮುತ್ತುಗಳು ಹೊಳೆಯುತ್ತಾ

ಗೋಪಿದೇವಿ ಬಣ್ಣಿಸಿ ಮೊಸರಾ ಕಡೆದಾಳು॥2॥ ಮುತ್ತಿನ ಕಡಗೋಲು ರತ್ನದ ತೆಗೆನೇಣು ಹಸ್ತ ಕಂಕಣವು ಹೊಳೆಯುತ್ತಾ ಗೋಪಿದೇವಿ ಅರ್ತಿಯಲಿ ಮೊಸರಾ ಕಡೆದಾಳು॥3॥ ಮೊಸರ ಕಡೆವ ಧ್ವನಿಗೆ ಶ್ರೀಪಾಲ ಶಿಶು ಎದ್ದ ಎದ್ದ ಕೃಷ್ಣನ ಸಿಟ್ಟು ತಿಳಿದಾಳೆ। ಗೋಪಿದೇವಿ ಕಡೆಗೋಲನಿಟ್ಟು ನಡೆದಾಳು॥4॥ ಅಳಬೇಡ ಕಂದಯ್ಯ ಕೊಡುವೆ ಹೊಸ ಬೆಣ್ಣೆಯಾ ಸಣ್ಣಕ್ಕೈಗೆರಡು ಸರಿಮುದ್ದೆ। ಕೊಡುವೇನು ಅಳಬೇಡ ಸುಮ್ಮನಿರು ಎಂದಾಳು॥5॥ ಮೊಸರನ್ನು ಕಡೆದು ನಾ ಕೊಡುವೆ ಹೊಸ ಬೆಣ್ಣೆಯ ಸಣ್ಣಕ್ಕೈಗೆರಡು ಸರಿಮುದ್ದೆ। ಕೊಡುವೇನು ಅಳಬೇಡ ಸುಮ್ಮನಿರು ಎಂದಾಳು॥6॥ ಅಳಬೇಡ ಎಂದರೆ ಛಲದಿಂದ ನೀ ಅಳುವೆ ಮನಕೆ ಬಂದಷ್ಟು ಅಳು ಎಂದು। ಗೋಪಿದೇವಿ ಕಡಗೋಲನೆತ್ತಿ ಕಡೆದಾಳು॥7॥ ಕತ್ತಲೆ ಮನೆಯಲ್ಲಿ ಹೊಕ್ಕನೆ ಶ್ರೀ ಕೃಷ್ಣ ರತ್ನ ಕುಂಡಲದ ಬೆಳಕಲ್ಲಿ ಶ್ರೀ ಕೃಷ್ಣ ತುಪ್ಪವ ಬಾಚಿ ಸುರಿದಾನೋ॥8॥ ಕೊಡದ ತುಪ್ಪವನೆಲ್ಲ ಸುರಿದಾನೆ ಮರಿದಾನೆ (ಚೆಲ್ಲು) ತಲೆಮೈಗೆಲ್ಲಾ ಹೊಯ್ಕೊಂಡು। ಶ್ರೀ ಕೃಷ್ಣ ಅಳುತ ಕುಳ್ಳಿರಲೂ॥9॥ ವಳವಿಂಕೆ (ಜೊತೆಗೆ) ಆಡುವ ಮಕ್ಕಳು ಅರಸುತ್ತಾ ಬಂದವೇ ಈಗೆಲ್ಲಿ ನಮ್ಮ ರಂಗನೆಂದು। ಅಳುತಲಿದ್ದವನ ಕೂಡಾಡುವರು ಕರೆಯಾಲೂ॥10॥ ಅಚ್ಯುತ ಹಲಾಧರ ಕೃಷ್ಣ ದಾಮೋದರ ಬ್ರಹ್ಮಾಂಡಕ್ಕೆಲ್ಲಾ ಒಡೆಯನೇ ನೀಬಾರೆಂದು ಮಕ್ಕಳು ಕೂಗಿ ಕರೆದ್ಯಾವ॥11॥ ಬಾಲರು ಕರೆವುದನೂ ಕೇಳಿದನೆ ಶ್ರೀ ಕೃಷ್ಣ ಬೇಗದಲಿ ಬಂದು ಹಿಡಿಗುಂಡು। ಹಿಡಕೊಂಡು ಓಡಿ ಬಂದಾನೆ ಒಳವಿಂಕೇ॥12॥ ತಂದಾ ಹಿಡಿಗುಂಡು ಭಾಂಡಾದ ಮೇಲಿಟ್ಟು ಭಾಂಡಗಳು ಒಡೆದು ಹೊಳೆಯಾಗಿ। ಹರಿಯೋದಾ ಕಂಡಳೇ ಗೋಪಿ ಬೆರಗಾಗೀ॥13॥ ಹೆಜ್ಜೆಯಲ್ಲಿ ತುಪ್ಪದ ಕುರುಹ ಕಂಡಳೆ ಗೋಪಿ ಮರಿದಾನೆಂದು ಅರಿತು ಮನದಲ್ಲಿ ಗೋಪಿದೇವಿ। ಗೋಪಿದೇರಿ ತರಳನ ಕಟ್ಟಿ ಬಿಗಿದೇನು ॥14॥ ತುಪ್ಪ ಮರಿದರೂ ಮರಿಯಲಿ ಭಾಂಡ ಒಡೆದರೂ ಒಡೆಯಲಿ ಕೃಷ್ಣನ ಕಟ್ಟಿ ಬಿಗಿಯದೆ। ಬಿಡನೆಂದು ಅಟ್ಟಿದಳೆ ತನ್ನ ಕುವರಾನ॥15॥ ಓಡುತ್ತಾ ಅಟ್ಟುತ್ತಾ ಬಾಲನ ಹಿಡಿದಾಳೆ ಬೇಗದಲಿ ನೇಣ (ಹಗ್ಗ) ತೆಗೆತನ್ನಿ। ಕೃಷ್ಣನ ಈಗಲೆ ಕಂಬಕ್ಕೆ ಕಟ್ಟುವೆ॥16॥ ಊರನಾರಿಯರೆಲ್ಲ ಕೇಳುತ್ತ ಬಂದಾರೆ ಬಾಲ ಮಾಡುವುದು ಅವತಾರ। ಹೇಳುವೆನು ಬೇಗದಲಿ ನೇಣಾತೆಗೆ ತನ್ನೀ॥16॥ ಕರುವ ಕಟ್ಟುವ ನೇಣಾ ಮಗುವ ತೂಗುವ ನೇಣಾ ಬದಲೊಂದು ನೇಣು ಉಳಿಯಾದೇ। ತಂದರು ನರಹರಿಯ ಕೈಗೆ ಅಳವಲ್ಲಾ॥18॥ ಬಿಚ್ಚಿದರು ಕಡೆಗೋಲಾ ಇಳುಹಿದರು ತೊಟ್ಟಿಲ ಮತ್ತೊಂದು ನೇಣೂ ಉಳಿಯಾದೇ। ತಂದರೂ ಕೃಷ್ಣಾನ ಕೈಗೆ ಅಳವಲ್ಲಾ॥19॥ ಕೇಳೆ ಕೇಳೆ ಗೋಪಿದೇವಿ ನೇಣೆಲ್ಲ ಮನೆಯಲ್ಲಿ ಬಾಲರಳುವರು ಮನೆಯಲ್ಲಿ। ಎನುತಲಿ ಬಂದ ನಾರಿಯರು ನಡೆದಾರು॥20॥ ತಂದ ನೇಣುಗಳೆಲ್ಲಾ ಒಂದು ಗುಡ್ಡೆಗಳಾಗಿ ಕಟ್ಟಲಾಗದೆ ಕರವನ್ನೂ ದಣಿದಾರು ಪುರದಾ ಹೆಂಗಳೆಲ್ಲಾ ಹೊರಟಾರೂ॥21॥ ಉಡಿಬಿಚ್ಚಿ ಸಡಲುತ್ತ ಮುಡಿ ಬಿಚ್ಚಿ ಸಡಲುತ್ತ ಬಳಲಿದಳು ಗೋಪಿ ಎನುತಾಲಿ। ಶ್ರೀಕೃಷ್ಣ ಕಡೆಗೊಂದು ನೇಣಿಗಳವಾದ॥22॥ ಕಂದನ ಎಳತಂದು ಮಿಂದ ಒರಳಿಗೆ ಕಟ್ಟಿ ಕಂಡಷ್ಟು ಕೆಲಸ ಕೆಡಿಸಿದೆ। ರಂಗನೆಂದು ಬಂದಳೆ ಗೋಪಿ ಮನೆಗಾಗ॥23॥ ಒರಳನೆಳೆದುಕೊಂಡು ಮುರಿದ ಮೇಲ್ಮತ್ತಿಯ ಕಡುಪೋವೋಕಾಲಕ್ಕೆ ಬಿರುಗಾಳಿ। ಬಂದಾವೆಂದು ನಡೆತಂದ ನಂದ ಮನೆಗಾಗ॥24॥ ಎಲ್‌ಹೋದ್ನೆ ರಂಗಯ್ಯ ಎತ್ತಕಳುಹಿದೆ ಮಗುವ ಸುತ್ತಿಂದ ನೋಡಿ ಅರಸೀದಾ। ನಂದಗೋಪ ಅಳುತ್ತಿದ್ದ ಕಂದಾನ ನೋಡೀದಾ॥25॥ ಆಡುವ ಮಕ್ಕಳು ದೂರು ತಂದಾವು ಬೇಗ ಭಾಂಡಗಳ ಒಡೆದು ತುಪ್ಪಮರಿದು। ತುಪ್ಪಮರಿದಾನೆಂದು ತಾಯಿ ಕೈಯಕಟ್ಟಿ ಬಿಗಿದಾಳೇ॥26॥ ತುಪ್ಪ ಮರಿದರೆ ನಿನ್ನ ಅಪ್ಪನ ಒಡವೆಯೇ ಪುತ್ರನ ಇಲ್ಲಿ ಸೆರೆಮಾಡಿ। ಹೋದೆಯೆಂದ್ ಅಟ್ಟಿದನೇ ತನ್ನ ಮಡದೀಯಾ॥27॥ ಇಂದು ಉಳಿದ ಶಿಶು ಮುಕುಂದ ನಿನ್ನಾಧೀನ ಬಂದ ದುರಿತಗಳು ಪರಿಹಾರ। ವಾಗಲೆಂದು ಕಂಡಷ್ಟು ಹರಕೆ ಹರಸೀದಾ॥28॥ ಉಡಿಯ ನೇವಾಳವು ಕೊರಳ ಹುಲಿಯುಗುರು ಬೆರಳ ಮುದ್ರಿಕೆಯು ಹರಳಿನ। ಒಂಟಿಸರ ಹರಸಿಟ್ಟಾ ಹರಿಗೆ ಹರಕೇಯ ॥29॥ ಕೃಷ್ಣನ ಚರಿತೆಯ ಅರ್ತಿಯಿಂದ್ಹೇಳ್ದವರಿಗೆ ನಂದಗೋಕುಲದ ಒಡೆಯನಾ। ನೆನೆದರೆ ಮುತ್ತೈದೆ ಭಾಗ್ಯ ಸ್ಥಿರವಕ್ಕೂ॥30॥ ರಂಗನ ಚರಿತೆಯ ಚಂದದಿ ಹೇಳ್ದವರಿಗೆ ನಂದಗೋಕುಲದ ಒಡೆಯನ ನೆನೆದರೆ ಬಂದ ದುರಿತಗಳು ಪರಿಹಾರ॥31॥

ಆಡಹೋಗೋಣ ಬಾರೋ ರಂಗ

ಆಡ ಹೋಗೋಣ ಬಾರೋ ರಂಗ। ಓಡಿ ಹೋಗಲು ಬೇಡ ಕೃಷ್ಣ।।ಪ।। ಅಣ್ಣೆಕಲ್ಲು ಗೋಲಿ ಗಜ್ಜುಗ। ಚಿಣ್ಣೆಕೋಲು ಚೆಂಡು ಬುಗುರಿ। ಕಣ್ಣು ಮುಚ್ಚಾಲೆ ಹಲವು ಕೂಟ। ಬಣ್ಣದಾಟಗಳನೆಲ್ಲ ।।1।। ಸೋಲುಗೆಲುವಿಗೆಲ್ಲ ನೀನು। ಬಾಲಕರೊಳು ಕೂಡಿಕೊಂಡು। ಮೇಲೆ ಮಮತೆಯಿಂದ ಸಾನುಕೂಲವಾಗಿ ನಡೆಯುವಂತೆ।।2।। ಪುಟ್ಟ ಪುಟ್ಟ ಕೊಳಲು ಕಂಬಳಿ ಕಟ್ಟಿ ಬುತ್ತಿ ಕೈಯಲಿ ಕೋಲು। ದಿಟ್ಟ ಚಲುವನಾದ ಪುರಂದರ ವಿಠಲ ಗೋವಳರಾಯ।।4।।

ಗೋಪಾಲ ಆಡಿದನು ರಾಗ: ಕಲ್ಯಾಣಿ

ಗೋಪಾಲ ಆಡಿದನು ಗೋವುಗಳೊಡಗೂಡಿ। ಗೋಪಾಲ ಬಾಲಕರಾ ಸಮೂಹದಿಂದಾ।।ಪ।। ಗಾನ ನಾಟ್ಯವಗೈದೂ। ಗೋವುಗಳ ಮನಸೆಳೆದೂ। ಗೋಪಾಲ ನಿಂದಿಹನು ಬೃಂದಾವನದಲೀ।।ಅ.ಪ.।। ಬಾಲಗೋಪಾಲನೂ ಬಾಲಕರ ಒಡಗೂಡಿ। ಪಾಲು ಬೆಣ್ಣೆಗಳನ್ನು ಸೂರೆಗೈಯುತಲೀ। ಲೋಲತನದಿಂದಲಿ ವೇಳೆ ವೇಳೆಗೆ ಪೊಕ್ಕು। ಸೂರೆಗೈಯ್ಯುತಲಿಹನು ಗೋಪಿಯರ ಮನೆಗಳಾ।।1।। ಬಾಲಗೋಪಾಲನ ಲೀಲೆಯನು ಪೊಗಳಲು। ಪೇಳಲಸದಳವೆ ಕೇಳೆ ಗೋಪಮ್ಮ। ರಘುರಾಮ ವಿಠಲನ ಮಹಿಮೆಯನು ಪೊಗಳಲು। ಜಗವೆಪೊತ್ತಿಹ ಆದಿಶೇಷನಿಗಸದಳವೇ।।2।।

ವತ್ಸವ ಹರಿ ಕಾಯ್ದನಾ ರಾಗ: ಕಲ್ಯಾಣಿ-ಆದಿತಾಳ

ವತ್ಸವ ಹರಿ ಕಾಯ್ದನಾ ವತ್ಸವ ಕೃಷ್ಣ ಕಾಯ್ದನಾ ಕಾಯ್ದನಾ (2ಸಾರಿ) ಕೊಳಲನೂದಿ ದನಗಳ ಕಾಯ್ದನಾ।।ಪ।। ಕನಕರಚಿತ ಸರಪಣಿಗಳ್ ದನದ ಕರುಗಳ್ ಕೊರಳೊಳು। ಮಿಣಗು ಮಿಣಗು ಮಿಣಗುವಂತ ಅರಳೆಲೆ ಅನೇಕಾಭರಣ ।।1।। ತನ್ನ ವಸ್ತ್ರ ತೆಗೆದು ಕೃಷ್ಣ ಬೆನ್ನಮೇಲೆ ಹೊದಿಸಿದ। ತಿನ್ನು ತಿನ್ನು ಹುಲ್ಲನೆನುತ ಕೊಳಲ ನುಡಿಸುತಾ।।2।। ಅಜಗಳಂತೆ ಇದ್ದ ಕರುಗಳ್ ಗಜಗಳಂತೆ ಬೆಳೆದವು। ತ್ರಿಜಗದೊಡೆಯ ವಿಜಯವಿಠಲ ಜಗಕೆ ದೊರೆಯಾದನು ।।3।।

ಬಾರೋ ನಮ್ಮ ಮನೆಗೆ ರಾಗ: ಮೋಹನ

ಬಾರೋ ನಮ್ಮ ಮನೆಗೆ ಗೋಪಾಲಕೃಷ್ಣ।।ಪ।। ಗೊಲ್ಲ ಬಾಲಕರನ್ನು ನಿಲ್ಲಿಸಿ ಪೆಗಲೇರಿ। ಗುಲ್ಲು ಮಾಡಿದೆ ಮೊಸರೆಲ್ಲ ಸವಿದ ಕೃಷ್ಣ।।1।। ಮೂರ್ಜಗವನೆಲ್ಲ ಬೊಜ್ಜೆಯೊಳಗಿಟ್ಟುಕೊಂಡು। ಗೆಜ್ಜೆಯ ಕಟ್ಟಿ ತಪ್ಪೆಜ್ಜೆಯನಿಕ್ಕುತ।।2।। ಅಂಗನೆಯರ ವ್ರತಭಂಗವ ಮಾಡಿದ। ರಂಗವಿಠಲ ಭವಭಂಗವ ಕಳೆಯಲು।।3।।

ಓಡಿ ಬಾರೆಲೋ ಶ್ರೀ ಕೃಷ್ಣಾ ರಾಗ: ತೋಡಿ

ಓಡಿ ಬಾರೆಲೋ ಶ್ರೀ ಕೃಷ್ಣಾ। ಓಡುತಾಪಾಡುತಾ। ಆಡುತ ಬಾಬಾ।।ಪ।। ಬೆಣ್ಣೆಯತಿನ್ನಲು। ಬೇಡುವೆಕೃಷ್ಣಾ। ಕಣ್ಣ ಮುಚ್ಚಾಟವನಾಡಲು ಬಾಬಾ। ಕನ್ನೆಯರೊಡನಾಡಲು ಬಾಗೋಪೀ। ಚಿನ್ನ ರನ್ನ ಬಿನ್ನಾಣದೆ ಬಾಬಾ।।1।। ರಾಸ ಕ್ರೀಡೆಯನಾಡಲು ಬಾಬಾ। ನೇಸರುಮೂಡಿತು ಬೇಗನೆ ಬಾಬಾ। ಏಸು ಪರೀ ಪರೀ। ಕಾಡಿಪೆ ಬಾಬಾ। ಈಶಜಗದೀಶ ಸರ್ವೇಶನೆ ಬಾಬಾ।।2।।

ನಗುವೋರಲ್ಲೋ ರಂಗಯ್ಯಾ

ನಗುವೋರಲ್ಲೋ ರಂಗಯ್ಯಾ ನಿನ್ನಾಟವಾ ಕಂಡು। ನಗುವೋರಲ್ಲೋ ಕೃಷ್ಣಯ್ಯ ನಿನ್ನಾಟವಾ ಕಂಡು।।ಪ।। ಅಷ್ಟಮಿ ಅರ್ಧರಾತ್ರೀಲಿ ನೀನು ಜನಿಸಿದೀ। ದುಷ್ಟಕಂಸನ್ನಾಕಿಸಿದ ಬಾಗಿಲ ತೆಗೆಸಿದೀ। ಸೃಷ್ಟೀಶ ದುರ್ಗಿಯ ತಂದು ಎದುರಿಗೆ ನಿಲಿಸಿದೀ।।1।। ವಸುದೇವ ದೇವಕಿಯರ ಉದರದಿ ಜನಸಿದೀ। ಶಿಶುವಾಗಿ ಆಲದೆಲೆಯ ಮೇಲೆ ಮಲಗಿದಿ। ಅಸುರ ಪೂತಣಿಯ ಅಸುವ ಹೀರಿದೀ।।2।। ಗೊಲ್ಲತಿಯರ ಮನೆಗಳಿಗೆ ಮೆಲ್ಲನೆ ಪೋಗು। ಚೆಲ್ಲಿಪಾಲ್ ಮೊಸರನೆಲ್ಲಾ ಸೂರೆಮಾಡಿದಿ।। ಮಲ್ಲೇಮಲ್ಲಿಗೆಯ ದಂಡೆ ಜಡೆಗೆ ಮುಡಿಸಿದೀ।।3।।

ಅಮ್ಮ ಎನಕೂಡೆ ಆಡುವ ಮಕ್ಕಳು

ಅಮ್ಮ ಎನಕೂಡೆ ಆಡುವ ಮಕ್ಕಳು। ಅಣಕಿಸುತಾರೆ ನೋಡೇ। ದಿಟವೇನೇ ಅಮ್ಮ। ಅಣಕಿಸುತ್ತಾರೆ ನೋಡೆ॥ಪ॥ ರಂಭೆ ದೇವಕಿದೇವಿಯಾ ವಿವಾಹದ ಸಂಭ್ರಮದ ವೇಳೆಯಲಿ। ಕಂದಹುಟ್ಟುವ ನಿನಗೆ ಕಂಟಕ ಬಹುದೆಂದು ಅಂದು ಹೇಳಿತಂತೆ। ಅಂಬರ ವಾಣಿ। ನಿಂದು ಹೇಳಿತಂತೆ। ದಿಟವೇನೆ ಅಮ್ಮ॥1॥ ಅಂದ ಮಾತನು ಕೇಳಿ ಕಂಸಾಸುರ ತಂಗಿಯ ಕೊಲ್ಲಬೇಕೆ ಕಂದನಾದರೆ। ನಿನಗೆ ತಂದು ಕೊಡುವೆನೆಂದು। ಅಂದು ಹೇಳಿದನಂತೆ। ವಸುದೇವ। ನಿಂದು ಹೇಳಿದನಂತೆ॥ ದಿಟವೇನೆ ಅಮ್ಮ॥2॥ ಆರು ಮಕ್ಕಳ ಪಡೆಯಲು ಕಂಸಾಸುರ। ಪ್ರಾಣ ಹಿಂಸೆಯ ಮಾಡಲು। ಏಳನೆ ಗರ್ಭದಿ ಅಣ್ಣನುದ್ಭವಿಸಲು। ರೋಹಿಣಿಯುದರವಂತೆ। ದಿಟವೇನೆ ಅಮ್ಮ॥3॥ ಎಂಟನೆ ಗರ್ಭದಲಿ ತಮ್ಮಾವನ ಕಂಟಕದ ವೇಳೆಯಲಿ ಟಿಂಣಿಟಿಣಿರೆಂದು। ಮಧುರಾ ಪಟ್ಟಣದಲಿ ಸಂತೋಷವಾಯಿತಂತೆ। ದಿಟವೇನೇ ಅಮ್ಮ॥ ಶಂಖ ಚಕ್ರವ ಹಿಡಿದು। ಚತುರ್ಭುಜದಿ ಆಗನಾಜನಿಸಿದೆನಂತೆ। ಬೇಗದಿಂದಲಿ ಎನ್ನ। ಗೋಕುಲದಿ ಇಡಿರೆಂದು ಬೇಗ ಹೇಳಿದೆನಂತೆ॥ ದಿಟವೇನೆ ಅಮ್ಮ್॥5॥ ಕಾಲ ಸಂಕೋಲೆಸರಿದು। ಖಾಗಿಲಲಾಳಮುಂಡಿಗೆ ಮುರಿದು। ಭೋರೆಂದು ಹರಿಯುವ ನದಿಯು ದಾರಿಯಬಿಡೆ। ಪೋದದಂತೆ ಗೋಕುಲಕೆ ವಸುದೇವ। ದಿಟವೇನೆ ಅಮ್ಮ॥6॥ ಹೋಗಿ ಗೋಕುಲದಲ್ಲಿ ಎನ್ನನು ಬಿಟ್ಟು ದುರ್ಗಿಯ ತಂದನಂತೆ। ಕಾಲನ್ನೆ ಹಿಡಿದು ಅಂಬರಕ್ಕೆಸೆಯಲು ಸಾರಿದಳಂತೆ ಗಗನಕ್ಕೆ॥ ದಿಟವೇನೆ ಅಮ್ಮ॥7॥ ನಿನ್ನ ಕೊಲ್ಲುವ ವೈರಿ ಗೋಕುಲದಿ ಅನ್ಯತ್ರ ಬೆಳೆಯುತಿರೆ ಎನ್ನನೆ ಕೊಲ್ಲುವಿಯಾ। ಎಲ್ಲೊ ಪಾಪಿ ಎನ್ನುತಲಿ। ನಿಂದು ಆಡಿದಳಂತೆ ಜಗಳಾವ ದಿಟವೇನೆ ಅಮ್ಮ॥8॥ ತಾಯಿದೇವಾಕಿಯಂತೆ। ವಸುದೇವ ತಂದೆಯು ನನಗಂತೆ। ಮಾವನ ಬಾಧೆಗೆ। ತಾಳಲಾರದೆ ಎನ್ನ। ಮಾರಿದರಂತೆ ನಿಮಗೆ। ದಿಟವೇನೆ ಅಮ್ಮ॥9॥ ತಾಯಿ ನೀನಲ್ಲವಂತೆ ನಂದಗೋಪ। ತಂದೆಯು ಅಲ್ಲವಂತೆ ವಾರಿಜನಾಭ ಶ್ರೀ ಪುರದಂರ ವಿಠಲನ ಆಡಿಕೊಂಬೋರು ನೋಡೇ ದಿಟವೇನೆ ಅಮ್ಮ॥10॥

ಆಡಹೋದಲ್ಲೇ ಮಕ್ಕಳು ರಾಗ: ಕಮಾಚ್-ಖಂಡಛಾಪು

ಆಡಹೋದಲ್ಲೇ ಮಕ್ಕಳು ಆಡಿಕೊಂಬುವರು ನೋಡಮ್ಮ॥ಪ॥ ನೋಡಿ ನೋಡಿ ಎನ್ನ ಮುಖವ। ನೋಡಿ ಕಣ್ಣು ಮೀಟುವರಮ್ಮ॥ಅ.ಪ॥ ದೇವಕಿ ಹೆತ್ತಳಂತೆ ವಸುದೇವನೆಂಬವ ಪಿತನಂತೆ॥ ಕಾವಲಲ್ಲಿ ಹುಟ್ಟಿದೆನಂತೆ ಮಾವಗಂಜಿಲ್ಲಿ ತಂದರಂತೆ॥1॥ ವಿಷವು ತುಂಬಿದ ಮೊಲೆಯನುಂಡು। ಅಸುರೆಯ ನಾ ಕೊಂದೆನಂತೆ। ನಿಶಿಚರ ಶಕಟಾಸುರನ। ಶಿಶುಗಾಲಿಲೊರಸಿದೆನಂತೆ॥2॥ ನೀನೆನ್ನ ಹಡೆದಿಲ್ಲವಂತೆ ನಾ ನಿನ್ನ ಮಗನಲ್ಲವಂತೆ। ಧೇನು ಕಾಯುವರಿಲ್ಲವೆಂದು ಸಾನುರಾಗದಿ ಸಲಹಿದೆಯಂತೆ॥3॥ ಕಿಚ್ಚ ನಾ ಗಡ ನುಂಗಿದೆನಂತೆ ವತ್ಸಾಸುರನ ಕೆಡಹಿದೆನಂತೆ। ಕಚ್ಚ ಬಂದ ಕಾಳಿಂಗನ। ಕೊಚ್ಚಲು ಮಡುವ ಧುಮುಕಿದೆನಂತೆ॥4॥ ಹದ್ದು ಎನ್ನ ವಾಹನವಂತೆ ಹಾವು ಎನ್ನ ಹಾಸಿಗೆಯಂತೆ। ಕದ್ದು ಬೆಣ್ಣೆಯ ನಾ ತಿಂದೆನಂತೆ। ಮುದ್ದು ಪುರಂದರವಿಠಲನಂತೆ॥5॥

ಸ್ವಾಗತಂ ಕೃಷ್ಣ ಶರಣಾಗತಂ ಕೃಷ್ಣ ರಾಗ: ಮೋಹನ

ಸ್ವಾಗತಂ ಕೃಷ್ಣ ಶರಣಾಗತಂ ಕೃಷ್ಣ। ಮಧುರಾಪುರಿ ಸದನಾಂ ಮೃದು ವದನಾಂ ಮಧುಸೂದನ॥ಪ॥ ಭೋಗದಾಪ್ತಸುಲಭ ಸುಪುಷ್ಪಗಂಧ ಕಳಭ ಕಸ್ತೂರಿ ತಿಲಕ। ಮಹಿಮಾ ಮಮಕಾಂತನಂತ ಗೋಪಕಂದ॥ಅ.ಪ.॥ ಮೃಷ್ಟಿಕಾಶೂರ ಚಾಣೂರಮಲ್ಲ। ಮಲ್ಲವಿಶಾರದ ಮಧುಸೂದನ। ಮೃಷ್ಟಿಕಾಶೂರ ಚಾಣೂರಮಲ್ಲ ಮಲ್ಲವಿಶಾರದ ಕುವಲಯಪೀಡ॥1॥ ಮರ್ದನಕಾಳಿಯ ನರ್ತನ ಗೋಕುಲರಕ್ಷಣ ಸಕಲ ಸುಲಕ್ಷಣ ದೇವ। ಶಿಷ್ಟಜನಪಾಲ ಸಂಕಲ್ಪ ಕಲ್ಪಶತಕೋಟಿ ಅಸಮ ಪರಾಭವ॥2॥ ವೀರ ಮುನಿಜನ ವಿಹಾರಮದನ ಸುಕುಮಾರ ದೈತ್ಯಸಂಹಾರ। ದೇವ। ಮಧುರ ಮಧುರತರ ಇತಿ ಸಾಹಸ ಸಾಹಸವ್ರಜಯುವತೀ ಜನಮಾನಸ ಪೂಜಿತ॥3॥

ಜಗನ್ಮೋಹನನೆ ಕೃಷ್ಣ **ರಾಗ: ಷಣ್ಮುಖಪ್ರಿಯ-ಆದಿತಾಳ**

ಜಗನ್ಮೋಹನನೆ ಕೃಷ್ಣ ಜಗವನೆ ಪಾಲಿಪನೆ।।ಪ।। ಒಬ್ಬಳ ಬಸುರಿಂದಲಿ ಬಂದೆ, ಮತ್ತೊಬ್ಬಳ ಕೈಯಲಿ ನೀ ಬೆಳೆದೆ। ಕೊಬ್ಬಿದ ದೈತ್ಯರ ಒಡಲ ಸೀಳಿದೆ, ಇಂಥ ತಬ್ಬಿಬ್ಬಾಟವನೆಲ್ಲಿ ಕಲಿತೆಯೊ ರಂಗ।।1।। ಲೋಕದೊಳಗೆ ನೀ ಶಿಶುವಾಗಿ, ಮೂರ್ಲೋಕವನ್ನೆಲ್ಲ ಬಾಯಲಿ ತೋರಿದೆ। ಆಕಳ ಕಾಯುವ ಚಿಣ್ಣನೆಂದೆನಿಸಿದೆ। ಈ ಕುಟಿಲವನೆಲ್ಲ ಎಲ್ಲಿ ಕಲಿತೆಯೊ ರಂಗ।।2।। ಮಗುವಾಗಿ ಪೂತನಿಯ ಮೊಲೆಯನುಂಡೆ। ಅವಳು ಜಗದಗಲಕೆ ಬೀಳಲು ಕೆಡಹಿ। ನಗುತ ನಗುತ ಗೋಪಿ ಮೊಲೆಯುಂಡೆ, ಇಂಥ ತಗಿಬಿಗಿಯಾಟಗಳೆಲ್ಲಿ ಕಲಿತೆಯೊ ರಂಗ।।3।। ಮಡುವ ಧುಮುಕಿ ಕಾಳಿಂಗನ ಶಿರದಲ್ಲಿ। ಮೃಡಸುರಪಾದ್ಯರು ಪೊಗಳುತಿರೆ। ಹೆಡೆಯಮೇಲೆ ಕುಣಿದಾಡುತ ಆಡುತ। ಕಡೆ ಸಾರೆಂಬುದನೆಲ್ಲಿ ಕಲಿತೆಯೊ ರಂಗ।।4।। ಒಂದು ಪಾದವ ಭೂಮಿಯಲೂರಿ, ಮತ್ತೊಂದು ಪಾದದಿ ಗಗನವನಳೆದು। ಒಂದು ಪಾದ ಬಲಿ ಶಿರದಲಿಟ್ಟೆ, ಇಂಥ। ಚಂದದ ವಿದ್ಯೆಯನೆಲ್ಲಿ ಕಲಿತೆಯೊ ರಂಗ।।5।। ನಂಬಿದ ಪ್ರಹ್ಲಾದನು ಸ್ತುತಿಸೆ ನೀ ಕಂಭವನೊಡೆದು ಬಂದಾಕ್ಷಣದಿ। ದೊಂಬಿಲಿ ದೈತ್ಯನ ಒಡಲ ಸೀಳಿದೆ, ಇಂಥ ಡಂಬರದಾಟವನೆಲ್ಲಿ ಕಲಿತೆಯೊ ರಂಗ।।6।। ಅಂಬರೀಷ ದ್ವಾದಶಿ ಸಾಧಿಸುತಿರೆ, ಆಗ ಬಂದು ದೂರ್ವಾಸರು ಶಾಪ ಕೊಡಲು। ಮುಂದಕೆ ಸಾಧನವಹುದೆಂದು ಚಕ್ರವ ಹಿಂದಟ್ಟಿಸುವುದನೆಲ್ಲಿ ಕಲಿತೆಯೊ ರಂಗ।।7।। ವರಬಲದಿಂದಲಿ ಭಸ್ಮಾಸುರನು। ಹರನ ಶಿರದಿ ಕರವಿಡೆ ಬರಲು। ತರುಣಿಯ ರೂಪವ ತಾಳಿ ಆ ದೈತ್ಯನ। ಹರಣವನಳಿದುದನೆಲ್ಲಿ ಕಲಿತೆಯೊ ರಂಗ।।8।। ವೇದಗಳರಸಿ ಕಾಣದ ಪರಬ್ರಹ್ಮ ನೀ ಮೋದದಿಂದ ವಿದುರನ ಮನೆಗೈದಿ। ಆದರದಿ ಪಾಲ ಕುಡಿದುಳಿದುದ ನೀ। ಮೇದಿನಿಗಿಳಿಸಿದುದೆಲ್ಲಿ ಕಲಿತೆಯೊ ರಂಗ।।9।। ದುರ್ಯೋಧನ ತನ್ನೊಡ್ಡೋಲಗದೊಳು। ಹರಿಯನು ಕರೆಸೆಂದರುಹಲು ಬಂದು। ಧರಣಿಯುಂಗುಷ್ಟದ-ಲೊತ್ತುತ ಅವನನು। ಉರುಳಿಸಿದಾಟವ ನೆಲ್ಲಿ ಕಲಿತೆಯೊ ರಂಗ।।10।। ಆ ಸಭೆಯಲ್ಲಿ ಖಳ ದುರ್ಯೋಧನನಾಗ ಮೋಸದಿ ಕೃಷ್ಣನ ಕಟ್ಟಿನಲು ಸಾಸಿರರೂಪಿನ ಕೃಷ್ಣನೆಂದೆನಿಸಿದ। ವೇಷವನೆಲ್ಲ ಎಲ್ಲಿ ಕಲಿತೆಯೊ ರಂಗ।।11।। ಸರ್ಪಬಾಣ ಮೊರೆಯುತ ಬರಲು ಕಂದರ್ಪ ಪಿತನೆ ಕರುಣದಿ ನೀನು। ಒಪ್ಪುವ ಪಾರ್ಥನ ರಥವ ನೆಲಕೆ ಒತ್ತಿ। ತಪ್ಪಿಸಿದಾಟವನೆಲ್ಲಿ ಕಲಿತೆಯೊ ರಂಗ।।12।। ದ್ರೋಣನ ಸಂಗ್ರಾಮದಿ ಹರಿಚಕ್ರವ। ಮಾಣದೆ ಸೂರ್ಯಗೆ ಮರೆಮಾಡಿ। ಕಾಣಿಸಿ ಸೈಂಧವನನು ಕೊಲಿಸಲಾದೆ ಇಂಥ। ಜಾಣತನವ ನೀನೆಲ್ಲಿ ಕಲಿತೆಯೊ ರಂಗ।।13।। ಆ ಶಿರವಾತನ ತಂದೆಯ ಕರದಲಿ। ಸೂಸುತ ರಕುತವು ಬೀಳಲು ಅದನು। ಬೀಸಿ ಬಿಸಾಡಲು ಅವನ ಶಿರವನಾಗ ಸಾಸಿರ ಮಾಡಿದುದೆಲ್ಲಿ ಕಲಿತೆಯೊ ರಂಗ।।14।। ಆದಿಮೂಲನೆ ಎಂದು ಕರಿರಾಜ ಕರೆಯಲು। ಯಾದವರಾಯ ನೀ ನಗುತಲಿ ಬಂದು। ಆದರದಿಂದ ಗಜೇಂದ್ರನ ಸಲಹಿದೆ। ಆ ದಿವ್ಯಾಟಗಳೆಲ್ಲಿ ಕಲಿತೆಯೊ ರಂಗ।।15।। ಎಂದೆಂದಿಗೂ ಗುಣಗಳ ಪೊಗಳಲು। ಇಂದ್ರಾದಿಗಳಿಗೆ ಅಳವಲ್ಲ। ಮಂದರಧರ ಶ್ರೀ ಪುರಂದರವಿಠಲನೆ ಒಂದೊಂದಾಟವನೆಲ್ಲಿ ಕಲಿತೆಯೊ ರಂಗ।।16।।

ಬಾರಯ್ಯ ದೇವಕಿ ಕಂದ **ರಾಗ: ಕುಂತಲವರಾಳಿ**

ಬಾರಯ್ಯ ದೇವಕಿ ಕಂದ ಯಶೋದ ನಂದ।।ಪ।। ಬಾರಯ್ಯ ಬೇಗನೆ ಎನ್ನ ಚಿನ್ನ ಗೋವಿಂದ।।ಅ.ಪ।। ಮಾಯದ ಮಗುವೆಂದರಿಯದೆ ಪೂತನಿ। ಉಪಾಯದಿ ಸ್ತನವುಣಿಸೆ। ನೀನು ಅಪಾಯವರಿಯದೆ ನಟಿಸಿ ಪಾಲುಂಡವಳ। ಕಾಯವ ಪೀಡಿಸಿ ಮರ್ದನ ಮಾಡಿದೆ।।1।। ಕಾಡಿನಲ್ಲಿದ್ದವರ ಆಪತ್ತು ಕಳೆದೆ। ಬೇಡಿ ಕರೆದವಳ ಮಾನವ ಕಾಯ್ದೆ। ಓಡಿ ಬಂದು ಕರಿಯ ವೈರಿಯ ತರಿದೆ। ಕಾದಾಡಿ ಸತಿಯಳ ಸಂಭ್ರಮದಿ ತಂದೆ।।2।। ನವನೀತ ಚೋರ ಅಂಬುಜನೇತ್ರ। ಭವಪಾಪದೂರ ಚಿತ್ತ ಚಕೋರ। ಅವನಿಯೊಳ್ ಧೀರ ಗೋಕುಲವಿಹಾರ। ಸುವಸನಾಪಹಾರ ಪುಣ್ಯಚರಿತ್ರ।।3।। ಉರಗನ ಮೇಲೆ ಧಿಮಿಧಿಮಿಕೆಂದೆ। ಪೋರ ಕರೆಯಲು ನೀ ಧಾವಿಸಿ ಬಂದೆ। ಅರಸನ ಸಂಗಡ ಆಟ ಹೂಡಿದೆ। ನರನು ಕೂಗಲು ಪದವಿಯನಿತ್ತೆ।।4।। ಸುರನದಿ ಮಗನ ಮಾತನ್ನುಳಿಸಿದೆ। ಹರನ ಪಿತನ ವರವ ನಿಜವಾಗಿಸಿದೆ। ತರಣಿಯ ತಡೆದು ಭಕುತನ ಪೊರವೆ। ಧೀರ ಪ್ರಸನ್ವೇಂಕಟೇಶನೆಂದೆನಿಸಿದೆ।।5।।

ನೀಲಲೋಚನ ಬಾರೋ

ನೀಲಲೋಚನ ಬಾರೋ ಬಾಲಗೋಪಾಲ। ಲೀಲೆಯನು ತೋರುತಲಿ ಮೆಲ್ಲಮೆಲ್ಲನೆ ನಗುತ॥ಪ॥ ಗೋಲ್ಲಭಾಮೆಯರೊಡನೆ ನಲಿಯದಲೆ ನೀಯನ್ನ। ಸೊಲ್ಲನಾಲಿಸಿಮುದದಿ ಕುಸುಮಸದನಕೆ ಬೇಗ॥ಅ.ಪ॥ ಎಲ್ಲಿರುವೆ ಎನ್ಮನದ ನಲ್ಲ। ಹೇ ಗೊಲ್ಲ! ಬಲ್ಲೆ ನೀ ಮನ್ಮನದ ವಿರಹತಾಪವನೆಲ್ಲ। ಎಲ್ಲೆಲ್ಲಿ ಅಲೆದು ನಾಬೆಂಡಾದೆನಲ್ಲ। ನೀನಿಲ್ಲದೊಡೆ ಬದುಕಲಾರೆ ಕೇಳೆಲೋ ಕಳ್ಳ॥1॥ ರವಿಯು ಅಸ್ತಾದ್ರಿಯನು ಸೇರಿ ಮರೆಯಾಗುತಿಹ। ಕವಿಯುತಿದೆ ಕತ್ತಲೆಯ ಅಬಲೆ ನಾ ಹೆದರಿಹೆನೋ। ಆವ ಗೋಪಿಯ ಮಧುರ ತೋಳಸೆರೆಯಲಿ ಶಿಲುಕಿ। ಸವಿಯಧರ ಸವಿಯುತಲಿ ಮೈಮರೆತು ಮಲಗಿರುವೇ॥2॥ ಅಂಬರದಿ ಚಂದ್ರ ತಾ ಚಂದ್ರಿಕೆಯ ಬಲೆಬೀಸಿ। ಜಂಬದಿಂ ನಗುನಗುತ ವಿರಹಿಗಳ ಕೆಣಕುತಿಹ। ಮುಂಬಾಗಿ ಸಮತರುಗಳ್ ಕಂಪಿನಿಂ ತೂಗುತಿರೆ। ರಾಗ ಸೂಸುತ ಮಂದಮಾರುತನು ಬೀಸುತಿಹ॥3॥ ಕುಂಜಸದನದಿ ಗಂಧ ಫಲಪಾಲು ತಾಂಬೂಲ ರಂಜಿಸಲು ನಿನ್ನಧರ ಕಾದುಕುಳಿತಿದೆ ದೇವ। ಕಂಜಪದ ಸ್ಪರ್ಶಕೆ ಸುಮತಲ್ಪ ಕೊರಗುತಿದೆ। ಅಂಜಿಸದೆ ಬಂದೆನ್ನ ರಂಜಿಸೆಲೋ ಕೃಷ್ಣಾ॥4॥ ಏನಿದೇನಿದು ಮಧುರ ಮುರಳಿನಾದದ ಇಂಪು। ಏನಿದೆನ್ನಯ ಹೃದಯ ತುಂಬಿ ಪುಳಕಿಪ ಕಂಪು। ಎನ್ಮದರ ರನ್ನ ನಿಕೋ ಬಂದು ನಿಂತಹ ನಹಹ! ಧನ್ಯಳಾದೆನೋ ನಿನ್ನ ಕಂಡು ಜಯ ಕಮಲೇಶ॥5॥

ಹಾಲಕುಡಿಸಿದಾಳೆ ಗೋಪಿ — ರಾಗ: ಸಾರಂಗ

ಹಾಲುಕುಡಿಸಿದಾಳೆ ಗೋಪಿ। ಬಾಲಕೃಷ್ಣಗೆ। ಕ್ಷೀರಸಾಗರಾದಿ ಶಯನ। ನಿತ್ಯತೃಪ್ತಗೇ॥ಪ॥ ಪ್ರಾರ್ಥವೇಶ ಸುತನಾಪಾದ ಪೂಜೆಮಾಡುತಾ। ಪಾಕಶಾಸನಾದಿ ವಿನುತ। ಪಾಲಿಸೆನುತಾ। ಗೋಪಿದೇವಿರಾಮಕೃಷ್ಣರನ್ನು ಕರೆಯುತಾ। ಆಕಳ್ಹಾಲಕಾಸಿಕೊಡುವೇ ಬನ್ನಿರೆನ್ನುತಾ॥1॥ ಆಲದೆಲೆಯ ಮೇಲೆ ಮಲಗಬೇಡ ರಂಗನೇ। ಹಾವಿನ್ಹಾಸಿಗೆಯು ಬಹಳ ಕ್ರೂರಕೃಷ್ಣನೇ। ಮಾವಕಂಸನನ್ನು ಕೊಂದಶ್ರಮವುಕಂದನೇ। ಪೀರಿ ಅಸುವಸೆಳೆದು ಉಂಡ ತೋರಬಾಯನೆ ॥2॥ರಾಮನಿನ್ನ ಹೃದಯನಾಮಾಮೃತಧೇನು ಕರೆದೇನು ಜ್ಞಾನವಿಮಲ ಬಟ್ಟಲೊಳಗೆ ಇಡುವೆನು॥ ನೇಮವೆಂಬೋ ಘೃತವಬೆರಸಿಧ್ಯಾನಿಸುವೆನು। ಪ್ರೇಮದಿಂದಹರಿಯು ಬಂದು ಪಾನಗೈವನು॥3॥ ವಾಸುದೇವ ಭಾಸುರಾಂಗ ಬಹಳ ಹಸಿದನೋ। ಮೀಸಲಾದ ಕ್ಷೀರಗೋಪೀ। ಕಾಸಿಥಮ್ಮಗೇ। ಸಾಸಿರನಾಮದಲಿ ಕರೆಯೇ ಅಣ್ಣನೊಡನೇ ವೇಷಧಾರಿ ನಗುತ ಬಂದು ಕುಡಿದ ಸುಮ್ಮನೇ॥4॥ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನೇ। ಕ್ಷತ್ರಿಯಕುಲವ ತರಿದ ರಾಮ ಕೃಷ್ಣ ಬೌದ್ಧಗೆ। ಪೃಥ್ವಿಯೊಳಗೇ ಮಾಯ ಕಲಿಮಹತ್ವ ತೋರ್ದಗೇ। ಭಕ್ತಿಯಿಂದ ಭಜಿಸೇ ಗುರುಸ್ವರೂಪ ತೋರ್ದಗೇ॥5॥

ಬಾಲಕೃಷ್ಣಂ ಭಾವಯಾಮಿ — ರಾಗ: ಗೋಪಿಕಾವಸಂತ-ಆದಿತಾಳ

ಬಾಲಕೃಷ್ಣಂ ಭಾವಯಾಮಿ ಬಲ ರಾಮಾನುಜಂ ವಸುದೇವಜಂ॥ಪ॥ ನೀಲಮೇಘ ಗಾತ್ರಂ ಸ್ತುತಿಪಾತ್ರಂ ನಿತ್ಯಾನಂದಕಂದಂ ಮುಕುದಂ॥ಅ.ಪ॥ ಕಮಲ ಲೋಚನಂ ಕರ್ಮಮೋಚನಂ ಕಪಟ ಗೋಪಿಕಾವಸಂತಂ ಅಮರಾರ್ಚಿತ ಚರಣಂ ಭವತರಣಂ ಅರ್ಜುನಸಾರಥಿಂ ಕರುಣಾನಿಧಿಂ ಮಮತಾರಹಿತಂ ಗುರುಗುಹ ವಿಹಿತಂ ಮಾಧವಂ ಸತ್ಯಭಾಮಾಧವಂ ಕಮಲೇಶಂ ಗೋಕುಲ ಪ್ರವೇಶಂ ಕಂಸಭಂಜನ ಭಕ್ತರಂಜನಂ॥ಚ॥

ಬಾಲಗೋಪಾಲ ಪಾಲಯಶುಮಾಂ — ರಾಗ: ಭೈರವಿ-ಆದಿತಾಳ

ಬಾಲ ಗೋಪಾಲ ಪಾಲಯಾಶುಮಾಂ। ಭಕ್ತವತ್ಸಲ ಕೃಪಾಜಲಧೇ॥2ಸಾರಿ॥ಪ॥ ನೀಲನೀರದ ಶರೀರ। ಧೀರತರ ನೀರಜಕರ ನಿರುಪಮಾನಂದಕರ। ಲೀಲಯಾಗೋಪವೇಶಧರ ಮುರಳೀಧರ ಶ್ರೀಧರ ದಾಮೋದರವರ॥ಅ.ಪ.॥ ಚಾಣೂರ ಮಲ್ಲಹರಣ ನಿಪುಣತರ ಚರಣ ನಿಹತ ಶಕಟಾಸುರ ಮುರಹರ। ಮಾಣಿಕ್ಯ ಮಕುಟಹಾರ ವಲಯಧರ। ಮತ್ತೇಭಕುಂಭ ಭೇದನ ಪಟುತರ। ಅಣವಾದಿ ವಿಜಯ ಮಾನಸಾಗರ। ಅಪಹತಕಂಸಾಸುರ ನತಭೂಸುರ।

ವಾಣೀಶಾರ್ಚಿತ ಪೀತಾಂಬರಧರ । ವೈಜಯಂತಿ ವನಮಾಲಾಧರ। ದ್ರೋಣಕರ್ಣ ದುರ್ಯೋಧನಾದಿ ಹರ। ದ್ರೌಪದೀಮಾನ ಸಂರಕ್ಷಣಕರ। ವೈಣಿಕ ಗಾಯಕ ಗುರುಗುಹನುತ ಪುರವೈರಿ ವಿಹಿತ ಗೋಪಿಕಾಮನೋಹರ॥1॥

ಕೈಯ ತೋರೋ ಕರುಣೆಗಳರಸನೆ **ರಾಗ: ಕಲ್ಯಾಣಿ-ಆದಿತಾಳ**

ಕೈಯ ತೋರೋ ಕರುಣೆಗಳರಸನೆ ಕೈಯ ತೋರೊ॥ಪ॥ ಕೈಯಲಿ ಬೆಣ್ಣೆ ಮುದ್ದೆಯನೀವ ಕೈಯ ತೋರೋ॥ಅ.ಪ.॥ ಅಂಗುಲಿಯಲಿ ಹರಳುಂಗುರವಿಟ್ಟ ಕೈಯ ತೋರೋ। ಅಂಗೈಯಲಿ ಧ್ವಜ ಪದ್ಮ ರೇಖೆಯ ಕೈಯ ತೋರೋ। ಶೃಂಗಾರ ಶಂಖಚಕ್ರವ ಧರಿಸಿದ ಕೈಯ ತೋರೋ। ಅಂಗನೆಯರ ಕುಚಕುಂಭದೊಳಿರಿಸಿದ ಕೈಯ ತೋರೋ॥1॥ ಬಲಿಯನು ವಂಚಿಸಿ ದಾನವ ಬೇಡಿದ ಕೈಯ ತೋರೋ। ಒಲಿದು ನರನಿಗೆ ಸಾರಥಿಯಾದ ಕೈಯ ತೋರೋ। ಹಲವು ಪುಷ್ಪವ ತುರುಬಿನೊಳಿಟ್ಟ ಕೈಯ ತೋರೋ। ಲಲನೆಗೊಲಿದು ಪಾರಿಜಾತವ ತಂದ ಕೈಯ ತೋರೋ॥2॥ ಬಡಬ್ರಾಹ್ಮಣನವಲಕ್ಕಿಯ ಬೇಡಿದ ಕೈಯ ತೋರೋ। ಕೊಡೆಮಾಡಿ ಗೋವರ್ಧನ ಗಿರಿಯೆತ್ತಿದ ಕೈಯ ತೋರೋ। ಕಡು ಹಿರಣ್ಯನ ಕರುಳನು ಬಗೆದ ಕೈಯ ತೋರೋ। ಧೃಡ ಪ್ರಹ್ಲಾದನ ಬಿಡದೆ ಸಲಹಿದ ಕೈಯ ತೋರೋ॥3॥ ಬಲ್ಲಿದ ಮಲ್ಲರ ಮರ್ದಿಸಿ ಮೆರೆದ ಕೈಯ ತೋರೋ। ಬಿಲ್ಲನು ಎಡಗೈಯಿಂದಲಿ ಎತ್ತಿದ ಕೈಯತೋರೋ। ಖುಲ್ಲ ಪೂತಣಿಯ ಅಸುವನು ಹೀರಿದ ಕೈಯ ತೋರೋ। ಮೆಲ್ಲನೆ ಕುಬುಜೆಯ ಡೊಂಕು ತಿದ್ದಿದ ಕೈಯ ತೋರೋ॥4॥ ಆಕಾಶದೊಳಿಹ ಚಂದ್ರನ ಕರೆದ ಕೈಯ ತೋರೋ। ನಾಕಪತಿಗಳಿಗಭಯವನೀವ ಕೈಯ ತೋರೋ। ಅನೇಕ ಸ್ವರಗಳಿಂದ ಕೊಳಲ ನುಡಿಸುತಿಹ ಕೈಯ ತೋರೋ। ಶ್ರೀಕಾಂತ ನಮ್ಮ ಪುರಂದರವಿಠ್ಠಲ ಕೈಯ ತೋರೋ॥5॥

ಯಾರಿಗೆ ಪೇಳಲಮ್ಮ **ರಾಗ: ಮೋಹನ**

ಯಾರಿಗೆ ಪೇಳಲಮ್ಮ ಶ್ರೀ ಕೃಷ್ಣನ ಮಹಿಮೆ ಇನ್ಯಾರಿಗೆ ತಿಳಿವುದಮ್ಮ ॥ಪ॥ಹೊತ್ತಾರೆ ಎದ್ದು ಕುಳಿತು, ಗೋಪಮ್ಮ ತಾನು ಮುತ್ತ ಪೋಣಿಸುತಿಹಳು। ಅತ್ತಲಿಂದ ಕೃಷ್ಣ ಬಂದು ಒಂದು ಮುತ್ತು ಕೈಲಿ ಪಿಡಿದು। ಹತ್ತಿರಿದ್ದ ಹುಡುಗರ ಸಹಿತ ಹಿತ್ತಲಲ್ಲಿ ಹಾಕಿಹೋದ॥1॥ ಸಿಡಿದು ಸಿಟ್ಟಲಿ ಎದ್ದಳು ... ಗೋಪಮ್ಮ ತಾನು। ದುಷ್ಟ ಕೃಷ್ಣನ ಮೇಲೆ। ಕೇರಿ ಕೇರಿಗಳ ಹುಡುಕಿ ದಾರಿ ತಪ್ಪಿ ತಿರುಗಿದಳು। ಮೋರೆ ಕಾಣಲಿಲ್ಲವೆಂದು ಚೀರಿ ಚೀರುತ ಬಂದಾಳಾಕೆ॥2॥ ಕರುಣಿಸೋ ಕಂದಯ್ಯನೆ। ಕರಗಳ ಪಿಡಿದು ಕರೆತಂದಳರಮನೆಗೆ। ಹೊತ್ತು ಬಹಳ ಆಯಿತೆಂದು ತುತ್ತು ಮಾಡಿ ಉಣಿಸಿದಳು। ಮುತ್ತು ಏನೊ ಆಯಿತೆಂದು ಒತ್ತಿ ಒತ್ತಿ ಕೇಳಿದಳು॥3॥ ಹೆತ್ತ ತಾಯಿಯ ಕರೆದು। ಹಿತ್ತಲೊಳಗೆ ಮುತ್ತಿನ ಗಿಡ ತೋರಿದ। ಎಂಟೆಂಟು ಪಂಥ ಒಡೆದು ಗೊಂಚಲಾಗಿ ಜಗ್ಗುತಿರಲು। ಕೊಯ್ದು ಕೊಯ್ದು ರಾಶಿ ಹಾಕಿದ ಪುರಂದರವಿಠಲರಾಯ॥4॥

ಬಾಲಕೃಷ್ಣಂ ಅತಿ ಸುಂದರಂ **ರಾಗ: ಮುಖಾರಿ-ಆದಿತಾಳ**

ಬಾಲಕೃಷ್ಣಂ ಅತಿ ಸುಂದರಂ॥ಪ॥ ನಂದಕುಮಾರಂ ನವನೀತ ಚೋರಂ ದೇವಕೀ ನಂದನ ಸುಕುಮಾರಂ॥ಅ.ಪ॥ ವೇಣುಗಾನ ಲೋಲಂ ಯಶೋದ ಗೋಪಬಾಲಂ ದಾನವ ಕುಲ ಸಂಹಾರಂ ಸುರಜನ ಮಂದಾರಂ॥ಚರಣ॥

ಬಾಲೆಯರೆ ಬನ್ನಿ ಮುದದಿ **ರಾಗ: ಕುರಂಜಿ**

ಬಾಲೆಯರೆ ಬನ್ನಿ ಮುದದಿ। ಪೂಜೆಗೆಯ್ಯುವಾ। ಕೃಷ್ಣನ ಪೂಜೆಗೆಯ್ಯುವಾ॥ಪ॥ ಕೋಲನಾಡಿ। ಪಾಡಿಗೋಪ ಬಾಲರೆಡೆಯೊಳು। ಗೋಪಬಾಲೆರೆಡೆಯೊಳು। ಲೀಲೆಯಿಂದಲಿರುವ ವನದಿ। ಬಾಲಕೃಷ್ಣನು॥1॥ ಮಲ್ಲಿಕಾದಿ। ಫುಲ್ಲಕುಸುಮವೆಲ್ಲಮೋದದಿ। ಕುಸುಮವೆಲ್ಲ ಮೋದದಿ। ಚೆಲ್ವುತನವನಮೇಲೆ ನುತಿಸು। ತಲ್ಲಿನಲಿಯುವಾ। ನುತಿಸು ತಲ್ಲಿನಲಿಯುವಾ॥2॥ ಆಡಿಪಾಡಿ ಕೂಡಿನಲಿದು। ನೋಡಿಕುವರನಾ ನಲಿದು ನೋಡಿಕುವರನಾ। ಲೀಲೆಯಿಂದಲಿರುವವನಂದದಿ ಬಾಲಕೃಷ್ಣನು ಇರುವ ಬಾಲಕೃಷ್ಣನು॥3॥ ಪಾಲುಮೊಸರುಬೆಣ್ಣೆಗಳನು। ಪಾದಕರ್ಪಿಸಿ। ಕೃಷ್ಣ ಪಾದಕರ್ಪಿಸಿ। ಪಾಲಿಸೆಂದು ನೃಹರಿಕೃಷ್ಣನ ಕಾಲಿಗೆರಗುವಾ॥4॥

ಮುದ್ದು ತಾರೋ ರಂಗ **ರಾಗ: ಶುದ್ಧಧನ್ಯಾಸಿ**

ಮುದ್ದು ತಾರೋ ರಂಗ ಎದ್ದು ಬಾರೊ॥ಪ॥ ಅಂದವಾದ ಕರ್ಪೂರದ ಕರಡಿಗೆಯ ಬಾಯೊಳೊಮ್ಮೆ ॥ಅ.ಪ॥ ವಿಷವನುಣಿಸಲು ಬಂದ ಅಸುರೆ ಪೂತನಿಯ ಕೊಂದೆ, ವಶವಲ್ಲವೊ, ಮಗನೆ ನಿನ್ನ, ವಿಷವನುಂಡ ಬಾಯೊಳೊಮ್ಮೆ ॥1॥ ಕಡೆವ ಸಮಯದಿ ಬಂದು, ಕಡೆವ ಸತಿಯ ಕೈಯ ಪಿಡಿದು॥ ಕಡೆದ ಬೆಣ್ಣೆ ಮೊಸರನೆಲ್ಲ ಒಡನೆ ಮೆದ್ದ ಬಾಯೊಳೊಮ್ಮೆ॥2॥ ತೊರವೆಯ ನಾರಸಿಂಹ ವರದ ಪುರಂದರವಿಠಲ ಹರವಿ ಹಾಲನೆಲ್ಲ ಕುಡಿದ ನೊರೆಹಾಲಿನ ಬಾಯೊಳೊಮ್ಮೆ॥3॥

ಬೆಣ್ಣೆ ಕದ್ದ ನಮ್ಮ ಕೃಷ್ಣ **ರಾಗ: ಶುದ್ಧಧನ್ಯಾಸಿ**

ಬೆಣ್ಣೆ ಕದ್ದ ನಮ್ಮ ಕೃಷ್ಣ ಬೆಣ್ಣೆಕದ್ದನಮ್ಮ। ಬೆಣ್ಣೆಯ ಕದ್ದು ಜಾರುತ ಬಿದ್ದು। ಮೊಣಕಾಲೂದಿಸಿ ಕೊಂಡನಮ್ಮ॥ಪ॥ ಬಿಂದಿಗೆ ಬಿದ್ದು ಸಿಡಿಯಲು ಸದ್ದು ಬೆಚ್ಚಿದ ಗೋಪಿಯ ತುಂಟನಮ್ಮ॥1॥ ತಾಯಿಬಂದಳೋಡಿ, ಕಂದನ ಕಣ್ಣೆನಲ್ಲಿ ಕೋಡಿ ಕಣ್ಣಲೆ ತಾಯಿಯು ಸಿಟ್ಟನು ತಳೆದು ಸೊಂಟಕೆ ಕೈಯಿಟ್ಟು, ಆದಳು ಅರೆಚಣ ಭೀಕರಕಾಳಿ ದುರುದುರು ಕಣ್ ಬಿಟ್ಟು॥2॥ ಹಣೆತುಟಿ ಕೆನ್ನೆಗೆ ಬೆಣ್ಣೆಮೆತ್ತಿದ ಹೊರಗಣ ನೋಟಕ್ಕೆ, ಇಳಿಯಿತು ಕೋಪ ಅರಳಿತು ಕೆಂದುಟಿ, ತುಂಟನ ಆಟಕ್ಕೆ ತಪ್ಪಿದ ದಂಡಕೆ ನಿಟ್ಟುಸಿರೆಳೆದ। ಬೆಣ್ಣೆಗಳ್ಳ ನೀಲ॥3॥ ಥಟ್ಟನೆ ಅಳುವುದ ನಿಲ್ಲಿಸಿ ನಕ್ಕ ಬಾಯಗಲಿಸಿ ಬಾಲ ಹರಡಿದ ಬೆಳದಿಂಗಳ ಜಾಲ ಅವನ ಅಕುಟಿಲ ಬೆಣ್ಣೆಯಂಥ ನಗು ಕಾಯಲಿ ಜಗದವರ ಸಂತತ ನಗಿಸಲಿ ನಗದವರ॥4॥

ಅಮ್ಮಾ ನಾನು ದೇವರಾಣೆ **ರಾಗ: ದೇಶ್**

ಅಮ್ಮಾ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ। ಎಲ್ಲಾ ಸೇರಿ ನನ್ನ ಬಾಯಿಗೆ ಬೆಣ್ಣೆಯ ಮೆತ್ತಿದರಮ್ಮ॥ಪ॥ ನೀನೆ ನೋಡು ಬೆಣ್ಣೆ ಗಡಿಗೆ ಸೂರಿನ ನಿಲುವಲ್ಲಿ। ಹೇಗೆ ತಾನೆ ತೆಗೆಯಲಿ ಅಮ್ಮ। ನನ್ನ ಪುಟ್ಟ ಕೈಗಳಲ್ಲಿ॥1॥ ಶ್ಯಾಮ ಹೇಳಿದ ಬೆಣ್ಣೆ ಮೆತ್ತಿದ ತನ್ನ ಬಾಯಿ ಒರೆಸುತ್ತಾ। ಬೆಣ್ಣೆ ಒರೆಸಿದಾ ಕೈಯ ಬೆನ್ನ ಹಿಂದೆ ಮರೆಸುತ್ತಾ॥2॥ ಎತ್ತಿದ ಕೈಯ ಕಡಗೋಲನ್ನು ಮೂಲೆಲಿಟ್ಟು ನಕ್ಕಳು ಗೋಪಿ। ಸೂರದಾಸ ಪ್ರಿಯಶ್ಯಾಮನ ಮುತ್ತಿಟ್ಟು ನಕ್ಕಳು ಗೋಪಿ॥3॥

ಬೇಡ ಕೃಷ್ಣ ರಂಗಿನಾಟ ಸೀರೆ ನೆನೆವುದು

ಬೇಡ ಕೃಷ್ಣ ರಂಗೀನಾಟ ಸೀರೆ ನೆನೆವುದು। ಮಧ್ಯರಾತ್ರಿ ಚಂದ್ರ ಭಳಿಯ ತುಂಬುತಿರುವುದು॥ ರಾಧೆಕೊಟ್ಟ ರವಿಕೆ ಜರಿರೇಷ್ಮೆಯಾಗಿರೆ। ಕೃಷ್ಣನ ಬಳಿ ರಂಗು ತುಂಬಿದಗಡಿಗೆ ತಾನಿರೆ॥ ಹೇಳಿದರು ಕೃಷ್ಣ ನಿನ್ನ ಆಟವೇ ನಿದೂ। ದೇವ ನಿನ್ನ ಬುದ್ಧಿಯು ತಾ ಮನಕೆ ಬಾರದು॥ ಮನಕೆ ಬಾರದು ಅಧರಾತ್ರಿ ಚಂದ್ರ ಭಳಿಯ ತುಂಬುತಿರುವುದು॥ ಬೇಡಕೃಷ್ಣ॥

ಗೋಪಾಲ ಕೃಷ್ಣ ಬಾರೋ

ಗೋಪಾಲ ಕೃಷ್ಣ ಬಾರೋ। ಗೋವಿಂದ ವಿಠಲ ಬಾರೋ। ಗೋವರ್ಧನಾನೆ ಬಾರೋ॥ಪ॥ ಗೊಲ್ಲಾರ ಮನೆಯ ಪೊಕ್ಕು। ಚೆಲ್ಲಿಪಾಲ್ಬೆಣ್ಣೆ ಮೊಸರು। ಕಳ್ಳತನವ ಮಾಡಿ। ಚೆಲ್ಲೆನಿಸಿದ ಧೀರಾ॥1॥ ನೀರೆಯರ್ ನೀರೊಳ್ ನಿಂತೂ। ನೀರಾಟ ವಾಡುತಿರಲೂ। ಸೀರೆಗಳನ್ನು ಕದ್ದು। ವೃಕ್ಷವನೇರಿದ ಧೀರಾ॥2॥ ಕಾಳಿಯ ಮಡುವ ಧುಮುಕಿ। ಕಲಕೀದ ವಿಷವನೆಲ್ಲಾ। ಕಾಳಿಂಗನ್ಹೆಡೆಯ ಮೇಲಿ ಧಿಮಿಕೆಂದು ಕುಣಿದ ಧೀರಾ॥3॥

ಆನೆ ಬಂದಿತಮ್ಮಮ್ಮ **ರಾಗ: ಶ್ರೀರಾಗ-ಆದಿತಾಳ**

ಆನೆ ಬಂದಿತಮ್ಮಮ್ಮ। ಮರಿಯಾನೆ ಬಂದಿತಮ್ಮಮ್ಮ॥ಪ॥ ತೊಲಗಿರೆ ತೊಲಗಿರೆ ಪರಬ್ರಹ್ಮ। ಬಲು ಸರಪಣಿ ಕಡಕೊಂಡು ಬಂತಮ್ಮ॥ಅ.ಪ.॥ ಕಪಟನಾಟಕದ ಮರಿಯಾನೆ। ನಿಕಟಸಭೆಯಲಿ ನಿಂತಾನೆ। ಶಕಟನ ಬಂಡಿಯ

ಮುರಿದಾನೆ। ಕಪಟನಾಟಕದಿಂದ ಸೋದರ ಮಾವನ, ನಕಟಕಟೆನ್ನದೆ ಕೊಂದಾನೆ॥1॥ ಕೀಳುಭುವನವನುಂಡಾನೆ, ಸ್ವಾಮಿ ಬಾಲಕನೆಂಬ ಚೆಲ್ವಾನೆ। ಬಲ್ಲ ಗೋವುಗಳ ಕೂಡೆ ನಲಿದಾನೆ, ಚೆಲುವ ಕಾಳಿಂಗನ ಹೆಡೆಯಲಾಡುತ್ತ। ಸೊಬಗು ಹೆಚ್ಚಿದ ಪಟ್ಟದಾನೆ। ಮದ ಸೊಕ್ಕಿ ಬರುತಾನೆ॥2॥ ಭೀಮಾರ್ಜುನರನು ಗೆಲಿಸ್ಯಾನೆ। ಪರಮ ಭಾಗವತರ ಪ್ರಿಯಾನೆ। ಮುದದಿಂದ ಮಥುರೆಲಿ ನಿಂತಾನೆ। ಮದಮುಖದಸುರರ ದಿಗಿಲಿಟ್ಟು ಕೊಂದು। ಪದುಮಲೋಚನ ಪುರಂದರವಿಠಲನೆಂಬಾನೆ॥3॥

ಬಾಣನ ಭಂಗಿಸಿದಂಥ ಭಾವಜನಯ್ಯನೆ — ರಾಗ: ಕಾನಡ

ಬಾಣನ ಭಂಗಿಸಿದಂಥ ಭಾವಜನಯ್ಯನೆ ಬಾರೋ॥ಪ॥ ವೇಣುನಾದ ಬಾರೋ ವೆಂಕಟರಮಣನೆ ಬಾರೋ॥ಪ॥ ಪೂತನೀಯ ಮೊಲೆಯುಂಡ ನವನೀತ ಚೋರನೆ ಬಾರೋ। ಭೀತ ರಾವಣನ ಸಂಹರಿಸಿದ ಸೀತಾನಾಯಕ ಬಾರೋ॥1॥ ಬಿಲ್ಲು ಮುರಿದು ಮಲ್ಲರ ಗೆದ್ದ ಫುಲ್ಲನಾಭನೆ ಬಾರೋ। ಗೊಲ್ಲತಿಯರೊಡನೆ ನಲಿದ ಚೆಲ್ವ ಮೂರುತಿಯೆ ಬಾರೋ॥2॥ ಮಂಧರಗಿರಿಯನೆತ್ತಿದ ಇಂದಿರ ರಮಣನೆ ಬಾರೋ। ಕುಂದದೆ ಗೋವುಗಳ ಕಾಯ್ದ ನಂದನಂದನನೆ ಬಾರೋ॥3॥ ಪುಂಡರಿಕಾಕ್ಷನೆ ಬಾರೋ॥ ನಾರಿಯರ ಮನೆಗೆ ಹೋಗುವ ವಾರಿಜನಾಭನೆ ಬಾರೋ। ಈರೇಳು ಭುವನದ ಕಾಯ್ದ ಮಾರನಯ್ಯನೆ ಬಾರೋ॥4॥ ಶೇಷಶಯನಮೂರುತಿಯಾದ ವಾಸುದೇವನೆ ಬಾರೋ। ದಾಸರೊಳು ವಾಸನಾದ ಪುರಂದರ ವಿಠಲನೆ ಬಾರೋ॥5॥

ಮಥುರೆಯೊಳು ವಸುದೇವ ದೇವಕೀ — ರಾಗ: ಕುರಂಜಿ

ಮಥುರೆಯೊಳು ವಸುದೇವ ದೇವಕೀ ಉದರದೊಳು ಉದಿಸಿದಾನೆ। ಮುದವೆದ್ದು ಬೆಳಗೆನ್ನ ಮನೆಗೆ ಬಂದಾನೆ। ಅದ್ಭುತ ಲೀಲೆಯಿಂದೆನ್ನ ಮುಗಿಸಿದಾನೆ। ಮುದ್ದಾದ ಮುಂಗೈ ಮುರಾರಿ ಮೆರೆವಾನೆಗೆ॥ ಜಯಮಂಗಳಂ ನಿತ್ಯ ಶುಭಮಂಗಳಂ॥ ಗೊಲ್ಲತೀರಮನೆಗೆ ನಿಲ್ಲದೇ ಪೋಗುವಾನೆ ಚೆಲ್ಲಿ ಪಾಲ್ ಮೊಸರುಗಳೆಲ್ಲಾ ತಿನ್ನಚೆಲ್ವಾನೆ। ಗಟ್ಟಿ ಮದ್ದಿ ಮರನ ಗಮನದಿಂದ ಮುರಿದಾನೆಗೆ ಜಯಮಂಗಳಂ ನಿತ್ಯ ಶುಭಮಂಗಳಂ॥

❖ ❖ ❖

ಯಶೋಧೆಗೆ ಶ್ರೀಕೃಷ್ಣನ ವಿಶ್ವರೂಪದರ್ಶನ

ಮಗುವು ಕಾಣಯ್ಯ — ರಾಗ: ಕಾಮವರ್ಧಿನಿ-ಆದಿತಾಳ

ಮಗುವು ಕಾಣಯ್ಯ। ಮಾಯದಮಗುವು ಕಾಣಯ್ಯ। ಸುಗುಣ ವಾದಿರಾಜನೆ। ಮೂಜಗವ ತನ್ನ ಉದರದೊಳಿಟ್ಟ॥ಪ॥ ಏಕಾರ್ಣವನಾಗಿ ಸಕಲ ಲೋಕವಾಕಾರವಳಿಯೆ। ಏಕಮೇವಾದ್ವೀತಿಯನೆಂಬಾಗಮಕೆ ಸಮವಾಗಿ। ಶ್ರೀಕರಾಂಬುಜದಿಂ ಪಾದಾಂಗುಲಿಯ ತೆಗೆದು ಬಾಯೊಳಿಟ್ಟು। ಶ್ರೀಕಾಂತ ವಟದೆಲೆಯ ಮೇಲ್ಮಲಗಿ ಬ್ರಹ್ಮನ ಪಡೆದ॥1॥ ಮಾಯಾ ಪೂತನಿಯ ಕೊಂದು ಕಾಯವ ಕೆಡಹಿ ಶಕಟನ। ಸಾಯಬಡಿದು ವತ್ಸ್ಯಧೇನುಕನ ವೃಷಭನ। ನೋಯನೊಂದ್ಯಮಳಾರ್ಜುನರಿಗೆ ಸಾಯುಜ್ಯವನಿತ್ತು। ತನ್ನ ತಾಯಿಗೆ ತಾ ಮಣ್ಣ ಮೆದ್ದು ಬಾಯಬಿಟ್ಟು ತೋರಿಸಿದ॥2॥ ಶ್ರುತಿಗತಿಗಗೋಚರನಚ್ಯುತನ ಭಾವನಾದಿ ಮೂರ್ತಿ। ರತಿಪತಿಪಿತನು ಶೇಷದೇವಾಧ್ಯನು ಕ್ಷಿತಿಗಧಿಕ। ವೇಲಾಪುರಪತಿ ವೈಕುಂಠ ಕೇಶವನು। ಯತಿಯೆ ನೀ ನೋಡಲು ಶರಣಾಗತನ ತೊಡೆಯ ಮೇಲೆ ಕುಳಿತ॥3॥

ಗೋಪಿಗೆ ಬಾಯೊಳು ಬ್ರಹ್ಮಾಂಡ ತೋರಿದ ಕೃಷ್ಣ

ಗೋಪಿಗೆ ಬಾಯೊಳು ಬ್ರಹ್ಮಾಂಡ ತೋರಿದ ಕೃಷ್ಣ॥ಪ॥ ದಿನಮಣಿಯು ಮೈದೋರೆ ಕೃಷ್ಣನ ಜನನಿ ಮಂಚವ ನಿಳಿದಳು

ಕನಕ ಕಲಶದಿ ಮುಖವ ತೊಳೆದಳು ತನುವು ಸಿಂಗರವಾದಳು॥ಅ.ಪ.॥ ಮುಂಗುರುಳು ಮುಂದಲೆಯ ತಿದ್ದುತ ಅಂಗೈಯ್ಯಲೇಸರಿಸುತ ಮಂಗಳಾಂಗಿಯು ಮಡಿಯನುಟ್ಟಳು, ತಿದ್ದಿ ತಿಲುಕವ ಫಣೆಯೊಳಿಟ್ಟು। ಕೃಷ್ಣಾ॥ ಎದ್ದು ಬಂದಳು ಕಂದನೆಚ್ಚರಿಸದಂತೆ ಒಂದು ನಿಮಿಷದಿ ಕದವ ತೆರೆದಳು ಕುಂಜದೊಳಗಿನ (ನಿಲುವು) ಗಟ್ಟಿ ಮೊಸರನು ತಂದು। ಭೂಮಿಯೊಳಗಿಟ್ಟಳು ॥ಕೃಷ್ಣಾ॥ ಬ್ರಹ್ಮದೇವನ ಪಿತನ ಮಹಿಮೆಯ ತನ್ನ ಮನದಲಿ ಪಾಡಿ ಪೊಗಳುತ ದುಮ್ಮದುಡುಕಿಂದು ಕಡೆಯುತ ಎಮ್ಮೆ ಆಕಳ ಮೊಸರನು॥ ದಧಿಯು ಮಥಿಸುವ ಧ್ವನಿಯ ಕೇಳುತ ಕಡಲ ಶಯನನು ಮಂಚವನಿಳಿದನು, ಕಡೆವ ಗೋಪಿಯ ಬಳಿಗೆ ಬಂದು ನಿಂತನು ಕಡಲಶಯನ ಕೃಷ್ಣನು॥ ಪದ್ಮನಾಭನ ಪಾಡಿಪೊಗಳಲು ಮಥಿಸುವ ಕಡೆಗೋಲು ನೇಣನು ಭದ್ರವಾಗಿಯೆ ಪಿಡಿದು ನಿಂತನು ಮುದ್ದು ಗೋಪಾಲಕೃಷ್ಣನು॥ ಬಿಡುಬಿಡು ಕಡೆಗೋಲು। ನೇಣನು ಕಡೆದ ಬೆಣ್ಣೆಯ ಕೊಡುವೆನು ಕಡೆಗೆ ಸಾರೋ ಎನುತ ಗೋಪಿಯು ಕಡೆಯುತ್ತಿದ್ದಳು ಮೊಸರನು॥ ರಚ್ಚೆ ಹೋರಿ ಅಳುವ ಮಗನನು ನೋಡಿ ಬಚ್ಚಿಟ್ಟು ತಾ ಮೊಸರನು ಬೆಚ್ಚಗಣ್ಣಿನ ಗುಮ್ಮನೆಂದರೆ ಬೆಚ್ಚಿ ಬೆದರುತ ನಿಂದನು॥ ಖೇಚರರೊಳಗೆ ಅರಸಿನೋಡಿದೆ ಖೇಚರತೆ ಕಾಣದೆ ಆಧರಿಸಿಕೊಂಡಳು, ಗೋಪಿಕೃಷ್ಣ ಸೂಸಿದನು ಅವತಾರದಲಿ॥ ಹೊಕ್ಕೆನಂಬುಧಿಯೊಳಗೆ ಬ್ರಹ್ಮನ ಶಕ್ತಿಯ ಕದ್ದಸುರನ ತಿವಿದು (ತಿಕ್ಕಿ) ನೀರೊಳು ಕೊಂದು ಬಂದೆನು ಅಲ್ಲಿ ಕಾಣೆನು ಗುಮ್ಮನ॥ ಕ್ಷೀರಶರಧಿಯ ಮಥಿಸುವ ಸಮಯದಿ ಸುರರಿಗಿತ್ತೆನೆ ಸುಧೆಯ ಕಲಶವ ಅಲ್ಲಿ ಕಾಣೆನು ಗುಮ್ಮನ। ಜರೆವ ಮನುಜರ ಅರಿವಿಗಾರದೆ ಶರಧಿಯಲಿ ಮನೆ ಮಾಡಿದೆ ಖಳನರರಿಬ್ಬರನು ಕೊಂದೆನು ಅಲ್ಲಿ ಕಾಣೆನು ಗುಮ್ಮನ। ಅಬ್ಬರದಿ ರೂಪರಡ (ನರಸಿಂಹ) ತಾಳಿದ ಕೊಬ್ಬಿದಸುರನ ಕೊಂದು ಬಂದೆ ಅಲ್ಲಿಕಾಣೆನು ಗುಮ್ಮನ॥ ಮೆಟ್ಟಿದೆನೆ ಧಿತಿಸುತನ ಶಿರವನು ಒತ್ತಿದೆನೆ ಪಾತಾಳಕೆ ಕೊಟ್ಟು ಬಂದೆನೆ ಬಲಿಗೆ ರಾಜ್ಯವ ಅಲ್ಲಿ ಕಾಣೆನು ಗುಮ್ಮನ॥ ಮುನಿಯ ರಾಣಿಗೆ (ಅನಸೂಯ) ಮುದ್ದು ತೋರಿದೆ ಜನನಿಯನು ಸಂಹರಿಸಿದೆ ಶಿವಧನುವ ಶ್ರೀರಾಮನಿಗಿತ್ತೆನೆ ಅಲ್ಲಿ ಕಾಣೆನು ಗುಮ್ಮನ॥ ಕಲ್ಲನೆಬ್ಬಿಸಿ (ಅಹಲ್ಯೆ) ಗುಮ್ಮನರಿಸಿದೆ ಬಿಲ್ಲ ಕೆಳಗೆ ಹುಡುಕಿದೆ ಎಲ್ಲ ಕಪಿಗಳ ನಡುವೆ ತಡಕಿದೆ ಅಲ್ಲಿ ಕಾಣೆನು ಗುಮ್ಮನ ಮಧುರೆಯೊಳಗ್ಹುಟ್ಟಿ ಗೋಕುಲದಿ ಬೆಳೆದೆ ಮಾವ ಕಂಸನಕೊಂದನೆ ಎಲ್ಲ ಗೋಪಿಸ್ತ್ರೀಯರ ಮನೆಯೊಳಗೆ ಹುಡುಕಿದೆ ಅಲ್ಲಿ ಕಾಣೆನೆ ಗುಮ್ಮನ॥ ತ್ರಿಪುರ ಸತಿಯರ ವ್ರತವ ಕೆಡಿಸಿದೆ ತ್ರಿಪುರಪರೆಲ್ಲರ ಗೆಲಿದೆನೆ ಚಲಪ ತನದಲ್ಲಿ ಬೌದ್ಧನೆನಿಸಿದೆ ಅಲ್ಲಿ ಕಾಣೆನು ಗುಮ್ಮನ॥ ಹತ್ತು ದಿಕ್ಕಲಿ ಅರಸಿದೆ ಹತ್ತಿ ನೋಡಿದೆ ಹಯವನೆ ಮತ್ತೆರಡರಲಿ ಹದಿನಾಲ್ಕರಲಿ ಮೂಡಿದೆ ಅಲ್ಲಿ ಕಾಣೆನು ಗುಮ್ಮನ॥ ಕ್ಷೀರಶರಧಿಯೊಳಗಿರುವ ಗುಮ್ಮನ ತೋರದಿದ್ದರೆ ಬಿಡುವೆನೆ ಮಾರವೈರಿಯ ಆಣೆ ಎಂದನು ತೋರಿಸೆಂದನು ಗುಮ್ಮನ॥ ಕಂದನಾಡಿದ ಮಾತನ್ನೇ ಕೇಳಿ ಚೆಂದದಿಂದ ಗೋಪಿಯು ತಂದೆ ಗಂಗಾಧರನ ಗುಮ್ಮನು ಬಂದು ನೀನೋಡೆಂದಳು॥ ಕೊಡುಳ್ಳ ಮುದಿ ಎತ್ತನೇರಿದ ಕಾಡಿನೊಳು ಮನೆಮಾಡಿದ ಕಾಡಿಬೇಡಿದರಿಲ್ಲ ಗುಮ್ಮನ ರೂಢಿಯಲಿ ನೋಡೆಂದಳು॥ ತಾಯಿಯಾಡಿದ ಮಾತನ್ನೇ ಕೇಳಿ ಬಾಯ ತೆಗೆದು ತೋರಿದ। ಬಾಯೊಳಗೆ ಬ್ರಹ್ಮಾಂಡವನೇ ಕಂಡಳು ನಾರಾಯಣನೇ ಶರಣೆಂದಳು। ಚಂದ್ರ ಸೂರ್ಯರಿಬ್ಬರನುಕಂಡಳು, ಬೃಂದಾವನವ ಕಂಡಳು ಬಂದಾವನದೊಳಗೆ ಶ್ರೀಹರಿಯು ನಲಿಯುತ್ತಿದ್ದ ಚಂದವನೇ ತಾ ಕಂಡಳು॥ ಶಶಿಧರನ ಮಹಿಮೆಯನು ಕಂಡಳುವಿಷವನುಂಬುದ ಕಂಡಳು ಬಸವಬಾಗಿಲೊ ಳಿರುವುದನೆ ಕಂಡಳು। ಪಶುಪತಿಗೆ ಶರಣೆಂದಳು॥ ಈರೇಳು ಭುವನವೆನೆ ಕಂಡಳು ನಾರಾಯಣನ ವದನದಿ ಬಾಯಮುಚ್ಚೋ ರಂಗಯ್ಯಾ ಎನುತಲಿ॥ ಬೇಡಿಕೊಂಡಳು ಕೃಷ್ ಮಂಗಳಾ ಕೃಷ್ಣಾ ಮಂಗಳಾ ಜಯವೆಂದು ಪಾಡಿರಿ ಮಂಗಳಾ ಶುಭರೆಂದು ಪಾಡಿರಿ ಮುದ್ದು ಪುರಂದರ ವಿಠಲನ॥

ನೀಲ ನೀಲ ಮೇಘಶ್ಯಾಮ — ರಾಗ: ಮಾಂಡ್

ನೀಲ ನೀಲ ಮೇಘಶ್ಯಾಮ ಓಡಿ ಓಡಿ ಬಾ ನೀಲಾದೇವಿ ರಮಣನೆ ನಿಗಮವೇದ್ಯ ಬಾ॥ಪ॥ ಬಾಯಿ ಬಾಯಿ ಪುಟ್ಟ ಬಾಯಿ ಮಣ್ಣನುಂಡ ಬಾಯಿ ಮಣ್ಣು ಕಾಣಲಿಲ್ಲ ಜಗವ ಕಂಡಳು ತಾಯಿ॥1॥ ಗೆಜ್ಜೆ ಗೆಜ್ಜೆ ಪಾದಗೆಜ್ಜೆ ಉಡಿಗೆಜ್ಜೆ ಉಡಿದಾರ। ಹೆಜ್ಜೆ ಹೆಜ್ಜೆ ಹಾಕುತ ಗೆಜ್ಜೆ ಕೃಷ್ಣಗೆ ಶೃಂಗಾರ॥2॥ ದೂರ ದೂರ ದುರಿತಕೆ ದೂರ ನಿನ್ನ ನಾಮ। ಸಾರಿಸಾರಿ

ಭಜಿಪೆ ನಿನ್ನ ಪೊರೆಯೊ ಎನ್ನ ಶ್ಯಾಮ॥3॥ ಸತ್ಯ ಸತ್ಯ ಸತ್ಯ ರಮಣ ಸತ್ಯ ಸಂಕಲ್ಪನೆ। ಸತ್ಯ ನಿತ್ಯ ತೋರು ತಂದೆ ಪುರಂದರವಿಠಲನೆ॥4॥

ಕೃಷ್ಣಾ ಎಂದರೆ ಭಯವಿಲ್ಲ **ರಾಗ: ಸಿಂಧೂಭೈರವಿ**

ಕೃಷ್ಣಾ ಎಂದರೆ ಭಯವಿಲ್ಲ। ಶ್ರೀ ಕೃಷ್ಣಾ ಎನ್ನದೇ ಸುಖವಿಲ್ಲ॥ಪ॥ ಕೃಷ್ಣಾ ಎಂದರೆ ದಿನವೆಲ್ಲಾ। ಬಾಯಾರಿಕೆ ಹಸಿವಿನ ಹಂಗಿಲ್ಲಾ॥2॥ ಕೃಷ್ಣ ಹರೇ ಜಯ ಕೃಷ್ಣಹರೆ॥ ಜೈ ಜೈ ಜೈ ಜೈ ಕೃಷ್ಣಹರೇ॥1॥ ತಾಯಿಗೆ ತನ್ನಯ ಬಾಯಲ್ಲಿ ಕಂದನು ತೋರಿದ ಜಗವೆಲ್ಲಾ। ಮಾನವನೆಂಬುವನಿವನಲ್ಲ। ಆ ದೇವರ ದೇವನೆ ಈ ಗೊಲ್ಲಾ॥2॥ ಗಿರಿಯನು ಎತ್ತಿದ ಬೆರಳಲ್ಲಿ ಕಾಳಿಂಗನ ತುಳಿದ ಫಣೆಯಲ್ಲಿ। ಶಕಟಬಕಾಸುರ ಕಂಸನನು ಸಂಹರಿಸಿದನೊಂದೇಕ್ಷಣದಲ್ಲಿ॥3॥

ಕೃಷ್ಣಾ ನೀ ಬೇಗನೆ ಬಾರೋ **ರಾಗ: ಯಮನ್‌ಕಲ್ಯಾಣಿ**

ಕೃಷ್ಣಾ ನೀ ಬೇಗನೆ ಬಾರೋ॥ಪ॥ ಬೇಗನೆ ಬಾರೋ ಮುಖವನ್ನೇ ತೋರೋ॥ಅ.ಪ॥ ಕಾಶೀ ಪೀತಾಂಬರ ಕೈಯಲ್ಲಿ ಕೊಳಲು ಪೂಸಿದ ಶ್ರೀಗಂಧ ಮೈಯೊಳಗಮ್ಮ॥1॥ ಕಾಲಲಂದುಗೆ ಗೆಜ್ಜೆ ನೀಲದ ಬಾವುಲಿ। ನೀಲವರ್ಣನೆ ನಾಟ್ಯವಾಡುತ ಬಾರೋ॥2॥ ಉಡಿಯಲ್ಲಿ ಉಡಿಗೆಜ್ಜೆ ಬೆರಳಲ್ಲಿ ಉಂಗುರ ಕೊರಳಲ್ಲಿ ಹಾಕಿದ ವೈಜಯಂತಿಮಾಲೆ॥3॥ ಹುಟ್ಟಿದ್ದು ಮಥುರೆಲಿ ಬೆಳೆದದ್ದು ಗೋಕುಲ। ಜಲಕ್ರೀಡೆಯಾಡಿದ್ದು ಯಮುನಾತೀರ॥4॥ ತಾಯಿಗೆ ಬಾಯಲ್ಲಿ ಜಗವನ್ನೇ ತೋರಿದ ಜಗದೋದ್ಧಾರಕ ನಮ್ಮ ಉಡುಪಿ ಶ್ರೀ ಕೃಷ್ಣ ॥5॥

ನಂದಗೋಕುಲದಿ ಗೋಪಿ (ಕೃಷ್ಣನಿಗೆ ಚೇಳುಕಚ್ಚಿದ್ದು)

ನಂದಗೋಕುಲದಿ ಗೋಪಿ ಕಂದನೆಂದು ಮೋಹಿಸುತ್ತ। ಇಂದಿರೇಶನ ಪಾಡಿದಾಳೆ ಹರುಷದಿಂದಲಿ॥1॥ ಬೃಂದಾವನವ ಸಾರಿಸಿ ಗೋವಿಂದನ್ನಾ ಕೆಳಗಿಟ್ಟು। ಬಂಗಾರದ ಪೊಂಗಳ ಶದಲಿ ತಂದಳೆ ಗಂಗೆ ಉದಕವನು॥2॥ ಪೀತಾಂಬರದ ಸೆರಗಾ ಹಿಡಿದಿದ್ದ ಲಕ್ಷ್ಮಿಪತಿ। ಬಂದುನಿಂತ ಬ್ರಾಹ್ಮಣ ನಂದನ ಮನೆಯಲಿ॥3॥ ಜ್ಞಾನಪಾತ್ರೆಯೊಳಗೆ ಮೌನ ಪದಾರ್ಥತುಂಬಿ। ಬ್ರಾಹ್ಮಣರ ಮುಂದೆ ತಂದಿಟ್ಟಳೆಶೋದೆ॥4॥ ಸ್ವಯಂಪಾಕವನೆ ಮಾಡಿಕೊಂಡು। ಹರುಷದಿಂದ ಬ್ರಾಹ್ಮಣ। ಲಕ್ಷ್ಮಿನರಸಿಂಹನ್ನ ಸ್ತೋತ್ರಮಾಡ್ತಾ ಕುಳಿತನು॥5॥ ಹಿಂದಕ್ಕೆ ತಿರುಗಿನೋಡಲಿ ಗೋವಿಂದ ಬೆನ್ನ ಹಿಡಿದಿದ್ದ। ನಂದನ ಸುತನು ಮುಟ್ಟಿದನೆಂದು ಕಿಂಚಿತ್ ಸಂದೇಹಪಟ್ಟನು॥6॥ ಇಂದಿರೆರಮಣ ಗೋವಿಂದನೆಂದು ತಿಳಿಯಲಿಲ್ಲ। ಮಂದಮತಿಯು ಆದ ಸಮಂತ ನಾಗಲೇ। ಕೋಲು ತೆಗೆದು ಗೋಪಿದೇವಿ ಬಾಲಕಾನ ಬಡಿವೆನೆಂದು। ಬಾಗಿಲಾ ಹಿಂದುಗಡೆಯಲಿ ಅಡಗಿದ ಕೃಷ್ಣನ್ನ॥8॥ ಅಡಗಿದಾಕೃಷ್ಣನ್ನ ಸೆಳೆದು ತಂದು ಗೋಪಿದೇವಿ। ಬಿಗಿದು ಕಟ್ಟಿದಾಳೆ ವಜ್ರದ್ ಕಂಭಕ್ಕಾಗಲೇ॥9॥ ವಿಪ್ರರಾಕ್ಷೋಭಿತವು ತಪ್ಪದು ದೋಷಗಳು ನಮಗಿನ್ನೆತ್ತ ಕಡೆಯಲಿ ಬಿಟ್ಟು ಬರಲಿ ರಂಗನೆಂದಳು॥10॥ ಬ್ರಾಂಬರಾ ಕ್ಷೋಭಿತಾವು ಬಾಹುದು ದೋಷಗಳು ನಮಗಿನ್ನಾವ ಕಡೆಯಲಿ ಬಿಟ್ಟು ಬರಲಿ ಕೃಷ್ಣನೆಂದಳು॥11॥ ನಂದಗೋಪ ಬಗಲೊಳು ಗೋವಿಂದನಾ ಎತ್ತಿಕೊಂಡು। ಬೈದವಾರಾರು ನಿನಗೆ ಹೇಳು ಎಂದನು॥12॥ ಅನ್ಯಾಯದಿಂದ ನನ್ನಮ್ಮ ಎನ್ನ ಬೈದಳೆಂದು। ಬಣ್ಣಿಸಿ ಬಣ್ಣಿಸಿ ದುರುಳಕೃಷ್ಣ ಅಳುತಲಿದ್ದನು॥13॥ ದಶಮ ಸ್ಕಂದದ ಭಾಗವತ ಯಶೋದೆ ನಂದನ ಸುಕೃತ। ಪುಸಿಯಲ್ಲ ವೈಕುಂಠ ಮುಕ್ತಿಗೆ ಸಾಧನ॥14॥ ಕೃಷ್ಣನಾ ಕರೆದು ಗೋಪಿ। ಎತ್ತಿ ಮುದ್ದಾಡಿತಾ ಮೊಲೆಯಕೊಟ್ಟು। ಸೂರಿನಡಿಯಲಿ ಹೋಗದಿರೋಕೃಷ್ಣ। ಚೇಳುಘನಾವೆಂದಳು॥ ದಾದಿಯರ ಹತ್ತಿರಿರಿಸಿ ಹರಿವೆಯಲಿ। ಹಾಲಕಾಸಲು ಪೋದಳು॥ ಅತ್ತ ದಾದಿಯರ ಮರಳು ಮಾಡಿ ಶ್ರೀಕೃಷ್ಣ। ಪೋದನೆ ಅದರ ಬಳಿಗಾಗಿ॥ ಚೇಳಿನ ಹುತ್ತಗಳ ಮೆಟ್ಟಿ। ಥರಥರದ ಮಾಲೆಯ ಕಟ್ಟಿದಾನು॥ ಒಂದರ ಕೊಂಡಿ ಒಳಗೆ। ಮತ್ತೊಂದರಾ ಕೊಂಡಿ ಬಿಗಿದು। ಹಿಂಡು ಚೇಳಿನ ಮಾಯವ ಶ್ರೀಕೃಷ್ಣ ಚೆಂದಕ್ಕೆ ಪಿಡಿದು ತಂದು॥ ಮನೆಯ ಮಂದಿರದಲ್ಲಿ ಚೇಳುಗಳು ಹರಿದಾಡುವುದ ಕಂಡಳು॥ ನನ್ನ ಹರಿ ಎಲ್ಲಿ ಹೋದನೆನುತ ಗೋಪಿದೇವಿ ಕಳವಳ ಪಡುತಿದ್ದಳು॥ ಹೊರಗೆ ಮಂದಿರದಲ್ಲಿ ಕೃಷ್ಣನ ಆರ್ಭಟವನೆ ಕಂಡಳು॥ ನನ್ನ ಅಚ್ಯುತಗೆ ಚೇಳು ಉರಿತವು ಔಷಧವ ಮುಟ್ಟಿ ಮಾಡುವರಕಾಣೆ॥ ಹತ್ತುಸಾವಿರ ಹೊನ್ನು ಅದಕೊಪ್ಪುವ। ಮುತ್ತಿನಾ ಮೈ ದೊಡವೆಯನ್ನು॥ ಇಡುವೋರು ಯಾರೋ ಕಂದಾ। ಎಂದು ಗೋಪಿ

ಕಳವಳಾಬಡು ತಿದ್ದಳು।। ಆರು ಸಾವಿರ ಹೊನ್ನು ಆದಕ್ಕೊಪ್ಪುವಾ ನೀಲದಾ ಮೈ ದೊಡವೆಗಳನು।। ಕಡುಕೂಸು ಕಾಣೆ ಕಂದಾ ಎಂದು ಗೋಪಿ। ಕಳವಳಾಪಡುತಿದ್ದಾಳಾ।। ಬಾಯಿತೆಗೆಯೋ ಮಗನೇ ನಾನಿನ್ನ। ಚೀಳು ನೋಡೇನೆಂದಳು।। ವದನವನೆ ತೆರೆದನಾಗ। ಹದಿನಾಲ್ಕು ಭುವನವನೆ ಕಂಡಳಾಗ।। ಅತ್ತಿ ಆಲವನೆ ಕಂಡಳು ಅದರೊಳಗೆ ಪುಷ್ಪದಾ ಮರ ಕಂಡಳು।। ಬೃಂದಾವನ ಕಂಡಳು ಅದರೊಳಗೆ ರಂಗನಾಥನ ಕಂಡಳು।। ಮುಂದೆ ಕಾವೇರಿ ಕಂಡಳು ಗೋಪಿದೇವಿ। ನಾರಾಯಣನ ವದನದೊಳಗೆ।। ವಿಷ್ಣು ವಿಶ್ವವನೆ ಕಂಡಳು ಗೋಪಿದೇವಿ। ನಾರಾಯಣನ ವದನದೊಳಗೆ।। ಮಗನಲ್ಲ ಕೃಷ್ಣ ಕೇಳೋ ಅವತಾರದಲಿ। ಮತ್ಸ್ಯಾವತಾರ ನೀನು।। ಹದಿನಾಲ್ಕು ಭುವನಗಳನು ಅಡಗಿಸಿಹೆ ನಿನ್ನೊಳು ಪುರಂದರ ವಿಠಲನಮ್ಮ।।

❖ ❖ ❖

ಶ್ರೀ ಬಾಲಕೃಷ್ಣನ ಅಲಂಕಾರದ ಹಿಗ್ಗು

ಹರಿ ಕುಣಿದ ನಮ್ಮ ಹರಿ ಕುಣಿದ — **ರಾಗ: ಕುಂತಲವರಾಳಿ-ಆದಿತಾಳ**

ಹರಿ ಕುಣಿದ ನಮ್ಮ ಹರಿಕುಣಿದ।।ಪ।। ಅಕಳಂಕ ಚರಿತ। ಮಕರ ಕುಂಡಲಧರ। ಸಕಲರ ಪಾಲಿಪ ಹರಿ ಕುಣಿದ।।1।। ಅರಳೆಲೆ ಮಾಗಾಯಿ ಕೊರಳ ಮುತ್ತಿನ ಸರ। ತರಳೆಯರೊಡಗೂಡಿ ಹರಿ ಕುಣಿದ।।2।। ಅಂದುಗೆ ಪಾಡಗ ಬಿಂದಲಿ ಬಾಪುರಿ। ಚಿಂದದಿ ನಲಿವುತ ಹರಿ ಕುಣಿದ।।3।। ಉಟ್ಟ ಪಟ್ಟೆಯ ದಟ್ಟಿ ಇಟ್ಟ ಕಾಂಚಿಯ ಧಾಮ। ದಿಟ್ಟ ಮಲ್ಲರ ಗಂಡ ಹರಿ ಕುಣಿದ।।4।। ಪರಮ ಭಾಗವತರ ಕೇರಿಯೊಳಾಡುವ। ಪುರಂದರವಿಠಲ ಹರಿ ಕುಣಿದ।।5।।

ಮೂರುತಿಯನು ನಿಲ್ಲಿಸೊ — **ರಾಗ: ಕಮಾಚ್-ರೂಪಕತಾಳ**

ಮೂರುತಿಯನು ನಿಲ್ಲಿಸೊ ಮಾಧವ ನಿನ್ನ।।ಪ।। ಎಳೆ ತುಳಸಿಯ ವನಮಾಲೆಯು ಕೊರಳೊಳು।। ಪೊಳೆವ ಪೀತಾಂಬರದಿಂದಲೊಪ್ಪುವ ನಿನ್ನ।।1।। ಮುತ್ತಿನ ಸರ ನವರತ್ನದುಂಗುರವಿಟ್ಟು। ಮತ್ತೆ ಶ್ರೀ ಲಕ್ಷ್ಮೀಯು ಉರದೊಳುಪ್ಪುವ ನಿನ್ನ।।2।। ಭಕ್ತ ಕಲ್ಪತರು ಭಾಗ್ಯದ ಸುರಧೇನು। ಮುಕ್ತಿದಾಯಕ ಪುರಂದರವಿಠಲ ನಿನ್ನ।।3।।

ಕಂಡೆ ನಾ ಕನಸಿನಲಿ — **ರಾಗ: ಕಾನಡ-ಅಟ್ಟತಾಳ**

ಕಂಡೆ ನಾ ಕನಸಿನಲಿ ಗೋವಿಂದನ।।ಪ।। ಕಂಡೆ ನಾ ಕನಸಿನಲಿ ಕನಕರತ್ನದ ಖಣಿಯ। ನಂದನ ಕಂದ ಮುಕುಂದನ ಚರಣವ।।ಅ.ಪ.।। ಅಂದಿಗೆ ಕಿರುಗೆಜ್ಜೆ ಘಲಿರೆಂಬ ವಾದ್ಯದಿ। ಬಂದು ಕಾಳಿಂಗನ ಹೆಡೆಯನೇರಿ। ಧಿಂಧಿಮಿ ಧಿಮಿಕೆಂದು ತಾಳಗತಿಗಳಿಂದಾ। ನಂದದಿ ಕುಣಿವ ಮುಕುಂದನ ಚರಣವ।।1।। ಉಟ್ಟ ಪೀತಾಂಬರ ಉಡಿಯ ಕಾಂಚನಧಾಮ। ತೊಟ್ಟ ಮುತ್ತಿನ ಹಾರ ಕೌಸ್ತುಭವು।। ಕಟ್ಟಿದ ವೈಜಯಂತಿ ತುಳಸಿ ವನಮಾಲೆ। ಇಟ್ಟ ದ್ವಾದಶನಾಮ ನಿಗಮ ಗೋಚರನ।।2।। ಕಿರುಬೆರಳಿನ ಮುದ್ರೆಯುಂಗುರ ಮುಂಗೈಯ। ಕರದಲ್ಲಿ ಕಂಕಣ ನಳಿತೋಳುಗಳ।। ವರ ಚತುರ್ಭುಜ ಶಂಖ ಚಕ್ರದಿ ಮೆರೆವನ। ನಿರುತದಿ ಒಪ್ಪುವ ಕರುಣಾಮೂರುತಿಯ।।3।। ಬಣ್ಣದ ತುಟಿ ಭಾವರಚನೆಯ ಸುಲಿಪಲ್ಲು। ಸಣ್ಣ ನಗೆಯ ನುಡಿ ಸವಿಮಾತಿನ।। ಪುಣ್ಯಚರಿತ್ರನ ಪೊಳೆವ ಕಿರೀಟನ। ಕಣ್ಣು ಮನ ದಣಿಯದು ಕಂಸಾರಿ ಕೃಷ್ಣನ।।4।। ಮಂಗಳವರ ತುಂಗಭದ್ರದಿ ಮೆರೆವನ। ಅಂಗಜಪಿತ ಶ್ರೀ ಲಕ್ಷ್ಮೀಪತಿಯ।। ಶೃಂಗಾರ ಮೂರುತಿ ಪುರಂದರವಿಠಲನ। ಕಂಗಳಿಂದಲಿ ಕಂಡೆ ಹಿಂಗಿತು ಭವಭಯ।।5।।

ಗಂಧಮು ಪುಯ್ಯರುಗ — **ರಾಗ: ಪುನ್ನಾಗವರಾಳಿ-ಆದಿತಾಳ**

ಗಂಧಮು ಪುಯ್ಯರುಗ ಪನ್ನೀರು।।ಪ।। ಅಂದ ಮೈನ ಎದುನಂದುನು ವೈ। ಕುಂದರ ದನ ಲಿರ ಒಂದಗ ಪರಿಮಳ।।ಅ.ಪ।। ತಿಲಕಮು ದಿದ್ದರುಗ ಕಸ್ತೂರಿ। ತಿಲಕಮು ದಿದ್ದರುಗ। ಕಲ ಕಲ ಮನು ಮುಖ ಕಳಗನೀ। ಸೊಕ್ಕುಚು।

ಬಲು ಕುಲ ನಮ್ಮತಮು ಲೋಲಿಕೆಡು ಸ್ವಾಮಿಕಿ।।1।। ಚೇಲಮು ಕಟ್ಟುರುಗ ಬಂಗಾರು। ಚೇಲನು ಗಟ್ಟಿರುಗ ಮಾಲಿಮಿತೋ ಗೋಪಾಲ ಬಾಲುಲತೋ। ನ್ಯಾಲ ಮೇಸಿನ ವಿಶಾಲ ನಯನುನಿಕಿ।।2।। ಹಾರತು ಲೆತ್ತರುಗ ಮುತ್ಯಾಲ । ಹಾರತು ಲೆತ್ತರುಗ ನಾರೀ ಮಣುಲಕು ವಾರಮು ಯೌವನ ವಾರಕ ಯೋಸಗು ವಾರೀಜಾಕ್ಷುನಿಕಿ।।3।। ಪೂಜಲು ಸೇಯರುಗ ಮನಸಾರ। ಪೂಜಲು ಸೇಯರುಗ ಜಾಜಲು ಮರಿವಿರಿ ವಾಜಲು ದವನಮು ರಾಜಿತ ತ್ಯಾಗರಾಜುನಿಕಿ।।4।।

ನಿಲ್ಲಬೇಕಯ್ಯ ಕೃಷ್ಣಯ್ಯ **ರಾಗ: ಕುಂತಳವರಾಳಿ-ಆದಿತಾಳ**

ನಿಲ್ಲಬೇಕಯ್ಯ ಕೃಷ್ಣಯ್ಯ ನೀ।।ಪ।। ನಿಲ್ಲಬೇಕಯ್ಯ ಮಲ್ಲಮರ್ದನ ಸಿರಿ ವಲ್ಲಭ ಎನ್ನ ಹೃದಯದಲ್ಲಿ ಸತತ ನೀ।।ಅ.ಪ।। ಚುಪ್ಪಾಣಿ ಮುತ್ತಿಟ್ಟು ನೋಡುವೆ। ನಿನ್ನ ಚಪ್ಪಾಳಿ ತಟ್ಟಿ ನಾ ಪಾಡುವೆ।। ಅಪ್ಪ ಶ್ರೀ ಕೃಷ್ಣ ನಿನ್ನೆತ್ತಿ ಮುದ್ದಿಸಿಕೊಂಬೆ। ಸರ್ಪಶಯನ ಕೃಪೆ ಮಾಡೆಂದು ಬೇಡುವೆ।।1।। ಚಂದದ ಹಾಸಿಗೆ ಹಾಸುವೆ ಪುನುಗು। ಗಂಧ ಕಸ್ತೂರಿಯ ಪೂಸುವೆ। ತಂದು ಮುದದಿ ಮುತ್ತಿನ ಹಾರ ಹಾಕುವೆ। ಆನಂದದಿಂದಲಿ ನಿನ್ನ ಎತ್ತಿ ಮುದ್ದಿಸಿಕೊಂಬೆ।।2।। ನೀಲದ ಕಿರೀಟವನಿಡುವೆ ಬಲು। ಬಾಲಲೀಲೆಗಳ ಪಾಡುವೆ। ಚೆಲುವ ಶ್ರೀ ಪುರಂದರವಿಠಲರಾಯನೆ। ನಿಲ್ಲು ಎನ್ನ ಮನದಲ್ಲಿ ಒಂದೇ ಘಳಿಗೆ।।3।।

❖ ❖ ❖

ಕಾಳಿಂಗ ಮರ್ದನ ಕೃಷ್ಣ

ಆಡಿದನೋ ರಂಗ ಅಧ್ಭುತದಿಂದಲಿ **ರಾಗ: ಆರಭಿ-ಆದಿತಾಳ**

ಆಡಿದನೋ ರಂಗ ಅದ್ಭುತದಿಂದಲಿ। ಕಾಳಿಂಗನ ಫಣೆಯಲಿ।।ಪ।। ಪಾಡಿದವರಿಗೆ ಬೇಡಿದ ವರಗಳ। ನೀಡುತಲಿ ದಯಮಾಡುತಲಿ ನಲಿ। ದಾಡುತಲಿ ಬೆಣ್ಣೆ ಬೇಡುತಲಿ ಕೃಷ್ಣ।।ಅ.ಪ।। ಅಂಬುರುಹೋದ್ಭವ ಅಖಿಳಸುರರು ಕೂಡಿ। ಅಂಬರದಲ್ಲಿ ನಿಂತು ಅವರ್ ಸ್ತುತಿಸೇ ರಂಭೆ ಊರ್ವಶಿ ರಮಣೆಯರೆಲ್ಲರು। ಚಂದದಿಂ ಭರತ ನಾಟ್ಯವ ನಟಿಸೆ। ಝುಂತಕ ತಕಧಿಮಿ ತಧಿಗಿಣಿ ತೋಂ ಎಂದು ಝುಂಪೆತಾಳದಿ ತುಂಬುರನೊಪ್ಪಿಸೆ।।1।। ಧಾಮಪ ಪಾಧಸರೀ ಎಂದು ಧ್ವನಿಯಿಂದ। ನಾರದ ತುಂಬುರರ್ಗಾನವ ಮಾಡಲು। ನಂದಿಯು ಮದ್ದಲೆ ಚಂದದಿ ಹಾಕಲು। ಫಣವ ಮೆಟ್ಟಿ ಬಾಲವ ಕೈಯಲಿ ಪಿಡಿದು। ಘಳಘಳಿಸುತ್ತ ನಾಟ್ಯವನಾಡೆ।।2।। ಚಂದ್ರ ಮಂಡಲದಂತೆ ಪೊಳೆಯುವ ಮುಖದೊಳು। ಚಲಿಸುವ ನೀಲ ಕೇಶಗಳಾಡೆ। ಕಾಲಲಂದಿಗೆ ಗೆಜ್ಜೆ ಘಲುಘಲುಘಲುರೆನುತ। ಉಡುಗೆಜ್ಜೆ ಘಂಟೆಗಳಾಡೆ।।3।। ದುಷ್ಟಕಾಳಿಂಗನ ಮೆಟ್ಟಿ ಭರದಿಂದ। ಪುಟ್ಟ ಪಾದವ ಇಟ್ಟು ಶ್ರೀಕೃಷ್ಣನು। ಮೆಟ್ಟಿದನು ತಕಧಿಮಿ ತಧಿಕೆನುತ।।4।। ಸುರರು ಪುಷ್ಪದ ವೃಷ್ಟಿಯ ಕರೆಯಲು ಸುದತಿಯರೆಲ್ಲರು ಪಾಡಲು। ನಾಗಕನ್ನಿಕೆಯರು ನಾಥನ ಬೇಡಲು। ನಾನಾ ವಿಧದಿ ಸ್ತುತಿ ಮಾಡಲು।।5।। ರಕ್ಕಸರೆಲ್ಲರು ಕಕ್ಕಸವನೆ ಕಂಡು। ದಿಕ್ಕು ದಿಕ್ಕುಗಳಿಗೆ ಓಡಲು ಚಿಕ್ಕವನಿವನಲ್ಲ ಪುರಂದರವಿಠಲ ವೆಂಕಟರಮಣನ ಬೇಗ ಯಶೋದೆ। ಬಿಂಕದೊಳೆತ್ತಿ ಮುದ್ದಾಡೆ ಶ್ರೀ ಕೃಷ್ಣನ।।6।।

ಕಾಳಿಂಗನ ಮೆಟ್ಟನಾಟ್ಯವಾಡಿದ

ಕಾಳಿಂಗನ ಮೆಟ್ಟಿನಾಟ್ಯವಾಡಿದ। ಕಂಜನಾಭಕೃಷ್ಣನು।।ಪ।। ಕಾಳಿಂಗನ ಮೆಚ್ಚಿ ಆಡಿದಭರದಲ್ಲಿ। ಶ್ರೀವತ್ಸ ಉರದಲ್ಲಿ ಕೊರಳಲ್ಲಿ ವನಮಾಲೆ। ತರಳತನದಲ್ಲಿ ಯಮುನೆಯ ಮಡುವಿನಲ್ಲಿ। ಆಡುತ್ತಾ ಪಾಡುತ್ತ।।ಅ.ಪ.।। ಕಾಲಲ್ಲಿ ಗೆಜ್ಜೆ ಘಲುಘಲುಘಲುಕೆನ್ನೆ। ಫಾಲದಿ ತಿಲಕವು ಹೊಳೆಹೊಳೆಹೊಳೆಯುತ್ತ। ಜ್ವಲಿತ ಮಣಿಮಯ ಲಲಿತ ಪದಕಹಾರ। ಜ್ವಲಿತ ಕಾಂತಿ ಬೆಳಗುತ ದಿಕ್ಕುಗಳಲಿ।।1।। ಸುರರು ದುಂದುಭಿಯ ಢಣಢಣ ಢಣರೆಂದು। ಮೊರೆಯೆ ತಾಳಗಳು ಝುಣಝುಣಝುಣವೆಂದು। ಹರಬ್ರಹ್ಮ ಸುರರು ತಥೈತಥೈ ಎನಲು। ನಾರದು ತುಂಬುರ ಸಿದ್ಧರು ವಿದ್ಯಾಧರರು ಅಂಬರದಲಿ

ಆಡುತ್ತ ಪಾಡುತ್ತ।।2।। ಯೋಗಿಗಳೆಲ್ಲ ಜಯಜಯಜಯವೆನ್ನೆ। ಭೋಗಿಗಳೆಲ್ಲ ಭಯಭಯಭಯವೆನ್ನೆ। ನಾಗಕನ್ಯೆಯರು ಅಭಯ ಅಭಯವೆನ್ನೆ। ನಾಗಶಯನ ಸಿರಿ ಕೃಷ್ಣ ಜನನಿಯೆಕಂಡು। ಬೇಗನೆ ಬಿಗಿದಪ್ಪಿ ಮುದ್ದನು ತೋರಿದ।।3।।

ಕುಣಿದಾಡೊ ಕೃಷ್ಣ — ರಾಗ: ಪಂತುವರಾಳಿ-ಏಕತಾಳ

ಕುಣಿದಾಡೊ ಕೃಷ್ಣ ಕುಣಿದಾಡೊ।।ಪ।। ಫಣಿಯ ಮೆಟ್ಟಿ ಬಾಲವ ಪಿಡಿದು। ಕುಣಿ ಕುಣಿದಾಡುವ ಪಾದದೊಳೊಮ್ಮೆ ।।ಅ.ಪ।। ಮುಂಗುರುಳುಂಗುರ ಜಡೆಗಳರಳೆಲೆ ಪೊಂಗೊಳಲಲಿ ರಾಗಂಗಳ ನುಡಿಸುತ್ತ ತ್ರಿ। ಭಂಗಿಯಲಿ ನಿಂದು ಧಿಗಿಧಿಗಿತಾಂಗಿಣ ತಾಂಗಿಣಾ ಥಕ್ಕಥಕ್ಕಧಿಮಿಯೆಂದು।।1।। ಮುಖ ಜಾರಿದು ಫುಲ್ಲಗವಾಜಿಯೆ ಝಂ ಝಂ ಝಂ ಚುಂಬನಕಾಗಿ। ಝಣಾ ಝಣಾ ಝಂ ಕಿಟತಾ ಕಿಟಕಿಟ ತೋಂಗಿಣತೋ ಧಿಮಿ ತೋಂಗಿಣ ಪಾದದೊಳೊಮ್ಮೆ ।।2।। ಪ್ರಕಟದಿ ದಿನಗಳು ಪರಿಚಾರಂಗಳು ವಿಕಲಿತ ನಾಟಕ ಭೇರಿಗಳು। ತೋಂಕಿಣಿ ತೊಂತಂ ತೊಂಡರಿ ತರಿಗಿಟ ತಕ್ಕಿಟ ತರಿಕಿಟ ತಕಿಟ ಶಬ್ದದಿ।।3।। ಪೆರಣಗಾಂಚಿತ್ತಲೆದಂವೆಗಂ ಸರಹರಪ್ರತಿಜ ವಾಗರಶೆಂದ। ಶ್ರುಣಾಂ ಉರ್ರಾಂ ಎಂದು ಧಿಮಿಕಿಟ ಧಿಮಿಕಿಟ ತಧಿಕುತ ಧಿಕುತಂ ತದ್ದಾಥೈ ಎಂದು।।4।। ಪಂಚಸ್ಥಳದಲ್ಲಿ ಲಘುವಿಡಿದೊಮ್ಮೆ ಗಣಪತಿ ನರಸಿಂಹ ಕೋನೇರಿ ತಿಮ್ಮ। ಪಂಚನಾಟಕಭೇದವ ವಾಜಿಸುತ್ತ ಉಡುಪಿಲಿ ನಿಂದನು ಪುರಂದರವಿಠಲ।।5।।

ಕಾಳೀಯ ಮಡುವ ಧುಮುಕಿ

ಕಾಳೀಯ ಮಡುವ ಧುಮುಕಿ। ಕಾಳಂದಿ ನೀರಚೆಲ್ಲಿ। ಕಾಳಿಂಗನ ಫಣೆಯತುಳಿದ ಕೃಷ್ಣ ಬೇಗಬಾ।।ಪ।। ಬಾರೊ ಬಾಗೋಪಾಲ ಸುಶೀಲ।ತುಳಸಿಮಾಲಾ ಬಾ।।1।। ಗೊಲ್ಲಾರ ಮನೆಯ ಪೊಕ್ಕು ಚೆಲ್ಲಿ ಪಾಲ್ಬೆಣ್ಣೆ ಮೊಸರು। ಎಲ್ಲಾ ಕುಡಿದು ಹೋದನಮ್ಮ ಕೃಷ್ಣ ಬೇಗಬಾ।।2।। ಬಾರೋ ಬಾ ಗೋಪಾಲ ಸುಶೀಲ। ತುಳಸಿಮಾಲಾ ಬಾ।।3।।

❖ ❖ ❖

ಶ್ರೀಕೃಷ್ಣನ ತುಂಟತನ-ಗೋಪಿಯರ ದೂರು

ಮೆಲ್ಲ ಮೆಲ್ಲನೆ ಬಂದನೆ ಗೋಪಮ್ಮ ಕೇಳೆ — ರಾಗ: ಮೋಹನ

ಮೆಲ್ಲ ಮೆಲ್ಲನೆ ಬಂದನೆ ಗೋಪಮ್ಮ ಕೇಳೆ। ನಿಲ್ಲದೇ ಓಡಿಹೋದನೇ।।ಪ।। ಮೆಲ್ಲ ಮೆಲ್ಲನೆ ಬಂದು ಗಲ್ಲಕೆ ಮುದ್ದು ಕೊಟ್ಟು। ನಿಲ್ಲದೆ ಓಡಿ ಪೋದ ಕಳ್ಳಗೆ ಬುದ್ಧಿ ಹೇಳೆ।।ಅ।। ಹಾಲುಮಾರಲು ಪೋದರೆ। ನಿನ್ನಯ ಕಂದ ಕಾಲಿಗಡ್ಡವ ಕಟ್ಟುವ।। ಹಾಲಸುಂಕವ ಬೇಡಿ ಕೋಲನ್ನೆ ಅಡ್ಡಕಟ್ಟಿ। ಶೆಲ್ಲೆಯ ಸೆಳಕೊಂಡು ಹೇಳದೋಡಿದ ಕೃಷ್ಣ।।1।। ಮೊಸರು ಮಾರಲು ಪೋದರೆ। ನಿನ್ನಯ ಕಂದ ಹೆಸರೇನೆಂದೆಲೆ ಕೇಳಿದ।। ಹಸನಾದ ಹೆಣ್ಣಮೇಲೆ ಕುಸುಮವ ತಂದಿಕ್ಕಿ। ಶಶಿಮುಖಿಯರಿಗೆಲ್ಲ ಮರುಳುಮಾಡಿದನೀತ।।2।। ಹೋಗಿರೆ ರಂಗಯ್ಯನ ಮೇಲೆ ನೀವು। ದೂರೇನು ಕೊಂಡು ಬಂದಿರೆ।। ಯೋಗೀಶ ಪುರಂದರವಿಠಲರಾಯನ। ಕೂಗಿ ಪಾಡಿರೆ ಬೇಗ ನಾಗವೇಣಿಯರೆಲ್ಲ।।3।।

ಏನ ಪೇಳಲೆ ಗೋಪಿ — ರಾಗ: ಮಾಂಡ್-ಛಾಪುತಾಳ

ಏನ ಪೇಳಲೆ ಗೋಪಿ ನಿನ್ನ ಮಗನ ಚೇಳ। ಕುಲತಪ್ಪಿಸಿ ಬಂದ ಮನೆಯೊಳಗೆ।।ಪ।। ಕೊಡ ಹಾಲು ಕುಡಿದನೆ ಗಡಿಗೆಯ ಒಡೆದನೆ। ಅಡಗಿದನೆ ದೊಡ್ಡ ಕೊಡದೊಳಗೆ।। ಹುಡುಗ ಸಿಕ್ಕಿದನೆಂದು ಹೊಡೆಯ ಹೋದರೆ। ಬಡವರ ಮಗನೇನೆ ಹೊಡೆಯಲಿಕ್ಕೆ।।1।। ಅಳಿಯನ ವೇಷದಿ ಮಗಳ ಕರೆಯ ಬಂದ। ಕಲಹವ ಮಾಡಿ ತಾ ಕಳುಹೆನ್ನುತ।। ಒಲುಮೆಯಿಂದಲಿ ತಿಂಗಳೆರಡಿಟ್ಟುಕೊಂಡರೆ। ಗಿಳಿಯಂಥ ಹೆಣ್ಣಿನ ಮನಕೆಡಿಸಿದನೆ ಗೋಪಿ।।2।। ಇಷ್ಟೊಂದು ಸಿಟ್ಟೇಕೆ ಚಿಣ್ಣ ಕೃಷ್ಣನ ಮೇಲೆ। ಪುಟ್ಟಿಸಬೇಡಿರೆ ಅನ್ಯಾಯವ।। ಸೃಷ್ಟಿಗೊಡೆಯ ನಮ್ಮ ಪುರಂದರವಿಠಲನ್ನ। ದೃಷ್ಟಿಸಿ ನೋಡಿರೆ ತೊಟ್ಟಿಲಿನೊಳಗೆ।।3।।

ಗೋಪಿ ನಿನ್ನ ಮಗನಿಗಾಗಿ ರಾಗ: ಲಲಿತ

ಗೋಪಿ ನಿನ್ನ ಮಗನಿಗಾಗಿ ಕೇರಿಯ ಬಿಟ್ಟು ಪೋಪೆವು ಬೆಳಗಾಗಿ।।ಪ।। ಮಕ್ಕಳನಾಡಗೊಡ ಮನೆಯ ಪೊಕ್ಕು ಉಕ್ಕುವ ಹಾಲು ಬಿಡ। ಗಕ್ಕನೆ ಕೊಂಡೋಡುವ ಬೆನ್ನನಟ್ಟಲು ನಕ್ಕುತ ಸೆರಗುಬಿಡ।।1।। ಅಂತಿಂಥವನಲ್ಲವ ಈ ಮಗ ಜಗದಾಂತರ್ಯವ ಕಾಣ್ವವ। ಎಂದು ತಪ್ಪಿಸಿಕೊಂಬೆವು ನಾವು ಸಿರಿಕಾಂತ ಪುರಂದರವಿಠಲನ।।2।।

ನಿನ್ನ ಮಗನ ಬಾಧೆ ರಾಗ: ಮೋಹನ-ಛಾಪುತಾಳ

ನಿನ್ನ ಮಗನ ಬಾಧೆ ಬಹಳವಾಗಿದೆ ನಾವು ಇನ್ನೆಷ್ಟು ತಾಳುವೆವೆ ಗೋಪಮ್ಮ।।ಪ।। ಬಿನ್ನಾಣವನು ಬಿಡೆ ಬಹು ದುಷ್ಟನು ಕೇಳೆ। ಇನ್ನೆಷ್ಟು ಸೈರಿಪೆವೆ ಗೋಪಮ್ಮ।।ಅ.ಪ।। ಹಾಲು ಮೊಸರು ಮಜ್ಜಿಗೆ ಭಾಂಡವನೆಲ್ಲ। ಕೋಲಲಿ ಬಡಿದಿಟ್ಟನೇ ಗೋಪಮ್ಮ।। ಪೇಳುವುದಿನ್ನೇನು ನಮ್ಮಂಥ ಬಡವರ। ಗೋಳಿನ್ನು ತಟ್ಟದೇನೆ ಗೋಪಮ್ಮ।।1।। ನೆಲುವಿಗೆ ಹಾಲು ಮಡಕೆ ಸೇರಿಸುವಾಗ। ಮೊಲೆಗೆ ಕೈ ಚಾಚಿದನೇ ಗೋಪಮ್ಮ।। ಲಲನೆ ಬಾಲಕನಲ್ಲ ನಿನ್ನ ಮಗನು ನೋಡೆ। ಕಲಿಕಿಯೆ ಈ ಕೃಷ್ಣನು ಗೋಪಮ್ಮ।।2।। ಹೊದ್ದಿ ಮೆಲ್ಲನೆ ಸನ್ನೆಯ ಮಾಡಿ ಕರೆವ ಈ। ಬುದ್ಧಿಯು ಒಳ್ಳೇದೇನೆ ಗೋಪಮ್ಮ।। ಮುದ್ದುಮಾಡಿ ಸಾಕಿ ಮಗನಿಗೆ ಬಸವನ। ಮುದ್ರೆಯ ಒತ್ತಿದೇನೆ ಗೋಪಮ್ಮ।।3।। ಸರಿ ಗೋಪಿಯರ ಮುಂದೆ ಶಿರವನು ಬಾಗುವ। ತೆರವ ಮಾಡಿದನು ಕಾಣೆ ಗೋಪಮ್ಮ।। ಧರೆಯೊಳಗಿರುವಂಥ ಜಾರ ಚೋರರಿಗೆಲ್ಲ। ಗುರುವು ತಾನೆನಿಸಿದನೆ ಗೋಪಮ್ಮ।।4।। ಎಷ್ಟು ಹೇಳುವುದಿನ್ನು ಈ ತೆರನಾದರೆ। ನಿಷ್ಠೂರ ಬಹುದು ಕಾಣೆ ಗೋಪಮ್ಮ।। ಸೃಷ್ಟೀಶ ಶ್ರೀರಂಗಧಾಮ ಪುರಂದರ। ವಿಠ್ಠಲರಾಯ ಕಾಣೇ ಗೋಪಮ್ಮ।।5।।

ಹಸುಮಗನೇನೆ ನಿನ್ನ ಕಂದ ಕೇಳೆ ಗೋಪಿ

ಹಸುಮಗನೇನೆ ನಿನ್ನ ಕಂದ ಕೇಳೆ ಗೋಪಿ।।ಪ।। ಹಸುಮಗನೆನೆ ನಿನ್ನ ವಸುಧಿ ಪಾಲಿಪ ರಂಗ। ಅಸುರರ ಸಂಹರಿಸಿದನೇ। ಕೇಳೆ ಗೋಪಿ।।ಅ.ಪ।। ನಾರೇರಸೀರೆಯ ಜಾರಿಸಿ ನೆರಿಗೆಯ। ಹಾರಿಸಿ ಮರವೇರಿ ನಿಂದಾ ಕೇಳೆ ಗೋಪಿ।।1।। ಹಸನಾದ ಕಾಂತೆಯರ ಕುಸುಮಗಂಧಿನಿಯರ। ಮುಸುಗತೆಗೆದ ಚಂದದಿಂದ ಕೇಳೆಗೋಪಿ।।2।। ಯಾತರಬುದ್ಧಿ ಇನ್ನ್ಯಾತರ ಪದ್ಧತಿ। ನೀತಿ ಪೇಳಿದ ಚಂದದಿಂದಾ ಕೇಳೆ ಗೋಪಿ।।3।। ಮಂಗಳ ಮಹಿಮನೆ ಗಂಗೆಯ ಜನಕನೆ। ಗಂಗಾಧರ ಸುಖರಂಗನೆ ಕೇಳೆಗೋಪಿ।।4।।

ಕಲಯತಿ ಯಶೋದ (ತರಂಗಗಳು) ರಾಗ: ಪೂರ್ವಿಕಲ್ಯಾಣಿ

ಕಲಯತಿ ಯಶೋದ ತವಬಾಲಂ ತವಬಾಲಕ ಖೇಲನ ಲೋಲಂ।।ಪ।। ಅವಬೃತ ಬಹುತರ ನವನೀತಂ। ಅನುಪಮ ಲೀಲನ ವ್ರತನಸಿತಂ। ಕಪಟನಾಟಕ ಕೃತ ಬಾಲಕ ಚರಿತಂ। ಕಪಟಾಂಗಿ ಕೃತ ಖೇಲನ ನಿರತಂ।।1।। ನವನೀತ ಚೋರ ಬಾಲಕ ಚರಿತಂ। ನಂದದಿ ವ್ರಜ ಪುಣ್ಯ ತರುಫಲಿತಂ। ದೃವಪದ ಪರಮೇಶ ಗತಿ ಫಲಿತಂ। ಭುವಿನಾರಾಯಣ ತೀರ್ಥಯತಿ ಫಲಿತಂ।।2।।

ಏನು ತುಂಟತನ ಇದು

ಏನು ತುಂಟತನ ಇದು ಏನು ತುಂಟತನ।।ಪ।। ಭಾನು ಕೋಟಿ ತೇಜ ನಿನ್ನ ಹುಡುಕುವ। ಮಾನಿನಿಯರಿಗೆ ನೀ ಕಾಣದಿರುವುದು।।ಅ.ಪ।। ಸಣ್ಣ ಹುಡುಗರಿಗೆ ಹಣ್ಣು ಕೊಡುವೆನೆಂದು। ಬಣ್ಣಿಸಿ ಕರೆಯುತ ಕಣ್ಣುಗಳಿಗೆ। ಹುಡಿ ಮಣ್ಣು ಚೆಲ್ಲಿ ಮುಂದೋಡಿ ನಗುತ ಹೊಸ। ಬೆಣ್ಣೆ ಪಾಲುಣುತಲಿರುವುದಿದು।।1।। ಪಾಲು ಕೊಟ್ಟ ಪೂತನಿಯ ಕೊಂದು। ಬಿರುಗಾಳಿ ಬೀಸೆ ಭೂತನ ಬಲಿಗೈದು। ಗೂಳಿಯೊಡನೆ ಗುದ್ದಾಡಿ ಗೆಲಿದು। ನೆರೆ ಸೋಲಿಸಿ ಮಾವನ ಶಿರವ ಕಡಿವುದಿದು।।2।। ಅನ್ಯ ಕನ್ಯೆಯರ ಕೈಯ ಹಿಡಿದು। ಕಣ್ ಸನ್ನೆ ಮಾಡಿ ಮಂತ್ರಾಕ್ಷತೆ ಜಲವನು। ಕುನ್ನ ಹುಡುಗರಿಂದರ್ಪಣಗೈಸಿ। ಇವಳೆನ್ನ ಪತ್ನಿಯೆಂದೆನ್ನುತಿರುವುದಿದು।।3।। ಕಡು ಕಾಳಿಂಗನ

ಮಡುವಿನೊಳಗೆ ಇಳಿದು। ಹೆಡೆಯ ಮೇಲೆ ನಿನ್ನಡಿಗಳ ಇಡುತಲಿ। ಗುಡುಗುಡುಗುಟ್ಟಿದ ಸರ್ಪನ ಶಿಕ್ಷಿಸಿ। ಎಡಗೈಯಂಪಿಡಿದು ಬಡನಾಡುವುದಿದು॥4॥ ಸುರಗೋಪಾಲರು ನರಹರಿವಿಠಲನ ಪರದೇವತೆಯೆಂದು ಹರಿಕೆಯ ಸಲಿಸಲು। ಸುರರು ಮುನಿದು ಕೋಪದಿ ಮಳೆಗರೆಯೆ। ಕಿರುಬೆರಳಿನಿಂದ ಗಿರಿಯನೆತ್ತುವುದಿದು॥5॥

ತಾಳು ತಾಳೆಲೋ ರಂಗಯ್ಯ — ರಾಗ: ಶಂಕರಾಭರಣ

ತಾಳು ತಾಳೆಲೋ ರಂಗಯ್ಯ ನೀ, ತಾಳು ತಾಳೆಲೊ ಕೃಷ್ಣಯ್ಯ॥ಪ॥ ನಾಳೆ ನಮ್ಮನೆಗೆ ಬಂದರೆ ನೀನು। ನಿನ್ನ ಕಾಲ ಕಂಭಕೆ ಕಟ್ಟಿ ಪೇಳುವೆ ಗೋಪಿಗೆ॥ಅ.ಪ॥ ದೊರೆಗಳ ಮಗನೆಂಬುದಕೇನೋ। ಆತುರದಿ ಮನೆ ಪೊಕ್ಕ ಪರಿಯೇನೋ। ದುರುಳಬುದ್ಧಿ ನಿನಗೆ ತರವೇನೋ ಹಿಂದೆ। ತಿರುಗಿ ಬೇಡ್ಯುಂಡದ್ದು ಮರೆತ್ಯೇನೋ॥1॥ ಚಿಕ್ಕ ಮಕ್ಕಳು ಹೋದರು ಎಂದು। ನೀ ಬಂದು ಕಕ್ಕುಲತೆಯ ಮಾಡುವರೇನೊ। ಸಿಕ್ಕಿದ ಗೋಪಾಲ ಹಿಡಿಯೆಂದರೆ ನೀ। ಬಿಕ್ಕಿ ಬಿಕ್ಕಿ ಅತ್ತರೆ ಬಿಡುವರೇನೋ॥2॥ ಕಟ್ಟಿದಾಕಳ ಮೊಲೆಗಳನುಂಡು। ಕರು ಬಿಟ್ಟು ಹೇಳುವುದೇನೆಲೊ ರಂಗ। ಸೃಷ್ಟಿಗೊಡೆಯ ಶ್ರೀ ಪುರಂದರವಿಠ್ಠಲ। ನೀ ಕಟ್ಟಲ್ಲಿ ನಿಂತ ಕಾರಣವೇನೋ ರಂಗಯ್ಯ॥3॥

ಪಾರ್ವೆಯೊನ್ರೇ ಪೋದುಮೇ (ತಮಿಳು) — ರಾಗ: ಷಣ್ಮುಖಪ್ರಿಯ

ಪಾರ್ವೆಯೊನ್ರೇ ಪೋದುಮೇ। ಸಂಗ ಪದುಮನಿಧೀ ಇರಂಡುಂ ವಲಿಯರ್। ತಂದಾಲ್ ಎನ್ನಾ॥ಪ॥ ಕಾರ್ ಮುಗಿಲ್ ಪೋಲ್ ಅಂದ ಕದಿರೆನ್ನ ಮದಿಯೆನ್ನ। ಕರುಣೈವಿಳಿ ಕಡಲಿನ್ನೈ ತಿರಂದು ಕರುಣೈಮಳ್ಳೈ ಪೊಳಿಯುಂ॥ಅ.ಪ॥ ಅನ್ನೈ ಯಶೋದೈ ಅರುಗಿನಿಲೇಸೆನ್ರು ವೆಣ್ಣೈ ತಿರುಡಿ ತಿನ್ರ। ವಿಂದೈ ಸೊಲ್ಲಪೋನಾಲ್ ಅನ್ನೈಯಿನ್ ಪಿನ್ನೈ ಸೆನ್ರು। ಅಣ್ಣೈತ್ತುಕೊಂಡು ನಿನ್ರು ಸೊಲ್ಲಾದೆ ಎನ್ರು ಕಣ್ಣಾಲ್ ಸೊಲ್ಲಿಡುಂ॥1॥

ನೋಡು ನೋಡು ಗೋಪಿ — ರಾಗ: ಮಾಂಡ್

ನೋಡು ನೋಡು ಗೋಪಿ ನಿನ್ನ ಮಗನ ಲೂಟಿಯಾ। ಮಾಡುತಾನೆ ಮನೆಗೆ ಬಂದು ಬಹಳ ಚೇಷ್ಟೆಯಾ॥ಪ॥ ಮಾನಿನೀಯರೊಳಗೆ ಮಹಾಕಾಟವೇನಿದು। ಮಾನವನ್ನು ಕಳೆದ ಪರಿ ಹೇಳತೀರದು॥1॥ ಪಿಡಿದ ಸೆರಗ ಬಿಡನು ಇನ್ನೇನು ಮಾಡಲಿ। ತಡೆಯಲಾರೆನಮ್ಮ ಕೇಳು ಇವನ ಹಾವಳಿ॥2॥ ಇಂತು ಚೆನ್ನಕೇಶವ ಶ್ರೀರಂಗಧಾಮನಾ। ಬಿನ್ನಹದ ಮಾತ ಕೇಳಿಬಿಡುವ ಪುರುಷನಾ॥3॥

ನೆರೆದು ಗೋಪಿಯರೆಲ್ಲಾರು ಕೃಷ್ಣಯ್ಯನ

ನೆರೆದು ಗೋಪಿಯರೆಲ್ಲಾರು ಕೃಷ್ಣಯ್ಯನ ಶೆರಗಪಿಡಿದುಕೊಂಡು। ಭರದಿಂದ ಬಂದು ಯಶೋಧೆಗೆ ಚಾಡಿಯ ಅರುಹಿದರತಿ ಬೇಗದಿ॥ಪ॥ ಬಲುಕಳ್ಳ ನಿನ್ನ ಮಗ ಗೋಪಮ್ಮ ಕೇಳೆ ಹಾಲು ಕರವುತಿರಲು ತೊಲೆಗೆ ನಿಚ್ಚಣಿಕೆಯ ಹಾಕದೆ ಸುರಿದಾನು। ನೆಲವಿನ ಪಾಲ್ಮೊಸರಾ॥1॥ ಅಂಮ್ಮೆಯ್ಯಾ ಇಲ್ಲಾ ಕಣೆ ಇವಳು ಯಂನ್ನಾ ಸುಂಮ್ಮಾನೆ ದೂರುವಳು। ಹುಂಮ್ಮಿಂದ ನಾನವಳ ಅಟ್ಟಕ್ಕೆ ನೆಗವೊರೆ। ಬೊಮ್ಮ ಜಟ್ಟಿಗನೆ ನಾನು॥2॥ ಮತ್ತೋರ್ವಳಿಂತೆದಳು ನಿಂನಮಗ ಹತ್ತಿ ಗವಾಕ್ಷಿಯಿಂದಾ ಬಚ್ಚಿಟ್ಟ ಬೆಣ್ಣೆಯನೆಲ್ಲಾವ ಮೆದ್ದಾನು ಮಕ್ಕಳಿಲ್ಲದಂತೆ॥3॥ ಗಡಿಗೆ ಬೆಣ್ಣೆಯ ಮೆಲ್ವಾರೆ ಇವನ ಹೊಟ್ಟೆ ಕೆರೆಭಾವಿಯೇನೆ ಅಮ್ಮಾ। ಹುಡುಗರಿಗೆ ಎಂದು ಬಚ್ಚಿಟ್ಟ ಬೆಣ್ಣೆಯನೆಲ್ಲಾ।ಹೊಡೆದರವರ ಮಕ್ಕಳು॥4॥ ಮಲಗೋಮಂಚದ ಮೇಲೆ ನಾ ಮಲಗೀರೆ ಮೊರೆವ ಹಾವನು ಪಿಡಿದು ಅರಿಯದಂತೆ ಬಂದು ಮುಸುಕಿನೊಳಗಿಟ್ಟು ಅರಿಯಾದೆ ಹೋದನಂಮಾ॥5॥ ಹರನಡುಗುವ ಹಾವನು ನಾ ಪಿಡಿವಾರೆ ತರಳಾನು ತಡೆಕಾರನೆ ಹರಕೆಯ ಹೊತ್ತುದವಪ್ಪಿಸದಿದ್ದರೆ ಗುರುತು ತೋರಲು ಬಂತೇನೊ॥6॥ ಮಕ್ಕಳ ಪಡೆದವರುಯಿಲ್ಲದ

ಕಳವಿಕ್ಕಲಿ ಬಹುದೆ ಕೃಷ್ಣಗೆ ಸಿಕ್ಕಿದ್ದ ತಪ್ಪು ಸಹಿತವೆ ತಂದರೆ ನಾನು। ತಕ್ಕ ಬುದ್ಧಿಯ ಪೇಳುವೆ॥7॥ ಅಣುಮಯರೂಪ ಕಾಣೆ ನಿಂನಯ ಮಗ ಚಿನುಮಯ ರೂಪ ಕಾಣೆ ಚಿನುಮಯ ರೂಪ ಹೆಳವನಕಟ್ಟೆ ಆದಿಕೇಶವ ರಂಗನೆ॥8॥

ಕೇಳೆ ಯಶೋದೆ ತನಯನ

ಕೇಳೆ ಯಶೋದೆ ತನಯನ। ಲೀಲೆಯ ಪೇಳಲು ಅಳವಲ್ಲವೆ। ಬಾಳುವ ಸತಿಯರ ಧಾಳಿಮಾಡುವ ಯದು। ಮೌಳಿಶ್ರೀ ಕೃಷ್ಣಗೆ ಪೇಳೆ ವಿವೇಕವ॥ಪ॥ ನೀರಿಗೆ ಪೋಗಲು ಯಾರು ಇಲ್ಲದ ವೇಳೆ ಬರುವನು ನಮ್ಮೊಡನೆ। ಮೀಯಲು ಪೋಗಲು ಕಾಲ ಬಿಡದೆ ಎಮ್ಮಲಿ। ಸಾರಸಾಕ್ಷಕೃಷ್ಣ ಸರಸವನಾಡುವ॥1॥ ಇಂದು ವದನೆ ಎಮ್ಮ ಮಂದಿರಗಳ ಪೊಕ್ಕು। ಪೊಂದುವ ಪಾಲ್ಬೆಣ್ಣೆಯ। ಇಂದು ಸಿಕ್ಕಿದನೆಂದು ಪಿಡಿಯಲು ಪೋದರೆ। ಮಂದಹಾಸವ ಬೀರಿ ಮನವ ಸೋಲಿಸುವನು॥2॥ ನಿನ್ನಯ ತನಯ ಪ್ರಸನ್ನ ಶ್ರೀಕೃಷ್ಣನು। ಅನ್ಯಾಯಕಾರನಮ್ಮ। ಚೆನ್ನಾಗಿ ಇವನಿಗೆ ಬುದ್ಧಿ ಕಲಿಸದಿರೆ। ಬೆನ್ನುಹತ್ತುವೆವು ಕನ್ಯೆಯರೆಲ್ಲರು॥3॥

ಅಭಿಷೇಕಕ್ಕೆಂದು ಅಘ್ರೋದಕ ತಂದರೆ

ಅಭಿಷೇಕಕ್ಕೆಂದು ಅಘ್ರೋದಕ ತಂದರೆ। ಆದೇಪಾವನ ಮಾಡಿದಾ॥ ಭಕ್ತಿಯಿಂದ ಗಂಧಾಕ್ಷತೆ ಇಟ್ಟರೆ। ಶ್ರೀ ತುಳಸೀ ಮುಡಿದಾ॥ಪ॥ ನೈವೇದ್ಯಕ್ಕೆಂದುಪಾಯಸತಂದರೆ। ಪಾಯಸವನ್ನೇ ಉಂಡಾ।. ದೇವಾತಾರ್ಚನೆಯ ನೋಡಬನ್ನಿರೆಂದು ಯಶೋಧೆಯ ಕರೆದಾ॥1॥ ಹೂ ಕಾಯಿಯಾಗೋ ಹಾಗಲಬಳ್ಳಿಯ ಬೇರೋರಸೇ ಕಿತ್ತಿದಾ। ದೂರುತರುವೆವು ನಾವು ಎಂದರೆ। ದೊರೆ ಮಕ್ಕಾಳೆಂದಾ॥2॥ ಅಕ್ಕಿ ಬೇಳೆ ಒಂದು ಮಾಡಿ ಚೆಲ್ಲಿ। ಬುಟ್ಟಿಮರಗಳ ಮುರಿದಾ। ಕಟ್ಟಿದ್ದ ನೆಲುವನ್ನಲ್ಲಾಡಿಸಿ। ಬೆಣ್ಣೆ ಮೊಸರನ್ನೇ ಸವಿದಾ॥3॥ ಅಟ್ಟದ ಮೇಲೆಹರವಿದ್ದ ಧೋತ್ರವ ಬತ್ತಿ ಗೆನುತಲಿ ಹರಿದಾ। ನಿಮ್ಮತ್ತೆ ಮಾವಂದಿರು ಕಂಡರೆ ನಿಮಗೆ ಹುಟ್ಟಿದ್ದಿವಸವೆಂದಾ॥4॥ ಮಂಡಿಗೆ ಕಜ್ಜಾಯವ ಮನೆಯಲ್ಯಾರಿಗೂ ಅರಿಯದೆ ತಾ ಬಂದಾ। ಇದು ತಪ್ಪೆಲೇಲಿದ್ದಾವೆ ನೋಡಿಹನು। ನೀವು ಬಚ್ಚಿಡಬೇಡಿರೆಂದಾ॥5॥ ಅಷ್ಟನ್ನು ತಾನೇ ಒಬ್ಬನೇ ಮೆದ್ದು ಬಟ್ಟಲು ತೋರಿಸಿದ್ದಾ ಕಳ್ಳಕೃಷ್ಣಾ ನಾ ಹಿಡಿ ಹಿಡಿರೆಂದರೆ। ನಿಮ್ಮಪ್ಪನ ಹಿಡೀರೆಂದಾ॥6॥ ಕೃಷ್ಣನಾ ಕೋಟಲೆ ಅತಿ ಘನವಾಗಿದೆ ಎಷ್ಟೆಂದ್ಹೇಳಲೇ॥ ಊರು ಬಿಟ್ಟು ನಾವ್ ಹೋಗುತೇವೆ ಯಶೋದೆ ನೀ ಕೇಳೇ॥7॥ ಯಾವೂರಿಗ್ಹೋಗ್ತೀರಿ ಈಗಲೆ ನಡೆಯಿರಿ ನಾನೂಬರುತ್ತೇನೆ ಹಾಲು ಮೊಸರು ಬೆಣ್ಣೆ ಸಹಿತಲಿ ನಾನೇ ತರುತ್ತೇನೆ॥8॥ ಪಟ್ಟಾವಳಿಸೀರೆ ಸೆರಗಲಿ ಮೈ ಧೂಳನೆ ಒರಸಿ। ಎತ್ತಿ ಕೊಂಡಳೆ ಕೃಷ್ಣನಾ। ದುಷ್ಟತನಗಳ ಬಿಟ್ಟು ಪುರಂಧರ ವಿಠ್ಠಲನೆ ರಕ್ಷಿಸೆಂದಳು॥9॥

ನೋಡಬನ್ನಿ ನೋಡಬನ್ನಿ — ರಾಗ: ಮಧ್ಯಮಾವತಿ

ನೋಡಬನ್ನಿ ನೋಡಬನ್ನಿ ಪುಟ್ಟ ಕೃಷ್ಣನಾ॥ಪ॥ ಆಡ ಬನ್ನಿ ಕೂಡ ಬನ್ನಿ ಚೆಲುವ ಕೃಷ್ಣನಾ॥ಅ.ಪ॥ ಪುಟ್ಟಕೃಷ್ಣ ರಾಮನೊಡನೆ ಓಡಿ ಬಂದನೂ। ಅಟ್ಟದಲ್ಲಿ ಬೆಣ್ಣೆ ಮಡಕೆ ತಾನು ಕಂಡನು। ದಿಟ್ಟನಾಗಿ ಬೆಣ್ಣೆ ಮಡಿಕೆ ಗಟ್ಟಿ ಒಡೆದನೂ। ಪುಟ್ಟರೊಡನೆ ಗುಟ್ಟಿನಲ್ಲಿ ತಿನ್ನುತಿದ್ದನು॥1॥ ಬೆಣ್ಣೆ ಕದ್ದ ಬೆಣ್ಣೆ ಕದ್ದ ಎಂದು ದೂರಲೂ। ಕಣ್ಣ ಹಿಂದೆ ನಿಂತು ನಕ್ಕ ತುಂಟ ಕೃಷ್ಣನೂ। ಮಣ್ಣು ತಿಂದು ನಮ್ಮ ಕೃಷ್ಣ ಎಂದು ನುಡಿಯಲೂ। ಚಿಣ್ಣ ಬಾಯಿ ತೆರೆದು ಮೂರು ಲೋಕ ತೋರಿದ॥2॥ ಬೆಟ್ಟಿನಲ್ಲಿ ಬೆಟ್ಟವನ್ನು ಇಟ್ಟು ನಿಂತನೂ। ಅಟ್ಟಹಾಸದಿಂದ ಇಂದ್ರ ಮಳೆಯ ಸುರಿಸಲೂ। ಮೆಟ್ಟುತಲಿ ನಾಟ್ಯವಾಡಿ ಹಿಟ್ಟು ಮಾಡುತಾ। ಅಟ್ಟಿದನು ಕಾಳಿಂಗನ ಅಭಯ ನೀಡುತಾ॥3॥ ಅಸುರರೆಲ್ಲ ಹಲವು ರೂಪ ತಾಳಿ ಬಂದರೂ। ಕುಸುಮಮಾಲೆಯಂದದಲ್ಲಿ ಹೊಸಕಿ ಹಾಕಿದ। ವಸುದೇವ ಕಂದನಾಗಿ ನಂದ ತೋರಿದಾ। ಅಸುಪಿತನ ಮಹಿಮೆಯನ್ನ ನೋಡ ಬನ್ನಿರೊ॥4॥ ಯಾದವಕುಲದ ಚಂದ್ರ ಇವನು ಬಂದ ನೋಡಿರೇ। ಸೊದರಮಾವನನ್ನು ಇವನು ಕೊಂದ ಕಾಣಿರೇ। ಸಾಧು ಮುನಿವಂದ್ಯನಿವನು ಎಂದು ತಿಳಿಯಿರೇ। ವರಾಹ ಹರಿ ವಿಠಲನನ್ನು ಮುದದಿ ಪಾಡಿರೇ॥5॥

ಮಾಡುಮೇಕ್ಕ ಕಣ್ಣೇ (ತಮಿಳು) (ಸಂಭಾಷಣಾ ಗೀತೆ) ರಾಗ: ಖರಹರಪ್ರಿಯ(ಮ.ಶ್ರು)

ಮಾಡುಮೇಕ್ಕ ಕಣ್ಣೇ ನೀ ಪೋಗವೇಂಡಾಂ ಸೊನ್ನೇನ್।। ಕಾಚೀನ ಪಾಲು ತರೇನ್ ಕಲ್‌ಕಂಡು ಚೀನಿತರೇನ್। ಕೈನಿರೈಯ ವೆಣ್ಣೈ ತರೇನ್ ವೈಯಿಲಿಲೆ ಪೋಗವೇಂಡಾಂ।।ಮಾಡು।। ಕಾಚೀನ ಪಾಲು ವೇಂಡಾಂ ಕಲ್‌ಕಂಡು ಚೀನಿವೇಂಡಾಂ। ಉಲ್ಲಾಸಮಾಯ್ ಮಾಡುಮೇಯ್ತು ಒರು ನುಡಿಯಿಲ್ ತಿರುಂಬಿವರೇನ್। ಪೋಗವೇಣುಂ ತಾಯೇ ತಡೈಸೊಲ್ಲಾದೆ ನೀಯೇ।। ಪಕ್ಷಮುಳ್ಳ ನಂದಗೋಪರ್ ಬಾಲನ್ ಎಂಗೇ ಎನ್ರು ಕೇಟ್ಟಾಲ್। ಎನ್ನಬದಿಲ್ ಸೊಲ್ಲಿಡುವೇನ್ ಎನ್ನುರುಮೈಕಣ್ಮಣಿಯೆ। ಪೋಗವೇಂಡಾಂ ಕಣ್ಣಾ ಮಾಡುಮೇಯ್ಕ ಸೊನ್ನಾಲ್।।ಬಾಲರೋಡು ವೀದಿಯಿಲೆ ಪಂದಾಡುರಾನ್ ಎನ್ರು ಸೊಲ್ಲೇಂ। ತೇಡಿವರುಂ ಉನ್ ಪಿನ್ನಾಲೇ ಓಡಿವಂದು ಕುದಿಚ್ಚಿಡುವೇನ್। ಪೋಗವೇಂಡುಂ ತಾಯೇ ತಡೈಸೊಲ್ಲಾದೆ ನೀಯೇ। ಯಮುನನದಿ ಕರೈಯಿಲ್ ಎಪ್ಪೊಳುದುಂ ಕಳ್‌ವರ್ ಭಯಂ। ಕಳ್‌ವರ್‌ಗಳೈ ಕಂಡಾಯ್ ಆನಾಲ್ ಕಲಂಗಿಡುವಾಯ್ ಕಣ್ಮಣಿಯೇ।।ಮಾಡು।।ಕಳ್ಳನುಕ್ಕು ಕಳ್ಳನುಂಡೋ ಕಂಡದುಂಡೋ ಯಶೋದೆಯಮ್ಮ। ಕಳ್‌ವರ್‌ಗಳೈ ಕಂಡೇನಾನಾಲ್ ಖಂಡ ತುಂಡಂ ಸೈದಿಡುವೇನ್।।ಪೋಗ।। ಗೋವರ್ಧನ ಗಿರಿಯಲ್ ಪುಲಿಕರಡಿ ಕೂಡಿವರುಂ। ಪುಲಿ ಕರಡಿಗಳ್ ಕಂಡೇಯಾನಾಲ್ ಭಯಂದಿಡುವೇ ಕಣ್ಮಣಿಯೇ।।ಮಾಡು।। ಕೂಡಿವರುಂ ಪುಲಿ ಕರಡಿಯುಡೈ ಕೂಡಿ ನಿನ್ರು ಆಡಿಡುವೇನ್। ಕೂಡಿಯುಡನ್ ಮೇಲೆ ವಂದಾಲದೈ ವೇಟ್ಟೈಯಾಡಿ ತಿರುಂಬಿಡುವೇನ್ ।।ಪೋಗ।। ಕ್ಕಿಪಂದಾಡ ಕಾಳಿನದಿಕರೈ ಪೋಗವೇಂಡಾಂ। ಪಂದೆಡುಕ್ಕ ಪೋನೈಯಾನಾಲ್ ಉನ್ನೆಯೈ ಮುಳುಂಗಿ ವಿಡುಂ।।ಮಾಡು।। ಪಂದುಪೋಯಿ ಕಾಳಿನದಿಯಿಲ್ ವಿಳುಂದುವಿಟ್ಟಾಲ್ ಎನ್ನ ಸೈವೇನ್। ಮುಳುಂಗವಂದ ಕಾಳಿಂಗನಿನ್ ಶಿರಮೇರಿ ಮೆದಿಚ್ಚಿಡುವೇನ್।।ಪೋಗ।।

ಗೋವು ಮೇಯ್ಸಲು (ಮೇಲಿನ ಕೃತಿಯ ಭಾವಾನುವಾದ) ರಾಗ: ಖರಹರಪ್ರಿಯ

ಗೋವು ಮೇಯ್ಸಲು ಕೃಷ್ಣ ನೀ ಹೋಗಬೇಡ ಕೇಳೋ।।ಪ।। ಕಾಸೀದ ಹಾಲು ಕೊಡುವೆ ಕಲ್ಲುಸಕ್ಕರೆ ಕೊಡುವೆ। ಕೈಯ ತುಂಬ ಬೆಣ್ಣೆ ಕೊಡುವೆ ಬಿಸಿಲಿನಲ್ಲಿ ಹೋಗಬೇಡ।।1।। ಕಾಸೀದ ಹಾಲು ಬೇಡ ಕಲ್ಲು ಸಕ್ಕರೆಯು ಬೇಡ। ಉಲ್ಲಾಸದಿಂದ ಗೋವು ಮೇಯ್ಸಿ ಘಳಿಗೆಯಲ್ಲಿ ತಿರುಗಿ ಬರುವೆ। ಹೋಗಬೇಕು ತಾಯೆ ತಡೆಯಬೇಡನನ್ನ।।2।। ಎಲ್ಲ ಬಲ್ಲ ನಂದಗೋಪ ಬಾಲನೆಲ್ಲಿ ಎಂದರೆ? ಏನೆಂದು ಹೇಳಲಿ ನನ್ನ ಮುದ್ದು ಅರಗಿಣಿಯೆ। ಹೋಗಬೇಡ ಕೃಷ್ಣ ಗೋವ್ಗಳೊಡನೆ ಕೇಳೋ।।3।। ಬಾಲರೊಡನೆ ಬೀದಿಯಲ್ಲಿ ಚಂಡಾಡುತಾನೆ ಎಂದು ಹೇಳು। ಹುಡುಕಿ ಬರುವ ನಿನ್ನ ಹಿಂದೆ ಓಡಿಬಂದು ನಿಂತುಬಿಡುವೆ। ಹೋಗಬೇಕು ತಾಯೇ ತಡೆಯಬೇದ ನನ್ನ।।4।। ಯಮುನಾನದಿ ದಡದಲ್ಲಿ ಯಾವಾಗಲು ಕಳ್ಳರ್ ಭಯ। ಕಳ್ಳರನ್ನು ಕಂಡರೆ ಹೆದರಿಬಿಡುವೆ ಕಣ್ಮಣಿಯೆ। ಹೋಗಬೇಡ ಕೃಷ್ಣ ಗೋವ್ಗಳೊಡನೆ ನೀನು।।5।। ಕಳ್ಳನಿಗೆ ಕಳ್ಳನುಂಟೋ ಕಂಡದುಂಟೆ ಯಶೋದೆಯಮ್ಮ। ಕಳ್ಳರನ್ನು ಕಂಡರೇ ಖಂಡ ತುಂಡ ಮಾಡಿಬಿಡುವೆ। ಹೋಗಬೇಕು ತಾಯೇ ಬೇಡ ಎನ್ನಬೇಡ।।6।। ಗೋವರ್ಧನ ಗಿರಿಯಲ್ಲಿ ಹುಲಿ ಕರಡಿ ಕಾಟವಂತೆ। ಹುಲಿಕರಡಿ ಕಂಡರೆ ಭಯಪಡುವೆ ಕಣ್ಮಣಿಯೆ। ಹೋಗಬೇಡ ಕೃಷ್ಣ ಗೋವ್ಗಳೊಡನೆ ನೀನು।।7।। ಒಂದಾಗಿ ಸೇರಿಬರುವ ಹುಲಿ ಕರಡಿಯ ಕೂಡಿಯಡುವೆ ಮೇಲೇರಿ ಬಂದರೆ ಬೇಟೆಯಾಡಿ ತಿರುಗಿ ಬರುವೆ। ಹೋಗ ಬೇಕು ತಾಯೇ ಬೇಡ ಎನ್ನಬೇಡ।।8।। ಕಾಳಿನದಿ ದಂಡೆಗೆ ಚೆಂಡಾಡಲ್ ಹೋಗಬೇಡ। ಚೆಂಡು ತರಲು ಹೋದರೆ ನಿನ್ನನ್ನೇ ನುಂಗುವುದು। ಹೋಗಬೇಡ ಕೃಷ್ಣ ಗೋವ್ಗಳೊಡನೆ ನೀನು।।9।। ಚೆಂಡು ಹೋಗಿ ಕಾಳಿನದಿಲಿ ಬಿದ್ದರೇನು ಮಾಡಲಿ। ನುಂಗಲ್ ಬಂದ ಕಾಳಿಂಗನ ಶಿರವನೇರಿ ತುಳಿದು ಬಿಡುವೆ। ಹೋಗಬೇಕು ತಾಯೇ ತಡೆಯ ಬೇಡ ನನ್ನ।।10।।

ದೂರು ಮಾಡುವರೇನೆ ರಂಗಯ್ಯನ ರಾಗ: ಬೇಹಾಗ್

ದೂರು ಮಾಡುವರೇನೆ ರಂಗಯ್ಯನ। ದೂರುಮಾಡುವರೇನೆ।।ಪ।। ದೂರು ಮಾಡುವರೇನೆ। ಚೋರನೆಂದಿವನನು।

ಮೂರು ಲೋಕಕ್ಕೆ ಮುದ್ದು। ತೋರೋ ರಂಗಯ್ಯನ।।ಅ.ಪ।। ನಂದಗೋಕುಲದಲಿ ಮಂದೆ ಗೋವುಗಳ। ಮುಂದೆ ಕೊಳಲನೂದಿ ಚಂದದಿ ಬರುವನ।।1।। ಗೊಲ್ಲರ ಮನೆಗಳ ಕಳ್ಳತನದಿ ಪೊಕ್ಕು। ಗುಲ್ಲು ಮಾಡುತಲವರ ಗಲ್ಲ ಕಚ್ಚುವನೆಂದು।।2।। ಕಾಮದಿಂದಲಿ ನಿನ್ನ ಕಳವಳತನಕಾಗಿ। ಶ್ಯಾಮಸುಂದರ ಶ್ರೀಪುರಂದರವಿಠ್ಠಲನ।।3।।

ವೆಣ್ಣೈ ತಿಂಗ ವೇಂಡಾಮಡಾ (ತಮಿಳು) — ರಾಗ: ಮಧ್ಯಮಾವತಿ

ವೆಣ್ಣೈ ತಿಂಗ ವೇಂಡಾಮಡಾ ಕಣ್ಣಾ ಮಣಿಯೆ ನೀ।।ಪ।। ಸಕ್ಕರೆಯುಂ ಪೂರಿ ಮಿಠಾಯಿ ಅಕ್ಕರೆಯುಂ ಮಿಂದಲ್ ಮಿಠಾಯಿ। ಅಂದಂವುಳ್ಳ ಬಾಲನುಕ್ಕು ಕೊಂಜಂ ಕೊಂಜಂ ಕುಡುಕ್ಕುರೇಂಡಾ। ವೀದಿಯಿಲೆ ಪೋಗವೇಂಡಾಂ ದುಷ್ಟತನಂ ಸೈಯ್ಯವೇಂಡಾಂ। ಭೇಷಾನ ಮಿಠಾಯಿ ತರೇಂಡಾ ಕೃಷ್ಣ।।1।। ಗುಂಜಾಲಾಡು ಪದರ್ ಪೇಣಿ ಗುಳ್ಳುರಿಗೆ ಲಡ್ಡು ಮಿಠಾಯಿ। ಅಂದಂವುಳ್ಳ ಬಾಲನುಕ್ಕು ಕೊಂಜಂ ಕೊಂಜಂ ಕುಡುಕ್ಕುರೇಂಡಾ। ವೀದಿಯಿಲೆ ಪೋಗವೇಂಡಾಂ ದುಷ್ಟತನಂ ಸೈಯ್ಯವೇಂಡಾಂ। ಭೇಷಾನ ಮಿಠಾಯಿ ತರೇಂಡಾ ಕೃಷ್ಣ।।2।। ಮಿಂದಲ್ ದ್ರಾಕ್ಷಿ ಕಲ್ಕಂಡು ಪಾಲುಂ ನೈಯುಂ ಸಕ್ಕರೆಯುಂ। ಅಂದಂವುಳ್ಳ ಬಾಲನುಕ್ಕು ಕೊಂಜಂ ಕೊಂಜಂ ಕುಡುಕ್ಕುರೇಂಡಾ। ವೀದಿಯಿಲೆ ಪೋಗವೇಂಡಾಂ ದುಷ್ಟತನಂ ಸೈಯ್ಯವೇಂಡಾಂ। ಭೇಷಾನ ಮಿಠಾಯಿ ತರೇಂಡಾ ಕೃಷ್ಣ।।3।।

ಮನೆಯೊಳಗಾಡೊ ಗೋವಿಂದ — ರಾಗ: ಷಣ್ಮುಖಪ್ರಿಯ-ಖಂಡಛಾಪು

ಮನೆಯೊಳಗಾಡೊ ಗೋವಿಂದ। ನೆರೆ ಮನೆಗಳಿಗೇಕೆ ಪೋಗುವೆಯೊ ಮುಕುಂದ।।ಪ।। ನೊಸಲಿಗೆ ತಿಲಕವನಿಡುವೆ। ಅಚ್ಚ ಹೊಸ ಬೆಣ್ಣೆಯನಿಟ್ಟು ಕಜ್ಜಾಯ ಕೊಡುವೆ। ಹೊಸಬೆಲ್ಲ ತಂದು ನಾ ಕೊಡುವೆ। ಹೊನ್ನ ಮಿಸುಣಿ ನಿನ್ನನ್ನು ನೋಡಿ ಸಂತೋಷಪಡುವೆ।।1।। ಅಣ್ಣಯ್ಯ ಬಲರಾಮ ಸಹಿತ। ನೀನಲ್ಲಲ್ಲಿ ತಿರುಗಾಡಿ ಬಾಹೋದೆ ವಿಹಿತ। ಹೆಣ್ಣುಗಳ್ಯಾಕೋ ಸಂಗಾತ। ಎನ್ನ ಬಿನ್ನಪವನು ಪರಿಪಾಲಿಸೊ ದಾತ।।2।। ಚೋರನೆನಿಸಿಕೊಳ್ಳಲೇಕೆ। ಶ್ರೀಮನ್ನಾರಾಯಣನಿಗೆ ದೂರುಗಳೇಕೆ। ವಾರಿಜಾಕ್ಷೇರ ಕೂಟವೇಕೆ। ಪುರಂದರ ವಿಠಲರಾಯ ಕೇಳೆಚ್ಚರಿಕೆ।।3।।

ಚೇಷ್ಟೆಯನು ಮಾಡದಿರು

ಚೇಷ್ಟೆಯನು ಮಾಡದಿರು। ಕೃಷ್ಣ ನೀ ಪರಿಬಹಳ। ನಿಷ್ಠುರದ ವಚನಗಳನಾಡುವರು ಜನರು।।ಪ।। ಎಷ್ಟು ತಪವನು ಮಾಡಿ। ಪಡೆದೆನೋ ನಾ ನಿನ್ನ। ಕಷ್ಟವಾಯಿತು ನಿಂದೆನುಡಿಯ ಕೇಳುವುದು।।ಅ.ಪ।। ಕೊಂಡು ಪೋಗಲು ಬೆಣ್ಣೆ ಪಾಲುದಧಿಬಾಂಡಗಳು। ದುಂಡು ನಗೆಮೊಗ ಚೆಲುವನಿನ್ನ ಮಗನು।। ಕಂಡರೆಮ್ಮಯ ಮೋರೆ। ತಿರುಗಲೇತಕೆ ಇಂಥಾ। ಪುಂಡುಹುಡುಗನು ನಿನ್ನ ಮಗನೆಂದು ದೂರುವರೋ।।1।। ಮುರಳಿನಾದವ ಕೇಳಿ। ಮರೆತು ಮೇವನು ಎಮ್ಮ। ತುರುಕರುಗಳೆಲ್ಲ ಬಲು। ಕೃಶವಾದವಮ್ಮಾ।। ಹರಿವಯಮುನಾಜಲದೊಳಾದ ಅವಿವೇಕವನು। ಅರುಹಲೆಮ್ಮಯ ಮನವು। ಜರಿವದೆಂತಾಡುವರೋ।।2।। ಸಂಸಾರ ಮೋಹವನು। ತೊರದ ಎಮ್ಮಯ ಮನದ। ಸಂಶಯವ ಬಿಡಿಸಿ। ಪ್ರಸನ್ನರಾಗಿರಿ ಎಂದು।। ಧ್ವಂಸವಾಯಿತು ಎಮ್ಮ। ಅಭಿಮಾನಕಿರುವ ಚಂದ್ರ। ವಂಶಕೆಂತಹ ಕೀರ್ತಿ। ತಂದನೆಂದಾಡುವರೋ।।3।।

ಸಲ್ಲದೋ ಕೃಷ್ಣ — ರಾಗ: ರೇವತಿ, ಆದಿತಾಳ

ಸಲ್ಲದೋ ಕೃಷ್ಣ ಸಲ್ಲದೊ।।ಪ।। ಸಿರಿವಲ್ಲಭ ಇದ ನೋಡಿ ಪಾಲಿಸಬೇಕೋ।।ಅ.ಪ.।। ಬಿತ್ತಿ ಬೆಳೆಸಿ ತಲೆಯೆತ್ತಿದ ಪೈರನು। ಮತ್ತೆ ತುರುವಿಂಡು ಬಿಟ್ಟು ಮೆಲ್ಲಿಸುವುದು।।1।। ಸಾವಿರ ಹೊನ್ನಿಕ್ಕಿ ಸದನವ ಸಾಧಿಸಿ। ಪಾವಕನುರಿಗೆ ನೀನೊಪ್ಪಿಸಿಕೊಡುವುದು।।2।। ಕುಶಲದಿ ಬಣ್ಣಿಸಿ ಬರೆದ ಚಿತ್ತಾರವ। ಮಸಿ ಮಣ್ಣು ಮಾಡಿ ನೀ ಕೆಡಿಸುವುದು।।3।।

ಬಹುಕಾಲ ಮುದ್ದಿಸಿ ಕಲಿಸಿ ಮಾತುಗಳ। ಗಿಳಿಯ ಸಾಕಿ ಬಾವುಗಗೆ ಒಪ್ಪಿಸುವುದು॥4॥ ಕರುಣಿಸು ಸಿರಿ ಪುರಂದರವಿಠ್ಠಲ ನಮ್ಮ। ಹಿರಿದು ಮಾಡಿ ಮತ್ತೆ ಕಿರಿದು ಮಾಡುವುದು॥5॥

ಪೋಗದಿರೆಲೊ ರಂಗಾ ಬಾಗಿಲಿಂದಾಚೆಗೆ — ರಾಗ: ಶಂಕರಾಭರಣ-ಆದಿತಾಳ

ಪೋಗದಿರೆಲೊ ರಂಗಾ ಬಾಗಿಲಿಂದಾಚೆಗೆ॥ಪ॥ ಭಾಗವತರು ಕಂಡರೆತ್ತಿಕೊಂಡೊಯ್ವರೊ ॥ಅ.ಪ॥ ಸುರಮುನಿಗಳು ತಮ್ಮ ಹೃದಯಗಹ್ವರದಲ್ಲಿ। ಪರಮಾತ್ಮನ ಕಾಣದರಸುವರೋ॥ ದೊರಕದ ವಸ್ತುವು ದೊರಕಿತು ತಮಗೆಂದು। ಹರುಷದಿಂದಲಿ ನಿನ್ನ ಕರೆದೆತ್ತಿಕೊಂಬರು॥1॥ ಅಗಣಿತಗುಣ ನಿನ್ನ ಜಗದ ನಾರಿಯರೆಲ್ಲ। ಹಗೆಯಾಗಿ ನುಡಿವರೊ ಗೋಪಾಲನೆ॥ ಮಗುಗಳ ಮಾಣಿಕ್ಯ ತಗುಲಿತು ಕರಕೆಂದು। ಬೇಗದಿಂದಲಿ ಬಂದು ಬಿಗಿದಪ್ಪಿಕೊಂಬರೊ॥2॥ ಧಿಟ್ಟನಾರಿಯರೆಲ್ಲ ಇಷ್ಟವ ಸಲಿಸೆಂದು। ಅಟ್ಟಟ್ಟಿ ಬೆನ್ನಿಂದೆ ತಿರುಗುವರೊ॥ ಸೃಷ್ಟೀಶ ಪುರಂದರವಿಠಲರಾಯನೆ। ಇಷ್ಟಿಷ್ಟು ಬೆಣ್ಣೆಯ ಕೊಟ್ಟೇನೊ ರಂಗಯ್ಯ॥3॥

ಸಣ್ಣ ರುಮಾಲು ಕಟ್ಟಿ (ಮಂಗಳ)

ಸಣ್ಣ ರುಮಾಲು ಕಟ್ಟಿ। ಚುಂಗಬಿಟ್ಟು। ಬಣ್ಣೆಸಿ ಕಸ್ತೂರಿ ತಿಲಕವಿಟ್ಟು। ಚಿನ್ನಿಕೋಲು ಚೆಂಡು ಬುಗುರಿ ಕೈಯಲಿ ಕೊಟ್ಟು। ಹೊಸ ಬೆಣ್ಣೆಯ ಮೆಲು ಎಂದು ಕಳುಹಿಸಿಕೊಟ್ಟು। ಮಂಗಳ ಜಯ ಮಂಗಳಂ॥ ಮಂಗಳಂ ಶುಭ ಮಂಗಳಂ॥1॥ ಎಡದ ಕೈಯಲ್ಲಿ ಪುಟ್ಟ ಚಿಲ್ಲುಕೊಟ್ಟು। ಬಲದ ಕೈಯಲ್ಲಿ ಪುಟ್ಟ ಚೆಂಡು ಕೊಟ್ಟು। ವಾರಿಗೆ ಮಕ್ಕಳ ಕೂಡ ಬಿಟ್ಟು ಹಾಲ। ಹರವಿಯ ಒಡೆಯಲೆಂದು ಕಳುಹಿಸಿಕೊಟ್ಟು॥ ಮಂಗಳಂ ಜಯ ಮಂಗಳಂ ಮಂಗಳಂ ಶುಭ ಮಂಗಳಂ॥2॥ ಇಂತೆಂದು ರಂಗಗೆ (ಕೃಷ್ಣಗೆ) ಅಪ್ಪಣೆ ಕೊಟ್ಟು। ಪರಿಪರಿ ಬೋಧನೆ ತುಂಬಿಬಿಟ್ಟು। ನಿಗಮ ಗೋಚರನೆಂಬ ಹೆಸರನಿಟ್ಟು ನಮ್ಮ। ಪುರಂಧರ ವಿಠಲನ ಗೂಳಿಬಿಟ್ಟು। ಮಂಗಳಂ ಜಯ ಮಂಗಳಂ। ಮಂಗಳಂ ಶುಭ ಮಂಗಳಂ॥3॥

❖ ❖ ❖

ಶ್ರೀಕೃಷ್ಣನ ವೇಣುಗಾನದ ಮೋಡಿ

ಏಳೋ ಬಾಲನೇ ವೇಳೆ

ಏಳೋ ಬಾಲನೇ। ವೇಳೆ ಮೀರುತಿಹುದು। ಕೇಳುತಿಹರುಯದು ಮೌಳಿ ಮೌಳಿ ಎಲ್ಲಿ ಎಂದೂ॥ಪ॥ ಎದ್ದು ಬಾರೆಲೋ। ಮುದ್ದು ಬಾಲಕೃಷ್ಣ। ಪದ್ಧತಿಯಲ್ಲಿ ಕ್ಷೀರ ಸಿದ್ಧವಾಗಿ ಇಹುದು॥ಅ.ಪ॥ ಜಾಣಾ ನಿನ್ನಯಾ ವೇಣೂನಾದ ಕೇಳೇ। ಏಣ ನಯನೆಯರೂ। ಕಾಣಬಯಸುತಿಹರೂ॥1॥ ಯಮುನಾತೀರದೀ। ಸುಮಲತೆಗಳಲ್ಲಿ। ಕಮಲನಯನ ನಿನ್ನಾ। ರಮಿಸೆಬಯಸುತಿಹರೂ॥2॥ ಮೌನಿಜನರುತಮ್ಮಾ। ಸ್ನಾನವನ್ನು ಮುಗಿಸಿ। ಜ್ಞಾನಪೂಜೆಗುಣಗಾನ ಮಾಡುತಿಹರೂ॥3॥ ನಿನ್ನ ಪ್ರಿಯ ಜನರನ್ನು ಕಾಯಿಸಲು। ಇನ್ನು ತಡವೇನೋ ಪ್ರಸನ್ನವದನನಾಗಿ॥4॥

ಪ್ರಭಾತವಾಯಿತು ವನಮಾಲೀ — ರಾಗ: ಕಾಮವರ್ಧಿನಿ

ಪ್ರಭಾತವಾಯಿತು ವನಮಾಲೀ। ಯಾತಕೆ ಬೇಸರ ಬಾರಿಸು ಮುರಳೀ॥ಪ॥ ಇಂದಿಗು ಬಂದಿದೆ ಜ್ಞಾನಪ್ರಭಾತ। ಜಗಕಿದು ತಂದಿದೆ ನವೀನ ಚರಿತ। ಎಂದು ಸಾರುತಲಿ ಬಾರಿಸು ಮುರಳೀ॥1॥ ಅರುಣ ಕಿರಣಗಳ ಮುಡಿಯನೆ ಧರಿಸಿ। ಕುಣಿದಳು ಮಣಿದಳು ಉಷೆ ಇದನಾಲಿಸಿ। ಬೆಳಗುತಲಿಹಳು ಹರುಷವ ತಾಳಿ॥2॥ ಗೋಕುಲ ಹಸುರಿಗೆ ಸಾಗುತಲಿಹುದು। ಜಾಗರ ಗುಡಿಯಲಿ ನಿನಕಿಸುತಿಹುದು। ಇಂಚರಿಸುತಲಿದೆ ಕೋಗಿಲೆ ಮೆಲ್ಲುಲಿ॥3॥

ಕೊಳಲನೂದುವ ಚದುರನ್ಯಾರೆ **ರಾಗ: ದ್ವಿಜಾವಂತಿ**

ಕೊಳಲನೂದುವ ಚದುರನ್ಯಾರೆ ಪೇಳಮ್ಮಯ್ಯ। ತಳಿರಂದದಿ ತಾಪೊಳೆವಕರದಿ ಪಿಡಿದು॥ಪ॥ ನಾದದಿ ತುಂಬಿತು ಗೋವರ್ಧನಗಿರಿ ಯಾದವಕುಲನಭ ನೆರೆದಿತು ಖಗಕುಲ। ಸಾಧಿಸಿ ನೋಡಲು ಕೃಷ್ಣನ ಈಗಲೆ ಸಾಧ್ಯವೇನೆ ಬೃಂದಾವನದೊಳು॥1॥ ಮೇವು ಮರೆತವು ಗೋವುಗಳೆಲ್ಲವು ಸಾವಧಾನದಿ ಹರಿದಳು ಯುಮುನಾ। ಆವು ಕಾವುತಲಿ ಗೋವಳರೆಲ್ಲರು। ಹಾವಭಾವದಲಿ ಬೃಂದಾವನದೊಳು॥2॥ ಸುರರು ಸುರಿದರಾಕಾಶದಿ ಸುಮಮಳೆ ಸರಿದು ಪೋಗಿ ನೋಡೇ ಬೃಂದಾವನದೊಳು ಸಾರಿಸಾರಿ ಈ ಶ್ರೀಕೃಷ್ಣನ ಈಗಲೆ ತುರುಗಳ ಕಾಯ್ವ ಕದಂಬ ವನದೊಳು॥3॥

ಉದಯರಾಗ ವೇಣುಗಾನ **ರಾಗ: ಭೌಳಿ**

ಉದಯರಾಗ ವೇಣುಗಾನ ಮನವ ತಣಿಸಿದೆ। ಹೃದಯತುಂಬಿ ಚೆಲುವೆಯಾಗಿ ಜಗವ ಸೇರಿದೆ॥ಪ॥ ರಾಗಭಾವ ತಾಳಮೇಳ ಸಮಿರ ತುಂಬಿದೆ। ಪ್ರೇಮಮುದಿತ ಗಾನಸುಧೆ ಹರಿದು ಬಂದಿದೆ॥ ಹೃದಯಹೃದಯ ಮಿಲನವಾಗಿ ಐಕ್ಯವಾಗಿದೆ। ಸೊಗಸು ಸೊಬಗು ಏಕವಾಗಿ ಮುದವ ನೀಡಿದೆ॥1॥ ಬಾರೋ ಕೃಷ್ಣ ಕೂಡಿ ನಾವು ಜಳಕವಾಡುವ। ಗಂಧಮಿಶ್ರಿತ ಪನ್ನೀರಿನಿಂದ ಓಕುಳಿ ಆಡುವ। ಗೆಜ್ಜೆ ಕಟ್ಟಿ ಹೆಜ್ಜೆ ಇಟ್ಟು ನೃತ್ಯಮಾಡುವ। ನಿನ್ನ ಸಂಗ ಕೂಡಿ ನಾವು ಧನ್ಯರಾಗುವ॥2॥ ಯಮುನಾ ತೀರದಿ ಆಟವಾಡಿ ಗಾನಮಾಡುವ। ನಿನ್ನ ಸನಿಹನಿಂದು ನಾವು ಪುಲಕಗೊಳ್ಳುವ। ಎಮ್ಮ ಮನದ ಆಸೆಗಳನು ನಿನಗೆ ತಿಳಿಸುವ। ಚೈತನ್ಯದಾಸನ ಬಾಳಿನಲ್ಲಿ ಆನಂದ ತರುವ॥3॥

ಕೊಳಲೂದೋ ಮನಮೋಹನಾ **ರಾಗ: ರಂಜನಿ**

ಕೊಳಲೂದೋ ಮನಮೋಹನಾ। ನೀ ಕೊಳಲೂದೋ ಮನಮೋಹನಾ। ಗೋವಿಂದ ಗೋಪಾಲ ಗೋವರ್ಧನಾ॥ಪ॥ ಇಡು ಬೆರಳುಗಳನು। ಕೊಳಲೊಳು ಸರಿಸುತ। ನುಡಿಸೈ ಸರಿಗಮ। ಪದನಿಸ ಯೆನಿಸುತ। ಉಡುರಾಜ ವದನನೆ। ತಡಮಾಡದಲಿ॥1॥ಪವಳದುಟಿಯ। ನಲುಗಾಡಿಸಿ ಕೊಳಲೊಳು। ಸಮರಸವನು। ಹೊರಸೂಸುತ ಜವದೀ। ಸವಿಯೆಂಬ ಪ್ರಾಣೇಶ ಸಾನಂದಮೂರ್ತಿ॥2॥

ಕೊಳಲೂದುವಾ ಚದುರಾನು ಯಾರೇ

ಕೊಳಲೂದುವಾ ಚದುರಾನು ಯಾರೇ॥ಪ॥ ಕೊಳಲಿನ ಈಗ ಧ್ವನಿ ಕೇಳುತಿದೆ। ನಳಿನಾ ಮುಖಿ ಬಾಬಾ ಪೋಗೋಣ॥ಅ.ಪ॥ ಸರಸಿಜ ನಮ್ಮ ಸಕಲಗೋಪಾಲ। ತುರುಗಳ ಕಾಯ್ದು। ಕದಂಬವನದ। ನವರತುನಾದ। ಕೊಳಲಾದೆ ಪಿಡಿದು ನುಡಿಸಿ ಪಾಡುತ ಸಡಗರದಿಂದ॥1॥

ಮನಮೋಹನ ನಿನ್ನಯ ಮುರಳೀನಾದ

ಮನಮೋಹನ ನಿನ್ನಯ ಮುರಳೀನಾದ। ಏನಿದು ಮೂಜಗ ಮೋಹಿಪುದೂ॥ಪ॥ ಮುರಳಿಯನಾದಕೆ ದನಕರುಗಳು ತಾವ್। ಹರುಷದಿ ತಲೆಯನು ತೂಗುತಿರೆ। ಕ್ರೂರಮೃಗ ನಿಚಯ ದ್ವೇಷವ ತ್ಯಜಿಸುತ ಕರುಣದಿ ಕಣ್ಣೀರಿಡುತಲಿವೆ॥1॥ ಗಾನವಾಹಿನಿಯ ವೈಭವದಿಂದಾ। ಯಮುನೆಯು ಭರದಿಂ ದುಬ್ಬುತಿರೆ। ಕಾನನವೆಲ್ಲವು ನವಚೈತನ್ಯದಿ ಆನಂದವ ತಂದೀಯು ತಿದೆ॥2॥ ಬಾಡಿದಬಳ್ಳಿಗಳಂಕುರಿಸುತಬಲು। ಸಡಗರದಿಂದಲಿ ಬಳುಕುತಿವೆ। ಗಿರಡಮರ ಭರದಿಂ ಚಿಗುರುತಿವೆ। ಬೆಡಗಿನ ಪೂಗಳು ಅರಳುತಿವೆ॥3॥ ಸುಂದರ ಚಂದಿರನಂಬರದಲಿ ತಾ। ನಂದದಿ ಚಂದ್ರಿಕೆ ಚೆಲ್ಲುತಿರೆ। ಮಂದಮಾರುತನು ಬೀಸುತ ಮೆಲ್ಲನೆ। ಅಂದದಿ ಪರಿಮಳ ಪೂಸುತಿಹ॥4॥ ನೀಲಾಕಾಶದಿ ನೀರದ ಬೃಂದವು ನಲಿದೊಲಿದಮೃತವ ವರ್ಷಿಪುದು। ಕಲಕಲನಾದವಗೈಯುತ ಶುಕ। ಕೋಗಿಲೆಗಳು ರಾಗವ ಪಾಡುತಿವೆ॥4॥ ಕೊಂಕಿಸಿ ಕೊರಳನು ಚಂದದಿ ನವಿಲೊಂದಂಕೆ ಇಲ್ಲದಲೆನಲಿಯುತಿದೆ। ಶಂಕೆ ಇಲ್ಲದಲೆ ರೆಕ್ಕೆಯ ಹಾರಿಸಿ ಬಿಂಕದಿ ನರ್ತಿಸಿ

ಮೆರೆಯಿತಿದೆ॥6॥ ವದನದ ಮೋಹಕ ಚಲ್ವಿಗೆ ನಾಚುತ। ಚಂದಿರ ಮೋಡದೊಳಡಗುತಿರೆ। ರದನದ ಕಾಂತಿಗೆ ಭ್ರಮಿಸುತ ಕುಂದಗಳಂದದಿ ಮುದದಿಂದರಳುತಿರೆ ॥7॥ ಸುಂದರ ಭ್ರೂಲತೆಯಂಚಿಲಿರಾಜಿಪ। ಇಂದೀರವನಿ ಭನಯಯನಗಳ ಮಧುಕರನೊಂದತಿ ಭ್ರಮಿಸುತಜವದಿಂ। ಮಧುಪಾನಕೆ ಝೇಂಕ ರಿಸುತಿದೆ॥8॥ ಪರವಶಗೊಳಿಸುವ ಸುಮಧುರ ಗಾನವು। ಆ ರಾಧೆಯ ಮನ ಸೆಳೆಯುತಿರೆ। ವಿರಹದಿ ಬಳಲುತ ಮೋಹದಿ ಕೊರಗುತ। ಮೈಮರೆ ದೋಡುತ ಬರುತಿಹಳು॥9॥ ವಿರಹದಿ ಬಿಳುಪೇರಿದ ರಾಧೆಯ ಮುಖ ಮುರಳಿಯ ನಾದವ ಕೇಳುತಲೂ। ಹರುಷದಿ ವಿಕಸಿಪ ಮುಖಶೋಭೆಗೆ ಜಗ ಭರದಿಂ ಪಾಂಡುರ ಮಯವಾಗೆ॥10॥ ವರಹಂಸವಕಾಣದೆ ವಿಧಿ ತವಕಿಸೆ ಹರ ಕೈಲಾಸವ ಹುಡುಕುತಿಹ। ಐರಾವತವನು ಸುರಪತಿ ತಡಕುವ ಸಂಭ್ರಮವೇನಿದು ಅಚ್ಚರಿಯು॥11॥ ಮನಮೋಹಕ ಲೀಲೆಯ ನೋಡುತ ಸುರಜನ ಸುಮವೃಷ್ಟಿಯ ಸುರಿಸುತಲಿ। ಆನಮಿಸುವ ಸಿರಿ ಏನದ್ಭುತವಿದು। ನಾನರಿಯೆನೋ ಜಯ ಕಮಲೇಶ॥12॥

ಯಾವ ಮೋಹನ ಮುರಳಿ — ರಾಗ: ತಿಲಂಗ್

ಯಾವ ಮೋಹನ ಮುರಳಿ ಕರೆಯಿತು ದೂರ ತೀರಕೆ ನಿನ್ನನು। ಯಾವ ಬೃಂದಾವನವು ಸೆಳೆಯಿತು ನಿನ್ನ ಮಣ್ಣಿನ ಕಣ್ಣನು॥ಪ॥ ಹೂವು ಹಾಸಿಗೆ ಚಂದ್ರ ಚಂದನ ಬಾಹು ಬಂಧನ ಚುಂಬನ। ಬಯಕೆ ತೋಟದ ಬೇಲಿಯೊಳಗೆ ಕರಣಗಣದೀ ರಿಂಗಣ॥ ಒಲಿದ ಮಿದುವೆದೆ ರಕ್ತಮಾಂಸದ ಬಿಸಿದು ಸೋಂಕಿನ। ಪಂಜರ ಇಷ್ಟೆ ಸಾಕೆಂದಿದ್ದೆಯಲ್ಲೋ ಇಂದು ಏನಿದು ಬೇಸರ॥1॥ ಏನಿದೇನಿದು ಹೊರಳುಗಣ್ಣಿನ ತೇಲುನೋಟದ ಸೂಚನೆ। ಯಾವ ಸುಮಧುರ ಯಾತನೇ, ಯಾವ ದಿವ್ಯದ ಯಾಚನೇ॥ ಮರದೊಳಡಗಿಹ ಬೆಂಕಿಯಂತೆ ಎಲ್ಲೋ ಮಲಗಿದೆ ಬೇಸರ। ಏನೋ ತೀಡಲು ಏನೋ ತಾಕಲು ಹೊತ್ತಿ ಉರಿವುದು ಕಾತರ॥2॥ ಸಪ್ತಸಾಗರದಾಚೆ ಎಲ್ಲೋ ಸುಪ್ತ ಸಾಗರ ಕಾದಿದೆ। ಮೊಳೆಯದಲೆಗಳ ಮೂಕ ಮರ್ಮರ ಇಂದು ಇಲ್ಲಿಗೂ ಹಾಯಿತೆ। ವಿವಶವಾಯಿತು ಪ್ರಾಣ ಹಾ ಪರವಶವು ನಿನ್ನೀ ಚೇತನ॥3॥ ಇರುವುದೆಲ್ಲ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನಾ॥ ಯಾವ ಮೋಹನ ಮರುಳಿ ಕರೆಯಿತು ಇದ್ದಕಿದ್ದೊಲೆ ನಿನ್ನನ್ನು? ಯಾವ ಬೃಂದಾವನವು ಚಾಚಿತು ತನ್ನ ಮಿಂಚಿನ ಕೈಯನು?

ಯಾವ ಕೊಳಲ ಗಾನ ಕೇಳಿ — ರಾಗ: ಮಿಶ್ರಮಾಂಡ್

ಯಾವ ಕೊಳಲ ಗಾನ ಕೇಳಿ ಓಡಿಬಂದೆನೋ। ಯಾವ ಮಧುರ ರಾಗ ಕೇಳಿ ಮಾರುಹೋದೆನೋ ಕೃಷ್ಣ॥ಪ॥ ಮನವಿಲ್ಲ ಮಾರಿಲ್ಲ ಬಾಳಲ್ಲಿ ಬೆಳಕಿಲ್ಲ। ನಿನ್ನ ಮಧುರ ನೆನಪಿನಲೆ ಉಸಿರೆಳೆಯುತಿಹೆನಲ್ಲ। ಮೀನಂತೆ ಬಳಲಾಡಿ ನೀರನಾ ಅರಸಿಹೆನು। ಜೇನ ಹೊಳೆ ನೀನಾಗೆ ನಿನ್ನಲ್ಲೆ ಮುಳುಗಿಹೆನು॥1॥ ಬಾಳೆಂಬ ರಥದಲ್ಲಿ ಇರುವೆರಡು ಚಕ್ರಗಳು। ನಾನೊಂದು ನೀನೊಂದು ಎಂದು ನಾ ನಂಬಿಹೆನು। ಚಂದ್ರತಾನರಳಿರಲು ತಾರೆಗಳು ಇರಲೇನು। ಹುಲುಮನುಜರಿರಲೇನು ನಿನ್ನ ಹೊರತು ಬೇರೇನು॥2॥

ಮುರಳಿಯ ನಾದವ ಕೇಳಿ — ರಾಗ: ಕುರಂಜಿ

ಮುರಳಿಯ ನಾದವ ಕೇಳಿ ಬನ್ನಿರೇ ಮುರಳಿಯ ನಾದವ ಕೇಳಿ॥ಪ॥ ಮಥುರಾನಾಥನು ಮುರಳಿಯನೂದಲು ಸುರಿವುದಾನಂದಜಲ। ನಯನದಲಿ ಸುರಿವುದಾನಂದಜಲ॥ಅ.ಪ॥ ಕಂಗೊಳಿಸುವ ಬೆಳದಿಂಗಳ ಸೊಬಗಲಿ ತಂಗಾಳಿಯ ಸುಖದೀ ಶ್ರೀರಂಗನ॥1॥ ಶ್ಯಾಮಲಾಂಗನು। ತನ್ನ ಕೋಮಲ ಕರದಲ್ಲಿ ಆ ಮುರಳಿಯ ಪಿಡಿಯೇ ಹೃದಯದಲಿ ಪ್ರೇಮವು ತುಂಬುವುದು॥2॥ ಪಂಚಬಾಣನ ಪಿತ ಮುರಳಿಯ ಮಧುರಸ ಹಂಚಲೆಮಗೆ ರೋಮಾಂಚವಾಗುವುದು।3॥ ರಜನೀಕಾಂತನ ಕುಲದಲಿ ಜನಿಸಿ ವ್ರಜಜನಗಳಿಗಧಿಕಾ ಪ್ರಸನ್ನನ॥4॥

ಕೃಷ್ಣನಾ ಕೊಳಲಿನಾ ಕರೆ **ರಾಗ: ಸಿಂಧುಭೈರವಿ**

ಕೃಷ್ಣನಾ ಕೊಳಲಿನಾ ಕರೆ ಆಲಿಸು ಕೃಷ್ಣನಾ ಕೊಳಲಿನಾ ಕರೆ ತ್ವರೆ ತ್ವರೆ ।।ಪ।। ತೊಟ್ಟಿಲಿನ ಹಸುಗೂಸ ಮರೇಮರೇ ಪಕ್ಕದ ಗಂಡನ ತೊರೇ ತೊರೇ । ಬೃಂದಾವನಕೆ ತ್ವರೇ ತ್ವರೇ।।1।। ಮುತ್ತಿನ ಕುಪ್ಪುಸ ಹರಳೋಲೆ। ಮಲ್ಲಿಗೆ ಜಾಜಿ ಮುಡಿಮಾಲೆ। ಹೆಜ್ಜೆಯ ನೂಪುರ ಗೆಜ್ಜೆಯ ಪಿಲ್ಲಿ। ಮರೆತೇ ಬಂದೆವೆ ಮನೆಯಲ್ಲೀ ಸಖಿ।।2।। ಹೊತ್ತಾರೆ ಹೊರೆಗೆಲಸ ಮಿಕ್ಕಾರೆ ಮಿಗಲಿ। ಪಕ್ಕಾದ ನೆರೆಹೊರೆ ನಕ್ಕಾರೆ ನಗಲಿ। ಬೃಂದಾವನದೊಳು ಆಲಿಸು ಬಾ ಮುರಳಿ।।3।।ನೇಸರ ಕಿರಣ ಆಗಸದಿರುಳ ತೊರೆಯಿಸುವ ರೀತಿ। ಮುರಳೀಧರನ ಮುರಳೀಮಾಯೆಗೆ ಮನಬಿಟ್ಟಿತು ಭೀತಿ। ಇನ್ನಾಯಿತು ಪ್ರೀತಿ।।4।।

ಮುರಳೀ ಬಾರಿಸೋ ಮಾಧವಾ **ರಾಗ: ಸಿಂಧುಭೈರವಿ-ಆದಿತಾಳ**

ಮುರಳೀ ಬಾರಿಸೋ ಮಾಧವಾ। ಕುಣಿಯುವೆ ಮುರಳಿಯ ಬಾರಿಸೋ ಓ.....।।ಪ।। ಭವದ ಸಂತಾಪವು ಕೊನೆಗಾಣಲೀ। ಭುವಿಯೊಳು ಜೀವನ ಸವಿಯಾಗಲಿ। ನವವಿಧ ಭಕುತಿಯು ಹರಿದಾಡಲೀ। ಕಿವಿ ತುಂಬ ಕೇಳಿ ನಾ ನಲಿಯುವೆ ಶ್ರೀಕರ।।1।। ಅರಿಷಡ್ವರ್ಗಗಳೆಲ್ಲ ಮರೆಯಾಗಲೀ। ಹರುಷ ಮಾನಸದಲ್ಲಿ ಸೆರೆಯಾಗಲೀ। ಮುರಳಿಯ ಧ್ವನಿಯು ತಾ ದೊರೆಯಾಗಲಿ। ಪರಮ ವೈರಾಗ್ಯವೇ ಸಿರಿಯಾಗಲೀ।।2।। ಸಾಲೋಕ್ಯ ಸಾರೋಪ್ಯ ಸಾಯುಜ್ಯವು। ಈ ಲೋಕದಲ್ಲೀಗ ಈ ಲಾಭವು। ಶ್ರೀಲೋಲ ಗೋಪಾಲ ಬಾಲಪ್ರಸನ್ನನೆ। ಮೇಲಾಯ್ತು ನರಜನ್ಮ ಇರಲಿ ಎಂದೆಂದಿಗೂ।।3।।

ಮುರಳಿ ಬಾರಿಸ ಬೇಡವೋ

ಮುರಳಿ ಬಾರಿಸ ಬೇಡವೋ ಹೇ ಶೌರೇ। ಕರುಗಳನ್ನೆ ಬಿಟ್ಟು ತುರುವ ಕರೆಯ ಪೋಗಲ್ ಭರದಿ ಕಂಗಳ ಮುಚ್ಚಿ। ಮೊಲೆಯುಣ್ಣುದು ದೇವಾ।।1।। ಪತಿಗಳು ಬೈದು ಹಂಗಿಸಿ ಮಾತನಾಡಲು। ಸುತರನೆತ್ತಲು ಮನಬಾರದೋ ಯದುವರ।।2।। ಹದಿನಾಲ್ಕು ಲೋಕಕೆ ಪರಮ ಮಂಗಳ ಮೂರ್ತಿ ಪದುಮದಳಾಕ್ಷ ಶ್ರೀ ಬಾಲಕೃಷ್ಣನೆ ನಿಲಿಸೋ।।3।।

ಯದುವಂಶ ತಿಲಕನ **ರಾಗ: ಯದುಕುಲಕಾಂಭೋಜಿ-ಮಿಶ್ರಛಾಪುತಾಳ**

ಯದುವಂಶ ತಿಲಕನ -ವೇಷವಿದೇನೇ। ಮದಿರಾಕ್ಷಿ ಮುರಲೀ - ನಾದವಿದೇನೇ।।ಪ।। ಮುರಲೀ ಗಾನವಿದೇನೆ - ತರಲಾಪಾಂಗವದೇನೆ। ಸ್ಮರಸಂಭ್ರಮಾನಂದ - ಸ್ಮರಣೆಯಿದೇನೇ।।ಅ.ಪ।। ಕೊಳಲನೂದುತೆ ನಮ್ಮ - ಮನದಿ ಪವ್ವಳಿಸಿದ್ದ। ನಲವೊಲವೆಲ್ಲವ ಕೆರಳಿಸಿ ಕುಣಿಸಿ। ಪುಲಕಾಂಕುರಗಳನಾ-ಗಿಸಿ ಮೈಯ್ಯ ಮರೆಯಿಸಿ। ನಲಿವೀಗಾಯನಮಾಯೆ - ಯೊಳಗುಟ್ಟದೇನೆ।।1।। ಆಶೆಗಳೆಷ್ಟೋ ನಿರಾಶೆಗಳಿನ್ನೆಷ್ಟೋ। ರೋಷ ದುಃಖ ಪ್ರೇಮೋ-ತ್ಸಾಹಂಗಳೆಷ್ಟೋ।। ಸಾಸಿರ ಸುಳಿಗಾಳಿ ಬೀಸಿ ನಮ್ಮೆದೆಯನು। ಘಾಸಿಗೊಳಿಸೆ ಚೆನ್ನಕೇಶವನೊಲಿವನೆ।।2।।

ಮುರಲೀ ಗತಿ ವಿಪರೀತ ಕರಾಯಿ (ಹಿಂದಿ) **ರಾಗ: ಶುಭಪಂತುವರಾಳಿ**

ಮುರಲೀ ಗತಿ ವಿಪರೀತ ಕರಾಯಿ। ತಿಹು ಭುವನ್ ಭರಿ ನಾದ್ ಸಮಾಯೊ। ರಾಧಾರಮನ್ ಭಜಾಯಿ। ಬಛರಾ ಥನ್ ನಹೀ ಮುಖ್ ಪರಸತ್, ಚರತ್ ನಹೀ ತೃಣ ಧೇನು। ಜಮುನಾ ಉಲ್ಟಿ ಧಾರ್ ಚಲೀಬಹೀ ಪವನ್ ಥಕಿತ್ ಸುನಿ ವೇಣು।। ವಿಹವಲ್ ಭಯೆ ನಹೀ ಸುಧಿ ಕಾಹೂ ಸುರಗಂಧರ್ವ ನರನಾರೀ। ಸೂರ್‌ದಾಸ್ ಸಬ್ ಚಕಿತ್ ಜಹಾಂ ತಹಾಂ ಬ್ರಜ ಜುವತಿನ ಸುಖಕರಿ।।ಚರಣ।।

ವೇಣುಗಾನಲೋಲುನಿ **ರಾಗ: ಕೇದಾರಗೌಳ-ರೂಪಕತಾಳ**

ವೇಣುಗಾನಲೋಲುನಿ ಗನ। ವೇಯಿಕನ್ನುಲು ಕಾವಲೇನೇ।।ಪ।। ವೇಣುಲೆಲ್ಲ ದೃಷ್ಟಿ ಚುಟ್ಟಿ। ವೇಯುಚು ಮ್ರೊಕ್ಕುಚು ರಾಗ।।ಅ.ಪ।। ವಿಕಸಿತ ಪಂಕಜ ವದನುಲು। ವಿವಿಧ ಗತುಲ ನಾಡಗ। ನೊಕರಿಕೊಕರು ಕರಮುಡಿ ನಿಡಿ।

ಯೊರಕನುಲಜೂಡಗ। ಶುಕವಚನಮು ಗಲ ತರುಣುಲು। ಸೊಗಸುಗಾನು ಬಾಡಗ। ಸಕಲಸುರುಲು ತ್ಯಾಗರಾಜ। ಸಖುನಿ ವೇಡಗವಚ್ಚೇ।।ಚ।।

ಗಾನಮೂರ್ತೆ ಶ್ರೀಕೃಷ್ಣವೇಣು — ರಾಗ: ಗಾನಮೂರ್ತಿ-ಆದಿತಾಳ

ಗಾನಮೂರ್ತೆ ಶ್ರೀಕೃಷ್ಣವೇಣು ಗಾನಲೋಲ ತ್ರಿಭುವನಪಾಲ ಪಾಹಿ ।।ಪ।। ಮಾನಿನೀಮಣಿ ಶ್ರೀರುಕ್ಮಿಣಿ ಮಾನಸಾಪಹಾರ ಮಾರಜನಕ ದಿವ್ಯ ।।ಅ.ಪ।। ನವನೀತಚೋರ ನಂದಸತ್ಕಿಶೋರ ನರಮಿತ್ರ ಧೀರ ನರಸಿಂಹಶೂರ ನವಮೇಘ ತೇಜ ನಗಜಾ ಸಹಜ ನರಕಾಂತಕಾಜ ನತತ್ಯಾಗರಾಜ।।ಚರಣ।।

ವೇಣುನಾದಪ್ರಿಯ — ರಾಗ: ಕಾಪಿ

ವೇಣುನಾದಪ್ರಿಯ ಗೋಪಾಲ ಕೃಷ್ಣ ವೇಣುನಾದ ವಿನೋದ ಮುಕುಂದ। ಗಾನ ವಿನೋದ ಶೃಂಗಾರ ಗೋಪಾಲ।।ಪ।। ವಂದಿತ ಚರಣ ವಸುಧೆಯಾಭರಣ। ಇಂದಿರಾರಮಣ ಇನಕೋಟಿ ತೇಜ। ಮಂದರಧರ ಗೋವಿಂದ ಮುಕುಂದ। ಸಿಂಧುಶಯನ ಹರಿ ಕಂದರ್ಪಜನಕ।।1।। ನವನೀತ ಚೋರ ನಂದಕುಮಾರ। ಭುವನೈಕ ವೀರ ಬುದ್ಧಿವಿಸ್ತಾರ। ರವಿಕೋಟಿ ತೇಜ ರಘುವಂಶರಾಜ। ದಿವಿಜವಂದಿಂತ ದನುಜಾರಿ ಗೋಪಾಲ।।2।। ಪರಮದಯಾಳು ಪಾವನ ಮೂರ್ತಿ। ವರ ಕೀರ್ತಿಹಾರ ಶೃಂಗಾರ ಲೋಲ। ಉರಗೇಂದ್ರಶಯನ ವರಹಯವದನ ಶರಣ ರಕ್ಷಕ ಪಾಹಿ ಕೋದಂಡರಾಮ।।3।।

ನಿಲ್ಲಿಸದಿರು ವನಮಾಲೀ — ರಾಗ: ರಂಜನಿ

ನಿಲ್ಲಿಸದಿರು ವನಮಾಲೀ ಕೊಳಲ ಗಾನವಾ ನಿಲ್ಲಿಸೇ ನೀ ಕಳೆವುದೆಂತೋ ಭವ ಭೀತಿಯ ಕೇಶವಾ।।ಪ।। ಹಿರಿಯರಿಟ್ಟ ನಯದ ನಡೆಯ ಮೀರಿಹೆವೆಂದಹುದುಭಯ ನಿನ್ನ ಕೊಳಲು ನೀಡಲಭಯ, ನಟ್ಟಿರುಳೊಳೆ ಬಂದೆವಯ್ಯ।।1।। ನೀರು ನಿಂತು ಕೊಳೆಯುವಂತೆ ನಮಗಿಹುದೋ ನೂರು ಚಿಂತೆ। ಕೊಳಲ ಲುಹಿನ ನೆರೆಯು ನುಗ್ಗಿ ಜೀವ ಹರಿಯಲೆಂತ ಸುಗ್ಗಿ।।2।। ಭವದ ಮಾಯೆ ಅಡಗುವಂತೆ ಅಹಂಕಾರ ತೊಲಗುವಂತೆ। ನಿನ್ನ ಕೊಳಲ ಅನುರಾಗವು ಬದುಕು ತುಂಬಲನುಗಾಲವು।।3।।

ಏನು ಸಾಧನೆ ಮಾಡಿ ಕೃಷ್ಣನ

ಏನು ಸಾಧನೆ ಮಾಡಿ ಕೃಷ್ಣನ ಕರವಸೇರಿತೋ। ಬಿದರಿನ ಕೊಳಲು।।ಪ।। ಸಾನುರಾಗದಿ ಶ್ರವಣ ಮನನ ಧ್ಯಾನ ಗೈದಿತೋ ಬಹು ಜನ್ಮದಿ।।ಅ.ಪ.।। ದೇವದಾರು ಅಗರು ಚಂದನ ಮಾವು ಚಂಪಕ। ಹರಿತೋಷಕ ಸಾವಿರಾರು ತರುಲತೆಗಳೀ ವಸುಧೆಯೊಳಿರಲೂ।। ಬಿದಿರಿನ ಕೊಳಲು।।1।। ಮುರಮರ್ದನನ ಅಭಯ ಕರದೇವರ ಪ್ರಸಾದವ ಕಮಲೋದ್ಭವ। ಸ್ಮರರಿಪು ಮುಖಸುರರು ಬೇಡರು ದೊರೆಯ ದೀ ವಿಭವ ವಂಶೋದ್ಭವ।।2।। ತ್ರಾಣವೇನು ಮುರುಳಿಗೆ ಶ್ರೀಹರಿಯ ವದನದೊಳು। ಸುಧೆಯ ಸುರಿಯಲು। ಶ್ರೀನರಸಿಂಹನ ರಾಣಿ ತಾನೇ ವೇಣು ರಂಧ್ರದೊಳು ನಿಂದಿರುವಳು।।3।।

❖ ❖ ❖

ಗಿರಿಧಾರಿ ಶ್ರೀ ಬಾಲಕೃಷ್ಣ

ಗೋವರ್ಧನ ಗಿರಿಧಾರಿ ಗೋವಿಂದ — ರಾಗ: ದರಬಾರಿಕಾನಡ

ಗೋವರ್ಧನ ಗಿರಿಧಾರಿ ಗೋವಿಂದ ಗೋಕುಲ ಪಾಲಕ ಪರಮಾನಂದ।।ಪ।। ಶ್ರೀವತ್ಸಾಂಕಿತ ಶ್ರೀಕೌಸ್ತುಭಧರ। ಭಾವಕ ಭಯಹರ ಪಾಹಿ ಮುಕುಂದ।।ಅ.ಪ।। ಆನಂದಾಮೃತವಾರಿಧಿ ಖೇಲ। ಅಲಘ ಪರಾಕ್ರಮ ಅನುಪಮ ಶೀಲ। ಶ್ರೀನಂದಾತ್ಮಜ ಶ್ರಿತಜನಪಾಲ। ಶ್ರೀಕರ ಕಿಸಲಯ ಲಾಲನೆ ಲೋಲ।।1।। ಪಾಟಿತ ಸುರರಿಪು ಪಾದಪ ಬೃಂದ ಪಾವನ ಚರಿತ ಪರಾಮೃತ ಕಂದ। ನಾಟ್ಯ ರಸೋತ್ಕಟ ನಾನಾಭರಣ। ನಾರಾಯಣ ತೀರ್ಥಾಲೊವಂದಿತ ಚರಣ।।ಚ।।

ಗೋವರ್ಧನ ಗಿರಿಧಾರಿ ಮುರಾರಿ **ರಾಗ: ಕಾಪಿ-ಆದಿತಾಳ**

ಗೋವರ್ಧನ ಗಿರಿಧಾರಿ ಮುರಾರಿ॥ಪ॥ ಅಸುರಜನ ವೈರಿ ಭಕ್ತಜನ ವಿಹಾರಿ॥ಅ.ಪ॥ ಪಾಂಡವ ಪಕ್ಷಪಾತಿ ರುಕ್ಮಿಣೀಪತಿ ಪಾರ್ಥಸಾರಥಿ ವಿದುರ ಅತಿಥಿ॥ಚರಣ॥

ಗೋವರ್ಧನ ಗಿರೀಶಂ **ರಾಗ: ಹಿಂದೋಳ-ರೂಪಕತಾಳ**

ಗೋವರ್ಧನ ಗಿರೀಶಂ ಸ್ಮರಾಮಿ ಅನಿಶಂ॥ ಗೋಪಿಕಾದಿ ಮನೋಹರಂ ಗರ್ವಿತ ಕಂಸಾದಿ ಹರಂ॥ಪ॥ ಗೋವಿಂದನಾಮಸಾರಂ। ಗಜೇಂದ್ರರಕ್ಷಣಧೀರಂ। ಕವಿಜನ ಹೃನ್ಮಂದಾರಂ ಕನಕ ಜಿತಸುಶರೀರಂ। ರವಿಶಶಿನಯನ ವಿಲಾಸಂ ರಮಣೀಯ ಮುಖಭಾಸಂ। ಶಿವಗಣಾದಿ ವಿಶ್ವಾಸಂ ಶ್ರೀಗುರುಗುಹ ಮನೋಲ್ಲಾಸಂ॥ಗೋ॥ ಚಿಟ್ಟೆಸ್ವರ ಮಗಗಸ ಮಗಮಮ ದದಮಾ ಗಮದಾ ದದ ನಿನಿಸಾಸಾ॥ ಮಗಮಗ ಸಾಸನಿ ಗಸಾನಿ ದಸನಿದ ಮಮಮಗ ದಮಗಸ॥

ಗಿರಿಧರ ಗೋಪಾಲ ಬಾಲಾ

ಗಿರಿಧರ ಗೋಪಾಲ ಬಾಲ। ಮಕರಕುಂಡಲಧರ ಮೋಹನವೇಶಾ। ಪೀತಾಂಬರಧರ ಪ್ರಭೋಮುರಾರೇ॥1॥ ಶ್ಯಾಮಲ ಶರೀರ ಕೌಸ್ತುಭಹಾರಾ। ಮೀರಾಮಾನಸ ಸರೋ ವಿಹಾರ॥2॥

ಮೇರೇ ತೋ ಗಿರಿಧರ ಗೋಪಾಲ್ (ಹಿಂದಿ) **ರಾಗ: ಹಿಂದೋಳ**

ಮೇರೇ ತೋ ಗಿರಿಧರ ಗೋಪಾಲ್। ದೂಸರಾ ನ ಕೋಈ। ಜಾಕೇ ಸಿರ ಮೋರಮುಕುಟ। ಮೇರೋ ಪತಿ ಸೋಈ॥ ಶಂಖಚಕ್ರಗದಾ ಪದ್ಮಾ ಕಂಠ ಮಾಲಾ ಹೋಯೀ। ತಾತ ಮಾತ ಭ್ರಾತ ಬಂಧು। ಅಪನೋ ನ ಕೋಈ॥ಪ॥ ಅಬತೋ ಬಾತ ಫೈಲ ಗಈ ಜಾನೆ ಸಬ ಕೋಯೀ॥ ಛಾಂಡ ದಯಿ ಕುಲ ಕಾನಿ। ಕಾ ಕರಿ ಹೈ ಕೋಈ ॥ ಸಂತನ ಸಂಗ ಬೈಠ ಬೈಠ। ಲೋಕ ಲಾಜ ಖೋಈ॥1॥ ಛಾಡ ದಈ ಕುಲಕೀ ಕಾನ ಕರೇಗಾ ಕೋಯೀ॥ ಚುನರೀ ಕೆ ಲಿಯೆ ಟೂಕೆ। ಓಡ ಲಿನ್ಹ ಲೋಈ। ಮೋತಿ ಮುಂಗೇ ಉತಾರ। ವನಮಾಲಾ ಪೋಈ॥2॥ ಆಸುವನ ಜಲ ಸೀಂಚಿ ಸೀಂಚಿ। ಪ್ರೇಮ ಬೇಲಿ ಬೋಈ। ಅಬತೊ ಬೀಜ ಫೈಲ ಗಈ। ಹೋನಿ ಹೋ ಸೊ ಹೋಈ। ದೂಧಕೀ ಮಥನಿಯಾ। ಬಡೇ ಪ್ರೇಮಸೇ ಬಿಲೋ ಈ। ಮಾಖನ ಜಬ ಕಾಡಿಲಿಯೇ। ಛಾಛ ಪಿಯೇ ಕೋ ಈ॥4॥ ಭಗತ ದೇಖಿ ರಾಜಿ ಹುಈ। ಜಗತ ದೇಖಿ ರೋಈ। ದಾಸಿ ಮೀರಾ ಲಾಲ ಗಿರಿಧರ। ತಾರೋ ಅಬ ಮೋಹಿ॥ಶ್ರೀ॥

ಗಿರಿಧಾರಿ ಗಿರಿಧಾರಿ ಹೇ ರಾಧೇ

ಗಿರಿಧಾರಿ ಗಿರಿಧಾರಿ ಹೇ ರಾಧೇ ಗೋಪಾಲ। ಘನ ಶ್ಯಾಂಶ್ಯಾಂಶ್ಯಾಂಶ್ಯಾಂ ರಾಧೇಗೋಪಾಲ॥ ಗೋವಿಂದಾ ಮಾಧವ ಗೋಪಾಲ ಕೇಶವ। ಜಯ ನಂದ ಮುಕುಂದ ರಾಧೇಗೋವಿಂದ ರಾಧೇ ಗೋಪಾಲ॥

ಗಿರಿಧಾರಿ ಮುರಾರಿ ಗೋವಿಂದ

ಗಿರಿಧಾರಿ ಮುರಾರಿ ಗೋವಿಂದ। ಘನಶ್ಯಾಮ ಮುರಾರಿ ಗೋಪಾಲ॥ ರಾಧೇ ಕೃಷ್ಣ ಮುರಾರಿ ಗೋವಿಂದಾ ಸತ್ಯಸಾಯಿ ಮುರಾರಿ ಗೋಪಾಲ॥

ಗಿರಿಧಾರಿ ಜಯ ಗಿರಿಧಾರಿ

ಗಿರಿಧಾರಿ ಜಯ ಗಿರಿಧಾರಿ। ಸುಗಂಧ ತುಲಸಿದಳ ವನಮಾಲಿ॥ ಮುನಿಜನ ಸೇವಿತ ಮಾಧವ ಮುರಹರ। ಮುರಳಿ ಮನೋಹರಗಿರಿಧಾರಿ॥ ಗೋಪಿ ಮನೋಹರ ಗಿರಿಧಾರಿ॥

ಮಧುವನ್ ಕೇ ಮೋಹನ ಮುರಳಿ

ಮಧುವನ್ ಕೇ ಮೋಹನ ಮುರಳಿ ಬಜಯ್ಯ। ಗಿರಿಧಾರಿ ನಂದ ಕುಮಾರ ಕನ್ನಯ್ಯ।। ಆನಂದ ರಾಮ ಬಲರಾಮ್ ಬೇಕೇಭಯ್ಯಾ। ಗಿರಿಧಾರಿ ನಂದ ಕುಮಾರ ಕನ್ಹಯ್ಯಾ। ಗೋಪಿ ಮನೋಹರ ರಾಸರಚಯ್ಯ। ಗಿರಿಧಾರಿ ನಂದ ಕುಮಾರಕನ್ಹಯ್ಯಾ।।

❖ ❖ ❖

ಗೋಪಿಯರ ಶ್ರೀ ಕೃಷ್ಣನ ವಿರಹ

ಪಿಳ್ಳಂಗೋವಿಯ ಚೆಲ್ವ ಕೃಷ್ಣನ — ರಾಗ: ಮೋಹನ

ಪಿಳ್ಳಂಗೋವಿಯ ಚೆಲ್ವ ಕೃಷ್ಣನ। ಎಲ್ಲಿ ನೋಡಿದಿರಿ। ರಂಗನ ಎಲ್ಲಿ ನೋಡಿದಿರಿ।।ಪ।। ಎಲ್ಲಿ ನೋಡಿದರಲ್ಲಿ ತಾನಿಲ್ಲದಿಲ್ಲವೆಂದು ಬಲ್ಲ ಜಾಣರು।।ಅ.ಪ.।। ನಂದಗೋಪನ ಮಂದಿರಂಗಳ ಸಂದುಗೊಂದಿನಲಿ। ಚೆಂದ ಚೆಂದದ ಗೋಪಬಾಲರ ವೃಂದವೃಂದದಲಿ।। ಸುಂದರಾಂಗದ ಸುಂದರಿಯರ ಹಿಂದುಮುಂದಿನಲಿ। ಅಂದದಾಕಳ ಕಂದಕರುಗಳ ಮಂದೆ ಮಂದೆಯಲಿ।।1।। ಶ್ರೀಗುರೂಕ್ತ ಸದಾ ಸುಮಂಗಳ ಯೋಗಯೋಗದಲಿ। ಆಗಮಾರ್ಥದೊಳಗೆ ಮಾಡುವ ಯಾಗ ಯಾಗದಲಿ।। ಶ್ರೀಗೆಭಾಗ್ಯನಾಗಿ ವರ್ತಿಪ ಭೋಗ ಭೋಗದಲಿ। ಭಾಗವತರು ಸದಾ ಬಾಗಿ ಪಾಡುವ ರಾಗರಾಗದಲಿ।।2।। ಈ ಚರಾಚರದೊಳಗೆ ಜನಂಗಳಾಚೆ ಈಚೆಯಲಿ। ಖೇಚರೇಂದ್ರನ ಸುತನ ರಥದ ಚೌಕ ಪೀಠದಲಿ।। ನಾಚದೆ ಮಾಧವ ಎಂಬ ಭಕ್ತರ ವಾಚಕಂಗಳಲಿ। ವೀಚುಕೊಂಡದ ಪುರಂದರವಿಠ್ಠಲನ ಲೋಚನಾಗ್ರದಲಿ ।।3।।

ಅಮ್ಮಾ ನಿಮ್ಮ ಮನೆಗಳಲ್ಲಿ — ರಾಗ: ಸೌರಾಷ್ಟ್ರ-ಆದಿತಾಳ

ಅಮ್ಮಾ ನಿಮ್ಮ ಮನೆಗಳಲ್ಲಿ। ನಮ್ಮ ರಂಗನ ಕಂಡಿರೇನೆ।।ಪ।। ಕಾಶಿ ಪೀತಾಂಬರ ಕೈಯಲ್ಲಿ ಕೊಳಲು। ಪೂಸಿದ ಶ್ರೀಗಂಧ ಮೈಯೊಳಗಮ್ಮ। ಲೇಸಾಗಿ ತುಲಸಿಯ ಮಾಲೆಯ ಹಾಕಿದ ವಾಸುದೇವನು ಬಂದ ಕಂಡಿರೇನೆ।।1।। ಕರದಲ್ಲಿ ಕಂಕಣ ಬೆರಳಲ್ಲಿ ಉಂಗುರ। ಕೊರಳಲ್ಲಿ ಹಾಕಿದ ಹುಲಿಯುಗುರಮ್ಮ। ಅರಳೆಲೆ ಕನಕದ ಕುಂಡಲ ಕಾಲಂದಿಗೆ ಉರಗಶಯನ ಬಂದ ಕಂಡಿರೇನೆ।।2।। ಕಾಲಲಿ ಕಿರುಗೆಜ್ಜೆ ನೀಲದ ಬಾವುಲಿ ನೀಲವರ್ಣನು ನಾಟ್ಯವಾಡುತಲಿ। ಮೇಲಾಗಿ ಬಾಯಲ್ಲಿ ಜಗವನು ತೋರಿದ ಮೂರ್ಲೋಕದೊಡೆಯನ ಕಂಡಿರೇನೆ।।3।। ಕುಂಕುಮ ಕಸ್ತೂರಿ ಕುಡಿಕುಡಿ ನಾಮವು ಶಂಖಚಕ್ರಂಗಳ ಧರಿಸಿಹನಮ್ಮ।। ಬಿಂಕದಿಂದಲಿ ಕೊಳಲೂದುತ ಪಾಡುತ ಪಂಕಜಾಕ್ಷನು ಬಂದ ಕಂಡಿರೇನೆ।।4।। ಹದಿನಾರುಸಾವಿರ ಗೋಪಿಯರೊಡಗೂಡಿ ಚದುರಂಗ ಪಗಡೆಯನಾಡುವನಮ್ಮ। ಮದನ ಮೋಹನರೂಪ ಎದೆಯಲ್ಲಿ ಕೌಸ್ತುಭ। ಪದುಮನಾಭನು ಬಂದ ಕಂಡಿರೇನೆ।।5।। ನೊಸಲ ಸುತ್ತಿದ ಪಟ್ಟೆ ನಡುವಿನ ವಡ್ಯಾಣ ಎಸೆವ ಕಸ್ತೂರಿ ಬಟ್ಟು ಮೈಯವನಮ್ಮ। ಪಸರಿಸಿ ಪಟ್ಟೆಯ ಹಾವಿಗೆ ಮೆಟ್ಟಿದ ಅಸುರಾಂತಕ ಬಂದ ಕಂಡಿರೇನೆ।।6।। ತೆತ್ತೀಸಕೋಟಿ ದೇವರ್ಕಳ ಒಡಗೂಡಿ ಹತ್ತವತಾರವ ನೆತ್ತಿದನೆ। ಭಕ್ತವತ್ಸಲ ನಮ್ಮ ಪುರಂದರವಿಠಲ ನಿತ್ಯೋತ್ಸವ ಬಂದ ಕಂಡಿರೇನೆ।।7।।

ದುಂಡುಮುಖವುಳ್ಳ ಕೃಷ್ಣನ ಕಂಡಿರಾ — ರಾಗ: ಕಾನಡ

ದುಂಡುಮುಖವುಳ್ಳ ಕೃಷ್ಣನ। ಕಂಡಿರಾ। ಚೆಂಡನಾಡುತ ಬಂದ। ಚದುರೆಯರ ಶ್ರೇಣಿಯಲೀ।।ಪ।। ಕರದಲ್ಲಿ ಕೊಳಲೂದಿ। ಚರಣದಲಿರುಳಿಗೆಜ್ಜೆ। ಕೊರಳಪದಕಾಹಾರ। ಗುರುಳುಮುಂಗರುಳೂ।। ಚರದಲ್ಲಿ ಪೋಲುವ ನಾ। ಸ್ಮರಣೆ ಮೋಹಿಸುತಾಗಿ। ಸಿರಿಯುಕಂಡರೆ ಅವನ ಪರರು ಬಿಡರಮ್ಮಾ।।1।। ಕಾಂತನಾರಿಯರ ಬಹಳ।

ಚಾರುಚಾರಎನ್ನಮಗ। ವಾರೆನೋಟದಿಮನವ। ಸೂರೆಗೊಂಬಾ। ಸಾರಿದೆನುಮನವಿನಲೀ। ದೂರನೀತರಬೇಡ। ದೂರಪೇಳುವ ಮುನ್ನ। ಸಾರಿದೆನು ಮೊದಲೇ॥2॥

ಹುಡುಕುವ ಬನ್ನಿರೆ ಹೂವಿನ ವನದೊಳಗೆ

ಹುಡುಕುವ ಬನ್ನಿರೆ ಹೂವಿನ ವನದೊಳಗೆ ಹುಡುಕುವ ಬನ್ನಿರೆ ಹೂವಿನ ವನದೊಳಗೆ। ಕೃಷ್ಣನ ಹೊರ ಒಳಗೇ॥ಪ॥ ಯಮುನಾತೀರದಿ ಸಂಪಿಗೆ ನೆರಳಿನಲಿ। ತಾವರೆ ಕೊಳಗಳಲೀ। ಕುಮುದ ಪಾರಿಜಾತಗಿಡಗಳ ಮರೆಯಲ್ಲಿ। ಬಿಡದೆ ಅಲ್ಲಲ್ಲೀ। ಸಾಮಜವರದನ ಗಮನದಗುರುತಿನಲ್ಲಿ। ಪೋಗುತತ್ವರಿತದಲೀ। ನಮಿಪೆವು ಬಾರೆಂದು ನಾವೆಲ್ಲಾ ಕೂಗುವೆವೇ। ಕೇಳಿರೆ ವನಗಳಿರಾ॥1॥ ಕಾಣಲಿಲ್ಲವೇ ಶಾವಿಕ ಶುಕ ಭೃಂಗ। ಹರಿಣವೆವಿಹಂಗಾ। ವೇಣುವನೂದತ ಬಂದು ಕೋಗಿಲೆಕೇಳೇ। ಎಲ್ಲಿಹರಂಗನೇಳೇ। ಜಾಣತನದಿ ಯೌವನವ ಒಪ್ಪಿಸಿ ನಾವು। ಈಪರಿಯಿಂದೆಹೆವೂ। ತಾನೇ ಒಲಿದು ತಪ್ಪಿಸಿ ಪೋಗಿಹನಲ್ಲೇ। ಕೇಳಿರೆಮೃಗಗಳಿರಾ॥2॥ ಈ ಪರಿಗೋಪ ಸ್ತ್ರೀಯರು ಒಂದಾಗಿ। ಕಳವಳಿಸುತಪೋಗೀ। ಶ್ರೀಪತಿ ಬಾರೆಂದು ಮೊರೆಯಿಡಲವಕೇಳಿ। ಬಂದನು ಆ ವ್ಯಾಳೀ। ತಾಪಹರಿಸಿದ ಕರುಣಾದಿ ಗೋಪಾಲ। ಭೂಸುರಮುನಿಪಾಲಾ। ಆಪನ್ನಗಗಿರಿ ವೆಂಕಟತಾಪೊರೆವಾ। ದುರಿತಗಳನೆ ಕಳೆವಾ॥3॥

ಬಾರೆ ಸಖಿ ದಾರಿ ತೋರೆ ಸಖೀ — ರಾಗ: ಖರಹರಪ್ರಿಯ

ಬಾರೆ ಸಖಿ ದಾರಿ ತೋರೆ ಸಖೀ। ಕೇಳಿಸದೇ ಮುರಳಿ ಕರೆ॥ಪ॥ ಮೈಮನ ಸೋಲುತಿದೆ ತನುವೇಕೋ ಭಾರವಿದೆ। ನಾ ಸಹಿಸೇನು ವಿರಹವನು ಕಾಣೆ ಕೃಷ್ಣನಾ॥ಅ.ಪ॥ ಎದೆಯಲಿ ತುಂಬುತಿದೆ ಕಾತರಾ। ನದಿಗಾಳಿ ಇಂದೇಕೋ ಬೇಸರ। ಚಲುವಾಂತ ಚಿಲುವೆಯರ ಚೋರ। ನಿನಗಾಗಿ ಕಾದಿರುವೆ ಬಾರ॥ ಮುಸ್ಸಂಜೆ ಮೂಡುತಿದೆ ತನುವೇಕೋ ಭಾರವಿದೆ ಸಹಿಸೇನು ವಿರಹವನು ಕಾಣೆ ಕೃಷ್ಣನ॥1॥ ರಾಧೆಗೆ ಮುಖವನ್ನೆ ತೋರದೆ। ಕನಸಲ್ಲೂ ಸಖಿಯರಲ್ಲಿ ಕೂಡುವ ಚಲುವಾಂತ ಚಿಲುವೆಯರ ಚೋರ। ನಿನಗಾಗಿ ಕಾದಿರುವೆ ಬಾರಾ॥ ಮುಸ್ಸಂಜೆ ಮೂಡುತಿದೆ ತನುವೇಕೋ ಭಾರವಿದೆ ಸಹಿಸೇನು ವಿರಹವನು ಕಾಣೆ ಕೃಷ್ಣನ॥2॥

ಬೃಂದಾವನಕೆ ಹಾಲನು ಮಾರಲು — ರಾಗ: ಸಿಂಧುಭೈರವಿ

ಬೃಂದಾವನಕೆ ಹಾಲನು ಮಾರಲು ಹೋಗುವ ಬಾರೆ ಬೇಗ ಸಖಿ। ಬೃಂದಾವನದಿ ಹಾಲನು ಕೊಳ್ಳಲು ಯಾರಿಹರ್‍ದ್ದೇಳೇ ಇಂದು ಮುಖಿ॥ಪ॥ ಗೋವನು ಕಾಯುವ ಗೋವಿಂದನಿಹನೆ ಹಾಲನು ಕೊಳ್ಳುವ ಕೇಳೆಸಖಿ। ಚಿನ್ನವ ಕೊಡನೇ ರನ್ನವ ಕೊಡನೇ(2ಸಾರಿ) ತನ್ನನೆ ಕೊಡುವನು ಬಾರೆಸಖಿ॥1॥ ಯಮುನಾ ತೀರದೊಳ್ ಅಲೆಯುವ ಬಾರೇ(2ಸಾರಿ)। ಹಾಲು ಬೇಕೆ ಹಾಲ್ ಎಂದುಸಖಿ। ಹಾಲನು ಮಾರುವ ನೆವದಿಂದ ಹರಿಯ ಮೋಹಿಸಿ ಕರೆಯುವ ಬಾರೆ ಸಖಿ॥ ಹಾಲು ನಿವೇದಿಸಿ ಆತ್ಮವನರ್ಪಿಸಿ। ಮುಕ್ತಿಯ ಹೊಂದುವ ಸೌಮ್ಯಮುಖಿ। ಹಾಲನು ಮಾರಿ ಹರಿಯನು ಕೊಳ್ಳುವ ನಾವೇ ಧನ್ಯರು ಕಮಲಮುಖಿ॥ ನಿಮ್ಮೀ ಲಾಭವ ಮೀರುವಲಾಭವು ಬೇರಿನಿಹುದೆ ಇಂದುಮುಖಿ॥2॥

ಆವಮೋಹನ ಮುರಳಿನಾದವು (ರಾಧಾ ಗೋಪಿ ಸಂವಾದ)

ಗೋಪಿ-ಆವಮೋಹನ ಮುರುಳಿನಾದವು। ಮಾನಸವ ಅಪಹರಿತು, ರಾಧೇ, ಓ ರಾಧೇ॥ಪ॥ ರಾಧಾ-ವಿರಹಯುತ "ಹಿಂದೋಳ" ರಾಗವು ಮುರಳಿಯಿಂ ಹೊರಹೊಮ್ಮಿ ಬರುತಿರೆ। ಪರವಶವ ಗೊಳಿಸೆಳೆದು ತಂದಿತು ಅರಿಯದಲೆ ನನ್ನಲ್ಲಿಗೆ। ಕೇಳೇ ಸಖಿ ಕೇಳೇ॥1॥ ಗೋಪೀ-ಸರಸ ಕೊಳಲಿನ ಇಂಪಿನಿಂದವ ಮರುಳುಗೊಳಿಸುವ ಜಾಲವ। ಭರದೊಳೊಡ್ಡುತ ಸುದತಿಯರ ಮನ। ಸೂರೆಗೊಳ್ಳುತ ಮೆರೆವನೇ। ರಾಧೇ ಓ ರಾಧೇ॥2॥ ರಾಧಾ-ಭಾವ ಬೃಂದಾವನದಿ ವಿಹರಿಪ ಗೋವ ಕಾಯುವ ಗೊಲ್ಲನು। ಹಾವಭಾವವಿಲಾಸದಿಂ ಸುಖವಿತ್ತು ಸಲಹುವನೆಮ್ಮನೂ। ಕೇಳೇ ಸಖಿ ಕೇಳೇ॥3॥

ಗೋಪಿ- ಚಂಚಲಾಕ್ಷನ ಮಿಂಚುನೋಟದ ವಂಚನೆಗೆ ಬಲಿಯಾಗದಿರು ಸಖಿ। ವಾಂಛಿತಾರ್ಥವ ಪಡೆಯಲವನತಿ ಹೊಂಚುಹಾಕುತಲಿರುವನು। ರಾಧೇ ಓ ರಾಧೇ॥4॥ ರಾಧಾ-ನಂದಬಾಲನ ಬಾಹುಬಂಧನ ಮಧುರ ಚುಂಬನದಾಶೆಗೆ। ಅಧರ ಕಂಪಿಸುತಿಹುದು ಎನ್ನಯ। ಹೃದಯಕಾತರಗೊಂಡಿದೆ। ಕೇಳೇ ಸಖಿ ಕೇಳೇ॥6॥ ರಾಧಾ-ಸಂಜೆ ಯಾಯಿತು ಚಂದ್ರ ಮೂಡಿದ ಅಂಜದಲೇ ನಾನೋಡುವೇ। ಕುಂಜಸದನದಿ ಕುಸುಮಶಯನದಿ ಕಂಜನಯನನ ಕೂಡುವೇ। ಕೇಳೆ ಸಖಿ ಕೇಳೇ।॥7॥ ಗೋಪೀ-ಸುಂದರಾಂಗನ ಮಂದಹಾಸದ ಚಂದ್ರಿಕೆಯ ಶುಭಚಲ್ವಿಗೇ। ಮಂದಮತಿಯಳೆ ನಲಿಯದಿರು ನೀ ನಿಂದೆಗಾಗರಳಾಗುವೀ। ರಾಧೇ ಓ ರಾಧೇ॥8॥ ರಾಧಾ-ಏನು ಪೇಳಿದರೇನು ಫಲ ಸಖಿ। ಮನಸು ನನ್ನೊಳು ನಿಲ್ಲದು। ಎನ್ನ ಹೃದಯದ ಚೋರ ನೆಡೆಗಾಂ ಮುನ್ನಪೋಗುವೆ ಎಡೆಯನೀಡೆ॥ಕೇಳೇ ಸಖಿ ಕೇಳೇ॥9॥ ಗೋಪೀ-ಪ್ರೇಮನಾವೆಯನೇರಿ ಪ್ರಿಯಕರ ಯಮುನೆ ದಡದಲಿ ಕಾದಿಹ। ಕಾಮಿನಿಯೆ ನೀ ಪೋಗು ಬೇಗನೆ। ಪ್ರೇಮರಸವನು ಸವಿಯಲು। ರಾಧೇ ಓ ರಾಧೇ॥10॥ ರಾಧಾ- ವಿರಹದಿಂದತಿ ಬಳಲುತಿರುವೆನು ಮರುಗುತಿದೆ ಮನ ನಿರತವೂ। ಮಾರಶರ ಭರದಿಂದ ಭಾಧಿಸೆ ಸೈರಿಸುವೆನಿದನೆಂತು ನಾ। ಕೇಳೇ ಸಖಿ ಕೇಳೇ॥11॥ ಗೋಪೀ-ಚಿಂತೆ ಏತಕೆ? ಕಂತುಜನಕನ ಅಂತರಂಗದ ರಾಣಿಯೇ। ಭ್ರಾಂತಳಾಗದೆ ಪೋಗು, ಮಾಧವ ಸಂತಸದಿ ಬಲು ರಮಿಸುವಾ। ರಾಧೇ ಓ ರಾಧೇ॥12॥ ರಾಧಾ-ನೀಲವಸನನ ಮೀಲಿತಾಕ್ಷನ ತೋಳ ಸೆರೆಯೊಳು ಸಿಲುಕಲು। ಬಾಲೆ, ಹೃದಯದ ವೀಣೆ ಮಿಡಿಯುತ ಪುಳುಕ ವೇಳುತಲಿರುವುದೂ। ಕೇಳೇ ಸಖಿ ಕೇಳೇ॥13॥ ಗೋಪೀ-ಪೋಗು ಪೋಗೆಲೆ ಬಾಲೆ ನಿನ್ನನು- ರಾಗಜಗಕಾದರ್ಶವು। ಯೋಗಿಜನದುಲರ್ಭನ ಪಡೆಯುವ ಭಾಗ್ಯವಿದು ಪೂರ್ವಾರ್ಜಿತ। ರಾಧೇ ಓ ರಾಧೇ॥14॥ ರಾಗದಿಂ ಸಲ್ಲಾಪವಿದನಾಂ। ಭಕುತಿಯಿಂದಲಿ ಪಾಡುವಾ। ರಂಗ ಜಯಕಮಲೇಶ ರಾಧೆಯರ್ ಮಂಗಳವ ನಮಗೀವರು॥ ಆವಮೋಹನ॥15॥

ಕಾದೆ ಕಾದೆ ಕಾದೆ ಕಾದೆ ನೀನು ಮಾತ್ರ **ರಾಗ: ಮೋಹನ**

ಕಾದೆ ಕಾದೆ ಕಾದೆ ಕಾದೆ ನೀನು ಮಾತ್ರ ಬರದೆ ಹೋದೆ। ಓ ಎನ್ನ ರಾಧೆ ಓ ಎನ್ನ ರಾಧೆ॥ ಮನದಿ ವಿರಹದುರಿಯು ತೋರೆ। ಕ್ಷಣವದೊಂದು ಯುಗವ ಮೀರೆ। ಓ ಎನ್ನ ನೀರೆ॥ಪ॥ ದೂರದುದಯ ಗಗನದಲ್ಲಿ। ಕುಂಕುಮ ಧೂಳಿಯನೆಚೆಲ್ಲಿ। ಉಷೆಯ ಮೂರುತಿ। ಜಗಜೀವರಸವ ತರಲು। ಶಿಖರ ವನವನೇರಿಬರಲು। ಅರುಣ ಸಾರಥಿ॥1॥ ನವ ವಸಂತನಿಳೆಗೆ ಬಂದು। ಕುಸುಮ ನಿವೇದನವ ತಂದು। ವಿಹಂಗ ಗಾನದಿ। ಪ್ರೇಮಗೀತೆಗಳನು ಹಾಡಿ। ಮಥಿಸಲೆದೆಯ ನೃತ್ಯವಾಡಿ। ತಾನತಾನದಿ॥2॥ ಯಾವ ಯಮುನೆಯರೆಯ ಮೇಲೆ। ಕುಳಿತು ಹಾಡುತಿರುವೆ ಬಾಲೆ। ಓ ಎಲ್ಲಿ ಹೋದೆ। ಯಮುನೆಯಾಗಿ ಹರಿದು ಬರುವೆ। ತೆರೆಯ ಮುತ್ತು ಕೊಟ್ಟು ಕರೆವೆ। ಬಾ ಎನ್ನ ರಾಧೆ॥3॥

❖ ❖ ❖

ಜಲಕ್ರೀಡೆ

ಗಜಮುಖ ಗಣಪನಂಬುಜ **ಲಾವಣಿ ಧಾಟಿ**

ಗಜಮುಖ ಗಣಪನಂಬುಜ ಪಾದಕ್ಕೆರಗುವೆ। ನಿಜವಾದ ವರವ ನಾ ಬೇಡಿಕೊಂಬೆ (2 ಸಾರಿ)। ಒಳ್ಳೆ ಅಜನರಸಿಯ ನಾನ್ ಭಕ್ತಿಯಿಂ ಪೂಜಿಸಿ ತ್ರಿಜಗ ವಂದಿತನ ಕಥೆ ಹೇಳುವೆ । ಗೋಕುಲದೊಳಗುಳ್ಳ ಗೋಪಾಂಗಿಯರೆಲ್ಲರು ಏಕವಾಗಿ ಮಾತಾಡಿಕೊಂಡು ತಾವ್ (2 ಸಾರಿ)। ಅತಿ ಸಂಭ್ರಮದಿಂದ ನೀರಾಟವ ಬೇಕಾದೂಟವನುಂಡು ಬರುವೊ ಚೆಂದವ । ಸಕ್ಕರೆ ನೊರೆಹಾಲು ಘೃತ ಪರಮಾನ್ನವು ಚಕ್ಕುಲಿ ಗಿಲಿಗಂಜಿ ಗುಳ್ಳೂರಿಗೆ(2ಸಾರಿ) ಭಕ್ಷ್ಯ ಮಂಡಿಗೆ ಪೇಣಿ ಮತ್ತೆ ಚಿತ್ರಾನ್ನವು । ಹಪ್ಪಳ ಸಂಡಿಗೆ ಆಂಬೋಡೆ ಉಪ್ಪಿನಕಾಯಿ (2 ಸಾರಿ) ಬುಕ್ಕಿಟ್ಟು ಗಂಧ ಕೇಸರಿ ಕುಂಕುಮ ಅರಿಸಿನ ಅಚ್ಚ ಮಲ್ಲಿಗೆ ಸಂಪಿಗೆ ಸರಗಳು । ಕರ್ಪೂರದಡಿಕೆ ಏಲಕ್ಕಿ ಎಲೆ ಸುಣ್ಣ ಪತ್ರೆ ಲವಂಗ ತಟ್ಟೆಯೊಳಿಟ್ಟು ತಂದರು । ಹೆರಳು ಬಂಗಾರ ರಾಗಟೆ/ಗೊಂಡ್ಯಾ ಕ್ಯಾದಿಗೆ, ಅರಳು ಮಲ್ಲಿಗೆ ಸಂಪಿಗೆ ಮುಡಿದೂ । ಕೊರಳೊಳ್ ಕಟ್ಟಾಣಿ ಸರಿಗೆ ಚಂದ್ರಹಾರವು ಪುತ್ತಳ ಪುನಕಗಳ್ ಹೊಳೆಯುತ್ತಲಿ । ಡ್ವಾರ್ಯಕಂಕಣ ವಂಕಿ

ನಾಗಮುರಿಗೆನಿಟ್ಟು ಬಿಡಿ ಮುತ್ತಿನ ಗೊಂಡ್ಯಾ ಬಾಜು ಬಂಧಿ (2 ಸಾರಿ) ದೊಡ್ಡ । ಎಡಬಲ ಕಿವಿಯಲ್ಲಿ ವಾಲೆ ಸರಪಳಿ ಮುತ್ತು ಬುಗುಡಿ ಚಂದ್ರ ಬಹಳ ಹೊಳೆಯುತ್ತಲೀ । ಮುದ್ದು ಮೋರೆಗೆ ತಕ್ಕ ಮುಕುರಾ ಬುಲಾಕು । ವಜ್ರದ್ಧರಳು ಬಲ ಮೂಗಿನಲ್ಲಿ ಮುಂಗುರುಳು ತಿದ್ದಿ ಮುತ್ತಿನ ಬಟ್ಟು ಮೂಗುತಿ ಪದ್ಮದ್ಹೂವಿನ ಕುಪ್ಪಸ ತೊಟ್ಟು । ಚೆಲ್ವೆಯರೆಲ್ಲರು ಉಲ್ಲಾಸದುಂದ ಘಲ್ಲು ಘಲ್ಲೆಂದು ಹೆಜ್ಜೆಯನಿಡುತಲಿ (2 ಸಾರಿ) । ಮಲ್ಲೆ ಮಲ್ಲಿಗೆ ಹೊನ್ನಾಗ ಸಂಪಿಗೆತೋಟ । ಅಲಲ್ಲೆ ನಿಂತು ನೋಡುತ್ತ ಬಂದರು । ಕುಂದ ಬಂಗಾರ ಸುಗಂಧಿಕ ದವನವು । ಬಂಗಾರದಂತೆ ಕ್ಯಾದಿಗೆ ಕಮಲ ಚೊಕ್ಕದುಂಡುಮಲ್ಲಿಗೆ ಪಾರಿಜಾತ ತಾವರೆ ಮೊಗ್ಗು ತಂಡತಂಡ ಸ್ಯಾವಂತಿಗೆ ವನವು - ಅತ್ತಿ ಆಲದ ಮರ, ಅಡಿಕೆ-ತೆಂಗಿನ ಮರ, ಪುತ್ತಕ ಪಿತ್ತಕ ಕಿತ್ತಲೆ, ಹಲಸು, ಉತ್ತುತ್ತೆ, ದ್ರಾಕ್ಷಿ ನೇರಳೆ ನಿಂಬೆ ದಾಳಿಂಬೆ ಚೊಕ್ಕಾದ ಜಂಬೂ - ಸೀತಾಫಲವು ।। ಎಲೆ ತೋಟದೊಳಗೆ ಯಾಲಕ್ಕಿ ಗೊನೆ ನೋಡೆ । ಕಳಿತ ಮಾವಿನ ಹಣ್ಣು ಕದಲೀ ಫಲ (2 ಸಾರಿ) ಬೋರೆ । ಮೆಣಸು ಲವಂಗ ಶ್ರೀ ತುಳಸಿ ವನದಲ್ಲಿ। ಅರಿಸಿನಂಜೂರ ಆ ಬೃಂದಫಲವು। ಗಂಡಭೇರುಂಡ ಗೋರಾಜ್ಯಾತದ ಗಿಳಿ ಹಿಂಡು ನವಿಲು ಚಕ್ರವಾಕ ಪಕ್ಷಿ ಗಂಡುಳ್ಳ ಗರುಡ ಹಂಸ ಕೇಳೋ ಬ್ರಹ್ಮ। ತಂದೆ ಮಕ್ಕಳಿರುವ ವನವು।। ಕಸ್ತೂರಿ ಮೃಗ ಪುನಗಿನ ಬೆಕ್ಕು ಪಾರಿವಾಳ ಜಗಕ್ಕಿ ಕೊಳಲಕ್ಕಿ ಸಾರಂಗವು। ಕುಕ್ಕಟ ಬೈರುಂಡ ಎಡಕಂಗ ಬಲಕಾಂಗಿ ಕೊಟ್ಟವು ಶಕುನವ ಜಲಕ್ರೀಡೆಗೆ।। ಕಾಳಿಮರ್ದನ ಕೃಷ್ಣಹಾರಿದನ್ ಮಡುವಿಗೆ ಕಾಳಿಂಗ ನೋಡಿಸಿ ಕಳೆದೂ ವಿಷಬಾರೆ ಅಮೃತಕ್ಕೆ ಮಿಗಿಲಾಗಿದೆ ಈಜಲ। ಏನು ಪುಣ್ಯ ಮಾಡಿದ್ದಳೋ ಯಮುನೆ ನೀಲಾ ಮಾಣಿಕ್ಯ ಮುತ್ತು ಕೂಡಿಸಿ ನದಿ ತ್ರಿವೇಣಿಯದಳುತ ಪ್ರಯಾಗದಲ್ಲಿ ಭಾಗೀರಥಿ ಸರಸ್ವತಿ ಕುಡಿ ಸಮಗ ಸಾಗಿಹೋದರು ಅವರು ಕಾಶಿಪಟ್ಟಣಕ್ಕೆ।। ಉಟ್ಟಸೀರೆಯ ಬಿಚ್ಚಿ ತೊಟ್ಟ ಕುಪ್ಪಸ ಕಟ್ಟಿ ಇಟ್ಟರು ಉಸುಬಿನ ಮೆಟ್ಟಿ ಮೇಲೆ (2ಸಾರಿ) ತಾವಿಟ್ಟರು।। ಮಿತ್ರೆಯರೆಲ್ಲ ತಮ್ಮ ಹಸ್ತಗಳ್ಹಿಡಕೊಂಡು ತಟ್ಟನೆ ನದಿಯೊಳಗಿಳಿದರಾಗ।। ಬಾರೆ ಸೆಳುವಿನೊಳು ಬೆತ್ತಲು ಓಡಾಡುತ್ತ ಸಾರಸಮುಖಿಯರು ಸರಸದಿಂದಾ ನೀರಜಲಕ್ಷೇರು ನಿರ್ಮಲವಾಗಿದೆ। ನೀರೊಳು ನಿಂತು ಮೈ ತೊಳೆದರಾಗ।। ವಾರುಜಗೆಳತೀರು ವರಮೋಹ ನಾಂಗೀರು ಮೋರೆಗೆ ಅರಿಶಿನ ಕುಂಕುಮ ಹಚ್ಚಿ((2ಸಾರಿ) ತಮ್ಮ। ಡ್ವಾರ್ಯ ಕಂಕಣ ವಂಕಿ ಬಗಿಸಿನಿಂದಲೆ ನೀರು ತೋಡುತ್ತ ತುಂಬಿ ಚೆಲ್ಲಾಡಿದರು।। ಸರ್ಪದಂತೆ ಹೆರಳು ಅಲೆಯುತ ನೀರೋಳು ಮುತ್ತಿನ ಸರ್ಪದಂತೆ ಹೊಳೆಯುತ್ತಲೆ ಬುಕ್ಕಿಟ್ಟು ಗಂಧ ಕೇಸರಿ ಕುಂಕುಮ ಅರಿಶಿನ ತೆಪ್ಪದಂದದಿ ತೇಲಾಡಿದವು।। ಲಲನೆಯರಿಟ್ಟಂಥ ಸೀರೆಗಳನೆಲ್ಲಾ ಜಲಜನಾಭ ಕೃಷ್ಣನು ಕಳ್ಳನಂತೆ (2ಸಾರಿ) ಬಂದು। ಛಲದಿಂದ ಇವರಿಗೆ ಶಿಕ್ಷೆ ಮಾಡಬೇಕೆಂದು ಹಲಧರ ನಿಜಹಾಸ್ಯ ಮಾಡುತ್ತಿದ್ದ।। ಗೋವ್ಗಳ ಹೊಡಕೊಂಡು ಗೋಪಾಲರೊಡಗೂಡಿ ಈಗ ಬರುವ ವೇಳೆಯಾಯಿತಲ್ಲೆ ಕೃಷ್ಣ (2ಸಾರಿ) ಹ್ಯಾಗೆ ಮಾಡೋಣ ಆತ ಬಂದರೆ ನಮ್ಮನ್ನು ಹೋಗಾದೆ ಉಳಗೊಡುವನೇನೆ। ಇಂಥಾ ಬೃಂದಾವನದೊಳಗೆ ವಾಸನೆ। ಇಂಥಾ ಚಂದವೆ ಯಮುನಾ ನದಿಯು। ಅನಂತ ಜನ್ಮದಲಿ ಮಾಡಿದ ಸುಕೃತದಿಂದಾ ಶ್ರೀಕಾಂತ ಕೃಷ್ಣನ ಕೂಡಿದ್ದೇವಲ್ಲೇ।। ಹೊತ್ತು ಬಹಳಾದೀತು ಹಸಿದಾವೆ ನಮ್ಮ ಹೊಟ್ಟೆ ಕಾತ್ಯಾಯಿನಿ ಪೂಜೆ ಮಾಡಬೇಕು(2 ಸಾರಿ) ಇಲ್ಲಿ। ಮಿತ್ರೆರೆಲ್ಲರು ತಮ್ಮ ಹಸ್ತಗಳನ್ಹಿಡಿಕೊಂಡು ಹತ್ತಿ ಬಂದರು ಸೋಪಾನಗಳ।। ಗಡಗಡ ನಡುಗುತ್ತ ಎದೆ ಭುಗಿಲೆನ್ನುತ್ತಾ ಉಡಲೊಂದು ಬಟ್ಟೆ ತರಲಿಲ್ಲವೇ (2ಸಾರಿ) ಅಕ್ಕ। ಸದನಕ್ಕೆ ಬಂದರೆ ಕದನ ಬಹಳಾದೀತು। ನದಿಯಾಟ ನಮಗೆ ಮೃತ್ಯುವಾಯಿತಲ್ಲೆ।। ನೂರಾರು ಗೋಪಿಕರುಟ್ಟ ಸೀರೆ ಕುಬುಸ ಹೇಗಿದ್ಯಾವ ದಿಕ್ಕಿಗ್ಹಾರಿಹೋಯ್ತು। ಊರೂರು ತಿರುಗುವ ನಾರದ ಮುನಿಬಲ್ಲ। ನಾರಾಯಣನೆಂದಾತ ಬಲ್ಲನೆ। ಕರಿಯ ಹೂವಿನ ಸೀರೆ ಬಿಳಿಯಹೂವಿನ ಸೀರೆ ಚಿಕ್ಕಾದಿ ಕೆಂಪು ಹೂವಿನ ಸೀರೆ ಇದು ಮೂರು ಸರಿಯಾಗ ಜೋಡಿಸಿಟ್ಟಿದ್ದೇವು। ಬರಿಮೈಯಲ್ಲಿ ಹೋಗೋ ತೆರನಾಯ್ತೇ।। ರಾಗಾವಳಿ ನಿಂದು ಸಾರಾವಳಿನಂದು ದ್ವಾರ್ಯಾಮನೆ ಸೀರೆ ನಿಂದಲ್ಲವೇನೆ। ಗೋದಿ ಮಗ್ಗಿನ ಸೀರೆ ಬುಗ್ಗಿಗಣ್ಣಿನ ಸೀರೆ। ಸೋದರತ್ತೆರುಟ್ಟಾ ಸೀರೆಗಳು।। ಸಾಸು ಚುಕ್ಕಿನ ಸೀರೆ ಸರ್ಪುಳಂಚಿನ ಸೀರೆ। ರೇಶ್ಮೆ ಚುಕ್ಕಿಯ ಸೀರೆ ನಿಂದಲ್ಲವೇನೇ (2ಸಾರಿ) ಅಕ್ಕ। ಸೂಸು ತುಂಬಿದ ನದೀಲಿ ಈಜಾಡಿ ನಾವೆಲ್ಲ। ಮೋಸವಾಗಿ ಕಳಕೊಂಡವಲ್ಲೆ। ಬಾಳೆ ಪಟ್ಟೆಯ ಸೀರೆ ಬದನೆ ಬಣ್ಣದ ಸೀರೆ ಕಸೂತಿ ಗುಲಾಬಿ ಬಣ್ಣದ ಸೀರೆ ನಂದೂ। ಕಾಡಿಗಣ್ಣಿನ ಸೀರೆ ಕರಿಯ ಚಂದ್ರಕಾಳಿ ನಾವ್ ಅಕ್ಕತಂಗಿಯರು

ಉಟ್ಟಿದೆವಲ್ಲೇ। ಮೆಂತ್ಯ ಸಾಲಿನ ಸೀರೆ ಚಿಂತಾಕು ಪೈಟಾಣಿ ಎಂಥಾ ಬಣ್ಣೀತ್ ಹೇಳೆ (2ಸಾರಿ) ಮುಗ್ಗಿಸೀರೆ ಅಕ್ಕ॥ ಕಾಂತಾನು ತಂದಂಥ ಕಮಲದ್ಹೂವಿನ ಸೀರೆಭ್ರಾಂತರಾಗಿ ಕಳಕೊಂಡೆವಲ್ಲೆ॥ ಮದುವೇಳಿ ತಂದಿದ್ದು ಮೃದುಲ ಪತ್ತನಲನಂದು ಚೆಂದುರಂಗಮನೆ ಸೀರೆ ನಿಂದಲ್ಲವೇ ಅಕ್ಕ(2ಸಾರಿ) ಪದ್ಮದ್ಹೂವಿನ ಸೀರೆ ಪತಿವಶವಾಗೋದು ಅದರಲ್ಲಿದ್ದ ಮಾಯಾ ಮಂತ್ರಗಳೂ। ಪ್ರಸ್ತಕ್ಕೆ ತಂದದ್ದು ಉಪ್ಪಳಿ ಪತ್ತಲ ಕಸ್ತೂರಿ ಬಣ್ಣದ ಕಮಲಾ ಪೇಟಿ (2ಸಾರಿ) ಅಕ್ಕ। ಮುತ್ತಿನ ಬಟ್ಟಿನ ಸೀರೆ ಮೊದಲೆ ಮೈನೆರೆದಾಗ ಅಕ್ಕರದಿಂದತ್ತೆ ಕೊಟ್ಟಿದ್ದಳು॥ ಮಾವಿಗೆರೆ ಸೀರೆ ಮಾರುದ್ದ ಸೆರಗಿತ್ತು ಮಾವತಂದುಕೊಟ್ಟ ನನಗೆ ನಿನ್ನೇ ನೇಮವಿಲ್ಲದೆ ಮನೆಗ್ಹೋದರೆ ನಮ್ಮ್ಮಾವ ಕೋಲಂತಕ್ಕೊಂಡ್ ಹೊಡೆದಟ್ಟೋವನೂ। ಕೂಟಂಬರು ಪೈಟಾಣಿ ಕರ್ನಾಡು ಸೀರೆಯು ಬಾಡಿಗೆ ರೂಪಾಯಿಗಳು ಕೊಟ್ಟಿಲ್ಲವೆ (2ಸಾರಿ) ಅಕ್ಕ ನೀ ನೋಡಿದ್ದಲ್ಲವೆ ನೀಲ ಪತ್ತಲನಂದು ಜಾಲಕೃಷ್ಣನ ಬಣ್ಣ ಹೋಲುವುದು। ಕಡ್ಡಿ ಪೈಟಾಣಿ ಸೀರೆ ಕಡ್ಡಾಯದಿಂದಲ್ ಬಡ್ಡಿಸಾಲವಮಾಡಿ ತರಿಸಿದ್ದೇನೇ (2ಸಾರಿ) ಅಕ್ಕ ಅಡ್ಡಿ ಮಾಡಿದ ಬಂದವ ನಾನುಟ್ಟು ಬರುವಾಗ ಕುಲಗೇಡಿ ಹೆಣ್ಣೆಂದು ಕರೆಯೂವನು। ತಳುಕೆಂದು ಹೊಳೆವುದು ತಬಕದ್ಹೂವಿನ ಸೀರೆ ಮೊಳಕೊಂದುನೂರು ಹೊನ್ನು ಕೊಟ್ಟಿದ್ದೇನೆ(2ಸಾರಿ) ಅಕ್ಕ। ಬಳುಕುತ್ತ ಬಾಗುತ್ತ ಬಾಳೆಯ ಸುಳಿಯಂತೆ ಬಳುಕುತ್ತಾ ಬಂದಿಲ್ಲೇ ಕಳಕೊಂಡೆವಲ್ಲೇ। ಜೋತಿಯಂತೆ ಹೊಳೆವುದು ಮುತ್ತು ಸೆರಗಿನ ಸೀರೆ ಸಾವುಕಾರ ಮನೆಯಿಂದ ತರಿಸಿದ್ದೇನೇ (2ಸಾರಿ) ಅಕ್ಕ। ನಾನ್ಯಾರಿಗ್ಹೇಳಲಿ ನನ್ನ ಪಪ್ಪಳಿ ಸೀರೆ ಎಲ್ಹೋಯಿತೆಂದು ಯಾರು ಬಲ್ಲರು॥ ಬುಟ್ಟಿ ಧಾರೆ ಸೀರೆ ಬುಗುಡಿಜರತಾರಂಚು ಕೊಟ್ಟಿಕೊಂಡಿದ್ದೆ ವಜ್ರದ ಪದಕಹಾಕಿ (2ಸಾರಿ) ಅಕ್ಕ। ಪುತ್ಥಳಿ ಸಾಲು ಸಾಲು ನೆರಿಗೆಗಳು ಮೇಲ್ಹೋಡುತಾ ಅಷ್ಟು ಸಂಭ್ರಮದಿಂದ ಬಂದು ಕಳಕೊಂಡೆವಲ್ಲೆ॥ ಇಲ್ಲಿ ಇಟ್ಟಿದ್ದೇನೆ ಇರುಪಲ್ಲಿನ ಸೀರೆ ಬಳಿಯಲ್ಲಿಟ್ಟಿದೆ ಬೆಳಗಾವಿ ಸೀರೆ ಇದು ಮೂರು ಸರಿಯಾಗಿ ಜೋಡಿಸಿಟ್ಟೀದ್ದೆನು। ಬರಿಮೈಯಲ್ಲಿ ಹೋಗೋ ತೆರೆನಾಯ್ತು॥ ಕಳ್ಳನ್ಹೆಂಡತಿ ಏನು ಪುಣ್ಯ ಮಾಡಿದ್ದಾಳಾಕೆ ಎಲ್ಹೋಗಿ ಸೇರಿದವು ನಮ್ಮ ಸೀರೆಗಳೂ ನಮ್ಮೆಲ್ಲರಾ ಸೀರೆಗಳುಟ್ಟುಕೊಂಡಾಕೆ ಉಲ್ಲಾಸದಿಂದಲಿ ಓಡ್ಯಾಡುವಳು॥ ಚೋರನ್ಹೆಂಡತಿ ಇಂಥ ಸೀರೆಯನುಟ್ಟರೆ ಮೋರೆಮೇಲೆ ಬಡಿದಂತೆ ಮಾಡಿಕೊಂಬೆ ಯಾರುಟ್ಟರೇನು ನಿರ್ಭಾಗ್ಯರು ನಾವು ಕೈಮೀರಿ ಹೋದದ್ದು ಕೃಷ್ಣಾರ್ಪಣವು॥ ಮಾನಗಳ ಕಳಕೊಂಡು ಮನೆಗೆ ಹೋಗಲಾರೆವು। ಏನೆಂಬೆರೆಲ್ಲಾ ನೀವು ಇಲ್ಲಿ ಬನ್ನಿ ನಾನೊಂದು ಯೋಚನೆ ಮಾಡಿದೆ ಮನದೊಳು ಕಾನನದೊಳಗೆ ಸೇರುವೆವೆಂದು॥ ಹೆಣ್ಣು ಮಕ್ಕಳು ನಾವು ಚೆನ್ನಾದ ಚೆಲುವೇರು ಅರಣ್ಯವ ಸೇರಿಕೊಂಬುವುದ್ ಹ್ಯಾಗೆ। ಕಣ್ಣೆಟ್ಟ ಪುರುಷಾರು ಕಂಡರೆ ನಮ್ಮನ್ನು ಸುಮ್ಮನೆ ಬಿಡುವರೇನು॥ ಕಾಳಿ ಮರ್ದನ ಕೃಷ್ಣ ಹಾರಿದನ್ ಮಡುವಿಗೆ। ಒಟ್ಟಾಗಿ ನಾವೆಲ್ಲ ದುಮುಕೋಣ। ಭಕ್ತವತ್ಸಲನೆಂಬೊ ಭಯನಿವಾರಣ ದೇವ ಮುಕ್ತಿಯ ಕೊಡುವೋ ಮುಕುಂದಾ ಹರೇ। ಯಮುನಾ ನದಿ ಬಿಟ್ಟತ್ತಹೋದರೆ ನಮಗೀಗಾ ಯಮಧರ್ಮರಾಯನಂಜಿಕೆ ಇಲ್ಲವೆ। ನಮ್ಮ ಶ್ರಮಪರಿಹಾರ ಮಾಡುವಾ ಭಗವಂತ। ನಮೋ ನಮೋ ಎಂದು ಕೈಮುಗಿದರಾಗ॥ ಇಷ್ಟ್ಹೋತ್ತು ಈ ಜ್ಞಾನ ಹುಟ್ಟಲಿಲ್ಲ ಇವರಿಗೆ। ಮತ್ತೀಗ ಎನ್ನ ಸ್ತುತಿ ಮಾಡುವರು ಭಕ್ತವತ್ಸಲನೆಂಬೊ ಭಯ ನಿವಾರಣ ದೇವ ಕೊಟ್ಟು ಬಿಡುವೆನೆಂದಾಲೋಚಿಸಿದ। ಗಲಿಬಿಲಿ ಮರದೊಳು ಗದ್ದಲೆಬ್ಬಿಸಿದನು ಘಲುಘಲು ಘಲುಕೆಂದು ಕುಣಿಯುತ್ತಲ್ಲೇ। ಮರದಕೊಂಬೆಗಳಲ್ಲಾಡಿಸಿ ಜಾಡಿಸಿ ಎಲೆಕಾಯಿ ಉದುರಿಸುತ್ತಿದ್ದನಾಗ॥ ಗಲಿಬಿಲಿ ಮರದೊಳು ಗದ್ದಲವೇನಿದೆ। ಎಲೆ ಕಾಯಿ ಉದುರುವುದ್ಯಾತಕೆ ಹೇಳೆ (2ಸಾರಿ) ಇಷ್ಟು ಬಲು ಭಯವಾಗಿದೆ ಏನು ಸೋಜಿಗವಿದು ಮೋರೆ ಎತ್ತಿ ಮರವನೋಡಿದರು॥ ನೀಲವರ್ಣದ ಕೃಷ್ಣ ನಗುತ ನಿಂತಿದ್ದನು ಸೂರ್ಯಪ್ರಕಾಶದಿಂದ್ಹೊಳೆಯುತ್ತಲೆ ನೋಡೆ ಈ ಮರಕಟ್ಟಿ ಕುಪ್ಪಸ ಸೀರೆ ಮರಹತ್ತಲು ನಮಗೆ ಬಾರದಲ್ಲೇ॥ ಇಕ್ಕೊಳ್ಳೆ ನಮ್ಮ ಕಳ್ಳ ಸಿಕ್ಯಾನು ಬನ್ನಿರಿ ಚಕ್ಕಂದವಾಗಿದೆಯೇನೋ ನಿನಗೆ ಕೃಷ್ಣ (2ಸಾರಿ) ನಿಮ್ಮ ಅಮ್ಮನ ಬಳಿಯಲ್ಲೊಪ್ಪಿಸಿ ಕಂಬಕ್ಕೆ ಗಟ್ಟಿಯಾಗಿ ಕಟ್ಟಿಸಿ ಬಿಡುವೆವು ಎಂದರು॥ ಓಡೋಡಿ ಹೋಗಿರಿ ಗಾಡಿಗಾರ್ತಿಯರೆಲ್ಲ ಚಾಡಿಯ ಹೇಳಿರಿ ನನ್ನ ಮೇಲೆ (2ಸಾರಿ) ಹೋಗಿ। ನೋಡಿ ನಿಮ್ಮಪ್ಪ ಅಮ್ಮನ ಕರೆತಂದರೆ ಜೋಡಿಸಿ ನಿಮ್ಮ ವಸ್ತ್ರವ ಕೊಡುವೆನೆಂದಾ॥ಕೃಷ್ಣ ಒಳ್ಳೆಯವನಲ್ಲ ದುಷ್ಟ ಹುಡುಗನು ಇವ ಕೆಟ್ಟ ಮಾತಲಿ ಕೆಲಸವಾಗೋದಿಲ್ಲ। ಅಪ್ಪಾ

ಣ್ಣಾನೆಂದು ಒಪ್ಪಿಕೊಂಡರೆ ನಾವು ಕೊಟ್ಟು ಬಿಡುವನು ನಮ್ಮ ಸೀರೆಗಳಾ।। ಅಪ್ಪಾ ಸೀರೆ ಕೊಡೊ ಅಣ್ಣಾ ಸೀರೆ ಕೊಡೋ। ನಮ್ಮಪ್ಪನ ಮಗ ತಮ್ಮನಲ್ಲವೇನೋ। ತುಪ್ಪ ಹಾಲು ಬೆಣ್ಣೆ ಬೇಡಿದಷ್ಟು ಕೊಡುವೆ ತಾರೋ ತಾರೋ ನಮ್ಮ ಸೀರೆಗಳಾ।। ಅಪ್ಪಾನು ನಾನಲ್ಲ ಅಣ್ಣಾನು ನಾನಲ್ಲ। ತುಪ್ಪ ಹಾಲು ಬೆಣ್ಣೆ ಬೇಡು ಎನಗೆ (2ಸಾರಿ)। ನಿಮ್ಮಪ್ಪನ ಅಳಿಯನೆಂದುಕೊಂಡರೆ ಕೊಟ್ಟು ಬಿಡುವೆ ನಿಮ್ಮ ಸೀರೆಗಳಾ।। ಏನಾದರು ಅಂದುಕೊ ಮಾನವ ಕಾಯ್ದುಕೊ ನಾವಂದ ಮಾತ ತಪ್ಪ ಹಿಡಿಯಬೇಡ (2ಸಾರಿ) ಸ್ವಾಮಿ ನೀನೇ ಕ್ಷಮಿಸಿ ನೀನೇ ಸೀರೆ ಕೊಡು।। ಮತ್ಸ್ಯಾವತಾರನೆ ಮಂದರೋದ್ಧಾರನೆ ಶಿಕ್ಷಿಸಿದೆಯಾ ಹಿರಣ್ಯಾಕ್ಷನ ಕುಕ್ಷಿ ಬಗೆದು ಹಾರವ ತೆಗೆಸಿದ ಸಾಕ್ಷಾತ್ ನರಸಿಂಹನೇ ಸೀರೆ ಕೊಡೊ।। ಅಳೆದು ಭೂಮಿಯ ನೀನು ಆಳ್ದೆ ಭೂಪಾಲರ ಕಳೆದೆ ಸೀತಾ ಚೋರನ ಪ್ರಾಣವನು। ಇಂದು ನಿನಗೇಕಿಲ್ಲ ಮನಸ್ಯಾಕೆ ಕಲ್ಕಿ ತಾರೋ ತಾರೋ ನಮ್ಮ ಸೀರೆಗಳಾ।। ಅಂಬರ ಬಿಟ್ಟು ದಿಂಗಬರ ವೇಷದಿ ಒಂಭತ್ತನೇ ಅವತಾರ ತೊಟ್ಟ ಸ್ವಾಮಿ। ಮಸ್ತಕದೊಳು ಒಂದು ಹಸ್ತವನಿಟ್ಟು ಕೃಷ್ಣಗೆ ನಮೋ ನಮೋ ಎಂದರಾಗ। ಒಂದು ಕೈ ವಂದನೆ ಚಂದವೆ ನಿಮಗೆ ಇದ್ಯಾವ ನಿಮ್ಮ ಕುಲ ಹೇಳಿರೆಂದ। ಮಂದಿಯೊಳಗೆ ಮಾನ ಉಳಿಯಬೇಕಾದರೆ ಜೋಡಿಸಿ ಎರಡ್ಹಸ್ತ ಮುಗಿಯಿರೆಂದ।। ಮರಸುತ್ತ ತಿರುಗುತ್ತ ಕರತಾಳ ಹಕುತ್ತಾ ಸ್ವರವೆತ್ತಿ ರಾಗವ ಪಾಡುತ್ತಾ ಸುತ್ತ ಪ್ರದಕ್ಷಿಣೆ ಮಾಡುತ್ತ ಸಖಿಯರು ಒಟ್ಟಾಗಿ ನಿಂತರು ಮರದಮುಂದೆ।। ಅವರವರ ಕೈಯಿಗೆ ಅವರವರ ಸೀರೆಯ ಒಗೆದನು ಬದಲಾಗದಂತೆ ಕೃಷ್ಣ। ಮಿತ್ರೆಯರೆಲ್ಲ ತಮ್ಮ ಸೀರೆಯನುಟ್ಟು ಅತ್ಯಂತ ಹರುಷದಿಂದಿರಲಾಗ।। ಅರಿಶಿನ ಕುಂಕುಮವಿರಿಸಿ ಶ್ರೀಗೌರಿಗೆ ಮುಡಿಸಿ ಮಲ್ಲಿಗೆ ಮಾಲೆ ಹಾಕುತ್ತಲೆ ಕಾಯೊಡೆಸಿ ನೈವೇದ್ಯ ಮಾಡುತ್ತಲೇ ಅರ್ತಿಯಿಂದಿದ್ದಾರಾಗ।। ಮಂಡಿಗೆ ಪೇಣಿ ಮೃಷ್ಟಾನ್ನವ ಇಂದಿರೇಶನ ಸಹಿತ ಉಂಡರಾಗ। ಚಂದದಿಂದಲೆ ಹಾಕಿಕೊಂಡು ತಾಂಬೂಲ ಸಂಭ್ರಮದಿಂದಿದ್ದರಾಗ।। ಮರುಗ ಮಲ್ಲಿಗೆ ಜಾಜಿ ಸುರಗಿ ಸೇವಂತಿಗೆ ಸರಗಳಕಟ್ಟಿ ತಾವ್ ಹಾಕಿದರು ಸ್ವಾಮಿಗೆ। ಕಡಲಶಯನ ಕೃಷ್ಣನಪ್ಪಣೆ ಕೈಗೊಂಡು ಬಡಬಡ ಬಳುಕುತ್ತಾ ನಗೆಮುಖ ಹೊಳೆಯುತ್ತಾ ಮಡೆದೇರು ಮನೆಗೆ ಬಂದು ಸೇರಿದರು।। ಜಯಮಂಗಳಂ ರುಕ್ಮಿಣೀ ಅರಸರಿಗೆ ಶ್ರೀ ಸತ್ಯಭಾಮೆಗೆ ಜಯಮಂಗಳವೆಂದು ಕೊಂಡಾಡಿದರು।।

ಒಂದು ದಿನದಲಿ ಒಂದಾಗಿ

ಒಂದು ದಿನದಲಿ ಒಂದಾಗಿ ಮನೆಯಲ್ಲಿ ನೆರೆದರು। ಇಂದುವದನೆಯರೆಲ್ಲ । ಸಿಂಧೂರಗಮನೇರು ಸೀರೆಗಳ ಬಿಚ್ಚಿಟ್ಟು। ಬಂದಾರು ತಮ್ಮ ಕಾಂತಿ ಮಿನುಗೂತಲಿ।।1।। ನೂರಾರು ಲಕ್ಷಕ್ಕೆ ನಾರೀರು ಗುಂಪಾಗಿ। ನೀರೋಳಗೀಜಲು ನಿರ್ವಾಣದಿ। ತೋರ ಮುತ್ತಿನ ಕಂಠಿಹಾರ ಪದಕವೂ। ಡ್ವಾರ್ಯೆ ಕಂಕಣ ವಂಕಿ ಪೊಳೆಯುತಲಿ।।2।। ಉಟ್ಟ ವಸ್ತ್ರಗಳನು ಬಿಚ್ಚಿ ಕೆಳಗಿಟ್ಟು ಹೊಕ್ಕರೇ ಸುರನದಿಯೊಳಗೆ। ಅಚ್ಯುತ ಅನಂತನ ಧ್ಯಾನವ ಮಾಡುತ। ಬಿಚ್ಚಿದರೆ ತಮ್ಮ ಮುಡಿಗಳ।।3।। ಸಾಮಜವದನೇರು ಸಂತೋಷಗಾನದಿ। ಪಾಲಸಮುದ್ರದ ನದಿಯೊಳಗೆ। ಜ್ಞಾನ ಪಲ್ಲಟವಾಗಿ ನಾನಾ ಸಂತೋಷದಿ। ನೀರೋಳಗೀಜಲು ನಿರ್ವಾಣದಿ।।4।। ಮಾರ ಜನಕನು ಮಡದೀಯರುಟ್ಟಂಥ। ಸೀರೆ ಕುಪ್ಪಸಗಳ ಸೂರೆಕೊಂಡು। ಯಾರಿಗೂ ತಿಳಿಯದೆ ಚೋರತನವ ಮಾಡಿ। ಏರಿದ ಮರವನು ಚೋರ ಕೃಷ್ಣ।।5।। ಕಡಗ ಕಂಕಣ ಧ್ವನಿ ಘಲುಘಲುರೆನ್ನುತ। ಪರಸ್ಪರ ತಳಿದೆರಚಿದರು। ಗುರು ಕುಂಭಗಳ ಪೋಲ್ವ ಗುರುಕುಚ ಭಾರಕೆ। ಕಾಂತೇಯರ್ ನಡುವುಗಳ್ ಬಳುಕೂತಲಿ।।6।। ಸ್ವರ್ಣವರ್ಣದ ದೇಹ ಸೊಗಸಾದ ಅವಯವಗಳು। ವರ್ಣಿಸಿ ಹೇಳ್ದೋರ್ಗೆ ಸಿರ್ಗುಂಟೆ? ಜಲಕ್ರೀಡೆ ಸಂಭ್ರಮ ಜಲಜಾಕ್ಷ ನೋಡುತ। ತಲೆಮರೆಯಾಗಿದ್ದ ತರುವಿನಲ್ಲಿ।।7।। ತಲೆ ಒರೆಸಬೇಕೆಂದು ತರುಣೀಯರ್ ಬಂದರು। ತಮ್ಮ ತಮ್ಮ ವಸ್ತ್ರಂಗಳ್ ದಡದಲ್ಲಿಲ್ಲ। ಮೈ ನೀರು ಸೋರುತ್ತ ಕೈ ಕೈ ಹಿಸುಕುತ। ತರುಣೀರು ವಸ್ತ್ರಂಗಳ್ ಹುಡುಕೀದರು।।8।। ವರ್ಯ್ದವನಾರೆಲೆ ವನಿತೆ ನೀ ಪೇಳೆಲೆ। ಒರ್ಯ್ವನಲ್ಲೆ ಮಾವ ಬಲು ಮೂರ್ಖ। ಕಡುಕೋಪಗಾರನೆ ಕೈ ಪಿಡಿದಾಗಂಡ। ಪಿಡಿದೂ ಕಂಭಕೆ ಕಟ್ಟಿ ಬಡೀವನಲ್ಲೆ। ಕಡು ಭೀತಿ ತೋರಿತೆ ಹುಡುಗಾಟವೇನಿದೆ? ಉಡುರಾಜ ಮುಖಿ ಒಂದು ಉಪಾಯವ ಪೇಳೆ।।9।। ಆನೆ ಪೊಪ್ಪಳಿ ಸೀರೆ ಆರುಣಿ ಕುಪ್ಪಸ। ಏನೆಂಬೆ ಆಶ್ಚರ್ಯ

ಎಲ್ಲಿ ಹೋಯ್ತೆ। ನಾನೇನ ಮಾಡಲಿ ನಮ್ಮತ್ತೆ ಬೆಯ್ದಾಳು। ಏನು ಉತ್ತರ ಹೇಳಲಿ ಪೇಳೆ ಏಣಾಕ್ಷಿಯೆ॥10॥ ಮಧುರ ಬಣ್ಣದ ಸೀರೆ ಮಖಮಲ್ ಕುಪ್ಪಸ। ಸದರವಾಗಿಹುದೆ ಸಮವಾಗಿ। ಮದುವೆಯಾದಾ ಗಂಡ ಕಡು ಕ್ರೂರಗಾರನೆ। ಮೊದಲೊಂದು ಉಪಾಯವ ಪೇಳೆ ಮಧುರಾಕ್ಷಿ॥11॥ ಸಾಸ್ವೆ ಬಣ್ಣದ ಸೀರೆ ಪಾಶೀರ ಬಣ್ಣವು। ವೇಶಕ್ಕೆ ಅಲಂಕಾರವಾಗಿಹುದೇ। ಭಾಷಿಣಿಯರು ಕೂಡಿ ಆಭಾಸವಾಗಿದೆ। ಸಾಸೀರ ಜನದೊಳಗವಮಾನವೇ॥12॥ ಜಿಲಿಬಿಲಿ ಸೀರೆಯು ಬೆಲೆಹೆಚ್ಚು ಬಾಳುವುದು। ಜಲಜಾಕ್ಷಿ ಸೆರಗೆಲ್ಲ ಹೊಳೆಯುವುದೇ। ಎಳೆಗೆ ಸಾವಿರ ಹೊನ್ನು ಬೆಲೆ ಕೊಟ್ಟು ತೆಗೆದಿದ್ದೆ। ಎಲ್ಲರೂ ಬಲ್ಲರೆ ಫುಲ್ಲಾಕ್ಷಿಯೇ?॥13॥ ಪಂಚವರ್ಣದ ಸೀರೆ ಸತಿವಶವಾಗುವುದು। ಚಂಚಲಾಕ್ಷಿಯರೆ ಅದರ ಚಂದ ಕೇಳೇ। ಅಂಚಿನಲ್ಲೊಪ್ಪುವ ಪಂಚವರ್ಣದ ಗಿಣಿ। ಮಿಂಚಿನ ಬೆಳಕೀಗೆ ಮಿಣುಕುವುದೆ॥14॥ ಜಗನ್ಮೋಹನದ ಸೀರೆ ಜರಿತಾರಿ ಕುಪ್ಪಸ। ಜಗದೊಳಗೇ ತೆಗೆದಿದ್ದ ಮಾದರಿ। ಬಗೆ ಮೋಸವಾಯಿತೇ ದಿಗಿಲಾಗುತ್ತಿದೆ। ದಗಲ್‌ಬಾಜಿ ಅತ್ತಿಗೆ ದಂಡಿಪಳೇ॥15॥ ಉಟ್ಟ ಸೀರೆ ಕಳೆದು ಬಿಟ್ಟೇವು ನಾವಿನ್। ಊರೊಳಗೆ ಹ್ಯಾಗಿನ್ ಪೋಗುವುದು। ಪಟ್ಟೆ ಸೀರೆ ಕಳೆದು ಬೆತ್ತಲೆ ನಿಂತು। ಇಟ್ಟಿದ್ದು ಮಾಯವಾಗ್ಹೋಯ್ತಲ್ಲೆ॥16॥ ವಾರಿಜ ವದನೇರು ಸೀರೆಗಳ ಸಿಕ್ಕದೆ। ವರ್ಣಿಸಿ ವರ್ಣಿಸಿ ಖಿನ್ನರಾಗಿ। ತೀರಿದ ಕೆಲಸಕೆ ದೈವವೆ ಗತಿ ಎಂದು। ತಿರುಗಿ ನೋಡಲು ಕೃಷ್ಣ ಮರದಲ್ಲಿದ್ದ॥17॥ ನಾರೀರೆಲ್ಲರು ಬನ್ನಿರೆ ಇವನೋಡೆ। ಸೀರೆ ಕದ್ದ ಕಳ್ಳ ಸಿಕ್ಕಿದನೇ। ಬಾರೆಲೆ ಭಾಮಿನಿ ಏರೆಲೆ ಮರವನು। ಸೇರಿಸಿ ಪಿಡಿದವನ ಶಿಕ್ಷಿಸೋಣ॥18॥ ಅಕ್ಕಕ್ಕ ಇವನೀಗೆ ಶಿಕ್ಷೆಯಕೊಟ್ಟು। ಉಕ್ಕುಟಿ ಯಾಗಿಸಬೇಕೇ ಉಚಿತವು। ಕಕ್ಕಸ ಪಡಿಸದೆ ಸಿಕ್ಕದಿವನ ಕೈ। ಪಕ್ಷಿವಾಹನ ದೇವ ಸಿಕ್ಕುವನೇ॥19॥ ಒಳ್ಳೆ ಮಾತುಗಳಿಂದ ವಸ್ತ್ರಂಗಳ್ ಬೇಡೋಣ। ಫಲ್ಲು ಮಾಡಬೇಡಿ ಗೋಪಿಯರೇ। ಎಲ್ಲಾರು ಗುಂಪಾಗಿ ಯದುಪಾಲ ಬಳಿಗೆ ಪೋಗಿ। ಫುಲ್ಲಾಕ್ಷ ಕೃಷ್ಣನ್ನ ಬೇಡೋಣ॥20॥ ನಂದಕುಮಾರನೆ ನವನೀತ ಚೋರನೆ। ಮಂದರೋದ್ಧಾರನೆ ಮಾಧವನೆ। ಇಂದ್ರಾದಿ ವಂದ್ಯ ಗೋಪಾಲ ಚಂದನೇ। ಯದು ಸರ್ವೇಶ ಮಾನಿನಿ ದ್ರೌಪದಿ। ಮಾನವ ಕಾಪಾಡಿ ಮನ್ನಿಸಿದೆ॥21॥ ಆನೆಯ ಮೊರೆಕೋಳಿ ಆ ಕ್ಷಣ ಸಲಹಿದೆ। ಶ್ರೀನಿವಾಸನೆ ನಮ್ಮ ಸೀರೆ ಕೊಡೋ। ಕರವೆತ್ತಿ ಮುಗಿದರೆ ಕೊಡುವೆನೇ ವಸ್ತ್ರಗಳ। ಕರುಣಿಸೆ ಆಗ್ರಹದ ತರುಣೀಯರೇ॥22॥ ಮರಹತ್ತಿ ಬರಲಿಕ್ಕೆ ತರವಲ್ಲ ನಿನ್ನಿಂದ। ಮರಬಿಟ್ಟು ಹೊರಗೆ ವಸ್ತ್ರ ಬರಲಾರದು। ಮಂದಗಮನೇರು ಒಂದು ಕೈಯಿಂದಲೇ। ವಂದಿಸೀದರು ಆನಂದನಿಗೇ॥23॥ ಪನ್ನಗವಿನುತೇರು ಕಿನ್ನರ ಸುತೆಯರು। ಹಿಂದು ಮುಂದಾಗಿಯೆ ನಿಂತರಾಗಾ। ಒಂದು ಕೈಯಿಂದಲೇ ಒಪ್ಪುವನಲ್ಲವೇ। ಮುಂದೆ ಬಂದೆರಗಿ ಕೈ ಮುಗಿಯಬೇಕೇ॥24॥ ಸಿಂಧೂರ ಗಮನೇರೆ ಸೀರೆ ಎಲ್ಲವ ಕೊಡುವೆ। ಉದ್ದಂಡೆಯರೆ ಇಂದೀಗೆ ದಯಬಾರದು। ಲಲನೇಯರ್ ಧೈರ್ಯದಿ ಲಜ್ಜೆಯೆಲ್ಲವ ಬಿಟ್ಟು। ತಲೆಯ ಮೇಲೆ ಕೈ ಜೋಡಿಸಲ್॥25॥ ನಳಿನಾಕ್ಷ ನಿಮಗೀಗ ನಮಸ್ಕಾರವೆಂದರು। ಒಲಿದನೇ ಶ್ರೀಕೃಷ್ಣ ವನಿತೆಯರಿಗೆ। ವಾರಿಜನಾಭನು ವಾರಿಜಾಕ್ಷಿಯರಿಗೆಲ್ಲಾ। ಸೀರೆ ಕುಪ್ಪುಸಗಳ ಸೂರೆಗೊಂಡ॥26॥ ಮಾರ ಸುಂದರಾಕಾರ ಮರದಿಂದಿಳಿದನು। ನಾರೀಯರೊಡಗೂಡಿ। ನಗುತಲಿದ್ದ। ಒಂದೊಂದು ಯುವತೀಗೆ ಒಂದೊಂದು ಕೃಷ್ಣನ ಮಂದಗಮನೆಯರ ಮಧ್ಯನಿಂತು॥27॥ ಚೆನ್ನಾಗಿ ಪಾಡುತ್ತ ಚಪ್ಪಾಳೆ ತಟ್ಟುತ್ತ। ಧಿಮಿ ಧಿಮಿ ಧಿಮಿಕೆಂದು ಕುಣಿದರಾಗ। ದೇವ ಕನ್ನಿಕೆಯರು ದಿವ್ಯಗಾನವ ಪಾಡಿ। ಭಾವಿಸಿ ಲಜ್ಜೆಯ ಕೈಗೊಂಡು॥28॥ ಮುನ್ನೂರು ಮುವತ್ತು ಕೋಟಿ ದೇವತೆಗಳು। ಹೂ ಮಳೆ ಸುರಿದರು ಆಗಲೆ। ರಂಗನ್ನ ಕೂಡಿ ಶೃಂಗಾರಗಳ ಮಾಡಿ। ಅಂಗನೆರೆಲ್ಲರು ಪಾಡಿದರು॥29॥ ನಡುವೂಗಳ್ ಬಳೂಕೂತ ನಗೆಮುಖ ಹೊಳೆವುತ। ಮಡದೀಯರ್ ಬಂದು ಮನೆ ಸೇರಿದರು। ಮಾವ ಮಥುರೇ ವಾಸಿ ವೆಂಕಟೇಶ ವಿಠಲದಾಸ। ಪೇಳುವ ಈ ಕಥೆ ಕೇಳಿರೆಲ್ಲ॥30॥ ಸರ್ವದಾ ಶ್ರೀಕೃಷ್ಣ ಸುಖದಿಂದ ಒಲಿವನು। ಕರುಣಿಸಿ ಕೈ ಪಿಡಿದು ಸಲಹುವನು। ಮಂಗಳಂ ಶ್ರೀರಾಮ ಜಯಜಯ। ಮಂಗಳಂ ಗೋಪಾಲ ಕೃಷ್ಣನಿಗೆ। ಮಂಗಳಂ ಶ್ರೀಸತ್ಯ ರುಕ್ಮಿಣಿ ಅರಸಗೆ। ಇದು ಪೇಳ್ದೆ ಜನರಿಗೆ॥31॥

❖ ❖ ❖

ಮಥುರೆಗೆ ಕೃಷ್ಣಾಗಮನ

ಪೋಗಿಬರುವೇ ಗೋಪನಾಗವೇಣಿಯರೇ

ಪೋಗಿಬರುವೇ ಗೋಪನಾಗವೇಣಿಯರೇ ಚೆನ್ನಾಗಿ ಮಮತೆ ಪೂರ್ಣವಾಗಿರಲೀ...॥ಪ॥ ಜಾಗು ಮಾಡದೇ ನೀವು ಬೇಗದಿಂದಲಿ ಎನ್ನ ಸಾಗೀಸಿ ಪತಿಗಳ ಕೂಡೇ ಭೋಗೀಸಿ ತತ್ಸೇವೆ ಮಾಡಲು ಹೋಗುವುದು ದುರಿತಗಳೆಲ್ಲವು ದೂರವಾಗುವುದು। ಹೃದ್ರೋಗ ಮಂಗಲ ವಾಗುವುದು ಲೇಸಾಗಿ ಹರುಷಿತರಾಗಿ ಕಳುಹಿಸಿರೀಗ ಮಥುರೆಗೆ॥1॥ ಬಾಲಕತನದಿ ನಿಮ್ಮಾಲಯವನ್ನು ಹೊಕ್ಕು ಹಾಲು ಮೊಸರು ಬೆಣ್ಣೆಕದ್ದು ಮೆದ್ದು ಲೀಲೆಯಿಂದಲಿ ನಿಮ್ಮ ಬಾಲರೇ ತಿಂದರೆಂದ್ವೇಳಿದೆ ಪೂಸಿ ಹೇಳಿ ಹೀಗೆ ಬಾಳಿದೆ॥ ಮೇಲಿಟ್ಟ ಭಾಂಡವ ಸೀಳಿದೆ ಮತಿಸುವ ಸುಪಾತ್ರವ ಕಾಲಲೊದ್ದು ಬೀಳಕೆಡಗಿದೆನೆ ನವನೀತವನು ಮಾರ್ಜಾಲ ಮರ್ಕಟ ಪಾಲ ಮಾಡಿದೆನೇ ಹೀಗುಚಿತವೆಲ್ಲಳಿದರೆ ಕೇಳದಲೆ ನಾನತಿಧಾಳಿಯೆಲ್ಲವ ಪಾಲಿಸಿದಿರಿ ಕೃಪಾಳುಗಳ ಗುಣ ಪೇಳಲಳವೆ॥2॥ ಫುಲ್ಲನೇತ್ರೆ ಯರೇ ನಿಮ್ಮೆಲ್ಲರ ಮನವು ಎನ್ನಲ್ಲೇ ಇರುವುದೆಂದು ಬಲ್ಲೆ ಕೇಳಿ ಇಲ್ಲಿ ನಿಮ್ಮನ್ನು ಬಿಟ್ಟೆನ್ನೆಲ್ಲಿಗೆ ಪೋಗುವೆನಲ್ಲಾ ದೇಶಕಾರ್ಯವು ಮುಖ್ಯವಲ್ಲವೇ ಬರುವೆನಲ್ಲಿ ನಿಲ್ಲಾದೇ ಬ್ರಹ್ಮಾಂಡದೊಳ ಗಾವಲ್ಲಿ ಸ್ಮರಿಸಿದರಲ್ಲಿ ನಾನಿರುವೆ ಈ ಪರಿಯ ಪೇಳುವುದು ಸುಳ್ಳು ಮಾತುಗಳಲ್ಲ ಮನವರಿದಲ್ಲಿ ಸ್ಮರಿಸಿದಲ್ಲಿಗ್ಗೊದಗುವೆ॥3॥ ಹಿಂದೊಂದು ದಿನದಲ್ಲಿ ನಿಂದು ಕೊಳಲೂದೇ ಶ್ರೀವೃಂದಾ ಕೇಳುತಲಿ ಆನಂದದಿಂದ ಅಂದು ಬರಲು ನಿಮ್ಮ ತಂದೆತಾಯಿಗಳ ನಿರ್ಭಂದಿಸಿ ಬೇಡೆಂದವರನ್ನೆಲ್ಲಾ ನಿಂದೀಸಿ ಬೆಳದಿಂಗಳೊಳ್ ತೊರೆಯಿಂದಲೆನ್ನನು ಬಂದು ಕೂಡಿದಿರೆ ರಥೋತ್ಸವದಲಿ ಧಿಂ ಧಿಂ ದಿಮಿಕಿಟ ಎಂದು ಪಾಡಿದಿರೆ ಬಹು ಪರಿಯೊಳ್ ನೊಂದು ಬಂದ ಕುಂದನೆಣಿಸದೇ ಇಂತೆಂದು ಶ್ರೀರಮಾಸುಂದರ ವಿಠಲ ಇಂದುಮುಖಿಯರಿ ಗೆಂದ ಮೋದದಿ॥4॥

ಪೋದನೆಲೆ ಗೋಪಾಲ

ಪೋದನೆಲೆ ಗೋಪಾಲ। ಎಮ್ಮನು ಬಿಟ್ಟು ಮಥುರೆಗೆ॥ಪ॥ ಪೋದನೆಲೆ ಗೋಪಾಲ। ಅಕ್ರೂರನೊಡಗೂಡಿ। ।ಅ.ಪ.॥ ಪೋದನೆಲೆ ಗೋಪಆದರಿಸದೆ ಎಮ್ಮ। ಕ್ರೋಧಿಯೊಬ್ಬನು ಬಂದು ಕೊಂಡಯ್ದ ಮಥುರೆಗೆ॥1॥ ಚಿಕ್ಕಂದಿನಿಂದ ನಮ್ಮ ಕ್ಕಳರೊಡಗೂಡಿ। ಉಕ್ಕಿ ಬಂದಾಕ್ಷೀರ ಒಲೆಯ ಪಾಲಾದಂತೆ॥2॥

ಈತನೆ ನಮ್ಮ ನಂದ ನಂದನ

ಈತನೆ ನಮ್ಮ ನಂದ ನಂದನ॥ಪ॥ ಈತನೇ ನಮ್ಮ ನವನೀತ ಚೋರ॥ಅ.ಪ॥ ಮಧುರಾಪುರಕೆ ಪೋಗಿ ಮಾವ ಕಂಸನ ಕೊಂದು। ಮುದದಿ ಕುಬುಜೆಯ ಡೊಂಕು ತಿದ್ದಿ ಬಂದಾತ॥1॥ ಕಾಳಿಂಗ ಮಡುವ ಧುಮುಕಿ ಕಾಳಿ ಫಣಿಯ ತುಳಿದ। ಇಳೆಯೊಳು ಜಗದ್ವಿಖ್ಯಾತ ನೆಂಬಾತ ॥2॥ ಧರೆಯೊಳು ಹರಿಯುವ ಮಲಾಪಹಾರಿಣಿ ತೀರ। ಕರುಣಾ ಸಮುದ್ರನಾದ ಐಹೊಳೆ ವೆಂಕಟ॥3॥

ನೋಡುವುದೇ ಕಣ್ಣು

ರಾಗ: ಷಣ್ಮುಖಪ್ರಿಯ-ಅಟ್ಟತಾಳ

ನೋಡುವುದೇ ಕಣ್ಣು ಕೇಳುವುದೇ ಕಿವಿ ಪಾಡುವುದೇ ವದನ॥ಪ॥ ಗಾಡಿಕಾರ ಶ್ರೀ ವೇಣುಗೋಪಾಲನ। ಕೂಡಿ ಕೊಂಡಾಡುವ ಸುಖದ ಸೊಬಗನು॥ಅ॥ ಪೊಂಗೊಳಲೂದುತ ಮೃಗಪಕ್ಷಿಗಳನೆಲ್ಲ। ಸಂಗಳಿಸುತಲಿಪ್ಪನ ಅಂಗಜ ಜನಕ ಗೋಪಾಂಗನೇಯರೊಡನೆ ಬೆಳದಿಂಗಳೊಳಗೆ ಸುಳಿದಾಡೊ ರಂಗಯ್ಯನ॥1॥ ನವಿಲಂತೆ ಕುಣಿವ ಹಂಸೆಯಂತೆ ನಲಿಯುವ ಮರಿ ಕೋಗಿಲೆಯಂತೆ ಕೂಗುವ। ಎರಳೆಯ ಮರಿಯಂತೆ ಜಿಗಿಜಿಗಿದಾಡುವ ದುಂಬಿ ಝೇಂಕರಿಸುವಂದದಿ ಝೇಂಕರಿಪನ॥2॥ ಮುರುಡು ಕುಬ್ಜೆಯ ಡೊಂಕು ತಿದ್ದಿ ರೂಪವ ಮಾಡಿ ಸೆರೆಯ ಬಿಡಿಸಿ ಕೊಂಬನ॥ ಗರುಡಗಮನ ಸಿರಿ ಪುರಂದರವಿಠಲನ। ಶರಣಾಗತ ಸುರಧೇನು ರಂಗಯ್ಯನ॥3॥

ಅಕ್ಕೋ ಕೃಷ್ಣ ಬಂದನೇಳು ಬಾಲೆ

ಅಕ್ಕೋ ಕೃಷ್ಣ ಬಂದನೇಳು ಬಾಲೆ। ಎಚ್ಚರದಿಂದಿರು ಹೇಳಿ ಬಚ್ಚಿಡೆ ಬೆಣ್ಣೆಯ ಬೇಗ।।ಪ।। ಮಲ್ಲರ ಮಡುಹಿ ಬಂದ ಬಲ್ಲಿದ ಮಾನವ (ಕಂಸನ) ಕೊಂದ। ಚೆಲುವ ಹಯವದನ ತಾನಲ್ಲಿದ್ದರಲ್ಲಿಗೇ ಬಂದ।।1।।

ಯಾಕೆ ಇಂಥ ದುಡುಕು ಕೃಷ್ಣಯ್ಯ

ಯಾಕೆ ಇಂಥ ದುಡುಕು ಕೃಷ್ಣಯ್ಯ। ನಿನಗೇಕೆ ಇಂಥ ದುಡುಕು।।ಪ।। ಪಾಕಶಾಸನ ವಂದ್ಯ ಪೋಕತನಗಳಿನ್ನು ಸಾಕು ಸಾಕಯ್ಯ ಕೃಷ್ಣ ।।ಅ.ಪ।। ಗೊಲ್ಲ ಬಾಲಕರು ನೀವೆಲ್ಲರು ಕೂಡಿಕೊಂಡು। ಗುಲ್ಲು ಮಾಡದೆ ಮೊಸರೆಲ್ಲ ಸವಿದೆಯಂತೆ ಕೃಷ್ಣ।।1।। ಪೂತನಿ ಮೊಲೆಯನ್ನು ಭೀತಿಯಿಲ್ಲದೆ ಉಂಡು। ಘಾತವ ಮಾಡಿದೆ ಮಾತನಾಡಯ್ಯರ ಕೃಷ್ಣ।।2।। ದುಷ್ಟ ಕಂಸನ ನೀನು ಕಷ್ಟವಿಲ್ಲದೆ ಮಡುಹಿ। ಮುಷ್ಟಿಕನ ಕೊಂದೆ ದೃಷ್ಟಿ ತಾಕಿತಂದು।।3।। ನಿರ್ಜನ ಸ್ಥಳದಿ ಯಮಳಾರ್ಜುನರನ್ನು ಮಡುಹಿ। ದುರ್ಜನರ ಕೊಂದೆ ಅರ್ಜುನ ಸಾರಥಿ।।4।। ಅಂಗಿ ಟೊಪ್ಪಿಗೆ ಉಂಗುರ ಉಡಿದಾರ। ಶೃಂಗರಿಸಿಕೊಂಡು ರಂಗವಿಠ್ಠಲ ಬಾರೋ।।5।।

❖ ❖ ❖

ಶ್ರೀ ಕೃಷ್ಣ ದರ್ಶನದ ರಸಾನುಭವ

ಮಲ್ಲಾನಾಮಶನಿರ್ನೃಣಾಂ ನರವರಃ

(ಶ್ರೀಕೃಷ್ಣನು ಬಲರಾಮನ ಜೊತೆಯಲ್ಲಿ ಕಂಸಾಸುರನ ರಾಜ ಸಭಾಂಗಣವನ್ನು ಪ್ರವೇಶಿಸಿದ ಸಂದರ್ಭದಲ್ಲಿ ಅವನ ದರ್ಶನ ವೈಭವ।।)

ಮಲ್ಲಾನಾಮಶನಿರ್ನೃಣಾಂ ನರವರಃ। ಸ್ತ್ರೀಣಾಂ ಸ್ಮರೋ ಮೂರ್ತಿಮಾನ್ ಗೋಪಾನಾಂ ಸ್ವಜನೋಽಸತಾಂ ಕ್ಷಿತಿಭುಜಾಂ ಶಾಸ್ತ್ರ ಸ್ವಪಿತೋ ಶ್ಶಿಶುಃ। ಮೃತ್ಯುರ್ಭೋಜಪತೇರ್ವಿರಾಡ ವಿದುಷಾಂ ತತ್ತ್ವಂ ಪರಂ ಯೋಗಿನಾಂ ವೃಷ್ಣೀನಾಂ। ಪರದೇವತೇ ತಿ ವಿದ್ರತೋ ರಂಗಂ ಗತಃ ಸಾಗ್ರಜಃ।।

❖ ❖ ❖

ಕೊಳಲನೂದುತ ಬಂದ — ರಾಗ: ಸಾರಂಗ-ಆದಿತಾಳ

ಕೊಳಲನೂದುತ ಬಂದ। ನಮ್ಮ ಗೋಪಿಯ ಕಂದ। ಕೊಳಲನೂದುವುದು ಬಲು ಚಂದ।।ಪ।। ಆ ವಾಸುದೇವನ ಕಂದ ಇವ ನೋಡೆ । ದೇವಕಿ ಬಸಿರೊಳು ಬಂದ।। ಮಾವ ಕಂಸನ ಕೊಂದ। ಭಾವಜನಯ್ಯ ಮುಕುಂದ।।1।। ಮುತ್ತಿನಾಭರಣ ತೊಟ್ಟು। ಹಸ್ತದಿ ಕೊಳಲ ಕೊಟ್ಟು। ಕಸ್ತೂರಿ ತಿಲಕವನಿಟ್ಟು। ತುತ್ತುರ ತುರರೆಂಬ ನಾದವ ಪಿಡಿಯೆ।।2।। ಹಿಂದೆ ಗೋವುಗಳ ಹಿಂಡು। ಮುಂದೆ ಗೋಪಾಲರದಂಡು। ಹಿಂದಕ್ಕೆ ದೈತ್ಯರ ಕೊಂದ। ಪುರಂದರವಿಠ್ಠಲನ ಚಂದ।।3।।

ಮಥುರೆಗೆ ಬಂದು ತಾ ಕೊಂದು

ಮಥುರೆಗೆ ಬಂದು ತಾ ಕೊಂದು ಮಾತುಳನ ಬಂಧನ ರಹಿತರಾದರು। ಮಾತಾಪಿತರು। ಬಂಧ ರಹಿತರಾಗಲು। ಮಾತಾಪಿತರು ಜಲದೊಳು ದ್ವಾರಕಾ ಪುರವ ನಿರ್ಮಿಸಿದ। ಯದುನಂದನ ತನ್ನಗ್ರಜ ಬಲರಾಮನ ಕೂಡ। ಮುದದಿಂದಾ ವಾಸಯಾದವರ ಸಹಿತಾಗಿ।।

ಹಿಡಕೋ ಬಿಡಬ್ಯಾಡ ರಾಗ: ಕಾಮವರ್ಧಿನಿ-ಆದಿತಾಳ

ಹಿಡಕೋ ಬಿಡಬ್ಯಾಡ, ರಂಗಯ್ಯನ ಪಾದ॥ಪ॥ ಹಿಡಕೋ ಬಿಡಬ್ಯಾಡ ಕೆಡುಕ ಕಾಳಿಂಗನ। ಮಡುವಿನೊಳು ಧುಮುಕಿ ಕುಣಿದಾಡೋ ಕೃಷ್ಣನ ಪಾದ॥ಅ.ಪ॥ ಪುಟ್ಟಿದಾಗಲೆ ಇವ ದುರ್ಜನನೆನುತಲಿ ಅಟ್ಟಿದರಾಗಲೆ ತಾಯ್ತಂದೆಯರು। ಮುಟ್ಟಿ ತನಗೆ ಮೊಲೆಗೊಟ್ಟವಳ ಮಡುಹಿದ ದುಷ್ಟ ಕೃಷ್ಣನ ಹೋಗಬಿಟ್ಟರೆ ಸಿಕ್ಕನು॥1॥ ಒಪ್ಪೊತ್ತನ್ನಕೆ ನಡೆದರೆ ಬಂಡಿಯ ನುಚ್ಚುನೂರು ಮಾಡಿ ಕಾಲಲಿ ಒದ್ದನ ಶಿಕ್ಷಿಸಲು। ಜೋಡು ವೃಕ್ಷವ ತರಿದಿಟ್ಟ ರಚ್ಚೆಗಾರನೆಂದು ಬೆಚ್ಚದೆ ಜಗದೊಳು॥2॥ ಇದ್ದಲ್ಲಿ ಇರನಿವ ಬುದ್ಧಿ ಎಳ್ಳಷ್ಟಿಲ್ಲ ಹದ್ದನೇರಿ ತಿರುಗಾಡುವನು। ಮೆದ್ದೆಯಾತಕೆ ಮಣ್ಣ ತೆಗೆ ಬಾಯೆಂದರೆ ಆದ್ಯಂತ ಜಗವನು ತೋರಿ ಅಂಜಿಸಿದನ॥3॥ ಮಕ್ಕಳೊಳಗೆ ಪುಂಡ ಮನೆಮನೆಗಳ ಪೊಕ್ಕು। ಸಕ್ಕರೆ ನೊರೆಹಾಲು ಸವಿಸವಿದು। ಬೆಕ್ಕಿನ ಮೇಲಿಟ್ಟು ಬೆಣ್ಣೆಯ ತಾ ಮೆದ್ದು ಸಿಕ್ಕದೆ ಜಿಗಿದೋಡಿ ಪೋಗುವ ಕಳ್ಳನ॥4॥ ಸಾರಹೃದಯನಲ್ಲ ಭಾರಿಯ ಗುಣವಿಲ್ಲ ಆರ ಮಾತನು ಇವ ಲೆಕ್ಕಿಸನು। ನೀರೊಳಗಿಳಿದು ನಾರೇರ ಸೀರೆಯ ಕದ್ದು। ಹಾರಿ ಹೊನ್ನೆಯ ಮರವೇರಿದ ಕೃಷ್ಣನ॥5॥ ಕಾಳರಕ್ಕಸರೊಳು ಕದನ ಬೇಡೆಂದರೆ ಹೇಳಿದ ಹಾಗೆ ಕೇಳುವನಲ್ಲ। ಕೂಡೆ ಆಡುವ ಮಕ್ಕಳಂಜಿಕೊಂಡರಾಗ ಗಾಡಿಯ ಮುರಿದಿಟ್ಟ ಗಯ್ಯಾಳಿ ರಂಗನ॥6॥ ಜೀರಿಗೆ ಬೆಲ್ಲವ ಪಿಡಿದಂಬಿಕೆಯನು ಸಾರಿಬಂದ ರುಕ್ಮಿಯನು ಕೊಂದು। ಹೋರಬೇಡೆಂದರೆ ರುಕ್ಮನ ಹೆಡಗೆಯ್ಯ ತೇರಿಗೆ ಬಿಗಿದಂಥ ಚೋರ ಕೃಷ್ಣನ ಪಾದ॥7॥ ಅಟ್ಟಿಹಾಯುವ ಏಳು ಗೂಳಿಗಳನ್ನು ಕಟ್ಟಿ ಸತ್ರಾಜಿತಗೆ ರತ್ನವನಿತ್ತು। ಅಷ್ಟಮಹಿಷಿಯರ ಅರ್ಥಿಯ ಸಲಿಸಿದ ಸೃಷ್ಟಿಗೊಡೆಯ ಶ್ರೀಕೃಷ್ಣನ ಪಾದವ॥8॥ ಇರುಳೊಳು ಹೆಂಗಳ ಕೂಡಿ ಆಡುತಲಿ ವರ ಯಮುನೆಯ ತೀರದಿ ನಿಂತ। ಬರಿಮಾತಿಲ್ಲದೆ ಹದಿನಾರು ಸಾವಿರ ತರಳೇರ ಮರಳುಮಾಡಿದ ಈ ಮದನ ಗೋಪಾಲನ॥9॥ ಫಕ್ಕನೆ ಮಧುರೆಗೆ ಪೋಗಿ ಬರುವೆನೆಂದು ಅಕ್ಕಯ್ಯ ಗೋಪಿಗೆ ಪೇಳುತಲಿದ್ದ। ಫಕ್ಕನೆ ಬಲರಾಮನೊಡಗೂಡಿ ರಥವೇರಿ ಸಿಕ್ಕದೆ ಹೋಗುವ ಅಕ್ರೂರ ವರದನ॥10॥ ಆನೆಯ ಮಡುಹಿದ ಅಗಸನ ಕೆಡಹಿದ ತಾನಸಗೆ ತಂದ ಹೂವನೆ ಮುಡಿದ। ಮಾನಿನಿ ಕುಬುಜೆಗೊಲಿದು ಗಂಧ ಧರಿಸಿದ ಗಾನವಿನೋದಿ ಶ್ರೀ ಲಕುಮಿಯ ಅರಸನ॥11॥ ಮಲ್ಲರನೆಲ್ಲರ ಚೆಲ್ಲಾಡಿ ಕೆಡಹಿದ ಬಿಲ್ಲುಮುರಿದು ಮಾವನ ಮಡುಹಿ। ನಿಲ್ಲದೆ ದೇವಕಿ ಸೆರೆಯನು ಬಿಡಿಸಿದ ಪುಲ್ಲಲೋಚನ ಶ್ರೀ ಕೃಷ್ಣನ ಪಾದವ॥12॥ ನರಕುರಿಗಳನೆಲ್ಲ ಭರದಿ ರಕ್ಷಿಪುದಕೆ ಪರಮಪಾವನನಾಮ ಇದು ಸಾಲದೆ। ಕರಿ ಧ್ರುವ ಬಲಿ ಪಾಂಚಾಲಿಗೆ ವರವಿತ್ತ ಪುರಂದರವಿಠಲನ ಚರಣ ಕಮಲವನು॥13॥

❖ ❖ ❖

ನಂದಪುತ್ರನ ಆಜ್ಞೆಯಿಂದ (ಉದ್ಧವ ಗೋಪಿಯರ ಸಂವಾದ)

ನಂದಪುತ್ರನ ಆಜ್ಞೆಯಿಂದಲುದ್ಧವ ಬ್ಯಾಗ ಬಂದು ಗೋಕುಲ ಹೊಕ್ಕಾನಂದದಿಂದಲಿ॥1॥ ಬಾಲನ್ವಾತೆ7ಯ ಕೇಳೇಶೋದ ಗೋಪನು ಕೊಂಡಾಡಿ ಗುಣಗಳ ಮನಕೆ ತಾಳಿದರ್ದ್ಧರುಷವ॥2॥ ಗೋಪಸ್ತ್ರೀಯರು ಮನದ ತಾಪ ಬಿಡದಲೆ ಅಗಲಿ ಶ್ರೀಪತಿ ಕಾಣದೆ ಸಂತಾಪದಿಂದಿರೆ॥3॥ ಸತಿಯರೆಲ್ಲರು ಗೋಪಿಸುತನ ಪಾಡುತ ದಧಿಯ ಮಥಿಸಿಕದವನೆ ತೆಗೆಯೆ ರಥವ ಕಂಡರು॥4॥ ದಾವಕಾರಣ ನಮ್ಮ ಭಾವಭಕ್ತಿಗೆ ಸ್ವಾಮಿ ತಾನೆ ಬಂದಾನೋ ತನ್ನ ಕ್ರೂರನ ಕಳಿಸ್ಯಾನೊ॥5॥ ಭದ್ರೆರೆಲ್ಲರೂ ಕೂಡಿ ಎದ್ದು ಬರುತಿರೆ ಮಧ್ಯಮಾರ್ಗದಿ ಅಲ್ಲುದ್ಧವನ ಕಂಡರು॥ ಕಾಂತೇರೆಲ್ಲರು ಕೂಡೇಕಾಂತ ಸ್ಥಳದಲ್ಲಿ ನಿಂತು ಕಂತುನಯ್ಯನು ಲಕ್ಷ್ಮೀಕಾಂತ ಕ್ಷೇಮವೆ॥7॥ ಇಂದಿರೇಶನ ಬಿಟ್ಟಗಲಿ ವ್ರಜದೊಳು ಕಾಲ ಹಿಂದೆ ಕಳೆವೋದ್ವ್ಯಾಗಲು ಇರುಳನೆ॥8॥ ಮುಂದೆ ಕಾಣದೆ ನೇತ್ರ ಅಂಧಕರಂದದಿ ಮುಕ್ಕುಂದನಿಂದಲಿ ರಹಿತರೆಂದಿಗಾದೆವೊ॥9॥ ತೊಡಿಗೆ ಬಂಗಾರ ಶಿರದಿ ಮುಡಿವೊ ಮಲ್ಲಿಗೆ ದೇಹಕ್ಕುಡಿಗೆ ಭಾರವೊ ಬಿಟ್ಟು ಪೊಡವಿಗೊಡೆಯನ॥10॥ ಕೇಳೋ ಉದ್ಧವ ನಾವು ಜಾಳು ಸ್ತ್ರೀಯರು ಒಲ್ಲದೆ ಕಾಳಿಮರ್ದನ ಕಾಲಲೊದ್ದು ಪೋದನು॥11॥ ಜಾರಸ್ತ್ರೀಯರುಯಂದು ನಗದಿರುದ್ಧವ ಬಿಗಿದ ಮೋಹಪಾಶದಿ ಈ ವಿಚಾರ ಮಾಡಿದ॥12॥

ಬಲೆಯಗಾರಗೆ ಸಿಕ್ಕು ಬಳಲಿದಾಕ್ಷಣ ಅದರ ಕೊರಳಕೊಯ್ಯದೆ ಅವಗೆ ಕರುಣ ಬರುವುದೆ॥13॥ ಎಷ್ಟು ಹೇಳಲೊ ಅವನ ಗಟ್ಟಿಯೆದೆಗಳ ಒಲ್ಲದೆ ಬಿಟ್ಟು ನಮ್ಮನು ಮಧುರಾಪಟ್ಟಣ ಸೇರಿದ॥14॥ ಭ್ರಮರಕುಂತಳೆ ಒಂದು ಭ್ರಮರಕಾಣುತ ಬ್ಯಾಡ ಕಮಲನಾಭನ ವಾರ್ತೆ ಕಿವಿಗೆ ಸೊಗಸದು॥15॥ ಮದನಮೋಹನ ಹೋಗಿ ಮಧುರಾಪುರಿಯಲಿ ಅಲ್ಲಿ ಚಿದುರೆರಿಂದಲಿ ಅವಗೆ ಸೊಗಸು ಸಮ್ಮತ॥16॥ ಕ್ರೂರನೆನ್ನದೆ ಇವಗಕ್ರೂರನೆನುತಲಿ ದಾರ್ಶ್ವಿಸರಿಟ್ಟರೋ ನಮಗೆ ತೋರಿಸೊ ಅವರನು॥17॥ ಯಾತಕ್ಕೇಳುವಿ ಅವನ ವಾರ್ತೆ ಸೊಗಸದು ಹರಿಯು ಪ್ರೀತಿ ವಿಷಯನು ನಮಗೆ ಘಾತನೆನಿಸಿದ॥18॥ ಜಲನ ಭೇದಿಸಿ ಹಯನ ಕೊಂದು ವೇದ ಹ್ಯಾಗೆ ಸೆಳೆದ ನಮ್ಮನು ಮನಸು ಹರಣ ಮಾಡಿದ॥19॥ ಕ್ಷೀರ ಮಥನವ ಮಾಡಿ ಸ್ತ್ರೀಯರೂಪದಿಂದಸುರರ ಮೋಹಿಸಿದ್ವಂಚನೆ ನಮಗೆ ಪೂರ್ಣ ತಿಳಿಸಿದ॥20॥ ಭೂಮಿ ಬಗಿದನು ತನ್ನ ಕ್ವಾರೆಯಿಂದಲಿ ನಮ್ಮನ್ನು ಸೀಳಿ ಪೋದರೆ ಇನ್ನೀ ಘೋರ ತಪ್ಪುವುದು॥21॥ ಕಂದ ಕರೆಯಲು ಕಂಬದಿ ಬಂದು ಸಲಹಿದನೆಂದು ನಂಬಿ ಕೆಟ್ಟೆವೊ ಇನ್ನಿವನ ಹಂಬಲ ಸಾಕಯ್ಯ॥22॥ ಕೊಟ್ಟ ದಾನವ ಬಲಿಯ ಕಟ್ಟಿ ಪಾಶದಿಂದವನ ಮೆಟ್ಟಿದ ಪಾತಾಳಕಿಂಥಾಕೃತ್ಯಮ ರುಂಟೇನೊ॥23॥ ಕೊಡಲಿ ಕೈಯೊಳ್ಪು ಪಿಡಿದು ಹಡೆದ ಮಾತೆಯ ಶಿರವ ಕಡಿದ ಪುರುಷಗೆ ನಮ್ಮೊಳು ಕರುಣ ಬರುವುದೆ॥24॥ ಬಂದ ಸತಿಯಳ ಮೋರೆ ಅಂಗ ಕೆಡಿಸಿದ ತನ್ನಂಗನೆ ಕಾಣದೆ ತಿರುಗಲೆಮಗೆ ಸನ್ಮತ॥25॥ ಪತಿಯ ಸುತರನೆ ಬಿಟ್ಟೆವಶನ ವಸನವ ಅಗಲಿದ್ವಸುನಂದನಗೆ ನಮ್ಮೆಲ್ಲರುಸುರು ಮುಟ್ಟಲ್ಯೊ॥26॥ ಬೌದ್ಧ ರೂಪದಿ ಸ್ತ್ರೀಯರ ಲಜ್ಜೆಗೆಡಿಸಿದನೆಂಬೊ ಸುದ್ದಿ ಬಲ್ಲೆವೊ ನಾವಿಲ್ಲಿದ್ದವನರುದ್ಧವ॥27॥ ಕಲಿಯ ಮನಸಿರೆ ಇವಗೆ ಕಲ್ಕ್ಯನೆಂಬೋರೊ ಕತ್ತಿಪಡಿದ ಪುರುಷಗೆ ನಮ್ಮೊಳು ಕರುಣ ಬರುವುದೆ॥28॥ ಬ್ಯಾಡವೆನುತಲಿ ಅವಗೆ ಬೇಡಿಕೊಂಡೆವೊ ಗಾಡಿಕಾರನು ನಮ್ಮ ನೋಡದ್ಹೋದರು॥29॥ ನಮ್ಮ ವನನವ ಹೋಗಿ ಮನ್ನಿಸುದ್ಧವ ಪನ್ನಂಗಶಯನನ ಪಾದಕ್ಕಿನ್ನು ನಮಿಸೆವೊ॥30॥ ಬಿಟ್ಟ್ಯಾಗಿ ರುವೊಣೋ ಭೀಮೇಶಕೃಷ್ಣನ ನಮ್ಮ ದೃಷ್ಟಿಗೆ ತೋರಿಸೊ ಮುಕ್ತಿ ಕೊಡುವೊ ದಾತನ॥31॥

ಬ್ಯಾಗ ಬರುವೇನೆಂದು ಸಾಗಿ (ಉದ್ಧವ ಗೋಪಿ ಭೇಟಿ)

ಬ್ಯಾಗ ಬರುವೇನೆಂದು ಸಾಗಿ ಮಧುರೆಗೆ ಹೋದ। ಹ್ಯಾಗೆ ಮಾಡುವೋಣುದ್ಧವ ಭಾಗವತಪ್ರಿಯಗಿನ್ನು। ಬಾಗಿ ನಮಿಸುತ ನಾವು ಹೋಗಬ್ಯಾಡೆಂತೆಂದವೊ ಉದ್ಧವ॥ಪ॥ ಗೋಕುಲವಾಸ ಬಿಟ್ಟ್ಯಾಕೆ ತೆರಳಿದ ಸ್ವಾಮಿ। ಈ ಕಾರ್ಯವನು ತಿಳಿಹಿಸೊ। ಶ್ರೀಕರ ಕಮಲಾರ್ಚಿತ ಚರಣಧ್ವಜವಜ್ರರೇಖಪಾದವ ಚಲಿಸಿದ। ಪಾಕಶಾಸನಪ್ರಿಯನು ಪರಮ ನಿರ್ದಯ ಮಾಡಿ। ವ್ಯಾಕುಲರಾಗಿದ್ದೆವೊ ಉದ್ಧವ॥1॥ ಯಂತ್ರಮಾಯದಲಿ ಶ್ರೀಕಾಂತನೊಲಿಸು ವುದಕ್ಕೆ। ಮಂತ್ರವನು ಮಾಡರಿಯೆವೊ। ಅಂತರಗದಲಿ ಅನಂತಗುಣ ಸ್ತುತಿಸಲೇಕಾಂತ ಭಕ್ತರಲ್ಲವೊ। ನಿಂತು ನಿತ್ಯಾನಂದಮೂರ್ತಿಯ ನೋಡದಲೆ। ಭ್ರಾಂತರಾಗಿ ಪೋದೆವಲ್ಲೊ ಉದ್ಧವ॥2॥ ಅತಿಕ್ರೂರನೆನಿಸುವಕ್ರೂರ ಬಂದು ನಮಗ। ಹಿತಮಾಡಿ ಪೋದನಲ್ಲೊ। ಮತಿಹೀನರಾಗ್ಧರಿಯ ರಥವ ನಿಲಿಸದಲೆ ಮುಂದೆತನ (ಯತ್ನ?) ಮರಿಯದೆ ನಿಂತೆವೊ। ಪೃಥಿವಿ ಒಳಗಿಂಥ ಗೋಪಿಕಾಸ್ತ್ರೀಯರೆಂದು ಭಾಳಪಕೀರ್ತಿಗೊಳಗಾದೆವೋ ಉದ್ಧವ॥3॥ ಸಕ್ಕರೆಯಂಥ ಸವಿಮಾತನಾಡುತ ನಮಗೆ। ದಕ್ಕಿದಕ್ಕದಲ್ಹೋದನೊ। ಮತ್ತೇನು ಪೇಳೋಣ ಮಂದಭಾಗ್ಯರು ಹರಿಯ। ದಕ್ಕಿಸಿಕೊಳ್ಳದ್ಹೋದೆವೊ। ಸಿಕ್ಕರೆ ಧನವು ಶತಸಾವಿರ ಕೋಪ್ಪರಿಗೆ। ಅಷ್ಟಧಿಕ ಸುಖವಾದೀತೋ ಉದ್ಧವ॥4॥ ಮಡದಿಯರು ಕೇಳಿಗೆ ಮಧುರಾಪಟ್ಟಣದಂಥ ಚಿದುರೆಯರು ನಾವಲ್ಲವೊ। ಮದನನಾಟಕೆ ಮದಗಜಗಮನೇರಿಗಿನ್ನು। ಮುದದಿ ಮರುಳಾಗಿಪ್ಪನೊ। ವಿಧಿ ಬರೆದನೇನೆಂದರೀ ನಮ್ಮ ಪಣೆಯಲ್ಲಿ। ಪದುಮಾಕ್ಷನಗಲುವಂತೆ ಉದ್ಧವ॥5॥ ಮಲ್ಲರನೆ ಮಡುಹಿದ್ದ। ಮಾವನ್ವೈರಿಯು ನಮ್ಮ। ಕೊಲ್ಲಿ ಪೋದಂತಾಯಿತೊ। ಸಲ್ಲ ನಡತೆಯ ಸೊಟ್ಟುಕುಬ್ಜೆಗೆ ಕಡೆಯು ನಾ। ವಲ್ಲವೆಂದವಗೆ ಪೇಳೊ। ನಿಲ್ಲದ್ಹೋಗಿಂದಕೆ ಸುಳ್ಳಲ್ಲೊಂದು ಬೆರೆಸದಲೆ। ಎಲ್ಲ ವಾರ್ತೆಗಳ ಹೇಳೊ ಉದ್ಧವ॥6॥ ಕಲ್ಲಾಗದೀವಿಧಿಯ ಕಾಮನಪಿತನಗಲಿ। ಸೊಲ್ಲು ಸೊಲ್ಲಿಗೆ ಬಳಲ್ದೆವೊ। ಮಲ್ಲಿಗೊಣಗಿದ ಗೋವ್ರಜಮೂಲೆಯಲ್ಲಿ। ನಾವಿರಲಾರೆವೊ। ಎಲ್ಲಿ ಬಂದೊದಗಿತೀ ಬಿಲ್ಲು ಬ್ಬನಮಗೆ। ಭೀಮೇಶ ಕೃಷ್ಣನ ತೋರಿಸೊ ಉದ್ಧವ॥7॥

❖ ❖ ❖

ಮಥುರೆಯಲ್ಲಿ ಶ್ರೀ ಕೃಷ್ಣನ ಉಪನಯನ

ಕಾಗೆ ಕಾ ಎನ್ನಲಿ ಹರಿಯೆ **ರಾಗ : ಭೌಳಿ-ಆದಿತಾಳ**

ಕಾಗೆ ಕಾ ಎನ್ನಲಿ ಹರಿಯೆ ಹಕ್ಕಿ ಚಿಲಿಪಿಲಿ ಎನ್ನಲಿ ಕೋಗಿಲೆ ಸ್ವರಗೆಯ್ಯಲಿ ಕೃಷ್ಣ ನಾಗಸಂಪಿಗೆ ಅರಳಲಿ ಕೃಷ್ಣ॥ಪ॥ ಭಾನು ಉದಯವಾಗಲಿ ॥ಅ.ಪ॥ ಎದ್ದು ಮುಖತೊಳೆ ಏಳು ತಿದ್ದು ಕಸ್ತುರಿ ತಿಲಕವ ಮುದ್ದೆ ಬೆಣ್ಣೆಯ ನಿನಗೆ ನಾ ಕೊಡುವೆ ಹೊದ್ದಿದ ಕತ್ತಲು ಹರಿದು ಬೆಳಗಾಯಿತೊ ನಿದ್ದೆ ತಿಳಿದೆದ್ದು ಕೂಡಯ್ಯ ಕೃಷ್ಣ॥1॥ ಬಿಸಿಯ ದೋಸೆಯಹೊಯ್ದು ಮೊಸರಗಡ್ಡೆಯ ತೆಗೆದು ಹೊಸದಾದ ಹಸುವಿನ ತುಪ್ಪವನ್ನು ಹಸನಾದ ಕಲಸನ್ನ ಹೆಸರುಬೇಳೆಯ ಹುಗ್ಗಿ ಹಸುಳೆ ನಿನಗಾರೋಗಣೆ ಮಾಡುವೆ॥2॥ ಎಂದು ಇಲ್ಲದ ಹಟವ ಇಂದೇಕೆ ಮಾಡುವೆಯೊ ಕಂದರೊಳಗತಿನೀನು ಹರಿಯಾದೆಯಾ। ಇಂದು ನೆರವಿಗೆ ನಿನ್ನ ಎತ್ತಿಕೊಳ್ಳುವರಿಲ್ಲ ಕಂದ ಅಳಬೇಡವೋ ಶ್ರೀ ಪುರಂದರವಿಠಲ॥3॥

ಬೇಗ ಬಾರೆಲೊ ಬಾಲಾಕೃಷ್ಣ **ರಾಗ: ತೋಡಿ**

ಬೇಗ ಬಾರೆಲೊ ಬಾಲಾಕೃಷ್ಣ ಹಸೇಗೆ ಬಾರೆಲೊ ಬಾಲಕೃಷ್ಣ॥ಪ॥ ನಂದಗೋಕುಲಾ ಬೃಂದಾವನದೊಳು ಕೊಳಲನೂದುತ ಬಾರೋ ಬೇಗ॥1॥ ನಾರೀಯರೊಡನೆ ನೀ ನಗೆಮುಖದಿಂದಲೀ ಕುಣಿ ಕುಣಿದಾಡುತಬಾರೋ ಬೇಗ॥2॥ ಮಾವ ಕಂಸಾನ ಕೊಂದು ನೀನೀಗ ಮಥುರೆಯೊಳೆ ನಿಂದೂ। ಮಧುಸೂಧನ ಬಾರೋ ಬೇಗ॥3॥

ಮಾಧವ ಬಾರೈ ಮುತ್ತಿನ ಪೀಠಕೆ **ರಾಗ: ಸಿಂಧೂಭೈರವಿ**

ಮಾಧವ ಬಾರೈ ಮುತ್ತಿನ ಪೀಠಕೆ ಮಂದರ ಗಿರಿಧರನೇ। ಮುರಹರ ಬಾಲಾಶ್ರೀ ಗೋಪಾಲ॥ಪ॥ ಮಾನಿನಿ ಮಣಿಯರು ಮುದದೊಳು ಕರೆವರು ಮಂಗಳ ರೂಪನೆ ಬಾ। ಮುರಹರ ಬಾಲಾ ಶ್ರೀ ಗೋಪಾಲ॥ಅ.ಪ॥ ಹಣೆಯಲಿ ಹೊಳೆಯುವ ಕಸ್ತೂರಿ ತಿಲಕಾ। ಘನಕಂಠದೊಲು ಮಿರುಗುವ ಪದಕ। ವೇಣು ವಿನೋದದಿ ಮೆರೆಯುವ ಶೌರಿ। ಗಾನಕೆ ಒಲಿಯುವ ಮುರುಳೀ ಧಾರಿ। ಮಾನವ ಜನರಿಗೆ ಜ್ಞಾನವ ಕೊಡುವ। ದೀನೋದ್ಧಾರನೆ ಬಾ। ಮುರಹರ ಬಾಲಾಶ್ರೀ ಗೋಪಾಲ॥1॥ ಮಂದಗಮನೆಯರ ಕೂಡುತ ಬಂದಾ। ಬೃಂದಾವನದೊಳು ಆಡುತನಿಂದ। ನಂದಕುಮಾರನ ವದನಾರವಿಂದ। ಚಂದದಿ ನೋಡಲು ಬಲು ಆನಂದ। ಸುಂದರಿಯರ್ ಕರೆವರು ಚೆಂದದೊಳಿಂದು। ಅಂದದ ಪೀಠಕೆ ಬಾ ನೀ ಇಂದು। ಇಂದಿರೆ ರಮಣನೆ ಕಮಲ ನಯನನೆ। ಚಂದಿರ ವದನನೆ ಬಾ। ಮುರಹರ ಬಾಲಾಶ್ರೀ ಗೋಪಾಲ॥2॥

ಪರಿಮಳದೆಣ್ಣೆಯ **ರಾಗ: ಕಮಾಚ್-ಆದಿತಾಳ**

ಪರಿಮಳದೆಣ್ಣೆಯ ಸರಸದೊಳೊತ್ತಲು॥ ತರುಣಿಯರೆಲ್ಲರು। ಹರುಷದೊಳೈರೆದರು॥ಪ॥ ಮುತ್ತಿನಕ್ಷತೆಗಳ। ನೆತ್ತಿಯೊಳಿಡುತಲಿ। ಮತ್ತಗಾಶಿನಿಯರು। ಚಿತ್ತಜ ಪಿತನಿಗೆ॥1॥ ಕರ್ಪೂರವೀಳ್ಯವ ನೊಪ್ಪದೊಳೀಯುತ। ಸರ್ಪಶಯನ ಹರಿಗೇ। ಒಪ್ಪುವ ಸಂಪಿಗೆ॥2॥ ಸರಸಿಜ ಮಲ್ಲಿಗೆ। ಮರುಗ ಸೇವಂತಿಗೆ। ವರಪಾರಿಜಾತವ। ಕರದೊಳು ಪಿಡಿಯುತ॥3॥ ಶರಣಜನಾನತ। ಗರುಡವಾಹನ ಮಾಂ। ಗಿರಿಪತಿ ಶಿರದೊಳು। ಸುರಗಿಯ ಹೂವಿನ॥4॥

ಗುರುಗಣಪತಿ ನಿಮ್ಮ ಚರಣಕ್ಕೆ **ರಾಗ: ಆನಂದಭೈರವಿ**

ಗುರುಗಣಪತಿ ನಿಮ್ಮ ಚರಣಕ್ಕೆ ನಮಿಸುವೆ ವರಶಾರದಾಂಬೆಗೆ ಎರಗುವೆ। ವರಶಾರದಾಂಬೆಗೆ ಎರಗಿ ಶ್ರೀಕೃಷ್ಣನ ಚರಿತೆಯನ್ನು ಪಾಡಿ ಪೊಗಳುವೆ॥ ವಾರಿಜನಾಭನಿಗೆ ಏಳನೇ ವರುಷದಿ। ಮಾಡುವೆ ಮುಂಜಿ ಎನುತಲಿ। ಮಾಡುವೆ ಮುಂಜಿ ಎನುತಲಿ ವಸುದೇವ ಆಲೋಚಿಸಿದ ತನ್ನ ಮನದಲ್ಲಿ॥ ಶಂಖಚಕ್ರವ ಬಿಗಿದ ಬಿಂಕ ಹಸೆಮಣೆ ಮೇಲೆ।

ಪಂಕಜನಾಭಗೆ ಜನಿವಾರ। ಪಂಕಜನಾಭಗೆ ಜನಿವಾರ ಹಾಕೋರೆ। ಘಂಟೆನಾದಗಳು ಎಸೆದಾವು।। ತಂದೆಯ ಚರಣಕ್ಕೆ ಗಂಧ ಅಕ್ಷತೆ ಇಟ್ಟು। ತಂದೆ ನೀನೀಗ ಸಲಹೆಂದು। ತಂದೆ ನೀನೀಗ ಸಲಹಬೇಕೆನುತಲಿ। ತಂದೆಗೆ ನಮಿಸಿ ನುಡಿದಾನು।। ಪಟ್ಟವಾಡಿಯನುಟ್ಟು ಹೊಸಬಟ್ಟೆಯ ಮುಸುಕಿಟ್ಟು। ಪುತ್ರನ ತನ್ನ ತೊಡೆಮೇಲೆ। ಪುತ್ರನ ತನ್ನ ತೊಡೆಲಿಟ್ಟು ವಸುದೇವ ಅರ್ತಿಯಲಿ ಕೊಟ್ಟ ಉಪದೇಶ।।ಸಾರವಾಡಿಯನುಟ್ಟು ಹೊಸಶಾಲು ಮುಸುಕಿಟ್ಟು ಬಾಲನ ತನ್ನ ತೊಡೆಯಲಿಟ್ಟು। ಬಾಲನ ತನ್ನ ತೊಡೆಲಿಟ್ಟು ವಸುದೇವ। ಬಲಗಿವಿಲಿ ಕೊಟ್ಟ ಉಪದೇಶ।। ಮರವ ಹತ್ತದಿರು ಮಡುವ ಧುಮುಕದಿರು। ಅರಳಿದ ಮಲ್ಲಿಗೆಯ ಮುಡಿಯಾದೆ। ಅರಳಿದ ಮಲ್ಲಿಗೆಯ ಮುಡಿಯಾದೆ ಇರು ಎಂದು ಸಡಗರದಿ ಕೊಟ್ಟ ಉಪದೇಶ।। ಪಾಪಾಸ ಮೆಟ್ಟದಿರು ರೌದ್ರವನುಡದಿರು। ಜಾಜಿ ಮಲ್ಲಿಗೆಯ ಮುಡಿಯಾದೆ। ಜಾಜಿ ಮಲ್ಲಿಗೆಯ ಮುಡಿಯಾದೆ ಇರು ಎಂದು। ಪ್ರೀತಿಯಲಿ ಕೊಟ್ಟ ಉಪದೇಶ।। ಕನ್ನಡಿಯ ಹಿಡಿಯದೆ ಕನ್ಯೆಯ ತಿದ್ದದೆ ನಿಮ್ಮ ಮಾವಯ್ಯ ಕರೆದ್ವೆಣ್ಣ। ನಿಮ್ಮ ಮಾವಯ್ಯ ಕರೆದ್ವೆಣ್ಣ ಕೊಡೊತನಕ ಚಿನ್ನ ಈ ವ್ರತವ ನಡೆಸೆಂದ।। ಜನನೀಯ ಚರಣವ ವಿನಯದಿಂದಲೆ ತೊಳೆದು ಪ್ರವರವ ಹೇಳಿ ನಮಿಸಿದಾ। ಪ್ರವರಾವ ಹೇಳಿ ನಮಿಸಿದ ಕೃಷ್ಣಗೆ। ಜನನಿ ನೀಡಿದಳೆ ಭಿಕ್ಷವನು।। ಚಿನ್ನದ ಬಟ್ಟಲನು ಚಿಣ್ಣ ಕರದಲಿ ಪಿಡಿದು। ನನ್ನಿಯಿಮ್ ಭಿಕ್ಷಾಂದೇಹಿ ಎನಲು। ಭಿಕ್ಷಾಂದೇಹಿ ಎನಲು ದೇವಕಿ ತಾನು ಹರಸಿ ಭಿಕ್ಷಾವನಾಗ ಇಡುವ್ಹೋಳು।। ಮುತ್ತಿನ ಭಿಕ್ಷವ ಹೆತ್ತಮ್ಮ ನೀಡಿದಳು। ಮತ್ತೆ ಕುಳಿತಿದ್ದ ಸಭೆ ಎಲ್ಲಾ। ಮತ್ತೆ ಕುಳಿತ್ತಿದ್ದ ಸಭೆ ಎಲ್ಲಾ ನೀಡಿದರು। ಅಕ್ಕಿಯ ಭಿಕ್ಷಾ ಮೊದಲಾಗಿ।। ಹವಳದ ಭಿಕ್ಷವ ಹಡೆದಮ್ಮ ನೀಡಿದಳು। ಒಡನೆ ಕುಳಿತಿದ್ದ ಸಭೆಎಲ್ಲಾ। ಒಡನೆ ಕುಳಿತಿದ್ದ ಸಭೆಎಲ್ಲಾ ನೀಡಿದರು ಹರಡಿಯ ಭಿಕ್ಷಾ ಮೊದಲಾಗಿ।। ಮಂಗಳಂ ಮಹಿಮನಿಗೆ ರಂಗ ಶುಭಾಂಗನಿಗೆ। ಪಂಕಜ ಜನಕಾ ಹರಿಗೀಗ। ಪಂಕಜ ಜನಕಾ ಹರಿಗೀಗ ನಾರಿಯರು। ಮಂಗಳಾರತಿ ಬೆಳಗಿರೆ।।

ನಾಗಸಂಪಿಗೆಹೂ ಬಾಗಿಲಿಗೆ ಪೂಜಿಸಿ **ರಾಗ: ಆನಂದಭೈರವಿ**

ನಾಗಸಂಪಿಗೆಹೂ ಬಾಗಿಲಿಗೆ ಪೂಜಿಸಿ ಬಾಲನಾ ತನ್ನ ತೊಡೆಯಲಿ ತೊಡೆಯನಿಟ್ಟು ವಸುದೇವ ಬಾಲನಿಗೆ ಕೊಟ್ಟ ಉಪದೇಶ।।ಪ।। ಅಚ್ಚ ಸಂಪಿಗೆಹೂ ಹೊಸ್ತಲಿಗೆ ಪೂಜಿಸಿ ಪುತ್ರನ ತನ್ನ ತೊಡೆಯಲಿ ತೊಡೆಯಿಟ್ಟು ವಸುದೇವ ಪುತ್ರನಿಗೆ ಕೊಟ್ಟ ಉಪದೇಶ।।1।। ಮರವ ಹತ್ತದಿರು ಮಡುವ ಧುಮುಕದಿರು। ಹೆಡೆಯ ಕಾಳಿಂಗನಾ ತುಳಿಯದೆ ಇರು ಎಂದು ಬಾಲಕನಿಗೆ ಕೊಟ್ಟ ಉಪದೇಶ।।2।। ಪಾಪಾಸ ಮೆಟ್ಟದಿರು ನೀತೀಯ ಮರೆಯದಿರು ಜಾತಿ ಮಲ್ಲಿಗೆಯ ಮುಡಿಯದೆ ಇರು ಎಂದು ಕಂದನಿಗೆ ಕೊಟ್ಟ ಉಪದೇಶ।।3।। ಕನ್ನಡಿಯ ನೋಡದಿರು ಪನ್ನೆಯ ತಿನ್ನದಿರು ಸಣ್ಣ ಮಲ್ಲಿಗೆಯ ಹೂವ ಮುಡಿಯದೆ ಇರು ಎಂದು ಪುತ್ರನಿಗೆ ಕೊಟ್ಟ ಉಪದೇಶ।।3।। ಅತ್ತೆಯ ಮಗಳನ್ನು ಕತ್ತೆತ್ತಿ ನೋಡದಿರು ನಿಮ್ಮ ಮಾವಯ್ಯ ಮಗಳನು ಕೊಡೋತನಕ ಬಾಲ ಈ ವ್ರತವ ನಡೆಸೆಂದ।।4।।

ಭಿಕ್ಷ್ಯವಿಟ್ಟಳಾಗ ಜನನೀ ವಟುವಿಗೆ **ರಾಗ: ಆನಂದಭೈರವಿ-ಮಿಶ್ರಛಾಪುತಾಳ**

ಭಿಕ್ಷ್ಯವಿಟ್ಟಳಾಗ ಜನನೀ ವಟುವಿಗೆ। ರಕ್ಷೇಶನು ಕೊಟ್ಟ ಶುಭ। ಲಕ್ಷಣದ ಪಾತ್ರೆಯಲಿ।।ಪ।। ಆತಪತ್ರ ಮೌಂಜಿಯುಪವೀತ। ದಂಡ ಕಮಂಡಲಾ। ಖ್ಯಾತಿಯಿಂದ ಧರಿಸಿಪ್ಪಗೆ। ತೋರಾ ಮುಕ್ತಾಫಲಂಗಳ।।1।। ನೆರೆದ ಸಭೆಯವರೆಲ್ಲ ಆಶ್ಚರ್ಯದಿ ನೋಡುತಿರೇ। ಪರಮಾತ್ಮ ತಾ ನಿಂತು ಕೇಳೆ ಹರುಷದಿಂದ್ವವಳದಾ।।2।। ನವರತ್ನ ಖಚಿತವಾದ ಸುವಿಮಲಾಪಾತ್ರೆಗೊಂಡು। ಭವತಿ ಭಿಕ್ಷಾಂದೇಹಿ ಎಂದು। ಸವಿಮಾತಿನಿಂದಲಿ ಕೇಳಿ।।4।। ಶ್ರೀಮನ್ನಾರಾಯಣ ಲೀಲಾಮಾನುಷ ವಿಗ್ರಹ ಮೇಘಶ್ಯಾಮ ಕರುಣಾಲವಾಲ ಭಕ್ತಪಾಲಗೆ।।4।। ದ್ವಾರಕಾಪುರವ ಶೃಂಗರಿಸಿ ಕೇರಿಯಲ್ಲೆಲ್ಲ ಡಂಗುರ ಹೊಯ್ಸಿ। ಸ್ವಾಮಿಗೆ ಉಪನಯನ ಆಚರಿಸಿ ದೇವಕಿಗೆ ಪಾರಿಜಾತವ ಮುಡಿಸಿ।।5।। ಗೋಪಿ ಶೃಂಗಾರವಾಗಿ ತರಲು।ಚೆಲ್ವ।ಆ ಕಾಂತೆಯರೆಲ್ಲ ಹರುಷದಿಂ ಬಂದು। ಜಾತಿಮುತ್ತುಗಳನ್ನೇ ತಂದು ಶ್ರೀಕಾಂತನಿಗೆ ಭಿಕ್ಷೆಯ ಇಟ್ಟರು।।6।।

ಭಿಕ್ಷವ ನೀಡಿದಳು ದೇವಕಿ **ರಾಗ: ಮಧ್ಯಮಾವತಿ**

ಭಿಕ್ಷವ ನೀಡಿದಳು ದೇವಕಿ ತನ್ನ ಪುತ್ರನಿಗ್ಗರಸುತಲೀ। ಮುತ್ತು ಮಾಣಿಕ್ಯ ನವರತ್ನ ಖಚಿತವಾದ ಅತ್ಯಂತ ನಯವಾದ ಪಚ್ಚೆ ವೈಡೂರ್ಯವಾ।।ಪ।। ಬೆಳ್ಳಿಯ ಬಟ್ಟಲನೂ ಗರ್ಗ್ಯಾಚಾರ್ಯರು ಬಾಲನ ಕೈಗೆ ಕೊಟ್ಟು। ಇಂದು ನಿನ್ನ ಮಾತೆ ಚರಣಕ್ಕೆ ವಂದಿಸಿ ಇನ್ನು ನೀ ಎರಗೀ ಭಿಕ್ಷಾಂದೇಹಿ ಎನ್ನುತಾ।।1।। ಚಿನ್ನದ ಬಟ್ಟಲನೂ ಗರ್ಗ್ಯಾಚಾರ್ಯರು ಚಿಣ್ಣನ ಕೈಗೆ ಕೊಟ್ಟು ಇಂದು ನಿನ್ನ ಮಾತೆ ದೇವಕಿ ಚರಣಕ್ಕೆ ಇನ್ನು ನೀ ಎರಗೀ ಭಿಕ್ಷಾಂದೇಹಿ ಎನ್ನುತಾ।।2।। ಹತ್ತಾವತಾರವನೂ ಎತ್ತಿದ ಶ್ರೀಹರೀ ಬೆಟ್ಟವನೆತ್ತಿದನೇ। ಸತ್ಯಭಾಮೆಗಂಜಿ ದೇವಲೋಕಕ್ಕೆ ಹೋಗಿ ವೃಕ್ಷವ ತಂದಿತ್ತ ಹಯವದನ ಮೂರುತಿಗೇ।।3।।

ಆಪೋಷನವ ಹಾಕೆ ಗೋಪಾಲ **ರಾಗ: ಮಧ್ಯಮಾವತಿ**

ಆಪೋಷನವ ಹಾಕೆ। ಗೋಪಾಲ ಬಾಲನಿಗೆ। ಭೂಪ ಭೋಜನ ಮಾಳ್ಪ। ನೀ ಪಯವನೆರೆಯೇ।।ಪ।। ನೀರೊಳಗೆ ಈಸಾಡಿ ಭಾರಗಿರಿ ಕಿತ್ತಾಡಿ। ಕೋರೆ ಮಸೆಯುವ ನಮ್ಮ ನಾರಸಿಂಹಗೆ।।1।। ಬಾಲ ಬ್ರಾಹ್ಮಣನಾಗಿ। ಶ್ರೀಲಕ್ಷಾತ್ರ ನೀಗಿ। ಮೂಲರಾಮರ ತಮ್ಮ। ಬಾಲಕೃಷ್ಣಗೆ।।2।। ಬುದ್ಧಿಯಲಿ ಬುದ್ಧನಿವ। ಕೃದ್ಧ ಕುದುರೆಯನೇರ್ವ। ಮುದ್ದು ಪ್ರತಿಭಾಂಕುರನು। ಇದ್ದಲ್ಲೆ ಬಂದು।।3।।

ಬಂದದ್ದೊಂದು ಛಂದ ಸಾಲದೇ

ಬಂದದ್ದೊಂದು ಛಂದ ಸಾಲದೇ। ಗೋವಿಂದನು।।ಪ।। ವಿಕಟಾಂಗಿ ಪೂತನಿಯ ಕೊಂದು। ಶಕಟಾಸುರನ ಪಾದದಿ ತುಳಿದು।।ಅ.ಪ।। ಧಿಕ್ಕಿಟ ಧಿಕ್ಕಿಟ ಧಿಕ್ಕಿಟ ಎನ್ನುತ। ಅಕ್ಕರೆಯಿಂದಲಿ ಕುಣಿಯುತ ಮನೆಗೆ।।1।। ಗೋವರ್ಧನ ಪರ್ವತವೆತ್ತಿ। ಗೋವಿಗಳನ್ನೇ ಕಾಯ್ದು ತನ್ನ। ಮಾವ ಕಂಸನನ್ನು ಕೊಂದು ಆವಗೂಡಿ ಆಡುತ ಮನೆಗೆ।।2।। ಸರ್ವತ್ರದಿ ವ್ಯಾಪ್ತನಾದ। ಸರ್ವದೋಷರಹಿತನಾದ। ಸರ್ವವಂದ್ಯ ಪುರಂದರ ವಿಠಲನು। ಸರ್ವಕಾಲದಿ ರಕ್ಷಿಸುವವನು।।3।।

ಆರತಿ ಎತ್ತಿರೆ ನಾರಿಯರು (ಆರತಿ) **ರಾಗ: ಬೇಹಾಗ್**

ಆರತಿ ಎತ್ತಿರೆ ನಾರಿಯರು ನಾರಿಯರು ಸುಕುಮಾರಿಯರು। ಸುಕುಮಾರಿಯರು ಸುಂದರನೀಗೆ।।ಪ।। ಉಟ್ಟ ಸೀರೆಯನು ಕದ್ದವಗೆ ಬಚ್ಚಿಟ್ಟು ಬೆಣ್ಣೆಯನು ಮೆದ್ದವಗೆ। ದೃಷ್ಟ ಶಕಟನ ಒದ್ದವಗೆ ಕಿರಿಬೆಟ್ಟಲಿ ಬೆಟ್ಟವ ಎತ್ತಿದವಗೆ।। ಮಾರ ಸುಂದರಾಂಗ ಸುಕುಮಾರ ಶರೀರಗೆ।।1।। ಇಂದಿರೋಧರ ಸುಂದರನಿಗೆ ಚಂದ್ರರಾಕೇಂದ್ರನಿಗೆ।।2।। ಬಾಲ ಲೀಲೆಯನು ತೋರಿದವಗೆ ನೀಲಮೇಘಶ್ಯಾಮ ರೂಪನಿಗೆ। ನೀಲ ಮುದ್ದು ಗೋಪ ಬಾಲನಿಗೆ ಲೋಲ ನರಸಿಂಹ ವಿಠಲಗೆ।।3।।

ಆರುತಿ ಎತ್ತಿರೆ ನಾರಿಯರೆ ಯದುಬಾಲನಿಗೆ **ರಾಗ: ಅಭೇರಿ**

ಆರುತಿ ಎತ್ತಿರೆ ನಾರಿಯರೆ ಯದುಬಾಲನಿಗೆ ಲೋಕಪಾಲನಿಗೆ।।ಪ।। ಥಳಥಳಶಿರಮಣಿ ವಿಲಸಿತ ಭೂಷಣ। ಕುಲುಕುತ ಯಮುನ ತಟಾವನದಿ। ಕೊಳಲನು ಬಾರಿಸಿ ಲಾಲಿತ ನಾಟ್ಯದಿ। ಬೆಳಗುವ ವರ ಗೋಪಾಲನಿಗೆ।।1।। ಬಾಲೆಯರೆಡೆಯೊಳು ಕೇಳಿಯನಾಡುತ ಲೀಲೆಯ ತೋರಿ ವಿನೋದದಲಿ। ಲಾಲಿತನಾಗಿಹ ಬಾಲ ಮುಕುಂದಗೆ ಬಾಲೆಯರೇ ಶಶಿಪಾಲೆಯರೆ।।2।। ನಂದಕುಮಾರಗೆ ನವಮಣಿ ಹಾರಗೆ। ಸುಂದರತನು ಜಿತಮಾರನಿಗೆ। ಮಂದರಧರ ಗೋವಿಂದ ಪರಾತ್ಪರ। ಇಂದಿರೆರಮಣನಿಗೀಗಲೇ ನಾವ್।।3।।

ಬಣ್ಣಿಸಿ ಗೋಪಿ ಹರಸಿದಳು (ಆಶೀರ್ವಾದ) **ರಾಗ: ಭೈರವಿ-ಆದಿತಾಳ**

ಬಣ್ಣಿಸಿ ಗೋಪಿ ಹರಸಿದಳು।।ಪ।। ಎಣ್ಣೆಯನೊತ್ತುತ ಯದುಕುಲ ತಿಲಕಗೆ।।ಅ.ಪ।। ಆಯುಷ್ಯ ವಂತನಾಗು ಅತಿ

ಬಲ್ಲಿದನಾಗು। ಮಾಯದ ಖಳರ ಮರ್ದನನಾಗು। ರಾಯರ ಪಾಲಿಸು ರಕ್ಕಸರ ಸೋಲಿಸು। ವಾಯುಸುತಗೆ ನೀನೊಡೆಯನಾಗೆನುತ॥1॥ ಧೀರನು ನೀನಾಗು ದಯಾಂಬುಧಿಯಾಗು। ಆ ರುಕ್ಮಿಣಿಗೆ ನೀನರಸನಾಗು। ಮಾರನ ಪಿತನಾಗು ಮಧುಸೂದನನಾಗು। ದ್ವಾರಾವತಿಗೆ ನೀ ದೊರೆಯಾಗೆನುತ॥2॥ ಆನಂದ ನೀನಾಗು ಅಚ್ಯುತ ನೀನಾಗು। ದಾನವಾಂತಕನಾಗು ದಯವಾಗು। ಶ್ರೀನಿವಾಸನಾಗು ಶ್ರೀನಿಧಿ ನೀನಾಗು। ಜ್ಞಾನಿ ಪುರಂದರವಿಠಲ ನಾಗೆನುತ॥3॥

ಗೋಪಗೋಪೀ ಸುತಗೆ (ಮಂಗಳ) ರಾಗ: ಸುರುಟಿ

ಗೋಪಗೋಪೀ ಸುತಗೆ, ಗೋವಳರಾಯಗೆ, ಗೋವರ್ಧನೋದ್ಧಾರ ಗೋವಿಂದಗೆ। ಗೋಕುಲದಲ್ಲಿ ಹುಟ್ಟಿ ಗೋವುಗಳನೆ ಕಾಯ್ದ। ಗೋಪಾಲಕೃಷ್ಣನ ಶ್ರೀ ಪಾದಕ್ಕೆ॥1॥ ಭಕ್ತಜನ ಪಾಲಿಪಗೆ, ಭವರೋಗವೈದ್ಯಗೆ। ಅಚ್ಯುತಾನಂದ ಆದಿಪುರುಷನಿಗೆ। ಅಖಿಳಲೋಕೇಶನಿಗೆ ಅಜನ ಪಡೆದಾತಗೆ। ಕ್ಷೀರಸಾಗರವಾಸಿ ಲಕ್ಷ್ಮೀಶಗೆ॥2॥ ಪನ್ನಗ ಶಯನಗೆ ಪಾವನ ಚರಿತ್ರಗೆ। ಸನ್ನುತಾನಂತ ಸದ್ಗುಣ ರಾಶಿಗೆ। ಎನ್ನೊಡೆಯ ಪುರಂದರ ವಿಠಲರಾಯಗೆ। ತನ್ನ ನಂಬಿದವರ ಸಲಹುವ ದೇವನಿಗೆ॥ ಮಂಗಳಂ ಜಯ ಮಂಗಳಂ ॥

ಕರುವ ಕಟ್ಟೆಂದರೆ ಕರಡೀನೆ ಕಟ್ಟಿದ (ಮಂಗಳ) ರಾಗ: ಭೈರವಿ

ಕರುವ ಕಟ್ಟೆಂದರೆ ಕರಡೀನೆ ಕಟ್ಟಿದ। ವೇಣು ತಾ ಎಂದರೆ ಹಾವತಂದ। ಕೋಲತಾ ಕೃಷ್ಣಯ್ಯ ಕೋಲತಾ ಎಂದರೆ। ಆಲದಮರ ಪೋಗಿ ಕಿತ್ತು ತಂದಿತ್ತವಗೆ॥ ಜಯಮಂಗಳ ನಿತ್ಯ ಶುಭಮಂಗಳಂ॥1॥ ಆಯಿತು ಬೆಣ್ಣೇಯ ಕಡೆದೇನು ಕೃಷ್ಣಯ್ಯ ನೀರತಾ ಎಂದರೆ ನಗುತ ಗೋಪಿ। ತೋಳಮೇಗಣ ಕೊಡುವ ಇಳುಹಲಾರದ ಶಿಶುವು। ಭಾಗೀರಥೀತಂದ ಪುರಂದರ ವಿಠಲಗೆ। ಜಯಮಂಗಳಂ ನಿತ್ಯ ಶುಭಮಂಗಳಂ॥2॥

❖ ❖ ❖

ಶ್ರೀ ಕೃಷ್ಣನ ಶುಭ ಕಲ್ಯಾಣ

ಘನಶ್ಯಾಮ ಸುಂದರ ಶ್ರೀಧರ ರಾಗ: ಮೋಹನ(ಮ.ಶ್ರು.)

ಘನಶ್ಯಾಮ ಸುಂದರ ಶ್ರೀಧರ ಬೆಳಗಾಯಿತು ಏಳಯ್ಯ ಕೇಳೈ ಪಕ್ಷಿಗಳ ಧ್ವನಿಯಾ ನೋಡಯ್ಯಾ ಅರುಣೋದಯ॥ಪ॥ ಯಶೋದೆ ಕಂದ ಪರಮಾನಂದ ಸರಿದವು ತಾರೆಗಳು। ತಂಗಾಳಿಗೆ ಅರಳಿದ ಸುಮಗಳು ವ್ಯಾಪಿಸಿದೆ ಪರಿಮಳ। ಧೇನುಗಳೆಲ್ಲವು ಸ್ಥನಪಾನಕೆ ಕರೆವವು ವತ್ಸಗಳ॥1॥ ಕ್ಷೀರವ ಕರೆಯುವ ಗೋಪಿಯ ಕೈಯ್ಯ ಕಡಗಗಳಾ ಧ್ವನಿಯ। ಕೇಳೆಲೊ ಗೋಪಿ ಕರೆವಳು ನಿನ್ನ। ಕುಡಿಯಲು ಹಸುವಿನ ಕ್ಷೀರವನು॥2॥ ಮೂಡಣದಾ ದಿಸೆಯಲ್ಲಿ ಉದಯಿಸಿದನು ಮಿತ್ರ ಏಳು ಕಮಲನೇತ್ರಾ। ದೇಗುಲದ ಜಾಗಟೆ ಸ್ವರ ಕೇಳೀ ಎಚ್ಚರಿಸಿತು ತ್ರಿಭುವನ। ಗೊಲ್ಲರ ಮೇಳವು ಕಾದಿಹುದಯ್ಯ ಆಡಲು ಯಮುನೆಯ ತೀರದಲಿ॥3॥

ಘನಶಾಮ ಸುಂದರಾ ಶ್ರೀಧರಾ ಅರುಣೋದಯ

ಘನಶಾಮ ಸುಂದರಾ ಶ್ರೀಧರಾ। ಅರುಣೋದಯ ಝೂಲಾ। ಉಠಿಲವಕರಿ ವನಮಾಲೀ ವನಮಾಲಿ॥ ಉದಯಾಚಲೀ ಮಿತ್ರಆಯಾ। ಆನಂದಕಂಜ ಪ್ರಭಾತ ಝೂಲೀ। ಉಠಿಸರಲಿ ರಾತೀ। ಕಾಲಿಧಾರಕ್ಷಿರ ಪಾತ್ರ ಘೇವುನಿ। ಧೇನು ಹಂಬರತಿ। ಲಕ್ಷಿತಾತಿವಾಸುರೆ ಹರಿ। ಧೇನುಸ್ತುನ ಪಾನಾಲಾ॥ ಉಠಿಲವಕರಿ॥1॥ ಸಾಯಂಕಾಲೀ ವಕೇಮೇಲಿ। ದ್ವಿಜಗಣ ಅವಧೇ ವೃಕ್ಷಿ। ಅರುಣೋದಯ ಹೋತಾಜ್ ಉಡಾಲೇಚರಾವಯಾ ಪಕ್ಷಿ। ಪ್ರಭಾತಕಾಳಿ ಉಠುನಿಕಾವಡಿ ತೀರ್ಥಪಥ ಲಕ್ಷಿ। ಕರೂನಿ ಸಡಾ ಸಮ್ಮಾರ್ಜನ ಗೋಠೀ ಕುಂಭ ಘೇವುನಿಕುಕ್ಷಿ। ಯಮುನಾ ಜಳಾನೆ ಜಾತಿ ಮುಕುಂದ

ದಧ್ಯೋಧನ ಭಕ್ತಿ।। ಉಠಿಲವಕರಿ।।2।।

ದಿವ್ಯಗುಣಮಣಿ ಹಸೆಗೀಗ ಬಾರೆ

ದಿವ್ಯಗುಣಮಣಿ ಹಸೆಗೀಗ ಬಾರೆ ದೇವಿ ಶಶಿ ಮುಖೀ।।ಪ।। ಸುಂದರ ಶ್ರೀರಘುರಾಮರ ಮಡದೀ ಪ್ರೇಮ ಸುಧಾಮನ ಮಡದಿ ಸುಂದರಿಮಣಿಯೇ ವಂದಿಸಿ ಕರೆವೆವು ಚಂದದಿ ನೀ ಬೇಗ ಬಾರೆ।।1।। ಬಾಲೆ ಸುಶೀಲೆ ಲೋಲೆ ವನಮಾಲೇ ಬಾಲ ಶ್ರೀಕೃಷ್ಣನ ಸಹಿತಾ, ನಾರಿಯರೆಲ್ಲಾ ನೆರೆದಿಹ ಸಭೆಯೊಳು ನಲಿಯುತ ನೀ ಬೇಗ ಬಾರೆ।।2।। ಚಂದಿರ ಬಿಂಬವ ಪೋಲುವ ಮುಖದೊಳು ನಲಿಯುತ ನೀ ಬೇಗ ಬಾರೆ ಸುಂದರವಾದ ಪಾದಪದ್ಮವ ತೋರುತ ಚಂದದಿ ನೀ ಬೇಗ ಬಾರೆ।।3।।

ಬಾರೋ ಶ್ರೀಹರಿ ಹಸೆಗೆ (ಹಸೆಗೆ ಗಂಡು) ರಾಗ: ಅಭೇರಿ

ಬಾರೋ ಶ್ರೀಹರಿ ಹಸೆಗೆ ನಸು ನಗುತ।।ಪ।। ಶೃಂಗಾರ ಮೂರ್ತಿಯೆ ಬಾರೋ।। ಸರಸಲೀಲಾ ಭರಣ ನತ ಶರಣ। ಸುರವೈರಿಮಾರನಾ ಸುರಕುಲಾಂಬುಧಿ ಸೂರ್ಯಶಶಿನಯನ। ಶರಧಿ ಜಾತೆಯ ಕರವ ಪಿಡಿಯುತೆ ಹರುಷದಿಂದಲಿ ಪರಮ ಪುರುಷನೆ।।ಚರಣ।।

ಬಾರೆಲೆ ರುಕ್ಮಿಣಿದೇವಿ (ಹಸೆಗೆ-ಹೆಣ್ಣು) ರಾಗ: ರೇವತಿ

ಬಾರೆಲೆ ರುಕ್ಮಿಣಿ ದೇವಿ। ವಾರಿಜನಾಭನ ಸೇರಿದವಳೆ ನೀನು। ಶೀಘ್ರದಲಿ।।ಪ।। ಗುಂಗುರು ಕೂದಲು ಮುಂಗುರುಳನೆ ತಿದ್ದಿ। ರಂಗಮಂಟಪಕೆ ನೀ ಬೇಗದಿ ಬಾರಮ್ಮ।।1।। ರುಕುಮನ ವಂಚಿಸಿ ಲಿಖಿತವನೇ ಬರೆದ। ಮತಿವಂತೆ ಬಾರಮ್ಮ ಹಸೆಜಗುಲಿಗೆ।।2।।

ಸುಂದರಿಕಾಯೆ ನೀ ಇಂದುನಿಭಾಷಿಣಿ (ಹೆಣ್ಣಿಗೆ-ಎಣ್ಣೆಶಾಸ್ತ್ರ) ರಾಗ: ಮುಖಾರಿ-ಆದಿತಾಳ

ಸುಂದರಿಕಾಯೆ ನೀ ಇಂದುನಿಭಾಷಿಣಿ ಸುಂದರಿಯರು ಸೇರಿ। ಚಂದದ ಪೀಠದಿ ಕುಳ್ಳಿರಿಸುತಲಿ ಆನಂದದಿ ಮುದವೇರೀ।।ಪ।। ಮಲ್ಲಿಗೆ ಸಂಪಿಗೆ ಎಣ್ಣೆಯ ಪಿಡಿದು ಪಲ್ಲವ ಪಾಣಿಯರು। ನಿಲ್ಲದೆ ರಾಗವ ಪಾಡುತಲಿ(ಎಣ್ಣೆಯ) ಮೆಲ್ಲನೆ ಒತ್ತಿದರು।।1।। ಕಂಬುಕಂಠಿಯ ಬಿಂಬೋದರಿಯರು ಅಂಬುಜ ವದನೆಯರು। ಶೋಭನರಾಣಿಗೆ ರಾಗವ ಪಾಡುತ ಎಣ್ಣೆಯನೊತ್ತಿದರು।।2।। ಬಿತ್ತರವೆನಿಸುತ ಸುತ್ತಿಪೊಗಳುತ ಆ ಭಾಮಿನಿಯರು। ಎಲ್ಲರು ಬಂದು ಎಣ್ಣೆಯನೊತ್ತಿದರು ಮೆಲ್ಲನೆ ಒತ್ತಿದರು।।3।।

ಪತ್ರವ ಕಳುಹಿದಳಾ ರುಕ್ಮಿಣಿದೇವಿ

ಪತ್ರವ ಕಳುಹಿದಳಾ ರುಕ್ಮಿಣಿದೇವಿ। ಪತ್ರವ ಕಳುಹಿದಳು।।ಪ।। ಪತ್ರವ ನೋಡಿ ಗೌರಿ ಯಾತ್ರಕಾಲದಿ ಕೃಷ್ಣ। ಗಾತ್ರ ಪವಿತ್ರ ಮಂಗಳ ಸೂತ್ರ ಕಟ್ಟೆಂದು।।ಅ.ಪ।। ನಮ್ಮಣ್ಣ ನಮ್ಮ ತಂದೆಯ ಮಾತುಕೇಳದೆ। ನಿಮ್ಮ ದೂಷಿಸಿ ನೀಚಗೆ। ನಮ್ಮನು ಇತ್ತು ಮೂರೇಳು ಕುಲಗಳನು। ಘಮ್ಮನೆ ನರಕದೊಳ್ ಮುಣುಗಿಸುತ್ತಾನೆಂದು।।1।। ಸುಣ್ಣ ಜಾಜಿಗಳಿಂದ ಗ್ರಾಮಗ್ರಾಮಗಳ ಪೂಸಿ। ರನ್ನದ ತೋರಣಗಳ ಕಟ್ಟಿ। ಪುಣ್ಯಾವರ್ಚನೆ ಮಾಡಿಸಿ ವಿಪ್ರರಿಂದ। ಪೂರ್ಣಫಲ ಮಂಟಪ ಸ್ವಾಪಾಯಿತೆಂದು।।2।। ನೀ ಬಾರದಿದ್ದರೆ ಹಬ್ಬ ಸೂರಾಯಿತು। ತಬ್ಬಿಬ್ಬು ಆಗೋದು ಕುಲಕೆಲ್ಲ। ಅಬ್ಬರದಿಂದ ಗರುಡಗಮನ ಬಂದು। ತಬ್ಬಿಕೊಂಡೊಯ್ಯ ಶ್ರೀಕೃಷ್ಣ ಬೇಗ।।3।।

ಪೂರ್ಣಚಂದಿರ ಪೋಟ್ರ ಉನ್‌ಪದಂ(ತಮಿಳು-ಕುಮ್ಮಿ ಅಡಿಕ್ಕುರುದು)

ಪೂರ್ಣಚಂದಿರ ಪೋಟ್ರ ಉನ್‌ಪದಂ। ಕವಲೆಯಾಲ್ ನಾ ಕಡಿದಂ ಎಳಿದಿನೇನ್।। ಕುವಲಯಂ ಪುಗಳ್

ಗೋಕುಲಪತಿ ಪೂರ್ಣಚಂದಿರ ಕೋಡಿದಂಡವಿಟ್ಟು ಕೋರಿನೇನುಮ್ಮೈ।।ಪ।। ದಿಕ್ಕು ವೇರಿಲ್ಲೆ ದೀನರಕ್ಷಕಾ ಈ ಕ್ಷಣಂ ತನ್ನಿಲ್ ವಂದು ಕಾರುಮೆ। ಅಕ್ಕರೆಯುಡುಡನ್ ರುಕ್ಮಣನ್ ಎನ್ನದಣ್ಣನ್ ಪಾವಿಯುಂ ಅರ್ಪನ್ ಸೇತುಪತಿಯೈ ಅಳೈತ್ತಿರುಕ್ಕಿರಾನ್।।1।। ಐಂದು ವಯದಿನಿಲ್ ಆಸೈ ಕೊಂಡವಳ್ ಉನ್‌ದನ್ ವಡಿವೆಯೇ ಉಳ್ಳುಂ ಕೊಂಡವಳ್ ನಂದಬಾಲ ಉಂದನ್‌ವರೈವೆ ನಾಡಿನಿರ್ಕಿರೇನ್।। ಉಂದನ್ ವಡಿವೈನೋಕ್ಕಿ। ಉಯಿರ್ ತವಿಕ್ಕಿರೇನ್।। ಭಕ್ತ ವತ್ಸಲ ಪಂಕಜ ನಯನ। ಉತ್ತಮಾ ಎನ್‌ದನ್ ಉರುದಿ ಅರುಗುವೀರ್। ಬಾಲಕನ್ ಶಿಶುಪಾಲನುಂ ಎನ್ನೈ ಪಾತ್ತಿಡವರುವಾ। ಪಾಣಿಗ್ರಹಣಂಸ್ಸೈಯ್ಯ ವಂದರುಳ್ ಕುರುವೀರ್।।2।। ನಂಬಿನೇನ್ ಉಮ್ಮೈ ನಳಿನಪಾದನೆ। ಅಂಬುಜ ವದನಾ ಉನ್‌ದನ್ ಪದಮಲ ಚರಣಂ। ಅಂಬಿಕೈತನೆ ಪೂಜೈಸೆಯ್ಯ ಆಲಯಂ ವರುವೇನ್। ಅಂದವೇಳೈನಲ್ಲ ಸಮಯಂವರುಗಂವೀರ್।ತಾಮದಂ ವೇಂಡಾಂ ತರುಣಂ ತಪ್ಪುಮುನ್। ಶ್ಯಾಮಸುಂದರಾ ಚಟ್ಟನ್ ವರುವೀರ್।।3।। ಕೋಮಲಾಂಗ ಉಂದನ್ ವರುವೈ ಕೂರುಂ ಪೆಣ್ಮಣಿ। ಭೀಮರಾಜನ್ ಪೆಣ್ಣುಂ ಪಿರಿಯರುಕ್ಮಿಣಿ।।4।।

ಮಂಗಳಾರತಿ ಬೆಳಗಿದಳು — ರಾಗ: ಕಾಂಬೋಧಿ

ಮಂಗಳಾರತಿ ಬೆಳಗಿದಳು ಗಂಗಾಧರನರ್ಧಾಂಗಿಗೇ।।ಪ।। ಕುಂಡಲಿಯ ನಗರದಲಿ ರುಕ್ಮಿಣಿ। ಆನಂದಿಂದಿರುತಿದ್ದಳು। ಮಂಗಳಾಂಗನ ಪಾದ ನೆನೆದು ರಂಗಗೋಲೆ ಬರೆದಳು।।1।। ಕೃಷ್ಣಗೋಲೆ ಬರೆದು ರುಕ್ಮಿಣಿ ಹತ್ತಿದಾಳಂದಣವನೂ। ಅಣ್ಣ ರುಕ್ಮನ ಪಾರೆ ಸಹಿತ ಅಂಬಿಕಾಗುಡಿಗೆ ಬಂದಳು।।2।। ಅರಿಸಿನ ಕುಂಕುಮ ಪುಷ್ಪದಿ ಪರಿಮಳ ದ್ರವ್ಯಗಳಿಂದ। ಹರನರಾಣಿಗೆ ಪೂಜೆಮಾಡಿ ಹವಳದಾರತಿಬೆಳಗಲು।।3।। ಮಹಾರುದ್ರೆಯನು ರಾಣಿ ಪೂಜಿಸಿ ಮಹಾ ದ್ವಾರದಲ್ಲೇ ನಿಂತಳು। ಗರುಡವಾಹನ ಸಲಹು ಎನ್ನುತಲೆರಡು।ಕರಗಳ ಮುಗಿದಳು।।4।। ರುಕ್ಮಿಣೀ ಭಕ್ತಿಯನೆ ನೋಡಿ ಕೃಷ್ಣ ರಥದಿಂದಿಳಿದನು। ರುಕ್ಮನಾಭನ ಭಂಗಮಾಡಿ ಸತ್ಯ ಸಂಕಲ್ಪ ರುಕ್ಮಿಣಿಯ ತಂದನು।।5।।

ಪಾಲಿಸು ವರವನು ಬಾಲೆ ಶ್ರೀ ಗೌರಿ — ರಾಗ; ಅಭೇರಿ

ಪಾಲಿಸು ವರವನು ಬಾಲೆ ಶ್ರೀ ಗೌರಿ ನೀಲಕಂಠನ ರಾಣಿ। ಪಾರ್ವತಿದೇವಿಯೆ ಪಾದಕೆ ಎರಗುವೆ ಲಾಲಿಸು ಎನ್ನ ಮಾತೆ।।ಪ।। ಗಿರಿರಾಜನುದರದಿ ಮಗಳಾಗಿ ಜನಿಸಿ ವನದಲಿ ತಪವಾಚರಿಸಿ ಹರನಾ ಒಲಿದೆ ಹರಿಣಲೋಚನೆ ಪಾಲಿಸು ಎನ್ನ ಮಾತಾ।।1।। ಅಂಬಿಕೆ ಗುಡಿಯಲಿ ರಂಭೆ ಶ್ರೀ ರುಕ್ಮಿಣಿ ತಾ ಬಂದು ಪೂಜಿಸುವಾಗ ಅಂಗನೆಗೊಲಿಯಲು ಅಡವಿಲಿ ತಪಸಿದ್ದಂತೆ ಲಾಲಿಸು ಎನ್ನ ಮಾತಾ।।2।। ಇಷ್ಟಕ ಭಜಕರು ಕಟ್ಟಿದ ಕರಿಮಣಿ ಸೃಷ್ಟಿಗೀಶ್ವರನರಸಿಗೆ ಅಷ್ಟೈಶ್ವರ್ಯವ ಪುತ್ರ ಸಂತಾನವ ಸೆರಗೊಡ್ಡಿ ನಾ ಬೇಡುವೆನು ತಾಯೆ।।3।।

ಬಾರೆ ಸಖಿ ಹೋಗೋಣ

ಬಾರೆ ಸಖಿ ಹೋಗೋಣ ಅರಮನೆಯ ಬೀದಿಗೆ ರುಕ್ಮಿಣಿಯ ಮದುವೆಯಂತೆ ರುಕ್ಮಾಂಗದನು ಮಾಡ್ವನಂತೆ। ಭೀಷ್ಮಕನಪ್ಪಣೆ ಇಲ್ಲವಂತೆ ದುಷ್ಟನಿಗೆ ಕೊಡುವೊರಂತೆ।।1।। ಹರಿಯು ರಾಮರು ಬರುವರಂತೆ ಊರ ಹೊರಗೆ ಇರ್ಪರಂತೆ ಕೇರಿಯಲ್ಲಿ ಬರುವರಂತೆ। ಅರಮನೆಗೆ ಹೋಗುವರಂತೆ।।2।। ಹರಿಯ ದರುಶನವಂತೆ ಘೋರ ದುರಿತ ನಾಶವಂತೆ ತಿರುಪತಿಯ ವೆಂಕಟರಮಣ ಬರುವುದು ಬಲು ಚಂದವಂತೆ।।3।।

ಬಾರೇ ಸಖಿ ಪೋಗುವಾ — ರಾಗ: ಕಾಪಿ

ಬಾರೇ ಸಖಿ ಪೋಗುವಾ ಪರಿಣಯವನೆ ನೋಡುವಾ।।ಪ।। ರುಕ್ಮಿಣಿ ವಿವಾಹವಂತೆ। ರೂಪಹೀನವರನಿಗಂತೆ। ರುಕ್ಮನೆಲ್ಲರಾಜರಿಗೆ। ನಿರೂಪಕಳುಹಿಸಿರುವನಂತೆ।।1।. ಬಾಲೆಗಿಷ್ಟವಿಲ್ಲದ। ಶಿಶುಪಾಲಗವಳ। ಕೊಡುವರಂತೆ। ಲೋಲನೇತ್ರೆ ವೇಣುಗೋಪಾಲನ ಬಯಸಿರುವಳಂತೆ।।2।। ಪರಮಪುರುಷ ಕೃಷ್ಣನವಳ। ವರಿಸಲೆಂದು। ಬರುವನಂತೆ।

ತರಳೆಯಾರಿಗಾಗುವಳೊ। ಪರಿಣಯವೆಂತಾಗುವುದೊ॥3॥ ಪರಮಭಕ್ತಿಯಿಂದ ನುತಿಪ। ತರುಣೆರಕ್ಮಿಣಿಯನು। ವರಿಸಿ ಪೊರೆಯಲೆಂದು ನೃಹರಿಕೃಷ್ಣಗೆರಗಿನಾವು ಬೇಡುವುವು॥4॥

ಓಡೋಡಿ ಬನ್ನಿರೋ ಕೃಷ್ಣಶುಭ ಕಲ್ಯಾಣ **ರಾಗ: ಬೃಂದಾವನಸಾರಂಗ**

ಓಡೋಡಿ ಬನ್ನಿರೋ ಕೃಷ್ಣಶುಭ ಕಲ್ಯಾಣ। ಕೃಷ್ಣ ಶುಭಕಲ್ಯಾಣ। ನೋಡೋಣ ಬನ್ನಿರೋ॥ಪ॥ ಭೀಷ್ಮಕನ ಮಗಳಂತೆ ಹೆಸರು ರುಕ್ಮಿಣಿಯಂತೆ। ಜಗದೊಳಗಾಕೆಯ ಸಮರಿಲ್ಲವಂತೆ। ಚೇದಿಯ ರಾಜನಂತೆ ಮದುವ್ಯಾಗಲ್ ಒಲ್ಲಳಂತೆ। ಶ್ರೀಕೃಷ್ಣ ನಿನ್ನನ್ನೇ ಮನದೊಳಗೆ ನೆನೆದ್ಲಂತೆ॥1॥ ವಸುದೇವ ಸುತನಂತೆ ಶ್ರೀಕೃಷ್ಣ ಹೆಸರಂತೆ। ಗೋಕುಲದಿ ಬೆಳೆದನಂತೆ ಗೋವುಗಳ ಕಾಯ್ದನಂತೆ। ಗೋಪಾಲರ ಒಡಗೂಡಿ ಮಾವನ್ನ ಕೊಂದನಂತೆ। ವಸುಧೆಯೊಳ್ ಈತನ ಸಮರಿಲ್ಲವಂತೆ॥2॥ ಧರೆಯೊಳು ದುಷ್ಟರ ಶಿಕ್ಷೆಯ ಮಾಡುತ್ತ। ಶಿಷ್ಟರ ರಕ್ಷಣೆ ಮಾಡುವನಂತೆ। ಹಾಲುಬೆಣ್ಣೆಯ ಕದ್ದು ಗೋಪಿಯರ ಮನಗೆದ್ದು। ಗೋವರ್ಧನಗಿರಿ ಎತ್ತಿ ಕೊಡೆಯ ಮಾಡಿದನಂತೆ॥3॥ ರುಕ್ಮಿಣಿ ಶ್ರೀಲಕ್ಷ್ಮೀ, ಶ್ರೀಕೃಷ್ಣ ನಾರಾಯಣ। ಕೃಷ್ಣರುಕ್ಮಿಣಿಯರ ಕಲ್ಯಾಣಕ್ಕೆ ಹೋಗುವ ಬನ್ನಿ। ಗುರುವಾಯೂರಲ್ಲಿ ನೆಲೆಸಿ ಭಕ್ತರ ಭವ ಕಳೆದ। ನಂಬೂದರಿ ನಾರಾಯಣನ ಪೊಗಳುವ ಬನ್ನಿ॥4॥

ಮಾಲೆ ಹಾಕಿದಳು (ಸಂಬಂಧಮಾಲೆ) **ರಾಗ: ಮಧ್ಯಮಾವತಿ-ಮಿಶ್ರಛಾಪುತಾಳ**

ಮಾಲೆ ಹಾಕಿದಳು ಬಾಲೆ ಲಕ್ಷ್ಮೀ ಪದ್ಮಾವತಿ ಬಹಳ ಹರುಷದಿ ಹರಿಗೆ॥ಪ॥ ಮಲ್ಲಿಗೆಯ ಸುಮದ ಮಾಲೆಯ ಉಲ್ಲಾಸದಿಂದ ಪಿಡಿಯುತ ಅಚ್ಚ ಮಲ್ಲಿಗೆ ಹಾರವನ್ನು ಪತಿಯ ಕೊರಳಿಗೆ ಹಾಕಿದಳು॥1॥ ಸುಗಂಧರಾಜ ಸುಮದ ಮಾಲೆಯ ಸಂತೋಷದಿಂದ ಪಿಡಿಯುತಾ ಸುಗಂಧರಾಜದ ಹಾರವನ್ನು ಸುಂದರಾಂಗನ ಕೊರಳಿಗೆ॥2॥ ಭಕ್ತಿಯಿಂದ ಭೀಮೇಶ ಕೃಷ್ಣನ ಸ್ತೋತ್ರವನ್ನೇ ಮಾಡುತ ಬಕುಳಪುಷ್ಪದ ಹಾರವನ್ನು ಭೀಮೇಶ ಕೃಷ್ಣನ ಕೊರಳಿಗೆ॥3॥

ಇಂದಿರೆಯ ಕರವ ಪಿಡಿದಾನಂದದೊಳು (ಉಯ್ಯಾಲೆ) **ರಾಗ: ಆರಭಿ**

ಇಂದಿರೆಯ ಕರವ ಪಿಡಿದಾನಂದದೊಳು ಮಂದರೋದ್ಧರ ಹರುಷದಿ॥ಪ॥ ಇಂದೀವರಾಕ್ಷಿ ಯೊಡನೇ ಅಂದದೊಳು। ಬಂದು ಆಡಿದನುಯ್ಯಾಲಾ॥ಅ.ಪ॥ ಸುರರು ಜಯವೆನಲು ನಭದೀ ನೆರೆದ। ಭೂಸುರರು ವೇದವಪಾಡಲು। ಉರಗವೇಣಿಯರು ಗಾನಗೈಯುತ್ತಿರೆ। ವರದನಾಡಿದ ನುಯ್ಯಾಲಾ॥1॥ ವೇಣುವಪಿಡಿದ ಹರಿಯಾಮೇಳದೊಳು। ವಾಣಿ ವೀಣೆಯ ಪಿಡಿಯಲು। ಬಾಣ ತುಂಬುರು ನಾರದರು ಪಾಡೆ। ಸುತ್ರಾಣನಾಡಿದ ನಯ್ಯಾಲಾ॥2॥ ಅಂಗನೆಯರತಿ ಹರುಷದಿ ಜಯಜಯ ಶುಭಾಂಗನೆನ್ನುತೆ ಪಾಡಲು। ರಂಗನಾಯಕಿಯ ಸಹಿತ ಮಾಂಗಿರಿರಂಗ ನಾಡಿದನುಯ್ಯಾಲಾ॥3॥

ಸಾಮಮುದಲ್ ವೇದಂಗಳೈ (ಊಂಜಲ್-ತಮಿಳು) **ರಾಗ: ಕುರಂಜಿ**

ಸಾಮಮುದಲ್ ವೇದಂಗಳೈ ಶಂಗುಲಿಯಾಯ್ ಕಟ್ಟೀ ತಕ್ಕತ್ತೆನ್ ಪೊನ್ ಮಲರೈ ಸರಂ ಸರಮಾಯ್ ಕಟ್ಟೀ। ಓಂ ಎನ್ನುಂ ಪ್ರಣವತ್ತೈ ಊಂಜಲಾಗವೈತ್ತು ಉತ್ತಮನುಕ್ಕು ಉತ್ತಮರ್ ಆಡಿರೂಂಜಲ್॥ಲಾಲಿ॥ ಶಾಯಕೊಂಡೈ ಮೀದು ತೋಹೈ ತಳತಳಂ ಎನ್ರೊಳಿಕ್ಕ। ಮುತ್ತುಮಣಿ ಮಾಲೈಗಳಿನ್ ಸರಂಗಳೊಳಿ ಜ್ವಲಿಕ್ಕ। ನಾಯನಮಾರ್ ಭಕ್ತರ್‌ಗಳ್ ನಿನೈಪ್ಪದೆಲ್ಲಾ ಫಲಿಕ್ಕ। ನೀಲಮಲರ್ ಕಣ್ಣನ್ ಇಂಗೆ ಆಡಿರೂಂಜಲ್॥ಲಾಲಿ॥ ತನ್ನಾರ್‌ತನ್ ವಳ್ಳೈನಿಳಲಿಲ್ ತಳಿರ್‌ಮುಗತ್ತೈ ಕಾಣ। ತಂದಿರಂಗಳ್ ರಾಧೈಶೈಯ್ಯ ಆಡಿರೂಂಜಲ್। ಕಳ್ಳತನಮಾಯ್ ಪೆಣ್‌ಗಳ್ ಕಣ್ಣನ್ನೈ ಕಂಡಿಳಿಕ್ಕ। ಕರುಣಾಲವಾಲ ನೀವಂದು ಆಡಿರೂಂಜಲ್॥ಲಾಲಿ॥ ಅಣ್ಣಾಂದು ಕಣ್ಣನ್ ಮುಗ ಅಳಗಿನ್ನೈಯುಂ ಕಾಣಾ। ಆನಾಲುಂ ಆಸೆಯೆಲ್ಲಾಂ ಅಂತರಂಗಂ ನಾಣಾ। ಪಿಳ್ಳೆಯಿಂದ ಪಿಳ್ಳೆಯನ್ನೈ ಪೆಟ್ರೋಮೆನ್ರು ಕಳಿಕ್ಕ। ಅಂದ ಪೆರುಮೆಯಾಲ್ ಯಶೋದೈ ಇನ್ನುಂ ಒರು ಶುಟ್ರು ಪೆರುಕ್ಕಾ॥ಲಾಲಿ॥ ಒರು ಪಿಡಿಯಿಲ್ ಅವಳುಕ್ಕೆನ್ರು ಉಳ್ಳತ್ತಯೈ ಕೊಡುತ್ತಾನ್।

ಓಯಾಮಲ್ ತೋಟ್ರ ಶಿಶುಪಾಲನುಯುರ್ ಎಡುತ್ತಾನ್। ಅವರ್ ಮಹಿಮೆಯಿಲ್ ನಿನ್ರು ಅಭಿನಯಂಗಳ್ ಶೈದಾನ್। ಅರಂಗಮಾನಗರಿಲ್ ವಂದು ಕಾಲ್ಶೈನೀಟ್ಟಿ ಪಡುತ್ತಾನ್॥ಲಾಲಿ॥ ಕನ್ರುಗಳುಂ ಕರವೈಗಳುಂ ಕಾತ್ತರುಳ್ ಶೀಲನ್। ಕಾಳಿಂಗ ನಟನಮಾಡುಂ ಕರುಣಾಲ ಬಾಲನ್। ನಿನ್ರು ತುದಿಪ್ಪಾಡುವವರ್ ನೆಂಜತ್ತುರೈ ನೀಲನ್। ನೀಲಮಯಿಲ್ ತೋಹೈಮುಡಿ ರಾಜಗೋಪಾಲನ್॥ಲಾಲಿ॥

❖ ❖ ❖

ಉರುಟಣೆ

ಬಾರೈಯ್ಯ ಶ್ರೀಹರಿ ಹಸೆಗೆ (ಹಸೆಗೆ-ಗಂಡು-ಹೆಣ್ಣು) ರಾಗ: ಮಾಂಡ್-ಏಕತಾಳ

ಬಾರೈಯ್ಯ ಶ್ರೀಹರಿ ಹಸೆಗೆ ಕರುಣಾಲಹರಿ। ಶರಣಾಜನೋದ್ಧಾರಿ॥ಪ॥ ನೀರಜ ನೇತ್ರೆಯ ಕೈಯ್ಯ ಪಿಡಿದು। ಬಾರೋ ಶ್ರೀಹರಿ॥ಅ.ಪ॥ ತಾಯಿಗೆ ಬಾಯಲ್ಲಿ ಜಗವನ್ನೇ ತೋರಿದ। ಜಗದೋದ್ಧಾರ ಕೃಷ್ಣ ಮಾಯಾವಿ ರೂಪನೆ। ಮಾವನ ಕೊಂದವನೆ। ಮಾಧವ ಅರ್ಧಾಂಗಿಯೊಡನೆ ಬಾ॥1॥ ಇಂದು ಹಾಸ ಇಂದಿರೆ ವಾಸ ಸುಂದರ ರೂಪನೆ। ನಂದಗೋಪಿಗೆ ಆನಂದವನು ತೋರಿದವನೆ। ಮಾದವ ಅರ್ಧಾಂಗಿಯೊಡನೆ ಬಾ॥2॥ ರಂಗರಮಣ ರಾಜೀವಲೋಚನ ರಾಧಾಪತೇ। ನಂದಗೋಪಿಗೆ ಆನಂದವನು। ತೋರಿದವನೇ। ಮಂಗಳಾಂಗ ಅರ್ಧಾಂಗಿಯೊಡನೆ ಬಾ॥3॥

ಕರಿವದನನ ದಿವ್ಯ ಚರಣಕೆ (ಅರಿಶಿನ ಹಚ್ಚುವುದು) ರಾಗ: ಆನಂದಭೈರವಿ

ಕರಿವದನನ ದಿವ್ಯ ಚರಣಕೆ ಎರಗಿ। ವರ ಶಾರದಾಂಬೆಯ ಮನದೊಳುನುತಿಸಿ। ತರುಣಿ ರುಕ್ಮಿಣಿ ದೇವಿ ಅರಸ ಶ್ರೀಕೃಷ್ಣಗೆ ಅರಶಿನೆಣ್ಣೆಯ ಮಾಡಿದ ವಿವರವ ಪೇಳುವೆ ಹರುಷದೊಳು ಕೇಳಿ ಜನರೆಲ್ಲಾ॥1॥ ಬೃಂದಾವನದಲ್ಲಿ ಕೊಳಲನು ಪಿಡಿದು। ಕಂದರನೊಡಗೊಂಡು ಗೋವುಗಳ ಕಾಯ್ದುಬಂದ। ದಾನವರ ಸಂಹಾರವ ಮಾಡಿದ ಮಂದರೋದ್ಧಾರ। ನಿನ್ನ ಮೊಗವ ತೋರೆನ್ನುತ। ಚಂದದೊಳು ಅರಿಶಿನ ತೀವಿದಳು॥2॥ ವೀರ ಮೊಗದೊಳೊಪ್ಪುವ ಕದಪ ನೋಡಿ। ವಾರಿಧಿಯೊಳಗಿರುವರ ನೆಲೆಮಾಡಿ। ದ್ವಾರಾವತಿಯೆಂಬ ಪುರದೊಳು ನೆಲೆಸಿದ। ಪಾರುಮೂರ್ತಿಯೇ ಕರಚರಣವ ತೋರೆಂದು। ನಾರಿ ಅರಿಶಿನವತೀವಿ ಪಣೆಗೆ ಕುಂಕುಮವನಿಟ್ಟಳು॥3॥ ಅಣ್ಣನ ವಂಚಿಸಿ ಓಲೆಯ ಬರೆದೇ। ಸಣ್ಣವಳಾದರು ಎನ್ನ ಮೋಹಿಸಿದೆ। ಹೆಣ್ಣುಗಳೊಳು ಗುಣರನ್ನೆ ರುಕ್ಮಿಣಿ। ನಿನ್ನ ಹೊನ್ನೋಲೆ ಒಪ್ಪುವ ಮೊಗವ ತೋರನ್ನುತ। ಚಿಂದದೊಳರಿಸಿನ ತೀವುರಿದ॥4॥ ಶಿಶುಪಾಲ ಬರುವ ಸುದ್ದಿಯ ಕೇಳಿ। ಭಯದಿ ಶಶಿಧರನರಸಿಯ ಪೂಜಿಪ ನೆಪದಿ। ಕುಶಲದಿ ಬಂದೆನ್ನ ವಶದೊಳು ನೆಲೆಸಿದ। ಬಿಸಜಗಂಧಿಯೆ ನಿನ್ನ ಮೊಗವ ತೋರೆಂದು। ನಸುನಗುತ ಅರಿಶಿನವ ತೀವುರಿದ॥5॥

ಪಾದವ ಪಾಲಿಸೈ ಪರಮಾತ್ಮಾ (ಅರಿಶಿನ ಹಚ್ಚುವುದು) ರಾಗ: ನೀಲಾಂಬರಿ

ಪಾದವ ಪಾಲಿಸೈ ಪರಮಾತ್ಮಾ ದೇವ। ಅರಿಶಿಣ ಹಚ್ಚುವೆ ನಾನೀಗ ಬೇಗ॥ಪ॥ ಚಂದ್ರನ ಪೋಲ್ವ ಅಂದವಾದ ಮುಖಕೆ। ತಿಲಕವ ತಿದ್ದುವೆ ನಾನೀಗ ಬೇಗ॥1॥ ಸುರಗಿ ಸಂಪಿಗೆ ನರುಗಂಪು ಮಲ್ಲಿಗೆ। ಜಾಜಿ ಹಾರವ ಹಾಕುವೆ ನಾನೀಗ ಬೇಗ॥2॥ ಪರಿಪರಿ ಎಣ್ಣೆಗಳು ಸುವಾಸಿತ ಶ್ರೀಗಂಧ। ಗಂಧವ ಹಚ್ಚುವೆ ನಾನೀಗ ಬೇಗ॥3॥ ಚಿಗುರಿನ ವಿಳ್ಳೆದೆಲೆ ಬಣ್ಣ ಕಟ್ಟಿದಡಿಕೆ ತಾಂಬೂಲ ನೀಡುವೆ ನಾನೀಗ ಬೇಗ॥4॥

ಸುಮಶರ ಜನಕಾ ಸುರವಿನುತ (ಚೆಂಡಾಟ) ರಾಗ: ಅಭೇರಿ

ಸುಮಶರ ಜನಕಾ ಸುರವಿನುತ। ಚಂಡನಾಡಿದ (4 ಸಾರಿ)॥ಪ॥ ಚಂಡನಾಡಿ ದುಂಡು ಮಲ್ಲಿಗೆ ದಂಡೆ ಕಟ್ಟಿದ ॥ಅ.ಪ.॥

ಪಾರಿಜಾತ ವನದೊಳು ಪವಿತ್ರ ಕರದೊಳು। ನಾರಿ ರುಕ್ಮಿಣಿ ಸಮೇತ ನಾರದಮುನಿ ನಗುತ ನೋಡುತ ।।1।। ವಾಸವಾದಿವಂದಿತ ವಿಧೀಂದ್ರ ಸನ್ನುತಾ। ಶ್ರೀಶ ವರದ ವೆಂಕಟೇಶ ಶ್ರೀಹರಿ ನಸುನಗುತ ನೋಡುತ ।।2।।

ಸರಸಿಜ ಮುಖಿಯರು ಸೇರುತಲಿ (ಚಟ್ಟು ಬಡಿಯುವುದು)

ಸರಸಿಜ ಮುಖಿಯರು ಸೇರುತಲಿ ಹಳದಿ ಕುಂಕುಮ ಬೆರೆಸುತಲಿ। ಪಂಕಜ ಮುಖಿ ರುಕ್ಮಿಣಿಯು ದಿವ್ಯಕರದಲಿ ಚಟ್ಟನು ಬಡಿಯುತಲಿ। ನಿಗಿನಿಗಿಸುವ ಸರ್ವಾಭರಣಗಳು ಪಂಚರಂಗಿನುಂಡೆಗಳೆದುರಿನಲಿ। ಜಗದೊಡೆಯನ ಪಾದ ಧ್ಯಾನದೊಳು ಸುಗುಣೆಯು ಮಂಟಪ ಮಧ್ಯದಲಿ।।1।। ಹರಡಿ ಕಂಕಣ ಹಿಂಬಳೆಯು ಬೆರಳೊಳು ಉಂಗುರವಿಟ್ಟಿಹಳು। ಕರತಾವರೆಯ ಮೀರಿಸುವೊ ಕರದಲಿ ಚಟ್ಟನು ಬಡಿದಿಹಳು। ದುರುಳರ ಮರ್ದಿಸಿದಷ್ಟಾಕ್ಷರಿಯ ಮನದೊಳು ನೆನೆಯುತಲಿ। ಕರಕಮಲವನದ್ಬುತ ಪಂಚಾಹಸ್ತದೊಳುತ್ತುತಲಿ ನಲಿಯುತಲಿ।।2।।

ಇತ್ತ ನೋಡಿ ಅಂಗನೆಯರೇ ಕೃಷ್ಣಮೂರ್ತಿಯ (ಕಲಶ) ರಾಗ: ಶಂಕರಾಭರಣ

ಇತ್ತ ನೋಡಿ ಅಂಗನೆಯರೇ ಕೃಷ್ಣ ಮೂರ್ತಿಯ। ಪತ್ನಿಗೆತ್ತಿ ಕಲಶವನ್ನು ಇತ್ತ ರೀತಿಯ।।ಪ।। ಶುದ್ಧ ಜಲದಿ ಮಿಂದು ಹರಿಯು ವಿನಯದಿಂದಲಿ। ಮುದ್ದು ರುಕ್ಮಿಣಿಯೊಡನೆ ಹರುಷಭರದಲಿ। ವೃದ್ಧಜನಕೆ ವಂದನೆಯನು ಮಾಡಿ ಕುಳಿತನು। ಸಿದ್ಧವಾದ ಕಲಶವನ್ನು ಪೂಜೆಗೈದನು।।1।। ರತ್ನಖಚಿತ ಕಲಶವನ್ನು ಇಟ್ಟು ಮುದದೊಳು। ಉತ್ತಮವಾದ ಕುಸುಮಗಳಿಂದ ಅರ್ತಿ ಯಿಂದಲೀ। ಮತ್ತೆ ಕಲಶವನ್ನು ಪೂಜಿಸುತ್ತಾ ಬೇಗದಿ। ರುಕ್ಮಿಣಿದೇವಿಗದನು ಕೊಟ್ಟು ಮೋದದಿ।।2।। ಹರಳಿನುಂಗುರಗಳು ಚಲುವ ಬೆರಳೊಳ್ಹೊಳೆಯುತಾ। ಭರಧಿ ಬಾಗಿ ಕಲಶವನ್ನು ತಿರುಗಿ ಪಿಡಿಯುತಾ। ಪರಿಮಳೋದಕವನ್ನು ಪತಿಯ ಶಿರಕೆ ತಳಿದಳು। ಹರಿಯ ಮುಡಿಗೆ ಸುಮವ ಪೂಸಿ ತರುಣಿ ಮುಡಿದಳು।।3।। ಪ್ರಮುಖ ತಾಂಬೂಲಗಳನು ಕರದಿ ಪಿಡಿಯುತಾ। ರಮಣನಿಂಗೆ ಕೊಡಲು ನಗುತಾ ರಮಣಿಗೀಯಲೂ। ರಮಣಿ ಬಳುಕಿ ಬಾಗಿ ಪತಿಯ ಪದಕೆ ಮಣಿದಳು। ಕ್ರಮದಲೆಸೆವ ಹಸೆಮಣೆಯಲಿ ಕುಳಿತುಕೊಂಡಳು।।4।। ಮಂಗಳಾರತಿಯನು ಬೆಳಗಿರಿಂದು ಮುಖಿಯರೆ। ಮಂಗಳಾಂಗಯದುಕುಲೇಶ ರಂಗ ಮೂರ್ತಿಗೆ। ಅಂಗನೆ ವಾಮಾಂಗದಲೆಸೆವ ರುಕ್ಮಿಣಿಗೆ। ಭಂಗರಹಿತ ಕರ್ಪೂರೇಶ ರಂಗನಾಥಗೇ।।5।।

ಶ್ರೀಕೃಷ್ಣ ರುಕ್ಮಿಣಿಯರ (ಭೂಮ) ರಾಗ: ಅಭೇರಿ-ಆದಿತಾಳ

ಶ್ರೀಕೃಷ್ಣ ರುಕ್ಮಿಣಿಯರ ಭೂಮಕ್ಕೆ ಬಡಿಸಿರುವ। ಅಂದಚಂದವನು ನೋಡಲು ಬನ್ನಿ। ಸಖಿಯರೆಲ್ಲರು ಸಡಗರದಿ ಓಡಾಡುತ। ಭೂಮಕ್ಕೆ ಅಲಂಕಾರ ಮಾಡುತಲಿರುವರು।।ಪ।। ಕುಡಿಬಾಳೆ ಎಲೆಗಳನ್ನು ನಾರಿಯರು ಹಾಕುತ ವಿಧ ವಿಧ ರಂಗವಲ್ಲಿ ಇಡುತಿರಲು। ಬಣ್ಣ ಬಣ್ಣದ ಚಿತ್ರಗಳ ತುಂಬಿಸುತಿರುವರು। ನಡುನಡುವೆ ದೀಪಗಳ್ ಜೋಡಿಸುತಿರುವರು।।1।। ಶಾವಿಗೆ ಪಾಯಸ ಸಣ್ಣಕ್ಕಿ ಅನ್ನ ತೊವ್ವೆ। ಬೆಣ್ಣೆಯಂಥ ಪಲ್ಯಗಳ ಆಂಬೋಡೆ ಕೋಸಂಬ್ರಿ। ನಿಂಬೆಭಾತು ವಾಂಗಿಭಾತು ಲಾಡು ಮಂಡಿಗೆ। ಹೋಳಿಗೆ ಚಿರೋಟಿ ತುಪ್ಪ ಬಡಿಸಿದರು।।2।। ವಧುವರರು ಊಟ ಮಾಡುತ ಕುಳಿತಿರಲು। ಬೀಗಿತ್ತಿ ಬಂದರು ಹಾಲುತುಪ್ಪ ಪಿಡಿದು। ಹಾಲುತುಪ್ಪ ಬಡಿಸುತಿರಲು ವರನು ಆವರ। ಕೈಪಿಡಿದು ನಿಮ್ಮ ಪತಿಯ ಹೆಸರ್ಹೇಳಬೇಕೆಂದನು ।।3।।

ಆನೆ ಮೇಲೆ ಭೇರಿ ಹಾಕಿ (ರುಕ್ಮಿಣಿ ಸ್ವಯಂವರ)

ಆನೆ ಮೇಲೆ ಭೇರಿ ಹಾಕಿ ಧುಮದುಮ್ ಹೊಡೆಸಿದಾ। ಬಾಲೆ ಸ್ವಯಂವರ ಎಂದು ಭೀಷ್ಮ ಕರೆಸಿದ ರಾಯರಾ। ಬಂದನಾಗ ಜರಾಸಂಧ ಇಂದು ಹರುಷದಿ। ಚಂದ್ರಮುಖಿ ಕೊಡು ನನ್ನ ಕಂದಗೆಂದನು। ಬಂದ ರಾಯರಿಗೆ ಬಿಡದಿಮನೆ ಕೊಡಸಿದಾ। ಛಂದಛಂದಿಂದ ಪೂಜಿ ರುಕುಮ ಮಾಡಿದಾ। ಅಂದುಮಾತು ಕೇಳಿ ಕೋಪದಿಂದ ರುಕ್ಮಿಣಿ। ಮಂದಿರಕೆ ಹೋಗಿ ಮಂಚದ ಮ್ಯಾಲೆ ಮಲಗಿಕೊಂಡಳು। ಮಿತ್ರಿ ಸ್ವಪ್ನದಲ್ಲಿ ಬಂದು ಕೃಷ್ಣರಾಯರು। ಮಾಂಗಲ್ಯ ತಂದು ಕೊರಳಿಗಾಗ

ಕಟ್ಟುತ್ತಿದ್ದರು। ಚಿಕ್ಕ ರುಕ್ಮಿಣಿದೇವಿ ನಕ್ಕು ಮನದೊಳು। ಮುತ್ತೈದೇರನ್ನ ಕರೆಯಿರಿ ಸ್ವಪ್ನ ಹೇಳುವೆ। ಛಂದಛಂದ ಮುತ್ತೈದೇರನ್ನ ಕರೆದು ತಂದರು....। ಮಿತ್ರಿ ತನ್ನ ಸ್ವಪ್ನವನ್ನು ಅರಹುತ್ತಿದ್ದಾಳು । ಮಿತ್ರಿ ಈ ಸ್ವಪನವಿದು ಸತ್ಯ ಸ್ವಪನವು.... ಅಚ್ಚುತಾನಂತ ನಿನಗೆ ಪತಿಯು ಆಗುವಾ। ಅಂದಮಾತು ಕೇಳಿ ಹರುಷದಿಂದ ರುಕ್ಮಿಣಿ। ಮುತ್ತುಹೇರುಗಳ ತರಿಸಿ ಕೊಟ್ಟಳವರಿಗೆ। ಮನಸಿನೊಳಗೆ ದುಗುಡದಿಂದ ಇರಲು ಭಾವಕಿ। ದಿವಕರಾನಂತ ದ್ವಿಜನು ಮನೆಗೆ ಬಂದನು। ವಿಪ್ರ ಹೋಗಿ ಕೃಷ್ಣರಾಯರ ಕರೆದು ತಂದರೆ। ವಿತ್ಯಗಳನು ಕೊಟ್ಟು ನಾವು ರಕ್ಷಿಸಿಸುವೆವು। ಬಾಲೆ ಕೇಳು ಬಾಯ ಬಾಯಿ ಮಾತಿಲೆ ಅವರು ಬಾರರು। ಓಲೆ ಬರೆದು ಕೊಟ್ಟರೆ ಹೋಗಿ ಕರೆದು ತಾವೆವು। ರನ್ನದುಪ್ಪರಗಿ ಮ್ಯಾಲೆ ಕನ್ನೆ ಕುಳಿತಾಳು। ಮನ್ಮಥನ ಪಿತಗೆ ಓಲೆಯ ಬರೆಯುತ್ತಿದ್ದಾಳು। ಕಂಗಳು ಕಾಡಿಗೆಯ ತೆಗೆದು ಅಂಗನೆ ಹರುಷದಿ। ಶ್ರೀರಂಗರಾಯ ಪಾಲಿಸೆಂದು ಬಿನ್ನಪವ ಬರೆದಳು। ಬರೆದ ಓಲೆಗೆ ಅಂದು ಅರಿಷಿಣ। ಹಚ್ಚಿ ಸರಸಿಜಾನಾಭಗ ಓಲೆ ಬರೆಯುತ್ತಿದ್ದಳು। ಸ್ವಸ್ಥಿ ಶ್ರೀಮಂತವೆಂದು ಪತ್ರ ಬರೆದಳು। ಕೊಟ್ಟ ದ್ವಿಜನ ಕರದಲ್ಲಿ ಇಟ್ಟು ಕಳುಹಿಕೊಟ್ಟಳು। ಬರೆದ ಲಿಖಿತ ತೆಗೆದುಕೊಂಡು ತ್ವರದಿ ಬ್ರಾಹ್ಮಣ। ಶ್ರೀಹರಿ ಇದ್ದ ದ್ವಾರಕಾಪುರಕ ನಡೆದನು। ಆವ ಬ್ರಾಹ್ಮಣ ಇದಾವ ಕಡೆಯಿಂದ ಬಂದಿಯೊ। ಆರು ಕೊಟ್ಟರು ಲಿಖಿತವನ್ನು ಪೇಳು ಎಂದನು। ಕುಂಡನಿ ಪುರದಿಂದ ಅಂಗನೆ ಕಳುಹಾಳೆ। ಶ್ರೀರಂಗರಾಯರು ನೋಡಿಕೊಂಡು ನಂದನಾಗಿರಿ। ಇಂದ್ರ ಕಳುಹಿಸಿದ ರಥವ ಅಂದ ತರಿಸಿದಾ। ಶ್ರೀಕೃಷ್ಣರಾಯರು ಸಹಿತನಾಗಿ ಬಂದು ಇಳಿದಾರು। ಪುರದ ಸುದ್ದಿ ಚಾರಕರಿಂದ ತಿಳಿಸಿಕೊಂಡಾನು। ಘಳಗಿ ಬಟ್ಟಲ ನಿಟ್ಟು ಸೋದರ ಕರೆಯಬಂದಾನು। ಎನಗೆ ಕುಲದೇವತೆ ಎಂದು ಗುಡಿಗೆ ಬಂದಾಳು। ಅಂಬಿಕಾದೇವಿಗೆ ರುಕ್ಮಿಣಿ ವಂದನೆ ಮಾಡುತಾ। ಛಂದಛಂದದಿಂದ ಪೂಜೆ ಮಾಡುತ್ತಿದ್ದಾಳು। ಮೃಗನ ರಾಣಿಯ ಪೂಜಿಸಿದಳು ಮಡದಿ ರುಕ್ಮಿಣಿ। ಹರದಿ ನಾರಿಯರಿಗೆ ಮರದ ಬಾಗಿಣ ಕೊಟ್ಟಾಳು। ನುಪುರಿ ನೋದಾಗಳಿಂದ ದಿಟ್ಟಿಸಿ ನಡೆಯುತಾ। ಶ್ರೀಕೃಷ್ಣ ಬರೋ ಮಾರ್ಗವನ್ನೇ ನೋಡುತ್ತಿದ್ದಾಳು। ಲೋಕನಾಯಕ ನಡುವಪೊಕ್ಕು ಸಿಂಹನಂದದಿ। ಶ್ರೀಕಾಂತ ರುಕ್ಮಿಣಿ ಕರವ ಪಿಡಿದು ರಥವನೇರಿಸಿ। ಮುಗುಳು ನಗೆ ನಕ್ಕ ಎಡಗಡೆಗೆ ಕುಳಿತಾಳು। ಕಡೆಗಣ್ಣಲಿ ಪತಿಯ ನೋಡಿ ಮುಖವ ತಗ್ಗಿಸಿ। ಬಣ್ಣ ಬಣ್ಣದ ಓಲೆಗಳನು ಬರೆದು ಅಟ್ಟಿದೆ। ಹೆಣ್ಣಿನಾ ಮಹಿಮೆ ಎನಗೆ ತಿಳಿಯಲಿಲ್ಲವೆ। ಕೈ ಹೊಡೆಯುತ ನಗುತ ನರ್ಮದಾ ದಾಟಿ ನಡೆದರು। ಯಾದವರು ಕೂಡಿಕೊಂಡು ಎದರು ಗೊಂಡರು। ಸೂರ್ಯಚಂದ್ರರು ಬಂದು ಘಳಗಿ ಬಟ್ಟಲ ನಿಟ್ಟಾರು। ಇಂದ್ರದೇವರು ಬಂದು ಥೇರಿಯ ಹಿಡಿದಾರು। ವಶಿಷ್ಟ ವಿಶ್ವಾಮಿತ್ರರು ಬಂದು ಮಂಗಳಾಷ್ಟಕ ಪಾಡಿದರು। ಶ್ರೀಕೃಷ್ಣದೇವರ ಮದುವೆಯನ್ನು ಮಾಡಿಸಿದಾರು। ರುಗ್ಗವೇದ ಯಜುರ್ವೇದ ಸಾಮವೇದವು। ವೇದದಿಂದ ಕಟ್ಟಿದಾರು ಕಂಕಣ ಧಾರೆಯಾ। ಸರಸ್ವತಾದೇವಿ ಬಂದು ಅರಿಷಿಣ ಹಚ್ಚ್ಯಾಳು। ಇಂದ್ರನರಾಣಿ ಬಂದು ಗಂಧವ ಹಚ್ಚ್ಯಾಳು। ಭಾಗೀರಥಾದೇವಿ ಬಂದು ಬಾಸಿಂಗ ಕಟ್ಟ್ಯಾಳು। ಶಶಿರಥಾದೇವಿ ಬಂದು ಅತಿ ಹರುಷದಿ। ಮುತ್ತಿನಾರತಿಯ ತಂದು ಬೆಳಗುತ್ತಿದ್ದಾಳು। ಮುತ್ತುರತ್ನ ಕೆತ್ತಿಸಿದ ಕರಿಮಣಿಯು। ಅಚ್ಚುತಾನಂತ ಸತಿಗೆ ಕಟ್ಟುತ್ತಿದ್ದಾನು। ಸುವರ್ಣ ತಾಳಿಯನ್ನು ಕಟ್ಟಿದ ವಾರ್ತೆಯಾ। ಕೇಳಿ ರುಕುಮ ಕೆಟ್ಟೆನೆಂದ ಕಂಗೆಟ್ಟು ಬಂದನು। ಬಗಳುತಾ ರುಕುಮ ನಡಬಟ್ಟಿಗೆ ಬಂದಾನು। ಸರ್ವಮಳೆ ತರಯುಗಟ್ಟಿ ಹರಿಯುತ್ತಿದ್ದಾವು। ರಾಯರ ಮಾರಿಗೆ ಜಜನ ಬಟ್ಟನಿಟ್ಟರು। ರುಕ್ಮಿಣಿ ಪತಿಯು ತಾವು ನಗುತಲಿದ್ದರು। ಕೇಸು ಮಿಸಿ ಸವರಿದಾನು ಬಾಣದಿಂದಲಿ। ಕೇಳಿ ರುಕ್ಮಿಣಿ ಹಾರಿ ಜಗುಲಿ ಪಾದಕೆರಗ್ಯಾಳು। ಸೋದರನ ಪ್ರಾಣದಿಂದ ಉಳಿಸಿರೆಂದಾಳು। ದದಿ ಅಕ್ಷಂತಿ ಕಳಶದಿಂದ ಎದುರುಗೊಂಡಾರು। ಸುದತಿಯರು ರುಕ್ಮಿಣಿ ಸ್ವಯಂವರ ಪಾಡುತ್ತಿದ್ದರು। ಪದವಿ ಕೊಡು ಹರುಪುರೇಶ ಪರಮ ಹರುಷದಿ। ಜಯತು ರುಕ್ಮಿಣಿದೇವಿ ಜಯತು ಶ್ರೀಕಾಂತಗೆ ಜಯತು ಶ್ರೀಕೃಷ್ಣನಿಗೆ। ಶ್ರೀ ಭಾರತಿರಮಣ ಮುಖ್ಯಪ್ರಾಣೇಶಾಂತರ್ಗ ಶ್ರೀಕೃಷ್ಣಾರ್ಪಣಮಸ್ತು। ಶ್ರೀ ಗುರುಮದ್ವೇಶಾರ್ಪಣಮಸ್ತು॥

ಹಡಗಿನೊಳಗೆ ಬಂದು ಕಡು (ಆರತಿ) **ರಾಗ: ಆನಂದಭೈರವಿ**

ಹಡಗಿನೊಳಗೆ ಬಂದು ಕಡು ಮುದ್ದು ಶ್ರೀಕೃಷ್ಣ ಕಡಗೋಲ ನೇಣ ಪಿಡಿದನೆ ಕಡಗೋಲ ನೇಣ ಪಿಡದನೆ ದೇವಕಿಯ ತನಯಗೆ ಆರುತಿಯ ಬೆಳಗೀರೆ॥ಪ॥ ಆಚಾರ್ಯರ ಕೈಯಿಂದ ಅಧಿಕ ಪೂಜೆಯಗೊಂಬ ಕಾಂತೆ ಲಕ್ಷ್ಮೀಯ ಅರಸು

ಕಾಂತೆ ಲಕ್ಷ್ಮೀಯ ಅರಸು ಶ್ರೀ ಕೃಷ್ಣನಿಗೆ ಕಾಂಚನದಾರುತಿಯ ಎತ್ತೀರೇ॥1॥ ಮಧ್ವ ಸರೋವರದಿ ಶುದ್ಧ ಪೂಜೆಯಗೊಂಬ ಮುದ್ದು ರುಕ್ಮಿಣಿಯರಸನೆ ಮುದ್ದು ರುಕ್ಮಿಣಿಯ ಅರಸು ಶ್ರೀಕೃಷ್ಣನಿಗೆ ಮುತ್ತಿನಾರುತಿ ಎತ್ತೀರೇ॥2॥ ಪಾಂಡವರ ಪ್ರಿಯನೆ ಚಾಣೂರ ಮರ್ದನ ಸತ್ಯಭಾಮೆಯ ಅರಸನೆ। ಸತ್ಯಭಾಮೆಯ ಅರಸು ಶ್ರೀ ಕೃಷ್ಣನಿಗೆ ನವರತ್ನದಾರುತಿಯ ಬೆಳಗಿರೆ॥3॥ ಸೋದರ ಮಾವನ್ನ ಮಧುರೆಲಿ ಮಡುಹಿದ ತಾಯಿಯ ಸೆರೆಯ ಬಿಡಿಸಿದ। ತಾಯಿಯ ಸೆರೆಯ ಬಿಡಿಸಿದ ಹಯವದನ ದೇವಗೆ ಆರುತಿ ಬೆಳಗಿರೆ॥4॥

ಜಯತು ಕೃಷ್ಣನ ಪಟ್ಟದ ರಾಣಿ (ಮಂಗಳ)

ಜಯತು ಕೃಷ್ಣನ ಪಟ್ಟದ ರಾಣಿ। ಜಯತು ರುಕ್ಮಿಣಿ ದೇವಿಗೆ। ಜಯತು ಸೃಷ್ಟಿಯ ಸಲಹುವ ತಾಯಿಗೆ। ಜಯತು ಲಕ್ಷ್ಮಿ ದೇವಿಗೆ॥ ಜಯ ಜಯ ಮಂಗಳಂ॥ಪ॥ ಪೊಡವಿಗೆ ಒಡೆಯಳು ಪಾವನ ಮೂರುತಿ ಜಗದೊಡೆಯಳು ಕೃಷ್ಣನ ಪ್ರಿಯಳು। ಸಡಗರದಿಂದಲಿ ಕಡಗದ ಕೈ। ಪಿಡಿದು ಭಾಗ್ಯವ ಕೊಡುತಿಹಳು॥ ಜಯ॥1॥ ಪೀತಾಂಬರ ಸೀರೆಯನಲಿದುಟ್ಟಿಹಳು। ತಾಪತಿ ಕುಪ್ಪಸ ತೊಟ್ಟಿಹಳು ಜಾತಿ ಮುತ್ತಿನ ಮೂಗುತಿಯಿಟ್ಟು। ವಾಲಿ ಬಾವಲಿ ಇಟ್ಟಿಹಳು॥ಜಯ॥2॥ ದ್ವಾರಬಳಿಯಿ ಗೀರ ಗಂಧ ವಾರಿತುರುಬು ಕಟ್ಟಿಹಳು। ನಾರದ ಮುನಿ ತಂದ ಪಾರಿಜಾತದ ಪುಷ್ಪ। ಸೋಲ ಮುಡಿ ತಾ। ಮುಡಿದಿಹಳು। ಜಯ॥3॥ ಚಿನ್ನದ ವೃಂದಾವನದೊಳಗೆ ತಾ। ಚೆನ್ನಾಗಿ ಕುಳಿತಿಹಳು। ಚಿನ್ಮಯರೂಪ ಶ್ರೀವೇಂಕಟೇಶನ ಕೊರಳಿಗೆ ವನಮಾಲೆ ಹಾಕಿದಳು ॥ಜಯ॥4॥

ಅಂದು ಕ್ಷೀರಾಂಬುಧಿಯ ಕಡೆಯಲು (ಮಂಗಳ)

ಅಂದು ಕ್ಷೀರಾಂಬುಧಿಯ ಕಡೆಯಲು ಸಂದಣಿಸಿ ಸಮರದೊಳಗಿರುತಿರೆ ದುಂದುಭೀ। ಭೇರಿಗಳು ಮೊಳಗಲು ಅಂದು ಅಮರರು ಅರಳ ಸುರಿಯಲು ಇಂದುಮುಖಿ ಶ್ರೀಹರಿಯ ಕೊರಳಿಗೆ ಮಾಲೆ ಹಾಕಿದ ಮಡದಿ ಲಕ್ಷ್ಮೀಗೆ ಮಂಗಳಂ ಜಯ ಜಯ ಮಂಗಳಂ॥1॥ ಮಿಥಿಲೆ ರಾಯರು ಮೇದಿನಿಯನು ಶೋಧಿಸುತಲಿರೆ ಪೃಥುವಿಯೊಳಗೊಂದು ಶಿಶುವು ದೊರಕಲು ಅತಿಶಯಾದಿಂದ ದಂಪತಿಗಳೀರ್ವರು ಪಾಲಿಸುತಲಿರೆ ದಶರಥನ ಕುಮಾರರು ಬಂದು ಧನುವನೆತ್ತುತ ಜನರ ಮಧ್ಯದಿ ವನಜ ಮುಖಿ ಜಾನಕಿಯುಮಾಲೆಯ ರಾಮಗೆ ಹಾಕಿದ ಮಡದಿ ಲಕ್ಷ್ಮೀಗೆ ಮಂಗಳಂ ಜಯಜಯ ಮಂಗಳಂ॥2॥ ರಕ್ಕಸಗೆ ಕೊಡಬೇಕು ಎನುತ ರುಕುಮ ರುಕ್ಮಿಣಿಗೆ ರುಕುಮಿಣಿಗೆ ನೇಮಿಸತಲಿರೆ ಗಕ್ಕನೆ ಓಲೆಯನು ಬರೆದು ವಿಪ್ರಮುಖದಿಂದ ಕೊಟ್ಟು ಕಳುಹಲು ಚಕ್ರಧರ ರಥವೇರಿ ಬರಲು ಚತುರಂಗದ ಮೂರ್ಬಲವು ಸಹಿತಲೆ ಸುತ್ತ ಮುತ್ತ ಕಾವೇರಲು ಎತ್ತಿ ಒಯ್ದ ಶ್ರೀರುಕ್ಮಿಣಿಗೆ ಮಂಗಳಂ॥ ಜಯಜಯ ಮಂಗಳಂ॥3॥ ಪಾಹಿ ಶ್ರೀ ಭೂದುರ್ಗದೇವಿಗೆ ಪಾಹಿ। ಮನುಜೆಯ ತೃಷೆಯ ಶಾಂತೆಗೆ ಪಾಹಿ ಶ್ರೀ ಕೃಷ್ಣನರಸಿ ಅರ್ಧಾಂಗಿಯಾದ ಆದಿ ತುಳಸಿಗೆ ಮಂಗಳಂ ಜಯಜಯ ಮಂಗಳಂ॥4॥

ಕ್ಷೀರಸಾಗರ ಶಯನ ಶ್ರೀಹರಿ — ರಾಗ: ಆನಂದಭೈರವಿ

ಕ್ಷೀರಸಾಗರ ಶಯನ ಶ್ರೀಹರಿ ದ್ವಾರಕಾಪುರಿಯೊಳಗೆ ಇರುವಂಥ। ಆದಿಲಕ್ಷ್ಮಿಯು ತಾನೆ ಭೀಷ್ಮಕರಾಯನಿಗೆ ಮಗಳಾಗಿ। ಮದುವೆಲಿ ಭೂರಿ ಭಾಗ್ಯವ ನಲಿದು ಬೆಳಗುವ। ವಾರಿಜಾಕ್ಷಿ ಲಕ್ಷ್ಮೀದೇವಿಗೆ॥1॥ ಮಂಗಳಂ ಜಯ ಜಯ ಮಂಗಳಂ।. ಅಂದು ಬನದಲಿ ಅಂಬಿಕೆಯು ನಲಿಗೊಂಡು ದೇವಿಯು ಇಂದಿರೇಶನ ಅಂಘ್ರಿದ್ವಯಗಳ ಹೃದಯ ಕಮಲದಿ। ಇಂದಿರಾ ಶ್ರೀ ಲಕ್ಷ್ಮೀದೇವಿಗೆ॥2॥ ರುದ್ರನ ರಾಣಿಯು ಪೂಜೆಗೊಳ್ಳಲು ಮುದ್ದು ರುಕ್ಮಿಣಿ ಪೂಜೆ ಮಾಡಲು। ಅಲ್ಲಿದ್ದ ನಾರ್ಯರ್ಗೆ ಬಾಗಿನ ಕೊಟ್ಟಳು। ಕೃಷ್ಣನೇ ಪತಿಯಾಗಬೇಕೆಂದು॥3॥ ಮಂಗಳಂ ಭೀಷ್ಮಕನ ಪುತ್ರಿಗೆ ಮಂಗಳಂ ಮಾಧವನ ಪತ್ನಿಗೆ। ಮಂಗಳಂ ಮನ್ಮಥನ ಮಾತೆಗೆ। ಮಂಗಳಂ ಶ್ರೀ ಲಕ್ಷ್ಮೀದೇವಿಗೆ॥4॥

ಒಂದು ದಿನ ರುಕ್ಮಿಣಿಯ ಮಂದಿರಕೆ (ಶ್ರೀಕೃಷ್ಣ-ರುಕ್ಮಿಣಿಯ ಸಂವಾದ)

ಒಂದಿ ದಿನ ರುಕ್ಮಿಣಿಯ ಮಂದಿರಕೆ ಶ್ರೀಕೃಷ್ಣ ಚಂದದಿಂದಲಿ ಬಂದ ಹರುಷದಿಂದ। ಹರಿ ಬರಲು ಕಾಣುತ್ತ ಸಿರಿಯುತಾ ಹರುಷದಲಿ। ಕರಪಿಡಿದು ಮಂಚದಲಿ ಕುಳಿತುಕೊಂಡು॥ ಮಡುದೆಲೆಯನೀಡುತಿರೆ ಮಡದಿಯಾ ಮುಖನೋಡಿ। ಕಡುಹರುಷದಿಂ ಹಾಸ್ಯ ಮಾಡುತಿರಲು॥ ಬಡಗೊಲ್ಲನು ನಾನು ಧೊರೆಯ ಮಗಳು ನೀನು। ಎನ್ನ ಮದುವೆಯಾಗಲಿ ಬಹುದೆ ಚದುರೆ ಪೇಳೆ॥ ಒಡಹುಟ್ಟಿದಣ್ಣನು ಧೊರೆಯಮಗನ ಕರೆತಂದು। ವರಪೂಜೆಯನು ಮಾಡಲೊಲ್ಲದ್ದೋದೆ॥ ಪರಪುರುಷನ ಕರೆದು ಭರದಿ ಎನಗೆ। ಓಲೆ ಬರೆಸೆ ನೋಡಿ ಬಂದೆ ಭಂಡನಾನು॥ ಬಡವನನು ಕಣ್ಣೆತ್ತಿ ನೋಡಲಿಲ್ಲಾ। ಪರಮ ಮೂರ್ಖಳು ಎಂದು ತಿಳಿಯಲಿಲ್ಲಾ॥ ಗುರುವಿ ಎಂದೆನುತ ಜನ ಪೇಳ್ವರಲ್ಲಾ। ವರದ ಗೋಪಾಲವಿಠಲನು ಪೇಳಿದನು ಸೊಲ್ಲಾ॥1॥ ಅಂದ ಮಾತನು ಕೇಳಿ ನೊಂದು ರುಕ್ಮಿಣಿ ತಾನು। ಒಂದು ಮಾತಾಡಿದಳೆ ಸುಂದರಾಂಗಿ॥ ಕಂದರ್ಪ ಜನಕನೆ ಹಿಂದೆ ಆಡಿದ ಮಾತು। ಇಂದು ಮರೆತೆನ್ನನು ನಿಂದಿಸುವರೆ॥ ಕ್ಷೀರಸಾಗರದಲ್ಲಿ ಆಲದೆಲೆಯ ಮೇಲೆ। ಬಾಲರೂಪದಿ ನೀನು ಮಲಗಿ ಇರಲು॥ ಬೋರೊಂದು ರೂಪದಲಿ ಬದಿಯಲಿ ನಾಕುಳಿತು। ಬಹಳ ಮೃದು ವಚನದಲಿ ಮಾತನಾಡೆ॥ ಭಕ್ತಭೀಷ್ಮಕನಿಗೆ ಪುತ್ರಿಯಾಗೆಂದೆನುತ। ನೀ ಅಪ್ಪಣೆ ಕೊಡಲು ನಾನಿಲ್ಲಿ ಜನಿಸಿ॥ ರುಕ್ಮಿಣಿ ಎನುತಲಿ ನಾಮಾಂಕಿತವ ಪಡೆದು। ಕೃಷ್ಣನೇ ಪತಿಯು ಆಗುವನು ಎಂದು॥ ಮಿಕ್ಕರಾಜರಿಗೆ ನಾ ತಕ್ಕವಳೆ ಪೇಳು। ಭಕ್ತವತ್ಸಲ ನೀ ಕರುಣಿಸೆಂದು॥ ಸೃಷ್ಟಿ ಸ್ಥಿತಿಲಯಗಳಿಗೆ ಕಾರಣಾ ಎಂದು ರಕ್ಷಿಸೋ ಗೋಪಾಲ ವಿಠಲನೆ ಬಂಧೂ॥2॥ ಅಷ್ಟಲಕ್ಷ್ಮಿಯರಲಿ ಅಧಿಕಳು ನೀ ಎಂದು। ವಕ್ಷ ಸ್ಥಳದಲಿಟ್ಟು ರಕ್ಷಿಸಿದೆನು॥ ಅಟ್ಟಿ ನಿನ್ನನು ಜಬರಿ ಅವನ ಕುಲವನು। ಮುರಿದು ಪಟ್ಟದರಸೀ ಎಂದು ನಿನ್ನ ತಂದೆ॥ ಕೊಟ್ಟಳೂ ದಾನವನು ಸುರಮುನಿಗೆ ಆ ಭಾಮೆ। ನಿನ್ನ ಶ್ರೇಷ್ಟಳನ್ನಾ ಮಾಡಿ ಬಿಡಿಸಿಕೊಂಡೆ॥ ರೂಪು ಯೌವನದಿ ಮೆರೆದ ಭಾಮೆಗರ್ವವ। ಮುರಿದು ಸೀತಾರೂಪದಲಿ ಕೀರ್ತಿತಂದೆ॥ ಗೋಕುಲದ ಸ್ತ್ರೀಯರಿಂದ ಅಧಿಕಳೆಂದೂ। ಲೋಕ ಸೃಷ್ಟಿಸಲು ನೀ ಕಾರಣಾ ಎಂದೂ। ರಕ್ಷಿಸೋ ಗೋಪಾಲ ವಿಠ್ಠಲನೆ ಕೈಪಿಡಿದು ಬಂದೂ॥3॥ ಎಷ್ಟು ಜನ್ಮದ ತಪವ ಗೈದೆನೋ ನಾಕಾಣೆ। ಅಚ್ಚುತಾನಂತನೇ ಅರಸಿಯಾದೇ॥ ಜಗದೀಶ ರಕ್ಷಕಾ ಅಗಲದೇ ನಾ ನಿನ್ನ। ಉಗುರು ಕೊನೆಯ ಮಹಿಮೆಯ ಅರಿಯದೆ ಹೋದೆ॥ ಸಪ್ತೆರಡು ಲೋಕವನು ಹೊಟ್ಟೆಯಲಿಟ್ಟು। ಕರ್ಪರ ಸೂತ್ರಧಾರಿಯಂತೆ ನಟಿಸುತಿರುವೆ॥ ನಿಮ್ಮ ನಾಭಿಲಿ ಬಂದು ಬ್ರಹ್ಮ ಬಲ್ಲನೆ ಮಹಿಮೆ। ನಿಮ್ಮ ಭಕ್ತನು ಬಲ್ಲ ವಾಯು ಇದನು॥ ಸರಸ್ವತಿ ಭಾರತಿ ಗರುಡ ಶೇಷರಾದಿ। ಸುರಪತಿಯು ಮುಖ್ಯ ದೇವತೆಗಳೆಲ್ಲಾ॥ ತೃಣ ಜೀವ ಮೊದಲು ಕಮಲಜನ ವರೆಗೂ। ಎಣಿಸಲಾಗದು ಈಗ ನಿಮ್ಮ ಗುಣವೂ। ಘನ ಮಹಿಮ ಗೋಪಾಲ ವಿಠ್ಠಲನೆ ರಕ್ಷಿಸೋ ಎನ್ನಾ॥4॥

❖ ❖ ❖

ಹೃದ್ಗುಗಹಾಶ್ರೀತಪಕ್ಷೀಂದ್ರವಲ್ಗುಗವಾಕ್ಯೈಃ (ಶ್ರೀಕೃಷ್ಣನ ಅಷ್ಟಮಹಿಷಿಯರ ಸ್ತೋತ್ರ)

ಹೃದ್ಗುಹಾಶ್ರೀತಪಕ್ಷೀಂದ್ರವಲ್ಗುವಾಕ್ಯೈಃ ಕೃತಸ್ತುತೇ॥ಪ॥ ತದ್ಗುರುತ್ಕಂಧರಾರೂಢ ರುಗ್ಮಿಣೀಶ ನಮೋಽಸ್ತುತೇ॥1॥
ಅತ್ಯುನ್ನತ್ಯಾಖಿಲೈಃಸ್ತುತ್ಯ ಶ್ರುತ್ಯಂತಾತ್ಯಂತಕೀರ್ತಿತ। ಸತ್ಯಯೋಹಿತ ಸತ್ಯಾತ್ಮನ್ ಸತ್ಯಭಾಮಾಪತೇ ನಮಃ॥2॥
ಜಾಂಬವಂತ್ಯಾಃ ಕಂಬುಕಂಠಾಲಂಬಿಜೃಂಭಿ ಕರಾಂಬುಜ। ಶಂಭುತ್ರ್ಯಂಬಕಸಂಭಾವ್ಯ ಸಂಬತಾತ ನಮೋಽಸ್ತುತೇ॥3॥
ನೀಲಾಯ ವಿಲಸ ದ್ಭೂಷಾಜಾಲಯೋಜ್ಜ್ವಲಮಾಲಿನೇ। ಲೋಲಾಲಕೋದ್ಯತ್ಫಾಲಾಯ ಕಾಲಿಂದೀಪತಯೇ ನಮಃ॥4॥
ಜೈತ್ರಚಿತ್ರಚರಿತ್ರಾಯ ಶಾತ್ರವಾನೀಕಮೃತ್ಯವೇ। ಮಿತ್ರಪ್ರಕಾಶಾಯ ನಮೋ ಮಿತ್ರವಿಂದಾಪ್ರಿಯಾಯ ತೇ॥5॥
ಬಾಲನೇತ್ರೋತ್ಸವಾನಂತಲೀಲಾಲಾವಣ್ಯಮೂರ್ತಯೇ। ನೀಲಾಕಾಂತಾಯ ತೇ ಭಕ್ತವಾಲಾಯಾಸ್ತು ನಮೋ ನಮಃ॥6॥
ಭದ್ರಾಯ ಸ್ವಜನಾವಿದ್ಯಾನಿ ದ್ರಾವಿದ್ರಾವಣಾಯ ವೈ। ರುದ್ರಾಣೀಭದ್ರಮೂಲಾಯ ಭದ್ರಾಕಾಂತಾಯ ತೇ ನಮಃ॥7॥
ರಕ್ಷಿತಾಖಿಲವಿಶ್ವಾಯ ಶಿಕ್ಷಿತಾಖಿಲರಕ್ಷಸೇ। ಲಕ್ಷಣಾಪತಯೇ ನಿತ್ಯಂ ಭಿಕ್ಷುಶ್ಲಾಘ್ಯಾಯ ತೇ ನಮಃ॥8॥
ಷೋಡಶಸ್ತ್ರೀಸಹಸ್ರೇಶಂ ಷೋಡಶಾತೀತಮಚ್ಯುತಮ್। ಈಡೇತ ವಾದಿರಾಜೋಕ್ತಪ್ರೌಢಸ್ತೋತ್ರೇಣ ಸಂತತಮ್॥9॥

❖ ❖ ❖

ಶ್ರೀಕೃಷ್ಣ-ರುಕ್ಮಿಣಿ-ಸತ್ಯಭಾಮಾ

ಬಾರೋ ಬೇಗನೆ ಹಸೆಗೆ (ಹಸೆಗೆ-ಗಂಡು) ರಾಗ: ಜುಂಜೋಟಿ

ಬಾರೋ ಬೇಗನೆ ಹಸೆಗೆ ಗೋಪಾಲ ಕೃಷ್ಣ ಬಾರೋ ಬೇಗನೆ ಹಸೆಗೆ॥ಪ॥ ಚಿನ್ನದ ಹಸೆಮಣೆ ರನ್ನದ ಕಾಲು ದೀಪ ನೀಲವರ್ಣನೆ ನಿನ್ನ ಹರಸುವರು॥1॥ ಬಲದಲ್ಲಿ ರುಕ್ಮಿಣಿ ಎಡದಲ್ಲಿ ಸತ್ಯಭಾಮೆ। ಗರುಡ ವಾಹನ ಸಹಿತ ನಾರಿಯರೆಲ್ಲರು। ಕ್ಷೀರಾಬ್ಧಿ ವಾಸಗೆ ಆರತಿ ಎತ್ತುವರು॥2॥

ಏನೇ ಭಾಮೆ ಬಾಗಿಲು ತೆಗೆಯೇ (ಶ್ರೀ ಕೃಷ್ಣ-ಸತ್ಯಭಾಮಾ ಸಂವಾದ) ರಾಗ: ಶ್ರೀ

ಏನೇ ಭಾಮೆ ಬಾಗಿಲು ತೆಗೆಯೇ। ಏನೆಂದೆನೆ। ಸತ್ಯಭಾಮೆ। ನಾ ಏನೆಂದೆನೆ ಸತ್ಯಭಾಮೆ॥ಪ॥ ಏನಾದರು ನಿನ್ನ ಹೆಸರನು ಪೇಳುವೆ। ಜಾಣತನವೇ ಗೋಪಾಲ। ನಿನ್ನ ಜಾಣತನವೆ ಗೋಪಾಲ॥1॥ ಕತ್ತಲೆ ಬಾಗಿಲು ಕಾಣದೆ ಬಂದೆನು। ಹೊತ್ತು ಹೋಯಿತು ಸತ್ಯಭಾಮೆ। ಬಹಳ ಹೊತ್ತುಹೋಯಿತು ಸತ್ಯಭಾಮೆ॥2॥ ಹೊತ್ತು ಹೋಗಲಿ ನಿತ್ಯನೀ ಬರಲಿ ಚಿತ್ತ ಕಂಡೆ ಗೋಪಾಲ। ನಿನ್ನ ಚಿತ್ತ ಕಂಡೆ ಗೋಪಾಲ॥3॥ ಮೂರು ಹೊತ್ತು ನಾನಿನ್ನ ಮೊರೆ ಹೊಕ್ಕೆನೆ ಸುದತಿಕೇಳೋ ಗೋಪಾಲ। ನಿನ್ನ ಸುದತಿ ಕೇಳೋ ಗೋಪಾಲ॥4॥ ಚಿಂದಾಗಿರುನೀ। ರುಕ್ಮಿಣಿ ಮನೆಯಲಿ ಸುಖಿಯಾಗಿರೂ ಗೋಪಾಲ। ಸುಖಿಯಾಗಿರು ಗೋಪಾಲ॥5॥

ಶ್ರೀಕೃಷ್ಣ ಶೃಂಗಾರಮು (ಶ್ರೀಕೃಷ್ಣ-ಸತ್ಯಭಾಮಾ ಸಂವಾದ)

ಶ್ರೀಕೃಷ್ಣ ಶೃಂಗಾರಮು। ಸಹಿತಲೇ ಭಾಮಿನಿ ಬಾಗಿಲತೆಗೇಯೇ। ಸತ್ಯಭಾಮಿನಿ ಬಾಗಿಲ ತೆಗೇಯೇ॥ಪ॥ ಇಂದಿನ ದಿವುಸದಿ ಈ ರಾತ್ರೀಯಲೀ ಬಂದು ನಿಂದವನ್ಯಾರೋ। ಕೃಷ್ಣ ಬಂದು ನಿಂದವನ್ಯಾರೋ॥ ನಂದಗೋಪಿಮಗ ಕಂದ ಮುಕುಂದಾ। ಬಂದವನಾನೇ ಭಾಮೆಸತ್ಯ। ಬಂದವನಾನೆ ಭಾಮೆ॥1॥ ಬಂದರೆ। ಒಳ್ಳಿತು। ಅಂದವನೀನೋಡು। ಹಿಂದಕೆ ಮುನಿಪ್ಪೈ ದೇವ। ಕೃಷ್ಣ ಹಿಂದಕೆ ಮುನಿಪ್ಪೈ ದೇವ। ನೋಡು ನೋಡೆಲೆ ಸ್ತ್ರೀಯರ ಕೂಡುತಾ ತಾಳಲಾರನೆ ಭಾಮ। ಸತ್ಯ ತಾಳಲಾರನೆ ಭಾಮೆ॥2॥ ಕೃಷ್ಣರಾಯರೆ ನಿಮ್ಮೊಪ್ಪುವ ಕಾಲಿಗೆ ಉಂಗುರೇಕೆ ವತ್ಯಾವೂ। ಕಾಲುಂಗುರೇಕೆ ಬಿದ್ದಾವು। ಕಾರುಕತ್ತಲೆ ಭೋರು ಮಳೇಯಲೀ ಜಾರಿಬಿದ್ದೆನೆ ಭಾಮೆ। ಮೇಲಗಾಯವಾಯಿತೆ ಭಾಮೆ॥3॥ ಕೃಷ್ಣರಾಯರೆ ನಿಮ್ಮೊಪ್ಪುವಪಾದಕೆ ಪಾಡಗೇಕೆ ವತ್ಯಾವೂ। ಮೇಲ್ ಪೈದಣೇಕೆ ಬಿದ್ದಾವೂ। ಕಂದನೆತ್ತಿಕೊಂಡು ಕೊಳಲನುದೂವಾಗ। ಶಂಖವತ್ತಿತೆಭಾಮೆ। ಮೇಲ್ ಚಕ್ರ ಬಿದ್ದಿತೆ ಭಾಮೆ॥4॥ ಕೃಷ್ಣರಾಯರೆ ನಿಮ್ಮೊಪ್ಪುವ ಸೊಂಟಕೆ ದಾಟು ಏಕೆ ವತ್ಯಾವೂ। ಮೇಲೆ ಕುಣಿಕೆ ಏಕೆ ಬಿದ್ದಾವೂ। ಮಲ್ಲಿಗೆ ವನದಲಿ ಸುಳಿದು ಬರೂವಾಗ। ಎಲೆಯುತಾಕಿತೇ ಭಾಮೆ। ಮೇಲ್ ಮಗುಗವತ್ತಿತೇ ಭಾಮೇ॥5॥ ಕೃಷ್ಣರಾಯರೇ ನಿಮ್ಮೊಪ್ಪುವ ಹೆಡಕೆಗೆ ಸರಿಗೆಯಾತಕೆ ವತ್ಯಾವೂ। ಮೇಲ್ ಮುರಿಗೆ ಯಾಕೆ ಬಿದ್ದವೂ। ನಿಂಬೆಯ ವನದಲಿ ಸುಳಿದುಬರೂವಾಗ ಎಲೆಯುತಾಕಿತೆಭಾಮೆ ಮೇಲೆ ಮುಳ್ಳು ಮುರಿದಿತೇ ಭಾಮೆ॥6॥ ಕೃಷ್ಣರಾಯರೇ ನಿಮ್ಮೊಪ್ಪುವ ತೋಳಿಗೆ। ವಂಕಿಯಾತಕೆ ವತ್ಯಾವೂ। ಮೇಲ್ ಕುಸರಿಯಾಕೆ ಬಿದ್ದಾವೂ। ಕ್ಯಾದಿಗೆ ವನದಲಿ ಸುಳಿದು ಬರುವಾಗ ಗರಿಯು ತಾಕಿತೇ ಭಾಮೇ। ಮೇಲ್ ಗೆರೆಯು ಬಿದ್ದಿತೇ ಭಾಮೆ॥7॥ ನಾರಿಯರ್ಹಾಕುವರಾಗಟೆ ಚೌರಿ। ನಿಮ್ಹೆಗಲಿಗೇಕೆ ಬಿದ್ದಾವೂ। ರಂಗ್ ನಿಮ್ಮ ಹೆಗಲಿಗೇಕೆ ಬಿದ್ದಾವೂ। ಅರಿತು ಮಂಚದಿ ಭರಿತು ನಿದ್ರೆಲಿ ಮೈ ಮರೆತು ಮಲಗಿದೆ ಭಾಮೆ। ಮೈ ಮರೆತು ಮಲಗಿದೆ ಭಾಮೆ॥8॥ ಸೆಟ್ಟರಂಗಡಿ ಚಿನ್ನಗಿರಿ ಪೇಟೆಲಿ। ನಿವೋದ ಕಾರಣವೇನು। ಅಲ್ಲಿ ನಿಂತ ಕಾರಣವೇನು। ನಾರಿಯರುಡುವಾ ಸೀರೆಗಳನ್ನು ಧಾರಣೇಳಿದೆ ಭಾಮೆ। ಮೇಲ್ ರೊಕ್ಕಕೊಡಿಸಿದೆ ಭಾಮೆ॥9॥ ಗಂಗಾನದಿಯೊಳು ಯಮುನಾ ತೀರದೀ ನೀವೋದ ಕಾರಣವೇನು। ಅಲ್ಲಿ ನಿಂತ ಕಾರಣವೇನು। ಕೆಂಚೇರೆಲ್ಲರು ಕಂಚಿನಕೊಡಗಳ। ಅಲ್ಲಿ ಹೊರಿಸಿ ಎಂಬೊರು ಭಾಮೆ। ಇಲ್ಲಿ ಇಳಿಸು ಎಂಬೊರು ಭಾಮೆ॥10॥ ಕೃಷ್ಣಾರಾಯರೇ ನೀವುಟ್ಟ ಪೀತಾಂಬ್ರಕೆ ಗಂಧ ಯಾರು ಚೆಲ್ಲ್ಯಾರೂ। ಗಂಧ ಯಾರು ಚೆಲ್ಯಾರೂ। ಹಾಸಿಗೆ

ಹಸನದಲಿ ಬೇಸಿಗೆಬಿಸಿಲಲಿ। ಜಕುಳಾಡಿವೆಭಾಮೇ। ನಾ ಜಕುಳಾಡಿದೆಭಾಮೆ।।11।। ಇಷ್ವರ ಮಾತಿಗೆ ಭ್ರಾಂತಳಾದವೋ। ರಂಗವಿಠಲ ರಾಣೀ। ತಾ ರಂಗ ವಿಠಲರಾಣಿ।।12।।

ಇಂದಿರಾರಮಣನ ಮಂದಿರದಲ್ಲೆ ನಾರದ (ಶ್ರೀ ಕೃಷ್ಣ ತುಲಾಭಾರ)

ಇಂದಿರಾರಮಣನ ಮಂದಿರದಲ್ಲೆ ನಾರದ ತಾ ಬರುತಿರಲು ಕಂಡು ಕೃಷ್ಣನು ಕರೆತಂದು ಮನ್ನಿಸಿ ಬಂದ ಕಾರಣವೇನೆಂದನು।।1।। ಕಾರಣವೇನುಂಟು ಕಾರಣಪುರುಷನ ಕಾಣಬೇಕೆಂದೆನುತ। ಕಾಮಿಸಿಬಂದೆನೊ ಕೊರಳ ತುಳಸಿ ಮಾಲೆ ನೀಡೋ ನೀ ಎನಗೆಂದನು।।2।। ಏನು ಬೇಡಿದರು ನಾ ಕೊಡುವೆನು ನಾರಂದ ಪ್ರಾಣಪದಕ ತುಳಸಿ। ನೀಡಲಾರೆನೊ ಮುತ್ತಿನ್ಹಾರವ ಕೊಡುವೆನೆಂದು ಹೇಳುತಿದ್ದನು ಹರಿಯು।।3।। ನೀಡದಿದ್ದರೆ ನಾನು ಬೇಡಿ ಬಿಡುವನಲ್ಲ ನೋಡಿಕೋಯೆಂದೆನುತ। ಆಡಿದ ಮಾತು ತಪ್ಪುವರುಂಟೆ ಶ್ರೀಕೃಷ್ಣ ಹೋಗಿಬರುವೆನೆಂದನು।।4।। ಸತ್ಯಭಾಮೆಯ ಮನೆ ಹೊಕ್ಕನು ನಾರಂದ ಹೆತ್ತಮ್ಮ ಕೇಳೆನುತ ಸುತ್ತಿಬಂದೆನು ಸುರಲೋಕದ ವಾರ್ತೆಯ ವಿಸ್ತರಿಸ್ವೇಳುವೆ।।5।। ಇಂದ್ರಲೋಕದಲಿ ದೇವೇಂದ್ರ ಶುಚಿಯ ಕೂಡ್ಯಾ ನಂದದಿ ಕುಳಿತಿದ್ದನೆ ಆಲ್ಲಿಂದ ಕೈಲಾಸ ಮಾರುದ್ರ ಪಾರ್ವತಿದೇವಿ ಚೆಂದವನ್ವರಣಿಸಲೆ।।6।। ಸತ್ಯಲೋಕದಿ ಸರಸ್ವತಿ ಕೂಡಿ ಬ್ರಹ್ಮ ಭಾಳುತ್ಸವಂದಿದ್ದನೆ ಹಸ್ತಿನಾವತಿಯ ಪಾಂಡವರು ದ್ರೌಪದಿದೇವಿ ಅರ್ಥಿಯನೋಡಿ ಬಂದೆ।।7।। ದ್ವಾರಾವತಿಗೆ ಬಂದೆ ದೇವಿ ನಿಮ್ಮರಸನು ನಾರಿ ರುಕ್ಮಿಣಿ ಸಹಿತ ಭಾಳ ಸಂಭ್ರಮದಿಂದ ಕುಳಿತಿದ್ದ ಕಣ್ಣಬ್ಬವಾಗಿ ನಾ ಬಂದೆನಿಲ್ಲೆ।। ಕರೆದು ರುಕ್ಮಿಣಿ ಕರದಿಂದೆ ಆಲಂಗಿಸಿ ತೊಡೆಯ ಮ್ಯಾಲಿಟ್ಟಿದ್ದನೆ ಅರಳುಮಲ್ಲಿಗೆ ತುರುವಿ(ಬೀ)ನಲ್ಲಿಟ್ಟು ನಿನಗಿನ್ನು ಸರಿಯಿಲ್ಲವೆಂತೆಂಬನೆ।।9।। ಹಾರಪದಕ ಇಬ್ಬರಿಟ್ಟಾ ಭರಣ ಬ್ಯಾರೆ ಬ್ಯಾರಾಗಿ ತೋರವಲ್ಲೆ ಸೂರ್ಯಚಂದ್ರರು ಕೂಡಿದಂಥ ಮುಖವು ನೋಡಿ ನಾ ಬೆರಗಾಗಿದ್ದೆನೆ।।10।। ಸತ್ಯಭಾಮೆಯೆ ನಿನ್ನ ತಾಯಿತಂದೆ ಮಿರ್ತಾಗಿದ್ದರೆ ನಿನಗೆ ಕೊಟ್ಟರೀ ಕಪಟನಾಟಕ ದಯಹೀನಗಿನ್ನೆಷ್ಟು ನಾ ಸೈರಿಸಲೆ।।11।। ಒಂದೊಂದು ಗುಣಗಳ ವರಣಿಸಲಿಕ್ಕೆ ಹನ್ನೊಂದೊ (ದ್ದ?) ರುಷವು ಸಾಲದೆ ಕಂಡು ಬಂದ್ವಾರ್ತೆಯ ಖರೆಯ ನಾ ಹೇಳುವೆ ಸಂದೇಹ ಮಾಡದಿರೆ।।12।। ಕೇಳಿ ಸತ್ಯಭಾಮೆ ತಾಳಲಾರದೆ ಮುನಿಪಾದದ ಮ್ಯಾಲೆಬಿದ್ದು ಹೇಳಿ ಉಪಾಯ ಮುಂದಕೆ ಪೋಗೋ ಶ್ರೀಕೃಷ್ಣ ತಾನೊಲಿದಿರುವಂದದಿ।।13।। ದಾನವಾಂತಕನ ನೀ ದಾನವ ಮಾಡಲು ದಾವಜನ್ಮಕು ನಿನ್ನನು ತಾನಗಲದೆ ಮುಂದೆ ಸೇರಿಕೊಂಡಿರುವೊ ಉಪಾಯ ಹೇಳುವೆನೆಂದನು।।14।। ರಂಗರಾಯನ ಕರೆತಂದು ಕೊಟ್ಟವರಿಗೆ ಹಿಂಗದೆ ಸೌಭಾಗ್ಯವ ಎಂದೆಂದಿಗವರ ರಕ್ಷಿಸುವೋನೆಂದೆನುತಲಿ ಅಂಗನೆಯರನಟ್ಟಿದಳು।।15।। ದೂತೇರ ಸಹಿತಾಗಿ ಬಂದು ತಾ ಭರದಿಂದೆ ಪ್ರೀತಿಲೆ ಸತ್ಯಭಾಮಮಾತುಳಾಂತಕ ನಮ್ಮ ಮನೆಗೆ ಬಾರೆನುತ ಶ್ರೀನಾಥನೆಯೇಳೆಂದಳು।।16।। ಮಡದಿ ರುಕ್ಮಿಣಿ ಭಾಮೆ ಮಂದಿರಕ್ಹೋಗುವೆ ಕಡುಕೋಪ ಮಾಡದಿರೆ ತಡೆಯದೆ ನಾಳೆ ಬರುವೆನೆಂದು ಶ್ರೀಕೃಷ್ಣಗರುಡನ ಹೆಗಲೇರಿದ।।17।। ವಾರಕಾಂತೆಯರು ಬಾಜಾರ ಮಧ್ಯದಿ ಸೋಳಸಾವಿರ ಸತಿಯರನೆ ವಾರೆನೋಟದಿ ನೋಡಿ ನಗುತ ಸತ್ಯಭಾಮೆ ಬಾಗಿಲ ಮುಂದಿಳಿದ।।18।। ಎದುರಿಗೆ ನಿಂತ ತಾ ಚೆದುರೆ ಸತ್ಯಭಾಮೆ ಪದುಮ ಪಾದಕೆ ಎರಗಿ ಮುದದಿಂದ ಮುದ್ದು ಶ್ರೀಕೃಷ್ಣನ ಮುಂಗೈಯ್ಯ ಪಿಡಿದು ತಾ ನಡೆದಳಾಗ।।19।। ಕೃಷ್ಣರಾಯನೆ ನಿನ್ನ ಕೊಟ್ಟೇನು ದಾನವ ಬಿಟ್ಟೆನ್ನ ಅಗಲದಂತೆ ಸತ್ಯಭಾಮೆಯ ನೋಡಿ ನಗುತ ಈಕಾರ್ಯ ಆಗತ್ಯಮಾಡೆಂದೆನುತ।।20।। ಎರೆದು ಪೀತಾಂಬರವುಡಿಸಿ ಮಾಣಿಕ್ಯದ ಆಭರಣವ ತಂದಿಟ್ಟಳು ತರಿಸಿ ತಾಂಬೂಲ ದಕ್ಷಿಣೆಯನ್ನು ಬ್ರಾಂಬರ ಕರೆಸಿದಳಾಕ್ಷಣದಿ।।21।। ಆಚಾರ್ಯ ನೀವ್ ಬನ್ನಿ ವಾಸುದೇವನ ದಾನ ಈ ಕ್ಷಣದಲ್ಲೆ ಕೊಡುವೆ ನಾಶರಹಿತ ನಮ್ಮ ಮನೆಯೊಳಗಿರಲಿಕ್ಕೆ ಗ್ರಾಚಾರವೇನೆಂದರು।।22।। ವಿದ್ಯಾರ್ಥಿಗಳು ಬನ್ನಿ ಮುದ್ದು ಶ್ರೀಕೃಷ್ಣನ ವಿಧ್ಯುಕ್ತದಲಿ ಕೊಡುವೆ ಮೂರ್ಜಗದೊಡೆಯ ತಾ ಮಂದಭಾಗ್ಯರ ಮನೇಲಿದ್ದಾನ್ಯಾತಕೆ ಎಂದಾರೆ।।23।। ಭಟ್ಟರೆ ನೀವ್ ಬನ್ನಿ ಸೃಷ್ಟಿಪತಿಯ ದಾನ ಕೊಟ್ಟು ಬಿಡುವೆನೆಂದಳು ಅಷ್ಟದರಿದ್ರಗಾಲಕ್ಷ್ಮೀವಲ್ಲಭ ದಕ್ಕುವೊನಲ್ಲೆಂದರು।।24।। ಯತಿಗಳೆ ನೀವ್ ಬನ್ನಿ ಪೃಥಿವಿಗೊಡೆಯ(ನನು) ಹಿತದಿ ದಾನವ ಕೊಡುವೆ ಗತಿಯಿಲ್ಲ ನಮಗೆ ಶ್ರೀಪತಿ ಸಲಹಲು ನಿನ್ನ ಪತಿ ಬ್ಯಾಡ ನಮಗೆಂದರು।।25।। ಋಷಿಗಳೆ ನೀವ್ ಬನ್ನಿ ಶಿಶುಪಾಲಾಂತಕನಾದ ವಸುಧೇಶನ ನಾ ಕೊಡುವೆ ಅಶನ ವಸನ ಬಿಟ್ಟು

ಅಡವಿಲಿದ್ದವರಿಗೆ ವಶವಲ್ಲ ನಮಗೆಂದರು।।26।। ಸುರಮುನಿಗಳು ಬನ್ನಿ ಪರಮಪುರುಷ(ನನು) ತ್ವರಿತದಿಂದಲಿಕೊಡುವೆ ಇರುವೆಗೊಂದಾನೆಯ ಉರಲು ಕಟ್ಟಿದಂತೆ ತರವಲ್ಲ ನಮಗೆಂದರು।।27।। ಯಾಕೆ ವಲ್ಲಿರಿ ನೀವು ಈ ಕಮಲೇಶನ ನಾ ಕೊಡುವೆನೆಂದರೆ ಲೋಕಹಿಡಿವೊ ಹೊಟ್ಟೆಗ್ಹಾಕಿ ಅನ್ನವ ಮುಂದೆ ಸಾಕುವೊರ್ಯಾರೆಂದರು।।28।। ಪುಂಡರೀಕಾಕ್ಷ ಬ್ರಹ್ಮಾಂಡ ನಾಯಕನ ನಾ ರಂದ ನಿಮಗೆ ಕೊಡುವೆ ಕಂಡಕಂಡವರಿಗೆ ಗಂಡನ ಕೊಡುವೋದು ಕಂಡಿಲ್ಲ ಜಗದೊಳಗೆ।।29।। ದಾರು ಹಿಡಿಯರೆನ್ನ ಪ್ರಾಣಬಿಡುವೆ ಮುನಿ ನೀಯೆನ್ನ ಗತಿಯೆಂದಳು ಜಾರ ಚೋರನು ಗೊಲ್ಲರೆಂಜಲುಂಡವನ ನಾಯೇನು ಮಾಡಲಿ ಎಂದನು।।30।। ಪರಮಕ್ಲೇಶಗಳಿಂದ ಪಾದದಮ್ಯಾಲ್ ಬಿದ್ದು ಹೊರಳುತಿರುವೋ ಭಾಮೆಯ ಕರುಣದಿಂದಲಿ ಕರಪಿಡಿದೆಬ್ಬಿಸುತ ದಾನ ಕೊಡು ಎನಗೆಂತೆಂದನು।।31।। ತಾರೆ ತಾರೆನಗೆ ತಮಾಷೆಮಾಡುವೆ ತಾಯಿ ಈರೇಳು ಲೋಕದಲ್ಲಿ ಆ ಪಾರಮಹಿಮನ ಅಂಗೈಯಲ್ಲಿಟ್ಟು ಕೊಂಡು ತೋರುವೆ ಜನರಿಗೆಲ್ಲ।।32।। ಮುತ್ತು ಮಾಣಿಕದ ಮಂತ್ರಾಕ್ಷತೆ ತಾಂಬೂಲ ದಕ್ಷಿಣೆ ಸಹಿತವಾಗಿ ಮುಚ್ಚಿ ಮೂರ್ಜಗದೊಡೆಯನ ಮುನಿಕೈಯ್ಯಲ್ಲೆ ಕೊಟ್ಟು ತಾನೆರಗಿದಳು।।33।। ಕೃಷ್ಣ ಏಳೆನುತ ಕೃಷ್ಣಾಂಜನ ಪೆಟ್ಟಗೆ ಇಟ್ಟುಕೊ ಹೆಗಲ ಮ್ಯಾಲೆ ಭಕ್ತವತ್ಸಲನೆಂದೆನಿಸಿಕೊಂಡ ಕಾರಣ ಭೃತ್ಯನಾಗಿರು ಯೆಂದನು।।34।। ಹಿಂದೆ ಉಳಿಯದಿರು ಮುಂದೆ ನೆಡೆಯದಿರು ತಂಬೂರಿ ತೆಗೆದುಕೊಳ್ಳೊ ರಂಭೆ ರುಕ್ಮಿಣಿ ಬಾಮೇಲ್ಲಂಬಲ ಬಿಟ್ಟರು ತಂದೆತಾಯರ ಧ್ಯಾನವ।।35।।ಹರಿಯು ನಾರಂದ ತಾ ತೆರಳಿ ಪೋಗುತಲಿರೆ ನಯನದಿ ಜಲವ ತುಂಬಿ ಇದುಯೇನು ಸೋಜಿಗಮಾಡಿ ಶ್ರೀಕೃಷ್ಣನ ಕರೆದೊಯ್ದು ತಾನೆಲ್ಲಿಗೊ।।36।। ಕೃಷ್ಣ ಕೃಷ್ಣನುಯೆಂದು ಘಟ್ಟಿಸಿ ತನ್ನೆದೆ ಕೃಷ್ಣನಾಳಾಪದಿಂದೆ ಕೃಷ್ಣನಿಲ್ಲದ ಪ್ರಾಣ ಬಿಟ್ಟು ಹೋಗಲೆಂದು ಪಟ್ಟೆಮಂಚದಿ ಬಿದ್ದಳು।।37।। ರೋಹಿಣಿ ಬಲರಾಮೇಶೋದ ದೇವಕಿ ವಾಸುದೇವ ಯಾದವರು ಕೂಡಿ ಸೋಳಸಾವಿರದಷ್ಟು ಭಾರ್ಯೇರು ಒಂದಾಗಿ ಬಾಯಿಬಿಡುತ ಬಂದರು।।38।। ಎನ್ನ ಕೂಸಿನ ದಾನ ಕೊಡಲಿಕ್ಕೆ ನಿನಗೀಗೆ ಇನ್ನು ಸ್ವತಂತ್ರವೇನೆ ಚೆನ್ನವಾಯಿತೆ ಸತ್ಯಭಾಮೆಯೆ ನೀ ಎನ್ನ ಚೆನ್ನನ ತೋರೆಂದಳು।।39।। ನಂದ ಯಶೋಧೆಯಕಂದನ ಕೊಡಲಿಕ್ಕೆ ನಿಂದು ಸ್ವತಂತ್ರವೇನೆಚೆಂದವಾಯಿತೆ ಸತ್ಯಭಾಮೆಯೆ ನೀ ಎನ್ನ ಕಂದನ ತೋರೆಂದಳು।।40।। ದಿಕ್ಕುದಿಕ್ಕಿಗೆ ನೆಡದವು ಗಜ ತುರಗ ಪಲ್ಲಕ್ಕಿ ಕಾಲಾಳುಗಳು ಸಿಕ್ಕ ನಾರಂದ ಶ್ರೀಕೃಷ್ಣನ ಬಿಡಿರೆಂದು ಎತ್ತಿ ತಂದರು ಮನೆಗೆ।।41।। ಮಾಡಿದ ದಾನ ಹಿಂದಕೆ ಸೆಳೆದೊಯ್ವಂಥ ಯಾದವರೆಂದೆನುತ ಈರೇಳು ಲೋಕದೊಳಗೆ ನಿಮಗಪಕೀರ್ತಿ ಸಾರುತ ತಿರುಗೇನೆಂದ।।42।। ರಂಗರಾಯನ ತೂಕ ಬಂಗಾರ ಕೊಡುವೆ ಶುಭಾಂಗನ ಬಿಡಿರೆನುತ ಅಂಗನೆಯರು ತಮ್ಮ ಸೆರಗೊಡ್ಡಿ ಬೇಡುತ ನಾ ರಂದಗೆ ಎರಗಿದರು।।43।। ಮುತ್ತು ಮಾಣಿಕ್ಯ ಚಿನ್ನ ಸರ ಪದಕವು ನವರತ್ನದಾಭರಣಗಳು ಮಕ್ಕಳ ಬಾಲದೊಡಿಗೆ ತಂದ್ಹಾಕಿದರೂ ಶ್ರೀ ಕೃಷ್ಣ ತಾ ಜಡದಿರುವ।।44।। ಸರಿಗೆ ಬಳೆಯು ನಾಗಮುರಿಗೆ ಕಠಾಣಿಯು ಸರಪದಕದ ರಾಶಿಯು ಸರಿಯಾಗದೆಂದರಿದ್ದರದಿ ರುಕ್ಮಿಣಿಯನು ಕರೆಯ ಬಂದರು ಬ್ಯಾಗನೆ।।45।। ಎದ್ದು ರುಕ್ಮಿಣಿ ತಾ ವೃಂದಾವನ ಪೂಜಿಸಿಪದ್ಮಾ ಕ್ಷಿ ನಡೆದು ಬಂದು ಬುದ್ಧಿವಂತಳು ಭಾಮೆ ಮಾಡಿದ ಕಾರ್ಯವ ತಿದ್ದುವೋರ್ಯಾ ರೆಂದಳು ।।46।। ಕೊಡುವೋರಿನ್ಯಾರು ಹಿಡಿವೋರ್ಯಾರು ದಾನವ ಬಿಡಿಸಿ ಕೊಂಬುವರು ದಾರು ಕೊಡೆ ಮಾಡಿ ಮಂದರ ಹಿಡಿದ ಸಮರ್ಥಗೆ ಇಡುವೋರ್ಯಾರಿ ಚಿನ್ನವ।।47।। ಮಕ್ಕಳಾಟಿಕೆಯೇನೆ ತಕ್ಕಡಿಯೊಳಗೆ ದೇವಕ್ಕಿ ಯಶೋದಗಿನ್ನು ಅಕ್ಕರವಾಗೇದೆಂದೆನುತ ಹಾಸ್ಯಗಳಿಂದೆ ನಕ್ಕಳೆ ರುಕ್ಮಿಣಿಯು।।48।। ತಕ್ಕಡಿಯೊಳಗಿದ್ದ ಚಿನ್ನವತೆಗೆಸಿ ತಂದಿಟ್ಟಳು ತುಳಸಿಯನ್ನು ಭಕ್ತರಾಧೀನ ಬಾಳ್ಹರುಷದಿ ನೋಡುತ್ತ ಚಕ್ಕನೆ ತಾನೆದ್ದನು।।49।। ಇಂದಿರೆಪತಿ ನಮಗೊಳಿದನೆಂದೆನುತಲಿ ದುಂದುಮಿ ಭೇರಿಗಳು ಮಂದಾರ ಮಲ್ಲಿಗೆ ಮಳೆಯ ಕರೆದರತಿ ಸಂಭ್ರಮವಾಗಿದ್ದರು।।50।। ಅರ್ಥಿಯಿಂದಲಿ ಮುದ್ದು ರುಕ್ಮಿಣಿಯನು ತೊಡೆ(ಯ)ಲಿಟ್ಟು ಯಶೋಧೆ ಬಂದು ಅಕ್ಕರದಿಂದಲಿ ದೇವಕ್ಕಿದೇವಿಯು ಸೊಸೆ(ಯ)ನಪ್ಪಿಕೊಂಡಳು ಬ್ಯಾಗನೆ।।52।। ವಸುದೇವ ನಂದಗೋಪನು ನಸುನಗುತಲಿ ಸೊಸೆಯ ಕೊಂಡಾಡುತಿರೆ ಮಿಸುಣಿ(ನಿ ?) ಮಾಣಿಕ್ಯದಂತೆ ಹೊಳೆವೊ ರುಕ್ಮಿಣಿ ನೀನು ದೆಸೆವಂತ ಳಾಗೆನುತ।।52।। ಮುಡಿಯ ಮುಂದಕೆ ಬಾಗಿ ನಿಂತ ಭಾಮೆಯ ಕೃಷ್ಣ ಕಡು ಹರುಷದಿ ನೋಡುತ ಪಿಡಿದು ಕರವ ತನ್ನ ತೊಡೆಯಮ್ಯಾಲೇರಿಸಿ ಬಿಡು ಭಯಬ್ಯಾಡೆಂದನು।।53।। ದಾರೇನೆಂದರು ಎನ್ನ ಪ್ರಾಣದರಸಿ ಭಾಮೆ ಹೇಳಿದ ನಾರಂದನು ಮಾಡಿದಳೆನ್ನ ದಾನವನೀಗೆ ಕೈವಶವಾದೆ ನಾನೆಂತೆಂದನು।।54।।

ರೂಢಿಗೊಡೆಯ ನಿನ್ನಲಾಡಿದ ಪಂಥವ ಮಾಡಿಗೆದ್ದೆನು ಎನುತ ನೀಡಿದ್ಯೋ ಎನಗೊಂದು ತುಳಿಸಿಯೆಂದೆನುತ ಮಾತಾಡಿ ತಾ ನಗುತಿದ್ದನು॥55॥ ಕರುಣಾಸಮುದ್ರ ನೀ ಕರುಣಿಸಬೇಕೆಂದು ಕರವಮುಗಿದು ನಿಂತನು ಪರಮದಾಯಾಳು ನೀ ಪಾಲಿಸಬೇಕೆಂದು ತೆರಳಿದ ನಾರಂದನು॥56॥ ಧರೆಯ ಮ್ಯಾಲೆ ಭಾಮೆ ಹರಿಯ ದಾನವಕೊಟ್ಟ ಚರಿತವ ಪೇಳುತಿರೆ ಧರ್ಮಕಾಮ್ಯಾರ್ಥ ಭೀಮೇಶ ಕೃಷ್ಣನು ನಮಗೊಲಿದು ತಾ ಕೊಡುತಿರುವ॥57॥

ಯದುಕುಲೇಶನೇ ಸ್ವಾಮಿ ಪರಶುರಾಮನೇ (ಶ್ರೀಕೃಷ್ಣ ಪಾರಿಜಾತ)

ಯದುಕುಲೇಶನೇ ಸ್ವಾಮಿ ಪರಶುರಾಮನೇ। ಮುದದಿ ನೆನೆವೆನೂ ಕೃಷ್ಣನ ಭಜನೆ ಪೇಳ್ವೆನೂ। ದ್ವಾರಾವತಿಯೊಳು ಹದಿನಾರು ಸಾವಿರ ಸ್ತ್ರೀಯರೊಡನೇ ಸುಖದಿ ಆಳುತಿದ್ದನೂ॥1॥ ಸುಜನರೆಲ್ಲರೂ ಕೃಷ್ಣನ ಅಜನ ಪಿತನೆಂದು ಭಜನೆ ಮಾಡಲೂ ಅಲ್ಲಿ ದ್ವಿಜನು ಬಂದನೂ॥2॥ ಬಂದ ವಿಪ್ರಗೇ ಆಸನ ತಂದು ಹಾಸಿದಾ। ವಂದನೆ ಮಾಡಿದಾ ಸುಖವೆಂದು ಕೇಳಿದಾ॥3॥ ಅಷ್ಟ ಲೋಕವು ಬಹಳ ನಿಷ್ಟೆಲಿಹುದು। ಕೃಷ್ಣರಾಯಗೇ ಹೂವ ಕೊಟ್ಟನಾರದಾ। ಪಾರಿಜಾತದ ಹೂ ಯಾರಿಗೆನುತಲಿ ಗೋಪಾಲ ಕೇಳಿದ ವಿಚಾರಮಾಡಿದ॥4॥ ಹೂವು ಯಾರಿಗೇ ನಿನ್ನ ಮಡದಿಗೇ ಮೆಚ್ಚಿಬಂದ ರುಕ್ಮಿಣೀ ದೇವಿಗೆಂದನೂ॥5॥ ನಾರಿ ರುಕ್ಮಿಣೀ ನೀನ್ಹಿಗೆ ಬಾರೆಂದು। ಓರೆ ತುರುಬಿಗೇ ಪಾರಿಜಾತ ಮುಡಿಸಿದಾ॥6॥ ಪಾರಿಜಾತದಾ ಪರಿಮಳ ಊರು ತುಂಬಿತೂ ಕೇರಿಕೇರಿಕೇ ಹರುಷ ಮೀರಿಹೋಯಿತು॥7॥ ಹೋಗದೂರಿಗೇ ದಾರಿ ತೋರ್ವದುಂಟೇನೋ ಚೋರತನವೇಕೋ ಪೇಳೊ ನೀಲವರ್ಣನೆ॥8॥ ಎದ್ದ ನಾರದಾ ಅಲ್ಲಿ ಸುದ್ದಿ ಮಾಡದೇ ಮುದ್ದು ಸತ್ಯಭಾಮೆ ಮನೆಗೆ ಮತ್ತೆ ಬಂದನೇ॥9॥ ದೂತಿ ಬಂದಳೂ ಪರಮ ಪ್ರೀತಿಯಿಂದಲೇ ಮಾತನಾಡುತಾ ಮುನಿಗೆ ಮಣೆಯ ನೀಡುತಾ॥10॥ ಯೋಗಿ ನಾರದಾ ಸಾಗಿ ಸತ್ಯಭಾಮೆಗೆ ಇಲ್ಲಾದ ವಾರ್ತೆಯನೆಲ್ಲ ಬೇಗ ಅರುಹಿದ॥11॥ ಏನಹೇಳಲೇ ರಂಗ ಅದಾವ ಚೋರನೇ ಒಂದು ಹೂವ ತಂದನೇ ರುಕ್ಮಿಣೆಗೆ ಮುಡಿಸಿದಾ॥12॥ ಕೇಳಿದಾಕ್ಷಣಾ ಭಾಮೆ ಬಹಳ ಮನದಲೀ ತಾಳಲಾರದೇ ಮನದಿ ಘಾಸಿಕೊಂಡಳು॥13॥ ಒದ್ದು ಮಂಚವ ಥಟ್ಟನೆದ್ದು ಕುಳಿತಳೇ ಬಿದ್ದು ಬೆವರ್ತಳೇ ಆಕೆ ಪದ್ಮಮುಖಿಯಳೇ॥14॥ ದ್ವಾರೆದ್ದರಡೆಯೂ ಮುತ್ತಿನ್ಹಾರಭಾರವೂ। ಬಾರಿಬಾರಿಗೆ ತೆಗೆದು ದೂರ ಒಗೆದಳೇ॥15॥ ವಜ್ರದುಂಗುರ ಕಾಲಗೆಜ್ಜೆ ಸರಪಣಿ ಗುಜ್ರಿಮಿಂಟಿಕೆ ಹೆಜ್ಜಿಂದೆಜ್ಜೆಗೊಗೆದಳೆ॥16॥ ವಂಕಿಸರಿಗೆಯೂ ಚೆಲುವ ನಾಗಮುರಿಗೆಯೂ ಕಂಕಣ ಚೂಡ್ಯವೂ ಬಿಂಕದಿಂದ ಒಗೆದಳೇ॥17॥ ಮೇಲೆ ಪರ್ವತಾ ಹತ್ತಿ ಹಾರಿ ಬೀಳಲೋ ಇನ್ಯಾರಿಗ್ಹೇಳಲೋ ಮನದ ಘೋರತಾಪವ॥18॥ ಒಡನೆ ಎಂದಳೇ ರುಕ್ಮಿಣಿ ಪಡೆದಳ್ ಭಾಗ್ಯವ ಅಡವಿ ಸೇರಲೋ ದೊಡ್ಡಮಡುವ ಧುಮುಕಲೋ॥19॥ ಲೋಕ ಚಾರಕಾ ನರರ ಸುದ್ಧಿಯಾ ಯಾಕೆ ಹೇಳಿದ್ಯೋ ಎಲಾ ಕಾಕ ಮನುಜನೇ॥20॥ ಇಷ್ಟು ಚೇಷ್ಟೆಯನೆಲ್ಲ ಕಂಡು ನಾರದಾ ಕೃಷ್ಣರಾಯಗೇ ಸುದ್ದಿ ಮುಟ್ಟಿಸೀದನೇ॥21॥ ಏನು ನಾರದಾ ನಿನ್ನ ಚಾಡಿಗಾರಿಕೇ ಇಲ್ಲ್ಹೂವ ಕೊಟ್ಟೆಯೋ ಇಲ್ಲಿ ಹೇಳ ಬಂದೆಯೊ॥22॥ ಚಾಡಿ ಹೇಳದೇ ನಿನ್ನ ಪ್ರಾಣ ನಿಲ್ಲದೂ ಬಾಳು ಇಷ್ಟಾಯಿತೆಂದು ಸ್ವಾಮಿ ನಕ್ಕನೂ॥23॥ ಹಿಡಿವ ಕಹಳೆಯೂ ಬಡಿವ ತಮಟೆ ಭೇರಿಯೂ ಒಡೆಯೆ ಕೃಷ್ಣನೂ ಭಾಮೆ ಮನೆಗೆ ಬಂದನೂ॥24॥ ಬಂದ ಕೃಷ್ಣನು ಹೊರವಿಂಕ್ ನಿಂದನೇ ಆಕೆ ಸುಳಿವಲ್ ಕಾಣದೇ ಒಳವಿಂಕ್ ಪೋದನೆ॥25॥ ಹೊರವಿಂಕ್ ನಿಂತರೆ ಆಕೆ ಸುಳಿವಲ್ ಕಾಣದೇ ಒಳವಿಂಕೇಪೋದನೇ ಆಕೆ ಬಳಿಯಲ್ ಕುಳಿತನೇ॥26॥ ಬಳಿಯಲ್ ಕುಳಿತರೇ ಮನಸು ಕರಗದಾಕೆಗೇ ಶಿರವ ತಗ್ಗಿಸಿದ್ಲು ಸೆರಗ ಮರೆಯಮಾಡಿದ್ಲು॥27॥ ಮಾನುನೀಯಳೇ ಧಾರುಣೀಯಳೇ ಈಕೆಗ್ಯಾರೇನೆಂದರು। ಎನಗೆ ಮೋರೆ ಮಾಡಿದ್ಲು॥28॥ ಸಾಕು ಕೃಷ್ಣನೆ ನಿನ್ನ ಕಾಕುಬುದ್ಧಿಯ ಸಾಕು ನಡೆನಡೆ ಸರಿಯ ಸವತಿಯಾ ಕಡೆ॥29॥ ಸರಿಯ ಸವತಿಗೇ ನಾನು ಪರಿಯಮಾಡಿದೆ ಅರಿಯನೆಂದರೇ ಬಹಳ ಕಪಟ ಮಾಡಿದೆ॥30॥ ಅಲ್ಲದಿದ್ದರೆ ಅವಳಲ್ಲಿ ಸೇರಿಕೊ ಇಲ್ಲಿಗ್ಯಾತಕೇ ಬಂದೆ ಕಳ್ಳಕೃಷ್ಣನೆ॥31॥ ಒಂದು ಹೂವಿಗೆ ಭಾಮೆ ಇಷ್ಟು ಮುನಿವುದೇ ಇಂದ್ರ ಲೋಕದ ಹೂವ ತಂದು ಮುಡಿಸುವೆ॥32॥ ಸತ್ಯಭಾಮೆಯಾ ಹೊಸ್ತಿಲೊಳಗೆ ನಿಲಿಸುವೆ ರತ್ನದಾಸನ ಹಾಸಿ ಲತ್ತವಾಡುವೆ॥33॥ ಕಡಿದ

ಹಾರವಾ ತೆಗೆದು ಕೊರಳಿಗ್ಹಾಕಿದ ತುರುಬಕಟ್ಟಿದಾ ಕರದೊಳು ಕಂಕಣಗಳಿಡಿಸಿದ॥34॥ ಬಿದ್ದಾಭರಣವ ತೆಗೆದು ಭಾಮೆಗಿಡಿಸಿದಾ ಮುದ್ದು ಮುಖವನೇ ತೊಳೆದು ತಿಲಕವಿಡಿಸಿದಾ॥35॥ ಕೃಷ್ಣ ಬಂದನೇ ಪ್ರಖ್ಯಾತ ಬಂದನೇ ಪರಿಜಾತವೃಕ್ಷ ತಂದನೇ ಸತ್ಯಭಾಮೆಗಿತ್ತನೆ॥36॥ ಕೃಷ್ಣರಾಯನ ಚರಿತೆ ಹೇಳಿದವರಿಗೆ ಸಾಯುಜ್ಯ ಮುಕುತಿಯ ಕರೆದುಕೊಡುವನು॥37॥

ಈ ಧರಣಿಯೊಳ್ ಹದಿನಾರುಸಾವಿರ ಮಂದಿ (ಶ್ರೀಕೃಷ್ಣ ಪಾರಿಜಾತ)

ಈ ಧರಣಿಯೊಳ್ ಹದಿನಾರುಸಾವಿರ ಮಂದಿ। ಆಳುತ ದ್ವಾರಕೆಯಲ್ಲಿ। ಶ್ರೀರಮಣನು ರುಕ್ಮಿಣಿದೇವಿ ಸಹಿತ। ವಿನೋದದಿ ಕುಳಿತಿದ್ದ ಹರಿಯು॥1॥ ಅಂಬುಜೋದ್ಭವನ ಅಂಕದಲುದಿಸಿದ ಸುತ। ಚೆಂದಚೆಂದ ವೀಣೆ ಪಿಡಿದು। ಕಂದರ್ಪಪಿತ (ನಲ್ಲಿಗೆ) ನಲಿನಲಿದಾಡುತ। ಬಂದ ನಾರಂದ ಹರುಷದಲಿ॥2॥ ಬಂದ ನಾರಂದನ ಕಂಡು ಕಮಲನಾಭ। ಕುಂದಣ ಮಣೆ ತಂದಿರಿಸಿ। ಚೆಂದದಿಂದಲಿ ಅರ್ಘ್ಯ ಪಾದಪೂಜೆಯ ಮಾಡಿ ನಾ। ರಂದಗೆ ಎರಗಿದನಾಗ॥3॥ ದೇವಾಧಿದೇವನೆ ದೇವಲೋಕದಿ ಸುತ್ತಿ। ಈ ಪಾರಿಜಾತವ ತಂದೆ। ದೇವಿ ರುಕ್ಮಿಮಿಗೀಗ ಮುಡಿಸೆಂದು ನಾರಂದ। ಸ್ವಾಮಿಯ ಚರಣಕ್ಕರ್ಪಿಸಿದ॥4॥ ತಕ್ಷಣದಿ ಜಗನ್ಮಾತೆ ಮಾಲಕ್ಷುಮಿ। ಸಾಕ್ಷಾತ್ ಶ್ರೀನಾರಾಯಣನು। ವಕ್ಷಸ್ಥಳದಲಿ ಹೊಂದಿರುವ ರುಕ್ಮಿಣಿಯನು। ಸ್ತೋತ್ರಮಾಡಿದನು ನಾರದನು॥5॥ ಕಡಲಶಯನ ಕಡೆಗಣ್ಣ ನೋಟಗಳಿಂದ। ಕಡುಮುದ್ದು ಸುರಿವೊ ರುಕ್ಮಿಣಿಯ। ಬಡನಡುವಿನ ಭಾಮಿನಿರನ್ನೆ ಬಾರೆಂದು। ತೊಡೆಯ ಮ್ಯಾಲಿಟ್ಟ ಶ್ರೀಕೃಷ್ಣ॥6॥ ದುಂಡುಮಲ್ಲಿಗೆ ಗೊಂಡ್ಯಚೌರಿ ರಾಗಟೆ ಜಡೆ। ಬಂಗಾರದ ಸಿರಿಮುಡಿಗೆ। ಅಂಗನೆ ರುಗ್ಮಿಯಾಲಿಂಗನೆ ಮಾಡುತ ರಂಗ। ತಾ ಮುಡಿಸಿದ ಸತಿಗೆ॥7॥ ಸರಿಸವತೇರ ಬಿಟ್ಟು ಸುರಪಾರಿಜಾತವ। ಗುರುವಿಕೆಯಿಂದ ನೀ ಮುಡಿದೆ। ಹರದಿ ಸತ್ಯಭಾಮೆಯ ಕೇಳಿ ಮುನಿದಿರಿನ್ನು। ಅರಿಯೆನು ನಾ ಇದಕೆ ಉಪಾಯ॥8॥ ಗಾಡಿಕಾರನು ಕೃಷ್ಣ ಆಡುವೊ ಮಾತನು। ಕೇಳಿರುಕ್ಮಿಣಿ ನಗುತಿರಲು। ಓಡುತ ಬಂದು ನಾರದ ಸತ್ಯಭಾಮೆ। ಗಲ್ಲದ ವಾರ್ತೆಗಳರುಹಿದನು॥9॥ ಅಲ್ಲಿಂದ ದೇವಲೋಕವ ಸುತ್ತಿ ತಂದೇನೆ। ಚೆಲ್ವೆನಗೆ ತಕ್ಕ ಕುಸುಮ। ಗೊಲ್ಲ ಕೃಷ್ಣನ ಕೈಯಲ್ಲಿ ಕೊಟ್ಟರೆ ತನ್ನ ನಲ್ಲೆ। ರುಕ್ಮಿಣಿಗೆ ಮುಡಿಸಿದನು॥10॥ ಕೇಳುತ ಭಾಮೆ ತಲ್ಲಣಿಸಿ ಕೋಪಗಳಿಂದ। ಹೇಮಮಾಣಿಕ್ಯದ್ವಜ್ರಭರಣ। ಹಾರ ಪದಕ ಕಠಾಣಿಮುತ್ತನೆ ಚೆಲ್ಲಿ। ಭೂಮಿಲಿ ಬಿದ್ದ್ಹೊರಳಿದಳು॥11॥ ಮಲ್ಲಿಗೆ ದವನ ಕ್ಯಾದಿಗೆ ಶಾವಂತಿಗೆ ಬಿಟ್ಟು। ಒಲ್ಲೆನೆಂದೊರೆಸಿ ಕಸ್ತೂರಿಯ। ವಲ್ಲಭನೊಲ್ಲದೀ ಸೊಗಸ್ಯಾತಕೆನುತಲಿ। ಗಲ್ಲದ್ವಿಳ್ಯವನುಗುಳಿದಳು॥12॥ ಸರ್ಪನಂದದಿ ಉಸುರ್ಹಾಕುತ ಭಾಮೆ ತಾ। ನೇತ್ರದಿ ಜಲವ ಸುರಿಸುತಲಿ। ಸರ್ಪಶಯನನೊಲ್ಲದೀ ದೇಹವ್ಯಾಕೆಂದು। ಪಟ್ಟೆ ಮಂಚದಲೊರಗಿದಳು॥13॥ ನಿಂತು ನೋಡುತ ಸತ್ಯಭಾಮೆ ಮಾಡುವೊದು ಇ। ನ್ನೆಂತು ಮಾಡಲಿಯಿದಕೆಂದು। ಅಂತರಗಂದಲಿ ಯೋಚನೆ ಮಾಡಿ ನಾರಂದ ಶ್ರೀ। ಕಾಂತನ ಮನೆಮಾರ್ಗ ಹಿಡದ॥14॥ ತಿರುಗಿ ಬಂದ್ಹರಿಯ ಮುಂದರುಹಿದ ನಾರಂದ। ತೊರೆವೋಳು ತನ್ನ ಪ್ರಾಣವನು। ಮರುಗುತ ಸೊರಗಿ ಬಿದ್ದಿರುವೊ ಭಾಮೆಯ ನೋಡಿ। ಕರುಣವಿಲ್ಲೇನೊ ಶ್ರೀಕೃಷ್ಣ॥15॥ ಮುನಿಯ ಮಾತನು ಕೇಳಿ ಮುಗುಳು ನಗೆಯ ನಕ್ಕು। ಈ ಪರಿ ಬವಣೆಗೆ ಒಳಗಾದೆ। ಧರೆಯ ಒಳಗೆ ಇಬ್ಬರ್ಹೆಂಡರಾಳುವೋರಿನ್ನು। ಪರಮ ಮೂರ್ಖರು ಅವರೆಂದ॥16॥ ಹೊದ್ದ ಪೀತಾಂಬರ ಅಲೆಯುತ ಶ್ರೀಕೃಷ್ಣ। ಹದ್ದನೇರದೆ ನಡೆಯುತಲಿ। ಮುದ್ದು ರುಕ್ಮಿಣಿಯ ಮುಂದಕೆ ಕರೆದ್ಹೇಳದೆ। ಎದ್ದು ಬಂದನು ಭಾಮೆಮನೆಗೆ॥17॥ ಅರ್ಕನಂತ್ಹೊಳೆಯುತ ಹೊಕ್ಕ ತನ್ನರಮನೆ। ಕಕ್ಕಾಬಿಕ್ಕ್ಯಾಗಿ ನೋಡುತಲಿ। ದಿಕ್ಕು ದಿಕ್ಕಿಗೆ ಬಿದ್ದಾಭರಣವಾರಿಸಿ ರತ್ನ। ದೆಕ್ಕಿಲೇ(?) ಬಂದು ತಾ ಕುಳಿತ॥18॥ ಮಿಂಚು ಸೂರ್ಯಗೆ ಮಿಗಿಲಾಗಿದ್ದ ಮುಖ ಬಾಡಿ। ಸಂಪಿಗೆ ಸರವ ಈಡ್ಯಾಡಿ। ಚಿಂತೆಮಾಡುವರೆ ಚಿನ್ನದ ಗೊಂಬೆ ಏಳೆಂದು। ಮಂಚದ ಮ್ಯಾಲೆ ತಾ ಕುಳಿತ॥19॥ ಬೆವರಿದ್ದ ಮುಖವ ಮುಂಜೆರಗಿಲಿಂದೊರೆಸುತ ಹ। ರವಿದ ಹಾರ ಹಾಕುತಲಿ। ಪರಮ ಪ್ರೀತಿಲಿ ತನ್ನ ಕರಗಳಿಂದ್ಹಿಡಿದೆತ್ತಿ। ನ್ನರಗಿಳಿ ಏಳೆಂದೆಬ್ಬಿಸಿದ॥20॥ ಸಿಟ್ಟಿಲಿಂದೆದ್ದು ಶ್ರೀಕೃಷ್ಣನ ಒಳೆಯಿಕ್ಕಿ ಬಿಟ್ಟವರಾರು ಈಗೆನುತ। ದೃಷ್ಟಿ ತೆಗೆದು ಕೋಟಿಸೂರ್ಯ ಪ್ರಕಾಶನ ಇ। ಕ್ಕದ್ಹಾಗೆವೆಯ ನೋಡಿದಳು॥21॥ ಇಷ್ಟು ಕ್ರೋಧಗಳ್ಯಾತಕೀ ಚಾಡಿ

ನಾರಂದ। ಹಚ್ಚಿ ಹೋದನೆ ಕದನವನು। ಸತ್ಯಭಾಮೆಯೆ ನೀನು ಮುನಿವೋರೆ ಎನ್ನಲ್ಲೊಂ। ದುದಿಷ್ಟಪರಾಧ ವಿಲ್ಲೆಂದ।।22।। ಇಷ್ಟು ಘಾತಕತನವಿಟ್ಟು ನಿನ್ನೊಟ್ಟೆಯ। ಲೆಷ್ಟುಪಚಾರ ಮಾತುಗಳೋ। ಸ(ಕ್ಕರೆಯಂ)ದದಿ ಸುರಿಸುವರೇನೊ ನಡೆ। ನಿನ್ನ ಪಟ್ಟದರಾಣಿ ಮಂದಿರಕೆ।।23।। ನಾರಿ ನಿನ್ನೊಡಗೂಡಿ ನಾಳುದಯಕೆ ಪೋಗಿ ಆ। ಸುರ ಪಾರಿಜಾತವನು ತಾರದಿದ್ದರೆ। ಎನ್ನ ತಾಯಿತಮ್ಮನ ಆಣೆ ಕೇ। ಳೆನ್ನ ಮಾತೆಂದ ಹರಿಯು।।24।। ಯಾರಾಣ್ಯೋ ಎನಗೇನು ನೀರೋಳು ಜಲಚರ ಪ್ರಾಣಿಗಳಂತೆ। ತಿರುಗುವಿಯೊ ಏನು ಸತ್ಯವೊ। ಗಿರಿಧರನ್ನೊ। ತ್ತುತಿರುಗುವಿ ವಿಚಾರಿ। ಪೋರುಂಟೆ ಲೋಕದಲಿ।।25।। ಹಡೆದವರ್‍ಯಾರೊ ನಿನ್ನೊಡೆದು ಕಂಬದಿ ಭೂಮಿ। ಹಡಿಯದಾಕಾಶಕ್ಕೆ ಬೆಳೆದ್ಯೊ। ಪೊಡಿವಿಯೊಳಗೆ ಮಾತೆ ಕೊಂದೆನೆಂದಪಕೀರ್ತಿ। ಬಿಡು ನಿನ್ನ ಪೋರ ಬುದ್ಧಿಗಳ।।26।। ಹಿಂದ್ವನವಾಸವ ತಿರುಗಿದ ಸೀತೆಗೆ ನಿಂದೆಯಿಟ್ಟಡವಿಗಟ್ಟಿದೆಯೊ। ಕೊಂದೆ ಕಂಸನ ನಾಚಿಕಿಲ್ಲದೆ ತಿರುಗಿವಿ। ಇಂದ್ಯಾವ ಕಲಿಭಯ ನಿನಗೆ।।27।। ಹೀನಗೊಲ್ಲರ ಎಂಜಲುಂಡು ನೀ ಬೆಳೆದೆಯೊ। ಧೇನು ಕಾಯುತ ತಿರುಗಿದೆಯೊ। ಮಾನಿನಿಯರ ಸೀರೆ ಕದ್ದ ಪುರುಷಗಿನ್ನು। ಮಾನಾಭಿಮಾನ ಗಳುಂಟೆ।।28।। ಬಾಳ ನಂಬಿದ್ದ ಭಕ್ತರ ಬಡವರ ಮಾಡಿದ್ದು। ಧನಗಳ ಸೆಳಕೊಂಡು। ಪಾನ ಅಶನ ಅಭಿಮಾನ ತೊರೆಸಿ ನಿನ್ನೊ। ರೊಳು ಸೆರೆಯ ಹಾಕುವಿಯೊ।।29।। ನಂಬದೆ ನಿನ್ನ ಬಿಟ್ಟವರ ನರಕದೊಳು। ಕುಂಭೀಪಾಕದಿ ಕುದಿಸುವಿಯೊ। ಒಂದೆರಡೇನೋ ನಿನ್ನಯ ಗುಣ ವರಣಿಸ। ಲೆಂದೆಂದೆನಗೆ ವಶವಲ್ಲ।।30।। ಹಡೆದ ಮಾತೆಯ ಬಿಟ್ಟು ಪಡೆದ ಮಾತೆಯ ಮುಂದೆ। ತುಡುಗತನದಿ ಗಡಿಗೆಯನ್ನು। ಕಡಗೋಲಿಂದೊಡೆದು ಕಾಲುಗಳ ಕಟ್ಟಿಸಿಕೊಂಡು। ಹುಡುಗತನವೆ ಎನ್ನಕೂಡ।।31।। ವಿಷದ ಹಾಸಿಕೆ ವಿಷ ಪೂತಣಿ ಮೊಲೆಯನ್ನುಂಡು। ವಿಷಮಡುವನು ಹಾರಿ ಕಲಕಿ। ವಿಷಕಂಠನೆದುರು ಸ್ತ್ರೀ ರೂಪವ ತೋರಿದಿ। ಪಶುಪತಿ ಭಯನಿನಗುಂಟೆ।।32।। ದಧಿಚೋರೆಂದ್ವೆಸರಾಗಿ ಡೊಂಕು ಸತಿಯ ಕೂಡಿ। ವಿಜಯನ ಮನೆ ಬಂಟನೆನಿಸಿ। ಪದುಮನಾಭಿಲಿ ಮಕ್ಕಳ್ಹಡದ ಪುರುಷಗಿನ್ನು। ಮದುವೆ ಹೆಂಡಿರು ನಿನಗ್ಯಾಕೋ।।33।। ಬಾಳ ಮಾತುಗಳ್ಯಾತಕಾಳುಹೋಗ್ದದಿ। ನಾರು ಸಾವಿರ ಮಂದಿ ಮಂದಿರಕೆ। ಏಳೆನ್ನ ಮನೆಲಿರಸಲ್ಲ ಹೋಗೆನುತಲಿ। ಪಾದಕ್ಕೆ ಬಂದೆರಗಿದಳು।।34।। ನಿಂದ್ಯಸ್ತುತಿಗಳಿಂದ ನಿಂತ ಸತಿಯ ನೋಡಿ। ಅಂಬುಜಾಕ್ಷನು ನಸುನಗುತ। ಇಂದ್ಹೋಗಿ ಇಂದ್ರಲೋಕದ ಪಾರಿಜಾತವ। ತಂದೇನೆ ನಿನ್ನ ಮಂದಿರಕೆ।।35।। ವನಿತೆ ಸತ್ಯಭಾಮೆ ಕೂಡಿ ಶ್ರೀಕೃಷ್ಣನು। ವಿನತೆಸುತನ ಹೆಗಲೇರಿ। ಘನತರವಾದೇಳು ದುರ್ಗ ಭೇದಿಸಿ ನರ್ಕಾಸು। ರನ ಸಂಹಾರ ಮಾಡಿದನು।।36।। ಹದಿನಾರು ಸಾವಿರ ಚೆದುರೆ ಚೆಲುವೆಯರ। ಪದುಮಾಕ್ಷನೋಡಿ ಸಂಭ್ರಮದಿ। ಗಜಗಮನೇರನೆಲ್ಲ ಗಜದ ಮ್ಯಾಲೇರಿಸಿ। ಮುಂದದಿಂದ ಕಳುಹೆ ದ್ವಾರಕೆಗೆ।।37।। ವಜ್ರಮಾಣಿಕ್ಯದ್ವಾಲೆ ಒಯ್ದು ಮಾತೆಗೆ ಕೊಟ್ಟು। ಸ್ವರ್ಗಾಧಿಪತಿ ಪೂಜೆಗೊಂಡು। ಮುದ್ದು ಸತ್ಯಭಾಮೆ ಕೂಡಿ ಶೋಬಿಸುವ ಅನಿ। ರುದ್ಧ ನಂದನವನದಲ್ಲಿ।।38।। ಟೊಂಕ್ಕೆ ಜರದಶಾಲನೆ ಸುತ್ತಿ ಶ್ರೀಕೃಷ್ಣ। ಕಂಠಿಪದಕ ಹೊಳೆಯುತಲಿ। ಚಂಚಲಾಕ್ಷಿ ಭಾಮೆ ಕೂಡಿ ಸಂಚರಿಸಿದ। ಮಿಂಚುಮೇಘವು ಕೂಡಿದಂತೆ।।39।। ಹೊಳೆವೊ ಮಾಣಿಕ್ಯದ್ವಜ್ರಹರಳಿನಂಥ ಪುಷ್ಪ। ಇಳೆಯೊಳಗಿಲ್ಲ ನೋಡೆನುತ। ನಳಿನಾಕ್ಷ ತನ್ನ ಸತಿಗೆ ತೋರಿ ಕರದಿಂದ। ಗರುಡನ ಹೆಗಲಲ್ಲೇರಿಸಿದ।।40।। ಸುರಲೋಕದ ವೃಕ್ಷಧರೆಯ ಮ್ಯಾಲೋಯ್ವಂಥ। ಮುರಹರನ್ವ್ಯಾಪಾರ ನೋಡಿ। ಸುರಪತಿ ಸಹಿತಷ್ಟದಿಕ್ಪಾಲಕರೆಲ್ಲ ಒದಗಿ ಬಂ। ದರು ಯುದ್ಧಕೆನುತ।।41।। ಗಜವಾಹನನು ಇಂದ್ರ ಕದನಕೆ ಬರುತಿರೆ। ಗಜವರದನು ನೋಡಿ ನಗುತ। ಮಡದಿ ಸತ್ಯಭಾಮೆ ಮಾಡಲಿನ್ನ್ಯಾಗೆಂದು। ಇದಕೆ ಉಪಾಯ ಹೇಳೆಂದ।।42।। ಏ ಪರಮಾತ್ಮ ಕೇಳಪಾರಮಹಿಮೆ ನಿನ್ನ। ಶ್ರೀಪಾದಪದ್ಮ ಕೆರಗುವೆನು। ಈ ಪಾರಿಜಾತ ಒಯ್ದೆನ್ನ ಅಂಗಳದಲ್ಲಿ। ಸ್ಥಾಪನೆ ಮಾಡೊ ಶ್ರೀಕೃಷ್ಣ।।43।। ಪಾರಿಜಾತವ ಬಿಟ್ಟು ಪಾರಾಜಿತನಾಗಿ ನೀ। ದ್ವಾರಕೆಯನು ಹೊಕ್ಕ ಕ್ಷಣದಿ। ನಾರಿ ರುಕ್ಮಿಣಿ ನಿನ್ನ ಮೋರೆ ನೋಡುತ ಹಾಸ್ಯಮಾಡಿ। ತಾ ನಗದೆ ಬಿಡುವಳೆ।।44।।ಪದ್ಮನಾಭನೆ ನಿನ್ನ ಕರುಣವೊಂದಿದ್ದರೆ ವಜ್ರ। ಪಾಣಿಯು ಎನಗೆದುರೆ। ಮುದ್ದು ಸತ್ಯಭಾಮೆ ಎದುರು ಬಾಣವ ಬಿಟ್ಟು। ಗೆದ್ದಳು ದಿಕ್ಕುಪಾಲಕರ।।45।। ಓಡುವೊ ಇಂದ್ರನ ನೋಡಿ ನಗುತ ಭಾಮೆ। ಮಾಡುತ ಮಂದಹಾಸ್ಯಗಳ। ಮಾಡಿ ಯುದ್ಧ ವೃಕ್ಷ ಒಯ್ಯದಿದ್ದರೆ ಶಚಿ। ನೋಡಳು ನಿನ್ನ ಮುಖವನು।।46।। ವತ್ಸ ಆಕಳ ಮೊಲೆಕಚ್ಚಿ ಒದಿವೋದಿನ್ನು। ಶಿಕ್ಷೆ ಮಾಡುವರೆ ಮಾತೆಯರು। ಸಾಕ್ಷಾತ ಶ್ರೀ ಜಗನ್ಮಾತೆಯೆನ್ನಪರಾಧ। ರಕ್ಷಿಸಬೇಕೆಂದನಾಗ।।47।। ಅಸುರ ಆವೇಶ ಕಳೆದು ದೇವೆಂದ್ರಗೆ।

ಶಚೀದೇವಿ ಗರುವವನೆ ಮುರಿದು। ಎಸೆವೊ ರತ್ನದ ಕಟ್ಟೆಸಹಿತಾಗಿ ವೃಕ್ಷವ ವಸುಧೆಯ। ಮ್ಯಾಲಿಳುಹಿದನು॥48॥ ಅದಿತಿಸುತಗೆ ಅನುಗ್ರಹಮಾಡಿ ಶ್ರೀಕೃಷ್ಣ। ಅತಿ ಭ್ಯಾಗದಲಿ ವನಬಿಟ್ಟು। ಸತಿ ಸತ್ಯಭಾಮೆಯ ಸಹಿತಾಗಿ ತಾನಾಗ। ಪೃಥ್ವಿಯ ಮಾರ್ಗವ ಹಿಡಿದ॥49॥ ಪಕ್ಷಿವಾಹನವೇರಿ ಸತ್ಯಭಾಮೆಯ ಕೂಡಿ। ವೃಕ್ಷದಿ ತಂದ ದ್ವಾರಕೆಗೆ। ಮತ್ತಾಗ ಪಾರಿಜಾತದ ಹೂವು ಭೀಮೇಶ। ಕೃಷ್ಣ ತಾ ಮುಡಿಸಿದ ಸತಿಗೆ॥50॥

ಮೂಷಿಕ ವಾಹನ ಬರುತಿರೆ (ಚೌತಿಚಂದ್ರದರ್ಶನ ದೋಷನಿವಾರಣಾಕಥೆ, ಶಮಂತೋಪಾಖ್ಯಾನ)

ಮೂಷಿಕ ವಾಹನ ಬರುತಿರೆ ಒಮ್ಮೆ। ಸರ್ಪವು ಬಂದಿತು ಎದುರಲ್ಲಿ। ಅಂಜಿದ ಸುಂಡಿಲಿ ಓಡಲು। ಗಣಪತಿ ಬಿದ್ದನು ಕೆಳಗೆ ಮಣ್ಣಲ್ಲಿ॥ ಪರಿಹಾಸದಲಿ ನಗುತಿರೆ ಚಂದ್ರನು। ಗಣಪತಿ ನೀಡಿದ ಶಾಪವನು। ಭಾದ್ರಪದ ಶುಕ್ಲದ ಚೌತಿಯ ದಿನವು। ಚಂದ್ರನ ದರುಶನ ಸಲ್ಲದು ಎಂದನು॥ ಸೂರ್ಯನ ಜಪಿಸಿ ಸತ್ರಾರ್ಜಿತನು ಗಳಿಸಿದ। ಶ್ಯಮಂತಕ ಮಣಿಯನು। ಭಕ್ತಿಲಿ ಮಣಿಯನು ಪೂಜಿಸೆ। ನಿತ್ಯವು ಕರೆಯಿತು ಹೊನ್ನಿನ ಮಳೆಯನ್ನು॥ ಕೃಷ್ಣನು ಕಣ್ಣನು ತಪ್ಪಿಸಿ ಮಣಿಯನು। ಇತ್ತ ಸೋದರ ಪ್ರಸೇನನಿಗೆ। ಮಣಿಯನು ಧರಿಸಿ ಪ್ರಸೇನ ಹೊರಟನು। ಬೇಟೆಯಾಡಲು ಕಾನನಕೆ। ಪ್ರಸೇನನು ಬರುತಿರೆ ಕಾಡಿನಲಿ। ಸಿಂಹವು ಕೊಂದಿತು ಅವನನ್ನು। ಜಾಂಬವಂತ ಎನ್ನುವ ಕರಡಿಯು। ನಂತರ ಕೊಂದಿತು ಸಿಂಹವನು। ಮಣಿಯನು ಒಯ್ದು ಕರಡಿಯು ಗುಹೆಯಲಿ ಕಟ್ಟಿತು ಅದನು ತೊಟ್ಟಿಲಿಗೆ। ಪ್ರಸೇನನು ಕೊಂದು ಮಣಿಯನು ಕದ್ದ ಅಪವಾದ ಕೃಷ್ಣನಿಗೆ। ತನಗೆ ಬಂದ ಕಳಂಕ ನೀಗಲು ಕೃಷ್ಣನು ಹೊರಟನು ಕಾಡಿಗೆ। ಕರಡಿಯ ಹೆಜ್ಜೆಯ ಗುರುತನು ಹಿಡಿದು ಕೃಷ್ಣನು ಹೊರಟನು ಗುಹೆಯೊಳಗೆ॥ ಜಾಂಬವಂತಗು ಕೃಷ್ಣಗು ನಡೆಯಿತು ಘೋರ ಯುದ್ಧವು ಗುಹೆಯೊಳಗೆ। ಜಾಂಬವಂತನು ಸೋತು ಮಣಿದನು ಮಗಳನು ಕೊಟ್ಟನು ಕೃಷ್ಣನಿಗೆ। ಭಾದ್ರಪದ ಶುಕ್ಲ ಚೌತಿಯ ದಿನದ ಚಂದ್ರ ದರುಶನದ ದೋಷವದು। ಗಣಪತಿಯನ್ನು ಪೂಜಿಸಿದಾಗ ಅಪವಾದವು ಪರಿಹಾರವು। ನಾರದ ನುಡಿದ ಮಾತನು ಕೇಳಿ ಕೃಷ್ಣ ಪೂಜಿಸಿದ ಗಣಪತಿಯ। ಕಥೆಯನು ಕೇಳಿದ ಎಲ್ಲರಿಗೂ ಗಣ ಪತಿ ನೀಡಲಿ ನೆಮ್ಮದಿಯ॥

ವಾರಿಜಗಂಧಿ ನೀ ಕೀರಭಾಷಿಣಿ (ಕೃಷ್ಣ ಗೋಪಿಕೆ ಸಂವಾದ)

ವಾರಿಜಗಂಧಿ ನೀ ಕೀರಭಾಷಿಣಿ ಮುದ್ದು। ನೀರೇ ನೀ ಬಾಗಿಲ ತೆರೆಯೇ। ದ್ವಾರದಿ ಧ್ವನಿಯನ್ನು ತೋರುವಾತನೆ ನೀನು ಯಾರು ಪೇಳಯ್ಯ ನಿನ್ನ ಪೆಸರು॥2ಸಾರಿ॥ ಕ್ರೂರ ಕಾಳಿಂಗನ ಹೆಡೆಯ ತುಳಿದು ಬಂದ ಧೀರ ಕಾಣೆಲೆ ವಾರಿಜಾಕ್ಷಿ। ಧೀರನೀನಾದರೆ ಹಾವನ್ನಾಡಿಸಿಕೊಂಡು ಗಾಡಿಗರ ಕೂಡೆ ಪೋಗು ಪೋಗಯ್ಯ॥2ಸಾರಿ॥ ॥1॥ ಪ್ರಾಣನಾಯಕಿ ನಾಗವೇಣಿ ಕೇಳೆಲೆ ನಾನು ವೇಣುಗೋಪಾಲನು ಕಾಣೆ। ವೇಣುಗೋಪಾಲ ನೀನಾದರೊಳ್ಳಿತು। ನಿನ್ನ ಠಾಣ್ಯಕ್ಕೆ ಪೋಗು ಪೋಗಯ್ಯ॥2ಸಾರಿ॥2॥ ಬಲ್ಲಿದರೊಳು ಬಲು ಬಲವಂತನೆನಿಸಿದ ಮಲ್ಲರ ಗೆಲಿದವ ಕಾಣೆ। ಮಲ್ಲರ ಗೆಲಿದವನಾದರೆ ಗರಡಿಗೆ ನಿಲ್ಲದೆ ಪೋಗು ಪೋಗಯ್ಯ॥2ಸಾರಿ॥3॥ ಕಾಂತೆ ಕೇಳ್ ಆನೊಂದು ವೃಷಭನ ಕಟ್ಟಿ ನೀಲಕಾಂತೆಯ ತಂದವ ಕಾಣೆ। ಅಂತಾದರೊಳ್ಳಿತು ಹೋರ್‍ಯಾಟಂಗಳ ಮಾಡಿ ಯಾದವರ ಸೇರಿ ಬದುಕಯ್ಯ ॥2ಸಾರಿ॥ ॥4॥ ಕಾದಿದ ಕರಡಿಯ ಗೆಲಿದು ಕಾಮಿನಿಯಳ ಮೋದದಿ ತಂದವಕಾಣೆ। ಆದರೊಳ್ಳಿತು ಘೋರಾರಣ್ಯದೊಳಿಪ್ಪ ವ್ಯಾಧರ ಸೇರಿ ಬದುಕಯ್ಯ॥5॥ ಕಮಲ ಚಕೋರ ಸನ್ನಿಭ ಕುಚಯುಗೆ ನಿನ್ನ ರಮಣ ಕೇಳೆಲೆ ವಾರಿಜಾಕ್ಷಿ। ರಮಣನೆಂದುದ ಕೇಳಿ ಕದವ ತೆರೆದು ಮತ್ತೆ ರಮಣಿಯು ನಿಂದಿರಲಾಗ।2ಸಾರಿ। ॥6॥

ಮಂಗಳಾರತಿ ಮಾಡಿರೆ ಮುದ್ದು (ಕೃಷ್ಣ ರುಕ್ಮಿಣಿ-ಭಾಮೆಗೆ-ಆರತಿ)

ಮಂಗಳಾರತಿ ಮಾಡಿರೆ ಮುದ್ದು ಅಂಗನೆಯರು ಪಾಡಿರೆ॥ಪ॥ ಮಂಗಳಾರತಿ ಮಾಡಿ ಅಂಗನೆಯರು ಪಾಡಿ। ರಂಗರುಕ್ಮಿಣಿ ಸತ್ಯಭಾಮೆಗೆ ಬಂಗಾರದ॥ಅ.ಪ॥ ಮಂಟಪದೊಳು ಸತಿಯರೆಂಟು ಮಂದಿಯ ಕೂಡಿ। ಒಂಟಿಮುತ್ತೊಳೆವೊ ವೈಕುಂಠಪತಿಗೆ ಬ್ಯಾಗ॥1॥ ವಾರಿಜಾಕ್ಷಿಯರ್ಹದಿನಾರು ಸಾವಿರ ಮಂದಿ। ಮಾರನಯ್ಯನ ಮುದ್ದು ಮಕ್ಕಳ ಸಹಿತಾಗಿ॥2॥ ಎಡಬಲ ತೊಡೆಯಲ್ಲಿ ಮಡದಿ ರುಕ್ಮಿಣಿಭಾಮೆ। ನಡುವೆ ಭೀಮೇಶಕೃಷ್ಣ ನಗುತಕುಳಿತನಾಗ॥3॥

ಬೆಳಗುವೆನಾರತಿಯ (ಹೆಣ್ಣು ಮತ್ತು ಗಂಡಿಗೆ) **ರಾಗ: ಕುರಂಜಿ**

ಬೆಳಗುವೆನಾರತಿಯ ಹರಿಗೇ ಬೆಳಗುವೆನಾರುತಿಯ। ಬೆಳಗುವೆನಾರತಿಯ ಸಿರಿಗೇ॥ಪ॥ ಕೇಶವ ಮಾಧವ ಶ್ರೀಕೃಷ್ಣನಿಗೆ। ರುಕ್ಮಿಣಿ ಸತ್ಯಭಾಮಾ ಸಮೇತ ಮೆರೆವೋ ಹರಿಗೆ॥1॥ .....ಭಾಮಾರಮಣಗೆ ರಾಜೀವಾಕ್ಷಗೆ ಭಾಮ ರುಕ್ಮಿಣಿ ಕೃಷ್ಣ ಸಮೇತ ಮರೆವೋ ಹರಿಗೆ॥2॥

ಶ್ರೀಕೃಷ್ಣನ ದೇವತಾರ್ಚನೆ

ಹರಿಯದರುಶನಕಾಗಿ ನಾರದರು ಬರಲು

ಹರಿಯದರುಶನಕಾಗಿ ನಾರದರು ಬರಲು। ಸಿರಿದೇವಿ ಹೊರಗಿನ ಬಾಗಲಲ್ಲಿರಲು॥ಪ॥ ಕರಕಮಲ ಮುಗಿದು। ದೊರೆಸಮಯವೇನೆನಲು। ನಾರೀಮಣಿ ಲಕುಮಿಯು ಅರುಹಿದಳಾಗ॥ಅ.ಪ.॥ ವರದೇವತಾರ್ಚನೆಗೆ ಅರಮನೆಯೊಳಗೆ। ಭರದಿಂದ ಕುಳಿತಿಹನು ಪರಮಾತ್ಮನು॥ ಸರಸಿಜೋದ್ಭವ ಮುಖ್ಯಸುರರಿಗೆ ದೊರೆಯೀತ। ಪರಮ ಆಶ್ಚರ್ಯವನರಿಯಬೇಕೆಂದು॥1॥ ಕಳವಳಿಸುತ ಮನೆಯೊಳಗೆ ದೂರದಿಂ ಕಂಡ। ಥಳಥಳಿಸುವ ರನ್ನ ಸಂಪುಟದಿ। ಕಲುಷದೂರರಾದ ಪ್ರಹ್ಲಾದನಾರದ ವರಧ್ರುವಬಲಿ ಅಂಬರೀಷಮುಖ್ಯರ ಪೂಜೆಗೈವುದನು॥2॥ ಹರಿದಾಸರ ಚರಣ ರಜಗಳ ತುಂಬಿಟ್ಟದನು। ತೆರೆದು ತೋರಿಸಿದನು ಮುನಿಗೆ ಪರಮಾತ್ಮನು ಪರಮಾನಂದಭರಿತನಾಗಿ ನಾರದ ಮುನಿಯು ಸಿರಿಪತಿ ಪುರಂದರ ವಿಠಲನನು ಸ್ತುತಿಸಿದ॥3॥

❖ ❖ ❖

ಶ್ರೀ ಕೃಷ್ಣ-ಮಹಾಭಾರತ (ಕೆಲವು ಪ್ರಮುಖ ಘಟನೆಗಳ ಪ್ರಸ್ತಾಪ)

ಏಳು ಯಶೋದೆ ಕಂದನೆ **ರಾಗ: ಶುಭಪಂತುವರಾಳಿ**

ಏಳು ಯಶೋದೆ ಕಂದನೆ ಏಳು ಶ್ರೀ ಕೃಷ್ಣ ಪರಮಾತ್ಮನೆ। ಏಳು ಗೋಕುಲ ನಂದನೆ, ಏಳು ಗೋಪಾಲ ಕೃಷ್ಣನೆ। ಏಳಯ್ಯ ವೇಣುಗೋಪಾಲ ನಿನಗೆ ತವ ಸುಪ್ರಭಾತ॥1॥ ಮುಂಜಾನೆ ಮೂಡಿ ಬರುವ ಸೂರ್ಯನು ತಾನು। ಕಿರಣಗಳ ಬೆಳಕನ್ನು ಎಲ್ಲೆಲ್ಲು ಬೀರುತಿಹನು। ನೀಲಾಂಜನವ ಬೆಳಗಿ ನಿನ್ನನ್ನು ಎಚ್ಚರಿಸುತಿಹನು। ಏಳಯ್ಯ ವೇಣು ಗೋಪಾಲನೆ ನಿನಗೆ ತವಸುಪ್ರಭಾತ॥2॥ ಕರಿರಾಜ ನಿನಗಾಗಿ ಕನಕ ಕುಂಭವನೆ ಪಿಡಿದು। ಕ್ಷೀರಾಭಿಷೇಕ ಮಾಡಲು ಕಾದು ನಿಂತಿಹನು। ತುಳಸಿ ಪುಷ್ಪಗಳಿಂದ ಪೂಜಿಸಲು ಸಾಲಾಗಿ ನಿಂತಿಹರು ಏಳಯ್ಯ ವೇಣುಗೋಪಾಲನೆ ನಿನಗೆ ತವ ಸುಪ್ರಭಾತ॥3॥ ಪಟ್ಟೆ ಪೀತಾಂಬರ ಆಭರಣಗಳು ತಂದಿಹರು ವಜ್ರಕಿರೀಟ ನಿನ್ನ ಮುಕುಟದಿ ಧರಿಸಲೆಂದು। ಉಡಿಗೆಜ್ಜೆ ಉಡಿದಾರ ಉಂಗುರುವ ಇಡಲೆಂದು। ಏಳಯ್ಯ ವೇಣುಗೋಪಾಲನೆ ನಿನಗೆ ತವ ಸುಪ್ರಭಾತ॥4॥ ಪಾರ್ಥಸಾರಥಿಯಾಗಿ ಪಾಂಡವರ ಪಕ್ಷನೆಂದು। ಪರಮಾತ್ಮ ನೀನಾಗಿ ಪರರ ನಿಂದೆಯ ಹೊತ್ತೆ। ಪಾಮರರನು ಕಾಯುವ ಪರಮಾತ್ಮನೆ। ಎಳಯ್ಯ ವೇಣುಗೋಪಾಲನೆ ನಿನಗೆ ತವ ಸುಪ್ರಭಾತ॥5॥ ಗೀತಾಮೃತವೆಲ್ಲಾ ನಿನ್ನಲ್ಲೆ ಅಡಗಿಹುದು। ಗೀತೆಯನು ಪಠಿಸುವರ ಪಾಪವನು ನೀ ಕಳೆವೆ। ಗೀತೆಯನು ಪಠಿಸುವ ಜ್ಞಾನವನು ನೀ ನೀಡು। ಏಳಯ್ಯ ವೇಣುಗೋಪಾಲನೆ ನಿನಗೆ ತವ ಸುಪ್ರಭಾತ॥6॥ ಗೀತೆ ಭೋದೆಯ ನೀಡಿ ಪಾಂಡವರ ಕಣ್ತೆರೆಸಿದೆ। ಭಾರತ ಯುದ್ಧಕ್ಕೆ ನೀನೆ ಕಾರಣನಾದೆ। ಕೌರವರಿಗೆ ಅಕ್ಷೋಹಿಣಿ ಸೈನ್ಯವನೆ ಇತ್ತೆ। ಪಾಂಡವರ ರಕ್ಷಣೆಗೆ ನೀ ನಿಂತು ರಕ್ಷಿಸಿದೆ। ಏಳಯ್ಯ ವೇಣುಗೋಪಾಲ ನಿನಗೆ ತವ ಸುಪ್ರಭಾತ। ಏಳಯ್ಯ ಕುಕ್ಕೆ ಸ್ವಾಮಿಯೆ ನಿನಗೆ ತವ ಸುಪ್ರಭಾತ॥7॥

ಹೇಳಿದನು ಜನಮೇಜಯನಿಗೆ (ಸಂಕ್ಷಿಪ್ತ ಮಹಾಭಾರತ) **ರಾಗ: ರಾಗಮಾಲಿಕೆ**

ಹೇಳಿದನು ಜನಮೇಜಯನಿಗೆ ಮುನಿಪನು। ಲೋಲ ವೇದವ್ಯಾಸ ಮುನಿಪನು। ಪಾಲಿಸಿದ ಹರಿಯವತಾರವನು।

ಕೌರವರ ಪಾಂಡವರ ಜನನವನು।। ಶ್ರೀಲತಾಂಗಿಯ ರಮಣ ಕೃಷ್ಣನು। ಪಾಲಿಸಿದನರಗಿನ ಮನೆಯೊಳೈವರ। ಮೇಲೆ ಮದುವೆ ಮಾಡಿ ಕಾಯ್ದನು ಆದಿಪರ್ವದಲಿ।।1।। ರಾಜಸೂಯ ಯಾಗವನೆ ಮಾಡಿ ಧರ್ಮಜನು ರಾಜ್ಯವನ್ನಾಳುತ್ತಿರೆ। ಜೂಜಿನಲಿ ಸೋಲಿಸಿದರಾ ಪಾಂಚಾಲೆಯನು। ಸಭೆಯೊಳಗೆ ರಾಜವನಿತೆಯ ಭಂಗಪಡಿಸಲು। ಮೂರ್ಜಗದ ಪತಿ ಲಕ್ಷ್ಮೀರಮಣನು ಶ್ರೀ ಜನಾರ್ಧನ ಕಾಯ್ದನವರನು ಸಭಾಪರ್ವದಲಿ।।2।। ದೇಶವನು ಬಿಟ್ಟ ಡವಿಯಲಿ ವನವಾಸದೊಳಿರುತಿರೆ। ದೂರ್ವಾಸಮುನಿಯು ಬಂದು ಶಿಷ್ಯರ ಸಹಿತ ಗ್ರಾಸವನು ಬೇಡೆ ಧರ್ಮಜನೂ ಕೃಷ್ಣನೂ ಬಂದು ಶಾಕದೊಳಗಳನು ಉಂಡು ಪೊರೆಯಲು ಪೊರೆದ ಪಾರ್ಥನಿಗೆ ಒಲಿದು ಪಿನಾಕಿ ಕರುಣಿಸಿ ಕೊಟ್ಟನಾ ಅರಣ್ಯಪರ್ವದಲಿ।।3।। ಅಂದು ವಿರಾಟ ನಗರಿಯಲಿ ತಾವು ಬಂದು ಇರುತಿರೆ। ಪಾಂಡವರಿರಲು ಸೈರಂಧ್ರಿಯಳವನು ಕೇಳಿ ಮಡುಹಿದಾ ಕೀಚಕನನು। ಮುಂದೆ ಕೇಳಿ ಕುರುಪತಿಯು ಬಂದು ಉತ್ತರ ಗೋಗ್ರಹಣದಲಿ ತುರುಗಳ ವೃಂದವನು ಸೆಳೆದೊಯ್ಯೆ ನರನೊಡೆ ಬಂದು ಸಾರಥಿಯಾದನು ವಿರಾಟ ಪರ್ವದಲಿ।।4।। ದೇವ ನಾರಾಯಣನು ಕಪಟದಲಿ ಭಾವಿಸಲು ಉದ್ಯೋಗ ಸಂಧಿಯ ಠೀವಿಯಿಂದಲೆ ಬಂದು ವಿದುರನ ಮನೆಯ ಪಾಲ್ ಕುಡಿದು ದೇವಕೃಷ್ಣನು ಕೌರವರ ಸಭೆಗೈದು ಅವರ ಐದುಗ್ರಾಮವ ಬೇಡೆ ಕೊಡದಿರೆ ದೇವ ಯುದ್ಧಕೆ ಭಾಗವನು ಮಾಡಿಸಿದ ಉದ್ಯೋಗ ಪರ್ವದಲಿ।।5।। ಕರೆಸಿದರು ಗಾಂಗೇಯ ಭೀಷ್ಮರು ತರಿಸಿ ಸೇನೆಯ ಪಟ್ಟಗಟ್ಟಲು ಮೆರವಣಿಗೆ ರಣಭೂಮಿ ನಲವತ್ತೆಂಟು ಯೋಜನಕೆ ಕರೆಸಿ ಸೇನೆಯ ಪಟ್ಟಗಟ್ಟಲು ಬೆರೆಸಿ ಪಕ್ಷವು ಎರಡು ಪಕ್ಷವು ಬೆರೆಸಿ ಕಾದಲು ಸರಳ ಮಂಚದ ಮೇಲೆ ಮಲಗಿದನಾ ಭೀಷ್ಮ ಪರ್ವದಲಿ।।6।। ಗುರುಗಳಿಗೆ ಸೇನಾಧಿಪತ್ಯ ಅರಿತು ವಹಿಸಿದ ಕೌರವೇಶ್ವರ ಧುರಕೆ ಪದ್ಮ ವ್ಯೂಹ ಕಟ್ಟಿದನು ಪಾರ್ಥನಂದನನು। ತರಳ ತನದಲಿ ಹೊಕ್ಕು ಕಂಡು ಜಯದ್ರಥನ ದ್ರೋಣನ ಶಿರವ ಕಡಿಸಿದ ದ್ರೋಣಪರ್ವದಲಿ।।7।। ವೀರ ಕರ್ಣಗೆ ಪಟ್ಟಕಟ್ಟಲು ಕೌರವನು ಷಣ್ಮುಖನು ಪುಟ್ಟಲು ಮೂರು ಪುರವನು ಹರಿಯು ಜನಿಸಿದ ಕಥೆಯ ವಿಸ್ತರಿಸಿ ಸಾರಥಿಯ ಮಾಡಿದನು। ಶಲ್ಯನು ವೀರ ಅರ್ಜುನನೊಡನೆ ಕಾದಲು। ಧಾರುಣಿಗೆ ರವಿತನಯ ಮಡಿದು ಬಿದ್ದನು। ಕರ್ಣ ಪರ್ವದಲಿ।।8।। ಸೂತ ತನಯನು ಮಡಿದಳಿದ ಸುದ್ದಿಯ ಕೇಳಿ ವ್ಯರ್ಥವಾಯಿತು ಎನುತ ಕುರುಪತಿ ಕ್ಷಾತ್ರದಲಿ ಕಳೆದುಳಿದ ಬಲವನು ಅನಾಥ ತಾನಿಂದು ಕಾದುವೆನೆಂದು ಆತ ಮದ್ರಾದೀಶನು ಮಡಿದನು। ಅರ್ಧದಿನದಲಿ ಶಲ್ಯಪರ್ವದಲಿ।।9।। ಷಡರುತನವೆಲ್ಲ ಕುಗ್ಗಿತು ಒಡನೆ ಕುರುಪತಿ ಸಮರ ಕಾಳಗ ಬಿಡದೆ ಕಾದಿದ ಭೀಮಸೇನನ ಬಾಹುಬಲಗಳಲಿ ಹೊಡೆದು ಗದೆಯಲಿ ಕೆಡಹಿ ಜೀವವ ಬಿಡದೆ ಶಿಶುಗಳ ಶಿರವ ತರಿಸಿದ ಕಡೆಗೆ ಕಾಳಗವಾಯ್ತು ಭಾರತ ಗದಾಪರ್ವದಲಿ।।10।। ರಣದೊಳಗೆ ಬಿದ್ದವರ ಹೆಂಡಿರು ಮುಡಿಯು ಮಡಿಕೆದರಿ ದುಃಖದಿ ತಮ್ಮಯ ಪುರುಷರನೆ ಕಂಡು ಫಣೆಗೆ ಫಣೆಗಳನೆ ಒತ್ತಿ ನಯನದ ಕುಣಿಕೆಯಲಿ ಜಲವ ಸುರಿಸೇ ಕಣ್ಣಿಲಿ ರಾಯ ಸತಿಯರು ಉರಿಯಲಿ ಬಿದ್ದರು ಸ್ತ್ರೀಯಪರ್ವ ದಲಿ।।11।। ಅಂಧಕನು ತಾ ಕೇಳಿ ಮನದೊಳು ನೊಂದು ರಾಯರ ಕರೆಯಲಟ್ಟಿದ। ಕಂದ ಬಾರೈ ಎಂದು ಕರೆದನು। ಅಂದು ಕೌರವನ ಕೊಂದ ಭೀಮನ ಅಪ್ಪಿಕೊಂಬೆನು ಎನಲು ಉಕ್ಕಿನಲಿ ಪ್ರತಿಮೆಯ ತಂದು ನಿಲ್ಲಿಸಿದ ರಾಯ ಕೋಪದೊಳ್ ಐಕ್ಯ ಪರ್ವದಲಿ।।12।। ಅರಸು ಧರ್ಮಜ ಬಂದು ನಿಜಗುರು ಪರಮ ಮಿತ್ರ ಜ್ಞಾತಿ ಬಾಂಧವರು ಸಹೋದರರನೆ ಕೊಂದು ಧರೆಯನಾಳುವುದಕ್ಕಿಂತ ತಲೆಮರೆಸಿ ದೇಶಾಂತರವ ಪೋವೆನೆನಲು ಅರುಹಿ ತತ್ವದ ಕಥೆಯ ಶರಮಂಚದಿ ಜೀವವ ಬಿಟ್ಟನು ನದಿಸುತ ಶಾಂತಿ ಪರ್ವದಲಿ।।13।। ಮುಂದೆ ಕರ್ಮವ ತೊಡಗಿ ತಮ್ಮಯ ದಾಯಾದಿಗಳಿಗೆ ತರ್ಪಣ ಗೈದು ಬಂದ ವ್ಯಾಸಮುನಿ ಸಹಿತ ಮಂತ್ರದಿಂದಲೆ ತಂದು ಅಸ್ತಿಯ ಅಂದು ಏಕಾದಶಿಯ ದಿನಕೆ ದಶದಿನವೆಂದು ಬೂರಿ ಶ್ರಾದ್ಧಂಗಳನೆ ಮಾಡಿಸಿದರಾ ಸೂತ ಪರ್ವದಲಿ।।14।। ತುರಗವನೆ ಶೃಂಗರಿಸಿಬಿಟ್ಟರು ಧರೆಗೆ ರಾಯರ ಕೈಲಿ ಕಪ್ಪವ ತೆರಿಗೆಯನು ಬೆಸಗೊಳುತ ಬಿಟ್ಟರು। ವೀರವಿಕ್ರಮರು ಪರಿಪರಿಯ ಭಂಡಾರದ್ರವ್ಯವ ತರಿಸಿ ಹೇರಿಸಿ ಅಶ್ವವ ತ್ವರಿತದಿ ಅಶ್ವಯಾಗವನೆ ಮಾಡಿಸಿದರಾ ಅಶ್ವಮೇಧ ಪರ್ವದಲಿ।।15।। ಬಂದು ಕಲಿ ಭೂಲೋಕ ಬಿಡದೆಲೆ ಒಂದುಪಾಯವನು ಮಾಡಿಸಿ ನಾರದರಿಂದ ಶಾಪವ ಕಂದನಿಗೆ ಕೊಡಿಸಿ ಕೊಂದ ಯಾದವರನ್ನು ತಾವು ತಮ್ಮೊಳಗೇ ಕಾದಿ ಅಳಿದರು। ಎನಿಸಿ ದೇವ ಮುಕುಂದ ಪರಂಧಾಮವ ನೈದಿದನು ಮುಸಲಿ ಪರ್ವದಲಿ।।16।। ವರುಷ ಮೂವತ್ತಾರು ಸಾವಿರ ಸ್ಥಿರದೊಳ್ ಕಲಿ ಬರೆ। ಅವರು ಕಲಿಯ ಕಾಣುತ

ಬಿಟ್ಟರೈವರೂ ರಾಜ್ಯಾಭಿಲಾಷೆಯನು ಅರಿತು ನಡೆದರು ಸ್ವರ್ಗದ್ವಾರದಿಗೆ ಬಲಹಿಡಿದು ಪಾಂಡವರೈವರು ತೆರಳಿದರು ಸ್ವರ್ಗಾರೋಹಣವೆಂಬ ಪರ್ವದಲಿ॥17॥ ನಡೆದರೈ ಪಾಂಡವರೈವರು ಗಡಣದಲಿ ಹಿಮವಂತ ಪರ್ವತದೆಡೆಗೆ ನಡುಗುತ ಬಿದ್ದರೈವರು ಉಳಿದ ಧರ್ಮಜನು ಸತ್ಯವನು ವರ್ಜಿಸಲು ಅಸತ್ಯ ನುಡಿಯಲು ಪುಸಿನುಡಿದ ಕಾರಣದಿ ಮತ್ತೆ ಯಮಪುರಿಗೈದು। ತೋರಿನಡೆತಂದು ತಲೆಗೊತ್ತಿದನು॥ ಧರ್ಮಜನ ಕಂಡು ಏನು ಕುರುಪತಿ ನೀನು ಮಾಡಿದ ದಾನಧರ್ಮಗಳೇನು ಬಳಿಕಿನ್ನೇನು ನಿನ್ನಯ ವಿಧಿಯು ಹವಣಿಸಿದನೆ ನರಕದಲಿ ಮಾನುನೀ ನಿಧಿಯೆ ಈಕಡೆಗೆ ಬಾರೈ ಎನುತ ನೀನಿಲ್ಲಿರುವುದು ಅನುಚಿತವೆನೆ। ನೀವು ಕರೆಯದಿರಿ ಸ್ವರ್ಗದ್ವಂಗಿನಗೊಡವೆ ನಮಗ್ಯಾಕೆ ಹೇಮಕುರು ಶೃಂಗಾರಭರಣವು ಕಾಮಧೇನು ಸಹಸ್ರ ಕಪಿಲೆಯು ಸೋಮಸೂರ್ಯರು ಗ್ರಹಣದಲಿ ಸುರನದಿಯ ತೀರದಲಿ ಶ್ರೀ ಮುಕುಂದಾರ್ಪಣ ವೆಂದು ಶತಕನ್ಯಾದಾನ ಮಾಡಿದ ಫಲವಹುದು। ಭೂಮಿ ಭೂಸುರರಿಗಿತ್ತ ಫಲವಹುದು ಈ ಮಹಾಭಾರತದೊಳೊಂದಕ್ಷರವ ಕೇಳ್ದ ಮನುಜರಿಗೆ ರೌರವ ನರಕ ಬಿಡಿಸುವುದು। ವೀರನಾರಾಯಣನು ಮೆಚ್ಚಲು ವೀರಸ್ವರ್ಗವಾಯಿತು॥ ಕಾಮಿತಾರ್ಥ ಫಲದಾಯಕ ಸಲಹೋ ಗದುಗಿನ ವೀರನಾರಾಯಣ॥

ಬಂದಾ ಗೋವಿಂದಾ ಮುಕುಂದಾ **ರಾಗ: ಶ್ರೀ**

ಬಂದಾ ಗೋವಿಂದಾ ಮುಕುಂದಾ। ನಿತ್ಯಾನಂದ ಬಂದ ಶ್ರೀಹರಿ ತಾ ಬಂದಾ॥ಪ॥ ಬಂದ ದುರಿತಗಳ ಪರಿಹರಿಸಲು ನಮ್ಮ। ಇಂದಿರೇಶ ಸ್ವಾಮಿ ಶ್ರೀ ವೆಂಕಟೇಶನು। ಬಂದನು ಭರದಿಂದ ಗರುಡವಾಹನನಾಗಿ। ಬಂದ ಬಂದ ಭಕ್ತ ವೃಂದವ ನೋಡುತ ಬಂದಾ॥ಅ.ಪ॥ ದುರುಳನಾದ ದುಶ್ಯಾಸನ ಸಭೆಯೊಳು। ತರುಣಿ ದ್ರೌಪದಿಯ ಸೀರೆಯ ಸೆಳೆಯಲು। ಪರಮ ಕರುಣದಿಂದ ತರುಣಿಗಕ್ಷಯವಿತ್ತ। ದ್ವಾರಕಾಧಿಪತಿ ಶ್ರೀಪತಿ ಒಲಿಯುತ ಬಂದಾ॥1॥ ಅರಗಿನ ಮನೆಯಲಿ ಪಾಂಡುಕುಮಾರರು। ಇರುತಿರೆ ಅವರಿಗೆ ಬಂದ ವಿಪತ್ತನು। ಪರಿಹಾರವ ಮಾಡಿ ದ್ರುಪದನ ಪುರದೊಳು। ಪರಮ ಹರುಷದಿಂದ ಮದುವೆಯ ಮಾಡಿದವ॥2॥ ಗುಣನಿಧಿ ಪ್ರಾಣೇಶವಿಠಲನು ಬಂದಾ। ಘನತರ ವಾದ್ಯ ವಿಶೇಷಗಳಿಂದ। ಝುಣ ಝುಣಕೆನ್ನುವ ಗೆಜ್ಜೆ ನಾದಗಳಿಂದ। ತದ್ಧಿಮಿ ಧಿಮಿಕೆಂದು ಕುಣಿಯುತ ಶ್ರೀಹರಿ॥3॥

ಲೋಕಭರಿತನೋ ರಂಗ **ರಾಗ: ಪೂರ್ವಿಕಲ್ಯಾಣಿ-ರೂಪಕತಾಳ**

ಲೋಕಭರಿತನೋ ರಂಗ ಅನೇಕ ಚರಿತನೋ। ಕಾಕು ಜನರ ತರಿದು ತನ್ನೇಕಾಂತ ಭಕ್ತರ ಪೊರೆವನೀತ॥ಪ॥ ರಾಜಸೂಯ ಯಾಗದಲ್ಲಿ ರಾಜರಿರಲು ಧರ್ಮ-। ರಾಜಸುತನು ಈತನೆ ಪೂಜೆಗರ್ಹನೆನಿಸಿದಾತ॥1॥ ಮಿಕ್ಕ ನೃಪರ ಜರಿದು ಅಮಿತ-ವಿಕ್ರಮ ಯದುವರನೆ ತನಗೆ। ತಕ್ಕ ರಮಣನೆಂದು ರುಕ್ಮಿಣಿ ಉಕ್ಕಿ ಮಾಲೆ ಹಾಕಿದಳು॥2॥ ಉತ್ತರೆಯ ಗರ್ಭದಲ್ಲಿ ಸುತ್ತುಮುತ್ತಿದ ಅಸ್ತ್ರವನ್ನು। ಒತ್ತಿ ಚಕ್ರದಿಂದ ನಿಜ - ಭಕ್ತ ಪರೀಕ್ಷಿತನ ಕಾಯ್ದ॥3॥ ಜ್ಞಾನಶೂನ್ಯನಾಗಿ ಸೊಕ್ಕಿ ನಾನೇ ವಾಸುದೇವನೆಂದು। ಹೀನ ಪೌಂಡಕ ಶಿರವ ಜಾಣರಾಯ ತರಿದು ಮೆರೆದ॥4॥ ತನ್ನ ಸೇವಕ ಜನರ ಪೊರೆದು ಉನ್ನತ ಉಡುಪಿಯಲಿ ನಿಂತು। ಘನ್ನ ಮಹಿಮೆಯಿಂದ ಮೆರೆದ ಪ್ರಸನ್ನ ಹಯವದನ ಕೃಷ್ಣ॥5॥

ಈತನೀಗ ವಾಸುದೇವನು **ರಾಗ: ಕಲ್ಯಾಣಿ-ರೂಪಕತಾಳ**

ಈತನೀಗ ವಾಸುದೇವನು। ಲೋಕದೊಡೆಯ। ಈತನೀಗ ವಾಸುದೇವನು॥ಪ॥ ಈತನೀಗ ವಾಸುದೇವನೀ ಸಮಸ್ತ ಲೋಕದೊಡೆಯ। ದಾಸಗೊಲಿದು ತೇರನೇರಿ ತೇಜಿ ಪಿಡಿದು ನಡೆಸಿದಾತ॥ಅ॥ ದನುಜೆಯಾಳ್ದನಣ್ಣನಯ್ಯನ ಪಿತನ ಮುಂದೆ ಕೌರವೇಂದ್ರನನುಜೆಯಾಳಿದವನ ಶಿರವ ಕತ್ತರಿಸುತ ತನ್ನ। ಅನುಜೆಯಾಳಿದವನ ಬೆಂಕಿ ಮುಟ್ಟದಂತೆ ಕಾಯ್ದ ರುಕ್ಮನನುಜೆಯಾಳಿದವನ ಮೂರ್ತಿಯನ್ನು ನೋಡಿರೋ॥1॥ ನರನ ಸುತನರಣ್ಯದಲ್ಲಿ ಗಿರಿಯೊಳ್ನಿಂತು ತನ್ನ ರೋಷದಿ। ಶರಗಳನ್ನು ತೀಡುತಿಪ್ಪನ ಯೋಚಿಸಿ। ಭರದಲವನ ಕರೆದು ಕುರುಹು ತೋರಿ ಪತ್ರವನ್ನು ಹಾರಿಸಿದವನ। ಶಿರವನ್ನು ಛೇದಿಸಿದ ದೇವ ಕಾಣಿರೋ॥2॥ ಸೃಷ್ಟಿಕರ್ತಗೆ ಮಗನಾದವನಿಗಿಷ್ಟ ಭೂಷಣ ಅಶನವಾದನ। ಜೇಷ್ಠಪುತ್ರಗೆ ವೈರಿ ತೊಡೆಯ ಛೇದಿಸೆಂದು ಬೋಧಿಸಿ॥ ಕಷ್ಟವನ್ನು ಕಳೆದು ಭಕ್ತರಿಷ್ಟವನ್ನು ಕಾದ। ಉತ್ಕೃಷ್ಟ ಮಹಿಮನಾದ ದೇವ

ಕಾಣಿರೋ॥3॥ ಕ್ರೂರನಾದ ಫಣಿಪಬಾಣವನ್ನು ತರಣಿಜನೆಚ್ಚಾಗ ವೀರನರನತ್ತ ಬಪ್ಪುದನ್ನು ಈಕ್ಷಿಸಿ। ಧಾರಿಣಿಯ ಪದದೊಳೌಕಿ ಚರಣಭಜಕ ನರನ ಕಾಯ್ದ। ಭಾರಕರ್ತನಾದ ದೇವನೀತ ಕಾಣಿರೋ॥4॥ ವ್ಯೋಮಕೇಶನಿಪ್ಪ ದೆಸೆಯ ಸರ್ವ ಜಗಕೆ ತೋರುತ। ಸಾಮಜವನೇರಿ ಬರುವ ಶಕ್ತಿಯನೀಕ್ಷಿಸಿ॥ ಪ್ರೇಮದಿಂದ ಉರವನೊಡ್ಡಿ ಡಿಂಗರಿಗನ ಕಾಯ್ದ। ಸಾರ್ವಭೌಮ ಬಾಡದಾದಿ ಕೇಶವನ ನೋಡಿರಿ॥5॥

ಬಂದದ್ದೆಲ್ಲ ಬರಲಿ — ರಾಗ: ಸುರಟಿ–ಆದಿತಾಳ

ಬಂದದ್ದೆಲ್ಲ ಬರಲಿ, ಗೋವಿಂದನ ದಯ ನಮಗಿರಲಿ॥ಪ॥ ಇಂದಿರೆ ರಮಣನ ಧ್ಯಾನವ ಮಾಡಲು। ಬಂದ ದುರಿತ ಬಯಲಾದುದಿಲ್ಲವೆ॥ಅ॥ ಅರಗಿನ ಮನೆಯೊಳಗಂದು, ಪಾಂಡವರನು ಕೊಲ್ಲಬೇಕೆಂದು। ದುರುಳ ಕೌರವ ಬಂದು, ಅತಿ ಹರುಷದಲಿರುತಿರಲಂದು। ಹರಿ ಕೃಪೆ ಅವರಲ್ಲಿದ್ದ ಕಾರಣ ಬಂದ ಘೋರ ದುರಿತ ಬಯಲಾದುದಿಲ್ಲವೆ॥1॥ ಆರು ಒಲಿಯದಿರಲೆನ್ನ, ಮುರಾರಿ ಎನಗೆ ಪ್ರಸನ್ನ ಹೋರುವ ದುರಿತದ ಬನ್ನ ನಿವಾರಿಪ ಕರುಣ ಸಂಪನ್ನ। ಶ್ರೀರಮಣನ ಸಿರಿ ಚರಣ ಶರಣರಿಗೆ ಕ್ರೂರ ಯಮನು ಶರಣಾಗತನಾಗಲಿಲ್ಲವೆ॥2॥ ಸಿಂಗನ ಪೆಗಲೇರಿದವಗೆ, ಕರಿ ಭಂಗವೇಕೆ ಮತ್ತವಗೆ। ರಂಗನ ಕೃಪೆಯುಳ್ಳವಗೆ। ಭವ ಭಂಗಗಳೇತಕ್ಕವಗೆ॥ ಮಂಗಳ ಮಹಿಮ ಪುರಂದರವಿಠಲ ಶುಭಾಂಗನ ದಯವೊಂದಿದ್ದರೆ ಸಾಲದೆ॥3॥

ನೀನೇ ದಯಾಸಂಪನ್ನನೋ

ನೀನೇ ದಯಾ ಸಂಪನ್ನನೋ ಕಾವೇರಿ ರಂಗ। ನೀನೇ ಬ್ರಹ್ಮಾದಿ ವಂದ್ಯನೋ॥ಪ॥ ಬಂಧುಗಳೆಲ್ಲರ ಮುಂದಾದ್ರುಪದನ ನಂದನೆ ಎಳೆತಂದು ಸೀರೆಯ ಸೆಳೆವಾಗ। ತಂದೆ ಕೃಷ್ಣಾ ತನಗೆಂದರೆ। ಅಕ್ಷಯವಿತ್ತು ಕಾಯ್ದಗೋವಿಂದ॥1॥ ಮತ್ತಗಜವನಿಗಳೊತ್ತಿ ಪಿಡಿದು ಬರುವತ್ಯಧರೋಷ್ಟವು ಮೃತ್ಯುವಿನಂತಿರೆ ಭಕ್ತರ ಸಲಹುವ ಪುರಂಧರ ವಿಠಲ ಹಸ್ತಿಗೊಲಿದ ಪರವಸ್ತುವೇ॥2॥

ನೀನೆ ಅನಾಥ ಬಂಧು — ರಾಗ: ಸಾವೇರಿ–ಅಟ್ಟತಾಳ

ನೀನೆ ಅನಾಥ ಬಂಧು ಕಾರುಣ್ಯ ಸಿಂಧು॥ಪ॥ ಮದಗಜವೆಲ್ಲ ಕೂಡಿದರೇನು ಅವರ ವ್ಯಾಳ್ಯಕೆ ಒದಗಲಿಲ್ಲ। ಮದನನಯ್ಯ ಮಧುಸೂಧನ ಎನ್ನಲು ಮುದದಿಂದಲಿ ಬಂದೊದಗಿದೆ ಕೃಷ್ಣಾ॥1॥ ಪತಿಗಳೈವರಿದ್ದರೇನು ಸತಿಯ ಭಂಗ ಬಿಡಿಸಲಿಲ್ಲ। ಗತಿ ನೀನೇ ಮುಕುಂದ ಎನ್ನಲು ಅತಿವೇಗದಿ ಅಕ್ಷಯವಿತ್ತೆ ಕೃಷ್ಣಾ॥2॥ ಶಿಲೆಯ ರಕ್ಷಿಸಿ ಕುಲಕೆ ತಂದೆ ಬಲಿಗೆ ಒಲಿದು ಪದವಿಯನಿತ್ತೆ। ಸುಲಭದಿ ಭಕ್ತರ ಸಲಹುವ ನಮ್ಮ ಚೆಲುವ ಪುರಂದರವಿಠ್ಠಲರಾಯ॥3॥

ಒಂದೇ ಕೂಗಳತೆ — ರಾಗ: ಕಲ್ಯಾಣಿ–ಅಟ್ಟತಾಳ

ಒಂದೇ ಕೂಗಳತೆ ವೈಕುಂಠ॥ಪ॥ ಸಂದೇಹವಿಲ್ಲವೊ ಸಾಧು ಸಜ್ಜನರಿಗೆ॥ಅ॥ ಸರಸಿಯಲಿ ಆನೆ ಪೊರೆಯೆಂದು ಕರೆಯಲು ತ್ವರಿತದಿ ಬಂದು ಕಾಯ್ದಾ। ನರಹರಿ ಕೃಷ್ಣ ಸಲಹೆಂದು ಚೀರಲು। ತರಳ ಪ್ರಹ್ಲಾದಗೆ ಕಂಭದಿಂದಲಿ ಬಂದ॥1॥ ಅಂಬರೀಷ ದ್ವಾದಶೀ ವ್ರತಮಾಡಲು। ದೊಂಬಿ ಮಾಡಿದ ದೂರ್ವಾಸ ಮುನೀ। ಕುಂಭಿಣೀಪತಿ ಕೃಷ್ಣಾ ಕಾಯೆಂದು ಮೊರೆಯಿಡೆ। ಬೆಂಬತ್ತಿ ಚಕ್ರದಿಂ ಮುನಿಶಾಪವ ಕಳೆದ॥2॥ ದ್ರುಪದರಾಯನ ಪುತ್ರಿಯಾಪತ್ತು ಕಳೆಯೆನೆ। ಕೃಪೆಯಿಂದ ಅಕ್ಷಯವಿತ್ತ ತಾನು। ಕಪಟನಾಟಕ ಕೃಷ್ಣ ಪುರಂದರವಿಠಲನ ಗುಪಿತದಿ ನೆನೆವರ ಹೃದಯವೇ ವೈಕುಂಠ॥3॥

ಎಲ್ಲಿರುವನೋ ರಂಗ — ರಾಗ: ಬಾಗೇಶ್ರೀ

ಎಲ್ಲಿರುವನೋ ರಂಗ ಎಂಬ ಸಂಶಯ ಬೇಡ। ಎಲ್ಲಿ ಭಕ್ತರು ಕರೆದರಲ್ಲೆ ಒದಗುವನು॥ಪ॥ ತರಳ ಪ್ರಹ್ಲಾದ ಶ್ರೀಹರಿ ವಿಶ್ವಮಯನೆಂದು। ಬರೆದೋದಲವನ ಪಿತ ಕೋಪದಿಂದ। ಸ್ಥಿರವಾದಡೀ ಕಂಭದೊಳು ತೋರೆನಲು। ಭರದಿ ಬರಲದಕೆ

ವೈಕುಂಠ ನೆರೆಮನೆಯೆ॥1॥ ಪಾಪ ಕರ್ಮವ ಮಾಡಿದಜಾಮಿಳನ। ಯಮಭಟರು ಕೋಪದಿಂದೆಳೆಯುತಿರೆ। ಭೀತಿಯಿಂದ ತಾ ಪುತ್ರನನು ಕರೆಯೆ। ಕೇಳಿ ರಕ್ಷಿಸೆ ಶ್ವೇತ ದ್ವೀಪವೀ ಧರೆಗತಿ ಸಮೀಪದಲ್ಲಿಹುದೆ॥2॥ ಕರಿರಾಜನನು ನೆಗಳು ನುಂಗುತಿರೆ। ಭಯದಿಂದ ಮೊರೆಯಿಡಲು ಕೇಳಿ। ಅತಿ ತ್ವರಿತದಿಂದ ಕರುಣದಲಿ। ಬಂಧನವ ಬಿಡಿಸಲಾ ಗಜರಾಜ। ನಿರುವ ಸರಸಿಗೆ ಅನಂತಾಸನವು ಮುಮ್ಮನೆಯೆ॥3॥ ಕುರುಪತಿಯು ದ್ರೌಪದಿಯ ಸೀರೆಯನು ಸೆಳೆಯುತಿರೆ। ತರುಣಿ ಹಾ ಕೃಷ್ಣಾಯೆಂದೊದರೆ ಕೇಳಿ॥ ಭರದಿಂದ ಅಕ್ಷಯಾಂಬರವಿತ್ತ। ಹಸ್ತಿನಾಪುರಿಗು ದ್ವಾರಾವತಿಗೂ ಕೂಗಳತೆಯೇ॥4॥ ಅಣು ಮಹತ್ತುಗಳಲ್ಲಿ। ಪರಿಪೂರ್ಣನೆಂದೆನಿಸಿ। ಗಣನೆಯಿಲ್ಲದ ಮಹಾ ಮಹಿಮನೆನಿಪ। ಘನ ಕೃಪಾನಿಧಿ ನಮ್ಮ ಪುರಂದರವಿಠ್ಠಲನು। ನೆನೆದವರ ಮನದಲ್ಲೆ ಇಹನೆಂಬ ಬಿರುದಿರಲು ॥5॥

ಹರಿಯೇ ವಾಸುದೇವಾಯ ನಮೋ (ದ್ರೌಪತಿಗೆ ಅಕ್ಷಯಾಂಬರ ಅನುಗ್ರಹ)

ಹರಿಯೇ ವಾಸುದೇವಾಯ ನಮೋ। ವಾಸುದೇವಾಯ ನಮೋ। ವಾಸುಕೀಶಯನಾಯ ವಾಸವಾದ್ಯ ಖಿಳಮುನಿ ನಮಿತ ಚರಣಾಂಬುಜ। ಭೂಸುರಪ್ರಿಯ ಭಜಕ ಪೋಷಕನೆ ರಕ್ಷಿಪುದು ಕೇಶವ ಮುಕುಂದ ಒಲಿದೂ॥ ಹರಿಯೆ ವಾಸುದೇವಾಯ ನಮೋ॥ಪ॥ ಶುಂಡಾಲ ಪುರದೊಳಗೆ ದುರುಳ ದುರ್ಯೋದನನು। ಪಾಂಡುನಂದನರೊಡನೆ ಕಪಟ ಜೂಜನಾಡಿ ಗಂಡರೈವರ ಮುಂದೆ ದ್ರುಪದ ಸುತೆಯಳ ಸೆರಗ ಲಂಡ ದುಶ್ಯಾಸನ ಪಿಡಿದೂ। ಅಂಡಲೆದು ಸೀರೆಯನು ಸೆಳೆಯುತಿರೆ ಸಮ್ಮದೆಯು ಕಂಡು ಮನದೊಳು ಬೆದರಿ। ಪರಮಾತ್ಮ ಪರಿಪೂರ್ಣ ಪುಂಡರೀಕಾಕ್ಷ ರಕ್ಷಿಪುದೆಂದು ಮೊರೆಹೊಕ್ಕಳಂದು ಚತುರಂಗನಾದ ಹರಿಯ॥1॥ ಪತಿಗಳೈವರು ಸತ್ಯವ್ರತದಿ ಸುಮ್ಮನೆ ಇಹರು। ಅತಿಕ್ಲೇಶ ಪಡುತಿಹರು ವಿದುರ ಭೀಷ್ಮಾದಿಗಳು। ಸುತರ ಮೇಲಣ ಮೋಹ ಮಮತೆಯಲಿ ಸುಮ್ಮನಿಹ ಗತಿವಿಲೋಚನಮಾವನೂ। ಕೃತಕ ಕಪಟದಲ್ಲಿಹರು ಶಕುನಿ ಕರ್ಣಾದಿಗಳು ಹಿತವ ಬಯಸುವರ್‍ಯಾರ ಕಾಣೆ ನಾನಿದರೊಳಗೆ। ಅತ್ತೆಯಲ್ಲವೆ ಎನಗೆ ಗಾಂಧಾರಿ ದೇವಿಯರು। ಮೃತ್ಯುವಂತೆಳೆವವನ ಬಿಡಿಸಬಾರದೆ ತಾಯೆ। ಉತ್ತುಮಳಲಿ ನೀನು ಭಾನುಮತಿ ಎನ್ನಗೆಣತಿಯೆ ಇತ್ತ ದಯಮಾಡಿ ನೋಡೂ। ಸುತ್ತ ನೆರೆದಿಹ ಸಭೆಯ ಪರಿವಾರದವರೆಲ್ಲ ಪೆತ್ತುದಿಲ್ಲವೆ ಎನ್ನ ಪೋಲ್ವ ಹೆಣ್ಮಕ್ಕಳನು ಹುತ್ತದೊಳು ಬಿದ್ದಂಥ ಹಾವು ಸಾಯಲುಬಹುದೆ ತತ್ವ ಬಾಹಿರ ರಾದಿರೇ॥3॥ ಆರಿಗೊರಲಿದರೆನ್ನ ದೂರು ಕೇಳುವರಿಲ್ಲ ಪಾರುಗಾಣಿಸುವವರ ಕಾಣೆನಾನಿದರೊಳಗೆ। ಸಾರಿದರೆ ಪೊರೆವ ಕಂಸಾರಿ ನೀನಲ್ಲದಿನ್ನಾರೆನಗೆ ಆಪ್ತಬಂಧೂ। ಮಾರಿದರು ಧರ್ಮದೇವತೆಗೆನ್ನವಲ್ಲಭರು ಭಾರನಿನ್ನದು ಎಂದು ನಂಬಿದ ಅನಾಥಳನು। ಕ್ಷೀರದೊಳಗದ್ದು ನೀರೊಳಗದ್ದು ಗತಿ ನೀನೆ ನಾರಾಯಣನೆ ರಕ್ಷಿಸೋ॥4॥ ಪಾವಕನ ಉರಿಯೊಳಗೆ ಹೊಕ್ಕು ಹೊರಡಲಿಬಹುದು। ಹಾವುಗಳ ಹೆಡೆಹಿಡಿದು ಎಳೆದೆಳೆದು ತರಬಹುದು। ತೀವಿರ್ದ ಮಡುವ ಧುಮುಕಲುಬಹುದು ಗರಳವನು ಸೇವಿಸಲುಬಹುದು ಜಗದೀ। ಸಾವಿಗಂಜದೆ ಕೊರಳ ಕತ್ತರಿಸಿಕೊಳಬಹುದು ಜೀವವಿದ್ದಂತೆ ಲಜ್ಜೆಯ ತೊರೆಯಲಾರೆನ್ನೈ ಆವ ಪರಿಯಲಿ ನಿನ್ನ ನಂಬಿದ ಅನಾಥಳನು ದೇವ ಅಭಿಮಾನ ಕಾಯೋ॥5॥ ಅಸುರ ಬೆನ್ನಟ್ಟಿಬರೆ ಪಶುಪತಿಯ ರಕ್ಷಿಸಿದೆ। ಋಷಿಯ ಶಾಪವ ಪರಿದು ಅಂಬರೀಷನ ಕಾಯ್ದೆ। ವಸುಧೆಯೊಳು ಶಿಲೆಯಾಗಿ ಬಿದ್ದಹಲ್ಯೆಯ ಪೊರೆದೆ ಶಿಶು ಪ್ರಹ್ಲಾದ ಗೊಲಿದೇ। ಹಸುಳೆ ಧ್ರುವ ರಾಯಂಗೆ ಹೆಸರುಳ್ಳ ಪದವಿತ್ತೆ ದಶಕಂಠನನುಜಂಗೆ ಸ್ಥಿರಪಟ್ಟವನು ಕೊಟ್ಟೆ ಹೆಸರುಗೊಂಡರೆ ಮಗನ ಅಜಮಿಳನ ರಕ್ಷಿಸಿದೆ ವಸುದೇವಸುತನೆ ಸಲಹೋ॥6॥ ಲಕ್ಷ್ಮೀಮನೋಹರನೇ ಇಕ್ಷುಚಾಪನ ಪಿತನೆ ಯಕ್ಷಗಂಧರ್ವಮುನಿ ಅಮರೇಂದ್ರವಂದಿತನೆ। ಅಕ್ಷಯನೆ ಆಟದಲಿ ಜಗವ ಮೋಹಿಪ ಸ್ಥೂಲಸೂಕ್ಷ್ಮದೊಳು ಪರಿಪೂರ್ಣನೇ। ಕುಕ್ಷಿಯೊಳಗೀರೇಳು ಜಗವ ಪಾಲಿಸುತಿಹನೆ ಅಕ್ಷಯ ಸುರಾಂತಕಗೆ ಅಜಪದವಿಯನಿತ್ತೆ ದಕ್ಷಸುತೆಪತಿಸಖನೆ ಪಕ್ಷಿವಾಹನಸ್ವಾಮಿ ರಕ್ಷಿಸು ಅನಾಥಬಂಧು ॥7॥ ತಂದೆತಾಯಿಯು ನೀನೆ ಬಂಧುಬಳಗವು ನೀನೆ। ಇಂದೆನ್ನ ಕುಲಸ್ವಾಮಿ ಗುರುಪಿತಾಮಹ ನೀನೆಂದು ನಂಬಿದೆ ನನ್ನ ಮಾನಾಪಮಾನ ಗೋವಿಂದ ನಿನಗೊಪ್ಪಿಸಿದೆನ್ನೈ। ಸಂದೇಹವಿಲ್ಲ ಕೊಂದರೆ ಒಳಿತು ಕಾಯ್ದೋರೊಳಿತೆಂದು ಕಂಗಳ ಮುಚ್ಚಿ ಕರತರಂಗಳ ನೆಗಹಿ ಇಂದು ಪ್ರಾಣವ ಬಿಡುವೆನೆಂದು ನಿಶ್ಚಯಿಸಿ ಗೋವಿಂದನೆಂದಳುತ ತರಳೇ॥8॥ ಇಂತೆನುತ ದ್ರೌಪದಿಯು ಮೊರೆಇಡುವ ಧ್ವನಿಕೇಳಿ ಅಂತರಾತ್ಮಕ ಕೃಷ್ಣ

ದ್ವಾರಕಾಪುರದೊಳಗೆ ಕಾಂತೆ ರುಕ್ಮಿಣಿ ಸತ್ಯಭಾಮೆಯರ ಕೂಡೆ ಏಕಾಂತ ಭವನದೊಳಿದ್ದನು ಕುಂತಿಯಾತ್ಮಜರರಸಿ ಉಟ್ಟುದಕ್ಷಯವಾಗಿ ಸಂತೋಷಗೊಳಲೆಂದು ವರವಿತ್ತು ಶ್ರೀಕೃಷ್ಣ ಎಂತುಟೋ ಶ್ರೀಹರಿಯ ನೆನೆದವಳ ಮೇಲೆ ಅನಂತ ವಸ್ತ್ರಗಳಾದವು॥9॥ ಸೆಳೆಯುತಿರ್ದನು ಖಳನು ಬೆಳೆಯುತಿರ್ದುದು ಸೀರೆ ಬಿಳಿಯ ಪೊಂಬಟ್ಟೆ ನಾನಾ ವಿಚಿತ್ರದ ಬಣ್ಣ ಪೊಳಲು ತುಂಬುವ ತೆರದಿ ಎಳೆದೆಳೆದು ಪಾಪಾತ್ಮ ಬಳಲಿ ಇಳೆಯೊಳು ಬಿದ್ದನು। ಕಳೆಯುಕುಂದಿತು ಮೋರೆ ಕರ್ಣದುರ್ಯೋಧನರ ಬಳಿಯೆ ನಿಂತಿರ್ದ ಧೂತರ ಕರೆದು ನೇಮಿಸಿದ। ಕಳುಹುವುದೀ ವಸ್ತ್ರಗಳ ಕಳುಹುಬೊಕ್ಕಸಕೆನಲು ನಳಿನಮುಖಿ ತಿಳಿದಳಾಗ॥10॥ ಸಿಟ್ಟಿನಲಿ ದ್ರೌಪದಿಯು ಕಣ್ದೆರೆದು ನೋಡಲಾ। ಬೆಟ್ಟದಂತೊಟ್ಟಿರ್ದ ವಸ್ತ್ರರಾಶಿಗಳೆಲ್ಲ ಸುಟ್ಟಗ್ನಿ ಹೊರಸೂಸಿ ಸಿಟ್ಟಿನಾರಾಜಗೃಹ ಘಟ್ಟನಾಹುತಿಗೊಂಡಿತೋ। ಕೊಟ್ಟಳೈ ಶಾಪವನು ಕುರುಪತಿಗೆ ಕಮಲಮುಖಿ। ಕಟ್ಟಾಳು ಭೀಮಸೇನನ ಗದೆಯರಣದಲ್ಲಿ ಕುಟ್ಟಿ ಬಿಸುಡಲು ನಿನ್ನ ತೊಡೆಗಳೆರಡನು। ಬರಿದೆ ಕೊಟ್ಟ ಶಾಪವು ತಪ್ಪದೂ॥11॥ ಮೂಡಿದವು ಪ್ರತಿ ಸೂರ್ಯ ಧೂಮಕೇತುಗಳು। ಓಡಾಡಿದವು ಬೀಡಿನಲಿ ಹದ್ದುಕಾಗೆಗಳು ಕೂಡಾಡಿದವು ಗಡಗಡನೆ ನಡುಗಿತವನಿಯು ಮಾತನಾಡಿದವು ಶಿಲೆಯ ಪ್ರತಿಮೆ ಕೂಡೆ ತೀಡಿದವು ನಕ್ಷತ್ರಗಳು ದಿವದಿ ಮಾತಾಡಿದವು ಅಶೀರೀರವಾಕ್ಯಗಳು ಪುರಜನರು ಕೇಡುಕೌರವಗಾಗದಿರದೆಂದು ನಿಶ್ಚಯಿಸಿ ಓಡಿ ಮನೆಗಳ ಪೊಕ್ಕರು॥12॥ ಹರುಷ ಪಟ್ಟರು ಮನದಿ ವಿದುರಭೀಷ್ಮಾದಿಗಳು। ಸುರರು ನಾರದರೆಲ್ಲ ನೆರೆದರಂಬರದಲ್ಲಿ ಹರಸಿ ಜಯಜಯವೆಂದು ದ್ರೌಪದಿಯ ಸಿರಿಮುಡಿಗೆ ಸುರಿಸಿದರೂ ಪೂ ಮಳೆಗಳಾ। ಹರಿಯ ನಾಮಾವಳಿಯ ಪೊಗಳುತಲಿ ದಿವಿಜೇಂದ್ರ ಮರಳಿ ಪೋದನು ತನ್ನ ಪಟ್ಟಣಕೆ ಧರೆಯೊಳಗೆ ಹರಿಯ ನೆನೆದವರೇನು ಧನ್ಯರೋ ದ್ರೌಪದಿಯ ಹರಿಯ ನಾಮವೆ ಕಾಯಿತು॥13॥ ಶ್ರೀವಾಸುದೇವನಾಜ್ಞಾಪಿಸಿದ ರುಕ್ಮಿಣಿಗೆ। ದೇವಿ ಕೇಳೆಮ್ಮ ಭಾಷೆಯು ಮುಂದೆ ಅರ್ಜುನಗೆ ನಾನೆ ಸಾರಥಿಯಾಗಿ ಸಲಹುವೆವು ಅವರೆಮ್ಮ ಜೀವ ಪಾಂಡವರೆಂದನು। ಆವನಿದನುದಯ ಕಾಲದೊಳೆದ್ದು ಭಕುತಿಯಲಿ ಭಾವಶುದ್ಧಿಯಲೋದಿ ಭಜನೆ ಮಾಳ್ಪನೋ ಅವನ ಸಾವಿರಾರ್ಜನ್ಮಗಳ ಸಂಚಿತ ಘರಾಶಿಗಳು ತಾವೆ ಹರಿಯುವುವುದಿಟವು॥14॥ ಮಂಗಳಂ ಮುರಹರಗೆ। ಮಂಗಳಂ ನರಹರಿಗೆ। ಮಂಗಳಂ ಸಿರಿವರಗೆ। ಮಂಗಳಂ ಸಿರಿಧರಗೆ। ಮಂಗಳಂ ಕರಿವರದ ಕಮಲಾಯತಾಕ್ಷನಿಗೆ। ಮಂಗಳಂ ಕರುಣನಿಧಿಗೆ। ಮಂಗಳಂ ಪರಮಾತ್ಮ ಪರಿಪೂರ್ಣ ನರಹರಿಗೆ। ಮಂಗಳಂ ತರುಣಿಯಭಿಮಾನವನು ಕಾಯ್ದವಗೆ। ಮಂಗಳಂ ಸಿರಿಯರಸ ಪುರಂದರ ವಿಠಲಗೆ ಮಂಗಳಂ ಗಿರಿವಾಸಗೆ॥15॥

ವಿದುರನ ಭಾಗ್ಯವಿದು

ವಿದುರನ ಭಾಗ್ಯವಿದು॥ಪ॥ ನಮ್ಮ ಪದುಮಜಲಾಂಡ। ತಲೆ ತೂಗಿದನಿದಕೋ (ಇದು ಕಂಡ ಜಗವೆಲ್ಲ ತಲೆದೂಗುತಿಹುದು)॥ಅ.ಪ॥ ಕುರುರಾಯನು ತನ್ನನುಜನು ರವಿಜನು। ಗುರುಗಾಂಗೇಯರು ವಿದುರಿನಲಿ। ಹರಿಸಿರಥವನು ನಡುಬೀದೀಲಿ ಬರುವಾಗ। ಹರಿಸಿ ರಥವನು ನಡುಬೀದೀಲಿ ಬರುವಾಗ। ಹರಿಯನು ಕಂಡನು ಹರುಷದಲಿ॥1॥ ಹೃದಯದೊಳಗೆ ನೆಲೆಗೊಂಡಿಹ ಹರಿಯನು। ಎದುರಲಿ ಕಾಣುತ ವಿದುರನು ತಾ। ಸದನವನೂಕುತಲಾ ಕ್ಷಣಬೀದಿಗೆ। ಮುದದಿಂದ ಕುಣಿದಾಡುತ ಬಂದಾ॥2॥ ದೂರದಲೆ ಮುರವೈರಿಯ ಕಾಣುತ। ಹಾರುತ ಚೀರುತ ಹರುಷದಲೀ। ಧಾರೆಧಾರೆನೇತ್ರುದಕವ ಸರಿಸುತ। ಬಾರಿಬಾರಿ ಹಿಗ್ಗುತ ಮನದಲಿ।3॥ ಆಟಕೆ ಲೋಕಗಳೆಲ್ಲವ ಸೃಜಿಸುವ ಸಾಟಕಧರ ತನ್ನ ಲೀಲೆಯಲಿ। ನೀಟಾದವರ। ಮನೆಗಳ ಜರಿದು ಕುಟೀರದಲಿ ಬಂದು ಹರಿ ಕುಳಿತಾ॥4॥ ಓಡುವ ಹಾಡುವತಾ ಚೀರಾಡುವುದು। ನೋಡಿ ನಗುತಲಿರೆ ಮಾಧವನು। ನೀಡುತ ಕರವ ಪಿಡಿದು ಬಿಗಿದಪ್ಪಿಕೊಂಡು। ಕುಟೀರದಲಿ ಬಂದು ಹರಿ ಕುಳಿತಾ॥5॥ ಅಡಿಗಡಿಗೆ ತನ್ನ ತನುಮನ ಹರಹಿ। ಅಡಿಗೆರೆಗುತ ಗದ್ಗದ ಸ್ವರದೀ। ನುಡಿಗಳು ತೊದಲುತ ರೋಮಾಂಚನದಲಿ। ದುಡುದುಡು ಓಡಾಡುವ ದಶದಿಶೆಗಳಲಿ॥6॥ ಶ್ರೀನಿವಾಸ ಮಂದಿರದೊಳು ಬರಲು। ಆನಂದಾಬ್ಧಿಯೊಳೀಜುತಲೀ। ಏನೆಂಬೆನು ಸುಕೃತವೇನು ಒದಗಿತೋ। ತಾನೆ ಬಂದ ಬಹು ವಿಚಿತ್ರವಿದೆನುತ॥7॥ ಕಂಗಳ ಉದಕದಿ ಪಾದವ ತೊಳೆದು। ಗಂಧವ ಪೂಸಿ ತನುವ ಮರೆದು। ಮಂಗಳ ಮಹಿಮನ ಚರಣಕ್ಕೆರಗಿ। ಪುಷ್ಪಂಗಳ ಪೂಜೆಯ ಮಾಡಿದನು॥8॥ ಕ್ಷೀರವಾರಿಧಿ ಶಯನಗೆ ಆ ವಿದುರನು। ಕ್ಷೀರವನುಣ ಬಡಿಸಲು

ಅದನು। ವಾರಿಜನಾಭನು ಕರಸಂಪುಟದಿಂ। ಆರೋಗಿಣಿಸಿದನು ಘನತೆಯಲಿ॥9॥ ಒಂದು ಕುಡಿಕೆ ಹಾಲ ಹರಿತಾ ಸವಿದು। ಮುಂದಕೆ ಹರಿಸಿದ ಧರೆಯ ಮೇಲೆ ಇಂದಿರೆಯರಸನ ಚರಿತೆ ವಿಚಿತ್ರವು। ಚಂದದಿ ಹರಿಯಿತು ಬೀದಿಯಲಿ॥10॥ ದೊರೆ ನಿಮ್ಮ ಕರೆಸಿದ ಬರಬೇಕು ಎನ್ನಲು। ಹರಿಯು ನಸುನಗುತಲಿ ಹೊರಟುನಿಂತ। ಧರೆಗುಂಗುಷ್ಟವನೂರಲು ರಾಜರು। ಉರುಳಿ ಬಿದ್ದರು ಶ್ರೀಪಾದದ ಮೇಲೇ॥11॥ ಕರುಣಾಕರ ಶ್ರೀಹರಿ ತನ್ನ ಭಕ್ತರ। ನಿರುತದಿ ಪೊರೆವನು ಆಯತದಿ। ಸಿರಿಯರಸನಮ್ಮ ಪುರಂದರ ವಿಠಲನ। ಶರಣರೆ ಧನ್ಯರು ಧರೆಮೇಲೇ॥12॥

ಹೆಮ್ಮೆಯಾಡಲು ಬೇಡಿ

ಹೆಮ್ಮೆಯಾಡಲು ಬೇಡಿ ಹೆಮ್ಮೆ ಈಡೇರದು। ಹೆಮ್ಮೆಯಿಂದಲಿ ನೀವು ಕೆಡಬೇಡಿರಯ್ಯಾ॥ಪ॥ ಕರುಪನಾ ಸಭೆಗಾಗಿ ಕೃಷ್ಣತಾ ಬರಲೊಮ್ಮೆ। ಕರೆದು ಮನ್ನಣೆಯ ತಾ ಮಾಡದಿರಲು। ಧರೆಗೆ ಶ್ರೀಕೃಷ್ಣ ಉಂಗುಷ್ಠವನೊತ್ತಲು। ದುರುಳ ಸಿಂಹಾಸನವಬಿಟ್ಟುರುಳಿದಾ॥1॥ ಅತಿ ವೇಗದಲಿ ಕೃಷ್ಣ ಸತ್ಯಭಾಮೆಯ ಕರೆದು। ಸತಿ ಸೀತೆಯಾಗೆಂದು। ನೇಮಿಸಲಾಗ। ಮತಿವಂತೆ ಬಗೆಬಗೆ ಶೃಂಗಾರವಾದರೂ। ಸೀತಾಸ್ವರೂಪ ತಾನಾಗಲಿಲ್ಲ॥2॥ ಇಂತಿಂಥಾ ದೊಡ್ಡವರು ಈ ಪಾಡುಪಡಲಾಗಿ ಪಂಥಗಾರಿಕೆ ತರವೇ ಅಲ್ಪ ಜನಕೆ ಸಂತಜನರೊಡನೆಯ ಶ್ರೀ ಪುರಂಧರವಿಠಲನ್ನ। ಸಂತತ ಮನದಲಿ। ಚಿಂತಿಸಿ। ಸುಖಿಯಾಗೋ ಮನುಜಾ॥3॥

ಹೂವ ತರುವರ ಮನೆಗೆ — ರಾಗ: ಸಿಂಧೂಭೈರವಿ-ಝಂಪೇತಾಳ

ಹೂವ ತರುವರ ಮನೆಗೆ ಹುಲ್ಲ ತರುವ॥ಪ॥ ಅವ್ವೆ ಲಕುಮೀರಮಣ ಇವಗಿಲ್ಲ ಗರುವ॥ಅ.ಪ॥ ಒಂದು ದಳ ಶ್ರೀತುಳಸಿ ಬಿಂದು ಗಂಗೋದಕವ। ಇಂದಿರಾರಮಣಗರ್ಪಿತವೆನ್ನಲು। ಒಂದೇ ಮನದಲಿ ಸಿಂಧುಶಯನ ಮುಕುಂದ ಎನೆ ಎಂದೆಂದು ವಸಿಪನಾ ಮಂದಿರದೊಳಗೆ॥1॥ ಪರಿಪರಿಯ ಪುಷ್ಪಗಳ ಪರಮಾತ್ಮಗರ್ಪಿಸಿ ಪರಿಪೂರ್ಣನೆಂದು ಪೂಜೆಯನು ಮಾಡೆ। ಸರಸಿಜಾಕ್ಷನು ತನ್ನ ಸಕಲ ಸ್ವಾತಂತ್ರ್ಯದಲಿ ಸರಿಭಾಗ ಕೊಡುವ ತನ್ನರಮನೆಯ ಒಳಗೆ॥2॥ ಪಾಂಡವರ ಮನೆಯೊಳಗೆ ಕುದುರೆಗಳ ತಾ ತೊಳೆದು ಪುಂಡರೀಕಾಕ್ಷ ತಾ ಹುಲ್ಲ ತಂದ। ಅಂಡಜಾಧಿಪ ನಮ್ಮ ಪುರಂದರ ವಿಠ್ಠಲನು ತೊಂಡರಿಗೆ ತೊಂಡನಾಗಿ ಸಂಚರಿಸುತಿಹನು॥3॥

ಹದಿನಾಲ್ಕು ಲೋಕಕೆದಾತಾ ಹರಿ

ಹದಿನಾಲ್ಕು ಲೋಕಕೆದಾತಾ। ಹರಿ। ಪಾಂಡವರಮನೆದೂತ॥ಪ॥ ಚತುರ ಹಸ್ತದಿಂದೆಂಜಲು ಬಳಿವ। ಅತಳಿತ ಪೊತ್ತದ ಕಟ್ಟಿ ಬಿಸಾಡುವ ಹಿತವರಿಯುತ ನೀಲಾಂಜನ ಸುರಿಸುವ। ಘೃತದಧಿ ಕ್ಷೀರೋದ್ದಧಿಮತ ಬಡಿಸುವ। ಅತಿವತ್ಸಕೌಸ್ತುಭ ಅಧಿಕವೆಂದೆನಿಸುವ। ಹಿತದಿ ಪೀತಾಂಬರ ಹೊತ್ತು ನಾಮವೆಗತಿ। ಅತಿ ಚಿತ್ರಾಗತಿ ಅತಿಶಯತಿಳಿದು। ಸತತ ಸಮಯದಲಿ ಕೆಲಸಕೆ ಒದಗುವ ಹರೀ॥1॥ ವರ್ಮ ಬೆಳ್ಳಿಬೆತ್ತಂಬೆಗಳಿಡುವ। ಧರ್ಮಕೆ ಶಾಲೆಯೊಂದೆಮ್ಮೆ ನಡಸುವ। ನಿರ್ಮಲವಾಗಿ ಕುದುರೆ ತೊಳದು ತರುವ। ಮರ್ಮವರಿತು ಕವಳೋದಕ ಕೊಡುವ। ಪೆರ್ಮೆಯಿಂದ ರಥಕಟ್ಟಿ ಸರ್ವೋತ್ತಮ। ಧರ್ಮನನುಜಹೊರಟಾಗ ನಡೆತರುವ॥ಹರೀ॥2॥ ಕಾಸುವೀಸದಾಸಂಬಳ ಬಯಸ। ಸಾಸಿರನಾಮದ ಒಡೆಯ ಸಿರಿಯರಸ। ಸಾಸಿವೆಯಷ್ಟಾ ಯಾಸವ ಬೆರೆಸ। ದೋಷಕಾರಿ ದೈತ್ಯರ ಸಂಹರಿಪ। ಭೂಸುರ ಗುಣನಿಧಿ ನೆಲೆಯ ವೆಂಕಟೇಶ ವಿಠಲೇಶ ಸದಾ ಭಕ್ತರ ಬಳಿಯಲಿ ಬಲು ಹರುಷ। ಹರಿ॥3॥

ಓದಿಸಿದರು ಪಾಂಡವರು — ರಾಗ: ಬೇಹಾಗ್

ಓದಿಸಿದರು ಪಾಂಡವರು ಯಾದವಾದಿ ನಾಥನಿಗೆ। ಆದರಾದಿ ವಸ್ತ್ರಭೂಷಣಾದಿಗಳನು ಮೋದದೀ...॥ಪ॥ ರಾಜಸೂಯಯಾಗದಲ್ಲಿ ರಾಜ ರಾಜರು ನೆರೆದಿರಲು। ರಾಜೀವಾಂಬಕನಿಗೆ ಪೂಜೆಗೈದು ವಿಭವದಿ॥1॥ ಲಲಿತಮಣಿ ಕಿರೀಟವನ್ನು ಹೊಳೆವರತ್ನಮಾಲೆಯನು। ಥಳಥಳಿಸುವೋ ಹೇಮ ವಸನಗಳನು ಧರ್ಮರಾಯನು॥2॥ ದೇವಯೋಗ್ಯವಾದ

ರತ್ನಪಾಲಿಪಕುಂಡಲಗಳನು। ದೇವಕೀಯ ತನುಜಗೇ ದೇವತನಯ ಭೀಮನು॥3॥ ಕೀರ್ತಿಭರಿತ ಲೋಕ ಕೃಷ್ಣಮೂರ್ತಿಗೆ ಅರ್ಜುನನು। ಕೀರ್ತಿಸುತ ವರಮಣಿಯ ಭುಜಕೀರ್ತಿಕಂಕಣಾವನು॥4॥ ಪ್ರಕಟ ಮಳೆ ರಂಜಿತನು ಕಟಿಕ ಸೂತ್ರವಾನೊಲಿದು ನಕುಲ ಓದಿಸಿದನು ಕೃಷ್ಣಗೆ ಅಕುಟಿಲ ಸಂತೋಷದಿ॥5॥ ದೇವಯೋಗ್ಯವಾದ ರತ್ನಮಯವಾದಾಭೂಷಣಂ। ಓದಿಸಿದನು ಮುರಹರಗತಿ ಮೋದದಿಂ ಸಹದೇವನು॥6॥ ಅಗ್ರಗಣ್ಯನಾಗಿ ಧರ್ಮ ಅಗ್ರಪೂಜೆಯನೇ ಮಾಡಿ ಆದಿಪುರುಷನಾ ನೋಡಿ ಆನಂದದಿಂದ ಹಾರಪದಕವು ದಿವ್ಯ ಪಟ್ಟೆಪೀತಾಂಬರ ಇಷ್ಟ ದೈವವೂ ನಮಗೇ ಕೃಷ್ಣನೆಂದೆನುತಲಿ ಓದಿಸಿದನು॥7॥ ಧರ್ಮರಾಜಸಭೆಯಲ್ಲಿ ರಾಜೀವ ನೇತ್ರನಾ ನೋಡಿ ಸಂಭ್ರಮದಿ... ಧರ್ಮಾನಂದನನಿಗೆ ಓದಿಸಿದನು ರಾಜ ಸಭೆಯಲ್ಲಿ॥8॥ನಿಗಮ ಗೋಚರಗೆ ನಿಲುವಂಗಿ ಮುಂಡಾಸು ಪ್ರೇಮದಿಂದಲಿ ಪಾರ್ಥ ಆ ಮಹಾ ಸಭೆಯಲ್ಲಿ ದಿಗ್ವಿಜಯದಲ್ಲಿ ತಂದ ಮುತ್ತುರತ್ನಂಗಳ ಇಷ್ಟದೈವವು ನಮಗೇ ಕೃಷ್ಣನೆಂದೆನುತಲಿ ಓದಿಸಿದನು॥9॥ ಪಾರ್ಥರಾಜಸಭೆಯಲ್ಲಿ ರಾಜೀವ ನೇತ್ರನಾ... ನೋಡಿ ಸಂಭ್ರಮದಿ ಪಾರ್ಥನಂದನನಿ- ಗೋದಿಸಿದನು ರಾಜಸಭೆಯಲ್ಲಿ॥10॥ ಸಾಗರರೂಪನಿಗೆ ಎಳೆಸಾಸಿರ ಬೆಲೆಯುಳ್ಳ ಒಂಟಿ ಚೌಕುಳಿ ಮತ್ತು ಉಂಗುರ ಉಡಿದಾರ ಸೋಮಕುಲ ಶೇಖರನೂಸ್ವಾಮಿ ಶ್ರೀಕೃಷ್ಣನು ಇಷ್ಟದೈವವು ನಮಗೇ ಶ್ರೀಕೃಷ್ಣನೆಂದೆನುತಲೀ ಓದಿಸಿದನು॥11॥ ಭೀಮರಾಜ ಸಭೆಯಲ್ಲಿ ರಾಜೀವ ನೇತ್ರನಾ ನೋಡಿ ಸಂಭ್ರಮದಿ ಧರ್ಮನಂದನನಿಗೋದಿಸಿದನು ರಾಜ ಸಭೆಯಲ್ಲಿ ॥12॥

ಲೋಕೋದ್ಧಾರಕೆ ಗೀತಾಮೃತವನು (ಗೀತೆಯ ಸಾರ-ಲಾವಣಿ)

ಲೋಕೋದ್ಧಾರಕೆ ಗೀತಾಮೃತವನು। ತಾನೆ ಕರೆದನು ಶ್ರೀಕೃಷ್ಣಾ। ಶೋಕವ ನೀಗುವ ಉಪನಿಷತ್ ಧರ್ಮವ ಉಪದೇಶಿಸಿದಾ ಗುರುದೇವ॥1॥ ಧೀರ ಪಾರ್ಥನ ಶಂಕೆಯ ಶೋಕವ। ದೂರಮಾಡಿದ ಜಗದೊಡೆಯ। ಯಾರಿಗು ದೇಹವು ಶಾಶ್ವತವಲ್ಲವು। ಎಂಬುದ ತೋರಿದ ಗುರುದೇವ॥2॥ ಆತ್ಮನೆ ನಿತ್ಯನು ಅಚಲ ಸನಾತನು। ಎಂಬುದ ಸಾರಿದ ಗುರುದೇವ। ಆತ್ಮನ ರೂಪವ ನಿಜದಿಂದರಿವರೆ। ಶಾಂತರು ಎಂದರು ಕರುಣಾಳು॥3॥ ಇಂದ್ರಿಯ ಗೆಲುವಿಗೆ ಬುದ್ಧಿಯು ಲೇಶವು। ಅಳುಕದು ಎಂದನು ಶ್ರೀಪತಿಯು। ಇಂದ್ರಿಯ ಪಾಶಕೆ ಸಿಕ್ಕುವ ಮನುಜರು। ಕೆಡುವರು ಎಂದನು ಅಚ್ಯುತನು॥4॥ ಫಲವನು ಬಯಸದೆ ಕರ್ಮವ ಮಾಳ್ಪುದು। ಒಳ್ಳೆಯದೆಂದನು ಶ್ರೀಕೃಷ್ಣಾ। ಫಲಗಳಪೇಕ್ಷೆಯ ಬಿಡುವರೆ ಶಾಂತಿಯ ಪಡೆವರು ಎಂದನು ಗುರುದೇವಾ॥5॥ ತನ್ನಯ ಧರ್ಮದಿ ನಡೆಯುವ ನರರಿಗೆ। ಸಿದ್ಧಿಯ ಬಯಸಿದ ಜಗದೊಡೆಯಾ। ಅನ್ಯರ ಧರ್ಮದಿ ನಡೆವಗೆ ಭಯವದು ತಪ್ಪದು ಎಂದನು ಅಸುರಾರಿ॥6॥ ಬುದ್ಧಿವಿಕಾರವೆ ಪಾಪಕೆ ಹೇತುವು। ಕಾಮವು ಎಂದನು ಮುರರಿಪುವು। ವೃದ್ಧಿಯ ಪಡೆಯಲು ಕಾಮವ ಬೇಗನೆ। ಅಡಗಿಸಿ ಎಂದನು ಕರುಣಾಳು॥7॥ ಜ್ಞಾನದಿ ಅಧಿಕವು ಬೇರೊಂದಿಲ್ಲವು। ಎಂಬುದನರುಹಿದ ಶ್ರೀಪತಿಯು। ಜ್ಞಾನವ ಪಡೆಯಲು ಸದ್ಗುರು ಸೇವೆಯ ಮಾಡಿರಿ ಎಂದನು ಅಚ್ಯುತನು॥8॥ ಭಕ್ತಿಯೆ ಮುಕ್ತಿಗೆ ಪಥವೆಂದವರಿಗೆ। ಜ್ಞಾನಿಗಳೆಂದನು ಶ್ರೀಕೃಷ್ಣಾ। ಭಕ್ತರ ವೃಂದಕೆ ಬಹಳ ಸುಲಭತಾ। ನೆಂಬುದ ತೋರಿದ ಗುರುದೇವಾ॥9॥ ತನ್ನಯ ಮಹಿಮೆಯ ಅದ್ಭುತರೂಪವ ಪಾರ್ಥಗೆ ತೋರಿದ ಜಗದೊಡೆಯ। ತನ್ನಯಚರಣದಿ ನಿಶ್ಚಲ ಭಕ್ತಿಯ। ಮಹಿಮೆಯ ಪೇಳಿದ ಅಸುರಾರಿ॥10॥ ಕಾಮವು ಕ್ರೋಧವು ಲೋಭವು ನರಕಕೆ। ದಾರಿಗಳೆಂದನು ಮುರರಿಪುವು। ಕಾಮಾದಿಗಳ ಜಯಿಸುವ ನರರೇ। ಶ್ರೇಷ್ಠರು ಎಂದನು ಕರುಣಾಳು॥11॥ ಕಾಲದ ಪಾತ್ರವ ಅರಿಯುತ ದಾನವ। ಮಾಡಿರಿ ಎಂದನು ಶ್ರೀಪತಿಯು। ಬಾಳನು ಬೆಳಗಿಸಿ ಸದ್ಗತಿ ಕೊಡುವುದು। ದಾನವು ಎಂದನು ಅಚ್ಯುತನು॥12॥ ಕರ್ಮವನೆಲ್ಲವ ದೇವರ ಪ್ರೀತಿಲಿ ಗೈಯುವುದೆಂದನು ಶ್ರೀಕೃಷ್ಣಾ। ಕರ್ಮಸಹಿತ ಕರ್ತೃಗೆ ಬಿಡುವರೆ ತ್ಯಾಗಿಗಳೆಂದನು ಗುರುದೇವಾ॥13॥ ದೈವೀಗುಣಗಳನಪ್ಪುತ ನಡೆವರೆ। ಸಾತ್ವಿಕರೆಂದನು ಜಗದೊಡೆಯ। ದೈವಾಂಶ ಪುರುಷರು ಮಹಿಮೆಯ। ನುಳ್ಳವರೆಂಬುದ ತೋರಿದ ಅಸುರಾರಿ॥14॥ ಶಾಸ್ತ್ರವೆ ಮೀರದೆ ನಡೆವರು ಸಿದ್ಧಿಯ। ಪಡೆಯುವರೆಂದನು ಮುರರಿಪುವು। ಶಾಸ್ತ್ರವೆ ಸಮಸ್ತ ಕಾರ್ಯಕೆ ಪ್ರಮಾಣ। ವಾಗಿಹುದೆಂದನು ಕರುಣಾಳು॥15॥ ಭಕ್ತಿಯೆ ತನ್ನಯ ಚರಣವ ಶರಣವ। ಮಾಳ್ಪುದು ಎಂದನು ಶ್ರೀಪತಿಯು। ಭಕ್ತರ ಪಾಪವ ಹರಿಸಲು ತಾನೇ। ಶಕ್ತನು ಎಂದನು ಅಚ್ಯುತನು॥16॥ ಮನುಜರ ಇಹಪರ ಸೌಖ್ಯದ ಮರ್ಮವ।

ತಿಳಿಸುವಲೆಸೆಯುವ ಶಾಸ್ತ್ರವಿದು। ಅನುದಿನ ಸಜ್ಜನರೆಲ್ಲರು ಮುದದಲಿ। ಪಾನ ಮಾಡುವ ಅಮೃತವಿದು॥17॥ ಲೋಕದ ಸಮಸ್ತ ಮತಗಳಲೆಸೆಯುವ ಸಾತ್ವಿಕಾಂಶಗಳ ಸಾರವಿದು। ಶೋಕವ ಭೀತಿಯ ಬೇಗನೆ ಬಿಡಿಸುವ। ಶಕ್ತಿಯ ಪಡೆದಿಹ ಮಂತ್ರವಿದು॥18॥ ದೇವನೀವಚನಾಮೃತವನೇ ವರ್ಷಿಪ। ಮಹಿಮೆಯ ಹೊತ್ತಿಹ ಗ್ರಂಥವಿದು। ನೋವನು ಕೊಡುವ ಭವಬಂಧನವಾ। ಸುಲಭಧಿ ಭೇದಿಪ ಅಸ್ತ್ರವಿದು॥19॥ ಇಂತಹ ಗೀತಾಮೃತದಾ ಪಾನವ। ನಿತ್ಯವೂ ಮಾಡುವ ಮನುಜರು ತಾವು। ಶಾಂತಿಯ ಸೌಖ್ಯವ ಬೇಗನೆ ಪಡೆಯುತ। ಮಂಗಳ ಮುಕ್ತಿಯ ಪಡೆಯುವರು॥20॥ ಓಂ ಶಾಂತಿಃ ಶಾಂತಿಃ ಶಾಂತಿಃ॥

❖ ❖ ❖

ಕಮಲನಯನ ವಾಸುದೇವ **ರಾಗ: ಜಂಜೂಟಿ-ರೂಪಕತಾಳ**

ಕಮಲನಯನ ವಾಸುದೇವ। ಕರಿವರದ ಮಾಂ ಪಾಹಿ॥ಪ॥ ಅಮಲ ಮೃದುಲ ನಳಿನ ವದನ। ಅಚ್ಯುತಾ ಮುದಂದೇಹಿ॥ಅ.ಪ॥ ನಾರದಾದಿ ಗಾನಲೋಲ। ನಂದಗೋಪಬಾಲ। ವಾರಿಜಾಸನಾನುಕೂಲ ಮಾನಿತ ಗುಣಶೀಲ॥1॥ ಜಾರ ಚೋರ ಮೇರು ಧೀರಸಾಧುಜನ ಮಂದಾರ। ಪಾರ ರಹಿತ ಘೋರ ಕಲುಷ। ಭವಜಲಧಿವಿದೂರ॥2॥ ಕಾಮಜನಕ ಶ್ಯಾಮಸುಂದರ। ಕನಕಾಂಬರ ಧರಣ। ರಾಮದಾಸ ವಂದಿತ। ಶ್ರೀರಾಜೀವಾದ್ಭುತ ಚರಣಾ॥

ಜಯ ಜನಾರ್ದನ ಕೃಷ್ಣ ರಾಧಿಕಾಪತೇ **ರಾಗ: ಮಧ್ಯಮಾವತಿ**

ಜಯ ಜನಾರ್ದನ ಕೃಷ್ಣ ರಾಧಿಕಾಪತೇ। ಜನವಿಮೋಚನ ಕೃಷ್ಣ ಜನ್ಮ ಮೋಚನ॥ಪ॥ ಗರುಡವಾಹನ ಕೃಷ್ಣ ಗೋಪಿಕಾಪತೇ। ನಯನ ಮೋಹನಾ ನೀರಜೇಕ್ಷಣ॥ಅ.ಪ.॥ ಸುಜನ ಬಾಂಧವ ಕೃಷ್ಣ ಸುಂದರಾಕೃತೇ। ಮದನ ಕೋಮಲಾ ಕೃಷ್ಣ ಮಾಧವಾಹರಿ। ವಸುಮತಿ ಪತಿ ಕೃಷ್ಣ ವಾಸವಾನುಜ। ವರಗುಣಾಕರ ಕೃಷ್ಣ ವೈಷ್ಣವಾಕೃತೇ॥1॥ ಸುರಚಿರಾನನ ಕೃಷ್ಣ ಶೌರ್ಯವಾರಿಧೇ। ಮುರಹರ ವಿಭೋ ಕೃಷ್ಣ ಮುಕ್ತಿದಾಯಕ। ವಿಮಲ ಪಾಲಕ ಕೃಷ್ಣ ವಲ್ಲಭೀ ಪತೇ। ಕಮಲ ಲೋಚನಾ ಕೃಷ್ಣ ಕಾಮ್ಯದಾಯಕ॥2॥ ವಿಮಲಗಾತ್ರನೀ ಕೃಷ್ಣ ಭಕ್ತ ವತ್ಸಲ। ಚರಣ ಪಲ್ಲವಂ ಕೃಷ್ಣ ಕರುಣ ಕೋಮಲಂ। ಕುವಲಯೀಕ್ಷಣ ಕೃಷ್ಣ ಕೋಮಲಾಕೃತೇ। ತವ ಪದಾಂಬುಜಂ ಕೃಷ್ಣ ಶರಣಮಾಶ್ರಯೇ॥3॥ ಭುವನ ನಾಯಕ ಕೃಷ್ಣ ಪಾವನಾಕೃತೇ। ಗುಣಗಣೋಜ್ವಲ ಕೃಷ್ಣ ನಳಿನಲೋಚನ। ಪ್ರಣಯ ವಾರಿಧಿ ಕೃಷ್ಣ ಗುಣಗಣಾಕರ। ದಾಮಸೋದರ ಕೃಷ್ಣ ದೀನವತ್ಸಲ॥4॥ ಶಾಮಸುಂದರ ಕೃಷ್ಣ ಪಾಹಿಸರ್ವದಾ। ನರಕನಾಶನಾ ಕೃಷ್ಣ ನರಸಹಾಯಕ। ದೇವಕೀಸುತ ಕೃಷ್ಣ ಕಾರುಣ್ಯಾಂಬುಧೇ। ಕಂಸನಾಶನ ಕೃಷ್ಣ ದ್ವಾರಕಾ ಸ್ಥಿತ॥5॥ ಪಾವನಾತ್ಮ ಕ ಕೃಷ್ಣ ದೇಹಿಮಂಗಳಂ। ತತ್ಪಾದಾಂಬುಜಂ ಕೃಷ್ಣ ಶಾಮಕೋಮಲಂ। ಭಕ್ತವತ್ಸಲಂ ಕೃಷ್ಣ ಕಾಮ್ಯದಾಯಕ। ಪಾಲಿಸೆನ್ನನ್ನು ಕೃಷ್ಣ ಶ್ರೀಹರಿನಮೋ॥6॥ ಭಕ್ತದಾಸ ನಾ ಕೃಷ್ಣ ಹರಸುನೀಸದಾ। ಕಾದು ನಿಂತೆ ನಾ ಕೃಷ್ಣ ಸಲಹೆಯಾವಿಭೋ। ಗರುಡವಾಹನ ಕೃಷ್ಣ ಗೋಪಿಕಾಪತೇ। ನಯನ ಮೋಹನಾ ಕೃಷ್ಣ ನೀರಜೇಕ್ಷಣ॥7॥

ಕೇಳೋ ವಿಜಯ ದಿವ್ಯ ಸಾಲಿಗ್ರಾಮದ **ರಾಗ: ಕಾಂಭೋದಿ**

ಕೇಳೋ ವಿಜಯ ದಿವ್ಯ ಸಾಲಿಗ್ರಾಮದ ಮಹಿಮೆ। ಹೇಳುವೆ ನಿನಗತಿ ಪ್ರೀತಿಯಿಂದ೮॥ಪ॥ ಗಣಿಕ ನಾರಿಯಳೊರ್ವ ಗಂಡಿಕಾಕ್ಷಿಯು ತಾನು। ದಿನಕೊಂದು ಸಾವಿರ ಎನುತಿರ್ಪಳು। ಹರಿ ತನ್ನ ಮನದಲ್ಲಿ ಹರಿತಂದ ಮುತ್ತಿನವನಾಗಿ। ಮನವ ನೋಡುವೆನೆಂದು ಧನವ ತಂದಿರ್ಪನು॥1॥ ಮಣಿ ಮಂಚದಲವನ ಕುಳ್ಳಿರಿಸಿ ಶೃಂಗಾರವ। ತಾಳಿ ಬರುತಿರೆ ವಮನವೆಂದ। ತಿರುಗಿ ಬರಲು ಬಹು ನರಕದ ಮಯವಿರೆ ಮನದಿ ಹೇಸದೆ ಬಾಲೆ ಬೆಳತನ ತೊಳೆದಳದನು॥2॥ ಹರಣ ಪೋಪುದ ಕಂಡು ಹರಿಹರಿ ಎನ್ನುತ। ಇರದೆ ಪ್ರಾಣವ ತೊರೆದಿರ್ಪನು। ಹರಣದ ಒಡೆಯಗೆ

ಅಸುವನರ್ಪಿಪೆನೆಂದು। ಗಳಿಸಿದ ಹಣವೆಲ್ಲವ ಬೀರಿದಳ್ ದ್ವಿಜರಿಗೆ॥3॥ ಚಂದಣಗರು ಗಂಧದಿಂದಗ್ನಿ ಪುಟಗೈಸಿ। ಚಂದದಿಂದಲೆ ನುತಿಸಿ ಆನಂದದಿಂದ। ಇಂದಿರೆ ರಮಣಗೆ ವಂದಿಸುತಲೆ ಬಾಲೆ। ನಂದ ಬಾಲನ ಕೂಡೆ ಬಿದ್ದಳಗ್ನಿಯಲಿ॥4॥ ಹಚ್ಚಿದಗರು ಗಂಧ ಹಚ್ಚಿದಂತಿರುವೊಳು। ಅಚ್ಚಳಿಯದೆ ತಾ ಇರುತಿರ್ಪಳು। ಅಚ್ಯುತಾನಂತ ತಾ ಪ್ರತ್ಯಕ್ಷವಾಗೇ ಬಂದು। ಮೆಚ್ಚಿದೆ ವರವನು ಬೇಡು ನೀಡುವೆನೆಂದನು॥5॥ ಎನ್ನೊಳು ಅಗಲದೆ ಇರುವೊಂದು ವರವನ್ನು। ಗಂಡಿಕಾ ನದಿಯೊಳು ಸರ್ವಕಾಲದೊಳು। ಉನ್ನಂತ ಕೊಪ್ಪಾರಸ್ವಾಮಿ ಸಾಲಿಗ್ರಾಮ। ಚೆನ್ನಾಗಿ ಮಡದಿಯ ತಾಳಿಕೊಂಡಿಹನಲ್ಲೇ॥6॥

❖ ❖ ❖

ಶ್ರೀಕೃಷ್ಣ ಸುಧಾಮ

ನಾನೇನ ಮಾಡಿದೆನೋ ರಂಗಯ್ಯನೆ

ನಾನೇನ ಮಾಡಿದೆನೋ ರಂಗಯ್ಯನೆ ನೀ ಎನ್ನ ಕಾಯಬೇಕೋ॥ಪ॥ ಮಾನಾಪಮಾನವು ನಿನಗಾದುದೇನಗೇನೋ। ದೀನರಕ್ಷಕ ಶ್ರೀ ತಿರುಪತಿಯ ವೆಂಕಟನೇ॥ಅ.ಪ॥ ಕರಿರಾಜ ಕರೆಸಿದನೇ। ದ್ರೌಪದಿದೇವಿ ಬರೆದೋಲೆ ಕಳುಹಿದಳೇ। ಋಷಿರಾಜಪತ್ನಿ ಕಲ್ಲಾಗಿದ್ದ ಅಹಲ್ಯೆಯ ಶಾಪ ಪರಿಹರಿಸಿದ್ಯಲ್ಲೋ ಸ್ವಾಮಿ॥1॥ ಮುಷ್ಟಿಡಿ ಅವಲಕ್ಕಿಯ ತಂದವನಿಗೆ ಕೊಡಲಿಲ್ಲ ವೇ ಭಾಗ್ಯವ। ಸರ್ಪಶಯನ ಶ್ರೀ ಪುರಂಧರವಿಠಲನೇ ನೀನಪ್ಪಂತೆ ಕಾಯೋ ಎನ್ನ ಸ್ವಾಮಿ॥

ಪಂಡರೀಶನೆ ಉಂಡು ತೃಪ್ತನಾಗು ರಾಗ: ಕಲ್ಯಾಣಿ

ಪಂಡರೀಶನೆ ಉಂಡು ತೃಪ್ತನಾಗು। ಪುಂಡರೀಶನೆ॥ ಬಡವನೆಂದು ತಿಳಿದೆಯೋನೋ ಬಡವನಲ್ಲವೇ ಸುಧಾಮ ಹುಡುಗನೆಂದು ತಿಳಿದೆಯೇನೋ ಹುಡುಗನಲ್ಲವೇ ಧೃವನು॥1॥ ಬಾಲೆ ಎಂದು ತಿಳಿದೆ ಏನೋ ಬಾಲೆಯಲ್ಲವೇ ಪಾಂಚಾಲಿ ಶೀಲವನು ನೋಡೆ ನೀನು ಶೀಲನೇನೆ ಅಜಮಿಳನು॥2॥ ರುಕ್ಮನಂತೆ ವ್ರತವನರಿಯೆ ಶುಕನಂತೆ ನಾ ಸ್ತುತಿಸಲರಿಯೆ। ಕರಿರಾಜನಂತೆ ನಾ ಕರೆಯಲರಿಯೆ ಹರಿಯೆ ಪೊರೆಯೈ ಕರುಣದಿಂದ॥3॥ ಹೊತ್ತು ಹೋಯಿತು ಪೂಜೆಗೆಂದು ಚಿತ್ತದೊಳಗೆ ಚಿಂತೆ ಏಕೋ ಬೇಡ ತುತ್ತು ಯಾಕೆ ಮುಟ್ಟದಿರುವೆ ಸಿಟ್ಟು ಏಕೋ ನನ್ನ ಮೇಲೆ॥4॥

ದ್ವಾರಕಾ ಪುರಕೆ ಸುಧಾಮ ಬಂದ

ದ್ವಾರಕಾ ಪುರಕೆ ಸುಧಾಮ ಬಂದ। ವಾರಿಜಾನಾಭನಾ ಕಾಂಬೋದೆ ಛಂದ॥ ಆಡಲರಿಯನು ವಾಕ್ಯ ಹೂಡಲರಿಯನು ಕದನ। ನೋಡಲಂಜುವ ಪರರ ಒಡವೆ ಕಂಗಳಲಿ॥ ಮೂರು ಕಾಳು ತಂದು ಮುಕುಂದಗರ್ಪಿತವೆಂದು। ಕೋರೀನೆ ಹೊದ್ದು ಕಾಲ ಕಳೆಯುತಲಿದ್ದ॥ ಪತಿವ್ರತೆಯು ತನ್ನ ಪತಿಗೆ ಸಾಮೀಪ್ಯ ಬಂದು। ಪತಿವ್ರತೆ ಕೇಳ್ದಳು ಪತಿಗೆ ಕರಗಳೆರಡನು ಮುಗಿದು। ಹಿತವ ಬಯಸುವರ್‍ಯಾರು ಇಲ್ಲವೆ ತಮಗೆಂದು। ಮತಿವಂತೆ ಮಾತಿಗೆ ಮನದಿ ಯೋಚಿಸಿ ಆತ॥ ರತಿಪತಿಯ ಪಿತ ನಮಗೆ ಅತಿ ಸಖನು ಎಂದ। ಸಿರಿದೇವಿ ರಮಣನಾ ಕಂಡು ಬರಬೇಕೆಂದು॥ ಎರಗಿ ಪತಿಯ ಪಾದಕ್ಕೆ ಬಿನ್ನಪವ ಮಾಡಿದಳು। ಮುಷ್ಠಿ ಅವಲಕ್ಕಿಯನು ಕಟ್ಟಿ ಜೀರ್ಣವಸ್ತ್ರದಲಿ॥ ಮಟ್ಟೇನೆ ಕಟ್ಟಿ ಹೆಗಲ ಮೇಲಿಟ್ಟು ನಡೆದ। ಹಿರಿಯಬ್ರಾಂಬರ ಕಂಡ ನರಿಗಳೆರಡನೆ ಕಂಡೆಯೋ॥ ಗರುಡನಾ ಕಂಡನೆ ಗಗನ ಮಾರ್ಗದಲಿ। ಮರುಗ ಮಲ್ಲಿಗೆ ಜಾಜಿ ಸುರಗಿ ಸೇವಂತಿಗೆಯು॥ ಸಿರಿದೇವಿರಮಣಗೆಂದೆನುತ ಮನದಲೇ ಅರ್ಪಿಸಿದ। ರತ್ನಗೋಪುರ ಕಂಡ ರಮಣೀಯ ವಾಗಿಹುದು॥ ಮುತ್ತಿನಾ ತೋರಣ ಮುಕುಂದನರಮನೆಗೆ।ಭೇರಿ ತುತ್ತೂರಿ ಮೃದುಂಗದಾ ರಭಸಗಳು॥ ವರಗಾಯನವ ಗಲಾಟೆ ಹರಿಪುರದಿ। ದ್ವಾರಕಾಪುರದ ವಿಸ್ತಾರ ವರ್ಣಿಸುವುದಕೆ॥ ಮೂರು ಕಣ್ಣುಳ್ಳವಗೆ ವಶವಲ್ಲವೋ। ಮೋರೆ ನಾಲ್ಕುಳ್ಳವಗೆ ಮಿಗಿಲು ನಾ ಕಾಣೆ॥ ಹದಿನಾರು ಸಾವಿರದ ಸ್ತ್ರೀಯರಾ ಮಂದಿರವು। ಮದನನಯ್ಯ ಮಂದಿರವು ಮಧ್ಯದಲ್ಲಿ॥ ಸಾರೇಲಿ ರುಕ್ಮಿಣಿ ಸತ್ಯಭಾಮಾದೇವಿ। ವಾರಿಜಾಮುಖಿಯರು ಪಾದಸೇವಕರು॥ ಪುರುವ ಕಂಡನೆ ವಿಪ್ರ

ಬೆರಗಾಗಿ ನೋಡಿದನು। ಅರಮನೆಯ ಬಾಗಿಲಲಿ ಅಂಜುತಲೆ ನಿಂತಿದ್ದ॥ ಬಂದ ಬ್ರಾಹ್ಮಣನಾ ಕಂಡು ಗೋಪಾಲಕರು। ಛಂದದಿಂದಲಿ ಹಾಸ್ಯಮಾಡಿ ನಗುತಿರಲು॥ ಹಿಂದಕ್ಕೆ ನಿಮ್ಮ ಮಿತ್ರ ಹೆಸರು ಸುಧಾಮನು ಬಂದಿಹನು ಎಂದು ಸುದ್ದಿಯನೆ ಪೇಳಿರೆನಲು॥ ದೇವಚಿತ್ತೈಸು ಪರಾಕು ದ್ವಾರದ ಮುಂದೆ। ಕೋರಿನೆ ಹೊದ್ದೊಬ್ಬ ಹಾರುವಯ್ಯನು॥ ಪೂರ್ವದಲಿ ತಮಗೆ ಸಖನಾಗಬೇಕಂತೆ। ಹೋಗಿಹೇಳಿರೆಂದು ಕಾಡೋನು ನಮ್ಮ॥ ಹರಿಯ ಅಪ್ಪಣೆಗೊಂಡು ಕರೆತಂದು ಸಖನ। ಪರಿಪರಿಯ ಪೀಠದಲಿ ಕುಳ್ಳಿರಿಸಿ ಉಪಚರಿಸಿ॥ ಬರಲಿಲ್ಲ ಏಕಯ್ಯ ಬಹುದಿನ ತಡೆದಿರಿ। ಮದುವೆ ಆಯಿತೆ ನಿಮಗೆ ಎನುತ ಕೇಳಿದನು॥ ಅಚ್ಯುತಾ ನಿಮ್ಮ ಕರುಣದಿಂ ಲಗ್ನವಾಯಿತು ಎನಗೆ। ಮಿತ್ರೆ ಕಳುಹಿದಳು ಎನುತ ಹೇಳಿದನು॥ ನಮ್ಮತ್ತಿಗೇ ಪ್ರೀತೀಲಿ ಕಳುಹಿದಾ ವಸ್ತುವನು। ಬಿಚ್ಚಿ ಹಾಕಿರಿ ನೀವು ಬಿಡಿಯ ಇಲ್ಲದಲೆ॥ ಬಂಗಾರದ ಪಾತ್ರೇಲಿ ಚಿಂದೀನೆ ಜಾಡಿಸಿದ। ಒಂದು ಎರಡು ಮುಕ್ಕು ಹಾಕಿದ ಕರುಣ ನಿಧಿಯು॥ ಇಂಬಾಯ್ತು ವೈಕುಂಠಪುರದೋಳಾ ವಿಪ್ರನಿಗೆ। ಮುಂಗೈಯ ಹಿಡಿದಳೆ ಬಂದು ರುಕ್ಮಿಣಿಯು॥ ಭಾವನೋರು ತಂದ ಮೇಲಾದ ವಸ್ತುವನು। ಯಾರಿಗೂ ಕೊಡದ್ದಾಂಗೆ ಮೆಲ್ಲೋದ ಉಚಿತವೇ ಎನಲು॥ ಬೀರಿದರು ಅವಲಕ್ಕಿ ದ್ವಾರಕಾಪುರವೆಲ್ಲ। ಮೀರಿ ಬಂದಿತು ಸಿರಿ ಸುಧಾಮಗಾಗ॥ ಮಾರ್ಗದಲಿ ದಣಿದಿರಿ ಮಾತುಗಳು ಬಿಡಿಬಿಡಿ। ಮಾಡಿರೀ ಭೋಜನವ ಎನುತ ಹರಿ ನುಡಿದ॥ ಹಾಗಲ್ದೀರೆ ಸೌತೆ ಭೋಗಿ ಕುಂಬಳಕಾಯಿ। ಗೋವರ್ಧನಾ ಕಾಯಿ ಗೋಟು ಹಾಗಲಕಾಯಿ॥ ಹಲಸು ಗುಳ್ಳದ ಕಾಯಿ ಗೆಣಸು ಬಾಳೇಕಾಯಿ। ಪಡವಲಾ ಕಾಯಿ ಪರಿಪರಿಯ ಶಾಖಗಳು॥ ಚಕ್ಕುಲೀ ಕರಿಗಡಬು ಅಪ್ಪಾವು ಅತಿರಸವು। ಚಿತ್ರಾನ್ನ ದಧ್ಯಾನ್ನ ಕೇಸರೀಭಾತು॥ ಶಾಲ್ಯಾನ್ನ ಷಡ್ರಸವು ಶಾವಿಗೆ ಪಾಯಸಗಳು। ಉಂಡು ಕೈ ತೊಳೆದರು ಕೊಂಡರು ತಾಂಬೂಲವನು॥ ಹಿಂದಕ್ಕೆ ಗುರುಪತ್ನಿ ಅಂದ ಮಾತುಗಳೆಲ್ಲ। ಛಂದದಿಂ ನೆನೆನೆನೆದು ಹಾಸ್ಯ ಮಾಡಿ ನಗುತಿರಲು॥ ಇಂಬಿಡದೆ ತೋರಿದನು ಅರಮನೆ ಗುಡಿಗೋಪುರಗಳು। ಕಂಡು ಬೆರಗಾಗಿ ಮಂಚದಲಿ ಮಲಗಿದನು॥ ಉದಯ ಕಾಲದಿ ವಿಪ್ರ ನದಿಯ ಸ್ನಾನವ ಮಾಡಿ। ಒದಗಿ ಆಹ್ನೀಕಗಳ ಮುಗಿಸಿಕೊಂಡು॥ ಯದುವಂಶ ತಿಲುಕನಿಗೆ ಹೋಗಿ ಬರುತೇನೆನಲು। ಪಾಲಿಸಿದನಪ್ಪಣೆಯ ಪಾಪನಾಶನನು॥ ಮಾಧವನ ಜನಕನು ಮಾಡಿದನು ಆಜ್ಞೆಯ। ಪರಿಪರಿಯ ವಿಧದಿ ಪಟ್ಟಣವ ರಚಿಸಿರೆಂದು॥ ಆಗ ಶಕುನವ ಕಂಡೆ ಅಮೃತಾನ್ನ ಉಂಡೇ। ಈಗೇನು ಸುಖವೊ ಇನ್ನೇನು ಫಲವೋ॥ ಎದುರಿಗೆ ಬಂದ ಮಾರ್ಬಲವು ಅಂದಣ ಸಹಿತ। ಕರೆತಂದರರಮನೆಗೆ ಅತಿ ಹರುಷದಿಂದ॥ ಬಂಗಾರನಿಟ್ಟಂಥಾ ವನಿತೆಯನೆ ಕಂಡಾ। ರಂಭೆ ನೀ ಯಾರು ನಿಜವಾಗಿ ಹೇಳೆಂದ॥ ಎಂದೆಂದಿಗೂ ತಮ್ಮ ಪಾದಸೇವಕಳು ನಾನು। ಇಂದಿರಾಪತಿಯು ದಯದಿಂದ ನೋಡಿದನು॥ ಅಚ್ಯುತಗೆ ಶರಣೆಂದು ಅಗ್ನಿ ಹೋತ್ರಾ ಚರಣೆ। ನಿತ್ಯ ದೇವರ ಪೂಜೆ ಲಕ್ಷ ಭೋಜನವು॥ ವಿಪ್ರರಲ್ಲೀ ದಾನ ದಕ್ಷಿಣೆಯು ಕೊಡುತಾಗ। ಪ್ರಖ್ಯಾತನಾದ ವಿಪ್ರ ಭೂಲೋಕದೊಳಗೆ॥ ಉದಯ ಕಾಲದೊಳೆದ್ದು ಯಾರಾದರೀ ಕಥೆಯ। ಭಾವಶುದ್ಧೀಲಿ ಹೇಳಿದರೆ ಕೇಳಿದರೆ॥ ನರಹರಿಯ ಪುರದರಸು ವರದ ಪ್ರಾಣೇಶ ವಿಠಲನು। ಭಕ್ತೀಲಿ ಒಲಿವ ಸುಧಾಮಗೊಲಿದಂತೆ॥

❖ ❖ ❖

ಶ್ರೀಕೃಷ್ಣನ ಅಭಿಮಾನೀ ಕ್ಷೇತ್ರಗಳು

ವಸುದೇವಂ ಘನಶ್ಯಾಮಂ (ಶ್ರೀಕೃಷ್ಣ ಧ್ಯಾನಂ)

ವಸುದೇವಂ ಘನಶ್ಯಾಮಂ ದೇವಕೀ ಗರ್ಭಸಂಭವಂ। ಶ್ರೀವತ್ಸಕೌಸ್ತುಭಧರಂ ಶಂಖಚಕ್ರಾದಿ ಧಾರಣಂ॥
ಗೋವರ್ಧನಧರೋದ್ದಾರಂ। ಯಶೋದಾನಂದ ವರ್ಧನಂ। ರುಕ್ಮಿಣೀ ಸತ್ಯಭಾಮೇಶಂ ಲೀಲಾ ಮಾನುಷ ವಿಗ್ರಹಂ॥
ಷೋಡಶಸ್ತ್ರೀ ಸಹಗ್ರೇಶಂ ಜಾರ ಚೋರ ಶಿಖಾಮಣಿಂ। ವೇಣುಗಾನ ಪ್ರಿಯಂ ಶೌರಿಂ ಗೋಪಸ್ತ್ರೀ ಪರಿವೇಷ್ಟಿತಂ॥
ಗೋಗೋಪ ಪ್ರಾಣದಾತಾರಂ ಕಂಸಾಧಿಘ್ನಂ ಬಲಾನುಜಂ। ಮುರಾರಿಂ ದ್ವಾರಕಾಧೀಶಂ ಶ್ರೀಕೃಷ್ಣಂ ಪ್ರಣಮಾಮ್ಯಹಂ॥

ಕೃಷ್ಣಾಯ ವಾಸುದೇವಾಯ (ಉಡುಪಿ ಶ್ರೀಕೃಷ್ಣಸುಪ್ರಭಾತ)

ಕೃಷ್ಣಾಯ ವಾಸುದೇವಾಯ ದೇವಕೀನಂದನಾಯಚ। ನಂದಗೋಪಕುಮಾರಾಯ ಗೋವಿಂದಾಯ ನಮೋನಮಃ।। ಎದ್ದೇಳು ಕಡಗೋಲು ಕೃಷ್ಣಾ। ಎದ್ದೇಳು ಉಡುಪಿಯಲಿನಿಂದ ಬಾಲಕೃಷ್ಣಾ।।ಪ।। ಮಲ್ಲಿಗೆಯ ಮೊಗ್ಗುಗಳು ಎಳೆ ತುಳಸಿ ಮಾಲೆಗಳ। ನಿನಗಾಗಿ ನಾ ತಂದೆ ಎದ್ದು ಬಾ ತಂದೆ। ಮಂತ್ರಘೋಷಗಳಿಂದ ಪ್ರಾರ್ಥಿಸುವರು ಭೂಸುರರು। ಉದಯಕಾಲವು ಸನ್ನಿಹಿತವಾಯಿತೆಂದು ಎದ್ದೇಳು ಬಾಲಕೃಷ್ಣ ಎದ್ದೇಳು ಗೋಪಾಲಕೃಷ್ಣ।।1।। ಏಳು ಬೇಗನೆ ಕೃಷ್ಣ ಕಾದಿಹರು ಯತಿವರರು। ಪಂಚಾಮೃತದ ಸ್ನಾನ ಮಾಡಿಸುವರೇಳು। ಆಮೇಲೆ ಮಹಾಪೂಜೆ ಪ್ರಸಾದಗಳಿಗಾಗಿ। ಮಿಂದು ಮಡಿಬಟ್ಟೆಯಿಂ ನಿಂದಿಹರು ಏಳು। ಎದ್ದೇಳು ಬಾಲಕೃಷ್ಣ। ಎದ್ದೇಳು ಗೋಪಾಲಕೃಷ್ಣ।।2।। ಮಧ್ವ ಕಲ್ಯಾಣಿಯಲಿ ಮಿಂದು ನಿಂತಿಹರು। ನವಗ್ರಹ ಕಿಂಡಿಯಲಿ ಸಾಲಾಗಿ ಬಂದಿಹರು। ಗಂಧ ಚಂದನದಿಂದ ಪತ್ರಪುಷ್ಪಗಳಿಂದ। ತುಳಸಿಮಾಲೆಗಳಿಂದ ಭಕ್ತಿಪೂರ್ವಕವಾಗಿ। ದರುಶನಕೆ ಕಾದಿಹರೂ। ಕಡಗೋಲು ಕೃಷ್ಣ ಏಳಯ್ಯ ಬೆಳಗಾಯಿತು ಕೃಷ್ಣಾ ಏಳಯ್ಯ ಬೇಳಗಾಯಿತು।।3।। ಗರುಡ ಪ್ರಾಣರು ಎಡಬಲದಿನಿಂದು ಚಾಮರವ ಬೀಸುವರು। ಮಧ್ವಪತಿ ಮುದ್ದು ಕೃಷ್ಣನ ಸೇವೆಗೆಂದು ಅಷ್ಟಯತಿವರೇಣ್ಯರು ಕಾದಿಹರು ಪೂಜಿಸಲು। ಏದ್ದೇಳು ಭವಬಂಧು ಗೋಪಾಲಕೃಷ್ಣ ಏಳಯ್ಯ ಬೇಳಗಾಯಿತು।।4।। ಸ್ವರ್ಣರಥವಿಂದು ನಿನಗೆ ಅರ್ಪಿತವು ತಂದೆ। ಪೊಡವಿಗೊಡೆಯನ ತೇರು ನೋಡಲು ನಾ ಬಂದೆ। ಏದ್ದೇಳು ವಸುದೇವ ದೇವಕಿ ಕೃಷ್ಣಾ ರಜತ ಪೀಠದಿ ಮೆರೆವ ಚೆಲುವ ಚನ್ನಿಗಕೃಷ್ಣ ಭವಬಂಧು ಬೆಳಗಾಯಿತು ಎದ್ದೇಳು ಕೃಷ್ಣ ಬೆಳಗಾಯಿತು ಎದ್ದೇಳು ಕೃಷ್ಣ ಬೆಳಗಾಯಿತು।।5।। ಶ್ರೀಮಧನಂತೇಶ್ವರನ ಗುಡಿ ಒಳಗಿಂದಲೇ ಗುರುಮಧ್ವರಾಡಿಸುವರೇ ನಿನ್ನ। ಮಧ್ವೇಶ ಶ್ರೀಕೃಷ್ಣ ಚಂದ್ರಮೌಳಿಯು ನಿನ್ನಸನಿಹದಲೆ ಕಾದಿಹನು ಎದ್ದೇಳು ಕೃಷ್ಣ ಚೆಲುವ ಚನ್ನಿಗ ಕೃಷ್ಣ ಬೆಳಗಾಯಿತು।।6।। ಮೇಘಶ್ಯಾಮನ ಚೆಲುವ ಕೊಳಲ ಗಾನವಕೇಳಿ। ಕಾತರಿಸಿ ಹೆಣ್ಣುಗಳು ಹೊರಟಿಹರು ಕಲ್ಯಾಣಿಗೆ ಮಯ್ಯಮುಳುಗಿಸಿ ಮತ್ತೆ ಮೇಲೇಳುವ ಮುನ್ನ ಹೊತ್ತ ನೀಬಂದು ಅವರ ಸಿರಿಮಯ್ಯ ನಡುಕತೊಲಗಿಸು ತಂದೇ। ಎದ್ದೇಳು ಶ್ರೀಕೃಷ್ಣ ಬೆಳಗಾಯಿತು।।7।। ಗಂಡನೇಳುವ ಮುನ್ನ ಶಾಮನಿರಲೇಬೇಕು। ಕಂಡಕಂಡವರೆಲ್ಲ ಏನೇನೋ ಹೇಳಿರಲು ಸಾಕು। ಅವನಲ್ಲ ಸಖಿ ಅದರಲ್ಲೇ ಸುಖ ಎಂದೇನೇನೋ ಹೇಳುವರು ನಿನ್ನ ಬಯಸಿದವರೆಲ್ಲ। ಎದ್ದೇಳು ಶ್ರೀಕೃಷ್ಣ ಬೆಳಗಾಯಿತೂ ಎದ್ದೇಳು ಶ್ರೀಕೃಷ್ಣ ಬೆಳಗಾಯಿತು।।8।।ನೀನು ಕಾಮುಕನಂತೆ ನೀನು ಪಾಮರನಂತೆ। ಪಾಮರರು ತೊರೆವಾತ್ಮ ನೀನಲ್ಲವಂತೆ। ನೀನಲ್ಲೇ ನಾನಿಲ್ಲೇ ಎಂದು ಹೇಳಿದೆಯಂತೆ। ಯಾತಕೆ ಶ್ರೀಕೃಷ್ಣ ಪ್ರಣಯದಾಟವು ಇಷ್ಟೆ। ಎದ್ದೇಳು ಶ್ರೀಕೃಷ್ಣ ಬೆಳಗಾಯಿತು।।9।। ಸಾಮದಾನದಿ ನಿನ್ನ ಬೇಡಿ ಪಾಡಿದರೂ ಕಣ್ಮುಚ್ಚಿಮಲಗಿರುವ ಕಪಟಿ ಕರುಣಾಸಿಂಧು ಇಲ್ಲದಿರೆ ನೋಡು ನಾ ಏನು ಹೇಳುವೆನೆಂದು। ಜಗವನು ಏಳಲೇ ಬಿಡದ ದೇಹಿ ನೀನೆಂದು। ಏಳಯ್ಯ ಬೆಳಗಾಯಿತು ಏಳಯ್ಯ ಬೆಳಗಾಯಿತು।।10।। ನೀನೇಳದಿದ್ದರೇ ನಾನು ನಿನ್ನ ಚರಿತೆಯನೆಲ್ಲ ಊರೊಳಗೆ ಸಾರುವೆನು ಜಾಗಚೋರನು ಎಂದು ಬೆಣ್ಣೆ ಮೊಸರಿನ ಪಾತ್ರೆ ನೀನೊಡೆದು ತಿಂದಿರುವೆ (ಎಲ್ಲವ)? ಹೆಣ್ಣುಗಳು ಬರುತಿರಲು ಸೆರಗನೆ ಎಳೆದಿರುವೆ। ಇನ್ನಾದರೂ ಏಳು ಉಡುಪಿ ಶ್ರೀಕೃಷ್ಣ।।11।। ಸಾಮದಾನದಿ ನಿನ್ನ ಕೇಳಿಯಾಯಿತು ಇಂದು। ಭೇದವನು ಕಡೆಗಣಿಸಿ ಮಲಗಿದೆಯ ಬಂಧು। ಆತ್ಮಶುದ್ಧಿಯಗೈದು ಪರಮಾತ್ಮ ಬಿಂಬವ। ಹೃದಯಪಾತ್ರೆಯ ಶುದ್ಧಜಲದಲಿ ನಾನೋಡಿ। ನಿನ್ನನ್ನು ಮರೆತು ಸುಮ್ಮನಿರಲು ಶ್ರೀಕೃಷ್ಣಾ। ಆಗ ನೀ ಬರುವ। ಓಡಿ ಬರುವೆ। ಒಡೋಡಿಬರುವೆ। ಬೆಳಗಾಯಿತೆಂದು।।12।। ನೀನೇ ಕೂಗಿ ಕರೆದು। ರವಿಯನಿಳೆಗೆ ತಂದು। ಚೆಲ್ಲು ಬೆಳಕ ತರುವೇ। ಮಂಗಲವ ತರುವೇ ಮುಕುತಿಯಾ ಕೊಡುವೆ। ಅಂತಾದರೂಕೊಡು ಸ್ವಾಮಿ ಜಗಕೆ ಮಂಗಲವಾ ।।2ಸಾರಿ।। ಮಂಗಲಂ ಶ್ರೀಲೋಲಾ। ಮಂಗಲಂ ಗೋಪೀಬಾಲ। ಮಂಗಲಂ ಮಧ್ವಕರಾರ್ಚಿತರೂಪಾ। ಮಂಗಲಂ ಜಗದೀಪಾ। ಮಂಗಲಂ ಮಧುಸೂಧನಾ। ಮಂಗಲವ ನೀಡೆಮಗೆ ಗೋಪಾಲಕೃಷ್ಣಾ। ಮಂಗಲವ ನೀಡಯ್ಯ ಉಡುಪಿ ಶ್ರೀಕೃಷ್ಣಾ ಮಂಗಲಂ ಪನ್ನಗಾಸನ।।13।।

ಉಡುಪಿಯ ಕೃಷ್ಣನ ಸಡಗರ — ರಾಗ: ಬೇಹಾಗ್-ಏಕತಾಳ

ಉಡುಪಿಯ ಕೃಷ್ಣನ ಸಡಗರ ನೋಡುವ ನಡಿಯೇ ನಾರಿಮಣಿ॥ಪ॥ ಪೊಡವಿಗೆ ಒಡೆಯನು ಪಡುವಲ ಕಡಲಿನ ದಡದಲಿ ನೆಲೆಸಿರುವಾ ಚೆಲುವಾ॥ಅ.ಪ॥ ಆಲವ ಬೋಧ ಮುನಿಗಳ ಪ್ರೀತಿಲಿ ತನ್ನ ಬಲದಲಿ ನಿಲಿಸಿರುವಾ ಚೆಲುವಾ। ಹಲವು ಪೂಜೆಗಳ ಸಲಿಸುವ ಯತಿಗಳ ಒಳಗೆ ಹೊರಗೆ ಇರುವಾ ಚೆಲುವಾ॥1॥ ನವನವ ಪೂಜೆಯ ವಿವಿಧಾಲಂಕಾರದಿ ತಾಮಾಡಿಸಿ ಕೊಳುವಾ ಚೆಲುವಾ। ಭುವನ ಮೋಹನ ರೂಪವ ನೋಡುವವರಿಗೆ ವಿವರದಿ ಕಾಣಿಸುವಾ ಚೆಲುವಾ॥2॥ ಶ್ರೀಕಮಲೇಶವಿಠಲರಾಯನು ತಾ ಬೇಕಾಗಿಲ್ಲಿರುವಾ ಚೆಲುವಾ। ಈ ಕಲಿಯುಗದೊಳಿದೇ ವೈಕುಂಠವು ಕಾಮಿತ ಫಲ ಕೊಡುವಾ ಚೆಲುವನಿವಾ॥3॥

ಕಂಡು ಧನ್ಯನಾದೆ ಶ್ರೀ ಉಡುಪಿ

ಕಂಡು ಧನ್ಯನಾದೆ ಶ್ರೀ ಉಡುಪಿ ಕೃಷ್ಣನ ಕಣ್ಣಾರೆ॥ಪ॥ ಕಂಡು ಧನ್ಯನಾದೆ ನಾ ಬ್ರಹ್ಮಾಂಡ ನಖದಿ ಒಡೆದ ಹರಿಯ ತಂಡತಂಡದಿ ಪೂಜೆಗೊಳುತ ಪಾಂಡವರನೆ ಸಲಹಿದವನ॥1॥ ಗೆಜ್ಜೆಕಾಲ ಕಡಗವಿಟ್ಟು ಮಜ್ಜಿಗೆ ಕಡಗೋಲ ಪಿಡಿದು। ಅಗ್ರಪಂಕ್ತಿ ಊಟಉಂಡು ಗುಜ್ಜುವೇಷ ಧರಿಸಿದವನ॥2॥ ಅಷ್ಟಮಠದ ಯತಿಗಳು ತನ್ನ ಭಂಟರೆಂದು ಪೂಜೆಗೊಳುತ ಕಂಟಕ ಕಂಸಾದಿಗಳನೆ ದಂಟಿನಂತೆ ಸೀಳಿದವನ॥3॥ ಏಳು ಜನ್ಮದ ಸುಕೃತವೋ ಕಮಲೇಶ ವಿಠಲ ರಾಯತನ್ನ ದಾಸಜನಾಭೀಷ್ಟಗೊಳಿಸಿ ಕೂಸಿನಂತೆ ಪೋಷಿಸುವನ॥4॥

ಕಂಡೆ ನಾ ಉಡುಪಿಯ ಕೃಷ್ಣರಾಯನ್ನ — ರಾಗ: ಕಲ್ಯಾಣಿ

ಕಂಡೆ ನಾ ಉಡುಪಿಯ ಕೃಷ್ಣರಾಯನ್ನ ಭೂಮಂಡಲದೊಳಗೆ ಉದ್ದಂಡ ಮೋಹಿಪನ॥ಪ॥ ಸಮುದ್ರವ ನಾ ಕಂಡು ಸ್ನಾನಾದಿಗಳಮಾಡಿ ಚಂದ್ರಮೌಳೀಶ್ವರನ ಚರಣಕೆರಗಿ ಆಮೇಲೆ ನಾ ಬಂದು ಅನಂತೇಶ್ವರನ್ನ ಕಂಡು, ಹನೂಮಂತನ ಪಾಡಿ ಮನದಿ ನಿಲಿಸಿ॥1॥ ಸುತ್ತು ನದಿಯ ಕಂಡೆ ಸೂರ್ಯನ ಪ್ರಭೆ ಕಂಡೆ ಅಲ್ಲಿದ್ದ ಮಧ್ವಸರೋವರವ ಕಂಡೆ ಮಧ್ವಮತದ ಅಷ್ಟಮುನಿಗಳ ಕಂಡೆ ಪ್ರಸಿದ್ಧವಾಗಿರುವ ಶ್ರೀ ಉಡುಪಿಯ ಕೃಷ್ಣನ ಕಂಡೆ॥2॥ ಉಂಗುರ ಉಡಿದಾರ ಉಡಿಘಂಟೆ ನಾ ಕಂಡೆ ರಂಗು ಮಾಣಿಕ್ಯದ ನವರತ್ನಮಾಲೆ ಕಂಡೆ। ಧಿಂ ಧಿಮಿಧಿಮಿಕೆಂದು ಕುಣಿವ ಕೃಷ್ಣನ ಕಂಡೆ ಪುರಂದರವಿಠಲನ್ನ ಪಾದಕಮಲವ ಕಂಡೆ॥3॥

ಕಂಗಳ ಮುಂದೆ ಕಂಗೊಳಿಸುತಿದೆ — ರಾಗ: ಚಕ್ರವಾಕ-ಆದಿತಾಳ

ಕಂಗಳ ಮುಂದೆ ಕಂಗೊಳಿಸುತಿದೆ ಮಂಗಳ ಉಡುಪಿಯ। ಕೃಷ್ಣನ ಮೂರುತಿ॥ಪ॥ ಅಂಗಳದಿ ಜನನಿ ಮೊಸರನು ಕಡೆಯಲು। ಚಂಗನೆ ಬಂದು ಅಪ್ಪಿದ ಮೂರುತಿ। ಅಂಗನೆಯರು ತಾ ನೀರಿಗೆ ಪೋಗಲು। ಸಂಗಡಿಗರೊಡನೆ ಕಾಡಿದ ಮೂರುತಿ॥1॥ ದ್ವಾರಕಪುರಿಯಲಿ ದೇವಕಿ ದೇವಿಗೆ। ಬಾಲಕ ರೂಪದಿ ತೋರಿದ ಮೂರುತಿ। ಅಷ್ಟಮಠಗಳ ಯತಿಗಳ ಸೇವೆಯ ಕೈಗೊಳ್ಳುವ। ಕರುಣಾಮಯ ಮೂರುತಿ॥2॥ ಪುರಂದರದಾಸರು। ಹಾಡಿಹೊಗಳಿದ। ಪರಮಪುನೀತ। ಚಿನ್ಮಯಮೂರುತಿ। ಭಕುತ ಕನಕನ ಮೊರೆಯನು ಕೇಳಿ। ಪಶ್ಚಿಮಕ್ಕೆ ಮುಖ ತಿರುಗಿದ ಮೂರುತಿ॥3॥

ಉಡುಪಿಯಿದೂ ಉಡುಪಿಯಿದೂ

ಉಡುಪಿಯಿದೂ ಉಡುಪಿಯಿದೂ। ಗೀತಾಚಾರ್ಯರ ಕ್ಷೇತ್ರವಿದು॥ಪ॥ ಮಧ್ವಾಚಾರ್ಯರು ಸ್ಥಾಪಿಸಿದಂತಹ ಕೃಷ್ಣಮೂರ್ತಿಯ ಮನೆಯೆ ಇದೂ॥ಅ.ಪ॥ ಪುಟ್ಟ ಬಾಲ ಇವ ನೋಡಿ ಅವ ಮಾಡಿದನೆಂತಹ ಮೋಡಿ। ಗೋಪಿಯರಂತೆ ತೋರುವರೆಲ್ಲ! ಭಕ್ತಿಯಕಂಬನಿಕೂಡೀ॥1॥ ಭೂಮಿಯ ಮೇಲೆಯೆ ಸ್ವರ್ಗವ ಕಾಣಲು। ಬನ್ನಿರಿ ಕೃಷ್ಣನ ಸನ್ನಿಧಿಗೆ। ಪಾಪದ ಪೀಡೆಯ ಪರಿಹರಿಸಿಕೊಳ್ಳಲು। ನೀಡಿರಿ ನಿಮ್ಮನೆ ಶ್ರೀಹರಿಗೆ॥2॥ ಅಷ್ಟಮಠಗಳು ಕೃಷ್ಣಮೂರುತಿಯ ಸೇವೆಗೆ ನಿಂತಿದೆ ಜಗದಲ್ಲಿ! ಭಕ್ತಿಯಿಂದಲಿ ಚೆಲುವ ಚನ್ನಿಗನ ಧ್ಯಾನಿಸೆ ಫಲವಿದೆ ಕ್ಷಣದಲ್ಲಿ॥3॥

ಬಾರೋ ಕೃಷ್ಣ ಬಾರೋ

ಬಾರೋ ಕೃಷ್ಣ ಬಾರೋ। ಬಾಲರೂಪವ ತೋರೋ। ನೀಲ ವರ್ಣನೆ ಬಾರೋ। ಚೋರ ಕೃಷ್ಣನ್ಹೇಳೋ।। ಹಡಗಿನಿಂದಲಿ ಬಂದ। ಕಡಗೋಲತಂದ। ಉಡುಪಿಯಲಿ ನಿಂದಾ। ಕೊಳಲನೂದ್ವುದೆ ಚೆಂದ।।1।। ಎಂಟು ಮಠದ ಯತಿಗಳು ಹದಿನೆಂಟು ವಾದ್ಯಗಳಿಂದಲಿ। ಬಂಟರಾಗಿ ನಿನ್ನ ಸೇವಿಪೋದೆ ಚಂದ।।2।।ಕನಕನಕಿಂಡಿಯ ಕಂಡೇ ಮಹಾದ್ವಾರದಿ ಬಂದೆ। ಆಸೆಯಿಂದಲಿ ಬಂದೆ। ಅನಂತೇಶನ ಕಂಡೆ।।3।।

ಬಾರೋ ಕೃಷ್ಣಯ್ಯ ರಾಗ: ಮಾಂಡ್

ಬಾರೋ ಕೃಷ್ಣಯ್ಯ .... ನಿನ್ನ ಭಕ್ತರ ಮನೆಗೀಗಾ ಕೃಷ್ಣಯ್ಯ .... ಬಾರೋ ಕೃಷ್ಣಯ್ಯ।।ಪ।। ಬಾರೋ ನಿನ್ನ ಮುಖ ತೋರೋ ನಿನ್ನ ಸರಿಯಾರೋ ಜಗಧರಶೀಲನೇ .... ಬಾರೋ ಕೃಷ್ಣಯ್ಯ।।ಅ.ಪ।। ಅಂದಿಗೆ ಪಾಡಗವು ಕಾಲಂದಿಗೆ ಕಿರುಗೆಜ್ಜೆ। ಧಿಮ್ ಧಿಮಿ ಧಿಮಿ ಧಿಮಿ ಧಿಮಿಕೆನುತ। ಪೊಂಗೊಳಲನೂದುತಾ ..... ಬಾರಯ್ಯ ಪೊಂಗೊಳಲನೂದುತಾ ... ಬಾರೋ ಕೃಷ್ಣಯ್ಯ।।1।। ಕಂಕಣ ಕರದಲ್ಲಿ ಹೊನ್ನುಂಗುರ ಹೊಳೆಯುತೆ। ಕಿಂಕಿಣಿ ಕಿಣಿ ಕಿಣಿ ಕಿಣಿರೆನ್ನುತಾ....। ಪೊಂಗೊಳಲನೂದುತಾ ಬಾರಯ್ಯ ..... ಬಾರೋ ಕೃಷ್ಣಯ್ಯ।।2।। ವಾಸ ಉಡುಪಿಲಿ ನೆಲೆಯಾದಿ ಕೇಶವನೆ। ದಾಸ ನಿನ್ನ ಪದ ದಾಸ। ದಾಸ ನಿನ್ನ ಪದ ದಾಸ ನಿನ್ನ ಪದ ದಾಸ। ಸಲಹಲು ಬಾರಯ್ಯ।।3।।

ವೃಂದಾರಕ ಮುನಿ ವಂದಿತ (ಭಾಗವತ ಕೃಷ್ಣ ಸ್ತುತಿ) ರಾಗ: ಮಾಂಡ್-ಆದಿತಾಳ

ವೃಂದಾರಕ ಮುನಿ ವಂದಿತ ಕೃಷ್ಣ। ನಂದ ಗೋಪ ಗೃಹ ಮಂಡಿತ ಕೃಷ್ಣ।। ಪೂತಹಾದಿ ಸಂಹಾರಕ ಕೃಷ್ಣ। ನೀತೆ ಯಮ ಸದನ ಮಾತುಲ ಕೃಷ್ಣ।। ಕಾಳೀ ಫಣೆ ಫಣ ನರ್ತನ ಕೃಷ್ಣ। ಯಮುನಾ ತೀರ ವಿಹಾರಕ ಕೃಷ್ಣ।। ಗೋವರ್ಧನ ಗಿರಿಧಾರಕ ಕೃಷ್ಣ। ವೇಣುನಾದ ಸಂಮೋಹಕ ಕೃಷ್ಣ।। ಪಾಂಡುಭೂಪ ಸುತಪಾಲಕ ಕೃಷ್ಣ। ಪಾಂಚಾಲಾ ಪರಿಣಯಗತ ಕೃಷ್ಣ।। ಮತ್ಸ್ಯಭೇದ ಸಂಪ್ರೇರಕ ಕೃಷ್ಣ। ದ್ರುಪದ ಸಂಶಯನಿವಾರಕ ಕೃಷ್ಣ।। ಕಪಟ ತ್ರಿದಂಡ ಕೃತನರ ಕೃಷ್ಣ। ಭಗನೀ ಹರಣ ಪ್ರೇರಕ ಕೃಷ್ಣ।। ಖಾಂಡವ ದಹನ ಸಹಾಯಕ ಕೃಷ್ಣ। ಜರಾಸಂಧ ವಧ ಕಾರಣ ಕೃಷ್ಣ।। ರಾಜಸೂಯ ಮಖ ಶೋಭಿತ ಕೃಷ್ಣ। ಆಕರ್ಣಿತ ನಿಂದಾಶತ ಕೃಷ್ಣ।। ಶಿಶುಪಾಲ ಶಿರಚ್ಛೇದಕ ಕೃಷ್ಣ। ದ್ರೌಪದಿ ಮಾನ ಸಂರಕ್ಷಕ ಕೃಷ್ಣ।। ಅಕ್ಷಯ ವಸ್ತ್ರ ಪ್ರದರ್ಶಿತ ಕೃಷ್ಣ। ದೂರ್ವಾಸ ಕ್ಷುಧಾ ಹಾರಕ ಕೃಷ್ಣ।। ವಿದುರ ಭವನ ಕೃತ ಭೋಜನ ಕೃಷ್ಣ। ದುರ್ಯೋಧನ ಸಂಭೋಧಿತ ಕೃಷ್ಣ।। ವೀರ ಧನಂಜಯ ಸಾರಥಿ ಕೃಷ್ಣ। ಅರ್ಜುನ ಶೋಕ ನಿವಾರಕ ಕೃಷ್ಣ।। ಭಗವದ್ಗೀತಾಬೋಧಕ ಕೃಷ್ಣ। ವಿಶ್ವರೂಪ ಸಂದರ್ಶಿತ ಕೃಷ್ಣ।। ಭೀಷ್ಮಾರ್ಥ ಸುದರ್ಶನದರ ಕೃಷ್ಣ। ಆಚ್ಛಾದಿತ ಸೂರ್ಯಪ್ರಭ ಕೃಷ್ಣ।। ಸೈಂಧವ ವಧ ಸಂಪ್ರೇರಕ ಕೃಷ್ಣ। ಸೂರ್ಯ ಪುತ್ರ ಸಂಪ್ರಾರ್ಥಿತ ಕೃಷ್ಣ।। ದುಷ್ಟ ಕೌರವ ವಿನಾಶಕ ಕೃಷ್ಣ। ನೀಲ ಕಂಠ ಕೇತು ಪ್ರಿಯ ಕೃಷ್ಣ।। ಧರ್ಮರಾಯ ಸಂಪೂಜಿಕ ಕೃಷ್ಣ। ಅಸ್ತ್ರ ರಕ್ಷಿತ ಪರೀಕ್ಷಿತ ಕೃಷ್ಣ।। ಪಾಜಕ ಕ್ಷೇತ್ರ ವಿರಾಜಿತ ಕೃಷ್ಣ। ದಾಸ ಪ್ರಿಯ ಸರ್ವೋತ್ತಮ ಕೃಷ್ಣ।। ಕೃಷ್ಣ ಕೃಷ್ಣ ಜಯ ರಾಧಾ ಕೃಷ್ಣ। ಕೃಷ್ಣ ಕೃಷ್ಣ ಜಯ ಜಯಹರಿ ಕೃಷ್ಣ।।

ಬಾ ಮುರಳಿ ಬಾ ಮುರಳಿ ರಾಗ: ಹಿಂದೋಳ

ಬಾ ಮುರಳಿ ಬಾ ಮುರಳಿ ಬಾ ಮುರಳಿ ಬೇಗ ನಾಟ್ಯವನಾಡುತ ಬೇಗನೆ ಬಾರೊ।।ಪ।। ಕಾಲಲ್ಲಿ ಕಿರುಗೆಜ್ಜೆ ಘಲು ಘಲುರೆನ್ನುತ। ಮಧುರೆಯ ಶ್ರೀಕೃಷ್ಣ ಬೇಗನೆ ಬಾರೊ।।1।। ಯಮುನಾ ತೀರದೊಳ್ ಪೊಂಗೊಳಲನೂದುತ। ಗೊಲ್ಲರ ರಾಧಾಕೃಷ್ಣ ಬೇಗನೆ ಬಾರೊ।।2।। ತಾಯಿಗೆ ಬಾಯಲಿ ಮೂಜಗ ತೋರಿದ ಜಗದೋದ್ಧಾರನೆ ಬೇಗನೆ ಬಾರೊ।।3।।

ಹುಟ್ಟಿದ್ದು ಮಥುರೆಯು

ಹುಟ್ಟಿದ್ದು ಮಥುರೆಯು ಬೆಳದದ್ದು ಗೋಕುಲ। ಜಲಕ್ರೀಡೆಯಾಡಿದ್ದು ಯಮುನಾತೀರ। ಜಲಕ್ರೀಡೆಯಾಡಿದ್ದು ಬೃಂದಾವನದೆ ಕೃಷ್ಣ ನೀ ಬೇಗನೆ ಬಾರೋ।।

ಗೋವಿಂದ ಬೋಲೋ ಗೋಪಾಲ ಬೋಲೋ

ಗೋವಿಂದ ಬೋಲೋ ಗೋಪಾಲ ಬೋಲೋ। ಮುಕುಂದ ಮಾಧವ ಶ್ಯಾಮ ಬೋಲೋ।। ಕೃಷ್ಣ ಬೋಲೋ ಕೃಷ್ಣ ಬೋಲೋ ಬೃಂದಾವನ ದ್ವಾರಕ ಕೃಷ್ಣ ಬೋಲೋ। ಕೃಷ್ಣ ಬೋಲೋ ಕೃಷ್ಣ ಬೋಲೋ। ರಸರಾಜ ರಮಾವರ ಕೃಷ್ಣ ಬೋಲೋ। ಗೋವಿಂದ ಬೋಲೋ।।

ಗುರುವಾಯೂರ್ ಪುರ ಶ್ರೀಹರಿ ಕೃಷ್ಣ

ಗುರುವಾಯೂರ್ ಪುರ ಶ್ರೀಹರಿ ಕೃಷ್ಣ। ನಾರಾಯಣ್ ಗೋಪಾಲ್। ಮುಕುಂದ ಮಾಧವ ಮುರಲೀಧಾರಿ। ನಾರಾಯಣ್ ಗೋಪಾಲ್। ಸಾಯಿ ನಾರಾಯಣ್ ಗೋಪಾಲ್। ಗೋವರ್ಧನಗಿರಿ ಮುರಾರಿ। ನಾರಾಯಣ್ ಗೋಪಾಲ್। ಮುಕುಂದ ಮಾಧವ ಮುರಳೀಧಾರಿ। ನಾರಾಯಣ್ ಗೋಪಾಲ್।।

ಕಣ್ಣಪುರಂ ಸೆಲ್ವೇನ್ (ತಮಿಳು) ರಾಗಮಾಲಿಕೆ

ಕಣ್ಣಪುರಂ ಸೆಲ್ವೇನ್ ಕವಲೈಯೆಲ್ಲಾಂ ಮರಪ್ಪೇನ್। ಕಣ್ಣನಿನ್ ಸನ್ನಿಧಿಯಿಲ್ ಎನ್ನೇರಮುಂ ಇರುಪ್ಪೇನ್ (ತಿರು)।।ಪ।। ವಣ್ಣವಡಿವಳಗೈ ಕಣ್ ಕುಳಿರ ಕಾಣ್ಬೇನ್। ಎನ್ನೆಣ್ಣಮೆಲ್ಲಾಂ ಅವನಿನ್ ಇಣೈಯಡಿಯೇ ಎನ್ಬೇನ್।।ಅ.ಪ।। ನಿತ್ತಿಯ ಪುಷ್ಕರಣಿ ನೀರಿನಿಲೇ ಕುಳಿಪ್ಪೇನ್। ನಿಮಿರ್ಂದ ಗೋಪುರತ್ತೈ ಕಂಡು ಕೈಗಳ್ ಕುವಿಪ್ಪೇನ್। ಉತ್ಪಲಾಪದಗ ವಿಮಾನತ್ತೆಯೇ ನಿನೈಪ್ಪೇನ್। ಉಳ್ಳತ್ತಿಲ್ ಆಳ್ವೈತ್ತೇನ್ ಉವಗೈಯಿಲೇ ತಿಳೈಪ್ಪೇನ್।।1।। ಗರುಡಮಂಡಪತ್ತೈ ಕಡಂದು ತೊಡ್ರ್‌ಂದಿಡುವೇನ್। ಕನ್ನಾಡಿ ಸೇವೈಕಂಡು ಕಣ್‌ಗಳ್ ಕಸಿಂದಿಡುವೇನ್। ಪೆರುಮಾನ್ ಸನ್ನಿಧಿಮುನ್ ಪಿತ್ತಾಗಿ ನಿನ್ರಿಡುವೇನ್। ಪ್ಪಿರವಿಪ್ಪಿಣಿ ಅರುತ್ತು ಉಲಗೈವೆನ್ರಿಡುವೇನ್।।2।। ಎಟ್ಟೆಳುತ್ತೈ ಶೊಲ್ಲಿ ಕಿಟ್ಟನೆರುಂಗಿಡುವೇನ್। ಓಂ ನಮೋ ನಾರಾಯಣ ಓಂ ನಮೋ ನಾರಾಯಣ ಎನ್ರು ತೆರಿಗಿರದಾ ಎನ್ರೇ ಕೇಟ್ಟಿಡುವೇನ್। ಕಟ್ಟಿ ಅಣೈತ್ತೆನಕ್ಕು ಕೈ ಕೊಡುಪ್ಪಾನ್ ಕಣ್ಣನ್। ಕರ್ಪೂರಂ ಮಣಕ್ಕಿಣ್ರ ಕಾಲ್ ಪಿಡಿತ್ತೇ ವಿಳುವೇನ್।।3।।

ಕೋವಿಲ್ ಮುನ್ನೈಕೂಡಿನಿಂಡ್ರು (ತಮಿಳು) ರಾಗ: ಆನಂದಭೈರವಿ-ಆದಿತಾಳ

ಕೋವಿಲ್ ಮುನ್ನೈಕೂಡಿನಿಂಡ್ರು ಕೋಡಿಜನ್ಮಂ ಪಾವಂತೀರ। ಗುರುವಾಯೂರಪ್ಪ ನಮಸ್ಕಾರಂ ಸೈಗಿನ್ರೋಂ ।।ಪ।।ತಿರುಮೇನಿ ದರ್ಶನಂ ನಿರ್ಮಾಲ್ಯಮಾವೇಕಂಡು। ಗಿರಿಧರಾ ಉನ್ನೈ ನಮಸ್ಕಾರಂ ಸೈಗಿನ್ರೋಂ ।।1।। ಚಂದನ ಕಾಪ್ಪೈಕಳಟ್ಟಿ ತೈಲಂ ಪೂಸಿಕೊಂಡು ನಿಕ್ಕುಂ। ನಂದ ಗೋಪಾಲನ್ನೈ ನಮಸ್ಕಾರಂ ಸೈಗಿನ್ರೋಂ ।।2।। ಎಣ್ಣೈ ಸ್ನಾನಂ ಶೈದ ಕೈಯಿಲ್ ವಾಳೈಪಳತ್ತೋಡನಿಕ್ಕುಂ। ಕಣ್ಣನ್ ಉನ್ ಪಾದತ್ತಿಲ್ ನಮಸ್ಕಾರಂ ಸೈಗಿನ್ರೋಂ।।3।। ಕೊಡಕೊಡ ಮಾಗ ಪಾಲೈ ಅಭಿಷೇಕಂ ಶೈಯುಂವೇಳೈ। ಗೋವಿಂದನೇ ಉನ್ನೈ ನಮಸ್ಕಾರಂ ಸೈಗಿನ್ರೋಂ।।4।। ಕೊಂಡೆಮಯಿಲ್ ಪೀಲಿಮನ್ನನ್ ಮಂಜುಳಪಟ್ಟಿ ಕಟ್ಟಿಕೊಂಡು। ಕೊಳಲೂದುಂ ಕೃಷ್ಣ ನಮಸ್ಕಾರಂ ಸೈಗಿನ್ರೋಂ।।5।। ತೆಚ್ಚಿ ಮಂದಾರ ತುಳಸಿ ತಾಮರೈ ಪೂಮಾಲೈ ಶಾತ್ತಿ। ಅಚ್ಚುತನೆ ಉನ್ನೈ ನಮಸ್ಕಾರಂ ಸೈಗಿನ್ರೋಂ।।6।। ದಿವ್ಯ ನಾಮಂ ಶೊಲ್ಲಿಕೊಂಡು ಶ್ರೀವೇಲಿಯಿಲ್ ಶುಟ್ರಿವಂದ। ಶ್ರೀಧರನೆ ಉನ್ನೈ ನಮಸ್ಕಾರಂ ಶೈಯಿನ್ರೋಂ।।7।। ತೀರಾದವಿನೈ ತೀರ್ತ್ತ ವೈತ್ತ ಕೋಡಿವರಂ ಅಳಿತ್ತಿಡುಂ। ನಾರಾಯಣ ಉನ್ನೈ ನಮಸ್ಕಾರಂ ಸೈಗಿನ್ರೋಂ।।8।।

ಶ್ರಾವಣ ಮಾಸದಿ ಅಷ್ಟಮಿ ಇರುಳಲಿ (ಆರತಿ)

ಶ್ರಾವಣ ಮಾಸದಿ ಅಷ್ಟಮಿ ಇರುಳಲಿ ರೋಹಿಣಿ ನಕ್ಷತ್ರದಲಿ। ದೇವಕಿ ದೇವಿಯ ಗರ್ಭದಿ ಜನಿಸಿರ್ದ ದೇವ ಕೃಷ್ಣಯ್ಯನಿಗಾರತಿ ಎತ್ತಿರೆ।।ಪ।। ಗೋಪಿಯ ಕಂದ ಗೋಪಾಲಕೃಷ್ಣಗೆ। ಚಲ್ವ ಗೋವಳರಾಯಗಾರತಿ ಎತ್ತಿರೆ।।1।। ಚಾಣೂರ ಮುಷ್ಟಿಕರಾ ಬಡಿದಾಡುತ। ಏಣಾಕ್ಷಿ ಮುಷ್ಟಿ ಕರಾ ಬಡಿದಾಡುತ।।2।। ಸುಜನರ

ಪಾಲಿಸಲುದಿಸುವೆಯೇನಯ್ಯ। ಭಜಿಸುವೆನನುದಿನ ಭಜಕನಾ ಹರಸಯ್ಯ॥3॥ ಒಂದು ಕೈಯಲಿ ಕಡೆಗೋಲನ್ನೆ ಪಿಡಿದು। ಮತ್ತೊಂದು ಕೈಯಲಿ ಬೆಣ್ಣೆಯ ಮೆಲುವಗೆ॥4॥ ಅಂಬೆಗಾಲಿಕ್ಕೂತ ಶಕಟನ ಮುರಿದಂಥ ಅಂಬುಜನಾಭನಿಗೆ ಭಕುತರ ದೇವಗೆ॥5॥ ದುಷ್ಟ ಕಾಳಿಂಗ ಹೆಡೆಯನು ತುಳಿದು ಸೃಷ್ಟಿಯೊಳ್ ಉಡುಪಿಯ ಕೃಷ್ಣಯ್ಯಗಾರತಿ ॥6॥

ಇಂದೀವರಾಕ್ಷಗೆ ಇಭರಾಜ ವರದಗೆ (ಮಂಗಳ)

ಇಂದೀವರಾಕ್ಷಗೆ ಇಭರಾಜ ವರದಗೆ। ಇಂದಿರಾ ರಮಣ ಗೋವಿಂದ ಹರಿಗೆ। ನಂದನಕಂದಗೆ ನವನೀತ ಚೋರಗೆ। ವೃಂದಾರಕೇಂದ್ರ ಉಡುಪಿಯ ಕೃಷ್ಣಗೇ। ಜಯಮಂಗಳ ನಿತ್ಯ ಶುಭಮಂಗಳ ॥1॥ ಕ್ಷೀರಾಬ್ಧಿವಾಸಗೆ ಕ್ಷಿತಿಜನ ಪಾಲಗೇ। ಮಾರನ ಪಡೆದ ಮಂಗಳಮೂರ್ತಿಗೇ। ಚಾರು ಚರಣಗಳಿಂದ ಚೆಲುವ ಗಂಗೆಯ ಪಡೆದ। ಕಾರುಣ್ಯಮೂರ್ತಿ ಕೌಸ್ತುಭಧಾರಗೇ। ಜಯ ಮಂಗಳಂ ನಿತ್ಯ ಶುಭಮಂಗಳಂ॥2॥ ವ್ಯಾಸಾವತಾರಗೆ ವೇದ ಉದ್ಧಾರಗೇ। ವಾಸಿತಾನಂತ ಪದ ಸಕಲೇಶಗೇ। ವಾಸುದೇವ ಮೂರ್ತಿ ಪುರಂದರವಿಠಲಗೆ। ದಾಸರ ಕಾಯ್ವ ರುಕ್ಮಿಣೀರಮಣಗೆ। ಜಯಮಂಗಳಂ ನಿತ್ಯ ಶುಭಮಂಗಳ॥3।

❖ ❖ ❖

ಶ್ರೀಕೃಷ್ಣ ಭಜನೆ

ಕೃಷ್ಣ ಮುರಾರಿ ಜಯ — ರಾಗ: ಮಧ್ಯಮಾವತಿ

ಕೃಷ್ಣ ಮುರಾರಿ ಜಯ ಕೃಷ್ಣ ಮುರಾರಿ। ಶಂಖಚಕ್ರ ಪೀತಾಂಬರಧಾರಿ। ಮಾಯಿ ಮೀರಾ ಹೃದಯವಿಹಾರಿ॥ಕೃಷ್ಣ॥ ಬೃಂದಾವನ ಗೋವರ್ಧನಧಾರಿ। ಸೂರದಾಸ್‌ಕೇ ಪ್ರಭುಗಿರಿಧಾರಿ॥ಕೃಷ್ಣ॥

ದೇವಕಿ ತನಯ ದಯಾನಿಧೆ (ಹಿಂದಿ) — ರಾಗ: ಕಲ್ಯಾಣಿ

ದೇವಕಿ ತನಯ ದಯಾನಿಧೆ ದಯಾನಿಧೆ ಶುಭಾನಿಧೆ ॥1॥ ದರ್ಶನ ದೇದೋ ಜನಾರ್ಧನ(3)॥2॥ ದರ್ಶನ ದೇದೋ ಅಚ್ಯುತ । (3) ॥3॥ ದರ್ಶನ ದೇದೋ ಯಾದವ (3)॥4॥ ದರ್ಶನ್ ದೇದೋ ಮಾಧವ (3)॥5॥ ದರ್ಶನ ದೇದೋ ಕೇಶವ (3)॥6॥

ನಂದಾನ ನಂದನ — ರಾಗ: ಮೋಹನ(ಮ.ಶ್ರು.)

ನಂದಾನ ನಂದನ ಆನಂದ ಚಂದನ। ಆನಂದ ಕಂದನ ಗೋಪಿ ಗೋಪಾಲನ। ನಂದಾನ ಕಂದನ ರಾಧೇ ಶ್ರೀಕೃಷ್ಣನ॥

ಯಮುನಾ ತೀರ ವಿಹಾರಿ (ಹಿಂದಿ) — ರಾಗ: ಮೋಹನ

ಯಮುನಾ ತೀರ ವಿಹಾರಿ, ವೃಂದಾವನ ಸಂಚಾರಿ। ಗೋವರ್ಧನ ಗಿರಿಧಾರಿ, ಗೋಪಾಲಕೃಷ್ಣ ಮುರಾರಿ॥1॥ ಪ್ರೇಮ ಹೃದಯ ಸಂಚಾರಿ, ಬಾಲಕೃಷ್ಣ ಕನ್ಹಾಯಿ। ಗೋವರ್ಧನ ಗಿರಿಧಾರಿ, ಗೋಪಾಲ ಕೃಷ್ಣ ಮುರಾರಿ॥2॥ ರಾಧಾ ಚೇತೋಹಾರಿ, ಮುರಲೀಗಾನ ವಿಹಾರಿ। ಗೋವರ್ಧನ ಗಿರಿಧಾರಿ, ಗೋಪಾಲ ಕೃಷ್ಣ ಮುರಾರಿ॥3॥

ರಾಧಿಕಾ ಮನೋಹರ — ರಾಗ: ಮಾಂಡ್-ಆದಿತಾಳ

ರಾಧಿಕಾ ಮನೋಹರ ಮದನ ಗೋಪಾಲ। ದೀನವತ್ಸಲ ಹೇ ರಾಜಗೋಪಾಲ॥ ಭಕ್ತಜನಮಂದಾರ ವೇಣುಗೋಪಾಲ। ಮುರಲೀಧರ ಹೇ ಗಾನವಿಲೋಲ॥ ರಾಧಾಕೃಷ್ಣ ಜಯ ಕುಂಜ ವಿಹಾರಿ ಶಂಖಚಕ್ರ ಪೀತಾಂಬಧಾರಿ। ಮುರಳೀಧರ ಗೋವರ್ಧನದಾರಿ ಕರುಣಾಸಾಗರ ಕೃಷ್ಣಮುರಾರಿ॥ರಾ॥

ರಾಧೇ ಶ್ಯಾಂ ರಾಧೇ ಶ್ಯಾಂ **ರಾಗ: ಶ್ರೀ**

ರಾಧೇ ಶ್ಯಾಂ ರಾಧೇ ಶ್ಯಾಂ। ರಾಧಾಮಾಧವ ರಾಧೇಶ್ಯಾಮ್॥ ಆದಿನಾರಾಯಣ ರಾಧೇಶ್ಯಾಮ್। ಅನಾದಿ ಪುರುಷ ಮೇಘಶ್ಯಾಮ್। ವಾಸುದೇವಹರಿ ರಾಧೇಶ್ಯಾಮ್। ವಾಸುಕಿ ಶಯನನೆ ಮೇಘಶ್ಯಾಮ್॥1॥ ದೇವಕಿತನಯ ರಾಧೇಶ್ಯಾಮ್। ದೇವದೇವಹರಿ ಮೇಘಶ್ಯಾಮ್। ಭಾವಜನಯ್ಯನೆ ರಾಧೇಶ್ಯಾಮ್। ಗೋವಳಪ್ರಿಯಹರಿ ಮೇಘಶ್ಯಾಮ್॥2॥ ಪೂತನಿ ಮರ್ಧನ ರಾಧೇಶ್ಯಾಮ್। ಶಕಟಸಂಹಾರಿ ಮೇಘಶ್ಯಾಮ್। ಮಾತುಳಧ್ವಂಸಿ ರಾಧೇಶ್ಯಾಮ್। ಅನಾಥ ರಕ್ಷಕ ಮೇಘಶ್ಯಾಮ್॥3॥ ಮುರಲೀಮನೋಹರ ರಾಧೇಶ್ಯಾಮ್। ನರಕಾಂತಕ ಹರಿ ಮೇಘಶ್ಯಾಮ್। ಕರುಣಾಕರಹರಿ ರಾಧೇಶ್ಯಾಮ್। ಕರುಣಿಸಿ ಪೊರೆಹರಿ ಮೇಘಶ್ಯಾಮ್॥4॥ ಪಾಂಡವ ಪ್ರಾಣನೆ ರಾಧೇಶ್ಯಾಮ್। ಪಾಂಡವತ್ರಾಣನೆ ಮೇಘಶ್ಯಾಮ್। ಪಾಂಡವರಕ್ಷಕ ರಾಧೇಶ್ಯಾಮ್। ಕೌರವ ಶಿಕ್ಷಕ ಮೇಘಶ್ಯಾಮ್॥5॥ ಗೋಪೀಜಾತನೆ ರಾಧೇ ಶ್ಯಾಮ್। ಗೋಪೀನಾಥನೇ ಮೇಘಶ್ಯಾಮ್। ಗೋಪಿಕವಲ್ಲಭ ರಾಧೆ ಶ್ಯಾಮ್। ಗೋಕುಲನಂದನ ಮೇಘಶ್ಯಾಮ್॥6॥ ಶ್ರೀಶರಮೇಶನೆ ರಾಧೇಶ್ಯಾಮ್। ಕೇಶವ ಅಚ್ಯುತ ಮೇಘಶ್ಯಾಮ್। ದೋಷ ಕ್ಷಮಿಸಿಪೊರೆ ರಾಧೇಶ್ಯಾಮ್। ದಾಸಕೇಶವನುತ ಮೇಘಶ್ಯಾಮ್॥7॥

ರಾಧಾ ಸಮೇತಾ ಕೃಷ್ಣ **ರಾಗ: ಯಮನ್**

ರಾಧಾ ಸಮೇತಾ ಕೃಷ್ಣಾ ಕೃಷ್ಣಾ। ರಾಧಾ ಸಮೇತಾ ಕೃಷ್ಣಾ - (2)॥ ನಂದಕುಮಾರ ನವನೀತ ಚೋರ। ಬೃಂದಾವನ ವಾಸೀ ಗೋವಿಂದಾ ॥1॥ ಗೋಪಿ ಮನೋಹರ ಗೋಕುಲ ಬಾಲ। ಶೋಭಿತ ಮುರಳೀಗಾನ ವಿಲೋಲ। ಸುಂದರ ಮನ್ಮಥ ಕೋಟಿ ಪ್ರಕಾಶ 2॥2॥

ರಾಧೇ ಕೃಷ್ಣ **ರಾಗ: ಮೋಹನ**

ರಾಧೇ ಕೃಷ್ಣ , ರಾಧೇ ಕೃಷ್ಣ 2,। ಮುರಲಿ ಗಾನ ಸರಸಿಜ ನೇತ್ರ 2,। ಮಂದಹಾಸ ವದನ ಹರೇ ಕೃಷ್ಣ॥ರಾಧೆ॥ ಶಂಖ ಚಕ್ರ ಪೀತಾಂಬರಧಾರಿ 2,। ಮೋಹನ ಮುರಳಿ ಲೋಲ॥ರಾಧೆ॥

❖ ❖ ❖

ಶ್ರೀಕೃಷ್ಣನ ಸ್ತೋತ್ರಗಳು

ಕರಾರವಿಂದೇನ ಪದಾರವಿಂದಂ

ಕರಾರವಿಂದೇನ ಪದಾರವಿಂದಂ। ಮುಖಾರವಿಂದೇ ವಿನಯಶ್ಯವಂತಂ। ವಟಸ್ಯ ಪುತ್ರಸ್ಯ ಪುಟೇ ಶಯನಂ। ಬಾಲಂ ಮುಕುಂದಂ ಮನಸಾಸ್ಮರಾಮಿ॥

ಕಸ್ತೂರಿ ತಿಲಕಂ ಲಲಾಟ ಪಲಕಂ

ಕಸ್ತೂರಿ ತಿಲಕಂ ಲಲಾಟ ಪಲಕಂ। ವಕ್ಷಸ್ಥಲೇ ಕೌಸ್ತುಭಂ। ನಾಸಾಗ್ರೇ ನವಮೌಕ್ತಿಕಂ। ಕರತಲೇ ವೇಣುಂಕರೇ ಕಂಕಣಂ। ಸರ್ವಾಂಗೇ ಹರಿ ಚಂದನಂಚ। ಕಲಯೇನ ಕಂಠೇಚ ಮುಕ್ತಾವಲೀಂ। ಗೋಪಸ್ತ್ರೀ ಪರಿವೇಷ್ಟಿತೋ ಭಗವತೇ ಗೋಪಾಲ ಚೂಡಾಮಣಿ॥

ಏಹಿ ಮುದಂದೇಹಿ ಶ್ರೀಕೃಷ್ಣ

ಏಹಿ ಮುದಂದೇಹಿ ಶ್ರೀಕೃಷ್ಣ ಕೃಷ್ಣಮಾಂ। ಪಾಹಿಗೋಪಾಲಬಾಲ ಕೃಷ್ಣ ಕೃಷ್ಣ॥ ಧಾವಧಾವ ಮಾಧವ ಶ್ರೀ ಕೃಷ್ಣ ಕೃಷ್ಣನವ್ಯ। ನವನೀತ ಮಾಹರಶ್ರೀ ಕೃಷ್ಣ ಕೃಷ್ಣ॥ ಭವ್ಯ ನಟನಂ ಕುರು ಶ್ರೀ ಕೃಷ್ಣ ಕೃಷ್ಣ ಬಲ। ಭದ್ರ ಸಹಿತ ಶ್ರೀ ಕೃಷ್ಣ ಕೃಷ್ಣ॥ ಸಾಧುಸಾಧು ಕೃತಮಿಹಕೃಷ್ಣಕೃಷ್ಣ ಲೋಕ॥ ಸಾಧಕಹಿತಾಯಶ್ರೀ ಕೃಷ್ಣ ಕೃಷ್ಣ॥ ನಾರದಾದಿ ಮುನಿಗೇಯಕೃಷ್ಣ ಕೃಷ್ಣ ಶ್ರೀಮನ್।

ನಾರಾಯಣತೀರ್ಥ ವರದ ಕೃಷ್ಣಕೃಷ್ಣ॥

ಅಚ್ಯುತಂ ಕೇಶವಂ (ಅಚ್ಯುತಾಷ್ಟಕ)

ಅಚ್ಯುತಂ ಕೇಶವಂ ರಾಮನಾರಾಯಣಂ, ಕೃಷ್ಣದಾಮೋದರಂ ವಾಸುದೇವಂ ಹರಿಂ। ಶ್ರೀಧರಂ ಮಾಧವಂ ಗೋಪಿಕಾವಲ್ಲಭಂ, ಜಾನಕೀನಾಯಕಂ ರಾಮಚಂದ್ರಂಭಜೇ॥1॥ ಅಚ್ಯುತಂ ಕೇಶವಂ ಸತ್ಯಭಾಮಾಧವಂ ಮಾಧವಂ ಶ್ರೀಧರಂ ರಾಧಿಕಾರಾಧಿತಂ। ಇಂದಿರಾಮಂದಿರಂ ಚೇತಸಾ ಸುಂದರಂ, ದೇವಕೀ ನಂದನಂ ನಂದಜಂ ಸಂದಧೇ॥2॥ ವಿಷ್ಣವೇ ಜಿಷ್ಣವೇ ಶಂಖಿನೇ ಚಕ್ರಿಣೇ, ರುಕ್ಮಿಣೇ ರಾಗಿಣೇ ಜಾನಕೀಜಾನಯೇ। ವಲ್ಲವೀ ವಲ್ಲಭಾಯಾರ್ಚಿತಾಯಾತ್ಮನೇ , ಕಂಸವಿಧ್ವಂಸಿನೇ ವಂಶಿನೇ ತೇ ನಮಃ॥3॥ ಕೃಷ್ಣ ಗೋವಿಂದ ಹೇ ರಾಮ ನಾರಾಯಣ, ಶ್ರೀಪತೇ ವಾಸುದೇವಾರ್ಚಿತ ಶ್ರೀನಿಧೇ। ಅಚ್ಯುತಾನಂತ ಹೇ ಮಾಧವಾಧೋಕ್ಷಜ, ದ್ವಾರಕಾನಾಯಕ ದ್ರೌಪದೀ ರಕ್ಷಕ॥4॥ ರಾಕ್ಷಸಕ್ಷೋಭಿತಃ ಸೀತಯಾ ಶೋಭಿತೋ, ದಂಡಕಾರಣ್ಯಭೂಪುಣ್ಯತಾ ಕಾರಣ: ಲಕ್ಷ್ಮಣೇನಾನ್ವಿತೋ ವಾನರೈಃ ಸೇವಿತೋ, ಅಗಸ್ತ್ಯ ಸಂಪೂಜಿತೋ ರಾಘವಃ ಪಾತು ಮಾಂ॥5॥ ಧೇನುಕಾರಿಷ್ಟಕೋನಿಷ್ಟಕೃದ್ ದ್ವೇಶಿಣಾಂ, ಕೇಶಿಹಾ ಕಂಸಹೃದ್ ವಂಶಿಕಾ ವಾದಕಃ। ಪೂತನಾಕೋಪಕಃ ಸೂರಜಾಖೇಲನೋ, ಬಾಲಗೋಪಾಲಕಃ ಪಾತು ಮಾಂ ಸರ್ವದಾ॥6॥ ವಿದ್ಯುದುದ್ಯೋತವಾತ್ ಪ್ರಸ್ಫುರದ್ವಾಸಸಂ, ಪ್ರಾವೃಡಂಭೋದವತ್ ಪ್ರೋಲ್ಲಸದ್ವಿಗ್ರಹಂ॥ ವನ್ಯಯಾ ಮಾಲಯಾ ಶೋಭಿತೋರಃಸ್ಥಲಂ ಲೋಹಿತಾಂಘ್ರಿದ್ವಯಂ ವಾರಿಜಾಕ್ಷಂ ಭಜೇ॥7॥ ಕುಂಚಿತೈಃ ಕುಂಡಲೈರ್ಭ್ರಾಜ ಮಾನಾನನಂ, ರತ್ನಮೌಲಿಂ ಲಸತ್‌ಕುಂಡಲಂ ಗಂಡಯೋಃ। ಹಾರಕೇಯೂರಕಂ ಕಂಕಣ ಪ್ರೋಜ್ವಲಂ, ಕಿಂಕಿಣೀ ಮಂಜುಲಂ ಶ್ಯಾಮಲಂ ತಂ ಭಜೇ॥8॥

ಅಧರಂ ಮಧುರಂ ವದನಂ (ಮಧುರಾಷ್ಟಕಮ್) ರಾಗ: ನಾದನಾಮಕ್ರಿಯೆ

ಅಧರಂ ಮಧುರಂ ವದನಂ ಮಧುರಂ ನಯನಂ ಮಧುರಂ ಹಸಿತಂ ಮಧುರಂ। ಹೃದಯಂ ಮಧುರಂ ಗಮನಂ ಮಧುರಂ ಮಧುರಾಧಿಪತೇರಖಿಲಂ ಮಧುರಂ॥1॥ ವಚನಂ ಮಧುರಂ ಚರಿತಂ ಮಧುರಂ ವಸನಂ ಮಧುರಂ ವಲಿತಂ ಮಧುರಂ। ಚಲಿತಂ ಮಧುರಂ ಭ್ರಮಿತಂ ಮಧುರಂ ಮಧುರಾಧಿಪತೇರಖಿಲಂ ಮಧುರಂ॥2॥ ವೇಣುರ್ಮಧುರೋ ರೇಣುರ್ಮಧುರಂಃ ಪಾಣಿರ್ಮಧುರಃ ಪಾದೌ ಮಧುರೌ। ನೃತ್ಯಂ ಮಧುರಂ ಸಖ್ಯಂ ಮಧುರಂ। ಮಧುರಾ ಧಿಪತೇ ರಖಿಲಂ ಮಧುರಂ॥3॥ ಗೀತಂ ಮಧುರಂ ಪೀತಂ ಮಧುರಂ। ಮುಕ್ತಂ ಮಧುರಂ ಸುಪ್ತಂ ಮಧುರಂ। ರೂಪಂ ಮಧುರಂ ತಿಲಕಂ ಮಧುರಂ। ಮಧುರಾಧಿಪತೇರಖಿಲಂ ಮಧುರಂ॥4॥ ಕರಣಂ ಮಧುರಂ ಚರಣಂ ಮಧುರಂ। ಹರಣಂ ಮಧುರಂ ಸ್ಮರಣಂ ಮಧುರಂ। ವಮಿತಂ ಮಧುರಂ ಶಮಿತಂ ಮಧುರಂ ಮಧುರಾಧಿಪತೇರಖಿಲಂ ಮಧುರಂ॥5॥ ಗುಂಜಾ ಮಧುರಾ ಮಾಲಾಮಧುರಾ। ಯಮುನಾ ಮಧುರಾ ವೀಚೀ ಮಧುರಾ। ಸಲಿಲಂ ಮಧುರಂ ಕಮಲಂ ಮಧುರಂ ಮಧುರಾಧಿಪತೇರಖಿಲಂ ಮಧುರಂ॥6॥ ಗೋಪೀ ಮಧುರಾ ಲೀಲಾ ಮಧುರಾ। ಯುಕ್ತಂ ಮಧುರಂ ಭುಕ್ತಂ ಮಧುರಂ। ದೃಷ್ಟಂ ಮಧುರಂ ಶಿಷ್ಟಂ ಮಧುರಂ ಮಧುರಾಧಿಪತೇ ರಖಿಲಂ ಮಧುರಂ॥7॥ ಗೋಪಾ ಮಧುರಾ ಗಾವೋ ಮಧುರಾ। ಯಷ್ಟಿರ್ಮಧುರಾ ಸೃಷ್ಟಿರ್ಮ ಧುರಾ। ದಲಿತಂ ಮಧುರಂ ಫಲಿತಂ ಮಧುರಂ। ಮಧುರಾ ಧಿಪತೇರಖಿಲಂ ಮಧುರಂ॥8॥

ವಸುದೇವ ಸುತಂದೇವಂ (ಕೃಷ್ಣಾಷ್ಟಕಂ)

ವಸುದೇವ ಸುತಂದೇವಂ ಕಂಸ ಚಾರೂಣಮರ್ದನಂ। ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ॥ ಅತಸೀ ಪುಷ್ಪಸಂಕಾಶಂ ಹಾರನೂಪುರ ಶೋಭಿತಂ। ರತ್ನ ಕಂಕಣ ಕೇಯೂರಂ ಕೃಷ್ಣಂ ವಂದೇ ಜಗದ್ಗುರುಂ॥ ಮಂದಾರಗಂಧ ಸಂಯುಕ್ತಂ ಚಾರುಹಾಸಂ ಚತುರ್ಭುಜಂ। ಬರ್ಹಿ ಪಿಂಚಾವಚೂಡಾಂಗಂ ಕೃಷ್ಣಂ ವಂದೇ ಜಗದ್ಗುರುಂ॥ ಉತ್ಫುಲ್ಲಪದ್ಮ ಪತ್ರಾಕ್ಷಂ ನೀಲಜೀಮೂತ ಸನ್ನಿಭಂ। ಯಾದವಾನಾಂ ಶಿರೋರತ್ನಂ ಕೃಷ್ಣಂ ವಂದೇ ಜಗದ್ಗುರುಂ॥

ರುಕ್ಮಿಣೀಕೇಳಿಸಂಯುಕ್ತಂ ಪೀತಾಂಬರ ಸುಶೋಭಿತಂ। ಅವಾಪ್ತ ತುಲಸೀ ಗಂಧಂ ಕೃಷ್ಣಂ ವಂದೇ ಜಗದ್ಗುರುಂ।। ಗೋಪಿಕಾನಾಂ ಕುಚದ್ವಂದ್ವ ಕುಂಕುಮಾಂಕಿತ ವಕ್ಷಸಂ। ಶ್ರೀನಿಕೇತಂ ಮಹೇಷ್ವಾಸಂ ಕೃಷ್ಣಂ ವಂದೇ ಜಗದ್ಗುರುಂ।। ಶ್ರೀವತ್ಸಾಂಕಂ ಮಹೋರಸ್ಕಂ ವನಮಾಲಾವಿರಾಜಿತಂ। ಶಂಖಚಕ್ರಧರಂ ದೇವಂ ಕೃಷ್ಣಂ ವಂದೇ ಜಗದ್ಗುರುಂ।। ಕೃಷ್ಣಾಷ್ಟಕಮಿದಂ ಪುಣ್ಯಂ ಪ್ರಾತರುತ್ಥಾಯ ಯಃ ಪಠೇತ್। ಕೋಟಿ ಜನ್ಮ ಕೃತಂ ಪಾಪಂ ಸ್ಮರಣೇನ ವಿನಶ್ಯತಿ।।

ಪಾಲಯಾಚ್ಯುತ ಪಾಲಯಾಚ್ಯುತ (ಕೃಷ್ಣಾಷ್ಟಕಂ)
ಪಾಲಯಾಚ್ಯುತ ಪಾಲಯಾಚ್ಯುತ ಪಾಲಯಾ ಕಮಲಾಲಯ। ಲೀಲಯಾ ಧೃತಭೂಧ ರಾಂಬುರು ಹೋದರ ಸ್ವಜನೋದರ।।ಧ್ರುವ।। ಮದ್ಧಮಾನಸಪದ್ಮ ಭಾನುಸಮಂ ಸ್ಮರಪ್ರತಿಸಂ ಸ್ಮರ। ಸ್ನಿಗ್ಧನಿರ್ಮಲಶೀತಕಾಂತಿ ಲಸನ್ಮುಖಂ ಕರುಣೋನ್ಮುಖಂ। ಹೃದ್ಯಕಂಬುಸಮಾನ ಕಂಧರ ಮಕ್ಷಯಂ ದುರಿತಕ್ಷಯಂ। ಸ್ನಿಗ್ಧಸಂಸ್ತುತ ರೂಪ್ಯ ಪೀಠಕೃತಾಲಯಂ ಹರಿಮಾಲಯಮ್।।1।। ಅಂಗಾದಾದಿಸುಶೋಭಿಪಾಣಿಯುಗೇನ ಸಂಕ್ಷುಭಿತೈನಸಂ। ತುಂಗಮಾಲ್ಯಮಣೀಂದ್ರಹಾರ ಸರೋರಸಂ ಖಲನೀರಸಂ। ಮಂಗಲಪ್ರದಮಂಥದಾಮ ವಿರಾಜಿತಂ ಭಜತಾಜಿಂತಂ। ತಂ ಗೃಣೇ ವರರೂಪ್ಯ ಪೀಠಕೃತಾಲಯಂ ಹರಿಮಾಲಯಂ।।2।। ಪೀನರಮ್ಯತನೂದರಂ ಭಜ ಹೇ ಮನಃ ಶುಭ ಹೇ ಮನಃ। ಸ್ವಾನುಭಾವನಿದರ್ಶನಾಯ ದಿಶಂತಮರ್ಥ್ಯಸುಶಂತಮಂ। ಅನತೋಽಸ್ಮಿ ನಿಜಾರ್ಜುನಪ್ರಿಯಸಾಧಕಂ ಖಲಬಾಧಕಂ। ಹೀನತೋಜ್ಝಿತ ರೂಪ್ಯಪೀಠ ಕೃತಾಲಯಂ ಹರಿಮಾಲಯಂ।।3।। ಹೈಮಕಿಂಕಿಣಿಮಾಲಿಕಾರಸನಾಂಚಿತಂ ತಮವಂಚಿತಂ। ರತ್ನಕಾಂಚನವಸ್ತ್ರ ಚಿತ್ರಕಟಿಂ ಘನಪ್ರಭಯಾ ಘನಂ। ಕಮ್ರನಾಗಕರೋ ಪಮೋರುಮನಾಮಯಂ ಶುಭದೀಮಯಂ। ನೌಮ್ಯಹಂ ವರರೂಪ್ಯ ಪೀಠಕೃತಾಲಯಂ ಹರಿಮಾಲಯಂ।।4।। ವೃತ್ತಜಾನು ಮನೋಜ್ಞ ಜಂಘಮಮೋಹದಂ ಪರಮೋಹದಂ। ರತ್ನಕಲ್ಪನಖತ್ವಿಷಾ ಹೃತಹೃತ್ತಮಸ್ತುತಿ ಮುತ್ತಮಂ। ಪ್ರತ್ಯಹಂ ರಚಿತಾರ್ಚನಂ ರಮಯಾ ಸ್ವಯಾ ಗತಯಾ ಸ್ವಯಂ। ಚಿತ್ತ ಚಿಂತಯ ರೂಪ್ಯಪೀಠಕೃತಾಲಯಂ ಹರಿಮಾಲಯಂ।।5।। ಚಾರುಪಾದ ಸರೋಜಯುಗ್ಮರುಚಾಮರೋಚ್ಛ ಯಚಾಮರೋ। ದಾರಮೂರ್ಧಜಭಾರಮಂಡಲ ರಂಜಕಂ ಕಲಿಭಂಜಕಂ। ವೀರತೋಚಿತ ಭೂಷಣಂ ವರನೂಪುರಂ ಸ್ವತನೂಪುರಂ। ಧಾರಯಾತ್ಮನಿ ರೂಪ್ಯ ಪೀಠಕೃತಾಲಯಂ ಹರಿಮಾಲಯಂ।।6।। ಶುಷ್ಕವಾದಿಮನೋಽತಿದೂರತರಾಗ ಮೋತ್ಸವದಾಗಮಂ। ಸತ್ಕವೀಂದ್ರವ ಚೋವಿಲಾಸಮ ಹೋದಯಂ ಮಹಿತೋದಯಂ। ಲಕ್ಷಯಾಮಿ ಯತೀಶ್ವರೈಃ ಕೃತಪೂಜನಂ ಗುಣಭಾಜನಂ। ಧಿಃಕ್ಕೃತೋಪಮರೂಪ್ಯ ಪೀಠಕೃತಾಲಯಂ ಹರಿಮಾಲಯಂ।।7।। ನಾರದಪ್ರಿಯಮಾ ವಿಶಾಂಬುರು ಹೇಕ್ಷಣಂ ನಿಜರಕ್ಷಣಂ। ತಾರಕೋಪಮಚಾರುದೀಪಚ ಯಾಂತರೇ ಗತಚಿಂತ ರೇ। ಧೀರಮಾನಸ ಪೂರ್ಣ ಚಂದ್ರಸಮಾನಮಚ್ಯುತಮಾನಮ। ದ್ವಾರಕೋಪಮರೂಪ್ಯ ಪೀಠಕೃತಾಲಯಂ ಹರಿ ಮಾಲಯಂ।।8।। ರೂಪ್ಯಪೀಠಕೃತಾಲಸ್ಯ ಹರೇಃ ಪ್ರಿಯಂ ದುರಿತಾಪ್ರಿಯಂ। ತತ್ವದಾರ್ಚಕ ವಾದಿರಾಜಯತೀರಿತಂ ಗುಣಪೂರಿತಂ। ಗೋಪ್ಯಮುಷ್ಟಕ ಮೇತದುಚ್ಚಮುದೇ ಮಮತ್ವಿಹನಿರ್ಮಮ। ಪ್ರಾಪ್ಯ ಶುದ್ಧಫಲಾಯ ತತ್ರ ಸುಕೋಮಲಂ ಹೃತಧೀಮಲಂ।।9।। ಇತಿ ಶ್ರೀಮದ್ವಾದಿರಾಜಪೂಜ್ಯ ಚರಣವಿರಚಿತಂ। ಶ್ರೀಕೃಷ್ಣಾಷ್ಟಕಸ್ತೋತ್ರಂ ಸಂಪೂರ್ಣಂ।।

ಶ್ರೀಮದ್ಗೋಕುಲಸರ್ವಸ್ವಂ (ಗೋಕುಲಾಷ್ಟಕಂ)

ಶ್ರೀಮದ್ಗೋಕುಲಸರ್ವಸ್ವಂ। ಶ್ರೀಮದ್ಗೋಕುಲಮಂಡನಂ। ಶ್ರೀಮದ್ಗೋಕುಲದೃಕ್ತಾರಾ ಶ್ರೀಮದ್ಗೋಕುಲಜೀವನಂ। ಶ್ರೀಮದ್ಗೋಕುಲಂಮಾತ್ರೇಶಃ। ಶ್ರೀಮದ್ಗೋಕುಲಪಾಲಕಃ। ಶ್ರೀಮದ್ಗೋಕುಲಲೀಲಾಬ್ಧಿ ಶ್ರೀ ಮದ್ಗೋಕುಲ ಸಂಶ್ರಯಃ। ಶ್ರೀಮದ್ಗೋಕುಲಜೀವಾತ್ಮಾ। ಶ್ರೀಮದ್ಗೋಕುಲ ಮಾನಸಃ। ಶ್ರೀಮದ್ಗೋಕುಲಕುಲದಃಖಘ್ನಂ। ಶ್ರೀಮದ್ಗೋಕುಲ ವೀಕ್ಷಿತಃ। ಶ್ರೀಮದ್ಗೋಕುಲ ಸೌಂದರ್ಯಂ। ಶ್ರೀಮದ್ಗೋಕುಲಸತ್ಫಲಂ। ಶ್ರೀಮದ್ಗೋಕುಲಗೋಪ್ರಾಣಃ। ಶ್ರೀಮದ್ಗೋಕುಲಕಾಮದಃ। ಶ್ರೀಮದ್ಗೋಕುಲರಾಕೇಶಃ। ಶ್ರೀಮದ್ಗೋಕುಲತಾರಕಃ। ಶ್ರೀಮದ್ಗೋಕುಲಪದ್ಮಾಳಿಃ। ಶ್ರೀಮದ್ಗೋಕುಲಸಂಸ್ತುತಃ। ಶ್ರೀಮದ್ಗೋಕುಲ ಸಂಗೀತಃ। ಶ್ರೀಮದ್ಗೋಕುಲಲಾಸ್ಯಕೃತ್। ಶ್ರೀಮದ್ಗೋಕುಲಭಾವಾತ್ಮಾ।

ಶ್ರೀಮದ್ಗೋಕುಲಪೋಷಕಃ। ಶ್ರೀಮದ್ಗೋಕುಲಹೃತ್ಥಾನಃ। ಶ್ರೀಮದ್ಗೋಕುಲಸಂವೃತಃ। ಶ್ರೀಮದ್ಗೋಕುಲದೃಕ್ಪುಷ್ಟಃ। ಶ್ರೀಮದ್ಗೋಕುಲಮೋದಿತಃ। ಶ್ರೀಮದ್ಗೋಕುಲಗೋಪೀಶಃ। ಶ್ರೀಮದ್ಗೋಕುಲಲಾಲಿತಃ। ಶ್ರೀಮದ್ಗೋಕುಲಭೋಗ್ಯಶ್ರೀಃ। ಶ್ರೀಮದ್ಗೋಕುಲಸರ್ವಕೃತ್। ಇಮಾನಿ ಶ್ರೀಗೋಕುಲೇಶನಾಮಾನಿ ವದನೇ ಮಮ। ವಸಂತು ಸಂತತಂ ಚೈವ ಲೀಲಾ ಚ ಹೃದಯೇ ಸದಾ।।

ಅದೌ ದೇವಕಿದೇವಿ ಗರ್ಭಜನನಂ (ಸಂಕ್ಷಿಪ್ತ ಭಾಗವತ)

ಅದೌ ದೇವಕಿದೇವಿ ಗರ್ಭಜನನಂ ಗೋಪಿಗೃಹೇ ವರ್ಧನಂ। ಮಾಯಾಪೂತನಿ ಜೀವಿತಾಪ ಹರಣಂ ಗೋವರ್ಧನೋದ್ಧಾರಣಂ। ಕಂಸಚ್ಛೇದನ ಕೌರವಾದಿ ಮಥನಂ ಕುಂತೀಸುತಾ ಪಾಲನಂ। ಏತದ್ಭಾಗವತಂ ಪುರಾಣ ಕಥಿತಂ ಶ್ರೀಕೃಷ್ಣಲೀಲಾಮೃತಂ।।

ವಂದೇ ವಂಶೀಧರಂ ಕೃಷ್ಣಂ (ಸಂಕೀರ್ತನೆ)

ವಂದೇ ವಂಶೀಧರಂ ಕೃಷ್ಣಂ ಸ್ಮಯಮಾನಮುಖಾಂಬುಜಮ್। ಪೀತಾಂಬರಧರಂ ನೀಲಂ ಮಾಲ್ಯಚಂದನ ಭೂಷಿತಮ್।। ರಾಧಾ ಚಿತ್ತ ಚಕೋರೇಂದುಂ ಸೌಂದರ್ಯಸುಮ ಹೋದ ಧಿಮ್। ಪರಾತ್ಪರತರಂ ದೇವಂ ಬ್ರಹ್ಮಾನಂದಕೃಪಾನಿಧಿಮ್। ಓಂ ಶ್ರೀ ನಾರದೋದ್ಧವ- ಪಾರ್ಷದ-ಗೋಪಗೋಪೀಗಣ- ಶ್ರೀರಾಧಾಸಮೇತ- ಶ್ರೀಕೃಷ್ಣಪರಮಾತ್ಮನೇ ನಮಃ।। (ಲೀಲಾಪ್ರಸ್ತಾವಃ) **ಸತ್ಯಸನಾತನ ಸುಂದರಾ ಶ್ಯಾಮ ಸತ್ಯಸನಾತನ ಸುಂದರಾ ಶ್ಯಾಮ। ನಿತ್ಯಾನಂದ ಘನೇಶ್ವರ ಶ್ಯಾಮ।। ಲಕ್ಷ್ಮೀ ಸೇವಿತಪದಯುಗ ಶ್ಯಾಮ। ಸುರಮುನಿವರಗಣ ಯಾಚಿತ ಶ್ಯಾಮ। ಭೂಭಾರೋದ್ಧರಣಾರ್ಥಿತ ಶ್ಯಾಮ। ಲೋಕಬಂಧು ಗುರುವಾಚಕ ಶ್ಯಾಮ। ಧರ್ಮಸ್ಥಾಪನಶೀಲನ ಶ್ಯಾಮ। ಸ್ವೀಕೃತನರತನುಸುರವರ ಶ್ಯಾಮ।।1।। ಮಾಯಾಧೀಶ್ವರ ಚಿನ್ಮಯ ಶ್ಯಾಮ। ಯಾದವಕುಲಸಂಭೂಷಣ ಶ್ಯಾಮ। (।।ಗೋಕುಲ ಲೀಲಾ।।) ನಂದ ಯಶೋದಾ ಪಾಲಿತ ಶ್ಯಾಮ। ಶ್ರೀವತ್ಸಾಂಕಿತ ಬಾಲಕ ಶ್ಯಾಮ। ಮಾರಿ ತಮಾಯಾಪೂತನ ಶ್ಯಾಮ। ಶಕಟಾಸುರಖಲಭಂಜನ ಶ್ಯಾಮ।।2।। ದಾಮೋದರ ಗುಣ ಮುಂದಿರ ಶ್ಯಾಮ। ಯಮಲಾರ್ಜು ನತರುಭಂಜನ ಶ್ಯಾಮ। ಗೋಪೀಜನಗಣಮೋಹನ ಶ್ಯಾಮ। ಅಗಣಿತಗುಣ ಭೂಷಿತ ಶ್ಯಾಮ। ಅಘಬಕರಾಕ್ಷಸಘಾತಕ ಶ್ಯಾಮ। ಕಾಲಿಕಸರ್ಪವಿಮರ್ದನ ಶ್ಯಾಮ।।4।। (ವೃಂದಾವನ ಲೀಲಾ)।। ಜಯವೃಂದಾವನಚರವರ ಶ್ಯಾಮ। ಗೋಚಾರಣರತಗೋಧರ ಶ್ಯಾಮ। ಬರ್ಹಸುಶೋಭಿತ ಚೂಡಕ ಶ್ಯಾಮ। ಗಲಲಂಬಿತವನಮಾಲಕ ಶ್ಯಾಮ। ಅಗ್ರಜಬಲಭದ್ರಾನ್ವಿತ ಶ್ಯಾಮ। ಗೋಪವಧೂಹೃದಯಸ್ಥಿತ ಶ್ಯಾಮ।।4।। ಸರ್ವಾತ್ಮಕಸರ್ವೇಶ್ವರ ಶ್ಯಾಮ। ಧೇನುಕಖರವಧಕಾರಕ ಶ್ಯಾಮ। ಸುರೇಂದ್ರ ಪೂಜನವಾರಕ ಶ್ಯಾಮ। ಪರ್ವ ತಪೂಜನಕಾರಕ ಶ್ಯಾಮ। ಸುರಗಣ ಪ್ರಾರ್ಥಿತಸಂಗದ ಶ್ಯಾಮ। ನಿರುಪಮ ಕ್ರೀಡನತೋಷಣ ಶ್ಯಾಮ।।5।। ಪಾದಾರಾಧಕವಿಧಿಹರ ಶ್ಯಾಮ। ಗೋಪೀ ಭಾವಿತಪ್ರಿಯಕರ ಶ್ಯಾಮ। ಗೋಪೀಲಜ್ಜಾಹಾರಕ ಶ್ಯಾಮ। ವೈಕುಂಠೇಶ ನರಾಕೃತಿ ಶ್ಯಾಮ। ಕಾಲಿಂದೀತಟಚಾರಣ ಶ್ಯಾಮ। ಮೋಹನಮುರಲೀ ವಾದನ ಶ್ಯಾಮ।।6।। ರಾಸಮಹೋತ್ಸವ ಖೇಲನ ಶ್ಯಾಮ। ಆನಂದಾಮೃತ ವರ್ಷಣ ಶ್ಯಾಮ। ಬಹುವಿಧ ಶರೀರಧಾರಣ ಶ್ಯಾಮ। ನಾನಾಲೀಲಾಕೌತುಕ ಶ್ಯಾಮ। ಧ್ವಜವಜ್ರಾಂಕಿತಮೃದಪುದ ಶ್ಯಾಮ। ಸಮಸ್ತಲೋಕಾಹ್ಲಾದಕ ಶ್ಯಾಮ।।7।। ವೃಷಭಾರಿಷ್ಟನಿ ಪೀಡಿತ ಶ್ಯಾಮ। ವಿಧಿಗತದರ್ಪವಿನಾಶಕ ಶ್ಯಾಮ। ರುಚಿರಸ್ವರೂಪಜನಾರ್ಧನ ಶ್ಯಾಮ। ನೀಲಕಲೇವರಚಿದ್ಘನ ಶ್ಯಾಮ। ಸಾಧಕಮತಿ ಸಂಶೋಧನ ಶ್ಯಾಮ। ಲೀಲಾನಟನಮನೋಹರ ಶ್ಯಾಮ।8।। ಗೋಪೀಜನಗಣಪೂಜಿತ ಶ್ಯಾಮ। ರಾಧಾವೇಣೀ ಶೋಭಕ ಶ್ಯಾಮ। ಅಕ್ರೂರಾರ್ಥಿತಶ್ಲೇಷದ ಶ್ಯಾಮ। ಕೃತರಥಯಾ ನಾರೋಹಣ ಶ್ಯಾಮ। ವ್ರಜನಾರೀಕುಲವಾರಿತ ಶ್ಯಾಮ। ಸಖಿಗಣದಾಹದವಿರಹಕ ಶ್ಯಾಮ।।9।। (ಮಧುರಾಲೀಲಾ)।। ಮಧುರಾಪುರ ಜನಮೋಹಕ ಶ್ಯಾಮ। ಸನಕಾದಿಕಮುನಿಚಿಂತಿತ ಶ್ಯಾಮ। ಮತ್ತರಜಕಗಲ ಘಾತಕ ಶ್ಯಾಮ। ಶುಭಪೀತಾಂಬರ ಧಾರಕ ಶ್ಯಾಮ। ಮಾಲಾಕಾರಸುಪೂಜಿತ ಶ್ಯಾಮ। ಬ್ರಹ್ಮಪೂರ್ಣಪರಮಾತ್ಪರ ಶ್ಯಾಮ।।10।। ಕುಬ್ಜಾಲೇಪನನಂದಿತ ಶ್ಯಾಮ। ವಕ್ರಕೃತ್ಯಜು**

ಕಾರಕ ಶ್ಯಾಮ। ಘಾತಿತಗಜಮದ ಲೇಪನ ಶ್ಯಾಮ। ಕೇಶಿಕಕಂಸನಿಷೂದನ ಶ್ಯಾಮ। ಪದ್ಮ ಗದಾ ಧರಕೀರ್ತಿತ ಶ್ಯಾಮ। ಉಗ್ರಸೇನವರರಾಜ್ಯದ ಶ್ಯಾಮ॥11॥ ರಾಮಕೃಷ್ಣ ಹರಿ ಗಿರಿಧರ ಶ್ಯಾಮ। ಮಾಧವ ಕೇಶವ ನರಹರಿ ಶ್ಯಾಮ। ॥(ದ್ವಾರಕಾಲೀಲಾ)॥ ಮೃತಗುರುಸೂನುಸು ಜೀವಕ ಶ್ಯಾಮ। ಭೀಷ್ಮ ಕಬಾಲಾಕಾಮಿತಶ್ಯಾಮ। ದ್ವಾರವತೀ ಸಂಸ್ಥಾಪಕ ಶ್ಯಾಮ। ರುಕ್ಮಿಣ್ಯರ್ಥ ಸುಹಾರಕ ಶ್ಯಾಮ॥12॥ ನರಕಾಸುರವಧಕಾರಕ ಶ್ಯಾಮ। ಅದಿತಿಸಮರ್ಪಿತಕುಂಡಲ ಶ್ಯಾಮ। ಸ್ವಧರ್ಮತತ್ಪರಮೋಕ್ಷದ ಶ್ಯಾಮ। ಶಿಶುಪಾಲಸುವಿಘಾತಕ ಶ್ಯಾಮ। ಬಾಣಾಸುರಭುಜಭೇದನ ಶ್ಯಾಮ। ದಾನವವರಮಧುಸೂದನ ಶ್ಯಾಮ॥13॥ ಚಕ್ರಪ್ರತಾಪಸುದರ್ಶಕ ಶ್ಯಾಮ। ಪೌಂಡ್ರಕ ದರ್ಪವಿಮರ್ದಕ ಶ್ಯಾಮ। ದಗ್ಧಕಾಮಜನಿದಾಯಕ ಶ್ಯಾಮ। ಇಂದ್ರವಿಧೀಶಸುಸೇವಿತ ಶ್ಯಾಮ। ಸಖಿಭಕ್ತಾರ್ಜುನಸಾರಥಿ ಶ್ಯಾಮ। ಪಾಂಡವಕುಲಸಮ್ಮಾನಿತ ಶ್ಯಾಮ॥14॥ ಗೀತಾಮೃತ ಸಂದೋಹಕ ಶ್ಯಾಮ। ಭೀಷ್ಮ ಪ್ರತಿಜ್ಞಾಪಾಲಕ ಶ್ಯಾಮ। ವಿಶ್ವರೂಪಸಂದರ್ಶಕ ಶ್ಯಾಮ। ಆತ್ಯಂತಿಕಸುಖಸಾಧಕ ಶ್ಯಾಮ। ಭಕ್ತಕೃಪಾರ್ಣವಭರ್ಗದ ಶ್ಯಾಮ। ಶರಣಾಗತಜನತಾರಕ ಶ್ಯಾಮ॥15॥ ಭಕ್ತಕಾಮಸಂಪೂರಕ ಶ್ಯಾಮ। ಮಂಗಲಕರಗತಿದಾಯಕ ಶ್ಯಾಮ। ಐಶ್ವರ್ಯಾದಿ ಕಷಡ್ಗು ಶ್ಯಾಮ। ಐಶ್ವರ್ಯಾದಿಕ ಷಡ್ಗುಣ ಶ್ಯಾಮ। ವಿಶ್ವಾಶ್ರಯಜನಪಾಲನ ಶ್ಯಾಮ। ಸರ್ವಚರಾಚರಧಾರಣ ಶ್ಯಾಮ। ಪೂರ್ಣಚರಾಚರಖೇಲನ ಶ್ಯಾಮ॥16॥ ದ್ವಾರವತೀ ಪುರಪ್ಲಾವನ ಶ್ಯಾಮ। ಕುರುಯದುಕುಲ ಸಂಹಾರಕ ಶ್ಯಾಮ। ಬದರೀಸಂಪ್ರಹಿತೋದ್ಧವ ಶ್ಯಾಮ। ಪ್ರಭಾಸಗಮಾನಾಮೋದಿತ ಶ್ಯಾಮ। ಯೋಗಸ್ಥಿತ ಯದುನಂದನ ಶ್ಯಾಮ। ಸುರಗಣ ವಂದಿತ ಮೋದನ ಶ್ಯಾಮ॥17॥ ದೈವಕ್ಯಾತ್ಮಜದೈವತ ಶ್ಯಾಮ। ಮೋಹನ ನಟ ನಾನಂದನ ಶ್ಯಾಮ। ನರತನುತ್ಯಾಗಸುಸೂಚಿತ ಶ್ಯಾಮ। ಜರಲುಬ್ಧಕಶರವೇಧಿತ ಶ್ಯಾಮ। ಸತ್ಯಸನಾತನ ಸುಂದರ ಶ್ಯಾಮ। ನಿತ್ಯಾನಂದಘನೇಶ್ವರ ಶ್ಯಾಮ॥18॥

ತ್ರಿಗುಣತೀತ ಗುಣೇಶ್ವರ ಶ್ಯಾಮ

ತ್ರಿಗುಣತೀತ ಗುಣೇಶ್ವರ ಶ್ಯಾಮ। ರಾಧಾ ಮಾಧವ ರಾಧಾ ಶ್ಯಾಮ॥ ಸೃಷ್ಟಿಸ್ಥಿತಿಲಯಕಾರಣ ಶ್ಯಾಮ। ರಾಧಾಮಾಧವ ರಾಧಾ ಶ್ಯಾಮ। ಗೋವಿಂದಾಚ್ಯುತ ಯಾದವ ಶ್ಯಾಮ। ರಾಧಾಮಾಧವ ರಾಧಾ ಶ್ಯಾಮ॥1 ನಾರಾಯಣ ಹರಿ ಕೇಶವ ಶ್ಯಾಮ। ರಾಧಾಮಾದವ ರಾಧಾ ಶ್ಯಾಮ। ಮುಕುಂದ ಮುರಹರ ವಾಮನ ಶ್ಯಾಮ। ರಾಧಾಮಾಧವ ರಾಧಾ ಶ್ಯಾಮ॥ಜಯಜಯ ಗೋಪೀವಲ್ಲಭ ಶ್ಯಾಮ। ರಾಧಾಮಾಧವ ರಾಧಾ ಶ್ಯಾಮ। ಅನುಪಮ ಸುಂದರ ಮೋಹನ ಶ್ಯಾಮ। ರಾಧಾಮಾಧವ ರಾಧ ಶ್ಯಾಮ॥ ಅಖಿಲ ರಸಾಮೃತಸಾಗರ ಶ್ಯಾಮ। ರಾಧಾಮಾಧವ ರಾಧಾ ಶ್ಯಾಮ॥

❖ ❖ ❖

ಸರ್ವಂ ಕೃಷ್ಣಮಯಂ

ವ್ಯಾಧಸ್ಯಾಚರಣಂ ಧ್ರುವಸ್ಯ ಚ ವಯಃ

ವ್ಯಾಧಸ್ಯಾಚರಣಂ ಧ್ರುವಸ್ಯ ಚ ವಯಃ। ವಿದ್ಯಾಗಜೇಂದ್ರಸ್ಯ ಕಾ। ಕಾ ಜಾತಿರ್ವಿದುರಸ್ಯ। ಯಾದವಪತೇಃ ಉಗ್ರಸೇನಸ್ಯ ಕಿಂ ಪೌರುಷಂ। ಕುಬ್ಜಾಯಾಃ ಕನೀಯರೂಪಮಧಿಕಂ ಕಿಂ ತತ್ಸುಧಮನ್ನೋ ಧನಂ। ಭಕ್ತ್ಯಾ ತುಷ್ಯತಿ ಕೇಶವೋ ನ ತು ಗುಣೈಃ ಭಕ್ತಿಪ್ರಿಯಃ ಮಾಧವಃ॥

ಸುಂದರರೂಪನೆ ಹರಿಯೆ — ರಾಗ: ಅಭೇರಿ

ಸುಂದರರೂಪನೆ ಹರಿಯೆ ನಿನ್ನ ಮೋಹನ ರೂಪಕ್ಕೆ। ಮರುಳಾದೆ ಹರಿಯೆ॥ಪ॥ ಶ್ಯಾಮಲ ವರ್ಣನೆ ಹರಿಯೆ। ಎನ್ನ ಸರಸಿಜನಾಭನೆ ಹರಿಯೆ। ನಿನ್ನಯ ಮಹಿಮೆಯ ಅರಿಯೆ। ನಾನು ಎಷ್ಟೆಂದು ಪೊಗಳಲಿ ನೀ ಕೇಳೊ ದೊರೆಯೆ॥1॥ ದೀನರ ರಕ್ಷಕನೆ ಹರಿಯೆ। ನಾನು ದೈನ್ಯದಿ ಬೇಡುವೆನು ಹರಿಯೆ। ಕರುಣಿಸು ದರ್ಶನವ ಹರಿಯೆ। ಮನದೊಳು

ಶಾಂತಿಯ ನೀ ನೆಲಸೋ ಹರಿಯೆ॥2॥ ಚೋಳ ಪುರಿವಾಸನೆ ಹರಿಯೆ। ನಿನ್ನ ಕರುಣೆಗೆ ಎಲ್ಲೆಯೆ ಇಲ್ಲವೊ ಹರಿಯೆ। ನಿನ್ನ ಕಂಡೆ ದೈವವೆ ಹರಿಯೆ। ಎನ್ನ ಕರುಣಿಸಿ ಕಾಪಾಡೊ ಸಿರಿಯೆ॥3॥

ಒಂದೇ ನಾಮವು ಸಾಲದೇ

ಒಂದೇ ನಾಮವು ಸಾಲದೇ। ಶ್ರೀಹರಿಯೆಂಬ। ಒಂದೇ ನಾಮವು ಸಾಲದೇ॥ಪ॥ ಒಂದೇ ನಾಮವು ಭವಬಂಧನ ಬಿಡಿಸುವು।ದೆಂದು ವೇದಂಗಳಾನಂದದಿ ಸ್ತುತಿಸುವ॥ಅ.ಪ॥ ಉಭಯ ರಾಯರು ಸೇರಿ ಮುದದಿ ಲೆತ್ತವಾಡಿ। ಸಭೆಯೊಳು ಧರ್ಮಜ ಸತಿಯ ಸೋಲಲೇ। ನಭಕೆ ಕೈಎತ್ತಿ ದ್ರೌಪದಿ ಕೃಷ್ಣಾ ಎನಲು। ಇಭ ರಾಜಗಮನೆಗಕ್ಷಯ ವಸ್ತ್ರವನಿತ್ತ॥1॥ ಹಿಂದೊಬ್ಬ ಋಷಿ ಪುತ್ರನಂದು ದಾಸಿಯ ಕೂಡೆ। ಸಂದೇಹವಿಲ್ಲದೆ ಹಲವು ಕಾಲ। ದಂದುಗದೊಳು ಸಿಲುಕಿ ನಿಂದಂತ್ಯಕಾಲದಿ। ಕಂದ ನಾರಗನೆಂದು ಕರೆಯಲಭಯವಿತ್ತ॥2॥ ಕಾಶಿಯ ಪುರದೊಳಗೆ ಈಶ ಭಕುತಿಯಿಂದ। ಸಾಸಿರ ನಾಮದ ರಾಮನೆಂಬ। ಶ್ರೀಶನ ನಾಮದ ಉಪದೇಶ ಧಾತ್ರಿಗಿತ್ತ। ವಾಸುದೇವ ಶ್ರೀಪುರಂದರ ವಿಠಲನ॥3॥

ಸ್ಮರಣೆ ಒಂದೇ ಸಾಲದೆ — ರಾಗ: ಮಲಯಮಾರುತ-ಅಟ್ಟತಾಳ

ಸ್ಮರಣೆ ಒಂದೇ ಸಾಲದೆ, ಗೋವಿಂದನ ಸ್ಮರಣೆ ಒಂದೇ ಸಾಲದೆ॥ಪ॥ ಪರಿಪರಿ ವಿಧವೆಲ್ಲ ಭ್ರಾಂತಿಯೆಂದು ತಿಳಿದು। ಪರಮಪುರುಷ ಹರಿಯ ನೆರೆ ನಂಬಿದವರಿಗೆ॥ಅ.ಪ.॥ ಪಾತಕಿ ಯಾದರೇನೋ ಸರ್ವಪ್ರಾಣಿ ಘಾತಕಿಯಾದರೇನೊ। ನೀತಿಯ ಬಿಟ್ಟು ದುಷ್ಕರ್ಮಿಯಾದರೇನೋ ಪ್ರೀತಿಯಿಂದಜಾಮಿಳನ ಸಲಹಿದ ಹರಿಯ॥1॥ ಕಡುಮೂರ್ಖನಾದರೇನೋ ದುಷ್ಕರ್ಮವ ಹಿಡಿದಾತನಾದರೇನೊ। ಜಡನಾದರೇನಲ್ಪಜಾತಿಯಾದರೇನು ಬಿಡದೆ ಪ್ರಹ್ಲಾದನ ಸಲಹಿದ ಹರಿಯ॥2॥ ಸಕಲ ತೀರ್ಥಕ್ಷೇತ್ರದಿ ಮಾಡಿದಂಥ ನಿಖಿಳ ಪುಣ್ಯದ। ಫಲವು ಭಕುತಿ ಪೂರ್ವಕವಾಗಿ ಬಿಡದನುದಿನದಲಿ ಪ್ರಕಟ ಪುರಂದರವಿಠಲನ ನಾಮ॥3॥

ಪವಡಿಸು ಪರಮಾತ್ಮನೆ — ರಾಗ: ಧನ್ಯಾಸಿ-ಅಟ್ಟತಾಳ

ಪವಡಿಸು ಪರಮಾತ್ಮನೆ ಸ್ವಾಮಿ॥ಪ॥ ಭವರೋಗ ವೈದ್ಯನೆ ಭಕ್ತರ ಪ್ರಿಯನೇ॥ಅ॥ ಕುಂದಣದಿ ರಚಿಸಿದ ಸಜ್ಜೆ ಮನೆಯಲ್ಲಿ। ಇಂದ್ರನೀಲಮಣಿ ಮಂಟಪದಿ। ಚಂದ್ರಕಾಂತಿಯ ಠಾಣದೀವಿಗೆ ಹೊಳೆಯಲು। ಸಿಂಧುತನಯೆ ಆನಂದದಿಂದ॥1॥ ತೂಗುಮಂಚದಿ ಹಂಸತೂಲದ ಹಾಸಿಗೆ। ನಾಗಸಂಪಿಗೆ ಹೂವಿನ ಒರಗು। ಸಾಗರಸುತೆ ಸಮ್ಮೇಳದಲಿ ನಿಜ। ಭೋಗದಿಂದ ಓಲಾಡುತಲಿ॥2॥ ಸದ್ದಡಗಿತು ಗಡಿವಾರ ಸಾಗಿತು ಬೀಗ ಮುದ್ರೆಗಳಾಯಿತು ಬಾಗಿಲಿಗೆ। ತಿದ್ದಿದ ಛಾವಣಿ ಶಂಖದ ಘೋಷಣೆ। ಪದ್ಮನಾಭ ಶ್ರೀ ಪುರಂದರವಿಠಲ॥3॥

ಆರುತಿ ತಾ ಕೃಷ್ಣ ಮೂರುತಿಗೆ (ಆರತಿ) — ರಾಗ: ಬೇಹಾಗ್

ಆರುತಿ ತಾ ಕೃಷ್ಣ ಮೂರುತಿಗೆ। ಮೂರುತಿಗೆ ಪಾರ್ಥಸಾರಥಿಗೆ। ಕೃಷ್ಣಮೂರುತಿಗೆ ಪಾರ್ಥ ಸಾರಥಿಗೆ॥ಪ॥ ಬೆಳದಿಂಗಳೊಳು ಕೃಷ್ಣ ಕೊಳಲನ್ನೂದುತಲಿ। ನಳಿನಾಕ್ಷೀರ ಮನ ಸೆಳೆಯುತಲಿ। ಎಳೆತುಳಸಿವನ ಮಾಲೆಯು ಕೊರಳೊಳು। ಧರಿಸಿದನೆ ಮನವರಿಸಿದನೆ ಕೃಷ್ಣ ಧರಿಸಿದನೆ ಮನವರಿಸಿದನೆ॥1॥ ವನದೊಳು ದ್ರೌಪದಿ ವಚನವನಾಲಿಸಿ। ಮುನಿಗಳ ಸೇವಿಸಿ ದಣಿಸಿದಗೆ। ಘೋರಪಡಿಸಿ ಮರನೇರಿದ ಕಾರಣ। ಏರಿದನೆ ಮರ ಏರಿದನೆ ಸುಖ ಸಾರಿದನೆ॥2॥ ನೀರೊಳು ನಿಂತಿಹ ನಾರಿಯರೆಲ್ಲರೂ। ಜಲಕ್ರೀಡೆಯನಾಡುವ ಸಮಯದೊಳು। ಸೀರೆಗಳನ್ನೆ ಕದ್ದು ವೃಕ್ಷವನೇರಿದ। ಪಕ್ಷಿವಾಹನ ಶ್ರೀಕೃಷ್ಣನಿಗೆ॥3॥

ಬೆಳಗೆ ಬೇಗ ಭ್ರಮರವೇಣಿ (ಆರತಿ) — ರಾಗ: ಅಭೇರಿ

ಬೆಳಗೆ ಬೇಗ ಭ್ರಮರವೇಣಿ ನಳಿನನಾಭನಿಗಾರುತೀಯ॥ಪ॥ ರಕ್ಕಸಾಂತ ದೇವನಿಗೆ ಸಕ್ಕುಬಾಯಿ ವಿಠಲನಿಗೇ।

ರುಕ್ಮಿಣಿಯ ರಮಣನಿಗೆ ಅಚ್ಚ ಮುತ್ತಿನಾರತೀಯ।।1।। ಪುಂಡರೀಕ ವರದನಿಗೆ ಪಾಂಡುರಂಗ ವಿಠಲನಿಗೆ। ಪಂಡ್ರಿನಾಥ ಪುರದೊಳ್ ಇರುವ ಪಾಂಡುರಂಗನಿ ಗಾರುತೀಯ।।2।।

ಶ್ರೀನಾಥ ಗೋವಿಂದ ಆನಂದ ಮೂರುತಿಗೆ (ಆರತಿ) **ರಾಗ: ಸಾರಂಗ**

ಶ್ರೀನಾಥ ಗೋವಿಂದ ಆನಂದ ಮೂರುತಿಗೆ ಮಾನಿನಿ ಮಣಿಯರು ಬೆಳಗುವೆವು ಆರುತಿಯ।।ಪ।। ಹತ್ತಾವತಾರನಿಗೆ ರುಕ್ಮಿಣಿಯ ಲೋಲನಿಗೆ ಮಾತೆ ದೇವಕಿ ದೇವಿ ಸುತನಾದ ಶ್ರೀಹರಿಗೆ।।1।। ನೀರಿನೊಳು ಮೀಯುತಿಹ ನಾರೇರ ಸೀರೆಗಳ ಚೋರತನದಲಿ ಕದ್ದು ಮರವೇರಿದ ಕೃಷ್ಣನಿಗೆ।।2।। ವೇದಗಳುದ್ಧಾರನಿಗೆ ಚಿನ್ಮಯಾಲೋಲನಿಗೆ ವೇದನಾಯಕ ನಮ್ಮ ಮುದ್ದುಶ್ರೀಕೃಷ್ಣನಿಗೆ।।3।।ತರಳನಾ ಪೊರೆದವಗೆ ದುರುಳರನು ತರಿದವಗೆ। ವರವ ಪಾಲಿಪೋ ಶ್ರೀವರಲಕ್ಷ್ಮಿ ಪತಿಗೆ।।4।। ಧ್ಯಾನಮಾಳ್ಪೊಜನರ ಮೌನದಿಂ ಕಾಯುತಿಹ ಜ್ಞಾನದಾಯಕ ನಮ್ಮ ಮುದ್ದುಕೃಷ್ಣನಿಗೆ।।5।। ಮಂದರೋದ್ಧಾರನಿಗೆ ಸುಂದರಾಕಾರನಿಗೆ ಅಂದದಿಂದಲಿ ಬಂದು ಪೊರೆವ ಶ್ರೀನರಹರಿಗೆ।।6।।

ವೇಣುಗೋಪಾಲಾಯ ವಿಶ್ವ ಸಂರಕ್ಷಣಾಯ (ಮಂಗಳ) **ರಾಗ: ಕುರಂಜಿ**

ವೇಣುಗೋಪಾಲಾಯ ವಿಶ್ವ ಸಂರಕ್ಷಣಾಯ। ಚಾಣೂರ ಮರ್ದನಾಯ ಶಾಂತಮಂಗಳಂ।।ಪ।। ಗೋವರ್ಧನೋದ್ಧಾರಾಯ ಗೋಪಿಕಾ ಮನೋಹರಾಯ। ದೇವಕೀ ನಂದನಾಯ ದಿವ್ಯಮಂಗಳಂ।।1।। ಕಂಸ ಸಂಹಾರಾಯ ಕಾಮಿತ ಫಲಪ್ರದಾಯ। ಹಂಸಗಮನ ಸ್ತೋತ್ರಾಯ ಅಮಿತ ಮಂಗಳಂ।।2।। ವಿಜಯ ಸಂರಕ್ಷಣಾಯ ವೇದಾಂತವೇದ್ಯಾಯ। ಸುಜನ ಸಂರಕ್ಷಣಾಯ ಸುಮುಖ ಮಂಗಳಂ।।3।। ಮಂಗಳಂ ಶುಭವಿಗ್ರಹಾಯ ಮುನಿಮಾನಸೋಲ್ಲಾಸಾಯ। ಭಕ್ತಜನ ಪೋಷಣಾಯ ಶ್ರೀಶ ಮಂಗಳಂ।।4।। ಶಾಂತಮಂಗಳಂ ದಿವ್ಯಮಂಗಳಂ ಅಮಿತಮಂಗಳಂ ಸುಮುಖ ಮಂಗಳಂ ಶ್ರೀಶ ಮಂಗಳಂ।।5।।

ಮನ್ನಾರು ಕೃಷ್ಣಗೆ ಮಂಗಳ **ರಾಗ: ವಸಂತ-ಆದಿತಾಳ**

ಮನ್ನಾರು ಕೃಷ್ಣಗೆ ಮಂಗಳ। ಜಗವ ಮನ್ನಿಸಿದೊಡೆಯಗೆ ಮಂಗಳ।।ಪ।। ಬೊಮ್ಮನ ಪಡೆದಗೆ ಭಕ್ತರುದ್ಧಾರಿಗೆ। ಕಮ್ಮಗೋಲಯ್ಯಗೆ ಮಂಗಳ। ಧರ್ಮರಕ್ಷಕನಿಗೆ ದಾನವ ಶಿಕ್ಷಗೆ। ನಮ್ಮ ರಕ್ಷಿಸುವಗೆ ಮಂಗಳ।।1।। ತುರುಗಳ ಕಾಯ್ದಗೆ ಕರುಣಾಕರನಿಗೆ। ಗಿರಿಯನೆತ್ತಿದವಗೆ ಮಂಗಳ। ವರದ ತಿಮ್ಮಪ್ಪಗೆ ವಾರಿಜನಾಭಗೆ। ಹರಿಸರ್ವೋತ್ತಮನಿಗೆ ಮಂಗಳ।।2।। ದೇವಕಿದೇವಿಯ ತನಯಗೆ ಮಂಗಳ। ದೇವ ತಿಮ್ಮಪ್ಪಗೆ ಮಂಗಳ। ಮಾವನ ಕೊಂದು ಮಲ್ಲರ ಮಡುಹಿದ। ಪುರಂದರವಿಠಲಗೆ ಮಂಗಳ।।3।।

❖ ❖ ❖